1945-46.

ಕಾಲಜ್ಞಾನ, ಶಿವಜ್ಞಾನ.

" ಬ್ರಹ್ಮೋಪದೇಶವಾಯಿತ್ತೆಂದು ಬ್ರಹ್ಮದೊಡನೆ ಧಿಕ್ಕರಿಸಬೇಡ. ಕಾಲಜ್ಞಾನವಾಯಿತ್ತೆಂದು ಕರ್ಮವ ಹಳಿಯಬೇಡ. ಶಿವಜ್ಞಾನದೀಪ್ತಿ ತಲೆದೋರಿತ್ತೆಂದು ಶಿವಶರಣರೊಡನೆ ಧಿಕ್ಕರಿಸಬೇಡ. ಈ ತ್ರಿವಿಧದುತ್ಪತ್ತಿ ಸಲ್ಲದು. ಈ ವೇಶಿಯ ಮಕ್ಕಳಿಗೆ ನಾನೇನೆಂಬೆಯ್ಯಾ ಕೂ. ಚ. ಸಂ. ದೇವಾ? "

ಅಹಂಕಾರದ ಅರಿವು ಅಡಿಕೆಗೂ ತರವಲ್ಲ. ಶಿವಶರಣರನ್ನು ಧಿಕ್ಕರಿಸಿದ ಶಿವಜ್ಞಾನವು, ಕರ್ಮವ ಹಳಿದ ಕಾಲಜ್ಞಾನವು, ಬ್ರಹ್ಮವ ತಿರಸ್ಕರಿಸಿದ ಬ್ರಹ್ಮೋಪದೇಶವು—ನಿರರ್ಥಕವಾದವು. ಧಿಕ್ಕಾರವು ಅಹಂಕಾರದ ಮೊಳಿಕೆ. ಅಹಂಕಾರವು ಅಧಃಪತನಕ್ಕೆ ಬೀಜ. ಇಂತಹ ಕಾಲಜ್ಞಾನವಾಗಲಿ, ಶಿವಜ್ಞಾನವಾಗಲಿ ಇದ್ದೀನು, ಇಲ್ಲದಿದ್ದರೇನು ?

ವಚನಕಾರರ ಕಾಲವು ಶಿವಜ್ಞಾನಿಗಳ ಕಾಲವಾಗಿದ್ದಂತೆ ಕಾಲಜ್ಞಾನಿಗಳ ಕಾಲವೂ ಆಗಿತ್ತು. ಅನೇಕ ಶಿವಶರಣರು ಕಾಲಜ್ಞಾನದ ವಚನಗಳನ್ನು ರಚಿಸಿದ್ದಾರೆ. ಇತರ ವಿಚಾರಗಳಂತೆ ಕಾಲಜ್ಞಾನವನ್ನು ಅವರು ಕಡೆಗಣ್ಣಿನಿಂದ ನೋಡುತ್ತಿರಲಿಲ್ಲ. ಶಿವಜ್ಞಾನಿಗೆ ಶಿವಶರಣರು ಹೇಗೆ ಮಾನ್ಯರೋ, ಕಾಲಜ್ಞಾನಿಗೆ ಕರ್ಮವೂ, ಬ್ರಹ್ಮೋಪದೇಶಿಗೆ ಬ್ರಹ್ಮವೂ ಅಷ್ಟೇ ಮಾನ್ಯವಾದವುಗಳು.

ಲಿಂಗಧಾರಣೆ ಯಾವಾಗ?

ಪ್ರತಿಯೊಬ್ಬ ವೀರಶೈವನಿಗೂ ಲಿಂಗಧಾರಣ, ಶಿವದೀಕ್ಷೆ ಎಂಬ ಎರಡು ಸಂಸ್ಕಾರಗಳುಂಟು. ಇವುಗಳಲ್ಲಿ ಶಿವದೀಕ್ಷೆಯನ್ನು ಎಂಟು ವರುಷಗಳ ಮೇಲೆ ಹದಿನಾರು ವರುಷಗಳೊಳಗೆ ಯಾವಾಗಲಾದರೂ ಮಾಡಬಹುದು. ಲಿಂಗಧಾರಣೆಯನ್ನು ಮಾತ್ರ ಹುಟ್ಟಿದೊಡನೆಯೇ ಮಾಡಬೇಕು. ಹೀಗೆ ಮಾಡುವದರಿಂದ ಮಗುವಿಗೆ ಯಾವ ದೋಷಗಳಿದ್ದರೂ ಪರಿಹಾರವಾಗುತ್ತದೆ. ಇದೇ ವೀರಶೈವ ಮಾರ್ಗ. ಇದನ್ನು ವೀರಿ ಮತ್ತೊಂದು ದೇವರಿಗೆ ಹರಕೆ ಹೊತ್ತು ಮಂತ್ರ ಯಂತ್ರಗಳನ್ನು ಕಟ್ಟಿಸಿದಲ್ಲಿ ಅವರು ಅಷ್ಟಾವರಣಕ್ಕೆ ಹೊರಗು. ಆದ್ವಿತೀಯಾನಂದಕ್ಕೆ ಸಲ್ಲರು. ಅಂಥವರನ್ನು ಶಿವಶರಣರು ಮೆಚ್ಚರು..

"ಶಿವಭಕ್ತರಲ್ಲಿ ಗರ್ಭೋತ್ಪತ್ಯವಾದ ಶಿಶುವಿಂಗೆ ಪಾದೋದಕದಿಂದೆ ಜಲಕವ ಮಾಡಿಸುವುದು. ವಿಭೂತಿಯ ಪಟ್ಟವಂ ಕಟ್ಟಿ ಕೊರಳಲ್ಲಿ ಲಿಂಗ ಸಾಹಿತ್ಯವಂ ಮಾಡಿ ಪ್ರಸಾದದ ಎಣ್ಣೆ ಬೆಣ್ಣೆ ಹಾಲು ತುಪ್ಪವನೆರೆದು ಸಲಹುವುದೇ ಆಚಾರ....." (ಪುಟ-೨೪, ವ-೧೩.)

ಒಡೆಯರು ಬಂದರೆ ಒಕ್ಕುದೇ ಪದಾರ್ಥ.

"...ಲಿಂಗಾರ್ಚನೆಯಾದ ಮೇಲೆ ಲಿಂಗಾರ್ಪಿತದ ಮಾಡುತ್ತಿರಲು, ಆ ಸದ್ಭಕ್ತನಲ್ಲಿ ಪದಾರ್ಥ ಹೆಚ್ಚಿರಲು, ಅಲ್ಲಿ ಸಹಜ ಮುಗಿವುತ್ತಿರಲು, ಆ ಸಮಯದಲ್ಲಿ ನೀಡಿ ಮಾಡುವರಿಲ್ಲದಿರಲು, ಅಲ್ಲಿ ಪದಾರ್ಥವೆ ಇಲ್ಲದಿರಲು, ಆ ಸಮಯದಲ್ಲಿ ಒಡೆಯರು ಬಿಜಯಂಗೈಯಲು, ಆ ಭಕ್ತನು ಆ ವಿವರವನರಿಂದು ತಾಕೊಂಡುದೇ ಪ್ರಸಾದ, ನಿಂದುದೇ ಪದಾರ್ಥವಾಗಿ ನೀಡಬಹುದಯ್ಯ...ನೀಡಬಹುದೋ ನೀಡಬಾರದೋ ಎಂದು ಸಂದೇಹವ ತಾಳಲಾಗದು. ಈರ್ವರಿಂದ ಸಂದೇಹವ ತಾಳಿದೊಡೆ, ಲಿಂಗಕ್ಕೆ ದೂರ, ಜಂಗಮಕ್ಕೆ ದೂರ, ಪ್ರಸಾದಕ್ಕೆ ಸಲ್ಲರು. ಆವ ಸದ್ಭಕ್ತನಲ್ಲ ಆವ ದೇವರಲ್ಲ. ಶುದ್ಧ ಸಿದ್ಧ ಪ್ರಸಿದ್ಧವನೊಡಗೂಡಿ, ಭಕ್ತಿ ಪದಾರ್ಥವಾಗಿ, ಸುಶುದ್ಧಮುಖದಿಂದೆ ಅಂದು, ಪ್ರಸಿದ್ಧಮುಖಕ್ಕೆ ನೀಡಬಹುದಯ್ಯ. ಸಂದೇಹ ತಾಳಲಾಗದು. ಇದು ಭಕ್ತಮಹೇಶ್ವರಂಗೊಂದೆ ನಿರ್ಣಯವು....."

ಈ ಸಂಧವ ಒದಗುವುದು ಅಪೂರ್ವ. ಅದರೂ ಅಂತಹ ಸನ್ನಿವೇಶದ ಸಂದಿಗ್ಧವನ್ನೂ ಪರಿಹರಿಸಿದೆ ಈ ವಚನ.

ಪ್ರತಿಯೊಬ್ಬ ಪ್ರಸಾದಿಯು ಗುರು-ಲಿಂಗ-ಜಂಗಮರ ವಿಷಯದಲ್ಲಿ ಬಲು ಎಚ್ಚರದಿಂದ ಆಚರಿಸಬೇಕು. ಎಳ್ಳು ಮೊನೆಯಷ್ಟು ತಪ್ಪಿದಲ್ಲಿ ದ್ರೋಹಕ್ಕೆ ಎಡೆಯುಂಟು. ಆ ದ್ರೋಹಗಳನ್ನು ಹೀಗೆ ವಿವರಿಸಿದೆ.

ಗುರುದ್ರೋಹಪಂಚಕ.	ಲಿಂಗದ್ರೋಹಪಂಚಕ.	ಜಂಗಮದ್ರೋಹಪಂಚಕ.
೧ ಅಹಂಕಾರ	೧ ಅಪ್ರೀತಿ	೧ ಅಸ್ಥಿರಬುದ್ಧಿ
೨ ಭಯವಿಲ್ಲದಿರುವಿಕೆ	೨ ಅಪ್ರೇಮ	೨ ಅನೃತವಾಕ್ಯ
೩ ಸಮಪಂಕ್ತಿಯಲ್ಲಿ ಕುಳ್ಳಿರುವಿಕೆ	೩ ಅಸ್ನೇಹ	೩ ಪಂತಿಭೇದ

೪ ಸಂಭಾಷಣೆಯ ಮಾಡುವಿಕೆ	೪ ನಿರ್ಮೋಹ	೪ ಉದಾಶೀನ
೫ ಕೈಯೊಡ್ಡಿ ಬೇಡುವಿಕೆ	೫ ಅವಿಶ್ವಾಸ	೫ ನಿರ್ದಯ

ಇವು ಒದಗದಂತೆ ಆಚರಿಸುವುದೆ ಗುರುಲಿಂಗ · ಜಂಗಮದ ನಿರ್ಣಯ. ಇದೇ ನಿರಾಮಯ. (ಪುಟ-೩೩, ವ-೨)

ಭಕ್ತನು ಭವಿಪಾಕವನ್ನು ನೀಡಕೂಡದು.

ಇದು ವೀರಶೈವತ್ವಕ್ಕೆ ವಿರೋಧವಾದುದು. ಆದರೂ ಹಲಕೆಲವರು ತಮಗೆ ಭವಿಪಾಕವೆಂದು ತಿಳಿದಿದ್ದರೂ ಬಂದ ಜಂಗಮರಿಗೆ ತಿಳಿಸದೆ ಅಂಧಶ್ರದ್ಧೆಯಿಂದ ಆಚಾರವಿರೋಧವಾಗಿ ಭವಿಪಾಕ (ಹಪ್ಪಳ, ಬಿಸ್ಕತ್ತು ಮೊದಲಾದ) ನನ್ನು ತಂದು ನೀಡುವರು. ಇದು ಉಭಯತರಿಗೂ ಸಲ್ಲದು. ಈ ಪದ್ಧತಿಯು ಈಗ ಅಲ್ಲಲ್ಲಿ ಇರುವಂತೆ ಆಗಲೂ ಇತ್ತೆಂದು ಈ ವಚನದಿಂದ ತಿಳಿಯುತ್ತದೆ.

"ಭೃತ್ಯಾಚಾರಗಲ್ಲದೆ ಭಕ್ತ್ಯಾಚಾರವಳವಡದು. ವೇದಶಾಸ್ತ್ರ ಪುರಾಣಾಗಮವನರಿಂದ ಸಂಬಂಧಿಗಲ್ಲದೆ ಆಚಾರವಳವಡದು ಅದೇನು ಕಾರಣವೆಂದೊಡೆ, ಅರಿದರಿದು ಭವಿಪಾಕವೆಂದು ಕಳೆದ ಬಳಿಕ ಜಂಗಮಕ್ಕೆ ನೀಡಿದಡೆ ಅದೆ ಪಾಕವಯ್ಯ. ಅದೆಂತೆಂದೊಡೆ, ತನ್ನ ಲಿಂಗಕ್ಕೆ ಸಲ್ಲದಾಗಿ, ಜಂಗಮಕ್ಕೆ ಸಲ್ಲದು.....ಇದುಕಾರಣ ಕೂ. ಚ. ಸಂಗಯ್ಯ ಇಂತಪ್ಪ ದುರಾಚಾರಿಯ ಮುಖವನೆನಗೆ ತೋರದಿರಯ್ಯ."

ಭವಿಪಾಕವನ್ನು ಎಡೆಬಡಿಸುವವನು ಭಕ್ತನಲ್ಲ; ಭೃತ್ಯಾಚಾರಿಯಲ್ಲ. ಅತನಿಗೆ ಆಚಾರ ಮೊದಲವೆ ಇಲ್ಲ. ಆಚಾರವಳವಡಬೇಕಾದರೆ ವೇದ ಶಾಸ್ತ್ರ ಪುರಾಣಾಗಮಗಳನರಿದ ಸಂಬಂಧಿಗಲ್ಲದೆ ಸಾಧ್ಯವಿಲ್ಲ. ಅರಿವಿಲ್ಲದ ಆಚಾರದಲ್ಲಿ ಪ್ರಮಾದದಿಂದಲಾದರೂ ದೋಷ ತಾಕುವದುಂಟು; ತಗಲುವದುಂಟು.

ತನಗಾಗದ್ದು ಪ್ರಸಾದವಲ್ಲ.

"ತನ್ನ ಲಿಂಗಕ್ಕೆ ಬಾರದ ರುಚಿಯ ಜಂಗಮಕ್ಕೆ ಸಲ್ಲಿಸಿ ಕೈಯೊಡ್ಡಿ ಪ್ರಸಾದವನಿಕ್ಕು. ಎಂಬುವಂಗೆ ಅದು ಪ್ರಸಾದವಲ್ಲ. ಸಿಂಗಿಕಾಳಕೂಟ

ವಿಷ ಕಾಡಿರಣ್ಣಾ! ಆ ಪ್ರಸಾದಕ್ಕೆ ವ್ರತಿಗಳೆಂಬವರು...(?) ಅದು ವ್ರತ ವಲ್ಲ. ಬಿಡದ ಕರ್ಮ. ಅದು ಪ್ರಸಾದವಲ್ಲ. ಕಿಲ್ಬಿಷವಯ್ಯಾ ಕೂ. ಚ. ಸಂ. ದೇವಾ!"

ಈ ಪ್ರಸಕ್ತಿಯು ಒಮ್ಮೊಮ್ಮೆ ಒದಗುತ್ತದೆ. ಅನಿವಾರ್ಯವೆಂದು ಅಂಗೀಕರಿಸುತ್ತಾರೆ. ಅದರದು ಪ್ರಸಾದವಲ್ಲ ಕಾಳಕೂಟ ವಿಷ; ಕಿಲ್ಬಿಷ ಎಂದು ಹೇಳುತ್ತಾನೆ. ಅದು ವ್ರತವಲ್ಲವೆಂದು ಅಲ್ಲಗಳೆಯುತ್ತಾನೆ. ಕೊಡುವ—ಕೊಂಬುವ ಪ್ರಸಾದಿಗಳು ಇದನರಿಯಬೇಕು.

ಪ್ರಸಾದಕ್ಕೆ ತಾವಿನ ಗೊತ್ತು.

"ತನ್ನ ಲಿಂಗಕ್ಕೆ ಕೊಡಬಾರದ ತಾವಿನಲ್ಲಿ ಪ್ರಸಾದವಕೊಂಡು, ತುಡುಗುಡಿ ನಾಯುಂತೆ ತಿಂಬುವರನೇನೆಂಬೆನಯ್ಯ? ಅದು ತನ್ನ ಒಡಲ ಹೊರೆವುದಲ್ಲದೆ, ಹಿಡಿದ ಕುಳಕ್ಕೆ ಸಲ್ಲದು. ಸಾಕ್ಷಿ! 'ದ್ರವ್ಯಂಧಾತು ಶುಧಂ ಭವೇತ್' ಎಂದುದಾಗಿ ಇದುಕಾರಣ ಕೂ. ಚ. ಸಂಗಯ್ಯನಲ್ಲಿ ಅದು ತಾ ಬೀಸರವಾದ ವ್ರತಗೇಡಿ ಮೂಳರನೆನಗೆ ತೋರದಿರಯ್ಯ."

ಪೂಜಾಗ್ರಹ, ಪ್ರಸಾದಗ್ರಹಗಳ ಹೊರತು ಬೇರೆ ಸಿಕ್ಕಸಿಕ್ಕಲ್ಲಿ ಪ್ರಸಾದವ ಕೊಳ್ಳಬಾರದು. ಕೊಂಡರೆ ವ್ರತಹಾನಿ. ಅಲ್ಲಿಗೆ ಹಿಡಿದ ಕುಳ ಕಡೆ. ಅದು ಸಾತ್ವಿಕ ಗುಣ ವಿನಾಶ. ಅದರಿಂದ ಧಾತು ಕೆಟ್ಟು ದೇಹ ಕೆಡುವುದು. ಆಗ ದೇವನಿಗದು ಬೀಸರ. ಆತ ಶರಣದೃಷ್ಟಿಗೆ ದೂರ. ಇಂದಿನ ಕೆಲ ಪ್ರಸಾದಿಗಳು ಈ ವಿಷಯದಲ್ಲಿ ಸ್ವಚ್ಛಂದವಾಗಿ ವರ್ತಿಸುತ್ತಾರೆ. ಪ್ರಸಾದ ಮುಗಿದ ಮೇಲೆ ಮಹಡಿಯನೇರಿ ಹೋಗಿ ಹಣ್ಣು ತಿನ್ನುವ ತನುವೋಹಿ ಪ್ರಸಾದಿಗಳು ಉಂಟು. ಹಾಸಿಗೆಯ ಹಿಡಿದು ಔಷಧಿಗಳನ್ನು ಕೊಳ್ಳುವ ಜೀವಗಳ್ಳ ಪ್ರಸಾದಿಗಳೂ ಉಂಟು. ಈ ಪ್ರಸಾದಿಗಳು ಇದನ್ನು ಚನ್ನಾಗಿ ಅರಿಯಬೇಕು.

ಪ್ರಾಣಲಿಂಗ ಪ್ರಸಾದಿ ಯಾರು?

ಪ್ರಸಾದಿಗಳಾಗಬಹುದು. ಪ್ರಾಣಲಿಂಗ ಪ್ರಸಾದಿಗಳಾಗುವುದು ಪ್ರಯಾಸ. ಪಂಚೇಂದ್ರಿಯಗಳ ಸುಖದ ಧ್ಯಾನ ಇರುವ ವರೆಗೂ ಅದು ಸಮನಿಸದು. ಅದೇನು ಕಾರಣವೆಂದರೆ—

"ಶ್ರೋತ್ರೇಂದ್ರಿಯ ಸುಖವುಳ್ಳನ್ನಕ್ಕರ ಗುರುವಚನವನೆಂತು ಕೇಳಿದೆನೆನಬಹುದಯ್ಯ? ಘ್ರಾಣೇಂದ್ರಿಯ ಸುಖವುಳ್ಳನ್ನಕ್ಕರ ಲಿಂಗಕ್ಕೆ ಗಂಧವನೆಂತು ನಿವೇದಿಸಿದೆವೆನಬಹುದಯ್ಯ? ನೇತ್ರೇಂದ್ರಿಯ ಸುಖವುಳ್ಳನ್ನಕ್ಕರ ಲಿಂಗವ ಭಾವಿಸಿದೆವೆಂತೆನಬಹುದಯ್ಯ? ಜಿಹ್ವೇಂದ್ರಿಯ ಸುಖವುಳ್ಳನ್ನಕ್ಕರ ಪ್ರಸಾದವ ಗ್ರಹಿಸಿದೆವೆಂತೆನಬಹುದಯ್ಯ? ಸ್ಪರ್ಶನೇಂದ್ರಿಯ ಸುಖವುಳ್ಳನ್ನಕ್ಕರ ಲಿಂಗಾಂಗವಾಯಿತ್ತೆಂತೆನಬಹುದಯ್ಯ? ಇವೆಲ್ಲವನು ಪರಿಚ್ಛೇದಿಸಿದೊಡೆ ಅವರೆ ನಮ್ಮ ಕೂ. ಚ. ಸಂಗಯ್ಯನಲ್ಲಿ ಪ್ರಾಣಲಿಂಗ ಪ್ರಸಾದಿಗಳಯ್ಯ."

ಗುರುವಚನವ ಕೇಳುವ, ಲಿಂಗಕ್ಕೆ ಗಂಧವ ನಿವೇದಿಸುವ, ಲಿಂಗ ನಿರೀಕ್ಷಣೆ ಮಾಡುವ, ಪ್ರಸಾದವ ಪರಿಗ್ರಹಿಸುವ, ಲಿಂಗಾಂಗವಾಗುವ ಸೌಭಾಗ್ಯ ಪಂಚೇಂದ್ರಿಯ ಸುಖದ ಲಾಲಸೆಯು ಲಯವಾಗದೆ ಸಾಧ್ಯವಿಲ್ಲ. ಆದ್ದರಿಂದ ಪಶುವಿನಂತೆಳಸುವ ಪಂಚೇಂದ್ರಿಯಗಳ ಪರಿಯನ್ನು ಪರಿಹರಿಸಬೇಕು. ಆತನೇ ನಿಜವಾದ ಪ್ರಾಣಲಿಂಗಪ್ರಸಾದಿ.

ಪ್ರಯಾಸಪಟ್ಟಾದರು ಪ್ರಾಣಲಿಂಗಪ್ರಸಾದವನ್ನು ಪಡೆಯಬಹುದು. ಲಿಂಗಪ್ರಾಣಪ್ರಸಾದ ಪಡೆವುದು ಇನ್ನೂ ಅಪರೂಪ. ಅದರೆ ಇದನ್ನು ಸಾಧಿಸದ ಹೊರತು ಪ್ರಸಾದಿಗೆ ಪರಿಪೂರ್ಣತೆಯಿಲ್ಲ; ಪರಿಪಕ್ವತೆ ಇಲ್ಲ. ಆತ ಲಿಂಗಭೋಗೋಪಭೋಗಿ ಆಗ ಶಿವಯೋಗಿ ಎನಿಸ. (ಪುಟ-೮೨, ವ-೩)

ಪ್ರಸಾದವಾವುದು?

ಸತ್ಯವಾದ ಪ್ರಸಾದವಾವುದು? ಎಲ್ಲಿಹುದು? ಹೇಗೆ ಪಡೆವುದು? ಎಂಬೀ ಪ್ರಶ್ನೆಗಳಿಗೆ ಸರಿಯಾದ ಸಂಪೂರ್ಣವಾದ ಉತ್ತರ ಇಲ್ಲಿದೆ:

"ಪ್ರಸಾದ ಪ್ರಸಾದವೆಂಬುವರು ಪ್ರಸಾದದ ಸ್ಥಳಕುಳವೆಂತಪರೆಂದೊಡೆ ನಾನರಿಯೆನಯ್ಯ. ಕೊಟ್ಟವನೇನು ಗುರುವೆ? ಅಲ್ಲ. ಕೊಂಡವನೇನು ಶಿಷ್ಯನೆ? ಅದೆಂತಯ್ಯಾ ಎಂದೊಡೆ, ತನುವನಂಡಲೆದು, ಮನವಶುದ್ಧವ ಮಾಡಿ, ಈಡಾಪಿಂಗಳ ನಾಳವುಂ ಕಟ್ಟಿ, ಸುಷುಮ್ನ ನಾಳದಲ್ಲಿರ್ಪ ಪವನನೆಂಬ ಪರಿಚಾರಕನಿಂದೆ, ಅಗ್ನಿ ಎಂಬ ಅಜಗರನ

ಎಬ್ಬಿಸಲು, ಅದು ಮೇಲುಗಿರಿಯಲ್ಲಿರ್ದ ಪ್ರಸಾದವ ತಾಗಲೊಡನೆ ಆ ಪ್ರಸಾದವು ಉದರಕ್ಕಿಳಿದು ಬರ್ಪಲ್ಲಿ, ಮನವೆಂಬ ಪ್ರಸಾದಿ ಮೆಯ್ಯಾಂತುಕೊಂಡು ಭೋಗಿಸಬಲ್ಲಡೆ, ಅತನೇ ಪ್ರಸಾದಿ ಕೂ. ಚ. ಸಂ. ದೇವ''

ಮುಸ್ತಕದ ಮೇಲುಗಿರಿಯಲ್ಲಿರ್ದ ಅಚ್ಚಳಿಯದ ಆನಂದಾವೃತನೇ ಪ್ರಸಾದ ತನುಮನವ ಪುಟಕ್ಕಿಟ್ಟು, ಈಡಾಪಿಂಗಳ ಕಟ್ಟಿ, ಸುಷುಮ್ನಾನಾಳದಲ್ಲಿರುವ ಪವನಪರಿಚಾಂಕನ ಬೆಂಬಲದಿಂದ ಅಗ್ನಿ ಅಜಗರನ ಎಬ್ಬಿಸಿದಲ್ಲಿ ಆ ಪ್ರಸಾದ ಉದರಕ್ಕಿಳಿದು ಬರುವುದು. ಅದನುಂಬುವ ಮನ ಪ್ರಸಾದಿಯೇ ಅಮುಪ್ರಸಾದಿ. ಇದೇ ಪ್ರಸಾದದ ಸ್ಥಳಕುಳದ ಹೃದಯ-

ಅಷ್ಟತನುತ್ವಕಲ್ಪನೆ ಅನಿಷ್ಟವಾದ್ದು.

ಈ ವಿಚಾರವನ್ನು ಈ ವಚನನೇ ವಿವರವಾಗಿ-ವಿಸ್ಪಷ್ಟವಾಗಿ ವಿಚಾರಿಸಿದೆ—

''ಅಷ್ಟತನುಮೂರ್ತಿಯೆಂಬ ಮಾತಿನ ಪಾತಕವ ಕೇಳಲಾಗದು. ಅದೆಂತೆಂದೊಡೆ, ಪೃಥ್ವಿಯಂತೆ ಕರುಣವುಳ್ಳಾತನೆ? ಅಪ್ಪುವಿನಂತೆ ರಸಭರಿತವುಳ್ಳಾತನೆ? ತೇಜದಂತೆ ತೃಣಕಾಷ್ಠವಿಲ್ಲದಿರ್ದೊಡೆ ನಂದುವಾತನೆ? ವಾಯುವಿನಂತೆ ಚಲನೆಯುಳ್ಳಾತನೆ? ಆಕಾಶದಂತೆ ಬಟ್ಟಬಯಲಾದಾತನೆ? ಚಂದ್ರ ಸೂರ್ಯರಂತೆ ದಿವಾರಾತ್ರಿಯ ನಡಿಸುವ ಕೃತ್ಯದಾತನೆ? ಜೀವಾತ್ಮನಂತೆ ಜನನಮರಣಕ್ಕೊಳಗಿಹನೆ? ಇದುಕಾರಣವಾಗಿ ಕೂ. ಚ. ಸಂ. ದೇವಾ ನೀವು ನಿಮ್ಮಂತೆ, ಉಳಿದವೆಲ್ಲವೂ ನೀವಿರಿಸಿದಂತೆ.''

ಅಷ್ಟಪ್ರಕೃತಿ ಕಲ್ಪನೆಯು ವಿಕೃತಿಯ ಚಿನ್ಹ. ಖಂಡ ಕಲ್ಪನೆ. ಉಳಿ-ಲಿಂಬೆ, ಬಾಳೆ ಹಲಸು ಮೊದಲಾದ ಹಣ್ಣುಗಳಲ್ಲಿರುವ ಹುಳಿ, ಸಿಹಿ ಮುಂತಾದ ರಸಗಳು ಔಪಾಧಿಕವಾದಂತೆ, ಮೃದು ಕಠಿಣ, ರಸ ನೀರಸ, ತೇಜ-ನಿಸ್ತೇಜ, ಗಮನ-ನಿರ್ಗಮನ, ಜನನ-ಮರಣ ಮುಂತಾದವುಗಳು ಔಪಾಧಿಕವೇ ಹೊರತು ಸರ್ವಾಂತರ್ಯಾಮಿಗೆ ವ್ಯಕ್ತವಾಗಿ ವ್ಯಷ್ಟಿಯಾಗಿ ಸಲ್ಲವು.

ಜಯಲವಸ್ತುವು ಭವಿಯೆ!

"ಭವಿಮಾಡಲಿಕ್ಕೆ ಪೃಥ್ವಿಯಾಯಿತ್ತು. ಭವಿಮಾಡಲಿಕ್ಕೆ ಅಪ್ಪುವಾಯಿತ್ತು. ಭವಿಮಾಡಲಿಕ್ಕೆ ಅಗ್ನಿಯಾಯಿತ್ತು. ಭವಿಮಾಡಲಿಕ್ಕೆ ವಾಯುವಾಯಿತ್ತು. ಭವಿಮಾಡಲಿಕ್ಕೆ ಆಕಾಶವಾಯಿತ್ತು. ಭವಿಮಾಡಲಿಕ್ಕೆ ಸೂರ್ಯಚಂದ್ರಾದಿಯು. ಭವಿಮಾಡಲಿಕ್ಕೆ ಬ್ರಹ್ಮವಿಷ್ಣುಗಳಾದರು. ಭವಿಮಾಡಲಿಕ್ಕೆ ರುದ್ರನಾದನು. ..... ಇದುಕಾರಣ ಕೂ. ಚ. ಸಂ. ದೇವಾ, ಭವಿಮಾಡಲಾಯಿತ್ತು."

ಆದಿಭವಿ. ಅಂತ್ಯಭವಿ. ಆದಿಭವಿತನವನ್ನು ಕಳೆಯಬಹುದು. ಅಂತ್ಯದಲ್ಲಿ ಅಚ್ಚಳಿಯದೆ ಉಳಿವ ಭವಿತನ ಕಳೆವುದು ಆದಾರ ವಶ? ಪಂಚಭೂತಗಳು, ಪಂಚದೇವತೆಗಳು ಭವಿಯಿಂದ ಆದವು. ಎಲ್ಲಕ್ಕು ಆದಿಕಾರಣವು ಭವಿಯೆ; ಆದರೆ ಆದಿಭವಿತನವು ಭವಕ್ಕೆ ಬೇರು. ಅಂತ್ಯ ಭವಿತನವು ಭವಕ್ಕೆ ವೃಕ್ಷ್ಯ

ಭವಿಪಾಕವೆಂತುಂಟು?

"ಭಕ್ತರಾದಿವೆಂದು ಭವಿಪಾಕವನೊಲ್ಲೆವೆಂಬಿರಿ. ಭವಿಪಾಕವೆಂಬುದೆಂತುಂಟೆಂದೊಡೆ ಕೇಳಿರೀ. ಅಂಗತ್ರಯದಿಂದೆ ನೋಡಿದಡದು ಭವಿಪಾಕ. ಲಿಂಗತ್ರಯ ನೋಟಕ್ಕದು ಸಲ್ಲದು. ಗುರುಕಾರುಣ್ಯವುಂಟು. ನಾವು ಸದ್ಭಕ್ತರೆಂಬುವರು ಅವಂಗೆ ಅಂಗತ್ರಯದ ನೋಟವುಳ್ಳನ್ನಕ್ಕರ ಲಿಂಗತ್ರಯದ ನೋಟವಿನ್ನೆಲ್ಲಿಯದೋ? ಪಂಚಭೂತದ ಕಾಯವ ತಂದು ಸದ್ಭಕ್ತನೆಂದೊಡೆ ಪ್ರಸಾದ ನಾಸ್ತಿ ಎಂಬುದು ನಮ್ಮ ಕೂ. ಚ. ಸಂ. ದೇವರ ವಚನ."

ಪ್ರಸಾದಿಯು ಪ್ರಸಾದಕಾಯನಾಗಬೇಕು. ಪಂಚಭೂತದ ಕಾಯ ಕಳೆಯಬೇಕು. ತನುತ್ರಯದ ವಾಸನೆಯು ವಿನಾಶವಾಗಬೇಕು. ಆಗ ಆತ ಭಕ್ತನಾಗುವನು. ಆತನ ಪದಾರ್ಥ ಪ್ರಸಾದವಾಗುವುದು ಇಲ್ಲದಿದ್ದಲ್ಲಿ ಭಕ್ತನದೂ ಭವಿಪಾಕವೆ!

ವರ್ಣದೀಕ್ಷೆಗೆ ಕಾಲ ನಿರ್ಣಯ.

"....ಬ್ರಾಹ್ಮಣನ ಮೂರು ವರುಷ ನೋಡಬೇಕು. ಕ್ಷತ್ರಿಯನ ಆರು ವರುಷ ನೋಡಬೇಕು. ವೈಶ್ಯನ ಒಂಬತ್ತು ವರುಷ ನೋಡ

ಹೀಗೆ ಸಂಸ್ಕೃತದ ಹೆಸ್ಸೆರಡು ದರುಷ ನೋಡಬೇಕು. ಈ ಹಿಂಗೆ ತಿಳಿಯದ್ದಕ್ಕೆ ದೀಕ್ಷೆಯು ಕೊಡಲಾಗದು. ಈ ಕ್ರಮವನರಿಯದೆ, ಉಪಾ ಧಿವಿಡಿದು ಉಪದೇಶವ ಕೊಂಬಾತ ಶಿಷ್ಯನಲ್ಲ. ಇವರಿಬ್ಬರ ನಿಲವು ಒಂದೆ ಹೆಕ್ಕಿನ ಮನೆಗೆ ಬೆಲ್ಲ ಬಂದಂತೆ. ಈ ಗುರು ಶಿಷ್ಯರಿಬ್ಬರನ್ನು ಕೂಡಿದ ಪ್ರಸಾದಕ್ಕಿಯ ನಮ್ಮ ಕೂ. ಚ. ಸಂ. ದೇವಾ."

ಈ ನೀತಿಕೆಯು ಇಂದು ನಿಂತು ಹೋಗಿದೆ. ಈ ನಿಯಮವನ್ನು ಅನುಸರಿಸಬೇಕೆಂದರೆ ಅದು ಅಂದಿನ ಮಾತು. ಇಂದಿಗದು ಸಲ್ಲದೆಂದು ನಿಶ್ಚಯವಾಗಿ ಹೇಳುವದುಂಟು. ಇಂದಿನದು ಓಡುವ ಪ್ರಪಂಚವಲ್ಲವೆ?

ಪದಾರ್ಥವೆಂದರೇನು?

ಪಾರಮಾರ್ಥಿಕ, ವ್ಯಾವಹಾರಿಕ, ಪ್ರಾತಿಭಾಷಿಕ, ತುಚ್ಛ ಎಂದು ಪದಾರ್ಥ ಚಾಲ್ತಿ ವಿಧವೆಂಬುದಾಗಿ ವೇದಾಂತ ಶಾಸ್ತ್ರವು ವಿವರಿಸುತ್ತದೆ. ಪೂಜಾಗೆ ಉಪಾಧಿ ಸಾಮಗ್ರಿಗಳಿಗೇನೆ ಪದಾರ್ಥವೆಂಬುದಾಗಿ ಬಳಕೆಯ ಪ್ರಸಿದ್ಧಿಯಿದೆ. ಅಲ್ಲಮಪ್ರಭುವಿನು ಅದೇ ಪದಾರ್ಥ ಶಬ್ದಕ್ಕೆ ಬೇರೊಂದು ಅರ್ಥವನ್ನು ಪ್ರತಿಪಾದಿಸಿದ್ದಾನೆ.

"ಪದಾರ್ಥ ಪದಾರ್ಥನೆಂದಂಬಿರಿ; ಪದವಾವುದು, ಅರ್ಥವಾವುದು ಬಂದರಿಯಿರಿ. ಪದವೆ ಲಿಂಗ, ಅರ್ಥವೆ ಭಕ್ತಿ. ಇದನರಿದು ಪದಾರ್ಥ ವೆಂದು ಕಂದು ಅರ್ಪಿತವ ಮಾಡಬಲ್ಲಡೆ ಕೂಡಿಪ್ಪನಯ್ಯ ನಮ್ಮ ಕೂ. ಚ. ಸಂ. ದೇವ."

ಲಿಂಗ (ಶಿವ) ಭಕ್ತ (ಶಕ್ತಿ) ಈ ದ್ವಯವೇ ನಿಜವಾದ ಪದಾರ್ಥ. ಇದನು ಕಂದು ಅರ್ಪಿತವಾಡುವುದೆಂದರೆ ಶರಣಸತಿ-ಲಿಂಗಪತಿಗಳು ಸಮರಸವಾಗುವುದು. ಇದೇ ಅರ್ಪಣವಿಧಾನ.

ಹೊನ್ನು ಹೆಣ್ಣು ಮಣ್ಣು-ಯಾವು?

ಇದು ಹೊರಗಿನವೆಂಬುದು ಸರ್ವಸಾಮಾನ್ಯವಾದ ತಿಳಿವಳಿಕೆ. ಬಹ್ಮಚಾರಿಗೆ ಅವೇ ಅಷ್ಟಾವರಣಗಳೆಂದು ಗ್ರಹಿಕೆ. ಅದರದು ವಿಚಾರ ಪೂರ್ವಕವಲ್ಲ ವಿಷಯ. ಏಕೆಂದರೆ ಈ ಹೊರಗಿನ ಹೊನ್ನು ಹೆಣ್ಣು ಮಣ್ಣು

ಗಳನ್ನು ಬಿಟ್ಟವರೂ ಸಹ ಭವದ ಕೋಟಲೆಗೆ ಪಕ್ಕಾಗುವದುಂಟು; ಆಗುತ್ತಾರೆ. ಹಾಗಾದರೆ ಆ ಹೊನ್ನು ಹೆಣ್ಣು ಮಣ್ಣು ಬೇರೆ ಇರಬೇಕು; ಇರುವವು. ಅವಾವೆಂದರೆ—

".....ಹೊನ್ನು ಜೀವ, ಹೆಣ್ಣು ಪ್ರಾಣ, ಮಣ್ಣು ದೇಹ. ಹೊನ್ನು ಭವಿ, ಹೆಣ್ಣು ಭವ, ಮಣ್ಣು ಹವ್ಯ ಈ ತ್ರಿವಿಧ ಸ್ಥಲವಪೂರ್ವ ನಮ್ಮ ಕೂ. ಚ. ಸಂ. ನಲ್ಲಿ"

ಈ ಹೊನ್ನುಳ್ಳಾತ ಭಕ್ತನಲ್ಲ. ಈ ಹೆಣ್ಣುಳ್ಳಾತ ಶರಣನಲ್ಲ. ಈ ಮಣ್ಣುಳ್ಳಾತ ಲಿಂಗೈಕ್ಯನಲ್ಲ. ಅದ್ದರಿಂದ ಇವನ್ನು ಜಯಿಸಬೇಕು; ತ್ಯಜಿಸಬೇಕು. ತನುವಿನ ಗೆಲವು, ತನ್ಮಯತ್ವದ ಒಲವು. ಮನೋ ವಿಲಯ, ಮಹಾನುಭಾವತ್ವದ ವಿಜಯ. ಜೀವಭಾವದ ವಿನಾಶ, ಆತ್ಮ ದೇವವಿಲಾಸ. ಇದೇ ಪಂಚನದ ವೃತ್ಯ ಶಿವಾನುಭವದ ಸೊತ್ತು ಹೊನ್ನು ಹೆಣ್ಣು ಮಣ್ಣುಗಳ ಗೆಲವಿನ ಗೊತ್ತು.

ಗುರು ದ್ರವ್ಯವ ಕದಿಯಲಾಗದು.

"ಗುರುಕಾರುಣ್ಯವ ಪಡೆದೆವೆಂಬುವರು ನೀವು ಕೇಳಿ ಭೋ! ಒಬ್ಬನು ಆದಿಹೆನೆಂಬ. ಮತ್ತೊಬ್ಬ ಒಬ್ಬರಿಚ್ಛೆಗಾದಿಹೆನೆಂಬ. ಇವರಿಬ್ಬರು ಪಿಂಡ ಭೋಗಿಗಳು. ಭಕ್ತಂಗೆ ಆಗೆಯು ಇಲ್ಲ, ಚಾಗೆಯು ಇಲ್ಲ, ಸರ್ವದ್ರವ್ಯ ವನು ಗುರುವಿಗೊಪ್ಪಿಸಿದನಾಗಿ ... ...ಇದುಕಾರಣ ಗುರುದ್ರವ್ಯವನಪಹ ರಿಸಲಾಗದು. ಗುರು ದ್ರವ್ಯವಾವುದೆಂದಡೆ ದೇಹಿಕ ದ್ರವ್ಯ, ಭೌತಿಕ ದ್ರವ್ಯ, ಆತ್ಮದ್ರವ್ಯ, ಇಂದ್ರಿಯದ್ರವ್ಯ, ಜ್ಞಾನದ್ರವ್ಯವೆಂಬ ಪಂಚದ್ರವ್ಯವನು ಉಭ ಯವಳಿದು ಷೋಡಶೋಪಚಾರದಲ್ಲರ್ಪಿಸಬಲ್ಲಡೆ ನಮ್ಮ ಕೂ. ಚ ಸಂ. ನಲ್ಲಿ ಅತನೇ ಗುರುಭಕ್ತನು."

ಗುರುಭಕ್ತನ ಈ ಪಂಚದ್ರವ್ಯಗಳು ಗುರುವಿನವು. ಅವನ್ನು ಅತನ ಅಪ್ಪಣೆಯಿಲ್ಲದೆ ಸ್ವಾರ್ಥಮನೋವೃತ್ತಿಯಿಂದ ಬಳಸಕೂಡದು; ಬೆಳಸ ಕೂಡದು. ಒಂದು ವೇಳೆ ಹಾಗೆ ಮಾಡಿದಲ್ಲಿ ಆತ ಗುರುಭಕ್ತನಲ್ಲ; ಬ್ರಾಹ್ಮೇತಿ ರಾಕ್ಷಸ,—ಎಂಬುದು ಈ ವಚನದ ವಿಧಿವಾದ.

ಲಿಂಗೈಕ್ಯನ ಸಾಹಿತ್ಯ.

ಸಾಹಿತ್ಯವಿಲ್ಲದ್ದು ಯಾವುದೂ ಸಿದ್ಧಿಸದು. ನಿದರ್ಶನಕ್ಕಾಗಿ ಹತ್ತಿ ಹುಟ್ಟಲು ಆದೆಷ್ಟೋ ಸಾಹಿತ್ಯಬೇಕು. ಬೆಳೆಯಲುಬೇಕು. ಬಟ್ಟೆ ನೇಯಲು ಬೇಕು. ಮತ್ತೆ ವ್ಯತ್ತಿಕೆಯಾಗಲು ಬೇಕು. ಹೀಗೆ ಯಾವುದನ್ನು ವಿಚಾರಿಸಿದರೂ ಸಾಹಿತ್ಯವಿಲ್ಲದೆ ಸಾಧ್ಯವಿಲ್ಲ. ಇದರಂತೆ ಲಿಂಗೈಕ್ಯನಿಗೂ ಒಂದು ಸಾಹಿತ್ಯಬೇಕು.

"ಅರುಹಿಲ್ಲದ ಕಾರಣ ಭವಕ್ಕೆ ಬಂದರು. ಅರುಹಿಲ್ಲದವಂಗೆ ಆಚಾರವಿಲ್ಲ. ಆಚಾರವಿಲ್ಲದವಂಗೆ ಗುರುವಿಲ್ಲ. ಗುರುವಿಲ್ಲದವಂಗೆ ಲಿಂಗವಿಲ್ಲ. ಲಿಂಗವಿಲ್ಲದವಂಗೆ ಜಂಗಮವಿಲ್ಲ. ಜಂಗಮವಿಲ್ಲದವಂಗೆ ಪಾದತೀರ್ಥಪ್ರಸಾದವಿಲ್ಲ. ಪಾದತೀರ್ಥಪ್ರಸಾದವಿಲ್ಲದವಂಗೆ ಗಣತ್ವವಿಲ್ಲ. ಅಂವು ಸಾಹಿತ್ಯ ಆಚಾರ, ಆಚಾರಸಾಹಿತ್ಯ ಗುರು, ಗುರುಸಾಹಿತ್ಯ ಲಿಂಗ, ಲಿಂಗಸಾಹಿತ್ಯ ಜಂಗಮ, ಜಂಗಮಸಾಹಿತ್ಯ ಪ್ರಸಾದ, ಪ್ರಸಾದ ಸಾಹಿತ್ಯ ಗಣತ್ವ. ಇದು ಕಾರಣ ಕೂ. ಚ. ಸಂ. ನಲ್ಲಿ ಇವಷ್ಟು ಒಂದುಗೂಡಿದವರಲ್ಲಿ ಎಲ್ಲ ಸ್ಥಲವುಂಟು. ಅತ ನಿಷ್ಕಳ ಲಿಂಗೈಕ್ಯ; ಅತ ಅಪೂರ್ವ.

ಇವಿಷ್ಟೂ ಲಿಂಗೈಕ್ಯನ ಸಾಹಿತ್ಯ. ಇವನ್ನು ಸಂಪಾದಿಸುವುದು ಅತನಿಗೆ ತೀರ ಅಗತ್ಯ. *

---

* ಕೆಲವು ವಾತಾಂಶಗಳು ನಿಂತು ಬಂದಿದ್ದವು. ಅವು ಅಗತ್ಯವೆಂದು ಬಗೆದು ಬಂದುದರಿಂದ ಮುರಳಿ ಈ ಲೇಖದಲ್ಲಿ ಅವನ್ನೆ ವಿವರಿಸಲಾಗಿದೆ. ಮುಂದಿನ ಲೇಖ ಐತಿಹಾಸಿಕಾಂಶಗಳಿಂದೊಡಗೂಡಿ ಪ್ರಕಟವಾಗುತ್ತದೆ.

ಶರಣಸತಿಯರ ನೂರೆಂಟು ನಾಮಗಳು.

(ಶ್ರೀ. ಘನಮಠದಾರ್ಯ ನಾಗಭೂಷಣ ಶಿವಯೋಗಿವಿರಚಿತ.)

ಭಾ। ಷಟ್ಪದಿ॥

ಸೂಚನೆ॥ ಪ್ರೀತಿಯಲಿ ನೂತನ ಪುರಾತನ।
ರಾತಿಶಯ ಶರಣೆಯರ ನಾಮಗ।
ಳೋತು ಪಠಿಸುವವರ್ಗೆ ಮಹವಿಷ್ವಾರ್ಥಸಿದ್ಧಿಗಳೂ ॥ಪ॥

ಶ್ರೀಲಲಿತೆ ನೀಲಾಂಬೆಗಳ ಸುವಿ।
ಶಾಲಮತಿ ಗಂಗಾಂಬೆಗಳ ಶಿವ।
ಲೋಲೆಯಹ ನಾಗಾಂಬೆಗಳ ಸೂರಾಂಬೆಗಳ ಮತ್ತೆ ॥
ಶೀಲಯುತೆ ಗೌರಾಂಬೆಗಳ ಹಿತ।
ಬಾಲೆಯಹ ಕೋಲಾಂಬೆಗಳ ಗುಣ।
ಜಾಲೆ ವಿಮಲಾಂಬೆಗಳನಾ ವರದೇವಲಾಂಬೆಗಳ ॥೧॥

ಬಾಲೆ ವೀರಮ್ಮಗಳ ಪರಮ ಸು।
ಶೀಲೆ ಮಸಣಮ್ಮಗಳ ಭವನಿ।
ರ್ಮೂಲೆ ಲಕ್ಕಮ್ಮಗಳ ನೆರೆ ಮಾಯಮ್ಮಗಳ ಮತ್ತೆ ॥
ಕಾಲಜೆ ರೆಮ್ಮವ್ವೆಗಳ ಸದ।
ಯಾಳೆ ರಾಯವ್ಮಗಳ ಸುಜನರ।
ಪಾಲೆ ಗುಡಿಸಿಲಪಾದ- ನಾಗಾಯಮ್ಮಗಳ ಮತ್ತೆ ॥೨॥

ಕಾರಿಕಾಲವ್ಮೆಗಳ ಕರುಣಾ।
ಕಾರಿ ಗಾರಮ್ಮೆಗಳ ಜಗದುಪ।
ಕಾರಿ ಕಾಳೆಯದ ಪುರದ ವೀರಮ್ಮಗಳನನು ಮತ್ತೆ ॥
ಸಾರಮತಿ ಕಾಯಮ್ಮಗಳ ಸುವಿ।
ಚಾರ ಮಹಾದೇವಮ್ಮಗಳ ಪಾ।
ಪಾರಿಯಕ್ಕಮ್ಮಗಳ ಕಲ್ಯಾಣಮ್ಮಗಳ ಮತ್ತೆ ॥೩॥

ಅವ್ವೆಯಹ ಯುರುತರ ಕದಿರ ರಿ-।
ಮ್ಮವ್ವೆಯ ಕೊಟ್ಟಣದ ವರಸೋ।
ಮುವ್ವೆಗಳ ರೆಬ್ಬವ್ವೆಗಳ ರೇಕವ್ವೆಗಳ ಮತ್ತೆ ॥
ಅವ್ವೆಸೋಹಳಿಪುರದ ಸೋ।
ಮುವ್ವೆಗಳ ನಿಂಗಳಿಯ ವೈಜ।
ಕ್ಕವ್ವೆಗಳ ವೈಜಾಂಬವ್ವೆಗಳ ಮತ್ತೆ ॥೪॥

ಅವ್ವೆ ಶಿವದಾಸವ್ವೆಗಳ ತಿಲ।
ಕವ್ವೆಗಳ ಕಾಳವ್ವೆಗಳ ಗೊ।
ನ್ನವ್ವೆಗಳ ಗುಡ್ಡವ್ವೆಗಳ ಮತ್ತೆ ॥
ಅವ್ವೆದುನ್ನಳವ್ವೆಗಳ ಪಿ।
ಪ್ಪವ್ವೆಗಳ ಸಂಕವ್ವೆಗಳ ಸ।
ಪ್ಪವ್ವೆಗಳ ಜೊವ್ಮವ್ವೆಗಳ ಮುದ್ದವ್ವೆಗಳ ಮತ್ತೆ ॥೫॥

ಅವ್ವೆ ಪರತರ ನೀಲನನುರ್ನಿಂ।
ದೆವ್ವೆಗಳನಾ ವೀರಸಂಗಾ।
ಯವ್ವೆಗಳನಾ ವೀರತಿಲಕವ್ವೆಗಳನನವರತ ॥
ಅವ್ವೆವೂಚಲ ಅವ್ವೆಚಂಗಳೆ।
ಅವ್ವೆಗಳ ಕನ್ನಡಿಯುಕರ ರಿ।
ಮ್ಮವ್ವೆಗಳನಾ ವೀರ ಜೋಳಾಯವ್ವೆಗಳ ಮತ್ತೆ ॥೬॥

ಅಕ್ಕ ಮುಕ್ತಾಯಕ್ಕಗಳ ಸ।
ತ್ಯಕ್ಕಗಳ ಮಾಯಕ್ಕಗಳ ನೆ।
ಲ್ಲಕ್ಕಗಳ ಮಲ್ಲಕ್ಕಗಳ ಚನ್ನಕ್ಕಗಳ ಮತ್ತೆ ॥
ಅಕ್ಕನುಡುತಡಿಯ ಮಹಾದೇ।
ವಕ್ಕನೊಬ್ಬಕೆಯಕ್ಕದಾ ನಿಂ।
ದಕ್ಕಗಳ ನುರುತರದ ಮುಂಗಾಯಕ್ಕರಸಿಯರನು ॥೭॥

ದೇವಿದೊಂತಲದೇವಿಯಲ್ಲವು।
ದೇವಿ ವಿಮಲಾದೇವಿ ಸುಗ್ಗಲ।
ದೇವಿ ಚಾಕಲದೇವಿ ಕೇತಲದೇವಿಗಳ ಮತ್ತೆ।

ದೇವಿವೂಚಲದೇವಿ ಬಾಚಲ।
ದೇವಿ ಕಾಚಲದೇವಿ ಯೈಚಲ।
ದೇವಿಯಳನಾ ಕೇಳಿಕೆಯಹ ಮಹಾದೇವಿಗಳ ಮತ್ತೆ ॥೮॥

ದೇವಿ ಗಂಗಾದೇವಿಯೂ ಮೂ।
ಯ್ದೇವಿಯೂ ಶಿವದೇವಿ ಸಿದ್ಧಾ।
ದೇವಿಯೂ ಸಾಯ್ದೇವಿಯೂ ಶಚಿದೇವಿಗಳ ಮತ್ತೆ ॥
ದೇವಿಯೂಮಳದೇವಿ ಯಣ್ಣುಲ।
ದೇವಿ ಲಲನದೇವಿ ಚಿಕ್ಕಾ।
ದೇವಿ ರುದ್ರಸುವೀಚಿ ಗಂಗಾದೇವಿಗಳ ಮತ್ತೆ ॥೯॥

ದೇವಿಯಸ್ಯಜ್ಞಾನಿಚಂದ್ರುಣಿ।
ದೇವಿ ಜ್ಞಾನಾನಂದದೇವಿಯ।
ದೇವಿರತ್ನಾವತಿಯ ಪರಮಸುದೇವಿಗಳ ಮತ್ತೆ ॥
ದೇವಿಸೋಮಪ್ರಭಾಂಕದೇವಿಯ।
ದೇವಿಯು ಶೃಂಗರದೇವಿಯ।
ದೇವಿಯುರ್ ಶರ್ವಾಣಿಯೂ ಶಿವಜ್ಞಾನದೇವಿಗಳ ॥೧೦॥

ನಾಚಿ ಪಾವನನಾಚಿಯಳನುರೆ।
ನಾಚಿ ಜೊಲ್ಲಡನಾಚಿಯಳಸಲೆ।
ನಾಚಿ ಪರ್ವತನಾಚಿಯಳನಾ ಪರವೆನಾಚಿಗಳ ॥
ನಾಚಿ ಶಿವಪ್ರಿಯನಾಚಿಯಳನಾ।
ನಾಚಿ ತಿಲವಲಿನಾಚಿಯಳ ನೆರೆ।
ನಾಚಿ ಶಂಖಿಲಿನಾಚಿ ಸೌಂದರನಾಚಿಯಳ ಮತ್ತೆ ॥೧೧॥

ದಾರುಕೆಯ ವರದಾನಿಯಮ್ಮನ।
ಸಾರಚರಿತೆ ಸುನೀತಿಯರ್ಸುವಿ।
ಚಾರಪದ್ಮಾವತಿಯ ಕನಕಮಾಲಿನಿಯ ಮತ್ತೆ ॥
ಮಾರಜಿತ ಕಾವಮಾಲತಿಯ ಸುಖ।
ಸಾರೆ ದೇವರದಾಸಿಯಳ ಮಹಾ।
ಧೀರೆ ಸೋಮರಸಿಯಳ ನಿರುಪಮ ಮುಂಗಳಾಂಗಿಯಳ ॥೧೨॥

ಹರನ ಸತಿ ನುತಿಕೋಟಿಯುಂ ಶಿವ।
ಶರಣಸತಿಯರ ನುತಿ ಮಿಗಿಲು ಮುನ।
ಲುರುತರದ ಭೃಂಗೀಶ ಮುಖ್ಯ ಪ್ರಮಥರೋಳ್ಪ್ರಜೆಯುಳ್ಳವರು॥
ಶರಣಸತಿಯರು ಪ್ರಮಥರೊಳು ಪೂ।
ಜ್ಯರುವುದಾಗಿರೆ ಶ್ರೀಘನವರೇ।
ಶ್ವರನ ನಿಜಭಕ್ತಿಯಲಿ ಪೊಗಳುತ ಪಡೆವೆ ನಿಜಸುಖವ ॥೧೩॥

—ಶ್ರೀಯುತ ಎಮ್. ಸಿದ್ಧವೀರಯ್ಯ
ಇವರಿಂದ ಸಂಗ್ರಹಿಸಲ್ಪಟ್ಟಿದು.

ಗಣಾಷ್ಟೋತ್ತರ.

(ಶ್ರೀ ನಾಗಭೂಷಣ ಘನಮಠದಾರ್ಯರು ರಚಿಸಿದ್ದು)

ಧಾ। ಪಟ್ಟದಿ.

ಸೂಚನೆ:—ಲೀಲೆಯಲಿ ನೂತನ ಪುರಾತನ।
ರಾಳಿ ನಾಮುವ ಬಿಡದೆಯುದಯದ।
ಕಾಲದೊಳು ಪಠಿಸಿದರಿಗಹವಿಷ್ಟಾರ್ಥ ಸಿದ್ಧಿಗಳು ॥ಪಲ್ಲ॥

ಬಸವರಾಜನ ಪನ್ನಬಸವನ।
ಅಸಮಪ್ರಭುವನು ಸಿದ್ಧರಾಮನ।
ಕುಶಲಮತಿ ಮಡಿವಳನನಜಗಣ್ಣ ಸೊಡ್ಡಳನ॥
ಮುಸುಡಿಜಾಡಯ್ಯನ ಗಜೇಶ್ವರ।
ಮುಸಪಿತಂದೆಯನ।
ದಸಂದೇವನ ಹಡಪದಪ್ಪಣಗಳ ಕಲಿಗಣನ ॥೧॥

ಹೊನ್ನಕಂದೆಯನನಘವಾದರ।
ಪನ್ನನುರಿ ಚಾರಮುನ ನಂಬಿಯ।
ಕನ್ನಪಾಖ್ಯನ ಭೋಗಿದೇವನ ಕಾಚಿರಾಜವನ॥
ಧನ್ಯದೇವರದಾಸಿಮಯ್ಯನ।
ಮಾನ್ಯನಹ ಹೊಡೆಹುಲ್ಲಬಂಕನ।
ಉನ್ನತದ ರೇಚಣ್ಣನಿಂಧಕ್ತನಲಾಯುಧನ ॥೨॥

ಬೊಮ್ಮದೇವನನೈದೆ ಕಿನ್ನರ।
ಬೊಮ್ಮದೇವನ ಸಾರ ಕನ್ನದ।
ಬೊಮ್ಮದೇವನ ಪರಮಸಗರದಬೊಮ್ಮ ಕಲಕೇತನ॥
ಬೊಮ್ಮದೇವನ ವಿನುತ ಹಾದರ।
ಬೊಮ್ಮದೇವನನಾದಿರಕ್ಕಸ।
ಬೊಮ್ಮದೇವನ ನಿತ್ಯಬಾಹುರ ಬ್ರಹ್ಮಿತಂದೆಗಳ ॥೩॥

ಮಾರನಿಡಗುಡಿ ಮಾರನರವಿನ।
ಮಾರನಾ ನಗೆಮಾರಮೋಳಿಗೆ।
ಮಾರನಿಳಿಯಾಂಡ ಗುಡಿಮಾರನ ಧೀರನಾಯ್ದಕ್ಕಿ॥
ಮಾರ ನಾಡಕ್ಕಿಯ ಸುಮಾರನ।
ಮಾರಭೂಪನ ಶೂರಸಾನಿಡು।
ಮಾರದೇವನ ಸೋಮಾಸಿಮಾರರ ಕಾಳಿಮನ ॥೪॥

ವೇಮನಾರಾಧ್ಯ ಪ್ರಮೈದುನ।
ರಾಮನುರಿ ತುರಗಾಯಿರಾಮನ।
ಶ್ಲೇಷಿಯಾತಳವಾರಕಾಯ್ದದ ರಾಮನೇಕಾಂತ॥
ರಾಮನುದರದ ರಾಮನಸದೃಶ।
ಕಾಮುವಟ್ಟದ ಭೀಮನಾ ಕಲಿ।
ಕಾಮುರಾಯನ ಪ್ರಹರಿಸೋಮಣ್ಣಗಳನನವರತ ॥೫॥

ಪಂಡಿತಯ್ಯನನಧಿಕ ಶ್ರೀಪತಿ।
ಪಂಡಿತನ ಶಿವಲಿಂಕಮಂಚಣ।
ಪಂಡಿತನು ತಿರುಜ್ಞಾನಸಂಬಂಧಿಗಳ ಚಿದ್ವಿದ್ಯಾ॥
ಪಂಡಿತನು ಅಹದಾಸಿದೇವನ।
ದಂಡಿತಫಕುಲ ಸೇದಿರಾಜನ।
ಕೊಂಡಗೂಳಿಯಕೇಶಿರಾಜನ ಚಂಡಧೀಶ್ವರನ ॥೬॥

ಪಾಲಗುರ್ಜರನೋಹಿಲನ ಸಲೆ।
ಕೋಲಶಾಂತಯ್ಯಗಳನಾ ತಿರು।
ನೀಲಕಂಠಯ್ಯಗಳ ವಿನುತತಿರುಮೂಲದೇವರನ॥

ಜೋಳಂಬಾಯನ ವಿಹಿತಮಾದರ।
ಧೂಳನಾ ಹರಳಯ್ಯಗಳ ಸಿರಿ।
ಯಾಳನಾ ಗೊಲ್ಲಾಳನುತ್ತಮನ ಚೀಲಾಳನನ ॥೭॥

ಉರಿಂಬಾಯಣ್ಣಗಳ ನೆರೆ ಮಧು।
ವರಸನಾ ಶಿವನಾಗಮಯ್ಯನ।
ಮುರಳರಾ ನೈನಾರರಾ ಉರಿಲಿಂಗಪೆದ್ದಿಗಳ॥
ಜೆರುಪುಲಿಯನಣು ಮೂರ್ತಿಯಂ।
ತಿರುಕುರುಪಿತೊಂಡರ ಸಂಯುಜೌಡನ।
ಮರುಳಶಂಕರದೇವನನತಭಕ್ತನ ಮೊನೆಧರನ ॥೮॥

ಮೊರನನೇಮಯ್ಯಗಳ ನೇಲೇ।
ಶ್ವರದ ಕೇತಯ್ಯಗಳನಾ ಜೋ।
ಧರದ ಮಾಯಣ್ಣಗಳ ಕಕ್ಕಯ್ಯಗಳ ನೈಸರನಾ॥
ಕರಳುಶಾಂತಯ್ಯಗಳ ಮರೆವಿಂ।
ಡರನನಾಮಿಕನಾಚಿದೇವನ;
ಸರನೇಳ್ನುತ್ತರ ಸುಗುರುಭಕ್ತಯ್ಯಗಳ ಮತ್ತೆ ॥೯॥

ಅರಿವಳನನಿಮಿಷ ಗೊಗ್ಗೇ।
ಶ್ವರನ ಪಾಂಡ್ಯರ ಬಾಚಿದೇವನ।
ಪುರದನಾಗಣ್ಣಗಳ ಶ್ವಪಚಯ್ಯಗಳನನವರತ॥
ವರಕರಸ್ಥಲನಾಗಲಿಂಗನ।
ತರಗೆಲೆಯ ಶಾಂತಯ್ಯಗಳ ಪಾ।
ಲ್ಯರಿಕೆಸೋಮೇಶ್ವರನ ತೋಂಟದಸಿದ್ಧಗುರುವರನ ॥೧೦॥

ಹರಗಣಾಯನುತಳಿದವಗೆ ಶಿವ।
ಪುರವನಾದುದೆನಲ್ಕೆಬಸವೇ।
ಶ್ವರನು ಮೊದಲಾದಖಿಲ ಗಣವರರಾಭಿಧಾನವನು॥
ಪರಮಭಕ್ತಿಯೊಳುಂಪಠಿಸಲವ।
ರ್ಗರಿದಾವದು ಫನಮತೀಶನ।
ಕರುಣದಿಂ ನಿಜವಡೆದು ಸುಖಸಂಪದದಿ ಬಾಳುವರು ॥೧೧॥

ಕ್ಷೇತ್ರ ಐಹೊಳೆ.

(ಲೇಃ— ಕಾವ್ಯತೀರ್ಥ, ವಿದ್ವಾನ್ ಶಾಂತವೀರದೇವ ಐಹೊಳೆ.)

———(೦)———

ವಿಜಾಪುರ ಜಿಲ್ಲೆಗೆ ಒಳಪಟ್ಟ "ಐಹೊಳೆ" ಎಂಬದೊಂದು ಗ್ರಾಮ ವಿದೆ. ಸೊಲ್ಲಾಪುರ ಹುಬ್ಬಳ್ಳಿಗೆ ಇರುವ ರೇಲ್ವೆಮಾರ್ಗದ ಮಧ್ಯದ ಬಾಗಲಕೋಟೆ ಸ್ಟೇಶನ್ನಿಗೆ ಈ ಗ್ರಾಮವು ಹದಿನೆಂಟು ಮೈಲು ದೂರ ಅಂತರದಲ್ಲಿರುತ್ತದೆ. ಈ ಸ್ಥಳದಲ್ಲಿರುವ ಅನೇಕ ದೇವಾಲಯಗಳನ್ನು ನಿರೀಕ್ಷಿಸಿದರೆ ಇದು ಅರನೇಯ ಶತಮಾನದಲ್ಲಿ ಬಹು ಪ್ರಸಿದ್ಧ ಪಟ್ಟಣವಾಗಿತ್ತೆಂದು ಊಹಿಸಲಿಕ್ಕೆ ಅಧಾರಗಳು ಸಿಗುತ್ತವೆ.

ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಬನಶಂಕರಿ, ಈ ನಾಲ್ಕು ಸ್ಥಳಗಳು ಒಂದಕ್ಕೊಂದು ಸಮೀಪ ಸಮೀಪವಾಗಿವೆ. ಇವು ದಂಡ ಕಾರಣ್ಯದಲ್ಲಿಯ ಕೇಂದ್ರ ಸ್ಥಳಗಳು. ಕಾಪಾಲಿಕ, ಕಾಳಾಮುಖ, ಶೈವ, ವೀರಶೈವ ಜೈನ, ಮುಂತಾದ ಮತದವರಿಗೆ ಪುಣ್ಯಸ್ಥಲವಾಗಿತ್ತು. ಯೋಗಿಗಳಿಗೂ ಅವಧೂತರಿಗೂ ಈ ಗ್ರಾಮವು ತವರೂರಾಗಿತ್ತು. ಕಾಪಾಲಿಕ, ಕಾಳಾಮುಖರ ಧರ್ಮಾನುಷ್ಠಾನಕ್ಕೆ ಬೇಕಾಗುವ ಗವಿಗಳ ಮತ್ತು ಶಿಲಾಮಂದಿರಗಳ ಅವಶೇಷಗಳು ಈಗಲೂ ಇಲ್ಲಿ ಇವೆ. ಶೈವರು ಯಜ್ಞಮಾಡುವದಕ್ಕೆ ಬೇಕಾಗುವ ಕಲ್ಲಿನ ಯಜ್ಞಮಂಟಪಗಳು ಐಹೊಳೆಯ ಹೊಳೆಯ ದಂಡೆಯಲ್ಲಿ ಕಾಣಬರುತ್ತವೆ.

ಇಲ್ಲಿಯ ಶೈವಮಂದಿರಗಳು ವಿಪುಲವಾಗಿವೆ. ಹಿಂದಿನಕಾಲದಲ್ಲಿ ದೇವಾಲಯಗಳನ್ನು ಕಟ್ಟಿಸಿದರೆ ಸದ್ಗತಿಯಾಗುವದೆಂಬ ನಂಬಿಕೆಯು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಇದ್ದಂತೆ ತೋರುತ್ತದೆ. ಅದ್ದರಿಂದ ಇಲ್ಲಿ ಹಿರಿ ಕಿರಿಯರೆಲ್ಲರೂ ಗುಡಿಗಳನ್ನು ಕಟ್ಟಿಸಿದ್ದಾರೆ. ಸಣ್ಣ ಪುಟ್ಟ ಗುಡಿಗಳನ್ನೆಲ್ಲ ಎಣಿಕೆ ಮಾಡಿದರೆ ನೂರು ದೇವಾಲಯಗಳಕಿಂತಲೂ ಹೆಚ್ಚಿಗಿವೆ. ಪ್ರತಿಯೊಂದು ಕಟ್ಟಡದಲ್ಲಿ ಶಿಲ್ಪಿಗಳ ಚಾತುರ್ಯವು ತಜ್ಞರನ್ನು ದಂಗು ಬಡಿಸುವಂತಹದಿದೆ. ಅಲ್ಲದೆ ದುರ್ಗದಗುಡಿ, ಲಾಡಖಾನಗುಡಿ, ರಾವಣಪಡಿ, ರಾಮಲಿಂಗನಗುಡಿ, ಎಂಬ ಹಲವಾರು ಗುಡಿಗಳು ಬಹು ಪುರಾ

ತಪದವೆಂದು ತಿಳಿಯುತ್ತದೆ. ಕೆಳಗಿನಿಂದ ಮೇಲಿನ ವರೆಗೆ ಟೊಪ್ಪಿಗೆಯಂತೆ ದುಂಡಾಕಾರವಾಗಿ ಕಟ್ಟಿದ ದುರ್ಗದ ಗುಡಿಯ ಶಿಲ್ಪಚಾತುರ್ಯವು ಅಪ್ರತಿಮವಾಗಿದೆ. ಇಂತಹ ಗೋಲಾಕಾರದ ರಚನೆಯು ರೀತಿಯು ನಮ್ಮ ಭಾರತದಲ್ಲೆಲ್ಲಿಯೂ ಕಾಣುವದಿಲ್ಲವೆಂದು ಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಐಹೊಳೆ ಗ್ರಾಮದ ಭೂಮಿಯ ಸ್ವಾಭಾವಿಕ ನೋಟವು ಎಲ್ಲ ಕ್ಷೇತ್ರಗಳಿಗಿಂತ ಬಹು ಆಶ್ಚರ್ಯವನ್ನುಂಟುಮಾಡುವಂಥದಿದೆ. ಈ ಗ್ರಾಮಕ್ಕೆ ಸಮೀಪವಾಗಿ ಮಲಪ್ರಭಾ ಎಂಬ ಪವಿತ್ರ ನದಿಯುಂಟು. ಗ್ರಾಮದೇವತೆಯ ನಿಡುದೋಳೆಂಬಂತೆ ಗ್ರಾಮದ ಎಡಬಲ ಪಕ್ಕಗಳಲ್ಲಿ ಸೊಗಸಾದ ದೇರೆ ಹಳ್ಳಗಳೆರಡು ಹಿಂದು ಹೊಳೆಗೆ ಕೂಡಿವೆ. ಇವೆಲ್ಲವುಗಳ ಪ್ರವಾಹಗಳು ಉಳಿದ ಜಲಾಶಯಗಳಂತಿರದೆ ಪಶ್ಚಿಮವಾಹಿನಿಯಾಗಿ ಹಂದಿವೆ. ಗ್ರಾಮಕ್ಕೆ ಹೊಂದಿಕೊಂಡಿರುವ ಬೆಟ್ಟದ ಅನೇಕ ಬುಗ್ಗೆಗಳು ಪಶ್ಚಿಮ ಮುಖವಾಗಿ ಹರಿದು ಹೊಳೆಗೆ ಕೂಡುತ್ತವೆ. ಪಶ್ಚಿಮ ಮುಖವಾಗಿ ಹರಿಯುವ ಜಲಾಶಯಗಳೆಲ್ಲ ಬಹು ಪುಣ್ಯಕೊಡತಕ್ಕವೆಂದು ನಾಡಿಗರ ಅಭಿಪ್ರಾಯವಿರುತ್ತದೆ. ಈ ರೀತಿಯಾಗಿರುವ ಪ್ರವಾಹದಲ್ಲಿ ಪರಶುರಾಮನು ಸ್ನಾನ ಮಾಡಿ ಕಾಶೀ ಮುಂತಾದ ಕ್ಷೇತ್ರಗಳಲ್ಲಿ ಹೋಗದೆ ತನ್ನ ಮಾತೃಹತ್ಯಪಾಪವನ್ನು ಕಳೆದುಕೊಂಡನೆಂದು ಮೊದಲಾದ ಸಂಗತಿಗಳು ಇಲ್ಲಿಯ ಸ್ಥಲ ಪುರಾಣದಲ್ಲಿವೆ. ಅಲ್ಲದೆ ಆಚಾರ್ಯನಾದ ಪಂಡವಕ್ತ್ರಗಣೇಶ್ವರನು ಈ ಹೊಳೆಯ ಗ್ರಾಮದಲ್ಲಿರುವ ಗೌರೀಗುಡಿಯಲ್ಲಿ ಈಶ್ವರ ಮೂರ್ತಿಯಿಂದ ಹುಟ್ಟಿದನೆಂತಲೂ ಅನಂತರ ವೀರಶೈವ ಮತವನ್ನು ಉಜ್ಜ್ವಲಗೊಳಿಸಿದನೆಂತಲೂ ''ನಿರಂಜನವಂಶರತ್ನಾಕರ'' ಎಂಬ ಗ್ರಂಥದಿಂದ ತಿಳಿದುಬರುತ್ತದೆ.

ಮುಗ್ಗೆಯ ಮಾಯಿದೇವ, ರವಿಕೀರ್ತಿ, ಸಾರಂಗದೇವ, ಶಾಂತಲಿಂಗ ದೇಶಿಕ ಮುಂತಾದ ಮಹಾಮಹಿಮರಿಂಗೆಯೂ ಪಂಡಿತಾಗ್ರೇಸರರಿಂಗೂ ಈ ಗ್ರಾಮವು ಪ್ರಿಯವಾದ ಸ್ಥಲವಾಗಿತ್ತು.

"ಮಲಪ್ರಭಾಂಜೇನಾಮ ಗಂಗಾ ತ್ರಿಮಲನಾಶಿನೀ ॥
ತ್ರಿದೀಕ್ಷಾಪಥಗಾತೀರ್ಥಂ ತತ್ತೀರಂ ಕ್ಷೇತ್ರಮೈಪುರೀ ॥೧॥

ಮುಂತಾಗಿ ಹೇಳುವ ಮಾಯಿದೇವನ ವಚನದಿಂದ ಈ ಗ್ರಾಮಕ್ಕೆ ಐಪುರ ಅಥವಾ ಅರ್ಯಪುರ, ಎಂಬ ಪ್ರಸಿದ್ಧ ಹೆಸರಿದ್ದಂತೆ ತಿಳಿಯುತ್ತದೆ. ಶಿಲಾಶಾಸನಗಳಲ್ಲಿ "ಆರ್ಯಪುರ"ವೆಂದೇ ಹೆಸರಿದ್ದಂತೆ ತಿಳಿಯುತ್ತದೆ. ಐಪುರದ ಅಂದರೆ ಐಹೊಳೆಯ ರಾಜನು ಕುಲದಿಂದ ಕ್ಷತ್ರಿಯನಾಗಿದ್ದನು. ಈತನಿಗೆ ವೀರಶೈವ ಮತವು ಶ್ರೇಷ್ಠವಾದುದೂ ಪವಿತ್ರವಾದುದೂ ಎಂದು ಅನುಭವದಿಂದ ಉಪದೇಶ ಮಾಡಿ ವೀರಶೈವ ದೀಕ್ಷೆಯನ್ನು ಕೊಡಿಸಿದ ''ಶಾಂತಲಿಂಗ ದೇಶಿಕ''ನೆಂಬ ಮಹಿಮನಿಗೆ ಈ ಸ್ಥಲವು ಪ್ರಿಯವಾಗಿತ್ತು. ಭೈರವೇಶ್ವರ ಕಥಾ ಸೂತ್ರರತ್ನಾವಲಿಯನ್ನು ಬರೆದ ಶಾಂತಲಿಂಗ ದೇಶಿಕನೇ ಹೀಗೆ ಇಲ್ಲಿ ಧರ್ಮಪ್ರಚಾರ ಮಾಡಿದನೋ ಅಥವಾ ಇನ್ನೊಬ್ಬ ಶಾಂತಲಿಂಗ ದೇಶಿಕನೋ ಎಂಬ ಅನುಮಾನವಿದೆ.

ಸಾರಂಗದೇವನೆಂಬ ವೀರಶೈವ ಮಹಾಪುರುಷನು ಧರ್ಮಪ್ರಚಾರ ಮಾಡುತ್ತ ಐಹೊಳೆ ಗ್ರಾಮಕ್ಕೆ ಬಂದನು. ಇಲ್ಲಿ ಕೆಲಕಾಲ ವಾಸಿಸಿದ್ದನು. ಈಗಲೂ ಈತನ ವಂಶದವರು ಈ ಗ್ರಾಮದಲ್ಲಿದ್ದಾರೆ. ಇವರಿಗೆ "ಸಾರಂಗದವರೆ"ಂದೇ ಕರೆಯುವ ರೂಢಿಯು ಈಗಲೂ ಇದೆ.

ಶೈವರಿಗೆ ಮುಖ್ಯ ಮುನಿ ಎಂದು ಹೇಳಿಸಿಕೊಳ್ಳುವ "ಹೆಗ್ಗಪ್ಪ"ನೆಂಬ ಋಷಿಯು ಇಲ್ಲಿಯೇ ಜನ್ಮತಾಳಿದನು. ಈತನಿಗೆ ಕಾಯಕವು ಮುಖ್ಯವಾಗಿ ಗೋಸೇವೆಯಾದುದರಿಂದ ಈತನನ್ನು ಆರ್ಯರು ಮತ್ತು ರಾಜರು "ಗೋಮುನೀಶ್ವರ"ನೆಂದು ಸಂಸ್ಕೃತ ಶಬ್ದದಿಂದ ಕರೆದಿದ್ದಾರೆ. ಈ ಗೋಮುನೀಶ್ವರನ ಸಂತತಿಯವರು ಈಗಲೂ ಇದ್ದಾರೆ. ಗೋಮುನೀಶ್ವರನು ಶಿವನ ಆಯುಧಗಳಲ್ಲಿ ಮುಖ್ಯ ಆಯುಧವಾದ "ಕೊಂತ" ಎಂಬುದನ್ನು ಪೂಜಿಸುತ್ತಿದ್ದನು. ಈ ಪೂಜೆಯ ಪದ್ಧತಿಯು ವಂಶಪರಂಪರೆಯಿಂದ ಈಗಲೂ ನಡೆಯುತ್ತಬಂದಿದೆ. ಇದನ್ನು ಪೂಜೆಮಾಡುವ ಗೋಮುನೀಶ್ವರನ ಸಂತತಿಯವರಿಗೆ ''ಕೊಂತದವರು'' ಎಂಬ ಉಪನಾಮವಿದೆ. ಈಗಲೂ ಹೆಗ್ಗಪ್ಪನ ವಂಶದವರು ಈ ಗ್ರಾಮದಲ್ಲಿ ಇದ್ದಾರೆ. ಇವೆಲ್ಲ ಅಂಶಗಳು ಇಲ್ಲಿಯ ಕೆಲವು ಶಿಲಾಲಿಪಿಗಳಿಂದ ತಿಳಿಯುತ್ತವೆ.

ಇವೇ ಮುಂತಾದ ಐತಿಹಾಸಿಕ ಮತ್ತು ಧಾರ್ಮಿಕ ಮುಖ್ಯಾಂಶಗಳಿಗೆ ಆಸ್ಪದವಾದುದರಿಂದ ಐಹೊಳೆಗೆ ಇಷ್ಟೊಂದು ಮಹತ್ವವೂ ಪವಿತ್ರತೆಯೂ ಬಂದಿವೆ.

ರುದ್ರಭೂಮಿ ಅಥವಾ ಪುಣ್ಯ ಭೂಮಿಯಲ್ಲಿ ಅಮಂಗಲ ಮತ್ತು ಅಸಹ್ಯ ಹಬ್ಬಹುಣ್ಣಿವೆಗಳು ಜರುಗಬಾರದೆಂದು ಹಿಂದಿನ ಹಿರಿಯರ ಅಭಿಪ್ರಾಯವಾಗಿದೆ. ಆದುದರಿಂದ ಕಾಮನನ್ನು ಸುಡುವ ಹಬ್ಬವನ್ನೂ ಕಾರಹುಣ್ಣಿವೆಯ ಕಂಹಂಯುವ ಉತ್ಸವವನ್ನೂ ಇಹೊಳೆ ಗ್ರಾಮದಲ್ಲಿ ಹಿಂದಿನಿಂದ ಈ ವರೆಗೂ ಮಾಡುವದಿಲ್ಲ.

"ಅನ್ಯಕ್ಷೇತ್ರೆಕೃತಂಪಾಪಂ ಪುಣ್ಯಕ್ಷೇತ್ರೆವಿನಶ್ಯತಿ ॥
ಪುಣ್ಯಕ್ಷೇತ್ರೇಕೃತಂ ಪಾಪಂ ವಜ್ರಲೇಪೋಭವಿಷ್ಯತಿ" ॥೧॥

ಎಂದರೆ ಸಾಮಾನ್ಯ ಭೂಮಿಯಲ್ಲಿ ಮಾಡಿದ ಪಾಪಕರ್ಮವು ಪುಣ್ಯಕ್ಷೇತ್ರ ಸೇವನೆಯಿಂದ ಹೋಗುತ್ತದೆ. ಆದರೆ ಪುಣ್ಯಕ್ಷೇತ್ರದಲ್ಲಿ ಮಾಡಿದ ಕರ್ಮವನ್ನು ಎಲ್ಲಿ ತೊಳೆದರೂ ಹೋಗುವದಿಲ್ಲ ಎಂಬ ಪದ್ಯದ ಅಭಿಪ್ರಾಯಗಳು ಎಷ್ಟೋಸಲ ಇಲ್ಲಿ ಅನುಭವಕ್ಕೆ ಬಂದ ಉದಾಹರಣೆಗಳಿವೆ. ಈ ಸ್ಥಾನದಲ್ಲಿ ಅತಿ ಪಾಪವಾಡಿದ ಪ್ರಾಣಿಯು ಪ್ರಾಣದಿಂದ ಬಹುಕಾಲ ಉಳಿಯುವದಿಲ್ಲ. ಇದಕ್ಕೆ ವಿರುದ್ಧವಾಗಿ ಪುಣ್ಯಕರ್ಮ ಮಾಡುವ ಮಾನವನು ಬೇಗನೆ ಜ್ಞಾನಿಯಾಗುವನು. ಹೀಗೆ ಈ ಸ್ಥಳದಲ್ಲಿ ಜಪತಪಗಳನ್ನು ಮಾಡಿದರೆ ಅತ್ಯಲ್ಪಕಾಲದಲ್ಲಿಯೇ ಸಿದ್ಧಿಯುಂಟಾಗುವದೆಂದು ಪುರಾತನರ ಅಭಿಪ್ರಾಯವಿದೆ.

ಹಬ್ಬ ಹುಣ್ಣಿವೆ, ಸೂರ್ಯಗ್ರಹಣ, ಸಂಕ್ರಾಂತಿ, ಮುಂತಾದ ಪರ್ವಕಾಲದಲ್ಲಿ ಇಲ್ಲಿಯ ಸುತ್ತುಮುತ್ತಿನ ನಿವಾಸಿಗಳು ಈ ಸ್ಥಳಕ್ಕೆ ವಿಶೇಷವಾಗಿ ಬರುವ ದೃಶ್ಯವನ್ನು ಈಗಲೂ ಕಾಣಬಹುದು.

ಅರಿದರಿದು ಕೆಡಬೇಡ.

(ವೀರಬಸಯ್ಯ. ಶಿ. ಕಂಬಿ. ಕಣ್ಣೆಕರವಿನಕೊಪ್ಪ.)

ಹರನನ್ನು ನೆರೆನಂಬಿ
ನರಕದಿಂ ದೂರಾಗೊ
ಉರೆನಚ್ಚಿ ಕೆಡಬೇಡ ಸಂಸಾರವ

ಕೊಲುವ ಬೇಡನ ಕೊಳಲ
ನಲಿವ ನಾದವ ಕೇಳಿ
ಮೆಲಕುಹಾಕುತ ನಿಂತ ಹರಿಣಿಯಂತೆ

ಕಣ್ಣಿನಾಸೆಗೆ ಹುಳವು
ಮಿನುಕಿ ಬೆಳಗುವ ದೀಪ
ತನಿರಸವು ತುಂಬಿದಾ ಹಣ್ಣು ಎಂದು

ಎಡೆಬಿಡದೆ ಹಂತಂದು
ಸೊಡರ ಮಡಲಲಿ ನಿಂದು
ಕಡು ಸುಖವ ಪಡೆಯೆ ಬಯಸಿ ಬಂದಂತೆ

ನಲಿದುಲಿವ ಸರ್ಪನಾ
ತಲೆಯ ನೆರಳನು ಬಯಸಿ
ನಿಲಲು ಬಂದಾ ಕಪ್ಪೆ ಬಾಳಿನಂತೆ

ನೆರೆ ಸುಖಿಸುವಾ ಸುಖವು
ಉರಿವ ಗಾಳಿಯ ಸೊಡರು
ಅರೆಚಣದ ಆನಂದಮಾಯೆ ಮನುತೆ,

ಅರಿದರಿದು ಕೆಡಬೇಡ
ಅರಿವು ಮರೆದಿರಬೇಡ
ಸರಸಾಡು ಸಂಗನಶರಣರೊಡಗೂಡಿ

ಶರಣರಿಂ ನೆರೆ ಸುಖಿಸು
ಮರಣರಹಿತನುವಾಗಿ
ಶರಣಸತಿ ಲಿಂಗಪತಿ ಎಂಬಂದದಿ
ಪರುಷ ಸೋಂಕಿದ ಲೋಹ
ಮಿರುವಾಪರಂಜಿಯೊಲು
ವರಹರವ ಕರುಣೆಯಿಂ ನಿನಗೆ ಇರವು.

ಮಾಡುವ ಕ್ರಿಯೆ ಮತ್ತು ನೀಡುವ ಕರುಣೆ.

ವಚನ.

ಕೃಷಿಕನು ಉಳುವೆಬಿತ್ತನೆಗಳಿಗೆ ಅಧಿ
ಕಾರಿಯಲ್ಲದೆ ಮಳೆ ಬೆಳೆಗಳಿಗೆ ಅಧಿಕಾ
ರಿಯಲ್ಲ. ಭಕ್ತನು ಮಾಡುವ ಕ್ರಿಯೆಗೆ
ಅಧಿಕಾರಿಯಲ್ಲದೆ ನೀಡುವ ಕರುಣೆಗೆ
ಅಧಿಕಾರಿಯಲ್ಲ. ಮಾಡುವ ಕ್ರಿಯೆ ಭ
ಕ್ತನ ಕೈಯ್ಯದು. ನೀಡುವ ಕರುಣೆ
ದೇವ ನಮ್ಮ ಬಸವಲಿಂಗಪ್ರಿಯ ಕ
ಟ್ಟಿಪು ಬಸವೇಶ್ವರನ ಕೈಯ್ಯದು.

ಶಿವಾನುಭವ ಸಹಾಯಧನ.

(೧) ಶ್ರೀಮನ್ನಿರಂಜನ ಸಂಗಮನಾಥಸ್ವಾಮಿಗಳವರು ವಿರಕ್ತಮಠ ಮುರುಬಿಲ್ಲಹಳ್ಳಿ ಜಿ. ಶಿವಮೊಗ್ಗಾ. ೨೫-೦-೦

(೨) ಶಿವಾನುಭವಸಂಘ ಹತ್ತರಸಂಗ, ಸಂಗನಬಸವಣ್ಣ ಕಲ್ಯಾಣಶೆಟ್ಟಿ ಲೋಣಿ ಇವರ ಮುಖಾಂತರ ಬಂದದ್ದು. ೫-೦-೦

(೩) ಪುಣಬಗಟ್ಟಿ ಜಿ. ಬಳ್ಳಾರಿ ಕೆಲವು ಜನ ಮಹನೀಯರಿಂದ ೨-೩-೦

ಮೇಲಿನ ಮಹನೀಯರಿಗೆಲ್ಲ ನಾವು ಅತ್ಯಂತ ಕೃತಜ್ಞರಾಗಿದ್ದೇವೆ.

ಸಂಪಾದಕ- ಶಿವಾನುಭವ
ವಿಜಾಪುರ.

ಭಾವಃ-- ಇದರಲ್ಲಿ ಕೇತಯ್ಯನು ತನ್ನ ಕಾಯಕದ ರೀತಿಯನ್ನು ಒಂದು ಬೆಡಗಿನ ವಚನದ ಮೂಲಕ ಹೇಳುತ್ತಾನೆ. ಅಲ್ಲಲ್ಲಿ ಅಶುದ್ಧ ಶಬ್ದಗಳಿರುವದರಿಂದ ಅರ್ಥ ತಿಳಿಯಲು ದುಸ್ತರವಾಗುತ್ತದೆ. ತಾನು ಬಿದಿರಿನ ಕಾಯಕವನ್ನು ಮಾಡುತ್ತ ಲಿಂಗಾಂಗ ಸಾಮರಸ್ಯವನ್ನು ಹೇಗೆ ಹೊಂದುವೆನೆಂಬುದನ್ನು ಅವನು ಇಲ್ಲಿ ನುಡಿದಿದ್ದಾನೆ. ಇದರಿಂದ ಕೇತಯ್ಯನು ಬಿದಿರು ಕಾಯಕವನ್ನು ಮಾಡುತ್ತ ಇದ್ದುದು ಸಿದ್ಧವಾಗುತ್ತದೆ.

(೨) ಇಂದ್ರಿಯುಂಗಳ ಕೊಂದೆಹೆನೆಂದೊಡವು ಕಂದರ್ಪನ ಹಂಗು. ಕಂದರ್ಪನ ಕೊಂದಿಹೆನೆಂದೊಡವು ಕಂಗಳ ಲಾಭ. ಕಂಗಳ ಮುಚ್ಚಿಯಲ್ಲದೆ ಲಿಂಗಪ ಕಾಣಬಾರದು. ಅದು ನಿರಂಗಂಗಲ್ಲದೆ ಜಗದ ಹಂಗಿನವರಿಗಿಲ್ಲ ಎಂದೆ ಗೌರೇಶ್ವರಾ.

(೩) ಮೊದಲು ಹುಸಿ, ಲಾಭ ದಿಟವೇ? ನಿರೀಕ್ಷಣೆ ಇಲ್ಲದೆ ಪರೀಕ್ಷೆಯುಂಟೇ? ಈಯವಸರದಂಗವ ಗೌರೇಶ್ವರಲಿಂಗ ನೀನೇ ಬಲ್ಲೆ.

(೪) ಭಕ್ತಂಗೆ ಸುಖವೂ ಸರಿ, ದುಃಖವೂ ಸರಿ. ಉರಿ ಸಿರಿ ಉಭಯವು ಸರಿ ಎನ್ನದಿರ್ದಡೆ ಭಕ್ತಿಗದೇ ಹಾನಿ. ಜಂಗಮವೆಂದು ಪ್ರಮಾಣಿಸಿ ತನ್ನ ಕಂಗಳ ಮುಂದೆ ಕಂಡವರು ಭುಂಜಿಸಲ್ಕೆ ತನ್ನಂಗವ ಹೊರೆದಡೆ ತೀರ್ಥ ಪ್ರಸಾದಕ್ಕೆ ಅವನಂದೇ ಹೊರಗು ಗೌರೇಶ್ವರಾ.

(೫) ಗುರು ಹುಸಿ, ಲಿಂಗ ದಿಟವೆನಲಿಲ್ಲ. ಲಿಂಗ ಹುಸಿ ಜಂಗಮ ದಿಟವೆನಲಿಲ್ಲ. ಜಂಗಮ ಹುಸಿ ಪಂಚಾಚಾರ ದಿಟವೆನಲಿಲ್ಲ. ಇಂತಿದರಂಗವನು ಗೌರೇಶ್ವರ ಬಲ್ಲ.

(೬) ಎನ್ನ ಚಿತ್ತಕ್ಕೆ ಆಚಾರಲಿಂಗವಾದಾತ ಬಸವಣ್ಣ-ಎನ್ನ ಬುದ್ಧಿಗೆ ಗುರುಲಿಂಗವಾದಾತ ಬಸವಣ್ಣ. ಎನ್ನ ಅಹಂಕಾರಕ್ಕೆ ಶಿವಲಿಂಗವಾದಾತ ಬಸವಣ್ಣ. ಎನ್ನ ಮನಕ್ಕೆ ಜಂಗಮಲಿಂಗವಾದಾತ ಬಸವಣ್ಣ. ಎನ್ನ ಜ್ಞಾನಕ್ಕೆ ಪ್ರಸಾದಲಿಂಗವಾದಾತ ಬಸವಣ್ಣ. ಎನ್ನ ಭಾವಕ್ಕೆ ಮಹಾಲಿಂಗವಾದಾತ ಬಸವಣ್ಣ. ಎನ್ನ ಸ್ಥೂಲತನುವಿಂಗೆ ಇಷ್ಟಲಿಂಗವಾದಾತ ಬಸವಣ್ಣ. ಎನ್ನ ಸೂಕ್ಷ್ಮತನುವಿಗೆ ಪ್ರಾಣಲಿಂಗ

ವಾದಾತ ಬಸವಣ್ಣ. ಎನ್ನ ಕಾರಣ ತನುವಿಂಗೆ ಭಾವಲಿಂಗವಾದಾತ ಬಸವಣ್ಣ. ಇಂತೆಂದರಿವೆನಾಗಿ ಗೌರೇಶ್ವರಲಿಂಗದಲ್ಲಿ ಸುಖಿಯಾದೆನು.

ಈ ಎಲ್ಲ ವಚನಗಳಲ್ಲಿ ಶಿವಾನುಭವದ ಉಚ್ಚ ತತ್ವಗಳು ನಿರೂಪಿತವಾಗಿವೆ, ಇವುಗಳಿಂದ ಮೇದರ ಕೇತಯ್ಯನು ಬಸವೇಶ್ವರನ ಸಮಕಾಲೀನನಾಗಿ ಅವನು ಉಚ್ಚ ಶಿವಾನುಭವಿಯಾಗಿದ್ದನೆಂದು ನಾವು ಊಹಿಸಬಹುದಾಗಿದೆ.

ಅಮ್ಮವ್ವೆ ಅಥವಾ ಬಿಜ್ಜವಮಹಾದೇವಿ.

ಮೈಸೂರು ಸೀಮೆಯಲ್ಲಿ, ಬಿಜ್ಜಾವರವೆಂಬ ಗ್ರಾಮವಿದೆ. ಅದು ತುಮಕೂರಿನಿಂದ ಈಶಾನ್ಯಕ್ಕೆ ೨೮ ಮೈಲುಗಳ ಮೇಲೆ ಇದೆ. ಅಲ್ಲಿ ಶಂಕರನೆಂಬ ಶಿವಬ್ರಾಹ್ಮಣನು ವಾಸಿಸುತ್ತಿದ್ದನು. ಅವನ ಹೆಂಡತಿಯ ಹೆಸರು ಭಾಗೀರಥಿಯು. ಅವರಿಗೆ ಅಮ್ಮವ್ವೆ ಎಂಬ ಮಗಳು ಹುಟ್ಟಿದಳು. ಅವಳು ಮನೆಯಲ್ಲಿ ಯಾವಾಗಲೂ ನಡೆಯುತ್ತಿದ್ದ ಶಿವಗೋಷ್ಠಿಗಳನ್ನೂ ಹರಕಥನಗಳನ್ನೂ ಲಕ್ಷಪೂರ್ವಕವಾಗಿ ಕೇಳುವಳು. ಶಿವಾಲಯಕ್ಕೆ ತಪ್ಪದೆ ಹೋಗುವಳು. ಇದರಿಂದ ಅವಳಲ್ಲಿ ಶಿವಭಕ್ತಿಯು ದಿನೇ ದಿನೇ ಹೆಚ್ಚುತ್ತ ಹೋಯಿತು.

ಅಮ್ಮವ್ವೆಯು ಯೌವ್ವನಸ್ಥಳಾದ ಬಳಿಕ, ಅವಳ ಸೋದರತ್ತೆಯು ತನ್ನ ಮಗನಿಗೆ ಅವಳನ್ನು ಕೊಟ್ಟು ಲಗ್ನಮಾಡಬೇಕೆಂದು ತಂದೆಗೆ ಕೇಳಲು ಅವನು--ನನ್ನ ಮಗಳು ಲಿಂಗಪೂಜೆಯನ್ನಲ್ಲದೆ ಮತ್ತೊಂದನರಿಯಳು. ನಿನ್ನ ಮಗನು ಅನ್ಯದೈವಪೂಜಕನು. ಅದು ಕಾರಣ ನಿನ್ನ ಮಗನಿಗೆ ಅವಳನ್ನು ಕೊಡಲಾರೆನೆನಲು, ಸೋದರತ್ತೆಯು--ನಾವು ಕುಲಹೀನರೆಂದು ನೀನು ಕೊಡಲೊಲ್ಲೆಯೋ ಏನು? ಹೀಗಾದರೆ ನಾನು ಇಲ್ಲಿಯೇ ಪ್ರಾಣಬಿಡುವೆನು ಎಂದೆನ್ನಲು, ತಂದೆಯು ಅಂಜಿ ಮಗಳ ಪುಣ್ಯವಿದ್ದಂತೆ ಆಗಲಿ ಎಂದು ಅವಳನ್ನು ಅವಳ ಮಗನಿಗೆ ಕೊಟ್ಟು ಲಗ್ನಮಾಡಿದನು.

ಆದರೆ ಲಗ್ನವಾದ ಬಳಿಕ ಒಂದು ತಿಂಗಳಲ್ಲಿಯೇ ಅಮ್ಮವ್ವೆಯ ಗಂಡನು ಮೃತಪಟ್ಟನು. ಆಮೇಲೆ ಸ್ವಲ್ಪ ದಿವಸಗಳಲ್ಲಿ ಅವಳ ತಾಯಿ ತಂದೆಗಳೂ ಕೂಡ ಸತ್ತುಹೋದರು. ಹೀಗೆ ಅಮ್ಮವ್ವೆಯು ಅನಾಥಳಾದಳು. ಆಗ ಅವಳು ವೀರಶೈವ ದೀಕ್ಷೆಯನ್ನು ಹೊಂದಿ ಶಿವಾನುಭವದ ನಡೆಯಂತೆ ನಡೆಯುತ್ತ ರಾಟೆಯ ಕಾಯಕವನ್ನು ಕೈಕೊಂಡಳು. ಅವಳು ಹತ್ತಿಯನ್ನು ಹಿಂಜಿ ನೂತು ತನ್ನ ಉಪಜೀವನವನ್ನು ಸಾಗಿಸುವಳು. ಅದರಲ್ಲಿ ತನಗೆ ಉಳಿದದ್ದನ್ನು ದಾಸೋಹದ ಕಾರ್ಯಗಳಿಗೆ ಉಪಯೋಗಿಸುವಳು.

ಹೀಗಿರಲು ಒಂದು ದಿನ ಒಬ್ಬ ಚರಮೂರ್ತಿಯು ಆಕೆಯ ಮನೆಗೆ ಬರಲು ಅವಳು ಅವನನ್ನು ಸತ್ಕರಿಸಿ ನೀವಾರೆಂದು ಕೇಳಲು--ನಾವು ಶಿವನ ಭಕ್ತರು, ದೇಶಾಂತರಿಗಳು, ಎಂದು ಹೇಳಿದನು. ಅದಕ್ಕೆ ಅಮ್ಮವ್ವೆಯು ಶಿವನೆಂತಿರುವನೆಂದು ಕೇಳಲು, ಆ ಚರಮೂರ್ತಿಯು--ಶಿವನು ಅಗ್ನಿನೇತ್ರವುಳ್ಳವನು, ಅವನು ಜಟಾಧಾರಿಯು, ಅವನ ಜಟೆಯಲ್ಲಿ ಗಂಗೆ, ಸರ್ವಾಂಗದಲ್ಲಿ ಭಸ್ಮ, ಉಡುಪು ಹುಲಿದೊಗಲು, ಹೊದೆಯುವದು ಗಜಚರ್ಮ, ಸ್ಮಶಾನವಾಸಿಯು, ಸರ್ಪಾಭರಣನು, ಉರದಲ್ಲಿ ಶಿರೋಮಾಲೆ. ಅವನಿಗೆ ತಂದೆತಾಯಿಗಳಿಲ್ಲ. ಆದರೆ ಜಗತ್ತಿಗೆ ತಾನೇ ತಂದೆತಾಯಿ. ಅವನಿಗೆ ಬಂಧುಬಳಗವಿಲ್ಲ. ಆದರೆ ಜಗತ್ತಿಗೆ ತಾನೇ ಬಂಧುವು, ಎಂದು ಶಿವನ ಸ್ವರೂಪವನ್ನು ವಿಸ್ತಾರವಾಗಿ ಬಣ್ಣಿಸಿ ಹೇಳಿದನು. ಆದರೆ ಅವನು ಹೇಳಿದ್ದರಲ್ಲಿ ಶಿವನಿಗೆ ತಂದೆತಾಯಿಗಳಿಲ್ಲ, ಅವನಿಗೆ ಬಂಧುಬಳಗವಿಲ್ಲ ಎಂದು ಹೇಳಿದ್ದು ಮಾತ್ರ ಅವಳ ಮರ್ಮಕ್ಕೆ ತಾಕಿತು. ಅವಳು--ಶಿವನಿಗೆ ತಾಯಿ ಇಲ್ಲವೇ ಎಂದು ಕೇಳಲು ಆ ಚರಮೂರ್ತಿಯು--ಅವನಿಗೆ ತಾಯಿ ಇಲ್ಲ. ಇದು ಅವನಿಗೆ ಸಹಜವಾದುದು ಎಂದೆನ್ನಲು, ಅಮ್ಮವ್ವೆಯು ಆಗ ಸುಮ್ಮನಾಗಿ ಚರಮೂರ್ತಿಯನ್ನು ಚನ್ನಾಗಿ ಉಪಚರಿಸಿ ಅವನನ್ನು ಕಳಿಸಿಕೊಟ್ಟಳು.

ಅವನು ಹೋದಬಳಿಕ ಅಮ್ಮವ್ವೆಯು ಚಿಂತಾಕ್ರಾಂತಳಾಗಿ ತನ್ನಲ್ಲಿಯೇ--ಶಿವನಿಗೆ ಯಾರೂ ದಿಕ್ಕಿಲ್ಲವೇ? ಅವನಿಗೆ ತಾಯಿ ಇಲ್ಲವೇ? ತಾಯಿ ಇದ್ದರೆ ಅವನ ತಲೆ ಹೀಗೆ ಜಡೆಗಟ್ಟುವದೇ? ಅವನು

ಚರ್ಮವನ್ನು ಹೊದೆಯಗೊಡುವಳೇ? ಸ್ಮಶಾನದಲ್ಲಿ ಇರಗೊಡುವಳೇ? ಅಕಟಕಟಾ, ಶಿವನಿಗಾರೂ ಇಲ್ಲವೇ? ಎಂದು ಚಿಂತೆಮಾಡುತ್ತ ನಿದ್ರೆ ಹೋದಳು.

ಅವಳು ನಿದ್ರೆ ಹೋದಾಗ ಅವಳ ಸ್ವಪ್ನದಲ್ಲಿ ಶಿವನು ಜಂಗಮ ರೂಪಾಗಿ ಬಂದು—ಎಲೋ ಭಕ್ತೆಯೇ, ನೀನು ಚಿಂತೆ ಮಾಡಬೇಡ. ಈ ಊರ ಸಮೀಪದಲ್ಲಿ ಒಂದು ಅರಣ್ಯವಿದೆ. ಅಲ್ಲಿ ನಾನು ತೊಟ್ಟಿಲಲ್ಲಿ ಶಿಶುವಾಗಿರುತ್ತೇನೆ. ಉದಯದಲ್ಲೆದ್ದು ನನ್ನನ್ನು ಅಲ್ಲಿ ಕಾಣು, ಎಂದು ಹೇಳಿ ಅಂತರ್ಧಾನನಾದನು. ಆಗ ಅವಳು ಮುಂಜಾವಿನಲ್ಲಿ ಎಚ್ಚತ್ತು ಶಿವನನ್ನು ಹುಡುಕುತ್ತ ಅರಣ್ಯಕ್ಕೆ ಹೊರಟಳು. ಅರಣ್ಯದಲ್ಲಿ ಅವಳು ಹೋಗುವಾಗ, ಅವಳಿಗೆ ಶಿವಧ್ಯಾನವೇ ಧ್ಯಾನವು. ಶಿವನನ್ನು ಶಿಶುವಾಗಿ ನಾನು ಯಾವಾಗ್ಗೆ ಕಂಡೇನು, ಆವನನ್ನು ನಾನು ಎಂದು ಸಲಹೇನು, ಎಂದು ಆತುರಪಡುತ್ತ ಅವಳು ಶಿವನನ್ನು ಹುಡುಕುತ್ತ ಹೊರಟಳು. ಮಾರ್ಗದಲ್ಲಿ ಒಂದು ಎರಳೆಯ ಮರಿಯು ತಾಯ ಕೂಡ ಹೋಗುವದನ್ನು ಕಂಡು ಅವಳು—ಶಿವನೇ ನೀನೆನಗೆ ಮಕ್ಕಳನ್ನು ಕೊಡಲಿಲ್ಲ. ಈ ಎರಳೆಯ ಬಾಳುವೆಯಕಿಂತ ನನ್ನ ಬಾಳುವೆ ಕಡೆಯದಾಯಿತಲ್ಲಾ, ಎಂದು ನುಡಿಯುತ್ತ ಮುಂದೆಹೋಗಲು, ಅಲ್ಲಿ ಒಂದು ಮರದ ಮೇಲೆ ಒಂದು ಕಪಿಯು ತನ್ನ ಮರಿಯನ್ನು ಅಪ್ಪಿಕೊಂಡು ಕುಳಿತದ್ದನ್ನು ಕಂಡು—ಪರಮಾತ್ಮನೇ, ಇದಕ್ಕೆಲ್ಲ ಮಕ್ಕಳನ್ನು ನೀನು ಕೊಟ್ಟಿ. ನೀನು ನನಗೆ ಕೊಡಲಿಲ್ಲ. ಈ ಕಪಿಯಕಿಂತಲೂ ನಾನು ಕನಿಷ್ಟಳಾದೆನಲ್ಲಾ, ಎಂದು ಹಲುಬುತ್ತ ಶಿವನನ್ನು ಹುಡುಕುತ್ತ, ಅರಣ್ಯ ಮಧ್ಯದಲ್ಲಿ ಸಂಚರಿಸಹತ್ತಿದಳು. ಹೀಗೆ ಅವಳು ಸಂಚರಿಸುತ್ತಿರುವಾಗ ಶಿವನು ತೊಟ್ಟಿಲಲ್ಲಿ ಶಿಶುವಾಗಿ ಮಲಗಿದ ಸ್ಥಳಕ್ಕೆ ಬಂದಳು. ಮತ್ತು ಅಲ್ಲಿ ಶಿವನನ್ನು ಕಂಡಳು. ಶಿಶುವನ್ನು ನೋಡಿದ ಕೂಡಲೆ ಅವಳಿಗೆ ಪ್ರೇಮವು ಉಕ್ಕೇರಿತು, ಶಿಶುವನ್ನು ಮುದ್ದಾಡಿದಳು, ಎತ್ತಿಕೊಂಡಳು.

ಆ ಶಿಶುವು ಮಲಗಿದ್ದ ತೊಟ್ಟಿಲವು ಅಗಾಧವಾದದ್ದು. ಆ ಶಿಶುವಿಗೆ ನಿರಾಕಾರ ಬಯಲೇ ಅದರ ತೊಟ್ಟಿಲು, ಶಿವನ ಜಡೆಗಳು ಅದಕ್ಕೆ ಪಟ್ಟಾವಳಿಯು, ಶಿವಾಗಮಗಳೇ ತೊಟ್ಟಿಲ ಹಗ್ಗಗಳು, ಚಂದ್ರಮನು ಆರ

ಳಿಲೆ, ಪಣೆಗಣ್ಣು ಕಸ್ತುರಿಯ ತಿಲಕ, ಫಣಿಕುಂಡಲಗಳು ಮಾಗಾಯ್ಗಳು, ನಾಗಕಂಕಣವು ಕೈಗಡಗವು, ಪಾದದಲ್ಲಿದ್ದ ಫಣಿಗಳು ಅದಕ್ಕೆ ಕಾಲ ಗಡಗಗಳು, ಬ್ರಹ್ಮನ ತಲೆ ಮುದ್ರೆಯುಂಗುರ, ಗಜಚರ್ಮವು ಶಿಶುವಿಗೆ ಹಸರು ಹೊದಿಕೆ, ಆದಿ ಆಧಾರವು ಅದಕ್ಕೆ ಉಡಿದಾರ, ಹೀಗೆ ಶಿವನು ಶಿಶುವಿನ ವೇಷಧಾರಣ ಮಾಡಿಕೊಂಡು ತೊಟ್ಟಿಲಲ್ಲಿ ಕುಳಿತುಕೊಂಡು ಅರಣ್ಯ ಮಧ್ಯದಲ್ಲಿ ತನ್ನ ತಾನೇ ತೂಗಿಕೊಳ್ಳುತ್ತ ಕುಳಿತಿದ್ದನ್ನು ನೋಡಿದಳು. ಅಂಥ ಶಿಶುವನ್ನು ಅಮ್ಮವ್ವೆಯು ನೋಡಿದ ಕೂಡಲೆ ಅವಳಲ್ಲಿ ಪ್ರೇಮವು ಉಕ್ಕೇರಿತು. ಅದನ್ನು ಅವಳು ಎತ್ತಿಕೊಂಡು ಮನೆಗೆ ಬಂದು ಮನೆಯ ತೊಲೆಗೆ ಒಂದು ತೊಟ್ಟಿಲನ್ನು ಕಟ್ಟಿ ಅದರಲ್ಲಿಟ್ಟು ಅದನ್ನು ಜೋಕೆ ಮಾಡಲು ಆರಂಭಿಸಿದಳು.

ಅವಳು ಆ ಕೂಸಿಗೆ ನಾಗೇಶನೆಂಬ ಹೆಸರನ್ನಿಟ್ಟಳು. ಮತ್ತು ಅದಕ್ಕೆ ಬಾಲ್ಯೋಪಚಾರಗಳನ್ನು ಮಾಡಹತ್ತಿದಳು. ಆ ಶಿಶುವು ತನ್ನ ಹೊಟ್ಟೆಯ ಕೂಸು ಎಂದು ತಿಳಿದು ಅದಕ್ಕೆ ಮೊಲೆಯೂಡಿಸುವಳು, ಆಡಿಸುವಳು, ಮುದ್ದಿಕ್ಕುವಳು, ಜೋಗುಳವಾಡುವಳು. ಜೋಗುಳವಾಡುವಲ್ಲಿ ಸುಕೃತಾತ್ಮನೇ ಜೋ ಜೋ, ಅನಾಥನಾಥನೇ ಜೋ ಜೋ, ಮೂದೇವರ ಪಿತನೇ ಜೋ ಜೋ, ಎಂದು ಶಿವನ ಕುರಿತು ಹಾಡುವಳು. ಹೀಗೆ ಆ ಶಿಶುವಿನ ಮೇಲೆ ಅವಳಿಗಾದ ಅಕ್ಕರತೆಗೆ ಎಣೆ ಇಲ್ಲ.

ಹೀಗಿರುವಲ್ಲಿ ಪರಮಾತ್ಮನು ಆಕೆಯ ಮನಸ್ಸನ್ನು ಪರೀಕ್ಷಿಸಬೇಕೆಂದು ಒಂದುದಿವಸ ಮೊಲೆಯನ್ನುಣ್ಣುವದನ್ನು ಬಿಟ್ಟನು. ಅವನ ಎದೆ ಹೊಟ್ಟೆಯುಬ್ಬಿಕೊಂಡು ಮುಖ ಬೆರೆತುಕೊಂಡು ಅತ್ಯಂತ ಕಸವಿಸಿ ಪಡಹತ್ತಿದನು. ಅಮ್ಮವ್ವೆಯು ಅದನ್ನು ನೋಡಿ ಹೌಹಾರಿದಳು. ಅನೇಕ ಉಪಚಾರಗಳನ್ನು ಮಾಡಿದಳು. ಆದರೆ ಯಾವುದರಿಂದಲೂ ಪ್ರಯೋಜನನಾಗಲಿಲ್ಲ. ಕೂಸಿನ ಬೇನೆಯು ಹೆಚ್ಚುತ್ತಹೋಯಿತು. ಆಗ ಅಮ್ಮವ್ವೆಯು ಕೂಸಿನ ಮರಣವನ್ನು ನೋಡಲಾರೆನೆಂದು ಅದಕ್ಕೂ ಮೊದಲು ತಾನು ಸಾಯಬೇಕೆಂದು ಬಯಸಿ ತನ್ನ ಕತ್ತನ್ನು ಕತ್ತರಿಸಿಕೊಳ್ಳುವಾಗ ಶಿವನು ಮೆಚ್ಚಿ ಪಂಚಮುಖ, ದಶಭುಜ, ನಾಗಕಂಕಣ, ಜಟಾಧಾರಿಯಾಗಿ ತೊಟ್ಟಿಲಲ್ಲಿಯೇ ಪ್ರತ್ಯಕ್ಷನಾಗಿ ಕಾಣಿಸಿಕೊಂಡನು. ಅವನನ್ನು ಅಮ್ಮವ್ವೆಯು ಕಂಡು ಅತ್ಯಂತ ಹರುಷಿತಳಾಗಿ ಅವನಿಗೆ

ಪೊಡವುಡಲು ಪರಮಾತ್ಮನು ಅವಳಿಗೆ ನಿನಗೇನು ಬೇಕು ಬೇಡು ಎನಲು, ಅಮ್ಮನ್ನೆಯು—ನನಗೇನು ಬೇಡ, ನೀನು ನಿರೋಗಿಯಾಗುವದು ನನಗೆ ಬೇಕು. ನೀನು ಶಾಶ್ವತ ತನುವಾಗಿರುವದು ಬೇಕು. ನಿನ್ನಿಂದ ಬೇಡುವದು ಇದೊಂದೇ ವರವು. ಇಷ್ಟೇ ನನಗೆ ಸಾಕು, ಎಂದು ನುಡಿದಳು. ಆಗ ಪರಮಾತ್ಮನು ನಕ್ಕು—ಎಲೌ ತಾಯೇ, ನಿನ್ನಂಥ ತಾಯಿಗಳು ನನಗೆ ಇರಲು ವ್ಯಾಧಿಗಳು ನನಗೇನು ಮಾಡುವವು? ನಾನು ನಿತ್ಯನಾಗಿದ್ದೇನೆ. ನಾನು ಕ್ಷೇಮವಾಗಿರುವೆನು. ಆದರೆ ಇನ್ನುಮೇಲೆ ನಿನಗೂ ನಿತ್ಯತ್ವವು ಪ್ರಾಪ್ತವಾಗಲಿ ಎಂದು ನುಡಿದು, ಅಲ್ಲಿಯೇ ಅಂತರ್ಧಾನನಾದನು. ಆಮೇಲೆ ಅಮ್ಮನ್ನೆಯು ತನ್ನ ಲಿಂಗದಲ್ಲಿ ವಿನೋದಿಸುತ್ತ ಕೆಲಕಾಲದ ಮೇಲೆ ಬಿಜ್ಜಾವರದಲ್ಲಿಯೇ ಸಮಾಧಿಯನ್ನು ಹೊಂದಿದಳು.

ಅಮ್ಮನ್ನೆಗೆ ಬಿಜ್ಜಾಂಬೆ, ಬಿಜ್ಜಮಹಾದೇವಿ ಎಂಬ ಬೇರೆ ಹೆಸರುಗಳಿವೆ. ಬಿಜ್ಜಾಂಬೆ ಇದು ಅಕೆಯ ಹುಟ್ಟಿದಾಗಿನ ಹೆಸರು ಇದ್ದು, ಅವಳು ಪ್ರಸಿದ್ಧಳಾದ ಬಳಿಕ 'ಅಮ್ಮನ್ನೆ' ಎಂದು ಜನರಲ್ಲಿ ಸಾರ್ಥಕ ನಾಮವನ್ನು ಪಡೆದಿರಬಹುದೆಂದು ತೋರುತ್ತದೆ. ಅಮ್ಮನ್ನೆಯು ಅಥವಾ ಬಿಜ್ಜಮಹಾದೇವಿಯು ವೀರಶೈವ ಶಿವಶರಣ ಶರಣೆಯರಲ್ಲಿ ಬಹು ಪ್ರಖ್ಯಾತಳಾಗಿದ್ದಾಳೆ. ಗಣಸಹಸ್ರದಲ್ಲಿ ಅವಳ ಹೆಸರು ಇದೆ. ದೇವಿಯರ ತ್ರಿವಿಧಿಯಲ್ಲಿ ಅವಳ ವರ್ಣನೆ ಇರುವದು ಹೇಗೆಂದರೆ—

ಮಾಯಾ ವಿರಹಿತನಿಗೆ । ತಾಯಿ ತಾನಿಲ್ಲೆಂದು
ಒಯ್ಯಾರದಿಂದ ಮೊಲೆಯೂಡಿ ಸಲಹಿರ್ದ
ತಾಯೆ ಅಮ್ಮನ್ನೆ ಶರಣಾಗು ॥

ಬಿಜ್ಜಾಪುರ ಗ್ರಾಮದ ಹೆಸರಾದರೂ ಬಿಜ್ಜಮ್ಮೆ ಈ ಹೆಸರಿನಿಂದಲೇ ಬಂದಿರಬಹುದೆಂದು ತೋರುತ್ತದೆ.

ಗಟ್ಟಿವಾಳಯ್ಯ.

ಗಟ್ಟಿವಾಳಯ್ಯನು ಬಸವೇಶ್ವರನ ಕಾಲದಲ್ಲಿದ್ದ ಶಿವಶರಣರಲ್ಲಿ ಉನ್ನತ ಸ್ಥಾನವನ್ನು ಪಡೆದವನಿರುತ್ತಾನೆ. ಅವನು ಶಿವಾನುಭವ ಮಂಟಪದಲ್ಲಿ ನಡೆಯುತ್ತಿದ್ದ ವಿವಾದಗಳಲ್ಲಿ ಯಾವಾಗಲೂ ಅಂಗವಹಿಸಿದವನು. ಮತ್ತು ಶ್ರೇಷ್ಠತರಗತಿಯ ವಚನಕಾರನಿದ್ದಾನೆ. ಅವನ ಮುದ್ರಿಕೆಯು 'ಚಿಕ್ಕಯ್ಯ ಪ್ರಿಯಸಿದ್ಧಲಿಂಗ ಇಲ್ಲ ಇಲ್ಲ' ಎಂದಿದೆ. ಅವನ ವಚನಗಳಲ್ಲಿ ಪರಮಾತ್ಮನ ಸ್ವರೂಪು, ಶಿವಶರಣರ ನಡೆ, ಈ ಮೊದಲಾದ ಶಿವಾನುಭವ ವಿಷಯಗಳ ಸಂಬಂಧವಾಗಿ ಅತ್ಯಂತ ಉನ್ನತವಾದ ವಿಚಾರಗಳಿವೆ.

ಗಟ್ಟಿವಾಳಯ್ಯನ ಮೊದಲಿನ ಹೆಸರು ಮುದ್ದಣ್ಣನೆಂದಿದೆ. ಅವನು ತನ್ನ ಗ್ರಾಮದಲ್ಲಿ ಚಿಕ್ಕವನಿರುವಾಗಲೇ ಶಿವಾನುಭವದ ವಿಚಾರಗಳಲ್ಲಿ ಮಗ್ನನಾಗಿ ಅದರ ನಡೆಯಂತೆ ನಡೆಯುತ್ತ ನರ್ತನ ಮಾಡುವ ಕಾಯಕವನ್ನು ಕೈಕೊಂಡವನಾಗಿದ್ದನು. ಅವನು ಈ ಕಾಯಕವನ್ನು ಮಾಡುತ್ತ ಮುದ್ದಕೆಯನ್ನು ನುಡಿಸುತ್ತ ಶಿವಾನುಭವದ ತತ್ವಗಳನ್ನು ಜನರಲ್ಲಿ ಸಾರುವನು. ಈ ಕಾಯಕದಿಂದ ತನಗೆ ದೊರಕಿದ್ದರಲ್ಲಿ ತೃಪ್ತನಾಗಿ ಅದರಲ್ಲಿ ತನಗೆ ಏನಾದರೆ ಉಳಿದರೆ ಅದನ್ನು ದಾಸೋಹ ಕಾರ್ಯಗಳಿಗೆ ಉಪಯೋಗಿಸುವನು.

ಗಟ್ಟಿವಾಳಯ್ಯನು ಪರಮ ವೈರಾಗ್ಯ ಶಾಲಿಯು. ಅವನು ಇಂದ್ರಿಯ ವಿಷಯಗಳನ್ನು ತೃಣೀಕರಿಸಿ ನಿರಾಶಾಭರಿತನಾಗಿ ಆಚರಿಸುವವನಾಗಿದ್ದನು. ಅವನು ಕನಕವೆಂದರೆ ಕಲ್ಲು, ತನ್ನ ಮನೆ ಎಂದರೆ ಸಂತೆಯ ಗುಡಿಸಲು, ಎಂದು ಭಾವಿಸಿ ಎಲ್ಲರಲ್ಲಿಯೂ ವಿಶ್ವಬಂಧುತ್ವಭಾವವನ್ನು ತಾಳಿದವನಾಗಿದ್ದನು. ಅವನು ಯಾರನ್ನೂ ಪೀಡಿಸುತ್ತಿದ್ದಿಲ್ಲ. ಯಾರ ಮನಸ್ಸನ್ನೂ ನೋಯಿಸುತ್ತಿದ್ದಿಲ್ಲ. ಅಹಿಂಸಾ ಧರ್ಮವನ್ನು ಪಾಲಿಸುವವನಾಗಿದ್ದನು. ಅವನ ಈ ಕಡುತರವಾದ ಆಚರಣೆಯನ್ನು ನೋಡಿ ಜನರು ಅವನನ್ನು ಗಟ್ಟಿವಾಳ ಮುದ್ದಣ್ಣನೆಂದು ಕರೆಯಹತ್ತಿದರು. ಹೀಗೆ ಅವರು ಕರೆಯುತ್ತ ಕರೆಯುತ್ತ ಮುಂದೆ ಗಟ್ಟಿವಾಳಯ್ಯನೆಂಬ ಹೆಸರು ಮಾತ್ರ ಅವನಿಗೆ ಉಳಿಯಿತು.

ಗಟ್ಟಿವಾಳಯ್ಯನು ಲಗ್ನವಾದ ಬಳಿಕ ತನ್ನ ಅತ್ತೆಯ ಮನೆಗೆ ಎಂದೂ ಬಂದಿರಲಿಲ್ಲ. ಅವನು ಶಿವಾನುಭವಿಯಾದ ಬಳಿಕ ಅವನ ರೂಪು, ವೇಷ ಇವೆಲ್ಲವುಗಳು ಬದಲಾಗಿದ್ದರಿಂದ ಅತ್ತೆಯ ಮನೆಯಲ್ಲಿ ಯಾರೂ ಅವನನ್ನು ಗುರುತಿಸಲಿಲ್ಲ. ಆದರೆ ಅವನ ಹೆಂಡತಿಯು ಅಲ್ಲಿಗೆ ಆಗಿಂದಾಗ್ಗೆ ಬರುತ್ತಿದ್ದು ಅಲ್ಲಿಯೂ ಕೂಡ ಅವಳು ದುರ್ನಡತೆಯಿಂದ ನಡೆಯುತ್ತಿದ್ದಳು. ಆದ್ದರಿಂದ ಅವಳು ಊರಿಗೆ ಬಂದಳೆಂಬ ಸುದ್ದಿಯನ್ನು ಅವಳ ಅಲ್ಲಿಯ ವಿಟನೊಬ್ಬನಿಗೆ ತಿಳಿಯಲು ಅವನು ಅಲ್ಲಿಗೆ ಬಂದು ಅವಳನ್ನು ಕರೆದುಕೊಂಡು ಹೋಗಹತ್ತಿದನು. ಬಾಡಿಗೆಯವನು ಅದನ್ನು ನೋಡಿ, ಇವಳು--ನನ್ನ ಸ್ತ್ರೀ ಎಂದು ಹೇಳಲು ಉಭಯತರು ಕಾದಾಡಹತ್ತಿದರು. ಗಟ್ಟಿವಾಳಯ್ಯನು ಅದನ್ನು ನೋಡಿ ಉಭಯತರ ಜಗಳವನ್ನು ಬಗೆ ಹರಿಸಬೇಕೆಂದು ಬಯಸಿ ತನ್ನಲ್ಲಿದ್ದ ಲಿಂಗಶಕ್ತಿಯ ಮೂಲಕ ತನ್ನ ಹೆಂಡತಿಯನ್ನು ಇಬ್ಭಾಗವಾಡಿ, ಅವುಗಳಿಂದ ಎರಡು ಹೆಣ್ಣುಗಳನ್ನು ಮಾಡಿ, ನೀವಿಬ್ಬರು ಒಂದೊಂದು ಹೆಣ್ಣು ತೆಗೆದುಕೊಳ್ಳಿರಿ ಎಂದು ಹೇಳಿ ಅವರಿಗೆ ಒಪ್ಪಿಸಿ, ಇನ್ನು ಮೇಲೆ ನನಗೆ ಈ ಸ್ತ್ರೀ ಪ್ರಪಂಚವು ಸಾಕು, ಇದನ್ನು ನಡಿಸಲಿಕ್ಕೆ ನನಗೆ ಬಾರದು, ಕಲ್ಯಾಣ ಪಟ್ಟಣದಲ್ಲಿ ಬಸವಾದಿ ಪ್ರಮಥರಿದ್ದಾರೆ, ಅವರ ಕಡೆಗೆ ಹೋಗುವೆನೆಂದು, ಪರಮ ವೈರಾಗ್ಯಶಾಲಿಯಾಗಿ ಅಲ್ಲಿಗೆ ನಡೆದು ಕೊಂಡು ಬಂದು ಶಿವಾನುಭವ ಮಂಟಪದಲ್ಲಿ ಬಸವೇಶ್ವರ ಸನ್ನಿಧಾನದಲ್ಲಿ ಇರಹತ್ತಿದನು.

ಅವನು ಕಲ್ಯಾಣ ಪಟ್ಟಣಕ್ಕೆ ಬಂದ ಬಳಿಕ ಅಲ್ಲಿ ಭಿಕ್ಷೆಯನ್ನು ಬೇಡಿಕೊಂಡಿರದೆ, ತನ್ನ ಮೊದಲಿನ ನರ್ತನ ಮಾಡವ ಕಾಯಕವನ್ನು ಮಾಡಿಕೊಂಡಿರುತ್ತಿದ್ದನು. ಆಗ ಅವನಿಗೆ ಸದ್ಭಕ್ತಿಯೇ ಭಿಕ್ಷೆಯಾಯಿತು. ಅವನು ಇದು ಅಡವಿ ಅರಣ್ಯ ಗುಡಿ ಗುಂಡಾರ ತಿಪ್ಪೆ ಉಪ್ಪರಿಗೆ ಎಂಬ ಭೇದ ಭಾವವಿಲ್ಲದೆ ಎಲ್ಲವೂ ಸಮವಾದುದು ಎಂಬ ಭಾವವುಳ್ಳವನಾಗಿ ಯಾವಾಗಲೂ ಆನಂದ ವೃತ್ತಿಯುಳ್ಳವನಾಗಿ ಪಟ್ಟಣದಲ್ಲಿ ಇರಹತ್ತಿದನು.

ಹೀಗಿರುವಲ್ಲಿ ಒಂದು ದಿನ ಬಸವಣ್ಣನ ಮನೆಯ ಮುಂದಿನ ಭೇರಿಯು ಬಾರಿಸಹತ್ತಲು, ಆಗ ಊಟದ ಸಮಯವಾಯಿತೆಂದು ಪಟ್ಟಣದಲ್ಲಿಯ ಜಂಗಮರು ಎಂದಿನಂತೆ ತಂಡ ತಂಡವಾಗಿ ಅಲ್ಲಿಗೆ

ಗಟ್ಟಿವಾಳಯ್ಯನಿಗೆ ಒಬ್ಬ ಹೆಂಡತಿಯು ಇದ್ದಳು. ಅವಳು ಗಟ್ಟಿವಾಳಯ್ಯನ ಈ ನಿರಾಶಾವೃತ್ತಿಯನ್ನು ನೋಡಿ ಅತ್ಯಂತ ಬೇಸರಗೊಂಡವಳಾಗಿದ್ದಳು. ಅವಳಿಗೆ ವೈಭವವೂ ಶ್ರೀಮಂತಿಕೆಯೂ ಬೇಕಾಗಿದ್ದವು. ಇವು ಅವನಲ್ಲಿ ಇಲ್ಲದ್ದರಿಂದ ಅವಳು ಅವನನ್ನು ಪ್ರೀತಿಸುವದನ್ನು ಬಿಟ್ಟು ಜಾರತನದಿಂದ ನಡೆಯಹತ್ತಿದಳು. ಇದು ಗಟ್ಟಿವಾಳಯ್ಯನಿಗೆ ತಿಳಿದು ಬಂದಿತು. ಆದರೂ ಅವನು ಅಹಿಂಸಾವೃತ್ತಿಯುಳ್ಳವನಾದ್ದರಿಂದ ಅವಳಲ್ಲಿ ಎಷ್ಟು ಮಾತ್ರವೂ ಮುನಿಸು ತಾಳದೆ ತನ್ನ ಶಿವಾನುಭವದಲ್ಲಿಯೇ ಮಗ್ನನಾಗಿ ಅತ್ಯಂತ ಸಮಾಧಾನದಿಂದಿರುವನು.

ಒಂದು ದಿನ ಅವನ ಹೆಂಡತಿಯು ತನ್ನ ತವರೂರಿಗೆ ಹೋಗಬೇಕೆಂದು ಬಯಸಲು ಗಟ್ಟಿವಾಳಯ್ಯನು ಹಾಗೆಯೇ ಆಗಲೆಂದು ಒಂದು ಚಕ್ಕಡಿಯನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿಗೆ ಹೊರಟನು. ಅವನ ಹೆಂಡತಿಯು ಚಕ್ಕಡಿ ಹೊಡೆಯಲಿಕ್ಕೆ ತನ್ನ ವಿಟಪುರುಷನೊಬ್ಬನನ್ನು ಗೊತ್ತುಮಾಡಿಕೊಂಡು ಮೂವರೂ ದಾರಿಯಿಂದ ನಡೆದು ಬರುವಲ್ಲಿ ಮಧ್ಯದಲ್ಲಿ ಒಂದು ಭಾವಿಯನ್ನು ಕಂಡು ಗಟ್ಟಿವಾಳಯ್ಯನಿಗೆ ಅವನ ಹೆಂಡತಿಯು--ನಾನು ನೀರಡಿಸಿದ್ದೇನೆ. ಬಾವಿಯಿಂದ ನೀರು ತನ್ನಿ ಎಂದು ಹೇಳಲು ಅವನು ಒಳಗೆ ಇಳಿದು ನೀರು ತುಂಬಿಕೊಳ್ಳುವಾಗ, ಆ ವಿಟನು ಇದು ಒಳ್ಳೇ ಸಮಯವೆಂದು ಒಂದು ಕಲ್ಲು ಗುಂಡನ್ನು ತೆಗೆದುಕೊಂಡು ಮೇಲಿನಿಂದ ಗಟ್ಟಿವಾಳಯ್ಯನ ಮೇಲೆ ಬಲವಾಗಿ ಎಸೆಯಲು ಅದು ಅವನಿಗೆ ತಾಕಲು ಅವನು ನೀರಿನಲ್ಲಿ ಮುಳುಗಿದನು.

ಆಗ ಆ ವಿಟನೂ ಹೆಂಡತಿಯೂ ನಗುತ್ತ ಸಂತೋಷಪಟ್ಟು ಗಾಡಿಯನ್ನು ಹೊಡೆದುಕೊಂಡು ಅವಳ ತವರಮನೆಗೆ ಬರುವಷ್ಟರಲ್ಲಿ ಗಟ್ಟಿವಾಳಯ್ಯನು ಅವರಕಿಂತಲೂ ಮೊದಲಿಗೆಯೇ ಅಲ್ಲಿಗೆ ಬಂದು ಮನೆಯ ಮುಂದೆ ಕುಳಿತಿದ್ದನು. ಗಟ್ಟಿವಾಳಯ್ಯನು ಶ್ರೇಷ್ಠ ಶಿವಾನುಭವಿಯು, ಲಿಂಗದೇಹಿಯು. ಅಂಥವನಿಗೆ ಬಾಹ್ಯ ಪೀಡೆಗಳು ಹೇಗೆ ಬಾಧಿಸುವವು? ಅವನು ಅಲ್ಲಿ ಕುಳಿತಿರುವದನ್ನು ಅವನ ಹೆಂಡತಿಯು ನೋಡಿ ನಾಚಿಕೆಯಿಂದ ತಲೆ ಬಗ್ಗಿಸಿಕೊಂಡುನಿಂತಳು. ಆದರೆ ಗಟ್ಟಿವಾಳಯ್ಯನು ತನ್ನನ್ನು ಕೊಂದು ಹಾಕಬೇಕೆಂದು ಬಯಸಿದ ಅವಳಿಗೂ ಅವಳ ವಿಟನಿಗೂ ಒಂದಾದರೂ ಸಿಟ್ಟಿನ ನುಡಿಗಳನ್ನು ಆಡಲಿಲ್ಲ.

ಭೋಜನಕ್ಕೆಂದು ಬರಹತ್ತಿದರು. ಅವರನ್ನು ಗಟ್ಟಿವಾಳಯ್ಯನು ನೋಡಿ ಅಸಹ್ಯಪಟ್ಟು—ಈ ಜಂಗಮರು ಬಸವಣ್ಣನ ಮನೆಯ ಮುಸುರಿಯ ಗಡಿಗೆಯ ನೊಣಗಳು. ಇವರು ಉಪಾಧಿಯಿಂದ ಶರೀರ ಪೋಷಕರ ಲ್ಲದೆ ಜಂಗಮಸ್ಥಲಕ್ಕೆ ಸಲ್ಲರು. ಇವರು ಭಕ್ತಿಯನರಿಯದ ಕಿಸುವಾಯಿ ಗಳು. ಬಸವ ಊಟ ಹಾಕುತ್ತಾನೆಂದು ಇವರು ಬಸಿದ ಲೋಳೆಯನ್ನು ಬಾಯಲ್ಲಿ ಹಾಕುವವರು. ಇವಂಗೇಕೆ ಪರಮಾತ್ಮನು? ಎಂದು ಅವರನ್ನು ವಿಡಂಬಿಸುತ್ತ ನಿಂತನು. ಅದನ್ನು ಆ ಜಂಗಮರು ಕೇಳಿ ಅತ್ಯಂತ ಕ್ರುದ್ಧ ರಾಗಿ ಈ ಗಟ್ಟಿವಾಳಯ್ಯನಿಗೇನು ಮಾಡಬೇಕೆಂದು ಯೋಚಿಸಿ—ಇವನು ಶಿವಾನುಭವಿಯು ಎಂದು ಜನರಲ್ಲಿ ಪ್ರಸಿದ್ಧನಾಗಿದ್ದಾನೆ. ಆದ್ದರಿಂದ ಇವನ ಇಷ್ಟಲಿಂಗವನ್ನು ಕಿತ್ತುಕೊಂಡು ಬಿಟ್ಟರೆ ಸಾಕು, ಇವನು ತಾನಾಗಿಯೇ ಉಪವಾಸ ಬಿದ್ದು ಸತ್ತು ಹೋಗುತ್ತಾನೆ, ಎಂದು ತಿಳಿದು ಅವನನ್ನು ಬಂಧಿಸಿ ನೋಯಿಸಿ, ಅವನ ಇಷ್ಟಲಿಂಗವನ್ನು ಕಸಿದು ಕೊಂಡು ಬಿಟ್ಟರು.

ಆದರೆ ಗಟ್ಟಿವಾಳಯ್ಯನು ಜಂಗಮರ ಈ ದುರ್ಬುದ್ಧಿಯನ್ನು ತಿಳಿ ದವನಾಗಿ ಸಮೀಪದಲ್ಲಿ ಬಿದ್ದ ಒಳ್ಳೆ ಗಾತ್ರವುಳ್ಳ ಒಂದು ದೊಡ್ಡ ಬಂಡೆಯ ಕಲ್ಲನ್ನು ತೆಗೆದುಕೊಂಡು ಬಂದು ಅದಕ್ಕೆ ಹಗ್ಗವನ್ನು ಹಾಕಿ ಕೊರಳಿಗೆ ಕಟ್ಟಿಕೊಂಡು ಇದು ನನ್ನ ಇಷ್ಟಲಿಂಗ, ಇದು ನನ್ನ ಮಹಾಲಿಂಗ, ಎಂದು ಹೇಳುತ್ತ ಬಸವೇಶ್ವರನ ಮನೆಯ ಹೆಬ್ಬಾಗಿಲಿಗೆ ಬಂದು ಅಲ್ಲಿ ಚಾಚಿಕೊಂಡು ಕುಳಿತನು. ಆಗ ಆ ಬಂಡೆಗಲ್ಲು ಬಾಗಿ ಲಿಗೆ ಸರಿಸಮಾನವಾಗಲು ಒಳಗೆ ಯಾರೂ ಹೋಗದಂತಾಯಿತು. ಅದರಿಂದ ಹಾಲು ಮೊಸರು, ಕಜ್ಜಾಯ, ಪಕ್ವಾನ್ನಗಳನ್ನು ತರುತ್ತಿದ್ದ ಬಸವೇಶ್ವರನ ಸೇವಕರು ಅವನ ಮನೆಯ ಹೊರಗೆಯೇ ನಿಂತುಕೊ ಳ್ಳಬೇಕಾಯಿತು. ಊಟಕ್ಕೆ ಬರುತ್ತಿದ್ದ ಅಸಂಖ್ಯಾತ ಜಂಗಮರು ಒಳಗೆ ಹೋಗಲಾರದವರಾದರು. ಆಗ ಅವರು ಗಟ್ಟಿವಾಳಯ್ಯನನ್ನು ಬೈಯ್ಯುತ್ತ ದ್ವಾರದಲ್ಲಿಯೇ ನಿಂತುಕೊಂಡರು. ಹೀಗೆ ಅಲ್ಲಿ ದೊಡ್ಡ ಗಲಾಟೆಯೇ ನಡಿಯಿತು.

ಇದು ಬಸವೇಶ್ವರನ ಹೆಂಡತಿಯಾದ ನೀಲಲೋಚನೆಗೆ ತಿಳಿಯಲು ಅವಳು ಬಿಜ್ಜಳನ ಸಭೆಯಲ್ಲಿದ್ದ ಬಸವೇಶ್ವರನಿಗೆ ಹೇಳಿ ಕಳುಹಿಸಿದಳು. ಆಗ ಅವನು ಅಲ್ಲಿದ್ದ ಪ್ರಭುದೇವ ಚನ್ನಬಸವ ಮೊದಲಾದ ಶಿವಶರ

ಣರನ್ನೊಡಗೊಂಡು ಗಟ್ಟಿವಾಳಯ್ಯನಿದ್ದಲ್ಲಿಗೆ ಬಂದು ಅಲ್ಲಿ ನಡೆದ ಎಲ್ಲವನ್ನು ತಿಳಿದುಕೊಂಡು ನೆರೆದ ಜಂಗಮರಿಗೆ—ನೀವು ಗಟ್ಟಿವಾಳಯ್ಯನ ಇಷ್ಟ ಲಿಂಗವನ್ನು ಅವನಿಗೆ ಕೊಡಿರಿ ಎಂದು ಹೇಳಲು, ಅವರು ಗಟ್ಟಿವಾಳ ಯ್ಯನಿಗೆ—ನಿಮಗೆ ಗುರು ಕೊಟ್ಟ ಲಿಂಗ, ಮತ್ತು ಬೆಟ್ಟದ ಈ ಗುಂಡು ಹೀಗೆ ಎರಡು ಲಿಂಗಗಳೇ? ನಿಮಗೆ ಇಬ್ಬರು ಗಂಡರೇ? ಎಂದು ಕೇಳಲು ಗಟ್ಟಿವಾಳಯ್ಯನು—ಒಂದೆರಡಾಗಬಲ್ಲದು, ಎರಡು ಮೂರಾಗಬಲ್ಲದು, ಆ ಮೂರು ಆರಾಗಬಲ್ಲುದು, ಆ ಆರು ಮೂವತ್ತಾರಾಗಬಲ್ಲದು, ಆ ಮೂವತ್ತಾರು ಇನ್ನೂರು ಹದಿನಾರಾಗಬಲ್ಲದು, ಆ ಇನ್ನೂರು ಹದಿನಾರು ಏಕ ಕೋಟಿ ಲಿಂಗ ಸ್ಥಲವಾಗಬಲ್ಲದು. ಇದು ಲಿಂಗದ ನಿಜವು. ನಿಮ್ಮದು ಆರ್ಥಿಗೆ ಕಟ್ಟಿದ ಲಿಂಗವು. ಅದು ನಿಮ್ಮ ಕೈಯ್ಯೊಳಗಾ ಯಿತ್ತು. ನಿಶ್ಚಯವಪ ಲಿಂಗ ನಿಮ್ಮ ಗೊತ್ತಿಗೆ ಸಿಕ್ಕದು. ಆ ಘನ ಲಿಂಗವುಳ್ಳ ನಾನೇ ಜಂಗಮನು. ನೀವು ಜಂಗುಳಿಗಳು. ಈ ಗುಂಡೇ ನನಗೆ ಬಟ್ಟಬಯಲು ಪರಬ್ರಹ್ಮ, ಎಂದು ಹೇಳಿದನು. ಆಗ ಆ ಜಂಗ ಮರು-ಈ ಲಿಂಗವು ನಿನ್ನದಾದರೆ ಅದು ನಿನ್ನ ಅಂಗೈಯಲ್ಲಿ ಏಕೆ ಅಡ ಗಬಾರದು? ಇದು ಲಿಂಗದ ರೀತಿಯಲ್ಲ ಎಂದು ನುಡಿಯುತ್ತ, ಅವರು ಅವನಿಗೆ—ಇಗೋ ಇದು ನಿನ್ನ ಮೊದಲಿನ ಇಷ್ಟ ಲಿಂಗವು. ನಿನಗೆ ಇಬ್ಬರು ಗಂಡರು ಎಂದು ಹೇಳಿ ಅದನ್ನು ಅವನಿಗೆ ಕೊಡಲು, ಗಟ್ಟಿವಾಳಯ್ಯನು ತನ್ನಲ್ಲಿ ನೆಲೆಗೊಂಗ ಲಿಂಗ ಸಾಮರ್ಥ್ಯದಿಂದ ಆ ಬೆಟ್ಟದ ಗುಂಡವನ್ನು ತನ್ನ ಆ ಇಷ್ಟಲಿಂಗದಲ್ಲಿಯೇ ಅಡಗಿಸಿಕೊಂಡು ಬಿಟ್ಟನು.

ಆಗ ಅಲ್ಲಿದ್ದ ಪ್ರಭುದೇವರು ಗಟ್ಟಿವಾಳಯ್ಯನ ನಡೆಯೇ ನಿಜ ವಾದದ್ದು ಎಂದು ನುಡಿದು ಅವನನ್ನು ಸ್ತುತಿಸುತ್ತ ಅಂದದ್ದುಃ—'ಅಂಗದ ಮೇಲಣ ಲಿಂಗ ಹಿಂಗಿದಾತನ ಭವಿ ಎಂಬರು, ಅಂಗದ ಮೇಲಣ ಲಿಂಗ ಇಪ್ಪಾತನ ಭಕ್ತನೆಂಬರು, ಅಂಗದೊಳಗೆ ಬೆರಸಿಪ್ಪ ಲಿಂಗದ ಹೊಲ ಬನರಿಯದೆ. ಲಿಂಗವಿಲ್ಲದೆ ಒಂದು ಕ್ಷಣ ಒಂದಂಗ ಸುಳಿದುದುಂಟೇ ಜಗದೊಳಗೆ? ಆ ಜಗದೊಳಗಣ ಲಿಂಗವನು ಹಿಂಗದವರಿಗೆ ಭವಮಾಲೆ ಯುಂಟು. ಹಿಂಗಿದವರಿಗೆ ಭವಮಾಲೆ ಇಲ್ಲ ಗುಹೇಶ್ವರಾ' ಎಂದು ನುಡಿದನು.

ಹಾಗೆಯೇ ಚನ್ನಬಸವೇಶ್ವರನು ಅಲ್ಲಮ ಪ್ರಭುವಿನನ್ನು ಸಮರ್ಥಿ ಸುತ್ತ—'ಅಂಗದ ಮೇಲಣ ಲಿಂಗ ಹಿಂಗಿತ್ತೆಂದು ಆತ್ಮಘಾತವ ಮಾಡ

ಬೇಕೆಂಬ ಅಜ್ಞಾನಿಗಳು ಅಂಗವಾವುದು, ಲಿಂಗವಾವುದೆಂದವರಿತ್ತಬಲ್ಲರು? ಅಂಗವೇ ಆತ್ಮಲಿಂಗವ ಸಂದಿತ್ತು. ಈ ಎರಡರ ಸಂಬಂಧ ಸಂಚವ ತಿಳಿಯದೆ ಅಂಗಲಿಂಗ ಹಿಂಗಿತ್ತೆಂಬವರಿಗೆ ಪ್ರಾಣಲಿಂಗನಾಸ್ತಿ. ಪ್ರಸಾದವೆಲ್ಲಿಯದೋ ಕೂಡಲ ಚನ್ನಸಂಗಮದೇವಾ?' ಎಂದು ಗಟ್ಟಿವಾಳಯ್ಯನ ಆಚರಣೆಯ ರೀತಿಯನ್ನು ವಿವರಿಸಿ ಹೇಳಿದನು.

ಹೀಗೆ ಗಟ್ಟಿವಾಳಯ್ಯನು ಬೆಟ್ಟದ ಗುಂಡನ್ನು ತನ್ನ ಇಷ್ಟಲಿಂಗದಲ್ಲಿ ಅಡಿಗಿಸಿಕೊಂಡದ್ದನ್ನು ಬಸವಾದಿ ಪ್ರಮಥರೂ ಜಂಗಮರೂ ಕಂಡು ಅವನನ್ನು ಕೊಂಡಾಡುವವರಾದರು. ಜಂಗಮರಾದರೂ ಬಸವಣ್ಣನ ಮನೆಗೆ ಹೀಗೆ ಕೂಳಿಗೆ ಬಂದರೆ ತಾವು ಕೇವಲ ವೇಷಧಾರಿಗಳೆಂದು ತಿಳಿದುಕೊಂಡು ಆಚರಿಸುವವರಾದರು. ಹೀಗೆ ಗಟ್ಟಿವಾಳಯ್ಯನು ಅವರೆಲ್ಲರಿಗೆ ಶಿವಾನುಭವದ ನಡೆಯನ್ನು ಆಗಿಂದಾಗ್ಗೆ ಅರುಹುತ್ತ ಬರುವವನಾದನು.

ಕಲ್ಯಾಣ ಪಟ್ಟಣದಲ್ಲಿ ಗಟ್ಟಿವಾಳಯ್ಯನು ತನ್ನ ಶಿವಾನುಭವದ ತತ್ವಗಳನ್ನು ನಾಟ್ಯದ ಮೂಲಕ ಅನೇಕ ವಿಧವಾಗಿ ಸಾರುತ್ತ ತನ್ನ ಕಾಯಕವನ್ನು ನಡಿಸುತ್ತಲಿದ್ದನು. ಅವನು ಇದರ ತತ್ವಗಳನ್ನು ಹೇಳುವಲ್ಲಿ ತನ್ನ ಎಲ್ಲ ವಚನಗಳ ಸಾರವೆಂದು—'ಸತ್ತು ಸಮಾಧಿಯಲ್ಲಿರಲಿಲ್ಲ, ಕಾಯವೆರಸಿ ಕೈಲಾಸಕ್ಕೆ ಹೋಗಲಿಲ್ಲ, ನಿತ್ಯವಾದ ಚರಲಿಂಗ ಹಸ್ತದಲ್ಲಿಯೇ ನಮಗೆ ನಿರವಯಲ ನಿಜಸಮಾಧಿ. ಇದ ವೀರಿದವರಿಗೆ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ' ಎಂಬ ವಚನದಲ್ಲಿಯ ಬೋಧೆಯನ್ನು ಅವನು ಯಾವಾಗಲೂ ತಿಳಿಸುತ್ತ ಪಟ್ಟಣದ ಬೀದಿಗಳಲ್ಲಿ ಸಂಚರಿಸುವನು. ಹೀಗೆ ಅವನು ಅನೇಕ ವರ್ಷ ಬೋಧಿಸುತ್ತ ಒಂದು ದಿನ ಕಲ್ಯಾಣ ಪಟ್ಟಣದ ರಾಜಬೀದಿಯಲ್ಲಿಯೇ ಮೃತಿಯನ್ನು ಹೊಂದಿದನು.

ಹೀಗೆ ಅವನ ಮೃತ ಶರೀರವು ಬೀದಿಯಲ್ಲಿಯೇ ಬಿದ್ದಿರುವದನ್ನು ಬಿಜ್ಜಳನ ಚಾರರು ಅವನಿಗೆ ತಿಳಿಸಲಾಗಿ ಬಿಜ್ಜಳನು ಬಸವಣ್ಣನಿಗೆ—'ನಮ್ಮ ಪಟ್ಟಣದಲ್ಲಿ ಸತ್ತರೆ ಹೂಳಲಾಗದು, ಕಾಯವೆರಸಿ ಕೈಲಾಸಕ್ಕೆ ಹೋಗಲಾಗದು' ಎಂದು ಸಾರುವವನೊಬ್ಬನು ಸತ್ತನಂತೆ. ಅವನ ಶರೀರವು ಬೀದಿಯಲ್ಲಿ ಬಿದ್ದಿದೆಯಂತೆ. ಬಸವಣ್ಣನೇ, ನಿನ್ನ ಶರಣರಿಗೆ ನುಡಿದಂತೆ ನಡೆ ಇಲ್ಲವಲ್ಲಾ' ಎಂದು ಹಾಸ್ಯಮಾಡಿದನು. ಬಸವೇಶ್ವರನು ಇದನ್ನು ಕೇಳಿ ಕೂಡಲೆ ಕೆಲ ಶಿವಶರಣರೊಡಗೂಡಿ ಗಟ್ಟಿವಾಳಯ್ಯನ ಶರೀರವು ಬಿದ್ದ ಸ್ಥಳದಲ್ಲಿ ಬಂದು ಅದನ್ನು ಎತ್ತಿ ಸಮಾಧಿ ಮಾಡಬೇಕೆಂದು

ಶವದ ಪಾದವನ್ನು ತಾನು, ಒಬ್ಬ ಜಂಗಮನು ಅವನ ಹಸ್ತಗಳನ್ನು, ಉಳಿದ ಶರಣರು ಅವನ ಶರೀರವನ್ನು, ಹಿಡಿದು ಎಬ್ಬಿಸಬೇಕೆಂದು ಅದನ್ನು ಎತ್ತುವಷ್ಟರಲ್ಲಿಯೇ ಅವನ ದೇಹವು ಅವರ ಹಸ್ತಗಳಲ್ಲಿಯೇ ಬಯಲಾಯಿತು.

ಗಟ್ಟಿವಾಳಯ್ಯನ ಮೃತಶರೀರವು ಹೀಗೆ ಬಯಲಾಯಿತೆಂಬ ವಾರ್ತೆಯನ್ನು ಬಿಜ್ಜಳನು ಕೇಳಿ ಗಟ್ಟಿವಾಳಯ್ಯನ ಶವವು ಬಿದ್ದ ಸ್ಥಳಕ್ಕೆ ಬಂದು, ಅವನ ನುಡಿಯು ನಿಜವಾಯಿತೆಂದು ಅವನನ್ನೂ ಅಲ್ಲಿ ನೆರೆದಿದ್ದ ಶಿವಶರಣರನ್ನೂ ಹೊಗಳುತ್ತ ತನ್ನ ಓಲಗಕ್ಕೆ ಹೋದನು.

ವೀರಶೈವರಲ್ಲಿ ಎಂಟುವಿಧ ಸಮಾಧಿಗಳಿವೆ. ಅವು ಕ್ರಿಯಾಸಮಾಧಿ, ಗೋಮುಖಸಮಾಧಿ, ಗೋಳಕ ಸಮಾಧಿ, ಬಯಲಸಮಾಧಿ, ನಿಜಶಿವ ಸಮಾಧಿ, ನಿರವಯಸಮಾಧಿ, ಸಚ್ಚಿದಾನಂದಸಮಾಧಿ, ಮತ್ತು ನಿರ್ವಾಣ ಸಮಾಧಿ ಎಂದಿವೆ. ಗಟ್ಟಿವಾಳಯ್ಯನು ನಿರವಯಸ್ಥಲವನ್ನು ಹೊಂದಿ ನಿರ್ವಾಣ ಸಮಾಧಿಯನ್ನು ಹೊಂದಿದವನಾಗಿದ್ದಾನೆ. ನಿರ್ವಾಣ ಸಮಾಧಿಯ ವಿವರಣೆಯು ಸಂಗನಬಸವೇಶ್ವರ ವಚನದಲ್ಲಿ ಹೇಳಿದುದು ಹೇಗೆಂದರೆ:— 'ಪ್ರಥಮದಲ್ಲಿ ಗಟ್ಟಿವಾಳ, ಅಜಗಣ್ಣತಂದೆಗಳು, ಅಕ್ಕನಾಗಲಿ, ಮಹಾದೇವಿ, ನೀಲಲೋಚನೆ, ಮುಕ್ತಾಂಗನೆ ಮೊದಲಾದ ಶರಣಗೆ ನಿರವಯಸ್ಥಲಕ್ಕೆ ಕಾರಣವಾದ ಶೂನ್ಯಲಿಂಗಾನುಭಾವವ ಬೋಧಿಸಿ ಏಣಿ ಸಕೀಲು ಮೊದಲಾದ ಸಕೀಲವನರುಹಿ ಆ ಆಪಸ್ಮರ ಕುಂಡಲಿ ಶೂನ್ಯಲಿಂಗೋದ್ಧರಣಿ ಚಿದಂಬರ ಮೊದಲಾದ ಚತುರ್ವಿಧ ಉದ್ಧರಣೆಯ ಕರುಣಿಸಿ ನಿರ್ವಾಣ ಸಮಾಧಿಯ ಪಥವ ತೋರಿದರು ನೋಡಾ.' ಗಟ್ಟಿವಾಳಯ್ಯನು ಹೊಂದಿದುದು ಈ ನಿರ್ವಾಣ ಸಮಾಧಿಯು. ಇದು ಶರಣನ ಅಂತಿಮಸ್ಥಿತಿಯು.

ಗಟ್ಟಿವಾಳಯ್ಯನು ವಚನಕಾರನಿದ್ದಾನೆ. ಅವನ ೧೦೦ ವಚನಗಳು ನಮ್ಮಲ್ಲಿವೆ. ಅವನು ತನ್ನ ಅನೇಕ ವಚನಗಳಲ್ಲಿ ಕೇವಲ ಅಶನಕ್ಕಾಗಿ ಬಸವೇಶ್ವರನಲ್ಲಿ ಬಂದಂಥ ಜಂಗಮರನ್ನು ಅತ್ಯಂತ ಕಟುವಾದ ರೀತಿಯಿಂದ ಟೀಕಿಸಿದ್ದಾನೆ. ಅವನ ಕೆಲವು ವಚನಗಳನ್ನು ನಾವು ಆಯ್ದು ಇಲ್ಲಿ ಉದಹರಿಸಿದ್ದೇವೆ.

ವಚನಗಳು.

(೧) ಬಸವ ಮಾಡಿಹನೆಂದು ಬಾಯಲ್ಲಿ ಬಸಿವ ಲೋಳೆಯನಂ
ಯದೆ ಎಸಕದಿಂದ ಮಾಡುವದು ಹುಸಿ. ಭಕ್ತಿಯನಂಯದ ಈ ಕಿಸು
ವಾಯರಿಗೇಕೆ ಚಿಕ್ಕಯ್ಯಪ್ರಿಯಸಿದ್ಧಲಿಂಗ ಇಲ್ಲ ಇಲ್ಲವೆಂದೆ.

(೨) ಜಂಗವುವಾಗಿ ಹುಟ್ಟಿದ ಮೇಲೆ ಹಿಂದಣ ಹೆಜ್ಜೆಯ ಪೆಟ್ಟ
ಲುಂಟೇ? ಜಂಗವುನೆಂಬ ಮಾತಿಂಗೊಳಗಾದಲ್ಲಿ ಮೂರು ಮಲತ್ರ
ಯವ ಹಿಂಗಿರಬೇಕು. ಅನಂಗನ ಬಲೆಗೆ ಎಂದಿಗೂ ಸಿಕ್ಕದಿರಬೇಕು.
ಅದು ನಿಜವ ಸಂಗ. ಚಿಕ್ಕಯ್ಯಪ್ರಿಯ ಸಿದ್ಧ ಈ ಗುಣ ಆರಿಗೂ ಇಲ್ಲ ಇಲ್ಲ
ಎಂದೆ.

(೩) ಆಸೆಗಾಗಿ ವೇಷವ ಹೊತ್ತು ತಿರುಗುವ ವೇಷದ ಗಂಡ,
ಈಷಣತ್ರಯಕ್ಕಾಗಿ ಈಶನ ಪೂಜಿಸುವ ದಾಸನ ಗಂಡ, ಇಷ್ಟವ
ಫರಿಸಿ ತನುವಿಗೆ ಆಸೆ ಮಾಡುವ ಭಾಷೆವಂತರ ಗಂಡ. ನಾನಂಜುವೆ
ಹಂಗಳಿದವರಿಗೆ. ನಾನವರಿಗೆ ಊಳಿಗದ ಬಂಟ ಚಿಕ್ಕಯ್ಯಪ್ರಿಯ ಸಿದ್ಧ
ಲಿಂಗ ಇಲ್ಲ ಇಲ್ಲವೆಂದೆನು.

ಮೇಲಿನ ವಚನಗಳಿಂದ ಗಟ್ಟಿವಾಳಯ್ಯನು ಕೇವಲ ವೇಷಧಾರಿ
ಜಂಗಮರನ್ನು ಕಂಡಲ್ಲಿ ಅವನು ಸ್ಪಷ್ಟ ಶಬ್ದಗಳಿಂದ ಹಳಿಯುತ್ತ ವರ್ತಿ
ಸುತ್ತಿದ್ದುದು ಕಂಡುಬರುತ್ತಿದೆ.

(೪) ಎನಗೆ ಹಳ್ಳದ ಹೊಡೆಕೆಯೆ(?) ಶಿವಧಾರವಾಗಿ, ಬೆಟ್ಟದ
ಗುಂಡೇ ಲಿಂಗವಾಗಿ ಕಾಡಸೊಪ್ಪಹಾಕಿದ ಮಡಕೆಯ ಉದಕವೇ
ಮಜ್ಜನವಾಗಿ ಪೂಜಿಸುತ್ತಿದ್ದೆ. ಬಸವನ ಮನೆಗೆ ಹೋಗುವ ವ್ರತಗೇ
ಡಿಗಳ ನೋಡಿ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎನುತಿದ್ದೆ.

(೫) ಇಷ್ಟಲಿಂಗವ ತಕ್ಕೊಂಡಲ್ಲಿ ದೃಷ್ಟವಾಯಿತ್ತೇ ನಿಮಗೆ?
ಬಂಧನ ಮಾಡುವುದು ಲಿಂಗದೇಹಿಗಳಿಗೆ ಉಂಟೇ ಅಯ್ಯ? ಜಗದ
ಲ್ಲುಂಡುಂಡು ಕೊಂಡಾಡುವವರಿಗೆ ಘನಲಿಂಗದ ಸುದ್ದಿ ಏಕೆ? ಚಿಕ್ಕಯ್ಯ
ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ.

(೬) ಅರ್ಥಿಗೆ ಕಟ್ಟಿದ ಲಿಂಗ ಕೆಯ್ಯೊಳಗಾಯಿತ್ತು. ನಿಶ್ಚಯದ
ಲಿಂಗ ಅರ ಗೊತ್ತಿಗೆ ಸಿಕ್ಕದು. ಆ ಘನಲಿಂಗವುಳ್ಳನ್ನಕ್ಕ ನಾ ಜಂಗವು

ನೀವು ಜಂಗುಳಿಗಳು. ಎನಗಾ ಭೀತಿ ಇಲ್ಲ. ಚಿಕ್ಕಯ್ಯಪ್ರಿಯ ಸಿದ್ಧಲಿಂಗ
ಇಲ್ಲ ಇಲ್ಲ ಎಂದೆ.

ಇವುಗಳಲ್ಲಿ ೪, ೫, ೬ ಈ ವಚನಗಳು ಜಂಗಮರು ಗಟ್ಟಿವಾ
ಳಯ್ಯನ ಇಷ್ಟಲಿಂಗವನ್ನು ಕಸೆದುಕೊಂಡಾಗ್ಗೆ ಅವನು ಉದ್ರೇಕಗೊಂಡು
ನುಡಿದವುಗಳು ಇರಬಹುದೆಂದು ನಮಗೆ ತೋರುತ್ತಿದೆ. ಶಿವಾನುಭವದ
ಅವನ ವಿಚಾರಗಳನ್ನು ಹೇಳುವ ವಚನಗಳು ಅನೇಕವಿರುತ್ತವೆ. ಗ್ರಂಥ
ವಿಸ್ತಾರಭಯಕ್ಕಾಗಿ ಅವುಗಳನ್ನು ನಾವು ಇಲ್ಲಿ ಉದಹರಿಸಿಲ್ಲ. ಇವನು
ಸಹಸ್ರ ಗಣರಲ್ಲಿ ಎಣಿಸಲ್ಪಟ್ಟಿದ್ದಾನೆ.

ಗೊಲ್ಲಾಳ.

ವಿಜಾಪುರ ಜಿಲ್ಲೆಯಲ್ಲಿ ಒಂದು ತಾಲೂಕು ಸ್ಥಳವಾದ ಸಿಂದಿಗಿ
ಗ್ರಾಮದಿಂದ ಆಗ್ನೇಯ ದಿಕ್ಕಿಗೆ ೧೨ ಮೈಲುಗಳ ಮೇಲೆ ಗೋಲಗಿರಿ
ಎಂಬ ಗ್ರಾಮವಿರುತ್ತದೆ. ಅಲ್ಲಿ ಕಾಟಕೋಟನೆಂಬ ಕುರುಬನು ವಾಸ
ಮಾಡುತ್ತಿದ್ದನು. ಅವನ ಮಗನ ಹೆಸರು ಗೊಲ್ಲಾಳನು. ಅವನು
ಕುರಿಯ ಮುಂದೆಯನ್ನಿಟ್ಟುಕೊಂಡು ಕುರಿಗಳನ್ನು ಮೇಯಿಸುವದೇ
ಅವನ ಹೋರೆಯಾಗಿತ್ತು. ಒಂದುದಿನ ಅವನು ಬೀಸುಗೋಲನ್ನು
ಹಿಡಿದುಕೊಂಡು ಕುರಿಗಳನ್ನು ಮೇಯಿಸುತ್ತ ಅಡವಿಯಲ್ಲಿದ್ದಾಗ
ಶ್ರೀಶೈಲಕ್ಕೆ ಹೋಗುವ ಒಂದು ಪರಿಸೆಯು 'ಹರಹರಾ ಉಘೇ ಉಘೇ'
ಎಂದು ಅನ್ನುತ್ತ ಗೋಲಗೆರೆಯ ಮೇಲಿಂದ ಹಾಯ್ದು ಹೋಗುತ್ತಿ
ದ್ದದ್ದನ್ನು ಕಂಡನು. ಅವನು ಅವರಿಗೆ—ನೀವೆಲ್ಲಿಗೆ ಹೋಗುತ್ತೀರೆಂದು
ಕೇಳಲು ಅವರು ಮುದಿಮಲ್ಲೇಶಲಿಂಗಕ್ಕೆ ಹೋಗುತ್ತೇವೆಂದು ಹೇಳಿ
ದರು. ಅವರಲ್ಲೊಬ್ಬ ಮುದುಕ ಜಂಗಮನು ಕಾವಡಿಯನ್ನು ಹೊತ್ತು
ಕೊಂಡು ಬಿಸಿಲಲ್ಲಿ ಬೆವತು ಬಾಯಾರಿ ಆಯಾಸಪಟ್ಟು ನಡೆಯುತ್ತಿದ್ದ
ದ್ದನ್ನು ಗೊಲ್ಲಾಳನು ಕಂಡನು. ಗೊಲ್ಲಾಳನು ಅವನಿಗೋಸ್ಕರ ಕನಿ
ಕರಪಟ್ಟು ಅವನನ್ನು ಮಾತಾಡಿಸಲು, ಆ ಜಂಗಮನು—ನಾನು ಬಿಸಿ
ಲಲ್ಲಿ ಬಸವಳಿದಿದ್ದೇನೆ. ನನಗೆ ಚರಣರಜ್ಜೆಗಳು ಬೇಕು. ಅವನ್ನು ನೀನು
ಕೊಟ್ಟರೆ ನಿನಗೆ ನಾನು ಶ್ರೀಶೈಲಗಿರಿಯಿಂದ ಲಿಂಗವನ್ನು ತಂದು
ಕೊಡುವೆನು. ಆ ಲಿಂಗವು ಬಹು ಪವಿತ್ರವಾದುದು ಎಂದು ಹೇಳಲು

ಗೊಲ್ಲಾಳನು—ಆಗಲಿ. ಮುದಿಮಲ್ಲೇಶನನ್ನು ತಂದುಕೊಡು ಎಂದು ಹೇಳಿ, ಅವನಿಗೆ ತನ್ನ ಜೋಡನ್ನು ಕೊಟ್ಟನು. ಮುದುಕನು ಆನಂದದಿಂದ ಚನ್ನಮಲ್ಲೇಶನು ನನಗೆ ಪ್ರಸನ್ನನಾದನು ಎಂದು ಅಂದು ಗಿರಿಗೆ ಹೋಗಿ ತಿರುಗಿ ಅದೇ ಗ್ರಾಮದ ಮೇಲಿಂದ ತನ್ನ ಪರಿಸೆಯೊಡನೆ ಹಾಯ್ದು ಬರುತ್ತಿರುವಾಗ ಗೊಲ್ಲಾಳನು ನರೆಗಂಬಳಿಯನ್ನು ಹೊತ್ತುಕೊಂಡು ಬರುತ್ತಿದ್ದ ಆ ಮುದುಕ ಜಂಗಮನನ್ನು ಕಂಡು—ಅವನಿಗೆ ನನಗೆ ಮುದಿಮಲ್ಲೇಶನನ್ನು ತಂದೆಯಾ? ಎಂದು ಕೇಳಿದನು. ಆದರೆ ಆ ಜಂಗಮನು ಲಿಂಗವನ್ನು ತರುವದನ್ನು ಮರೆತು ಬಿಟ್ಟಿದ್ದನು. ಗೊಲ್ಲಾಳನು ಹೀಗೆ ಕೇಳಲು ಅವನು ಗಾಬರಿಗೊಂಡು, ಸಮೀಪದಲ್ಲಿಯೇ ನೆಲದ ಮೇಲೆ ಬಿದ್ದಿದ್ದ ಒಂದು ಕುರಿಯ ಹಿಕ್ಕೆಯನ್ನು ಹದುಳವಿಂದ ಹಿಡಿದು—ಇದೇ ನಾನು ಪರ್ವತದಿಂದ ತಂದ ಲಿಂಗವು ಎಂದು ಹೇಳಿ ಅವನ ಹಸ್ತದಲ್ಲಿಟ್ಟನು. ಗೊಲ್ಲಾಳನು—ಗುರುವು ನನಗೆ ಲಿಂಗವನ್ನು ಕೊಟ್ಟನು ಎಂದು ಉಬ್ಬಿ, ಇದನ್ನೇನ ಮಾಡಲಿ ಎಂದು ಆ ಮುದಿಜಂಗಮನಿಗೆ ಕೇಳಲು, ಅವನು ಅವನಿಗೆ ಪೂಜೆಯನ್ನು ಮಾಡುವ ರೀತಿಯನ್ನು ಹೇಳಿದನು. ಹೀಗೆ ಹೇಳಿ ಆ ಜಂಗಮನು ಮುಂದೆ ಹೊರಟುಹೋದನು.

ಆಮೇಲೆ ಗೊಲ್ಲಾಳನು ಅತ್ಯಂತ ಭಕ್ತಿಯಿಂದ ಆ ಮಳಲಲ್ಲಿ ಒಂದು ಶಕ್ತಿಪೀಠವನ್ನು ರಚಿಸಿ, ಅದರಲ್ಲಿ ಹಿಕ್ಕೆಯನ್ನು ಕುಳ್ಳಿರಿಸಿ, ಎಕ್ಕೆ ಕಕ್ಕೆಯ ಹೂವುಗಳಿಂದ ಅದನ್ನು ಅರ್ಚಿಸಿ, ತನ್ನ ಎದೆಯನ್ನೇ ನಗಾರಿಯನ್ನು ಮಾಡಿ ಹೊಡೆದುಕೊಳ್ಳುತ್ತ, ಕೊಳಲನ್ನು ಊದುತ್ತ, ಕುರಿಗಳ ಹಾಲನ್ನು ತಂದು ನೀಡುತ್ತ ಪೂಜಿಸಿದನು. ಈ ಪ್ರಕಾರ ಅವನು ದಿನಾಲು ಕೊಡ ಹಾಲು ಹಿಕ್ಕೆಗೆ ಎರೆಯುತ್ತ, ಅದು ಪರ್ವತ ಮಲ್ಲೇಶನೆಂಬ ಭಾವದಿಂದ ಅತ್ಯಂತ ಭಕ್ತಿಯಿಂದ ಪೂಜೆ ಮಾಡುತ್ತ ಬಂದನು.

ಒಂದು ದಿನ ಅವನ ತಂದೆಯು ಕುರಿಗಳು ಹಾಲು ಕರೆಯುವದಿಲ್ಲ, ಇದಕ್ಕೆ ಕಾರಣವೇನೆಂಬುದನ್ನು ನೋಡಬೇಕೆಂದು ಅಡವಿಗೆ ಬಂದು, ಗೊಲ್ಲಾಳನು ಕುರಿಗಳ ಹಾಲು ಕರೆದು ಅದನ್ನು ಹಿಕ್ಕೆಯ ಮೇಲೆ ಸುರಿಯುತ್ತಿದ್ದದ್ದನ್ನು ಕಂಡು, ಅತ್ಯಂತ ಕೋಪಾವಿಷ್ಟನಾಗಿ ಮುಂದೆ ಬಂದು, ಆ ಲಿಂಗವನ್ನು ಕೆರಹು ಗಾಲಿಂದ ಒದೆದು ತುಳಿದು ಅಳಿಸಿಬಿಟ್ಟನು.

ಶಿವಾನುಭವ

ವರ್ಷ ೨೦ : | ನವ್ಹಂಬರ ೧೯೪೫. | ಸಂಚಿಕೆ ೨

ಚನ್ನಬಸವೇಶ್ವರ ವಚನ ವಿಶೇಷಗಳು.

(ಲೇಃ— ಶ್ರೀ. ಜ. ಪ. ಚನ್ನಬಸವರಾಜದೇಶಿಕೇಂದ್ರ ಸ್ವಾಮಿಗಳವರು,
ಜಗದ್ಗುರು ಶ್ರೀಮನ್ನಿಡುಮಾಮಿಡಿ ಶ್ರೀಶೈಲ ಸಂಸ್ಥಾನ.)

೨ ಐತಿಹಾಸಿಕಾಂಶಗಳು.

ವೀರಶೈವವು ಎಂದಿನದ

ಈ ವಾದವು ಇಬ್ಬಗೆಯಾಗಿ ಹಬ್ಬಿಬಂದಿದೆ. ಮತ ಎಂದಿನದೆಂಬುದು ಮೊದಲನೆಯದು. ಹೆಸರು ಎಂದಿನದೆಂಬುದು ಎರಡನೆಯದು. ಇನ್ನೆರಡು ಇಂದು ಜಟಿಲವಾದ ಸಮಸ್ಯೆಗಳು. ಹಲವಾರು ವಿದ್ಯಾವಂತರು ಇದರಲ್ಲಿ ಭಾಗವಹಿಸಿದ್ದಾರೆ; ಸಂಶೋಧಿಸಿದ್ದಾರೆ. ಇನ್ನೂ ಸಂಶೋಧಿಸಬೇಕಾದ್ದು ಬೇಕಾದಷ್ಟು ಇದೆ. ಒಂದೊಂದೆ ಗುರಿಯನ್ನಿಟ್ಟುಕೊಂಡು ಹೋದರೆ ಇದು ಒಮ್ಮತಕ್ಕೆ ಸಮ್ಮತಕ್ಕೆ ಬರತಕ್ಕ ವಿಷಯವಲ್ಲ. ಪ್ರಾಚೀನವಾಗಲಿ ಅರ್ವಾಚೀನವಾಗಲಿ ಹೇಗಾದರೂ ಸರಿಯೆ ಎಂದು ತೃಪ್ತಿ ಪಡೆವ ಪಾರಿಶುದ್ಧತೆ ಬೇಕು. ಇಲ್ಲಿ ಛಲ ಸಫಲವಾಗದು. ಆಧಾರವಿಲ್ಲದ ಸ್ವಾಭಿಪ್ರಾಯ ಯಾವ ಪ್ರಯೋಜನಕ್ಕೂ ಬೀಳದು. ಹಿಂದಿನದಾಗಲು ಇಂದಿನದಾಗಲು ಆಧಾರಗಳೇ ಸಾಫ್ಯೆ. ಆ ಆಧಾರಗಳು ಯಾರ ಸೊತ್ತಲ್ಲ. ಅವು ಎಲ್ಲೆಲ್ಲಿ ಇರುವವೆಂಬುದನ್ನು ಕಂಡುಹಿಡಿಯುವುದು ಮಾತ್ರ ಸಂಶೋಧಕನ ಸಹಜ ಕರ್ತವ್ಯವಾಗಿರಬೇಕು. ಆಗ ಒಂದು ರೂಪಕ್ಕೆ ಬಂದೀತು, ಒಮ್ಮತವಾದೀತು! ಆ ಸಾಸ, ಆ ಜಸ ಅದಾರ ಭಾಗಕ್ಕೆ—ಭಾಗ್ಯಕ್ಕೆ ಸೇರಿದೆಯೊ ಕಾಣೆವು.

ಈ ಎರಡು ಬಗೆಯ ವಿಚಾರಗಳನ್ನೂ ಚನ್ನಬಸವಣ್ಣನವರ ವಚನ ಜಾಡಿನಲ್ಲಿ ಹುಡುಕಲು ಹೊರಡಲಾಗಿದೆ. ಈ ಉದ್ಯಮವು ಸಫಲ ಗೊಳ್ಳುವುದೊ ವಿಫಲಗೊಳ್ಳುವುದೊ ಅದು ಬೇರೆ ವಿಷಯ. ಸಂಶೋಧಕರಿಗೆ ಸರಿ ಎನಿಸಿದರೆ, ಸಹಾಯಕವಾದರೆ ಅದೇ ಸಾಕು; ಅಷ್ಟೇ ಸಾರ್ಥಕ.

ಎರಡರಲ್ಲಿ ಮತ ಎಂದಿನದು ಎಂಬುದನ್ನು ಮೊದಲು ವಿಚಾರಿಸಲಾಗುತ್ತದೆ; ವಿಶೋಧಿಸಲಾಗುತ್ತದೆ. ಈ ವಿಷಯದಲ್ಲಿ ಇಂದಿನ ಸಂಶೋಧಕರ ಅಭಿಪ್ರಾಯಗಳೇನೆಂಬುದನ್ನು ಮೊದಲು ಸಂಗ್ರಹವಾಗಿ ಪೀಠಿಕೆಯಾಗಿ ನೋಡಲೇಬೇಕು.

೧ ಬಸವಣ್ಣನಕಿಂತ ಪೂರ್ವದ ಕಾಲ.

೧ "... ..ದೇವರ ದಾಸಿಮಯ್ಯ ಮತ್ತು ಶಂಕರ ದಾಸಿಮಯ್ಯನವರು ಬಸವೇಶನಿಗಿಂತ ಮೊದಲಿನವರಾಗಿರುತ್ತಾರೆ. ಇದೂ ಅಲ್ಲದೆ ಬಸವೇಶನಿಗಿಂತಲೂ ಮೊದಲು ವೀರಶೈವವು ಇತ್ತೆಂಬುದಕ್ಕೆ ತಕ್ಕ ಮಟ್ಟಿನ ಚಾರಿತ್ರ ಪ್ರಮಾಣಗಳು ಸಿಕ್ಕುತ್ತವೆ....."

— ಶ್ರೀ ಜೀರಗೆ ಬಸವಲಿಂಗಪ್ಪನವರು
ಶಿವಾನುಭವ-ಸಂ-೬, ಸಂ-೪.

೨ "....ಕರ್ನಾಟಕ ಇತಿಹಾಸ ಮತ್ತು ಶಿವಶರಣರ ಚರಿತ್ರೆ ಇವುಗಳನ್ನು ನಾವು ಪರೀಕ್ಷಿಸಿದಲ್ಲಿ ವೀರಶೈವ ಧಾರ್ಮಿಕ ಚಳವಳಿಗಳು ಬಸವೇಶ್ವರನಕ್ಕಿಂತಲೂ ಮೊದಲು ಕೆಲವು ಬಾರಿ ಜರಗಿದ್ದು ಕಂಡು ಬರುತ್ತದೆ. ಮೊದಲನೇ ಚಳವಳಿಯು ದೇವರ ದಾಸಿಮಯ್ಯನ ಕಾಲದಲ್ಲಿ. ಆಗ ಕೆಂಭಾವಿ ಭೋಗಣ್ಣ, ನವಿಲಿಯ ಶಂಕರೆ ದಾಸಿಮಯ್ಯ, ಗೊಲ್ಲಗಿರಿಯ ಗೊಲ್ಲಾಳೇಶ್ವರ, ಮುದನೂರಿನ ಏಕೋರಾಮಾರಾಧ್ಯ ಇವರೇ ಮೊದಲಾದವರು ಉದಯಿಸಿದರು.....ಆಗ ಈ ಧಾಗದಲ್ಲಿ ಒಂದು ದೊಡ್ಡ ಧಾರ್ಮಿಕ ಚಳವಳಿಯು ಉಂಟಾಯಿತು. ಇದು ೧೧ನೇ ಶತಮಾನದ ಪೂರ್ವಾರ್ಧದಲ್ಲಿ ಜಯಸಿಂಹನ ಆಳಿಕೆಯಲ್ಲಿ ಆರಂಭವಾಯಿತೆಂದು ನಾವು ಊಹಿಸುಬಹುದಾಗಿದೆ.

'ಮುಂದೆ ವಿಕ್ರಮಾರ್ಕನ ತರುವಾಯ ವೀರಶೈವ ಧಾರ್ಮಿಕ ಚಳವಳಿಯು ಪುನಃ ಪ್ರಾರಂಭವಾಯಿತು. ಇದು ಎರಡನೇ ಕ್ರಾಂತಿಯ ಕಾಲವಾಗಿರುತ್ತದೆ.'

".....ಪೇರ್ಮಡಿ ರಾಯನ ಕಾಲ (೧೧೨೪)ದಲ್ಲಿ ನಾವು ಹಿಂದೆ ಹೇಳಿದ ಮೇರೆಗೆ ಅನೇಕ ಶಿವಶರಣರಿಗೆ ಅವನ ಆಸ್ಥಾನದಲ್ಲಿ ಮನ್ನಣೆಯು ದೊರೆಯಿತು.

"ಬಸವೇಶ್ವರನ ಪೂರ್ವದ ಈ ಅವಧಿಯಲ್ಲಿ ಬಿಜ್ಜಳನ ತಂದೆಯಾದ ಪೇರ್ಮಡಿರಾಯನ ಕಾಲದಲ್ಲಿ ಅನೇಕ ಶಿವಶರಣರು ಉತ್ಪನ್ನರಾದರೆಂಬುದನ್ನು ನಾನು ಹಿಂದೆ ಉಲ್ಲೇಖಿಸಿದ್ದೇನೆ. ಅವನ ತರುವಾಯ ಸಹ ವೀರಶೈವ ಮತೋದ್ಧಾರ ಕಾರ್ಯಗಳು ದೇಶದಲ್ಲಿ ವಿಶೇಷವಾಗಿ ನಡೆದವು. ಮತ್ತು ಅದರಲ್ಲಿ ರೇವಣಸಿದ್ಧೇಶ್ವರನು ಬಹು ಪ್ರಸಿದ್ಧನಾಗಿ ವೀರಶೈವ ಧರ್ಮಕ್ರಾಂತಿಯನ್ನು ಮಾಡಿದನೆಂದು ಕಂಡು ಬರುತ್ತದೆ.

'ರೇವಣ ಸಿದ್ಧೇಶ್ವರನು ಬಸವೇಶ್ವರನಕ್ಕಿಂತಲೂ ಮೊದಲಿನವನೆಂದು ಅವನ ಚರಿತೆಯಿಂದಲೇ ಸ್ಪಷ್ಟವಾಗುತ್ತದೆ. ..... ರೇವಣಸಿದ್ಧನು ಬಸವನಕಿಂತಲೂ ಹಿಂದಿನವನು. .....'

"ರೇವಣಸಿದ್ಧೇಶ್ವರನು ಈ ಭಾಗ (ತದ್ದೇವಾಡಿ ಭಾಗ)ದಲ್ಲಿ ಇದ್ದಾಗ್ಗೆ ಮುಖ್ಯವಾಗಿ ಸೊಲ್ಲಾಪುರ ಮತ್ತು ವಿಜಾಪುರ ಜಿಲ್ಲೆಗಳಲ್ಲಿ ವೀರಶೈವಧರ್ಮದ ಬಗ್ಗೆ ಬಹುದೊಡ್ಡ ಕ್ರಾಂತಿಯನ್ನುಂಟುಮಾಡಿದನು. ಅವನು ಜನ ಸಾಮಾನ್ಯರಲ್ಲಿ ವೀರಶೈವ ಧರ್ಮಪ್ರಸಾರ ಮಾಡಿದನು. .....' ಮತ್ತು

—ಶಿವಾನುಭವ = ಸಂ—೧೩, ಸಂ-೫

"ಶಂಕರ ದಾಸಿಮಯ್ಯ ದೇವರ ದಾಸಿಮಯ್ಯರ ಕಾಲದಿಂದಲೂ ವೀರಶೈವ ತತ್ವಗಳು ಪ್ರಚುರ ಹೊಂದುತ್ತ ಬಂದಿವೆ. ಅವು ಅವರಕ್ಕಿಂತಲೂ ಪೂರ್ವದಲ್ಲಿ ಪ್ರಚಲಿತ ವಿರಬಹುದು. ಆದರೆ ಇದು ಇನ್ನೂ ಸಂಶೋಧಿಸಲ್ಪಟ್ಟಿಲ್ಲ. ....."

—ಶ್ರೀ ಪಿ. ಜಿ. ಹಳಕಟ್ಟಿಯವರು.
ಶಿವಾನುಭವ = ಸಂ—೧೩, ಸಂ-೭

೨ ಆಗಮುಕಾಲ

೧ "..... ಲಿಂಗಪೂಜಾವಿಧಿಯು ಶಿವಾಗಮುಂಗಳಲ್ಲಿ ಪ್ರಾರಂಭಿಸಿತು. ಈ ಆಗಮುಗಳು ವೇದಮುಂತ್ರಗಳನ್ನು ಶಿವಾರ್ಚನಾಪರವಾಗಿಯೂ ಶಿವಲಿಂಗ ಶಿವಮೂರ್ತಿ ಪ್ರತಿಷ್ಠಾಪರವಾಗಿಯೂ ಬಳಸಹತ್ತಿದವು.

" ಅಗ್ನಿಹೋತ್ರಾಶ್ಚ ವೇದಾಶ್ಚ ಯಜ್ಞಾಶ್ಚ ಬಹುದಕ್ಷಿಣಾಃ ।
ಶಿವಲಿಂಗಾರ್ಚನಸ್ಯೈತೇ ಕೋಟ್ಯಂಶೇನಾಪಿ ನೋಸಮಾಃ॥ "

ಕಾಮಿಕಾಗಮ ಶಿವಾರ್ಚನ ಪಟಲ ೧೧ - ಎಂದು ಶಿವಲಿಂಗಾರ್ಚನವೇ ಅಧಿಕವಾದುದೆಂದು ಸಾರಿದವು.

' ಕಾಮಿಕಾದ್ಯಾಗಮುಗಳ ಉತ್ತರ ಭಾಗದಲ್ಲಿ ಉಕ್ತವಾದ ಲಿಂಗಾಂಗ ಧರ್ಮವು ಸನಾತನವಾದರೂ, ಕ್ರಮಕ್ರಮೇಣ ಪ್ರಕಟವಾಯಿತೆನ್ನುವಲ್ಲಿ ಪರಮೇಶ್ವರನ ಲೀಲೆಗಳು ಸಾಕ್ಷಿಯಾಗಿವೆ. "

—ಶ್ರೀ ಸಿದ್ಧರಾಮಪ್ಪ ದುಂಡಪ್ಪ ಎಂವಟಿ ಹುಬ್ಬಳ್ಳಿ.
ಶಿವಾನುಭವ = ಸಂ- ೬, ಸಂ-೬.

೨ "..... ಆಗಮು ಮಾರ್ಗದಲ್ಲಿಯೇ ಒಂದು ಯೋಗಿಗಳ ವೃಂದವು ಕರ್ಮಚಿನ್ಹಗಳಾದ ಶಿಜೆ, ಜನಿವಾರಗಳನ್ನು ಕಿತ್ತೊಗೆದು, ಪಾರಮಾರ್ಥಮಾರ್ಗವನ್ನು ಕೈಕೊಂಡು ಜ್ಞಾನದ ಕುರುಹಾದ ಇಷ್ಟಲಿಂಗವನ್ನು ಮಸ್ತಕದಲ್ಲಿ ಧರಿಸಿ ಶಿವಧರ್ಮಶ್ರೇಷ್ಠತೆಯನ್ನು ಪ್ರಸ್ಥಾಪಿಸಿದರು. ಇವರೇ ಪೂರ್ವದ ವೀರಶೈವರು. .....ಆಗ ವೀರಶೈವರು ಅಷ್ಟಾವರಣ, ಪಂಚಾಚಾರಗಳೆಂಬ ಧರ್ಮಸಾಧನೆಗಳನ್ನೂ ವ್ರತನಿಯಮಗಳನ್ನೂ ಗೊತ್ತುಮಾಡಿಕೊಂಡಿದ್ದರು. ... ಎಷ್ಟೋಜನ ವಿಚಕ್ಷಣರು ಪರಮಾತ್ಮನ ಕಳೆಯಾದ ಲಿಂಗವು ದೇಹದಲ್ಲಿಯೇ ಇದೆಯೆಂಬ ತತ್ವವನ್ನು ಅಂಗಿಕರಿಸಿ ಜಗಕ್ಕೆಲ್ಲ ಲಿಂಗವೇ ಪರಬ್ರಹ್ಮವೆಂದೂ ಆ ಲಿಂಗದ ಹೊರತು ಬೇರೆ ದೇವರಿಲ್ಲೆಂದೂ, ಇತಿಹಾಸದಲ್ಲಿಯೂ, ಧರ್ಮದಲ್ಲಿಯೂ ಚಿರಸ್ಮರಣೀಯವಾದ ಉತ್ಕ್ರಾಂತಿಯನ್ನೆಬ್ಬಿಸಿದರು. ದೇವರು ದೇವಾಲಯುಗಳಲ್ಲಿಲ್ಲ. ನಮ್ಮ ದೇಹದಲ್ಲಿರುವನು. ನಮ್ಮ ದೇಹವೇ ದೇಗುಲ. ಇಷ್ಟಲಿಂಗವೇ ಪರಮಾತ್ಮನೆಂದು ಸಾರುವ ಜನಾಂಗವು ಪ್ರಾರಂಭದಲ್ಲಿ ಸಣ್ಣದಾಗಿದ್ದು, ಕೊನೆಗೆ ಬಹು ದೊಡ್ಡ ಸ್ವರೂಪವನ್ನು

ಹೊಂದಿತು. ಹಿಂದೆ ಹೇಳಿದ ಕೇವಲ ಜ್ಞಾನಮಾರ್ಗಾವಲಂಬಿಗಳಾದ ಆಗಮು ವೀರಶೈವರೇ ಈ ಹೊಸ ಉತ್ಕ್ರಾಂತಿಯ ಮುಂದಾಳುತನವನ್ನು ಅಂಗೀಕರಿಸಿದರು. ಇಂಥ ಮಾರ್ಗಾವಲಂಬಿಗಳಾದ ಲಿಂಗಾಂಗಿಗಳು ೧೧ನೆಯ ಶತಮಾನದ ಪೂರ್ವದಲ್ಲಿ ಅಲ್ಲಲ್ಲಿ ಅಲ್ಪ ಸಂಖ್ಯಾಕರಾಗಿ ಕಂಗೊಳಿಸುತ್ತಿದ್ದರು. ಇವರಲ್ಲಿ ದೇವರ ದಾಸಿಮಯ್ಯ, ಶಂಕರ ದಾಸಿಮಯ್ಯ, ಜಾತವೇದಮುನಿ ಮುಂತಾದವರ ಹೆಸರುಗಳನ್ನು ಉದಹರಿಸಬಹುದು.

—ಶ್ರೀ ಬ್ಯಾಳಿ ಕಲ್ಯಾಣಪ್ಪನವರು, ಬಿ. ಎ.
ಶಿವಾನುಭವ = ಸಂ-೧೧, ಸಂ-೨.

೩ ವೇದಾಗಮು ಕಾಲ.

೧ "ಹನ್ನೆರಡನೆಯ ಶತಮಾನದಲ್ಲಿದ್ದ ಕಳಚೂರ್ಯ ದೊರೆಯಾದ ಬಿಜ್ಜಳನ ಕಾಲದಲ್ಲಿದ್ದ ಕಲ್ಯಾಣದ ಬಸವೇಶ್ವರನೇ ವೀರಶೈವ ಮತಸ್ಥಾಪಕನೆಂದು ಹಲವು ಪಂಡಿತರು ಧಾವಿಸಿದ್ದಾರೆ. ವೇದದಷ್ಟೇ ಪ್ರಾಚೀನವೂ ವೇದಸಮ್ಮತವೂ ಆದ ವೀರಶೈವ ಮತವು ಪ್ರಾಚೀನ ಆಗಮೋಕ್ತ ಶೈವಮತದ ಒಂದು ಶಾಖೆಯೆಂಬುದನ್ನು ಅನೇಕರು ಇನ್ನೂ ಕಂಡುಕೊಂಡಿಲ್ಲ. ಶೈವಮತ ಮತ್ತು ದರ್ಶನಗಳಿಗೆ ಕಾರಂಜಿಯಂತಿರುವ ಶಿವಾಗಮುಗಳೇ ವೀರಶೈವ ಮತಕ್ಕೂ ಅಧಾರಗ್ರಂಥಗಳು. ..... ವೀರಶೈವ ಸಿದ್ಧಾಂತಕ್ಕೆ ಅನ್ವಯಿಸುವ ಪಾರಿಭಾಷಿಕ ಶಬ್ದಗಳು ವೇದ ಸಾಹಿತ್ಯದಲ್ಲಿ ನೂರಾರಿವೆ. ಈ ಕಾರಣದಿಂದ ಬಹುಪ್ರಾಚೀನ ಕಾಲದಿಂದಲೂ ವೀರಶೈವ ಮತವು ಅಸ್ತಿತ್ವದಲ್ಲಿತ್ತೆಂದು ಸಾರಲು ಆಧಾರಗಳಿವೆ. ..."

—ಶ್ರೀ ಎಸ್. ಜಿ. ಸಾಖರ್‌ಪೇಕರ್, ಬರೋಡ.
ಶರಣಸಾಹಿತ್ಯ = ಸಂ-೩, ಸಂ-೬.

೨. "ಬೌದ್ಧ, ಕ್ರೈಶ್ಚನ್, ಮುಸಲ್ಮಾನ ಧರ್ಮಗಳಂತೆ ವೀರಶೈವ ಧರ್ಮವು ಒಬ್ಬಾನೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಸ್ಥಾಪಿತವಾದುದಲ್ಲ. ಅದಕ್ಕೆ ಒಂದು ಪುರಾತನ ಪರಂಪರೆ ಇದೆ. ವೀರಶೈವ ಧರ್ಮವು ವೇದಾಗಮುಗಳಿಂದ ಪ್ರಣೀತವಾದುದೆಂದು ಅದರಲ್ಲಿರುವ

ಗ್ರಂಥಗಳಲ್ಲಿ ಆಗಿಂದಾಗ್ಗೆ ಹೇಳಲ್ಪಡುವದುಂಟು. ವೀರಶೈವ ಮತ ತತ್ವಗಳನ್ನು ನಾವು ವಿವೇಚಿಸಿದಲ್ಲಿ ಈ ಅಭಿಪ್ರಾಯವೇ ಬಲಪಡುತ್ತದೆ. ಇವರಲ್ಲಿ ವೇದೋಪನಿಷತ್ತುಗಳಲ್ಲಿಯ ಪರಬ್ರಹ್ಮದ ವಿಚಾರಗಳು ಕಂಡು ಬರುತ್ತವೆ. ಆಗಮಗಳಲ್ಲಿ ಉಕ್ತವಾಗಿರುವ ಅನೇಕ ಆಚಾರ ವಿಷಯಕ ಪದ್ಧತಿಗಳೂ ತತ್ವಗಳೂ ಇದರಲ್ಲಿ ಹೇಳಲ್ಪಟ್ಟಿವೆ... "

—ಶ್ರೀ· ಫ. ಗು. ಹಳಕಟ್ಟಿಯವರು
ವಚನಶಾಸ್ತ್ರಸಾರ (ಭಾಗ–೨) ಅನುಬಂಧ ೧೪.

೪ ವೇದಗಳಿಗಿಂತ ಮೊದಲು.

೧ "ಈಚಿಗೆ ಪಂಜಾಬಿನಲ್ಲಿ ಹರಪ್ಪಾ, ಮುಹಾಂಜೋದಾರೊ ಎಂಬ ಸ್ಥಳಗಳಲ್ಲಿ ಭೂ ಶೋಧನ ಮಾಡಿದ್ದರಲ್ಲಿ ಹೊರಬಿದ್ದ ಕೆಲವು ಕಟ್ಟಡಗಳು ಮುಂತಾದವುಗಳಲ್ಲಿ ಲಿಂಗಗಳು ಸಿಕ್ಕಿರುವದರಿಂದ ಭೂ ಗರ್ಭ ಶೋಧನ ಶಾಸ್ತ್ರದ ಪ್ರಕಾರ ಇದು (ಲಿಂಗಪೂಜಾತತ್ವ) ಆರ್ಯ ವೇದಗಳಿಗಿಂತ ಮೊದಲಿನ ದ್ರಾವಿಡರ ಕಾಲದ್ದೆಂದು ಸಿದ್ಧಾಂತ ಮಾಡಿರುತ್ತಾರಾಗಿ— ಲಿಂಗಪೂಜೆಯು ವೇದಗಳಿಗಿಂತ ಮೊದಲು ದ್ರಾವಿಡರಲ್ಲೇ ಇತ್ತೆಂದು ತಿಳಿಯಬೇಕಾಯಿತು. ಈ ಕಾರಣದಿಂದ ಲಿಂಗ ಪೂಜೆಯ ಪ್ರಾಚೀನತ್ವಕ್ಕೆ ವೇದಗಳನ್ನು ಅರಿಸಿಕೊಂಡು ಹೋಗುವ ಅವಶ್ಯಕತೆ ಏನೂ ಕಾಣುವದಿಲ್ಲ.

ಶ್ರೀ ಜೀರಗೆ ಬಸವಲಿಂಗಪ್ಪನವರು.
ಶಿವಾನುಭವ = ಸಂ.–೯, ಸಂ.–೩.

ಹೀಗೆ ಸಂಶೋಧಕರಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಇವೆಲ್ಲ ಸತ್ಯವಾದವುಗಳೆ! ಅಲ್ಲದೆ ಅವರವರ ಅಭಿಪ್ರಾಯಗಳಲ್ಲಿ ಗುರುತುಹಾಕಿದ ವಾಕ್ಯಗಳಿಂದ ಅವರವರ ದೃಷ್ಟಿಗಳು ಎಷ್ಟು ದೂರ ಹರಿದಿವೆಯೆಂಬುದನ್ನೂ ಮನಗಾಣಬಹುದಾಗಿದೆ. ಈ ಸಂಶೋಧಕರು ಹೇಳುವ ಕಾಲಗಳಲ್ಲೆಲ್ಲ ವೀರಶೈವವು ಇದ್ದುದಲ್ಲದೆ, ಇವರುಗಳು ಹೇಳುವ ಕಾಲಗಳಿಗಿಂತಲೂ ಇನ್ನೂ ಪೂರ್ವದಲ್ಲಿಯೇ ಇತ್ತೆಂದು ಚನ್ನಬಸವಣ್ಣನವರ ವಚನಗಳಿಂದ ವ್ಯಕ್ತವಾಗುತ್ತದೆ. ಅವನ್ನಿಲ್ಲಿ ಎತ್ತಿ ವಿವರಿಸೋಣವಾಗುತ್ತದೆ.

ವೀರಶೈವವು ಇಪ್ಪತ್ತೊಂದು ಯುಗದ್ದು.

"ಇಪ್ಪತ್ತೊಂದು ಯುಗದವರೆಲ್ಲರು ಲಿಂಗವ ಪೂಜಿಸಿ ದೃಷ್ಟವಾವುದು ನಷ್ಟವಾವುದೆಂದರಿಯದೆ ಭಾವಭ್ರಮಿತರಾದರು. ಜೀವ ಸಂಕಲ್ಪಿತರಾದರು. ಜೀವನಾಹುತಿಯನೆ ಲಿಂಗಾರ್ಪಿತವೆಂಬುವರು ಭವದ ಬಳ್ಳಿಯ ಹರಿಯರರಿಯರಾಗಿ, ಇಂತಹರೆ ಭಕ್ತರು? ಇಂತಹರೆ ಪ್ರಸಾದಿಗಳು?....."

ಪ್ರಾಣಲಿಂಗಿಯ ಪ್ರಸಾದಲಿಂಗಸ್ಥಲದ ವಚನವಿದು. ಪುರಾತನ ವೀರಶೈವರ ಲಿಂಗಾರ್ಪಿತ ವಿಧಾನವು ಪರಿಶುದ್ಧವಾದುದಲ್ಲ. ಹಿಂದಿನವರು ಜೀವನಾಹುತಿಯನೆ ಲಿಂಗಾರ್ಪಿತವೆಂಬುವರು. ಇದು ತಪ್ಪು. ಇವರು ನಿಜವಾದ ಭಕ್ತರೆಂದೆನಿಸರು; ಪ್ರಸಾದಿಗಳೆಂದೆನಿಸರು.—ಎಂಬುದೇ ಈ ವಚನದ ತಾತ್ಪರ್ಯ. ಇದರಲ್ಲಿ ತೇಲುವದೇನೆಂದರೆ— ಜೀವನಾಹುತಿಯೆ ಲಿಂಗಾರ್ಪಿತವೆಂದು ಭಾವಿಸಿದ್ದ ಹಿಂದಿನ ಇಪ್ಪತ್ತೊಂದು ಯುಗದ ಲಿಂಗಾಂಗಿಗಳು ಅವರೆಂತಹ ಭಕ್ತ–ಪ್ರಸಾದಿಗಳು? ಅಲ್ಲಲ್ಲ. ಎಂದು ಸ್ಪಷ್ಟವಾಗಿ ಹಿಂದಿನ ಇಪ್ಪತ್ತೊಂದು ಯುಗದ ಲಿಂಗಪೂಜಕರ (ಲಿಂಗಾಂಗಿಗಳ) ಲಿಂಗಾರ್ಪಣಾಚರಣೆಯ ಕೊರತೆಯನ್ನು ಕಂಡೆತ್ತಿ ಪರಿಪೂರ್ತಿಗೊಳಿಸುವ ಪ್ರಯತ್ನ ನಡೆದಿದೆ ಈ ವಚನದಲ್ಲಿ. ಇದರಿಂದ ಚನ್ನಬಸವಣ್ಣನ ದೃಷ್ಟಿಯಲ್ಲಿ ವೀರಶೈವವು ಇಪ್ಪತ್ತೊಂದು ಯುಗದ್ದು. ಬಹು ಪುರಾತನದ್ದು.

ಚನ್ನಬಸವಣ್ಣನ ಈ ಅಭಿಪ್ರಾಯವನ್ನು ಐತಿಹಾಸಿಕವಲ್ಲವೆಂದು ಅಲ್ಲಗಳೆವುದಾಗಲಿ, ಹಗುರಾಗಿ ಕಾಣುವದಾಗಲಿ ಸತ್ಯಸಂಶೋಧಕರಿಗೆ ಉಚಿತವಾದುದಲ್ಲ. ಆತ ಬರೀ ಜ್ಞಾನಿಯಲ್ಲ, ಕಾಲಜ್ಞಾನಿ. ಮೇಲಾಗಿ ಸಮಾಜದ ಸುವ್ಯವಸ್ಥೆಗಾಗಿ ನಡುಕಟ್ಟಿನಿಂತು ಜೀವನವನ್ನು ಅದಕ್ಕಾಗಿಯೇ ವೀಸಲಾಗಿರಿಸಿದ ಮಹಾನ್ಯಕ್ತಿ; ಮಹಾತ್ಮಾ. ಸಮಾಜದ ಸೃಷ್ಟಿ, ಸ್ಥಿತಿ, ಗತಿಗಳನ್ನು ಈತನು ಚನ್ನಾಗಿ ಬಲ್ಲ. ಬಸವಾದಿಗಳಿಗೆ ತಮ್ಮ ತಮ್ಮ ಹಿಂದಿನ ಭವಭವಾಂತರದ ಜನುಮಗಳ ಜ್ಞಾನವಿದ್ದರಿ ಸಮಾಜ ಸುಧಾರಣೆಯೆ ಸರ್ವಸ್ವವಾಗಿಯುಳ್ಳ ಚನ್ನಬಸವಣ್ಣನಿಗೆ ಸಮಾಜವು ಎಂದು ಸೃಷ್ಟಿಯಾದುದೆಂಬುದು ಚನ್ನಾಗಿ ಗೊತ್ತಿತ್ತು. ತನ್ನ ಕಾಲಜ್ಞಾನದ ಸದುಪಯೋಗವನ್ನು ವ್ಯಕ್ತಿತ್ವದಲ್ಲಿಯೆ ಕೊಳೆಹಾಕದೆ ಸಾಮಾಜಿಕವಾಗಿ ಸಾರ್ಥಕಪಡಿಸಿದನು. 'ಕಾಲಜ್ಞಾನವಾಯಿತ್ತೆಂದು

ಕರ್ಮವ ಹಳಿಯಬೇಡ.' ಎಂಬುದು ಚನ್ನಬಸವಣ್ಣನ ಉದಾತ್ತ ಉದ್ದೇಶ; ಉತ್ಕೃಷ್ಟ ಆದೇಶ! ಕಾಲಜ್ಞಾನಿಯಾಗಿ—ನಾನು ಹಿಂದಿಂದಿನ ಜನ್ಮಗಳಲ್ಲಿ ಹಾಗಾದೆ, ಹೀಗಾದೆ ಎಂದು ಕರ್ಮವ ಹಳಿಯುತ್ತ ಕುಳಿತರೆ ಏನು ಪ್ರಯೋಜನ? ಕರ್ಮವ ಹಳಿವುದೆ ಕಾಲಜ್ಞಾನದ ಫಲವಲ್ಲ. ಕಾಲಜ್ಞಾನವುಂಟಾದರೆ ಅದನ್ನು ಸಮಾಜಕ್ಕಾಗಿ ಸಂಸ್ಕೃತಿಗಾಗಿ ಉಪಯೋಗಿಸಬೇಕು. ಅವುಗಳ ಅಸ್ತಿತ್ವವನ್ನು ಅಸ್ತಿಯನ್ನು ಅಳಿದು ನೋಡಬೇಕು. ಆಗ ಅದು ಸಾರ್ಥಕ. ತನ್ನ ಕಾಲಜ್ಞಾನದ ಫಲದಿಂದ ಈ ಕೆಲಸ ಮಾಡಿದ್ದಾನೆ ಚನ್ನಬಸವಣ್ಣ.

"ಕೃತಯುಗ ಜೌತೀಸಲಕ್ಷ ಐವತ್ತಾರು ಸಾವಿರ ವರುಷದಲ್ಲಿ
ಕೇತಾರೇಶ್ವರ ದೇವರು ಪೃಥ್ವಿಗೆ ಮೂಲಸ್ಥಾನ.
ತ್ರೇತಾಯುಗ ಹದಿನೇಳು ಲಕ್ಷ ಇಪ್ಪತ್ತೆಂಟು ಸಾವಿರ ವರುಷದಲ್ಲಿ
ಸೇತುಬಂಧ ರಾಮೇಶ್ವರ ದೇವರು ಪೃಥ್ವಿಗೆ ಮೂಲಸ್ಥಾನ.
ದ್ವಾಪರಯುಗ ಎಂಟು ಲಕ್ಷ ಇರವತ್ತು ನಾಲ್ಕು ಸಾವಿರ ವರುಷದಲ್ಲಿ
ಸೌರಾಷ್ಟ್ರ ಸೋಮೇಶ್ವರ ಪೃಥ್ವಿಗೆ ಮೂಲಸ್ಥಾನ.
ಕಲಿಯುಗ ನಾಲ್ಕು ಲಕ್ಷ ಮೂವತ್ತೆರಡು ಸಾವಿರ ವರುಷದಲ್ಲಿ
ಶ್ರೀಗಿರಿ ಚನ್ನಮಲ್ಲಿಕಾರ್ಜುನದೇವರು ಪೃಥ್ವಿಗೆ ಮೂಲಸ್ಥಾನ.
ಇದುಕಾರಣ ಕೂ. ಚ. ಸಂ. ದೇವಾ ನಿಮ್ಮ ಭಕ್ತರಿಗೆ ಜಂಗಮವೇ ಮೂಲಸ್ಥಾನ ಅಂದು ಮೊದಲು ಇಂದು ಕಡೆಯಾಗಿ."

ಈ ವಚನದಲ್ಲಿ ಉಕ್ತವಾದ ನಾಲ್ಕು ಯುಗಗಳ ಕಾಲಪರಿಮಿತಿ, ಕ್ರಮವಿಡಿದು ಕೇತಾರೇಶ್ವರ, ರಾಮೇಶ್ವರ, ಸೋಮೇಶ್ವರ, ಮಲ್ಲಿಕಾರ್ಜುನದೇವರ ಹೊಂದಾವಣಿಕೆ ಇವು ಪಂಚಾಂಗ ಪುಸ್ತಕಗಳಿಂದ ಆಯ್ದವಲ್ಲ. ಸಂಘಟಿಸಿದ ಕಾಲಜ್ಞಾನದಿಂದ ಹೊರಹೊಮ್ಮಿದವು. ಇದಿರಲಿ.

ಕೊನೆಯದಾಗಿ 'ದೇವಾ ನಿಮ್ಮ ಭಕ್ತರಿಗೆ ಜಂಗಮವೇ ಮೂಲಸ್ಥಾನ ಅಂದು ಮೊದಲು ಇಂದು ಕಡೆಯಾಗಿ' ಎಂದು ಹೇಳಿದುದನ್ನು ನಾವು ಜನ್ಮಾಗಿ ಲಕ್ಷಿಸಬೇಕು. ಇದರಿಂದಲೂ ವೀರಶೈವ ಪ್ರಾಚೀನತ್ವವು ಬಲು ಸೊಗಸಾಗಿ ಚಿತ್ರಿತವಾಗಿದೆ. 'ಅಂದು ಮೊದಲು' ಅಂದರೆ ಯಾವಕಾಲ? 'ನಿಮ್ಮ ಭಕ್ತರು' ಎಂದರೆ ಯಾರು? 'ಜಂಗಮ' ಯಾರ ತತ್ವ? ಈ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವಾಗಲೆ ವೀರಶೈವ ಪ್ರಾಚೀನತ್ವವೂ ಸಹ ಅದರೊಡನೆ ಉಕ್ತವಾಗುತ್ತದೆ.

".. ...ಕೃತಯುಗದಲ್ಲಿ ಸುವರ್ಣದ ಲಿಂಗವಾದಲ್ಲಿ ನಿನ್ನ ಹೆಸರೇನು? ತ್ರೇತಾಯುಗದಲ್ಲಿ ಬೆಳ್ಳಿಯ ಲಿಂಗವಾದಲ್ಲಿ ನಿನ್ನ ಹೆಸರೇನು? ದ್ವಾಪರಯುಗದಲ್ಲಿ ತಾಮ್ರದ ಲಿಂಗವಾದಲ್ಲಿ ನಿನ್ನ ಹೆಸರೇನು? ..... ಕಲಿಯುಗದಲ್ಲಿ ಕಲ್ಲು ಲಿಂಗವಾದಲ್ಲಿ ಇಕ್ಕಿದ ಬೋನವನುಣ್ಣದೇಕೊ? ಹಿಂದೆ ನಾಲ್ಕು ಯುಗದಲ್ಲಿ, ಅಳಿದುಹೋದುದನರಿಯಿರೆ. ಇನ್ನೇಕೆ ದೇವರೆಂದು ಆಚರಿಸುವಿರೊ? ಸಾಕ್ಷಿ॥

"ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ।
ಜಂಗಮಸ್ಯೈವಮಾನೇನ ಸ್ಥಾವರಂ ನಿಷ್ಫಲಂ ಭವೇತ್॥
ಸ್ಥಾವರಾರ್ಪಿತ ನೈವೇದ್ಯಂ ನ ತೃಪ್ತಿಲಿಂಗಮೇವಚ।
ಜಂಗಮಾರ್ಪಿತ ನೈವೇದ್ಯಂ ಮಮ ತೃಪ್ತಿಂತು ಪಾರ್ವತಿ॥"

ಇದುಕಾರಣವಾಗಿ ಕೂ. ಚ. ಸಂ. ದೇವಯ್ಯ ತಪ್ಪದೆ ನಾಲ್ಕು ಯುಗದಲ್ಲಿ ಜಂಗಮವೆ ಪ್ರಾಣಲಿಂಗವಾದ ಕಾರಣ ಸ್ಥಾವರವು ಜಂಗಮ ಪ್ರಸಾದಕ್ಕೆ ಯೋಗ್ಯವಾಯಿತ್ತು."

ಕೃತಯುಗದಿಂದ ಇಂದಿನವರೆವಿಗೂ ಜಂಗಮವೇ ಘನವಾಗಿ, ಸ್ಥಾವರವಾದ ಇಷ್ಟಲಿಂಗಕ್ಕಿಂತಲೂ ಜಂಗಮವೇ ಅರ್ಪಣಕ್ಕೆ ಅರ್ಹತೆಯನ್ನು ಪಡೆದು, ನಾಲ್ಕು ಯುಗದಲ್ಲಿಯೂ ಜಂಗಮವೇ ಪ್ರಾಣಲಿಂಗವಾಗಿರುವುದನ್ನು ಸ್ಪಷ್ಟವಾಗಿ ವಿವರಿಸಿದ್ದಾನೆ. ವೀರಶೈವದ ಪ್ರಾಚೀನತ್ವಕ್ಕೆ ಇದಕ್ಕಿಂತಲೂ ನಿದರ್ಶನ ಬೇಕೆ?

ವೀರಶೈವವು ಬಸವಣ್ಣನಿಂದಲೆ ಹುಟ್ಟಿತೆಂದು ಹೇಳಲು ಹಲವರು ಹವಣಿಸುತ್ತಾರೆ. ಇದು ಸಿದ್ಧಿಗೆ ಮುಟ್ಟದ ಮಾತು. ಮೇಲ್ಕಂಡ ವಚನಗಳಿಂದ ಇದು ನೆಲೆ ನಿಲ್ಲುವುದಿಲ್ಲ. ಅಲ್ಲದೆ ಬಸವಣ್ಣನಿಂದಲೆ ಈ ಮತ ಹುಟ್ಟಿದ್ದರೆ ಇದಕ್ಕೆ "ಬಾಸವ ಮತ" ವೆಂದು ಧಾರಾಳವಾಗಿ ಹೆಸರು ಬರಬಹುದಾಗಿತ್ತು. ಬರಲು ಸಾಧ್ಯವಿತ್ತು; ಸಹಜವಿತ್ತು. ಏಕೆಂದರೆ ಇತರ ಮತಗಳು ಯಾವ ಯಾವ ವ್ಯಕ್ತಿಯಿಂದ ಜನಿಸಿವೆಯೋ ಆ ಆ ವ್ಯಕ್ತಿಗಳ ಹೆಸರುಗಳೇ ಅವಕ್ಕೆ ಪ್ರಚಲಿತವಾಗಿವೆ. ನಿದರ್ಶನಕ್ಕಾಗಿ ಬುದ್ಧನಿಂದ ಜನಿಸಿದುದು ಬೌದ್ಧಮತ. ಜಿನನಿಂದ ಜನಿಸಿದುದು ಜೈನಮತ. ಶಂಕರನಿಂದ ಸ್ಥಾಪಿತವಾದುದು ಶಾಂಕರ

ಮತ. ಮಧ್ವನಿಂದ ಬಂದುದು ಮಾಧ್ವಮತ. ರಾಮಾನುಜನಿಂದ ರಚಿತವಾದುದು ರಾಮಾನುಜಮತ. ಅಲ್ಲದೆ ಕ್ರಿಸ್ತನಿಂದ ಪ್ರತಿಪಾದಿತವಾದುದು ಕ್ರೈಸ್ತಮತ. ಮಹಮ್ಮದ ಪೈಗಂಬರನಿಂದ ಪ್ರಾರಂಭವಾದುದು ಮಹಮ್ಮದೀಯಮತ.— ಎಂಬುದಾಗಿಯೇ ವ್ಯವಹರಿಸಲಾಗುತ್ತಿವೆ. ಈ ಪ್ರಸಕ್ತಿ ವೀರಶೈವಮತಕ್ಕಿಲ್ಲ. ಇದು ಉಳಿದ ಮತಗಳಂತೆ ಯಾವೊಬ್ಬ ವ್ಯಕ್ತಿಯಿಂದ ಸ್ಥಾಪಿತವಾದುದಲ್ಲ. ಇದು ಬಹು ಪುರಾತನದ್ದು. ಕಾಲಕಾಲಕ್ಕೂ ಅನೇಕ ಮಹಾಪುರುಷರ ಕೃಪೆಗೆ ಒಳಪಟ್ಟದ್ದು. ಆದ್ದರಿಂದ ಈ ವಿಚಾರದಲ್ಲಿ— "ಬೌದ್ಧ, ಕ್ರಿಶ್ಚನ್, ಮುಸಲ್ಮಾನ್ ಧರ್ಮಗಳಂತೆ ವೀರಶೈವ ಧರ್ಮವು ಒಬ್ಬಾನೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಸ್ಥಾಪಿತವಾದುದಲ್ಲ. ಅದಕ್ಕೆ ಒಂದು ಪುರಾತನ ಪರಂಪರೆ ಇದೆ." ಎಂದು ಹೇಳುವ ಶ್ರೀಮಾನ್ ರಾ. ಬ. ಹಳಕಟ್ಟಿಯವರ ಅಭಿಪ್ರಾಯದೊಡನೆ ನಾವೂ ಏಕೀಕರಿಸುತ್ತೇವೆ.

ಹೆಸರು ಎಂದಿನದು?

ವಚನಕಾರರಲ್ಲಿ "ವೀರಶೈವ" ಶಬ್ದವನ್ನು ಹೆಚ್ಚಾಗಿ ಬಳಸಿದವರಲ್ಲಿ ಚನ್ನಬಸವೇಶ್ವರನೇ ಸದ್ಯಕ್ಕೆ ಮುಂದಾಳು. ಈಗ ಸಿಕ್ಕಿರುವ ಈತನ ವಚನಗಳಲ್ಲಿ ವೀರಶೈವ ಶಬ್ದವು ಹನ್ನೊಂದುಸಲ ಬರುತ್ತದೆ. ಅಲ್ಲದೆ ಈ ಮತಕ್ಕೆ ಶಿವಾಚಾರ, ಶಿವಭಕ್ತ, ಶಿವಜನ್ಮ, ಶಿವಜಾತಿ, ಶಿವಕುಲ, ಶಿವಧರ್ಮ, ಲಿಂಗವಂತ, ಮುಂತಾದ ಪರ್ಯಾಯ ಹೆಸರುಗಳನ್ನೂ ಹೆಸರಿಸಿದ್ದಾನೆ. ಆದರೆ ಇವೆಲ್ಲ ವಿರಳವಾಗಿವೆ.

ಈಗ್ಗೆ ಕೆಲವೆಡೆಗಳಲ್ಲಿ ವೀರಶೈವಂಗೆ ಶಿವಾಚಾರದವರೆಂದೆ ಹೆಚ್ಚು ವಾಡಿಕೆಯಾಗಿದೆ. ಇದೇ ತೆರನಾಗಿ ಆಗ್ಗೂ ಸಹ ಇದ್ದಿರಬೇಕು. ವೀರಶೈವ ಶಬ್ದವು ಹೆಚ್ಚು ವಾಡಿಕೆಯಾಗಿಲ್ಲದ ಮಾತ್ರದಿಂದ ಆಗ ಇದ್ದೇ ಇಲ್ಲೆಂದು ಹೇಳಲು ಸಾಧ್ಯವಿಲ್ಲ. ಒಟ್ಟಿನಲ್ಲಿ ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಸಂಶೋಧಗಳು ಸಾಗಬೇಕಾಗಿವೆ. ಈಗಲೆ ಈ ವಿಷಯದಲ್ಲಿ 'ಇದಮಿತ್ಥಂ' ಎಂದು ನಿರ್ಧರಿಸಿ ಹೇಳಲು ಸಾಧ್ಯವಿಲ್ಲದಾಗಿದೆ.

ವಚನಗಳು ಮುನ್ನಿನವು.

ವಚನವಾಙ್ಮಯದ ಉಗಮವು ೧೨ನೆಯ ಶತಮಾನವೆಂದು ಕೆಲವರ ಅಭಿಪ್ರಾಯವಿದೆ. ಶಿವಶರಣರ ವಚನಗಳ ಅಭ್ಯಾಸ ಮಾಡಿದಲ್ಲಿ ಆ ಅಭಿಪ್ರಾಯವು ನಿಲ್ಲುವದಿಲ್ಲ. ವಚನ ರಚನೆಯು ಬಹು ಪೂರ್ವದಿಂದಲೂ ಬಂದಂತೆ ವ್ಯಕ್ತವಾಗುತ್ತದೆ; ಚನ್ನಬಸವಣ್ಣನ ಈ ವಚನಗಳಲ್ಲಿಯೂ ಇದೇ ಅಭಿಪ್ರಾಯ ಅಭಿವ್ಯಕ್ತವಾಗುತ್ತದೆ.

"ಮುನ್ನಿನ ಆದ್ಯರ ವಚನವ ನೋಡಿರೋ! ಲಿಂಗದ ನಡೆ, ಲಿಂಗದ ನುಡಿ, ಜಂಗಮದ ನಡೆ, ಜಂಗಮದ ನುಡಿ, ಪ್ರಸಾದದ ನಡೆ, ಪ್ರಸಾದದ ನುಡಿ ಇದಕ್ಕೆ ಶ್ರುತಿಯ ತೋರಿ ನುಡಿವರು. ಅದಲ್ಲದೆ ದೃಷ್ಟವ ತೋರಿ ನಡೆವರು. ವೇದವೆಂಬುದು ಓದಿ ಹೇಳುವ ಮಾತು. ಶ್ರುತಿ ಪುರಾಣಾಗಮುಂಗಳಾರಿಂದೊಡಾದವು? ಇದ ಬಲ್ಲೆವೆಂದು ನಮ್ಮ ಪುರಾತರ ವಚನಕ್ಕೆ ಸರಿಯಾಗಿ ಅನುಭಾವವ ಮಾಡುವೆನೆಂಬ ಕರ್ಮಕಾಂಡಿಗಳಿಗೆ ನಾನೇನೆಂಬೆನಯ್ಯ?....."

"ಹೊರವೇಷದಲಿ ವಿಭೂತಿ ರುದ್ರಾಕ್ಷಿಯ ನಳವಡಿಸಿಕೊಂಡು ವೇದ ಶಾಸ್ತ್ರ ಪುರಾಣಾಗಮ ಮೊದಲಾಗಿ ಪುರಾತರ ವಚನ ಬಹು ಪಾಠಕರು ಎನಿಸಿಕೊಂಡು....."

ಈ ವಚನಗಳಲ್ಲಿ ಬರುವ 'ಮುನ್ನಿನ ಆದ್ಯರ ವಚನ' 'ಪುರಾತರ ವಚನ' ಎಂಬ ಪದಗಳನ್ನು ನಿರೀಕ್ಷಿಸಬೇಕು. ಇವುಗಳಿಂದ ವಚನಗಳ ಉಗಮವು ಬಹು ಪುರಾತನದ್ದೆಂದು ತೋರುತ್ತದೆ. ಈಗ ಸಿಕ್ಕಿರುವ ವಚನಗಳಲ್ಲಿ ೧೧ನೇ ಶತಮಾನದ ದೇವರದಾಸಿಮಯ್ಯನ ವಚನಗಳೇ ಮುಂದಿನವು. ಅವಕ್ಕೆ ಮುಂದಿನ ವಚನಗಳು ಸಿಕ್ಕದಿರುವುದು ವೀರಶೈವರ ದುರಾದೃಷ್ಟ.

ಈ ಲಿಂಗೈಕ್ಯರು ಮುನ್ನಿನವರಲ್ಲವೆ?

".....ಅನರ್ಪಿತನನುಂಡು ಅಚ್ಚಪ್ರಸಾದಿಗಳೆನಿಸುವರ ನೋಡಿ, ಮಹಾಲಿಂಗೈಕ್ಯರುಗಳು ಮೆಚ್ಚುವರೊ....." (ಪು-೫೮, ವ-೫)

"……ಅಪ್ಪಿನ ಘಟವ ಹೊತ್ತುಕೊಂಡು ಸುಳಿವ ಜಗದೊಳಗೆ ಅರೆಬಿಂದು ನಿರಾಳದಲ್ಲಿ ನೆನೆವ ಭೇದವನಾರು ಬಲ್ಲರೋ? ನಮ್ಮ ಕೂ. ಚ. ಸಂ. ನಲ್ಲಿ ಲಿಂಗೈಕ್ಯರನು ಲಿಂಗೈಕ್ಯರೇ ಬಲ್ಲರು."

(ಪು. ೬೬, ವ–೭)

ಈ ವಚನಗಳಲ್ಲಿ ತೋರುವ ಲಿಂಗೈಕ್ಯರು ಯಾರೇ ಇರಲಿ ಅವರು ಮುನ್ನಿನವರು; ವೀರಶೈವರು. ೧೨ನೆಯ ಶತಮಾನದ ಹಿಂದೆ ವೀರಶೈವರೆ ಇರಲಿಲ್ಲೆಂದು ಹೇಳುವರು ಚನ್ನಬಸವಣ್ಣನು ಹೇಳಿರುವ ಲಿಂಗೈಕ್ಯರು - ಮಹಾಲಿಂಗೈಕ್ಯರು, ಎಂಬೀ ಪ್ರಯೋಗಗಳನ್ನು ಪರಿಶೀಲಿಸಬೇಕು.

—ಮುಂಬಪ್ಪುದು.

ಧರ್ಮದ ಕ್ರಿಯಾಚರಣೆಯ ಮಹತ್ವ.

(ಲೇಖಕ:—ಶ್ರೀಯುತ ವ್ಹಿ. ವಿ. ಬ್ಯಾಹಟ್ಟಿ–ಬಿ. ಎ. ಬಿ. ಟಿ. ಬಾಗಲಕೋಟ.)

ವೇದಾಂತಿಗಳು ತತ್ ತ್ವಂ ಅಸಿ ಮಹಾವಾಕ್ಯಕ್ಕೆ ಅರ್ಥವಾದ ಶಿವಜೀವೈಕ್ಯ ಜ್ಞಾನವೇ ಮುಕ್ತಿಗೆ ಮಾರ್ಗವೆನ್ನುವರು. ಆದರೆ ಶಿವ ಶರಣರು ಮಾತ್ರ ಇಂಥ ಜ್ಞಾನವು ಮುಕ್ತಿಗೆ ಅವಶ್ಯವಿದ್ದಾಗ್ಯೂ ಜ್ಞಾನದ ಪರಿಣಾಮವಾದ ಶಿವಾನುಭವವು ಸಾಕ್ಷಾತ್ಕಾರದಂತೆ ಮಿಂಚಿ ಮರೆಯಾಗದೆ ಅಂಗಕ್ಕೆ ಅಳವಟ್ಟು ವೈಸಿರಿಯಾಗಲಿಕ್ಕೆ—ಶೀಲವಾಗಲಿಕ್ಕೆ, ಕ್ರಿಯಾಚರಣೆಯ ಆಶ್ರಯವು ಅವಶ್ಯವಾಗಿ ಬೇಕೆನ್ನುವರು. ಅಂಗದ ಅಹಂಕಾರ ಕಳೆದು ಲಿಂಗ ಸಾವರಸ್ಯದೊರಕೊಳ್ಳಲು ಕ್ರಿಯಾಚರಣೆಯು ಬಹು ಸಹಕಾರಿಯಾದುದು. ಇದಕ್ಕೂ ಮುಂದೆ ಹೋಗಿ ಶಿವಶರಣರು ಅನ್ನುವದೇನೆಂದರೆ ನಿಷ್ಠೆಯು ಕ್ರಿಯಾಚರಣೆಯು ಜ್ಞಾನದ-ಮುಕ್ತಿಯ ಆಶ್ರಯವಿರವದಲ್ಲಿದೆ. ಕ್ರಿಯಾಚರಣೆಯಲ್ಲಿಯೇ ಮುಕ್ತಿಯ ಪರಮಾನಂದ ಸಂಭ್ರಮ ಸಂಪತ್ತುಂಟು. ಕ್ರಿಯಾಚರಣೆ ಅಂದರೇನೇ ಮುಕ್ತಿಯ ಸುಖ,

ಮುಕ್ತಿಯ ಸುಖವೆಂದರೆ ಕ್ರಿಯಾಚರಣೆಯೇ. ಕ್ರಿಯಾಚರಣೆಯ ಸಂಭ್ರಮದ ಸಂಪತ್ತನ್ನು ಬಿಟ್ಟು ಮುಕ್ತಿಯ ಸುಖ ಬೇರಿಲ್ಲ. ಕ್ರಿಯಾಚರಣೆಯ ಕ್ರಮವೆಂದರೆ ಲಿಂಗಾಂಗ ಸಾಮರಸ್ಯದ ಜ್ಞಾನವನ್ನು—ಶಿವಜೀವೈಕ್ಯದ ಜ್ಞಾನವನ್ನು ಶಿವಾನಂದದ ಅನುಭವವನ್ನು—" ತತ್ ತ್ವಂ ಅಸಿ " ಮಹಾವಾಕ್ಯಾರ್ಥವನ್ನು ಕೇವಲ ವಿಚಾರದಿಂದ, ವಿವೇಕದಿಂದ ತರ್ಕದಿಂದ ಬುದ್ಧಿಗೆ ಮಾತ್ರ ಸಮ್ಮತವಾಗುವಂತೆ ಹೇಳದೆ ಪಂಚ ಆಚಾರ ಪಾಲನೆ ಅಷ್ಟಾವರಣ ಸಹಿತ ಕ್ರಿಯಾಚರಣೆ ಪಂಚಾಕ್ಷರಿ ಮಂತ್ರ ಸಹಿತವಾದ ಪೂಜೆ ಪಾದೋದಕ ಸ್ವೀಕಾರ (ಜ್ಞಾನದಿಂದ ಸ್ವೀಕರಿಸಿದ್ದು ಜ್ಞಾನೋದಕವಾಗುವದು) ಷಟ್‌ಸ್ಥಲ ಆರೋಹಣದ ಅನುಭವ ಇವುಗಳನ್ನು ಮಾಡಿ ಚಿಲ್ಲಿಂಗ ಜ್ಯೋತಿರ್ಲಿಂಗದ ಪ್ರಕಟತೆಗೆ ಶಿವಾನಂದದ ಅವಿರ್ಭಾವಕ್ಕೆ ಅಣವಮಲ ಮಾಯಾಮಲ ಕಾರ್ಮಿಕಮಲ ಪರಿಹಾರದ್ವಾರಾ ತನು ಮನ ಭಾವಗಳನ್ನು ಪ್ರಸನ್ನಗೊಳಿಸುವದಕ್ಕೆ ಸಾಕಷ್ಟು ವಿಚಾರದಿಂದ ಯೋಜಿಸಿದ ಭಕ್ತಿ ಧ್ಯಾನ ಕ್ರಿಯಾ ಮಾರ್ಗವು. ಧರ್ಮದ ಕ್ರಿಯಾಚರಣೆಯನ್ನು ಇನ್ನೊಂದು ವಿಧವಾಗಿ ಹೇಳುವದಾದರೆ ಒಕ್ಕಲಿಗನು ತನ್ನ ಭೂಮಿಯನ್ನು ಬೀಜದ ಬೆಳೆಗೆ ಹಸನಮಾಡಿ ಹದಗೊಳಿಸುವಂತೆ ಭಕ್ತನು ತನ್ನ ತನು ಮನ ಭಾವಗಳನ್ನು ನಿರ್ಮಲಗೊಳಿಸಿ ಜ್ಞಾನೋದಯಕ್ಕೆ—ಶಿವಾನುಭವಕ್ಕೆ, ಶುದ್ಧ ಆನಂದದ ಅವಿರ್ಭಾವಕ್ಕೆ ಹದಗೊಳಿಸುವ ನಿತ್ಯ ಆಚರಿಸುವ ಕ್ರಿಯೆಯ ಕ್ರಮವು, ರೀತಿಯು—ವಿಧಾನವು. ಅದಕ್ಕೋಸ್ಕರವೇ ಲಿಂಗಾರ್ಚನೆಯ, ಆರಂಭದ, ಸಂಕಲ್ಪದಲ್ಲಿ " ಇಷ್ಟ-ಪ್ರಾಣ-ಭಾವಲಿಂಗ ಪೂಜಯಾ-ತನುತ್ರಯ ಶುದ್ಧಿದ್ವಾರಾ ಗುರು-ಲಿಂಗ ಜಂಗಮ ಪ್ರಸಾದ ಸಿದ್ಧ್ಯರ್ಥಂ ಅಹಂ ಯಥಾಶಕ್ತಿ ಶಿವ ಲಿಂಗ ಪೂಜಾಂ ಕರಿಷ್ಯೆ—" ಎಂಬ ವಿಧಾನವುಂಟು. ಹೀಗೆ ಇಷ್ಟಪ್ರಾಣ ಭಾವಲಿಂಗ ಪೂಜೆ—ಅನುಸಂಧಾನದಿಂದ ಸ್ಥೂಲ, ಸೂಕ್ಷ್ಮ, ಕಾರಣ ತನುಗಳ ಶುದ್ಧಿಯುಂಟಾಗಿ ನಾಂಸಮಯ ಶರೀರವಳಿದು ಮಂತ್ರಮಯ ಶರೀರವಾಗಿ ಕಾಯಗುಣವಳಿದುದೇ ಗುರುವು. ಜೀವಗುಣವಳಿದುದೇ ಲಿಂಗ. ಪ್ರಾಣಗುಣವಳಿದುದೇ ಜಂಗಮವು. ಹೀಗೆ ಉತ್ತರೋತ್ತರ ಆಂತರ್ಯವಾದ ಸ್ಥಿರವಾದ ಗುರುಲಿಂಗ ಜಂಗಮ ಸ್ವರೂಪದ ಶಿವಾನುಭವವು ಅಂಗಕ್ಕೆ ಅಳವಡುವುದು. ತನು ಮಧ್ಯದಲ್ಲಿ ಗುಹೇಶ್ವರನೆಂಬ ಚಿಲ್ಲಿಂಗ-ಜ್ಯೋತಿರ್ಲಿಂಗದ ಸೋಂಕಿನಿಂದ ತನು ಮನ ಭಾವಗಳು ಕ್ರಮ

ವಾಗಿ ಮಹಾತನು, ಘನಮನ, ನಿರ್ಭಾವಗಳಾಗಿ ಒಬ್ಬ ಅಂಗನೇ ಕ್ರಮೇಣ ಅನುಸಂಧಾನವು ಬಲಿತಂತೆ-ಅನಂದವು ಹಚ್ಚು ಸ್ಫುಟವಾದಂತೆ ಗುರು ಲಿಂಗ ಜಂಗಮ ಸ್ವರೂಪಾನಂದಮಯನಾಗುವನು. ಹೀಗೆ ಗುರು ಲಿಂಗ ಜಂಗಮ ತತ್ವವು ತನು ಮನ ಭಾವಗಳನ್ನು ಬಯಲುಗೊಳಿಸಿದ ಶುದ್ಧವಾದ ಪಾರಮಾರ್ಥಿಕ ಶಿವಾನುಭವದ ಆನಂದವು. ಅಂದ ಮೇಲೆ ಇಷ್ಟಲಿಂಗ ಅನುಸಂಧಾನ ಮಾಡುವಾತನು ಭಕ್ತನು. ಪ್ರಾಣಲಿಂಗಾನು ಸಂಧಾನ ಮಾಡುವಾತನು ಗುರುವು. ಭಾವಲಿಂಗಾನು ಸಂಧಾನಗೈಯುವವನು ಜಂಗಮನು. ಈ ಪ್ರಕಾರ ಇಷ್ಟ, ಪ್ರಾಣ, ಭಾವಲಿಂಗ ಅನುಸಂಧಾನದಿಂದ ಯಾವನೇ ಆಗಲಿ ಕ್ರಮವಂದ ಭಕ್ತ ಗುರು ಜಂಗಮಸ್ವರೂಪವನ್ನು ಸ್ಥಿತಿಯನ್ನು—ಅನುಭವವನ್ನು ಪಡೆಯುವನು. ಆದರೆ ಆ ಸ್ಥಿತಿಯನ್ನು ಪಡೆಯಲಿಕ್ಕೆ ಅದನ್ನು ಅನುಭವಿಸಿದಂಥ ಶಿವಶರಣರ ಶಿವಯೋಗಿಗಳ—ಗುರುಜಂಗಮರ, ಸಹಾಯವು ಬೇಕು. ಅದ್ದರಿಂದ ಗುರು ಜಂಗಮರು ಅಚ್ಚ ಶಿವಾನುಭವಿಗಳಿರುವುದು ಅವಶ್ಯ. ಇಷ್ಟೇ ಅಲ್ಲ ಯೋಗ್ಯತೆ ಪಡೆದ ಪ್ರಾಣ ಭಾವಲಿಂಗಾನು ಸಂಧಾನಿಗಳಾದ ಗುರು ಜಂಗಮರು ತಾವು ಅನುಭವಿಸುತ್ತಿರುವ ಶಿವಾನಂದವನ್ನು ಪ್ರಾಣ ಭಾವಲಿಂಗಗಳ ಸಕೀಲವನ್ನು ಉತ್ಕಟೇಚ್ಛೆಯುಳ್ಳಂಥ ಇಷ್ಟ ಲಿಂಗಾನು ಸಂಧಾನಿಗಳಿಗೆ ನಿರ್ವಂಚನೆಯಿಂದ, ಅನುಗ್ರಹಪೂರ್ವಕ ತಿಳಿಸಿಕೊಡುವ ಶಕ್ತಿಯುಳ್ಳವರು, ಅನುಭವಿಗಳು ಇರುವದು ಅತ್ಯಾವಶ್ಯವಿದ್ದು ಅವರು ವರ್ಗಗಳ ತಾರತಮ್ಯವನ್ನು ಎಣಿಸದೆ ತಮ್ಮ ಅನುಭವವನ್ನು ಒಚ್ಚಿಡದೆ ಅನುಗ್ರಹಿಸಬೇಕು-ಬೀರಬೇಕು—ಹೂರಬೇಕು. ಅದರಿಂದ ಶಿವಾನುಭವಿಗಳ ಸಂಖ್ಯೆಬೆಳೆದು ಸಮಾಜದ ಜ್ಞಾನಬಲವು ಹೆಚ್ಚುವದು. ಶಿವಾನುಭವದ ಬಲವು ಅಂತರ್ಮುಖವಾಗುವ ಬಲವು ಹಂಬಲವು ವಿಶಿಷ್ಟ ವರ್ಗದ ವ್ಯಕ್ತಿಗಳಿಗೇ ಹುಟ್ಟುತ್ತದೆ, ಮತ್ತೊಂದು ವರ್ಗದ ವ್ಯಕ್ತಿಗಳಲ್ಲಿ ಹುಟ್ಟಲಾರದೆಂದು ಯಾರಿಗೂ ಹೇಳಲು ಸಾಧ್ಯವಿಲ್ಲ. ಶಿವಾನುಭವಕ್ಕೆ ಹಂಬಲಿಸಿದ ವ್ಯಕ್ತಿಗಳು, ಯಾವ ಬೇಕಾದ ವರ್ಗದಲ್ಲಿ, ಕಾಯಕದವರಲ್ಲಿ ವರ್ಣದವರಲ್ಲಿ ಕಂಡು ಬಂದ ಉದಾಹರಣೆಗಳು ಅನೇಕುಂಟು. ಭಿನ್ನ ಭಿನ್ನ ಕಾಯಕದ ಶಿವಶರಣರ—ಹರದಾಸರ ಹೆಸರುಗಳನ್ನು ಉದಹರಿಸಬಹುದು. ಅದ್ದರಿಂದ ಈಗಿದ್ದಂತೆ ಕೇವಲ ಮೂಢ ಭಕ್ತಿಯನ್ನೇ ಬೆಳೆಸುತ್ತ ಹೋಗದೆ ಶಿವಾನುಭವವನ್ನು

ಪ್ರಾಣ—ಭಾವ ಲಿಂಗಾನುಷ್ಠಾನವನ್ನು ಗೌಣ್ಯವಾಗಿ ಬಚ್ಚಿಡದೆ ಪಾರಮಾರ್ಥದ ಹಸಿವೆಯಿಂದ ಹಂಬಲಿಸುವಂಥವರಿಗೆಲ್ಲ ಬಿಚ್ಚು ಹೃದಯದಿಂದ ತಿಳಿಸಿಕೊಡುವ ಸಮಾಜ ಸೇವೆಗೈಯ್ದರೆ ತಮ್ಮ ಶಿವಾನುಭವವೂ ಉಕ್ಕೇರುತ್ತ ವೃದ್ಧಿಯಾಗುವದು. ಮತ್ತು ಸಮಾಜದ ಜನರು ಜ್ಞಾನಯುಕ್ತ ಕ್ರಿಯೆಯನ್ನು ಆಚರಿಸಿ ಶಿವಜ್ಞಾನಿಗಳಾಗುವರು. ಸಮಾಜಕ್ಕೆ ಇದಕ್ಕಿಂತಲೂ ಹೆಚ್ಚಿನ ಲಾಭವಾವುದು? ವಿಚಾರ ಪ್ರಧಾನ ಬುದ್ಧಿಪ್ರಧಾನವಾದ ಈ ಇಪ್ಪತ್ತನೆಯ ಶತಮಾನದಲ್ಲಿ ಕೇವಲ ಶ್ರದ್ಧೆ ಮಾತ್ರದಿಂದ ಆಚರಿಸುವ ಇಷ್ಟಲಿಂಗ ಪೂಜೆಯಿಂದ ಆರಂಭಿಸಿ ಅದರಲ್ಲಿಯೇ ಮುಗಿಸುವ ಅಂಧಭಕ್ತಿಯ ಧರ್ಮವನ್ನು ಆಚರಿಸಲು ಮಾತ್ರ ಹೇಳುತ್ತ ನಡೆದರೆ ಕೇವಲ ಪುರಾಣ ಕಥೆಗಳನ್ನು ಮಾತ್ರ ಕೀರ್ತನದ್ವಾರಾ ಹೇಳಿದರೆ ಹೆಬ್ಬಟ್ಟಿನ ಗುರ್ತು ಮಾಡುವವರು ಮಾತ್ರ ಅಡ್ಡ ಉದ್ದ ಬಿದ್ದು ಜಗಲಿಯ ಮೇಲೆಯೋ ನೆಲುವಿಗೋ ಲಿಂಗವನ್ನು ಇಟ್ಟು ತಮ್ಮ ಕಾಯಕದಲ್ಲಿ ತೊಡಗುವರು. ಇಂಗ್ಲೀಷ ವಿದ್ಯಾಭ್ಯಾಸಿಗಳು ಗುರುಗಳ ಸಮೀಪ ಸಹ ಹಾಯದೆ ಟ್ರಂಕುಗಳಲ್ಲಿ ತಮ್ಮ ಗುಂಡುಗಡಿಗೆಗಳನ್ನು ಇಟ್ಟು ತಮ್ಮ ವಿದ್ಯಾಭ್ಯಾಸದಲ್ಲಿ ತೊಡಗುವರು. ಇದರಿಂದ ಧರ್ಮದ ಕ್ರಿಯಾಚರಣೆಯು ಬುದ್ಧಿಗೆ ಪ್ರಾಬಲ್ಯವುಳ್ಳ ಈ ಕಾಲದಲ್ಲಿ ಬಹುಜನ ಸಮಾಜಕ್ಕೆ ಒಗ್ಗದೆ ಅವರನ್ನು ಆಕರ್ಷಿಸದೆ ಅವರ ಮೇಲೆ ಯಾವದೊಂದೂ ಒಳ್ಳೇ ಪರಿಣಾಮವನ್ನುಂಟುಮಾಡದೆ ಅವರ ಅನಾದರಕ್ಕೆ ತಿರಸ್ಕಾರಕ್ಕೆ ಕಾರಣವಾಗುವದು. ಹೀಗಾಗಲು ಈಗಿನ ತರುಣರು ವಿದ್ಯಾವಂತರು ಬಲು ಅನಾಚಾರಿಗಳು ಅಧರ್ಮಿಗಳು ಎಂದು ಹೆಳೆಯುತ್ತ ಕೂಡ್ರಬೇಕಾಗುವದು.

ತದ್ವಿರುದ್ಧವಾಗಿ ಪ್ರಾಣ ಭಾವಲಿಂಗಗಳ ಸ್ವರೂಪವನ್ನೂ ಅವುಗಳ ವಿಚಾರವನ್ನೂ ಅನುಸಂಧಾನವನ್ನೂ ಅದರಿಂದುಂಟಾಗುವ ಘನಮನ, ನಿರ್ಭಾವಗಳ ಅಪೂರ್ವಮಯ ಸ್ಥಿತಿಯನ್ನೂ, ಶುದ್ಧ ಸ್ವತಂತ್ರ ಶಾಶ್ವತವಾದ ಶಿವಾನುಭವದ ಅಭಿರುಚಿಯನ್ನೂ ಉಂಟುಮಾಡಲಿಕ್ಕೆ ವಚನ ಶಾಸ್ತ್ರ ಮತ್ತು ಅದರಲ್ಲಿರುವ ನೂರೊಂದು ಸ್ಥಲಗಳ ವಿಚಾರವನ್ನು ತಿಳಿಸಿಕೊಡಲು ಪ್ರಯತ್ನ ಮಾಡುವದರಿಂದ ಧರ್ಮದ ಇಂಗಿತ, ಮರ್ಮ-ಮಹತ್ವ ನಿರತಿಶಯ ಲಾಭಗಳು ತಿಳಿದು ಧರ್ಮದ ಕ್ರಿಯಾಚರಣೆಯನ್ನು ತಿಳುವಳಿಕೆಯಿಂದ ನಂಬಿ ಆಚರಿಸಿ ಆನಂದ ಪಡೆದು ಶಿವ

ಜ್ಞಾನಿಗಳಾಗುವ ಸಂಭವ ಹೆಚ್ಚುಂಟು. ಕೆಲವು ವ್ಯಕ್ತಿಗಳು ತಪ್ಪಿ ನಡೆದರೆ ಅದರಿಂದೇನೂ ಘಾತವಾಗಲಾರದು. ಸ್ತ್ರೀ ಶಿಕ್ಷಣ ಕೊಡುವದರಿಂದ ಕೆಲವರು ಅದರ ದುರುಪಯೋಗ ಮಾಡಿಕೊಳ್ಳಬಹುದು. ಆದರೆ ಬಹುಜನ ಸ್ತ್ರೀಯರು ವಿದ್ಯಾವಂತರಾಗಿ ಉತ್ತಮ ಗೃಹಿಣಿಗಳಾದರೆ ಸಮಾಜಕ್ಕೆ ಎಷ್ಟು ಲಾಭವಾಗಬಹುದು!! ಅದರಂತೆ ಸಮಾಜದ ಬಹುಜನರು ನಿಜವಾದ ಧರ್ಮದ ಜ್ಞಾನವನ್ನು ಪಡೆದು ಕ್ರಿಯಾಚರಣೆಯನ್ನು ಮಾಡುವ ಅಭಿರುಚಿಯುಳ್ಳವರಾದರೆ ಸಮಾಜದ ಉದ್ಧಾರವಾಗುವದಿಲ್ಲವೇ! ಅದ್ದರಿಂದ ಶಿವಾನುಭವಿಗಳು-ಶಿವಶರಣರು-ಪ್ರಾಣ ಭಾವಲಿಂಗಾನು ಸಂಧಾನಿಗಳು ನಿಸ್ವಾರ್ಥಬುದ್ಧಿಯಿಂದ ವರ್ಗಗಳಿಗೆ ಮಹತ್ವಕೊಡದೆ ಅವು ಕಾಲಮಾನಕ್ಕೆ ಸರಿಯಾಗಿ ಕಲ್ಪಿಸಲ್ಪಟ್ಟವುಗಳೆಂದು ತಿಳಿದು ಧರ್ಮದ ಜಿಜ್ಞಾಸೆಯುಳ್ಳವರಿಗೆಲ್ಲ, ಪಾರಮಾರ್ಥಿಕ ಸಾಧನವಾಡಬೇಕೆಂಬ ಕುತೂಹಲವುಳ್ಳವರಿಗೆಲ್ಲ ಧರ್ಮದ ತಿರುಳನ್ನು ಅದರಿಂದುಂಟಾಗುವ ನಿರತಿಶಯಾನಂದ ಪ್ರಾಪ್ತಿಯನ್ನು ತಿಳಿಸಿ ಧರ್ಮದ ಕ್ರಿಯೆಯನ್ನು ಆಚರಿಸಲು ಅಭಿರುಚಿ ಹುಟ್ಟಿಸಬೇಕು. ಹೀಗೆ ಕಾಲಕ್ಕೆ ಸರಿಯಾಗಿ ಧರ್ಮದ ಕ್ರಿಯೆಯ ಹಿನ್ನೆಲೆಯಾದ ಜ್ಞಾನದ ಬೆಂಬಲವನ್ನು ತೆಗೆದುಕೊಳ್ಳದ ಹೊರ್ತು ಧರ್ಮವು ಗೊಡ್ಡು ವೇದಾಂತ ಮಡ್ಡಿ ಸಿದ್ಧಾಂತವೆನಿಸದಿರಲಾರದು. ಗುರು ಜಂಗಮರು ಸ್ವಾರ್ಥದ ಮೂಲಕ ಹಳೇ ವಿಚಾರಗಳಿಗೆ ಅಂಟಿಕೊಂಡು, ಸಮಾಜದ ಸೇವೆ ಎಂದು ಧರ್ಮದ ತತ್ವಗಳನ್ನು ತಿಳಿಸಿಕೊಡುವ ಕಾರ್ಯವನ್ನು ಕೈಕೊಳ್ಳಲು ಮುಂದುವರಿಯಲಿಕ್ಕಿಲ್ಲ. ಅದ್ದರಿಂದ ಶಿವಾನುಭವವುಳ್ಳ ಭಕ್ತರೇ ಸಮಾಜದ ಹಿತದೃಷ್ಟಿಯಿಂದ ಇಂಥ ಧರ್ಮದ ಕಾರ್ಯವನ್ನು ಶಿವಾನುಭವ ಸಂಘಗಳನ್ನು ಊರೂರಿಂಗೆ ಸ್ಥಾಪಿಸಿ ಕೈಕೊಳ್ಳಲು ಮುಂದೆ ಬಂದು ಸಮಾಜದ ಅಭಿನಂದನೆಗಳಿಗೆ ಪಾತ್ರರಾಗಿ ಧನ್ಯರಾಗಬೇಕು. ಈ ವಿಜ್ಞಾನಯುಗವಾದ ಇಪ್ಪತ್ತನೆಯ ಶತಮಾನದಲ್ಲಿ, ಜ್ಞಾನ ಮಾರ್ಗವು ಕಠಿಣ. ಅದ್ದರಿಂದ ಯಾಕೆ ಮಾಡಬೇಕೆಂಬದನ್ನು ತಿಳಿಯದೆ ಧರ್ಮದ ಕ್ರಿಯಾಚರಣೆಯನ್ನು ಮಾಡುತ್ತ ಹೋಗಿರೆಂದು ಮೂಢ ಭಕ್ತಿಯನ್ನು ಕಲಿಸಿದರೆ ಯಾವ ಫಲವೂ ದೊರೆಯುವದಿಲ್ಲ.

ಸುಖದ ಬೀಡು.

(ಬರೆದವರು—ಶ್ರೀಮತಿ ಸಿದ್ಧಲಿಂಗವ್ವ ಅಡಿಗಿ ಮು. ಗೋಕಾಕ.)

ಮನುಷ್ಯನು ಸುಖದಲ್ಲಿರುವನೋ ದುಃಖದಲ್ಲಿರುವನೋ ಎಂಬದು ಅತನ ಮೋರೆಯ ಮೇಲಿಂದಲೇ ಗೊತ್ತಾಗುವದು. ಮೋರೆಯು ಮನೋವಿಕಾರಗಳನ್ನು ಹೊರಗೆಡಹುವ ಆದರ್ಶ. ಅದ್ದರಿಂದ ಅದನ್ನು ಕಂಡ ಬಳಿಕ ಪ್ರತ್ಯಕ್ಷ ಹೇಳಕೇಳುವ ಅವಶ್ಯಕತೆಯಿರುವದಿಲ್ಲ. ಆದರೂ ಕೆಲವರು ಅಭ್ಯಾಸಬಲದಿಂದ ತಮ್ಮ ಭಾವಗಳನ್ನು ಹೊರಗೆ ತೋರಗೊಡದಷ್ಟು ಮಾನಸಿಕ ಸಾಮರ್ಥ್ಯವನ್ನು ಪಡೆದಿರುವರು. ಅಂಥವರು ಸುಖದಲ್ಲಿರುವರೋ ದುಃಖದಲ್ಲಿರುವರೋ ಎಂಬದನ್ನು ಗೊತ್ತುಪಡಿಸಬೇಕಾದರೆ ಈ ಮುಖಮುದ್ರೆಯು ಸಹಾಯಕಾರಿಯಾಗದು. ಅಂಥವರ ಮುಖದ ಮೇಲಿನ ಪ್ರಸನ್ನತೆಯು ನಿಜವಾದ ಪ್ರಸನ್ನತೆಯಲ್ಲ. ಮನುಷ್ಯನು ಸ್ವಭಾವತಃ ಪ್ರಸನ್ನನಿರಬಯಸುವನು. ಈ ಪ್ರಸನ್ನತೆಯೇ ಸುಖದ ಬಾಹ್ಯ ಲಕ್ಷಣವು. ಆದರೆ ನಿಜವಾದ ಸುಖವು ಯಾವದೆಂಬದರ ಅರಿವು ಅತನಿಗಿರದ ಮೂಲಕ ಸುಖಕ್ಕೆ ವಿರುದ್ಧವಿರುವ ಸಂಗತಿಗಳನ್ನು ಬಯಸಿ ದುಃಖಕ್ಕೆ ಆಸರವನ್ನೀಯುವನು.

ವಿಶಿಷ್ಟ ವಸ್ತುವಿನ ಪ್ರಾಪ್ತಿಯಿಂದ ವಿಶಿಷ್ಟೇಂದ್ರಿಯವು ಕೆಲವು ಹೊತ್ತು ಸುಖಪಡುವದು; ಆ ವಸ್ತುವು ದೊರೆಯದಿದ್ದರೆ ಇಂದ್ರಿಯವು ದುಃಖಗೊಳ್ಳುವದು. ಈ ಇಂದ್ರಿಯವನ್ನು ತುಷ್ಟಿಗೊಳಿಸುವ ವಸ್ತುಪ್ರಾಪ್ತಿಯೇ ಸುಖವೆಂದೂ, ಅದು ದೊರೆಯದಿದ್ದರೆ ಇಲ್ಲವೆ ದೊರೆತು ನಷ್ಟವಾದರೆ ದುಃಖವೆಂದೂ ಮಾನವನು ತಿಳಕೊಳ್ಳುವನು. ಅಲ್ಪಕಾಲ ಸುಖಗೊಡುವ ವಸ್ತುವಾಗಲಿ, ಸಂಗತಿಯಾಗಲಿ, ನಿಜವಾಗಿ ಸುಖದಾಯಕವಿರುವದಿಲ್ಲ. ಅದೊಂದು ಟೊಳ್ಳುಗತನ (ಇಂದ್ರಜಾಲ). ಈ ಅತ್ಯಲ್ಪ ಸುಖಾಭಿಲಾಷೆಯಿಂದ ಮನುಷ್ಯಜೀವನದ ಸೌಂದರ್ಯವೇ ನಷ್ಟವಾಗಿ ಹೋಗಿದೆ. ಇದರ ಬೆನ್ನುಹತ್ತುವದನ್ನು ಬಿಟ್ಟರೆಯೇ ಮನುಷ್ಯನು ನಿಜವಾದ ಸುಖ ಪ್ರಾಪ್ತಿ ಮಾಡಿಕೊಳ್ಳುವದು ಸತ್ಯವು.

ಸಂಸಾರದೊಳಗಿನ ವಸ್ತುಗಳಲ್ಲಿ ಸುಖವನ್ನೀಯುವ ಸಾಮರ್ಥ್ಯ ವಿದೆಯೆಂದು ತಿಳಿಯುವದು ಅಜ್ಞಾನವು. ನಿಜವಾದ ಸುಖಸಾಮರ್ಥ್ಯವು ಆ ಪದಾರ್ಥಗಳಲ್ಲಿಲ್ಲ; ಮನುಷ್ಯನ ಮನಸ್ಸಿನಲ್ಲಿದೆ. ಈ ಶಕ್ತಿಯೆಂದರೆ ಮನಸ್ಸಿನ ನಿರ್ಮಲತೆ. ಮನಸ್ಸು ಶುದ್ಧವಾದ ಹೊರತು ಬೇಕಾದಷ್ಟು ಪ್ರಯತ್ನಿಸಿದರೂ ಸುಖವು ಲಭಿಸಲಾರದು. ಇಂತಹದೊಂದು ಒಡಮೆಯಲ್ಲಿ ಸುಖಬಡಿಸುವ ಸಾಮರ್ಥ್ಯವಿದೆಯೆಂಬ ತಪ್ಪು ತಿಳುವಳಿಕೆಗೆ ಮನುಷ್ಯನು ಅಧೀನನಾದನೆಂದರೆ ಅವನು ದುಃಖ ಪರಂಪರೆಯಲ್ಲಿ ಮುಳುಗಿದನೆಂದೇ ತಿಳಿಯಬೇಕು. ಜೇನುನೊಣವು ಜೇನುತುಪ್ಪಿನ ಆಸಕ್ತಿಯಿಂದ ಜೀವಕ್ಕೂ ಎರವಾಗುವಂತೆ, ಮನುಷ್ಯನು ತಪ್ಪಾದ ಸುಖಾಭಿಲಾಷೆಯಿಂದ ಬಂಧನದಲ್ಲಿ ಸಿಕ್ಕು ದುಃಖಭೋಗಕ್ಕೊಳಪಡುವನು! ಈ ಜಗತ್ತಿನಲ್ಲಿ ಮೋಹಗೊಳಿಸುವ ಸಂಗತಿಗಳು ಎಣಿಕೆಯಿಲ್ಲದಷ್ಟಿವೆ. ಅಜ್ಞಾನಿಯು ಹೆಜ್ಜೆಹೆಜ್ಜೆಗೆ ಲೋಭದಲ್ಲಿ ಸಿಕ್ಕುಬೀಳುವನು. ಅತನು ನೋಡಿದತ್ತ ಅತನಿಗೆ ಲೋಭನೀಯ ವಸ್ತುಗಳ ದರ್ಶನವಿರುತ್ತದೆ. ಅವು ಅತನನ್ನು ತಮ್ಮ ಕಡೆಗೆ ಸೆಳೆಯುತ್ತವೆ, ಕರೆಯುತ್ತವೆ. ಅತನು ಅವುಗಳ ಬಲೆಯಲ್ಲಿ ಸಿಕ್ಕಿಕೊಳ್ಳುತ್ತಾನೆ. ಮತ್ತು ದುಃಖಭಾಜನನಾಗುತ್ತಾನೆ.

ಇಂಥ ಲೋಭನೀಯ ವಸ್ತುಗಳನ್ನು ಪರಮಾತ್ಮನು ನಿರ್ಮಿಸಿದುದರ ಕಾರಣವು:— ಅವುಗಳನ್ನು ನೋಡುವದರಿಂದುಂಟಾಗುವ ಉತ್ಸುಕತೆ, ದುರ್ಬಲತೆಗಳೊಡನೆ ಹೋರಾಡಿ ಮನುಷ್ಯನು ತನ್ನ ಆತ್ಮಸಾಮರ್ಥ್ಯವನ್ನು ಬೆಳೆಯಿಸಿಕೊಂಡು ನಿಜವಾದ ಸುಖಪ್ರಾಪ್ತಿ ಮಾಡಿಕೊಳ್ಳಬೇಕೆಂದು. ಅಜ್ಞಾನಿಗೆ ಜಗದ್ರಚನೆಯಲ್ಲಿರುವ ಪರಮಾತ್ಮನ ಈ ಇಚ್ಛೆಯು ಕಲ್ಪನೆಯಾಗುವದಿಲ್ಲ. ಅತನು ತನ್ನ ಮನಸ್ಸನ್ನು ಸಿಕ್ಕಂತೆ ಹರಿಬಿಡುವನು; ಅವುಗಳ ಉಪಭೋಗವೇ ತನ್ನ ಧ್ಯೇಯವೆಂದು ತಿಳಿಯುವನು ಮತ್ತು ಅವುಗಳ ಬಗ್ಗೆ ಧಡಪಡಿಸಿ ಅವು ದೊರೆತರೂ ಸುಖದಿಂದ ವಂಚಿತನಾಗುವನು. ದೊರೆಯದಿದ್ದರೂ ವಂಚಿತನಾಗುವನು. ಕಣ್ಣಿಗೆ ಸುಂದರ ಕಾಣುವ, ಕೈಗೆ ಮಿದುವೆನಿಸುವ, ನಾಲಿಗೆಗೆ ರುಚಿಕೊಡುವ ಗುಣಗಳಿಗೆ ಅಂದರೆ ಹೊರಗಿನ ಸೊಬಗಿಗೆ ಮರುಳಾಗಿ ಮುಂದಿನ ವಿಚಾರಕ್ಕೆಳಸದೆ ಬಲೆಯಲ್ಲಿ ಬಿದ್ದು ತೊಳಲಾಡುವನೀಯಜ್ಞಾನಿ!

ಅತನು ತುಸು ವಿಚಾರಿಯಾದರೆ ಕಣ್ಣು ಕಿವಿ ಮೂಗು ತೊವಲು ಮೊದಲಾದ ಇಂದ್ರಿಯಗಳಿಗೆ ಸುಖವೀವ ಒಡವೆಗಳು ಕೆಲಹೊತ್ತು ಆ

ಇಂದ್ರಿಯಗಳನ್ನು ತಡೆಸಬಹುದಾದರೂ ಮನಸ್ಸಿನ ಸ್ವಾಸ್ಥ್ಯವನ್ನು ಸೆಳೆಕೊಳ್ಳುವವೆಂಬದು ಅತನಿಗೆ ಕಂಡು ಬರುವದು. ಇಂದ್ರಿಯ ಸುಖಕ್ಕಿಂತ ಮನಸ್ಸು ಸುಖಿಯಾಗುವದು ಹೆಚ್ಚು ಮಹತ್ವದ್ದು. ಆದರೆ ಇಂದ್ರಿಯಗಳನ್ನು ಸುಖಪಡಿಸುವಂಥ ಸಂಗತಿಗಳು ಮನಸ್ಸನ್ನು ಚಂಚಲಗೊಳಿಸಿ ದುಃಖಕ್ಕೀಡುಮಾಡುತ್ತವೆ. ಮನಸ್ಸು ಚಂಚಲವಾಗುವದೇ ದುಃಖದ ವಾಸ್ತವಸ್ವರೂಪವು. ನಮ್ಮ ಜೀವನವು ಸುಖದಲ್ಲಿ ವ್ಯತಿತವಾಗಬೇಕಾದರೆ ನಾವು ಮೊದಲು ಈ ಮನಶ್ಚಂಚಲತೆಯೆಂಬ ದುಃಖವನ್ನು ಅರಿತುಕೊಳ್ಳಲಿಕ್ಕೆ ಬೇಕು. ಆ ಚಂಚಲತೆಯನ್ನು ದೂರೀಕರಿಸುವದೇ ದುಃಖನಾಶನದ ಉಪಾಯವು. ಈ ದುಃಖವು ಹೊರಗಿರುವದಿಲ್ಲ; ಅಂತರ್ಯಾಮದಲ್ಲಿಯೇ ಇರುವದು. ಅದ್ದರಿಂದ ಅದನ್ನು ನೀಗಲಿಕ್ಕೆ ಮನಸ್ಸು ಅಂತರ್ಮುಖವಾಗಲಿಕ್ಕೆ ಬೇಕು.

ದಾಸರು ಒಂದೆಡೆ ಹೇಳಿದ "ಅನುಗಾಲ ಚಿಂತೆಯನುಗಾಲ" ಎಂಬುದು ಸುಳ್ಳಲ್ಲ. ಮನಸ್ಸು ತನ್ನ ಇಚ್ಛಿತವಸ್ತು ದೊರೆಯುವ ತನಕ ಚಂಚಲ ಅರ್ಥಾತ್ ದುಃಖಿತವಿರುತ್ತದೆ; ಅದು ದೊರೆಯಲು ಅದರ ಉಪಯೋಗಕ್ಕಾಗಿ ಚಂಚಲವಾಗುತ್ತದೆ; ಉಪಭೋಗದ ತರುವಾಯ ಅದು ನಷ್ಟವಾದೀತೆಂಬ ಚಿಂತೆಗೆ ಒಳಗಾಗುತ್ತದೆ; ಅದು ಹೊರಟು ಹೋಗಲು ಮತ್ತೆ ದೊರಕಿಸುವ ಚಿಂತೆಯಲ್ಲಿ ಮುಳುಗುತ್ತದೆ. ಹೀಗೆ ಅದನ್ನು ಆಶಿಸುವಾಗ ದುಃಖಿತ, ದೊರೆತಾಗ ದುಃಖಿತ, ನಷ್ಟವಾದಾಗಲೂ ದುಃಖಿತವಾಗಿರುವದು. ಒಟ್ಟಿಗೆ ಆಶೆಯೇ ದುಃಖಕ್ಕೆ ಮೂಲವು. ಆಶೆ—ಆಸಕ್ತಿ ಮಾನವನ ಮನಸ್ಸಿನ ಹಿರಿದಾದ ರುಜೆ, ಕಡು ಹಗೆ ಆಗಿದೆ. ಇದರ ಬಹಿಸ್ವರೂಪವು ಬಲು ಸವಿಕಟ್ಟು. ಇದರ ಬಲೆಯಲ್ಲಿ ಸಿಕ್ಕವನು ಸುಖದ ದಾರಿಯನ್ನು ಮರೆತುಬಿಡುವನು. ತಾನು ಮನುಷ್ಯನಿರುವನೆಂಬದನ್ನು ಮರೆಯುವನು! ಅದರಿಂದ ಮನುಷ್ಯನಾಗಿ ಹುಟ್ಟಿಬಂದು ಗಳಿಸಬೇಕಾದ ಉಚ್ಚಧ್ಯೇಯದಿಂದ ವಂಚಿತನಾಗುವನು. ಅದ್ದರಿಂದ ಸುಖ, ನಿಜವಾದ ಸುಖ, ಬಯಸುವವನು ಆಶೆಯನ್ನು ಮನಸ್ಸಿನಿಂದ ಹೊರಮಾಡಲಿಕ್ಕೆ ಬೇಕು. ಸುಖಪ್ರಾಪ್ತಿಗೆ ಅನಾಸಕ್ತಿಯ ಹೊರತು ಬೇರೆ ಸಾಧನವು ಇನ್ನೂ ವರೆಗೆ ದೊರೆತಿರುವದಿಲ್ಲ. ಮೂಡತನ್ಯ ಎಲ್ಲ ಸಂಗತಿಗಳನ್ನು ಲಿಂಗಾರ್ಪಣ ಬುದ್ಧಿಯಿಂದ ಮಾಡುವದು, 'ತಾನು ಮಾಡುವೆನು' 'ತನಗಾಗಿ ಮಾಡುವೆನು' ಎಂಬ ಅಹಂಕಾರ ಮಮಕಾರಗಳನ್ನು

ತ್ಯಜಿಸುವದು ಅನಾಸಕ್ತಿಯ ಸಾಧನಗಳು. ಇದೇ ಸುಖಕ್ಕೆ ಮುಟ್ಟುವ ಒಂದೇ ಒಂದಾದ ದಾರಿ.

ಸುಖೇಚ್ಛೆಯು ನಿಜವಾದ ಸುಖಕ್ಕೆ ಮುಟ್ಟಿಸುವದಿಲ್ಲ; ಅದು ದುಃಖಕ್ಕೆ ಪ್ರತಿಷ್ಠಾಪನೆ ಕೊಡುತ್ತದೆ. ನಾವು ಸುಖವೆನ್ನುವದೂ, ತಿಳಿಯುವದೂ ಇಂದ್ರಿಯ ಜನ್ಯಸುಖ. ಈ ಸುಖವನ್ನು ಗಳಿಸಲು ಧಡಪಡಿಸುವವನಿಗೆ ಮನುಷ್ಯನಿಗೆ ತಕ್ಕ ಕರ್ತವ್ಯ ಮಾಡುವ ಮನಸ್ಸಾಗುವದಿಲ್ಲ; ಒಳ್ಳೆಯ ಕೆಲಸವೂ ಅತನಿಂದ ಜರಗುವದಿಲ್ಲ. ಈ ಸುಖೇಚ್ಛೆಯಿಂದಲೇ ಸಂಸಾರದಲ್ಲಿ ಅಶಾಂತಿಯು ಹಬ್ಬಿದೆ. ಇದಕ್ಕಾಗಿ ಮಾನವನು ನಿರಪರಾಧಿಗಳ ಕತ್ತುಹಿಚುಕಲೂ ಹಿಂದೆಗೆಯನು! 'ಆಹಾರ-ನಿದ್ರಾ-ಭಯ-ಮೈಥುನ'ಗಳು ಮನುಷ್ಯೋಚಿತ ಕರ್ತವ್ಯಗಳಲ್ಲ. ಪಶುಗಳೂ ಅವನ್ನು ಮಾಡುತ್ತವೆ. ಪ್ರಪಂಚದಲ್ಲಿ ಶಾಂತಿಯು ನೆಲಿಸಬೇಕಾದರೆ ಈ ಇಂದ್ರಿಯಜನ್ಯ ಸುಖಾಪೇಕ್ಷೆಯನ್ನು ಹತ್ತಿಕ್ಕಲಿಕ್ಕೆ ಬೇಕು. ಈ ಸುಖಾಪೇಕ್ಷೆಯಿಂದ ದೂರಾದವರಿಂದಲೇ ಸಂಸಾರದಲ್ಲಿಯೂ, ಸಮಾಜದಲ್ಲಿಯೂ ಶಾಂತಿಯು ನೆಲೆಗೊಳ್ಳುತ್ತದೆ.

ಮೊದಲು ಮನಸ್ಸಿನಲ್ಲಿ ಇಚ್ಛೆಯುತ್ಪನ್ನವಾಗಲಿಕ್ಕೆ ಇಂಬುಗೊಡುವದೂ, ಬಳಿಕ ಅದನ್ನು ಪೂರ್ಣಮಾಡಲು ಒದ್ದಾಡುವದೂ ಮೂಢತನವು. ರೊಜ್ಜಿನಿಂದ ಮೈತುಂಬಿಕೊಂಡು ಬಳಿಕ ಅದನ್ನು ತೊಳೆಯಲು ಯತ್ನಿಸಿದಂತಹದಿದು! ರೊಜ್ಜು ಮೈಗೆ ಮೆತ್ತದಂತೆ ನಡೆಯುವದೇ ಜಾಣತನವಲ್ಲವೇ? ಯಾವದರ ಸಂತೃಪ್ತಿ ಮಾಡಬೇಕಾಗುವದು, ಅದು ಮೂಲತಃ ಹುಟ್ಟದಂತೆ ಮಾಡುವದೇ ಬುದ್ಧಿವಂತಿಕೆ. ಆಶೆಯುತ್ಪನ್ನವಾಗಬೇಕು, ಬಳಿಕ ಅದನ್ನು ಪೂರೈಸುವ ಹಳವಂಡದಲ್ಲಿ ಬೀಳಬೇಕು, ಇದಕ್ಕೂ ಆಶೆಹುಟ್ಟದಂತೆ ಯತ್ನಿಸುವದೇ ಒಳಿತಲ್ಲವೇ? ಜೀವನದಲ್ಲಿ ಆಶೆಯನ್ನು ಒಮ್ಮೆಯೇ ಹೊಡೆದೋಡಿಸಿದರೆ ಸಾಕು! ಅದು ಎಂದೆಂದೂ ಸನೆಯಕ್ಕೆ ಬಾರದು! ಬಳಿಕ ಆನಂದ ವೃತ್ತಿಯು ತಾನಾಗಿ ಸೇರಿಕೊಂಡು ಬಿಡುವದು. ಹೀಗೆ ಸದಾನಂದ ಸ್ಥಿತಿಯಲ್ಲಿರುವದೇ ಜಾಣತನವೂ, ಶ್ರೇಷ್ಠ ಕೃತ್ಯವೂ ಆಗಿದೆ.

ತನ್ನ ಆನಂದವೃತ್ತಿಯನ್ನು ಸ್ಥಿರವಾಗಿ ಕಾಯ್ದುಕೊಳ್ಳುವದು ಮನುಷ್ಯನ ಮುಖ್ಯ ಕರ್ತವ್ಯವಾಗಿದೆ. ಆನಂದರಹಿತ ಮನುಷ್ಯನು ಯಾರೊ

ಡನೆಯೂ ಸರಿಯಾಗಿ ವರ್ತಿಸನು. ಅದರಿಂದ ದ್ವೇಷ, ಅಸೂಯಾದಿ ದುರ್ಭಾವನೆಗಳಿಗೆ ಆಶ್ರಯ ದೊರಕುವದು. ಇದು ಮಹಾಪಾಪವು; ಆತ್ಮಘಾತವು! ಇಚ್ಛಾತೃಪ್ತಿಗಾಗಿ ಎರಡನೆಯವರೊಡನೆ ವರ್ತಿಸುವವನು ಅವರನ್ನು ತನ್ನ ಇಚ್ಛಾಪೂರ್ತಿಯ ಸಾಧನಗಳೆಂದು ತಿಳಕೊಳ್ಳುವನು! ಅವರಿಂದ ಭೌತಿಕಲಾಭ ಪಡೆಯುವದಕ್ಕಾಗಿ ಅವರ ಕೆಲವೊಂದು ವಸ್ತುವನ್ನು ಅಪಹರಿಸಲೂ ಹಿಂದೆಮುಂದೆ ನೋಡನು! ಈ ಭಾವನೆಯೇ 'ಸ್ವಾರ್ಥ'ವು! ಸ್ವಾರ್ಥ, ಇಚ್ಛೆ, ಅಸಂತುಷ್ಟಿ ಇವೆಲ್ಲ ಸಮಾನಾರ್ಥಕ ಶಬ್ದಗಳು. ಆಶೆಯ ತೃಪ್ತಿಗೆ ಯತ್ನಿಸಿದಂತೆ ಅದು ಬೆಳೆಯುವದು; ಪ್ರಖರವಾಗುವದು.

ಆಶಾಪರನು ಧನಕ್ಕಾಗಿ ಹೆಣಗುವನು; ಹವ್ಯಗಳನ್ನೂ, ಸಾಧನಗಳನ್ನೂ ಬಯಸುವನು; ಮೇಲ್ತರದ ಅಶನವಸನಗಳಿಗೆ ಹಾತೊರೆಯುವನು; ಮಡದಿ ಮಕ್ಕಳಿಗಾಗಿ ತಳಮಳಿಸುವನು. ಹೀಗೆ ಸುಖಕ್ಕಾಗಿ ಯತ್ನಿಸಿದಂತೆ ನಿಜವಾದ ಸುಖವು ಅತನಿಂದ ದೂರ ದೂರ ಹೋಗುವದು. ಅತನು ಸದಾಕಾಲ ದುಃಖಿತನಾಗಿರುವನು. ಸುಖಾಪೇಕ್ಷೆಯು ನಿಜವಾದ ಸುಖದ ಸಾಧನವಲ್ಲ. ನಿಜವಾದ ಸುಖ ದೊರಕಿಸಲು ಮನುಷ್ಯನು ಶಾಂತನೂ, ಸ್ಥಿರಮನಸ್ಕನೂ ಆಗಲಿಕ್ಕೆ ಬೇಕು. ಶಾಂತತೆ ಹಾಗು ಬುದ್ಧಿಯ ಸ್ಥಿರತ್ವ ದೊರೆಯುವ ತನಕ ನಿಜವಾದ ಸುಖವು ಲಭಿಸದೆಂಬದನ್ನು ನಿಶ್ಚಿತವಾಗಿ ತಿಳಿಯಬೇಕು. ದುಃಖ, ಚಿಂತೆ ಎರಡೂ ಒಂದೇ ಭೋಗಸಂತೃಪ್ತಿಯನ್ನು—ಸುಖೇಚ್ಛೆಯನ್ನು ಪೂರ್ಣ ಮಾಡುವ ಪದಾರ್ಥಗಳು ಹೇಗೆ ದೊರೆತಾವು? ಹೇಗೆ ತನ್ನ ಹತ್ತರ ಉಳಿದಾವು? ಎಂಬ ಚಿಂತೆಯನ್ನು ಮನಸ್ಸಿನಲ್ಲಿ ಕಾಯ್ದಿಟ್ಟುಕೊಳ್ಳುವದೇ ದುಃಖ. ಇದರಿಂದ ಮುಕ್ತವಾಗುವದೇ ಮನುಷ್ಯಜನ್ಮದ ಗುರಿ. ಸುಖ ದುಃಖಗಳು ಶಾರೀರಿಕ ವಸ್ತುಗಳಲ್ಲ; ಮಾನಸಿಕ ವಸ್ತುಗಳು. ಅವೆರಡೂ ಒಂದೆಡೆಯಲ್ಲಿರಲಾರವು. ಒಂದರ ಅಭಾವ, ಇನ್ನೊಂದಕ್ಕಾಶ್ರಯ. ಇಂದ್ರಿಯ ಜನ್ಯ ಸುಖಾಪೇಕ್ಷೆಯು ಒಂದು ತರದ ಲೋಭವು. 'ಲೋಭಮೂಲಾನಿ ಪಾಪಾನಿ' ಲೋಭಿಯು ನಿಜವಾದ ಡೆಕಾಯಿತ—ದರೋಡೆಖೋರ. ಚಿಕ್ಕ ಮೀನನ್ನು ದೊಡ್ಡ ಮೀನು, ದೊಡ್ಡ ಮೀನನ್ನು ತಿಮಿತಿಮಿಂಗಲ ನುಂಗುವಂತೆ ಒಬ್ಬ ಲೋಭಿಯು ಮತ್ತೊಬ್ಬ ಲೋಭಿಯ ತುತ್ತು ಆಗುವನು! ಹೀಗೆ ಒಬ್ಬರನ್ನೊಬ್ಬರು ನುಂಗುವ ಆಶೆಯೇ ಎಲ್ಲರಲ್ಲ! ಒಂದೇ ಖಗೆಯ ಚಿಂತೆ

ಎಲ್ಲಂಗೂ! ಅದೇ ಅಸುಖ—ದುಃಖ. ಲೋಭದಿಂದಲೇ ಶತ್ರುತ್ವ ಜನಿಸುತ್ತದೆ. ವ:ನುಷ್ಯತ್ವವಲ್ಲಿದು- ಮನುಷ್ಯತ್ವದ ಗುಂ ಇನ್ನೊಬ್ಬರನ್ನು ಸುಲಿಯುವದೂ, ತೊಂದರೆಪಡಿಸುವದೂ ಆಗಿರುವದಿಲ್ಲ- ಇಂಥ ಹೀನ ವೃತ್ತಿಗಾಗಿ ಮನುಷ್ಯತ್ವವನ್ನು ತೊಳೆಯಬೇಕಾಗಿಲ್ಲ. ಇವೆಲ್ಲವುಗಳಿಗೆ ಇಂದ್ರಿಯಜನ್ಯ ಸುಖಾವೇಕ್ಷೆಯೊಂದೇ ಕಾರಣ. ಆದ್ದರಿಂದ ಇವೆಲ್ಲ ತೊಡರುಗಳಿಂದ ಪಾರಾಗಿ ನಿಜವಾದ ಮನುಷ್ಯನಾಗಬೇಕು, ನಿಜವಾದ ಸುಖವನ್ನು ಸಂಪಾದಿಸಬೇಕು ಎಂದಿದ್ದರೆ, ಇಚ್ಛಾತ್ಯಾಗ ಇದೊಂದೇ ಸಾಧನವು. ಆಶಾರಹಿತನಾದ ಬಳಿಕ ಬೇಕಾದ ಕೃತಿಯನ್ನು ಮಾಡಿದರೂ ಮನಸ್ಸು ಶಾಂತ ಉಳಿಯುವದು. ಅದೇ ನಿಜವಾದ ಸುಖ, ಸುಖದ ಬೀಡು. ಅದನ್ನು ದೊರಕಿಸಲೆಳಸುವದೇ ಮಾನವನ ಕರ್ತವ್ಯ.

ಗೊಲ್ಲಾಳನು ತಾನು ಅತ್ಯಂತ ಭಕ್ತಿಯಿಂದ ಪೂಜಿಸುತ್ತಿದ್ದ ಲಿಂಗವನ್ನು ತನ್ನ ತಂದೆಯು ಹೀಗೆ ಒದೆದು ಕೆಡಿಸಿಬಿಟ್ಟದ್ದರಿಂದ ಅವನು ಅತ್ಯಂತವಾಗಿ ನೊಂದುಕೊಂಡನು. ಅವನಿಗೆ ಆ ಲಿಂಗವು ಅಂಥಿಂಥ ವಸ್ತುವಾಗಿರಲಿಲ್ಲ. ಅದು ಅವನಿಗೆ ಅತ್ಯಂತ ಪವಿತ್ರವಾದ ವಸ್ತುವಾಗಿತ್ತು. ಶ್ರೀಶೈಲದಿಂದ ತಂದಂತಹದು, ಒಬ್ಬ ವೃದ್ಧ ಜಂಗಮನು ಕೊಟ್ಟಂತಹದು, ಅವನಿಂದ ಅವನು ಉಪದೇಶವನ್ನು ಹೊಂದಿ ದಿನಾಲು ಅತ್ಯಂತ ಭಕ್ತಿಯಿಂದ ಪೂಜಿಸುವಂತಹದು. ಇಂಥ ಶ್ರೇಷ್ಠ ವಸ್ತುವನ್ನು ತನ್ನ ತಂದೆಯು ಒದೆದು ತುಳಿದುಬಿಟ್ಟದ್ದರಿಂದ ಗೊಲ್ಲಾಳನು ಅತ್ಯಂತ ಕೋಪಾವಿಷ್ಟನಾಗಿ ತನ್ನ ಭಕ್ತಿಯ ಆವೇಶದಲ್ಲಿ ಕಯ್ಯಲ್ಲಿದ್ದ ಕೊಡಲಿಯಿಂದ ತನ್ನ ತಂದೆಯನ್ನು ಆಕ್ಷಣದಲ್ಲಿಯೇ ತುಂಡರಿಸಿದನು. ಆಗ ಪರಮಾತ್ಮನು ಅವನ ನಿಚ್ಚಟವಾದ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಅವನಿಗೆ— ನಿನ್ನ ಭಕ್ತಿಗೆ ನಾನು ಮೆಚ್ಚಿದೆನು. ನಿನಗೇನು ಬೇಕು ಬೇಡು ಎಂದೆನ್ನಲು, ಗೊಲ್ಲಾಳನು ಅವನಿಗೆ— ನನಗೇನೂ ಬೇಡ. ನಿನ್ನನ್ನು ಯಾವಾಗಲೂ ಪೂಜಿಸುತ್ತ ಇರುವ ವರವನ್ನೊಂದನ್ನು ಕೊಡು ಎಂದು ಹೇಳಿದನು. ಆಗ ಪರಮಾತ್ಮನು— ನೀನು ಪೂಜಿಸುತ್ತಿದ್ದ ಈ ಹಿಕ್ಕೆಯಲ್ಲಿಯೇ ನಾನು ಯಾವಾಗಲೂ ವಾಸಿಸುವೆನು. ಇಲ್ಲಿಯೇ ನೀನು ನನ್ನನ್ನು ಪೂಜಿಸುತ್ತಾ ಇರು, ಎಂದು ಹೇಳಲು ಗೊಲ್ಲಾಳನು ಅತ್ಯಂತ ಸಂತೋಷಗೊಂಡು- ನಿನ್ನಪ್ಪಣೆಯಂತೆ ನಾನು ನಡಿಯುವೆನು. ಆದರೆ ನನ್ನ ತಂದೆಯ ಮೂಲಕ ನಾನು ನಿನ್ನನ್ನು ಕಂಡೆನು. ಅವನಿಗೆ ನೀನು ಪ್ರಾಣದಾನ ಮಾಡು ಎಂದೆನ್ನಲು ಹಾಗೆಯೇ ಆಗಲೆಂದು ಪರಮಾತ್ಮನು ಹೇಳಲು ಅವನ ತಂದೆಯ ದೇಹದಲ್ಲಿ ಪ್ರಾಣವು ತುಂಬಿ ಅವನು ಎಚ್ಚತ್ತು ಕುಳಿತನು. ಅಂದಿನಿಂದ ಗೊಲ್ಲಾಳನು ವೀರಗೊಲ್ಲಾಳನೆಂಬ ಹೆಸರಿನಿಂದ ಪ್ರಸಿದ್ಧನಾದನು. ಅವನು ಪೂಜಿಸುತ್ತಿದ್ದ ಲಿಂಗರೂಪದ ಆ ಕುರಿಯ ಹಿಕ್ಕೆಯು ಗೊಲ್ಲಾಳೇಶ್ವರನೆಂದು ಜನರು ಕರೆಯುತ್ತಿದ್ದರು.

ಗೊಲ್ಲಾಳನು ಲಿಂಗಧಾರಿಯಾಗಿ ಶಿವಾನುಭವದಂತೆ ನಡೆಯುತ್ತ ವಚನಕಾರನಾದನು. ಅವನ ಮುದ್ರಿಕೆಯು 'ವೀರಬೀರೇಶ್ವರಾ' ಎಂದಿದೆ. ಅವನ ೨೦ ವಚನಗಳು ನಮ್ಮಲ್ಲಿವೆ. ಅವುಗಳಲ್ಲಿ ನಾವು ಕೆಲವುಗಳನ್ನು ಮಾತ್ರ ಇಲ್ಲಿ ಉದಹರಿಸಿದ್ದೇವೆ.

ಗೋಲಗಿರಿಯ ಗೊಲ್ಲಾಳೇಶ್ವರನ ಜಾತ್ರೆಯು ವಿಜಾಪುರ ಜಿಲ್ಲೆಯಲ್ಲೆಲ್ಲ ಬಹು ದೊಡ್ಡದಾಗಿದೆ. ಈ ದೇವಾಲಯಕ್ಕೊಸ್ಕರ ಭಕ್ತಿಭಾವವನ್ನು ತಾಳಿ ನಡೆದುಕೊಳ್ಳುವವರು ಈ ಭಾಗದಲ್ಲಿಯೂ ನಿಜಾವು ಇಲಾಪೆಯಲ್ಲಿಯೂ ಅಸಂಖ್ಯ ಜನರಿದ್ದಾರೆ.

ವಚನಗಳು.

(೧) ಸ್ಥಲಂಗಳನರಿದಿಹೆನೆಂದೊಡೆ, ತ್ರಿವಿಧಸ್ಥಲಕುಳವೆನಗಿಲ್ಲ. ಷಟ್‌ಸ್ಥಲವ ಮುನ್ನವೇ ಅರಿಯೆ. ತತ್ವವನರಿದಿಹೆನೆಂದಡೆ, ಭಕ್ತಿ ಜ್ಞಾನ ವೈರಾಗ್ಯ ತ್ರಿವಿಧ, ಲಕ್ಷವಿಧ, ನಾನಲ್ಲ. ನಿಷ್ಠೆಯಲ್ಲಿ ದೃಷ್ಟವ ಕಂಡೆಹೆನೆಂದಡೆ ವಿಶ್ವಾಸವೆನಗಿಲ್ಲ. ವಿರಕ್ತಿಯಲ್ಲಿ ವೇಧಿಸಿಹೆನೆಂದಡೆ ತ್ರಿವಿಧ ಮಲವ ಮೊತ್ತಮೊಳಗೆ ಮತ್ತನಾಗಿದ್ದೇನೆ. ಮತ್ತೆ ನಿಶ್ಚಯವನರಿದಿಹೆನೆಂದಡೆ ಆತ್ಮಂಗೆ ಲಕ್ಷವಿಡುವುದೊಂದು ಗೊತ್ತ ಕಾಣೆ. ಇಂತೀ ಕಷ್ಟ ತನುವಿನಲ್ಲಿ ಬಂದು ಧೂರ್ತನಾಗಿ ಕೆಟ್ಟುಹೋಗುತ್ತಿದ್ದೇನೆ. ಗುಡಿಸಿದ ಹಿಕ್ಕೆಯಲ್ಲಿ ಬಂದು ತನ್ನ ನಿಷ್ಠೆಯ ತೋರಿ ಎನಗೆ ಸದ್ಭಕ್ತಿಯ ಬೀರಿ ವಿಶ್ವಾಸಗಳಿಗೆಲ್ಲಕ್ಕೆ ಕೃತ್ಯದೊಳಗಾಗಿ ನಿತ್ಯನೇಮಂಗಳಜ್ಯೋತ್ತಿದಂತಿರು. ನೀನೆ ನಿರ್ಮುಕ್ತನಹೆ. ನಿಜನಿತ್ಯನಹೆ. ಜಗಕ್ಕೆ ಕರ್ತುವಹೆ. ಎನ್ನ ಹಿಕ್ಕೆಗೆ ಬಂದು ಸಿಕ್ಕಿದೆಯಲ್ಲ ಮಹಾಮಹಿಮ ವೀರಬೀರೇಶ್ವರಲಿಂಗಾ.

ಈ ವಚನದಲ್ಲಿ ಗೊಲ್ಲಾಳನು ತಾನು ಏನೂ ಅರಿಯದವನೆಂದು ಹೇಳಿಕೊಳ್ಳುತ್ತಿದ್ದಾನೆ. ಆದರೆ ಅವನು ಷಟ್‌ಸ್ಥಲಗಳಲ್ಲಿರುವ ತೊಡಕಿನ ರೀತಿಗಳನ್ನು ಜನ್ನಾಗಿ ಅರಿತವನಾಗಿದ್ದು ಅವುಗಳನ್ನು ಸಾಧಿಸುವದು ತನ್ನಿಂದಾಗದ್ದರಿಂದ ಭಕ್ತಿ, ವಿಶ್ವಾಸಗಳು ತನ್ನಲ್ಲಿ ಉಂಟಾಗಲೆಂದು ಪರಮಾತ್ಮನನ್ನು ಕುರಿತು ಇದರಲ್ಲಿ ಬೇಡಿಕೊಳ್ಳುತ್ತಿದ್ದಾನೆ. ಇದರಲ್ಲಿ ಕುರಿಯ ಹಿಕ್ಕೆಯ ಉಲ್ಲೇಖವಿರುವದನ್ನು ವಾಚಕರು ಲಕ್ಷಿಸತಕ್ಕದ್ದು.

(೨) ಆಡು ಅರುದಿಂಗಳು ಹುಟ್ಟಿ, ಮೂರು ದಿನ ಬದುಕಿ, ಒಂದು ದಿನ ಸತ್ತಿತ್ತು. ಕುರಿ ಕುರುಹ ಮೇದು ಮರಿಗೆ ಮೊಲೆಗೊಟ್ಟಿತ್ತು. ಮರಿ ಮೊಲೆಯ ನುಂಗಿ, ಕುರುಹಿನೊಳಗಡಗಿತ್ತು. ಆಡು, ಕುರಿ, ಬಂದು ಬಟ್ಟೆಯ ಶೋಧಿಸಿಕೊಂಡು ತೋಳನ ತೊಡಕಿನಲ್ಲಿ ಸಾಯದೇ? ಅರಿ ವೀರಬೀರೇಶ್ವರಲಿಂಗವ.

ಇದು ಬೆಡಗಿನ ವಚನವು. ಸಂಸಾರದಲ್ಲಿ ಮಗ್ನನಾಗಿರದೆ ಪರಮಾತ್ಮನನ್ನು ಅರಿಯಬೇಕೆಂಬ ಅಭಿಪ್ರಾಯವು ಇದರಲ್ಲಿದೆ.

(೩) ಹೋತನ ಕೊಯ್ದು, ಕುರಿಯ ಸುಲಿದು, ಮರಿಯ ಕೊರಳನನೊತ್ತಿ, ಕಾವಲ ಕುನ್ನಿಯ ಕೆಡಹಿ, ತೋಳನ ಕುಲವ ಗೆದ್ದು ಕುರುಬನ ಕುರುಹಿನ ಕುಲವಡಗಿ. ನೆರೆ ಅರಿವಿನ ಕುಲದಲ್ಲಿ ಅಡಗಬೇಕು ವೀರಬೀರೇಶ್ವರಾ.

ಇದು ಬೆಡಗಿನ ವಚನವು. ಕುರಿಗಳನ್ನು ಕಾಯುವ ತನ್ನ ಕಾಯಕಕ್ಕೆ ತಾತ್ಪಿಕಾರ್ಥವನ್ನು ಕೊಟ್ಟಿದ್ದಾನೆ.

(೪) ಹೋತನ ಹೊಡೆದು ಅಡಕೂಡಿ, ಕುರಿಯನಿರಿಸಿ, ಟಗರ ತಡೆದು ಹಿಂಡನೊಬ್ಬಳಿತೆಯ ಮಾಡಿ, ಹುಲಿ, ತೋಳ, ಜೋರರ ಭಯಮಂ ಕಳೆದು ಹಿಂಡಿಗೊಡೆಯನಾಗಿ ಕಾವ ಗೊಲ್ಲಾಳ ನೀನೇ ವೀರಬೀರೇಶ್ವರಾ.

ಈ ವಚನದಲ್ಲಿ ಗೊಲ್ಲಾಳನು ಪರಮಾತ್ಮನ ಸ್ವರೂಪನ್ನು ವರ್ಣಿಸುತ್ತ ಅವನನ್ನು ಕುರಿತು ಪ್ರಾರ್ಥನೆ ಮಾಡುತ್ತಾನೆ. ಕುರುಬನು ಹೇಗೆ ಪ್ರಾರ್ಥನೆ ಮಾಡಬೇಕೋ ಹಾಗೆಯೇ ಇದು ಇದೆ.

(೫) ಕೈಯೆ ಹಿಡಿದಲ್ಲಿ ಸಂದೇಹಕ್ಕೊಳಗಾಗಿ ನಿಃಕ್ರಿಯೆ ಎಂಬಲ್ಲಿ ಆತ್ಮಂಗೆ ಗೊತ್ತು ಗಾಣದೆ, ಫಲವಿಲ್ಲದ ವೃಕ್ಷದ ಹೂವ ಕಂಡು ವಿಹಂಗ ಕುಲ ಚರಿಸದೆ ಮುಚ್ಚಿದಂತೆ ಕಡೆಯಲ್ಲಿ ಹೊಲಬುಗೆಡದೆ ಅರಿ. ನಿಜವಸ್ತು ಬಂದಿತೆಂದು ಕುರಿತ ಕುರುಹಿನಲ್ಲಿ ಕುಲಗೆಡದೆ ಕೂಡು ವೀರಬೀರೇಶ್ವರಲಿಂಗವ.

(೬) ಕೊರಡು ಕೊನರುವಲ್ಲಿ ಬರಡ ಕರೆವಲ್ಲಿ, ಕಲ್ಲಿನ ಶಿಲೆಯೊಡೆದು ರೂಪುದೋರುವಲ್ಲಿ, ಬಳ್ಳವಲ್ಲಾಡದೆ ಲಿಂಗವಾಹಲ್ಲಿ ಇಂತಿವುಗಳಲ್ಲಿಯ ಗುಣವೋ, ಇಂತಿವೆಲ್ಲವನರಿವ ಕಲ್ಲೆದೆಯವನ ಗುಣವೋ? ಇಂತಿವ ಬಲ್ಲಡೆ ವಿಶ್ವಾಸದಲ್ಲಿಯೇ ವೀರಬೀರೇಶ್ವರ ಲಿಂಗವು ತಾನಾಗಿಪ್ಪ.

ಈ ವಚನಗಳಿಂದ ಗೊಲ್ಲಾಳನು ಇಷ್ಟಲಿಂಗ ಧಾರಕನೂ, ಷಟ್‌ಸ್ಥಲಜ್ಞಾನಿಯೂ, ಲಿಂಗಾಂಗಸಾಮರಸ್ಯದ ರೀತಿಯನ್ನು ಅರಿತವನೂ ಆಗಿದ್ದನೆಂದು ತೋರುತ್ತದೆ. ಮೇಲೆ ೩ನೇ ೪ನೇ ವಚನಗಳಿಂದಲೂ ಬೇರೆ

ಗೋಲಗಿರಿಯ ಗೊಲ್ಲಾಳೇಶ್ವರನ ಜಾತ್ರೆಯು ವಿಜಾಪುರ ಜಿಲ್ಲೆಯಲ್ಲೆಲ್ಲ ಬಹು ದೊಡ್ಡದಾಗಿದೆ. ಈ ದೇವಾಲಯಕ್ಕೊಸ್ಕರ ಭಕ್ತಿಭಾವವನ್ನು ತಾಳಿ ನಡೆದುಕೊಳ್ಳುವವರು ಈ ಭಾಗದಲ್ಲಿಯೂ ನಿಜಾಮು ಇಲಾಪೆಯಲ್ಲಿಯೂ ಅಸಂಖ್ಯ ಜನರಿದ್ದಾರೆ.

ವಚನಗಳು.

(೧) ಸ್ಥಲಂಗಳನರಿದಿಹೆನೆಂದೊಡೆ, ತ್ರಿವಿಧಸ್ಥಲಕುಳವೆನಗಿಲ್ಲ. ಷಟ್‌ಸ್ಥಲವ ಮುನ್ನವೇ ಅರಿಯೆ. ತತ್ವವನರಿದಿಹೆನೆಂದಡೆ, ಭಕ್ತಿ ಜ್ಞಾನ ವೈರಾಗ್ಯ ತ್ರಿವಿಧ, ಲಕ್ಷವಿಧ, ನಾನಲ್ಲ. ನಿಷ್ಠೆಯಲ್ಲಿ ದೃಷ್ಟವ ಕಂಡೆಹೆನೆಂದಡೆ ವಿಶ್ವಾಸವೆನಗಿಲ್ಲ. ವಿರಕ್ತಿಯಲ್ಲಿ ವೇಧಿಸಿಹೆನೆಂದಡೆ ತ್ರಿವಿಧ ಮುಲ್ಲವ ಮೊತ್ತದೊಳಗೆ ಮತ್ತನಾಗಿದ್ದೇನೆ. ಮತ್ತೆ ನಿಶ್ಚಯವನರಿದಿಹೆನೆಂದಡೆ ಆತ್ಮಂಗೆ ಲಕ್ಷವಿಡುವುದೊಂದು ಗೊತ್ತ ಕಾಣೆ. ಇಂತೀ ಕಷ್ಟ ತನುವಿನಲ್ಲಿ ಬಂದು ಧೂರ್ತನಾಗಿ ಕೆಟ್ಟುಹೋಗುತ್ತಿದ್ದೇನೆ. ಗುಡಿಸಿದ ಹಿಕ್ಕೆಯಲ್ಲಿ ಬಂದು ತನ್ನ ನಿಷ್ಠೆಯ ತೋರಿ ಎನಗೆ ಸದ್ಭಕ್ತಿಯ ಬೀರಿ ವಿಶ್ವಾಸಗಳಿಗೆಲ್ಲಕ್ಕೆ ಕೃತ್ಯದೊಳಗಾಗಿ ನಿತ್ಯನೇಮಂಗಳಜ್ಯೊತ್ತಿದಂತಿರು. ನೀನೆ ನಿರ್ಮುಕ್ತನಹೆ. ನಿಜನಿತ್ಯನಹೆ. ಜಗಕ್ಕೆ ಕರ್ತುವಹೆ. ಎನ್ನ ಹಿಕ್ಕೆಗೆ ಬಂದು ಸಿಕ್ಕಿದೆಯಲ್ಲ ಮಹಾಮಹಿಮ ವೀರಬೀರೇಶ್ವರಲಿಂಗಾ.

ಈ ವಚನದಲ್ಲಿ ಗೊಲ್ಲಾಳನು ತಾನು ಏನೂ ಅರಿಯದವನೆಂದು ಹೇಳಕೊಳ್ಳುತ್ತಿದ್ದಾನೆ. ಆದರೆ ಅವನು ಷಟ್‌ಸ್ಥಲಗಳಲ್ಲಿರುವ ತೊಡಕಿನ ರೀತಿಗಳನ್ನು ಚನ್ನಾಗಿ ಅರಿತವನಾಗಿದ್ದು ಅವುಗಳನ್ನು ಸಾಧಿಸುವದು ತನ್ನಿಂದಾಗದ್ದರಿಂದ ಭಕ್ತಿ, ವಿಶ್ವಾಸಗಳು ತನ್ನಲ್ಲಿ ಉಂಟಾಗಲೆಂದು ಪರಮಾತ್ಮನನ್ನು ಕುರಿತು ಇದರಲ್ಲಿ ಬೇಡಿಕೊಳ್ಳುತ್ತಿದ್ದಾನೆ. ಇದರಲ್ಲಿ ಕುರಿಯು ಹಿಕ್ಕೆಯು ಉಲ್ಲೇಖವಿರುವದನ್ನು ವಾಚಕರು ಲಕ್ಷಿಸತಕ್ಕದ್ದು.

(೨) ಆಡು ಅರುದಿಂಗಳು ಹುಟ್ಟಿ, ಮೂರು ದಿನ ಬದುಕಿ, ಒಂದು ದಿನ ಸತ್ತಿತ್ತು. ಕುರಿ ಕುರುಹ ಮೇದು ಮರಿಗೆ ಮೊಲೆಗೊಟ್ಟಿತ್ತು. ಮರಿ ಮೊಲೆಯ ನುಂಗಿ, ಕುರುಹಿನೊಳಗಡಗಿತ್ತು. ಆಡು, ಕುರಿ, ಬಂದು ಬಟ್ಟೆಯ ಶೋಧಿಸಿಕೊಂಡು ತೋಳನ ತೊಡಕಿನಲ್ಲಿ ಸಾಯದೇ? ಅರಿ ವೀರಬೀರೇಶ್ವರಲಿಂಗವ.

ಇದು ಬೆಡಗಿನ ವಚನವು. ಸಂಸಾರದಲ್ಲಿ ಮುಗ್ನನಾಗಿರದೆ ಪರಮಾತ್ಮನನ್ನು ಅರಿಯಬೇಕೆಂಬ ಅಭಿಪ್ರಾಯವು ಇದರಲ್ಲಿದೆ.

(೩) ಹೋತನ ಕೊಯ್ದು, ಕುರಿಯ ಸುಲಿದು, ಮುರಿಯ ಕೊರಳನನೊತ್ತಿ, ಕಾವಲ ಕುನ್ನಿಯ ಕೆಡಹಿ, ತೋಳನ ಕುಲವ ಗೆದ್ದು ಕುರುಬನ ಕುರುಹಿನ ಕುಲವಡಗಿ. ನೆರೆ ಅರಿವಿನ ಕುಲದಲ್ಲಿ ಅಡಗಬೇಕು ವೀರಬೀರೇಶ್ವರಾ.

ಇದು ಬೆಡಗಿನ ವಚನವು. ಕುರಿಗಳನ್ನು ಕಾಯುವ ತನ್ನ ಕಾಯಕಕ್ಕೆ ತಾತ್ಪರ್ಯಾರ್ಥವನ್ನು ಕೊಟ್ಟಿದ್ದಾನೆ.

(೪) ಹೋತನ ಹೊಡೆದು ಆಡ ಕೂಡಿ, ಕುರಿಯನಿರಿಸಿ, ಟಗರ ತಡೆದು ಹಿಂಡನೊಬ್ಬಳಿತೆಯ ಮಾಡಿ, ಹುಲಿ, ತೋಳ, ಜೋರರ ಭಯಮಂ ಕಳೆದು ಹಿಂಡಿಗೊಡೆಯನಾಗಿ ಕಾವ ಗೊಲ್ಲಾಳ ನೀನೇ ವೀರಬೀರೇಶ್ವರಾ.

ಈ ವಚನದಲ್ಲಿ ಗೊಲ್ಲಾಳನು ಪರಮಾತ್ಮನ ಸ್ವರೂಪನ್ನು ವರ್ಣಿಸುತ್ತ ಅವನನ್ನು ಕುರಿತು ಪ್ರಾರ್ಥನೆ ಮಾಡುತ್ತಾನೆ. ಕುರುಬನು ಹೇಗೆ ಪ್ರಾರ್ಥನೆ ಮಾಡಬೇಕೋ ಹಾಗೆಯೇ ಇದು ಇದೆ.

(೫) ಕ್ರಿಯೆ ಹಿಡಿದಲ್ಲಿ ಸಂದೇಹಕ್ಕೊಳಗಾಗಿ ನಿಃಕ್ರಿಯೆ ಎಂಬಲ್ಲಿ ಆತ್ಮಂಗೆ ಗೊತ್ತುಗಾಣದೆ, ಫಲವಿಲ್ಲದ ವೃಕ್ಷದ ಹೂವ ಕಂಡು ವಿಹಂಗಕುಲ ಚರಿಸದೆ ಮುಚ್ಚಿದಂತೆ ಕಡೆಯಲ್ಲಿ ಹೊಲಬುಗೆಡದೆ ಅರಿ. ನಿಜವಸ್ತು ಬಂದಿತೆಂದು ಕುರಿತ ಕುರುಹಿನಲ್ಲಿ ಕುಲಗೆಡದೆ ಕೂಡು ವೀರಬೀರೇಶ್ವರಲಿಂಗವ.

(೬) ಕೊರಡು ಕೊನರುವಲ್ಲಿ ಬರಡ ಕರೆವಲ್ಲಿ, ಕಲ್ಲಿನ ಶಿಲೆಯೊಡೆದು ರೂಪುದೋರುವಲ್ಲಿ, ಬಳ್ಳವಲ್ಲಾಡದೆ ಲಿಂಗವಾಹಲ್ಲಿ ಇಂತಿವುಗಳಲ್ಲಿಯ ಗುಣವೋ, ಇಂತಿವೆಲ್ಲವನರಿವ ಕಲ್ಲೆದೆಯವನ ಗುಣವೋ? ಇಂತಿವ ಬಲ್ಲಡೆ ವಿಶ್ವಾಸದಲ್ಲಿಯೇ ವೀರಬೀರೇಶ್ವರ ಲಿಂಗವು ತಾನಾಗಿಪ್ಪ.

ಈ ವಚನಗಳಿಂದ ಗೊಲ್ಲಾಳನು ಇಷ್ಟಲಿಂಗ ಧಾರಕನೂ, ಷಟ್‌ಸ್ಥಲಜ್ಞಾನಿಯೂ, ಲಿಂಗಾಂಗಸಾಮರಸ್ಯದ ರೀತಿಯನ್ನು ಅರಿತವನೂ ಆಗಿದ್ದನೆಂದು ತೋರುತ್ತದೆ. ಮೇಲೆ ಇನೇ ಇನೇ ವಚನಗಳಿಂದಲೂ ಬೇರೆ

ವಚನಗಳಲ್ಲಿರುವ ಕುರಿ, ಹೋತು, ಆಡುಗಳ ಉಲ್ಲೇಖಗಳಿಂದಲೂ ಗೊಲ್ಲಾಳನು ಗೊಲ್ಲರ ಜಾತಿಯವನಿರದೆ ಕುರಿ ಕಾಯುವ ಕಾಯಕವನ್ನು ಮಾಡುತ್ತಿದ್ದ ಕುರುಬನಾಗಿದ್ದನೆಂದು ನಮಗೆ ತೋರುತ್ತದೆ. ಆದರೆ ಈ ಎಲ್ಲ ವಚನಗಳು ಎಷ್ಟು ಆಳವಾದ ವಿಚಾರಗಳುಳ್ಳವೂ ಗಂಭೀರವಾದವುಗಳೂ ಇರುತ್ತವೆಂಬುದನ್ನು ವಾಚಕರು ಲಕ್ಷಿಸತಕ್ಕದ್ದು. ಇವುಗಳಿಂದ ಗೊಲ್ಲಾಳನು ಅರಿಯದ ತೀರ ಕುರುಬನಾಗಿರದೆ, ಜ್ಞಾನಿಯಾಗಿದ್ದನೆಂಬುದು ಗೊತ್ತಾಗುತ್ತದೆ.

ಪಿಟ್ಟವ್ವೆ

ಕರಿಕಾಲ ಜೋಳನೆಂಬ ಜೋಳರಾಜನು ಕಾಂಚೀ ಪಟ್ಟಣದಲ್ಲಿ ರಾಜ್ಯವಾಳುತ್ತಿದ್ದನು. ಅವನು ಕ್ರಿ॥ ಶ॥ ೧೦೭೦ ರಿಂದ ೧೧೨೦ ರ ವರೆಗೆ ಬಹು ಘನತೆಯಿಂದ ರಾಜ್ಯವಾಳಿದನು. ಅವನ ರಾಜ್ಯದಲ್ಲಿ ಮುದುಗೊಂಡೆ ಎಂಬ ಗ್ರಾಮವಿದ್ದು ಅಲ್ಲಿ ಪಿಟ್ಟವ್ವೆಯೆಂಬ ಹೆಸರಿನ ಶಿವಶರಣೆಯು ವಾಸಮಾಡುತ್ತಿದ್ದಳು. ಅವಳು ಲಿಂಗಾನುಭವಿಯು, ಶಿವಶರಣರ ನಡೆಯಂತೆ ನಡೆಯುವವಳು. ಅವಳು ಮುಪ್ಪಾಗುವ ವರೆಗೂ ಬಹು ಭಕ್ತಿಯಿಂದ ಆಚರಿಸುತ್ತ ಮುಪ್ಪಿನ ಕಾಲದಲ್ಲಿ ಅವಳ ಪರಿಪಾಲನೆ ಮಾಡುವಂಥವರು ಯಾರೂ ಉಳಿಯಲಿಲ್ಲ. ಆದ್ದರಿಂದ ಅವಳು ದಿನಾಲು ದೋಸೆಗಳನ್ನು ಮಾಡುವ ಕಾಯಕವನ್ನು ಕೈಕೊಂಡು ಆವುಗಳನ್ನು ಮಾರಿ ಇದರಿಂದ ಬಂದ ಹಣದಿಂದ ತಾನು ಉಪಜೀವಿಸುತ್ತ ಉಳಿದದ್ದನ್ನು ಗುರು ಲಿಂಗ ಜಂಗವ ದಾಸೋಹಕ್ಕೆ ಅರ್ಪಿಸುತ್ತ ಬಂದಳು.

ಕರಿಕಾಲ ಜೋಳನು ತನ್ನ ರಾಜ್ಯದಲ್ಲಿ ತನ್ನ ತಾಯಿಯ ಸ್ಮರಣಾರ್ಥವಾಗಿ ನದಿಗೆ ಒಂದು ಬಹು ಬಲವಾದ ಮತ್ತು ವಿಸ್ತಾರವಾದ ಕಟ್ಟೆಯನ್ನು ಕಟ್ಟ ನದಿಯ ನೀರು ಹೊಲಗಳಲ್ಲಿ ಹಾಯ್ದು ಬರುವಂತೆ ಮಾಡಿದ್ದನು. ಆದರೆ ಒಂದು ದಿವಸ ವಿಪರೀತ ಮಳೆಯಾಗಲು ಕೆರೆಯ ಕಟ್ಟೆಯು ಒಡೆದು ಹೋಯಿತು. ಆಗ ಜೋಳರಾಜನು ತನ್ನ ರಾಜ್ಯ

ದಲ್ಲಿ ಬಹು ಜನರನ್ನು ಬಿಟ್ಟಿಯಾಗಿ ಹಿಡಿದು ಅವರಿಂದ ಮಣ್ಣು ಅಗಿಸಿ ಕಟ್ಟೆಗೆ ಅದನ್ನು ಹಾಕಿಸಲು ಪ್ರಾರಂಭಿಸಿದನು. ಅವನ ರಾಜ್ಯದಲ್ಲಿ ಎಂದೆಂದು ಮಣ್ಣು ಅಗಿಯುದಂಥ ಮಾಂಡಲಿಕರೂ ನಿಯೋಗಿಗಳೂ ಇದ್ದರು. ಆದರೂ ಅವರನ್ನು ಸಹ ಬಿಡದೆ ಸರತಿಯ ಮೇಲೆ ಎಲ್ಲರಿಂದಲೂ ಮಣ್ಣನ್ನು ಅಗಿಸುತ್ತ ಬಿದ್ದುಹೋದ ಕಟ್ಟೆಯ ಭಾಗವನ್ನು ತುಂಬಿಸುತ್ತ ಬಂದನು. ಅವನ ಆಜ್ಞೆಗೆ ವಿರುದ್ಧವಾಗಿ ಹೋಗಲು ಯಾರಿಗೂ ಧೈರ್ಯವಾಗಲಿಲ್ಲ. ಹೀಗಿರಲು ಮಣ್ಣನ್ನು ಹೊತ್ತು ಹಾಕುವ ಸರತಿಯು ಪಿಟ್ಟವ್ವೆಗೆ ಬಂದಿತು. ಆಗ ರಾಜನ ಸೇವಕರು ಅವಳ ಮನೆಗೆ ಬಂದು ಕಟ್ಟೆಯ ಕೆಲಸಕ್ಕೆ ಬಿಟ್ಟಬಾರೆಂದು ಅವಳಿಗೆ ಹೇಳಿದರು. ಆಗ ಅವಳು– ಶಿವಶಿವಾ, ನಾನು ಮುಪ್ಪಿನವಳು. ಇದು ನನಗಾಗದು ಎನ್ನಲು ಅವರು ಮಣ್ಣು ಹೊತ್ತಲ್ಲದೆ ಕಟ್ಟೆಯ ಕೆಲಸವಾಗದು, ನಡೆ ಎಂದು ಅವಳ ಮೇಲೆ ಬಲಾತ್ಕಾರ ಮಾಡಹತ್ತಿದರು. ಆಗ ಅವಳು—ಅಯ್ಯೋ, ಈ ಮಣ್ಣಿನ ಕೆಲಸ ನನ್ನಿಂದಾಗದು. ನಾನು ಬರುವದಿಲ್ಲೆಂದು ಅನ್ನಲು ಅವರು—ಹಾಗಿದ್ದರೆ ನಿನ್ನ ಸಲುವಾಗಿ ಬೇರೊಬ್ಬರನ್ನು ಕೊಡು ಎಂದು ಹೇಳಿದರು. ಅದಕ್ಕೆ ಅವಳು– ಮನೆಯಲ್ಲಿರುವವಳು ನಾನೊಬ್ಬಳೇ. ನನಗೆ ಬೇರೆ ಯಾರೂ ಇಲ್ಲ ಎಂದೆನ್ನಲು ಅವರು—ಹಾಗಾದರೆ ನಾವು ಬಿಡುವದಿಲ್ಲ, ನಡೆ ಎಂದು ಅವಳನ್ನು ಬಲಾತ್ಕಾರದಿಂದ ದಬ್ಬಿಕೊಂಡು ಹೋಗಹತ್ತಿದರು.

ಆಗ ಪರಮಾತ್ಮನು ಈ ಅನ್ಯಾಯವನ್ನು ನೋಡಿ ಸಹಿಸಲಾರದೆ ಒಬ್ಬ ರಡ್ಡಿಯ ವೇಷವನ್ನು ಹಾಕಿಕೊಂಡು ಗುದ್ದಲಿಯನ್ನು ಕಯ್ಯಲ್ಲಿ ಹಿಡಿದುಕೊಂಡು ಬಂದು ಪಿಟ್ಟವ್ವೆಗೆ—ನಿನ್ನ ಬಿಟ್ಟಿಯನ್ನು ನಾನು ಮಾಡುತ್ತೇನೆ. ಅದಕ್ಕೆ ನೀನು ನಿನ್ನ ಕಾಯಕದ ಹರುಕು ಮುರುಕು ದೋಸೆಯನ್ನು ಕೊಡುವೆಯಾ? ಎಂದು ಕೇಳಲು ಅವಳು—ಹಾಗೆಯೇ ಆಗಲಿ ಎಂದೆನ್ನಲು, ಅವನು ಆ ರಾಜಸೇವಕರೊಡನೆ ಕೆರೆಗೆ ಬಂದು ಮಣ್ಣನ್ನು ಅಗಿಯುತ್ತ ಕಟ್ಟೆಗೆ ಅದನ್ನು ಪಿಟ್ಟವ್ವೆಯ ಸಲುವಾಗಿ ಹಾಕಹತ್ತಿದನು.

ಶಿವನು ಮಣ್ಣನ್ನು ಅಗಿಯುವಾಗ ಎಲ್ಲರಕ್ಕಿಂತಲೂ ಹೆಚ್ಚಾಗಿ ಕೆಲಸ ಮಾಡುತ್ತಾ ಬಂದನು. ಆದರೆ ಅವನು ಮಧ್ಯದಲ್ಲಿ ಕೆಲಸವನ್ನು ನಿಲ್ಲಿಸಿ ನಾನಾತರದ ವಿನೋದಗಳನ್ನೂ ನೃತ್ಯಗಳನ್ನೂ ವಿಪರೀತವಾಗಿ ಮಾಡ

ಪಿಟ್ಟವ್ವೆಯ ಕಾಯಕವು ಕರ್ನಾಟಕದ ಶಿವಶರಣರ ಕಾಯಕವನ್ನು ಹೋಲುತ್ತದೆ. ಅವಳು ತಮಿಳು ನಾಡಿನಲ್ಲಿದ್ದರೂ ಅವಳು ಆಲ್ಲಿ ಪ್ರಸಿದ್ಧಳಾಗಿಲ್ಲ. ಆದರೆ ಕರ್ನಾಟಕದ ಶಿವಶರಣರಲ್ಲಿ ಅವಳ ಸ್ಥಾನವು ಬಹಳ ಹೆಚ್ಚಿನದಿರುತ್ತದೆ. ವೀರಶೈವ ಗ್ರಂಥಕಾರರು ಅವಳನ್ನು ಆಗಿಂದಾಗ್ಗೆ ಸ್ಮರಿಸುತ್ತಾರೆ. ಆದ್ದರಿಂದ ಅವಳು ಮೊದಲು ಕರ್ನಾಟಕಸ್ತಳಿದ್ದು ಹಿಂದುಗಡೆ ಅನೇಕ ಶಿವಶರಣರಂತೆ ತಮಿಳು ದೇಶಕ್ಕೆ ಹೋಗಿ ಜೋಳರಾಜ್ಯದಲ್ಲಿ ವಾಸಿಸಿರಬಹುದೆಂದು ತೋರುತ್ತದೆ.

ಕರಿಕಾಲ ಜೋಳನು ಬಸವೇಶ್ವರನಕಿಂತಲೂ ಸ್ವಲ್ಪ ಮೊದಲಿನವನಿದ್ದಾನೆ. ಆದ್ದರಿಂದ ಪಿಟ್ಟವ್ವೆಯೂ ಕೂಡ ಅವನಕಿಂತ ಮೊದಲನೆಯವಳಾಗುತ್ತಾಳೆ. ಈಕೆಯ ಹೆಸರು ಗಣಸಹಸ್ರದಲ್ಲಿ ಬಂದಿದೆ. ಆಕೆಯನ್ನು ದೇವಿಯರ ತ್ರಿವಿಧಿಯಲ್ಲಿ ಸ್ತುತಿಸಿರುವದು ಹೇಗೆಂದರೆ—

ಕರಿಕಾಲಜೋಳನಾ। ಕೆರೆಗೆ ಮಣ್ಣಡಕಲ್ಕೆ
ಹರಗುಣಲಿಕ್ಕಿ ಬಿಟ್ಟಯವ್ವೆ ಮಾಡಿಸಿದ
ಶಿವಶರಣೆ ಪಿಟ್ಟವ್ವೆ ಶರಣಾಗು

ಒಕ್ಕಲು ಮುದ್ದಯ್ಯ.

ಕರ್ನಾಟಕದಲ್ಲಿ ಜೋಳದಹಾಳೆಂಬ ಪುರವಿದ್ದು ಅಲ್ಲಿ ಒಕ್ಕಲು ಮುದ್ದಯ್ಯನೆಂಬ ಒಕ್ಕಲಿಗನು ವಾಸ ಮಾಡುತ್ತಿದ್ದನು. ಅವನು ಒಕ್ಕಲು ತನವನ್ನು ಮಾಡುತ್ತ ಹದಿನೆಂಟು ತೆರದ ಧಾನ್ಯಗಳನ್ನು ಬೆಳೆದು ರಾಜಪಾಲೆಂದು ಕೋರನ್ನು ಮತ್ತು ಸುಂಕಸೊದಿಗೆಯನ್ನು ಸಹ ಅರಸನಿಗೆ ಕೊಟ್ಟು ಸುಖದಿಂದ ಇರುತ್ತಿದ್ದನು. ಆದರೆ ಅವನು ಗುರುಕಾರುಣ್ಯವನ್ನು ಹೊಂದಿ ಲಿಂಗಭಕ್ತಿಯನ್ನು ಹೊಂದಬೇಕೆಂಬ ಉತ್ಕಟೇಚ್ಛೆಯುಳ್ಳವನಾಗಿದ್ದನು. ಆದ್ದರಿಂದ ಅವನು ಯಾವಾಗಲೂ ಈ ಚಿಂತೆಯಲ್ಲಿಯೇ ಮಗ್ನನಾಗಿರುತ್ತಿದ್ದನು.

ಹೀಗಿರುವಲ್ಲಿ ಅವನು ಒಂದುದಿನ ಬತ್ತವನ್ನು ಬಿತ್ತುವದಕ್ಕೋಸ್ಕರ ನೆಲವನ್ನು ಹದಮಾಡಬೇಕೆಂದು ನೇಗಿಲೆಯನ್ನು ಹೊಡೆಯುವಾಗ

ಹತ್ತುವನು. ಅರಸನ ಬಲ್ಲಾಳುಗಳು ಅವನು ಬಹಳ ಕೆಲಸವಮಾಡಿದ್ದನ್ನು ಆಲಸ್ಯಮಿ ನೀನು ಇನ್ನಿಷ್ಟು ಕೆಲಸವಮಾಡೆಂದು ಬಯ್ದು ಬೆತ್ತದಿಂದ ಅವನನ್ನು ಹೊಡೆಯಹತ್ತಿದರು. ಆದರೆ ಆ ಪೆಟ್ಟುಗಳು ಅವನಿಗೆ ಹತ್ತದೆ ಅವು ಅರಸನ ಆಳುಗಳಿಗೆಯೇ ಹತ್ತಲು ಅವರು ನೋವಿನಿಂದ ಬಳಲಹತ್ತಿದರು. ಕಟ್ಟೆಯ ಮೇಲೆ ಕೆಲಸ ಮಾಡುವವರೆಲ್ಲ ಇದನ್ನು ನೋಡಿ ಇದು ಬಹು ಚೋದ್ಯವೆಂದು ಶಿವನ ಸುತ್ತಲೂ ಗುಂಪಾಗಿ ನೆರೆದು ಗದ್ದಲಮಾಡಹತ್ತಿದರು. ಅಷ್ಟರಲ್ಲಿ ಕಟ್ಟೆಯ ಮೇಲೆ ಏನೋ ಗಲಾಟೆ ನಡೆದಿದೆಂದು ಕರಿಕಾಲ ಜೋಳನಿಗೆ ತಿಳಿಯಲು ಅವನು ತನ್ನ ನಿಯೋಗಿಗಳೊಂದಿಗೆ ಕೂಡಲೆ ಅಲ್ಲಿಗೆ ಬಂದು ವಿಚಾರಿಸಲು ಒಬ್ಬ ವ.ಣ್ಣಹೊರುವವನನ್ನು ಹೊಡೆಯಲು ಹೀಗಾಯಿತೆಂದು ಅವನಿಗೆ ತಿಳಿಯಬಂದಿತು. ಆಗ ರಾಜನು ಇದು ಅವನ ಕೃತಕ ವಿರಬೇಕೆಂದು ತಿಳಿದು ಸೇವಕರಿಗೆ—ಅವನನ್ನ ಇನ್ನೊಮ್ಮೆ ಚನ್ನಾಗಿ ಹೊಡೆಯಿರೆಂದು ಹೇಳಲು ಅವರು ಹಾಗೆಯೇ ಹೊಡೆಯಲು ಆ ಹೊಡೆತಗಳೆಲ್ಲ ಈ ನಾರೆ ಅರಸನ ನಿಯೋಗಿಗಳಿಗೆಯೇ ತಾಕಿದವು.

ಹೀಗಾಗಲು ಜೋಳರಾಜನು ಆಶ್ಚರ್ಯಬಟ್ಟು ಹೀಗೇಕಾಯಿತೆಂದು ಕೇಳುತ್ತಿರುವಾಗ ಈ ರಡ್ಡಿಯು ಪಿಟ್ಟವ್ವೆಯ ಸಲುವಾಗಿ ಕೆಲಸ ಮಾಡುತ್ತಿದ್ದಾನೆ, ಇಂಥ ಅದ್ಭುತವಾಗಬೇಕಾದರೆ ಅವಳ ಸಲುವಾಗಿ ಪರಮಾತ್ಮನೇ ಅವನ ರೂಪಿನಿಂದ ಇಲ್ಲಿಗೆ ಬಂದು ದುಡಿಯುತ್ತಿರಬೇಕು ಎಂದು ಅವನಿಗೆ ತೋರಿತು. ಆಗ ಅವನು ಭಕ್ತೆಯಾದ ಒಬ್ಬ ಮುದುಕಿಯನ್ನು ಬಿಟ್ಟಿಗೆ ಹಚ್ಚಿದ್ದಕ್ಕೋಸ್ಕರ ಹೀಗಾಯಿತು. ಹೀಗೆ ಬಿಟ್ಟಿ ಕೆಲಸ ತೆಗೆದುಕೊಳ್ಳುವದು ಬಹಳ ಅನ್ಯಾಯವಾದುದು ಇದರಲ್ಲಿ ನಾನೇ ತಪ್ಪುಗಾರನು ಎಂದು ತಿಳಿದು ಅವನು ಅವಳಿದ್ದಲ್ಲಿಗೆ ಹೋಗಿ ಅವಳ ಕ್ಷಮೆಯನ್ನು ಬೇಡಿಕೊಂಡನು. ರಡ್ಡಿಯ ವೇಷದಲ್ಲಿ ಅಲ್ಲಿ ನಿಂತಿದ್ದ ಶಿವನು ಪಿಟ್ಟವ್ವೆಯ ಕಾಯಕದ ಮಹಿಮೆಯನ್ನು ಜೋಳರಾಜನಿಗೆ ಹೇಳಿ ಅಲ್ಲಿಯೇ ಅಂತರ್ಧಾನನಾದನು.

ಕರಿಕಾಲಜೋಳನು ಜೋಳರಾಜರಲ್ಲಿ ಬಹು ಬಲಾಢ್ಯನು. ಇಂಥವನ ಬಿಟ್ಟಿಯನ್ನು ತಿರಸ್ಕರಿಸಿದ್ದಕ್ಕೋಸ್ಕರ ಮತ್ತು ಅವನನ್ನು ಕಡೆಗೆ ತನಗೆ ಶರಣಾಗತನಾಗಿ ಮಾಡಿದ್ದಕ್ಕೋಸ್ಕರ ಪಿಟ್ಟವ್ವೆಯು ಶಿವಶರಣರಲ್ಲಿ ಬಹು ಪ್ರಸಿದ್ಧಳಾಗಿದ್ದಾಳೆ.

ಅದರ ತುದಿಗೆ ಏನೋ ಒಂದು ತಟ್ಟಿಕೊಂಡು ನೇಗಿಲೆಯು ಮುಂದೆ ಹೋಗದ ಹಾಗಾಯಿತು. ನೆಲದೊಳಗಿದ್ದ ಒಂದು ಕೊರಡು ಅದಕ್ಕೆ ತಟ್ಟಿ ಹೀಗಾಗಿರಬೇಕೆಂದು ತಿಳಿದು, ಮುದ್ದಯ್ಯನು ಅದನ್ನು ಕಡಿಯಬೇಕೆಂದು ಕೊಡಲಿಯನ್ನು ತೆಗೆದುಕೊಂಡು ಬಂದು, ಮಣ್ಣನ್ನು ತೆಗೆಯುವಾಗ ನೆಲದೊಳಗಿಂದ— ಮುದ್ದಯ್ಯ, ನಾನು ಜನರಿಗೆ ಮುಕ್ತಿಯನ್ನು ಕೊಡುವಂಥ ಆದಿನಾಥ ಲಿಂಗವು. ಕೊಡಲಿಯಿಂದ ನನ್ನನ್ನು ಕಡಿಯಬೇಡ. ಹಾರಿಯಿಂದ ಮೆಲ್ಲನೆ ಅಗಿದು ಮಣ್ಣನ್ನು ಹೊರಗು ಮಾಡು ಎಂಬ ಶಬ್ದಗಳು ಹೊರಟವು. ಮುದ್ದಯ್ಯನು ಆಶ್ಚರ್ಯಪಟ್ಟು ಅವನು ಅವರಂತೆಯೇ ಹಾರಿಯಿಂದ ಮಣ್ಣನ್ನು ಸರಿಸಿ ನೋಡಲು, ಒಳಗೆ ಒಂದು ಸ್ವಯಂಭುಲಿಂಗವಿದ್ದಿದ್ದನ್ನು ಕಂಡನು. ಅವನು ಅದನ್ನು ಹೊರಗೆ ತೆಗೆದು ಅಲ್ಲಿಯೇ ಅದನ್ನು ಬಹು ಭಕ್ತಿಯಿಂದ ಸ್ಥಾಪಿಸಿ ಅದಕ್ಕೆ ಜೋಳದ ಅಂಬಿಲಿಯನ್ನೂ ತುಂಬಿಯ ಸೊಪ್ಪನ್ನೂ ಪಾಕಮಾಡಿ ನೈವೇದ್ಯಮಾಡಿ, ಅದನ್ನು ಲಿಂಗದೆದುರಿಗೆ ಇಟ್ಟು ಅದನ್ನು ಉಣ್ಣಬೇಕೆಂದು ಲಿಂಗಕ್ಕೆ ಪ್ರಾರ್ಥಿಸಿ, ಆ ನೈವೇದ್ಯವನ್ನು ಅಲ್ಲಿಯೇ ಮುಡಿಗಿದನು. ಆಗ ಅವನು ಬಹಳ ದಣಿದಿದ್ದರಿಂದ ಅಲ್ಲಿ ಇದ್ದ ಎಕ್ಕೆಯ ಗಿಡದಡಿಯಲ್ಲಿ ವಿಶ್ರಮಿಸಲು, ಕೂಡಲೆ ಅವನಿಗೆ ನಿದ್ರೆಹತ್ತಿತು.

ಮುಂದೆ ಅವನು ಎಚ್ಚತ್ತು ನೋಡುತ್ತಾನೆಯೇ, ತನ್ನ ಮುಂದೆ ಗುರುರೂಪನ್ನು ಧರಿಸಿದ ಜಂಗಮನೊಬ್ಬನನ್ನು ಕಂಡನು. ಅವನು ಅಲ್ಲಿದ್ದ ಕಕ್ಕಿಯ ಮರವನ್ನೇ ದೀಕ್ಷಾಮಂಟಪವಾಗಿಯೂ ಮರದ ಪುಷ್ಪ ಫಲಗಳನ್ನೇ ಪಂಚಕಳಶವಾಗಿಯೂ ಮಾಡಿ, ಮುದ್ದಯ್ಯನಿಗೆ ಅವನ ಅಪೇಕ್ಷೆಯಂತೆ ವೀರಶೈವ ದೀಕ್ಷೆಯನ್ನಿತ್ತು ಲಿಂಗಾಚಾರವನ್ನು ಬೋಧಿಸಿ ಆ ಆದಿನಾಥ ಲಿಂಗದಲ್ಲಿಯೇ ಐಕ್ಯನಾದನು. ಮುದ್ದಯ್ಯನು ಹೀಗೆ ಆದಿನಾಥಲಿಂಗದಿಂದ ದೀಕ್ಷೆಯನ್ನು ಹೊಂದಿ ತನ್ನ ಒಕ್ಕಲುತನದ ಕಾಯಕವನ್ನು ಮಾಡುತ್ತ ದಾಸೋಹಭಾವದಿಂದ ಇರಹತ್ತಿದನು.

ಹೀಗಿರುವಲ್ಲಿ ಒಂದುದಿನ ರಾಜಸೇವಕರು ಮುದ್ದಯ್ಯನಲ್ಲಿಗೆ ಬಂದು ರಾಜನಿಗೆ ಕೊಡಬೇಕಾದ ತೆರುಗೆಯನ್ನು ಬೇಡಲು ಅವನು ಅದನ್ನು ಕೊಟ್ಟನು. ಆಮೇಲೆ ಆ ಸೇವಕರು ಮತ್ತೆಯೂ ಬೇಡಹತ್ತಲು, ಅವನು ಕೊಡಲಿಲ್ಲಾದ್ದರಿಂದ ಸೇವಕರು ಅವನನ್ನು ತುಡುಕಿ

ನಿರ್ಬಂಧಿಸಹತ್ತಿದರು. ಆದರೆ ಮುದ್ದಯ್ಯನು ಅವರಿಂದ ಬಿಡಿಸಿಕೊಂಡು ರಾಜನ ಸಭೆಗೆ ಓಡಿ ಬಂದು— ನಿನ್ನ ಸೇವಕರಿಗೆ ಮೂವತ್ತು ಕೊಳಗದ ಭೂಮಿಗೆ ಆರುವತ್ತು ಹೊನ್ನು ಕೊಟ್ಟಿದ್ದೇನೆ. ಮತ್ತೆಯೂ ಅವರು ನನ್ನ ಕಡೆಯಿಂದ ಬೇಡುತ್ತಾರಲ್ಲಾ, ಎಂದು ತಿಳಿಸಿದನು. ಅದಕ್ಕೆ ರಾಜನು ಉದಾಸೀನನಾಗಿರಲು, ಮುದ್ದಯ್ಯನು ಅಲ್ಲಿಂದ ಹೊರಟು ಬಂದು ತನ್ನ ಗ್ರಾಮದಲ್ಲಿದ್ದವರ ಮುಂದೆ ಇದನ್ನು ಇಟ್ಟು ಗುತ್ತಿಗೆಯ ಪ್ರಕಾರ ನಾನು ಕೊಡತಕ್ಕ ಪಟ್ಟಿಯನ್ನು ಕೊಟ್ಟಿದ್ದೇನೆ, ಅರಸನ ಅಪ್ಪಣೆಯನ್ನು ನಾನು ಮೀರಿಲ್ಲ, ಎಂದು ಅವರಿಂದ ಬರೆಯಿಸಿಕೊಂಡು ತನ್ನ ಮನೆಗೆ ಬಂದನು. ಅರಸನು ಮುಂದೆ ಹೆಚ್ಚಿನ ಪಟ್ಟಿಯನ್ನು ಊರಿನವರೆಲ್ಲ ಕೊಡಬೇಕೆಂದು ಅನ್ಯಾಯವಾಗಿ ಎಲ್ಲರ ಮೇಲೆ ಒತ್ತಾಯ ಮಾಡಹತ್ತಿದನು. ಆಗ ಮುದ್ದಯ್ಯನು ತನ್ನ ಲಿಂಗದೊಡನೆ ಹೇಳಿಕೊಂಡದ್ದೇನೆಂದರೆ-- "ನಾನು ಮೂರಡಿ ಭೂಮಿಗೆ ಆರು ಹೊನ್ನಿನಂತೆ ೬೦ ಹೊನ್ನು ರಾಜನಿಗೆ ಕೊಟ್ಟಿನು. ಇದನ್ನು ಊರವರ ಮುಂದೆ ಇಡಲು ಅವರು ರಾಜನ ಅಪ್ಪಣೆಯನ್ನು ನಾನು ಮೀರಲಿಲ್ಲವೆಂದು ಪಟ್ಟಿಯನ್ನು ಬರೆದುಕೊಟ್ಟಿದ್ದಾರೆ. ಆದರೆ ರಾಜನು ಈಗ ಊರಗೂಡಿ ಹೆಚ್ಚಿನದನ್ನು ಎಲ್ಲರಿಂದಲೂ ಬೇಡಹತ್ತಿದ್ದಾನೆ. ಎಲೆ ಲಿಂಗವೇ, ನಾನು ಅದನ್ನು ಕೊಡುವದಿಲ್ಲ. ಅವನು ಈ ಹಡಿಕೆಯನ್ನು ಪುನಃ ಬೇಡಿದ್ದಾದರೆ ನಾನು ಸೆರೆ ಸಂಕೊಲೆಯ ವೇದನೆಯನ್ನು ಸಹಿಸಲು ಸಿದ್ಧನು. ಇನ್ನುಮೇಲೆ ರಾಜನಿಗೆ ಹೆಚ್ಚಿಗೆ ಕೊಟ್ಟಿನಾದರೆ, ಪರಮಾತ್ಮನೇ ನೀನು ನನ್ನ ಹಟ್ಟಿ, ಕೊಟ್ಟಿಗೆಯ ಒಡೆಯನಾದ್ದರಿಂದ ನಿನ್ನಾಣೆ. ನಾನು ಕೊಡತಕ್ಕ ತೆರುಗೆಯನ್ನು ಮಾತ್ರ ಅವನಿಗೆ ಕೊಡುವೆನು. ಹೀಗೆ ಕೊಟ್ಟು ನನಗೆ ಉಳಿದ ಧನಧಾನ್ಯದಲ್ಲಿ ದಾಸೋಹ ಮಾಡುತ್ತೇನೆ. ಹೀಗೆ ನಾನು ದಾಸೋಹವನ್ನು ಮಾಡುವಂತೆ ವರವನ್ನು ನಿನ್ನಲ್ಲಿ ನಾನು ಬೇಡಿಕೊಳ್ಳುತ್ತೇನೆ. ನನಗೆ ಬೇರೊಂದು ವರವು ಬೇಡ, ನಿನ್ನ ಗೋಸ್ಕರ ಭಕ್ತಿಯಿಂದಿರುವಿದೇ ನಾನು ಬೇಡುವ ವರವು. ನನ್ನ ಮನವೆಂಬ ಧನವನ್ನು ನಿನಗೆ ಸಲ್ಲಿಸುತ್ತೇನೆಯೇ ಹೊರತು ಇನ್ನೊಬ್ಬರಿಗೆ ಅದನ್ನು ಸಲ್ಲಿಸಲಾರೆನು" ಎಂದು ತನ್ನ ಇಷ್ಟಲಿಂಗದಲ್ಲಿ ಭಾಷೆಯನ್ನು ಬಿನ್ನೈಸಿಕೊಂಡನು. ಈ ರೀತಿಯಾಗಿ ಅವನು ಮುಂದೆ ಆಚರಿಸುತ್ತ ಲಿಂಗಾಂಗ ಸಾಮರಸ್ಯವನ್ನು ಹೊಂದಿದನು.

ಈ ಪ್ರಕಾರ ಒಕ್ಕಲು ಮುದ್ದಯ್ಯನು ತನ್ನ ಒಕ್ಕಲುತನ ಕಾಯಕವನ್ನು ಮಾಡುತ್ತ ತನಗೆ ದೊಕಿದ್ದರಲ್ಲಿ ಅರಸನಿಗೆ ಕೊಡತಕ್ಕದ್ದನ್ನು ಕೊಟ್ಟು ಅದರಲ್ಲಿ ನ್ಯಾಯವಾದ ರೀತಿಯಿಂದಲೇ ಉಳಿಸಿಕೊಂಡು ಹೀಗೆ ಉಳಿದುದನ್ನು ದಾಸೋಹ ಕಾರ್ಯಗಳಿಗೆ ಉಪಯೋಗಿಸುತ್ತ ತನ್ನ ಇಷ್ಟ ಲಿಂಗದಲ್ಲಿ ಬೆರೆತಿದ್ದಾನೆ. ಇದು ಮುದ್ದಯ್ಯನ ಒಂದು ಹೊಸ ರೀತಿಯ ಕಾಯಕದ ಮತ್ತು ದಾಸೋಹದ ಬಗೆಯು ಇರುತ್ತದೆ.

ಒಕ್ಕಲುಮುದ್ದಯ್ಯನು ವಚನಕಾರನು. ಅವನ ಕೆಲವು ವಚನಗಳನ್ನು ನಾವು ಕೆಳಗೆ ಉದಹರಿಸುತ್ತೇವೆ. ಅವನ ಮುದ್ರಿಕೆಯು "ಕಾಮ ಭೀಮ ಜೀವದನದೊಡೆಯ" ಎಂದಿದೆ. ಪರಮಾತ್ಮನು ಪ್ರಿಯಕರನೂ ಬಲಶಾಲಿಯೂ ಆಗಿದ್ದು ಅವನು ಜಗತ್ತಿನಲ್ಲಿರುವ ಜೀವಿಗಳಿಗೆ ಮತ್ತು ದನಗಳಿಗೆ ಒಡೆಯ, ಎಂಬ ಭಾವವು ಈ ಮುದ್ರಿಕೆಯಲ್ಲಿದೆ. ವಚನಕಾರರ ಮುದ್ರಿಕೆಗಳಲ್ಲಿ ಇದು ತೀರ ಹೊಸತರದ್ದು. ಅಲ್ಲದೆ ಅವನ ಕಾಯಕದ ಮತ್ತು ದಾಸೋಹದ ರೀತಿಯು ನಮ್ಮ ಆಧುನಿಕರು ವಿಚಾರ ಮಾಡುವಂತಹದಿದೆ.

ವಚನಗಳು

(೧) ಅಂಗವೇ ಭೂಮಿಯಾಗಿ, ಲಿಂಗವೇ ಬೆಳೆಯಾಗಿ, ವಿಶ್ವಾಸವೆಂಬ ಬತ್ತ ಬಲಿದು ಉಂಡು ಸುಖಿಯಾಗಿರಬೇಕೆಂದ ಕಾಮ ಭೀಮ ಜೀವ ದನದೊಡೆಯ.

(೨) ವೇದ ಶಾಸ್ತ್ರವನೋದುವದಕ್ಕೆ ಹಾರುವನಲ್ಲ. ಇರಿದು ಮೆರೆವುದಕ್ಕೆ ಕ್ಷತ್ರಿಯನಲ್ಲ. ವ್ಯವಹರಿಸುವುದಕ್ಕೆ ವೈಶ್ಯನಲ್ಲ. ಉಳುವ ಒಕ್ಕಲು ಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯ ಕಾಮ ಭೀಮ ಜೀವ ದನದೊಡೆಯ. ನೀನೇ ಬಲ್ಲೆ.

(೩) ಅರುಣನ ಕಿರಣದಿಂದ ಅಪ್ಪವಿನ ಸಾರ ಪೃಥ್ವಿಯೊಳಗಡಗಿದ್ದು ಪೃಥ್ವಿಯು ತಪ್ಪಿಸಿ ತಾನೊಪ್ಪದಲ್ಲಿ ತೆಗೆವಂತೆ ಅರಿವು ಮರವೆ ಪೃಥ್ವಿಯಪ್ಪವಿನಂತೆ ಇಪ್ಪ ಭೇದವ ತಾನರಿದು ಜಡ ಅಜಡವೆಂಬುಭಯ ಯುವನರಿವುದು ಸಕಲವೋ? ನಿಃಕಲವೋ? ಬೇರೊಂದು ಹೊಲಬೋ? ಇದರ ಹೊಲಬ ನೀನೇ ಬಲ್ಲೆ. ಕಾಮ ಭೀಮ ಜೀವ ದನದೊಡೆಯ ನಾನೆಂದೂ ಅರಿಯೆ.

(೪) ಆವ ವರ್ಣವ ಕೂಡಿದಡೂ ಅಪ್ಪುಮಯ ತಪ್ಪಿದಂತೆ ಸರ್ವಗುಣ ಸಂಪನ್ನನಾದಲ್ಲಿ ಭಕ್ತನೆಂದಡೂ ತಾನಾಗಿ, ಮಹೇಶ್ವರನೆಂದಡೂ ತಾನಾಗಿ, ಪ್ರಸಾದಿ ಎಂದಡೂ ತಾನಾಗಿ, ಪ್ರಾಣಲಿಂಗಿ ಎಂದಡೂ ತಾನಾಗಿ, ಶರಣನೆಂದಡೂ ತಾನಾಗಿ, ಐಕ್ಯನೆಂದಡೂ ತಾನಾಗಿ, ಒಂದನಹುದು ಒಂದನಲ್ಲ ಎನ್ನದೆ, ಕತ್ತಲೆಯಲ್ಲಿ ಹಾಲ ಕೊಂಡಡೆ ಸಿಹಿ ತಪ್ಪುವುದೇ? ಸತ್ತು ಚಿತ್ತಾನಂದವೆಂಬ ಗೊತ್ತು ಹರಿದನಂಗೆ ತಟ್ಟು ಮುಟ್ಟು ಹತ್ತುವ ಭಾವ ಒಂದೂ ಇಲ್ಲ. ಕಾಮ ಭೀಮ ಜೀವ ದನ ದೊಡೆಯ ತಾನು ತಾನೇ.

(೫) ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು. ಕ್ರಿಗರಿವು ಬೇಕೆಂಬಲ್ಲಿ ಉಭಯವನರಿದು ಘಟಿಸಬೇಕು. ಏರಿ ಹಿಡಿವನ್ನಕ್ಕ ನೀರ ಹಿಡಿದಡೆ ಸುಖವಲ್ಲದೆ ಏಮೂರಿದರುಂಟೇ? ಕ್ರಿಯೆ ಬಿಡಲಿಲ್ಲ. ಅರಿವ ಮರೆಯಲಿಲ್ಲ. ಬೆಳೆಯ ಕಾಯ್ದು ಮತ್ತೆ ಹೊಲಕ್ಕೆ ಕಾವಲುಂಟೇ? ಪವನ ಹೊತ್ತ ಬೆಳೆಯಂತೆ, ಬೆಳೆಯನೊಳಕೊಂಡ ಫಲದಂತೆ, ಅರಿವು ಆಚರಣೆಯಲ್ಲಿ ನಿಂದು ಆಚರಣೆ ಅರಿವಿನಲ್ಲಿ ಲೇಪವಾದ ಮತ್ತೆ ಕಾಮ ಭೀಮ ಜೀವದನದೊಡೆಯನೆಂಬುದ ಭಾವಿಸಲಿಲ್ಲ.

ಮೇಲಿನ ವಚನಗಳಲ್ಲಿ ಒಕ್ಕಲು ಮುದ್ದಯ್ಯನು ಒಕ್ಕಲುತನ ಮಾಡುವ ರೀತಿಗಳನ್ನು ವಿವರಿಸುತ್ತ ಅವುಗಳ ಮೂಲಕ ಉಚ್ಚತರದ ಪಾರಮಾರ್ಥಿಕ ವಿಚಾರಗಳನ್ನು ಹೇಗೆ ನಿರೂಪಿಸಿದ್ದಾನೆಂಬುದನ್ನು ವಾಚಕರು ಅವಶ್ಯವಾಗಿ ಲಕ್ಷಿಸಬೇಕು. ಕೆಳಗೆ ಕಾಣಿಸಿದ ವಚನದಲ್ಲಿ ಅವನು ತನ್ನ ಅರಸನೊಡನೆ ಉಂಟಾದ ವಿರೋಧವನ್ನು ಕುರಿತು ಹೇಳುತ್ತಾನೆ.

(೬) ಅಯ್ಯಾ, ಮೂರಡಿ ಮಣ್ಣಿಂಗೆ ಆರು ಹೊನ್ನ ತೆತ್ತೆ. ಮೂರಿ ಹಡಿಕೆಯ ಬೇಡೆ, ಗ್ರಾಮದವರ ಮುಂದಿಟ್ಟು ಮೂರಲಿಲ್ಲ ಎಂದು ಪಟ್ಟೆಯ ಕೊಟ್ಟು ನುತ್ತೂರಗೂಡಿ ಹಡಿಕೆಯ ನೀ ಬೇಡಿದಡೆ ನಾ ಕೊಡಲಿಲ್ಲ. ನೀ ಕೊಟ್ಟ ಪಟ್ಟೆ ನಮ್ಮ ನಟ್ಟ ನಡುಮನೆಯ ನೆಲನಲ್ಲಿ ಕಟ್ಟಿಯಿದೆ ಕೋ. ನೀ ತಪ್ಪಿದಡೆ ನಿನಗೆ ಹೇಳುವ ಒಡೆಯರುಂಟೆ? ನಾನೊಕ್ಕಲು, ನೀನೊಡೆಯ. ಮೂರಿಕೊಂಡಿಹೆನೆಂದರೆ ಮುನ್ನವೇ ಸೆರೆ ಸಂಕೊಲೆ

ಗೊಳಗು. ಗುತ್ತಿಗೆಗಾರಂಗೆ ಮುತ್ತೆ ಕುಳವುಂಟೆ? ಇನ್ನು ಕೊಟ್ಟಿನಾದರೆ ಎನ್ನ ಹಟ್ಟ ಕೊಟ್ಟಗೆಗೊಡೆಯ ಕಾವು ಭೀಮ ಜೀವ ದನದಾಣೆ.

ಭಾವಃ— ಈ ವಚನವನ್ನು ಒಕ್ಕಲು ಮುದ್ದಯ್ಯನು ತನ್ನ ರಾಜನಿಗೆ ಉದ್ದೇಶಿಸಿ ಹೇಳುತ್ತಾನೆ. ಅವನು ಹೇಳುವದೇನೆಂದರೆ— ನನ್ನ ಭೂಮಿಗೋಸ್ಕರ ಮೂರಡಿಗೆ ಅರು ಹೊನ್ನಿನಂತೆ ರಾಜನಿಗೆ ಕಂದಾಯವನ್ನು ಕೊಟ್ಟಿದ್ದೇನೆ. ಕೊಟ್ಟರೂ ಹೆಚ್ಚಿಗೆ ಅವನು ಕೊಡಬೇಕೆಂದು ಬೇಡುತ್ತಾ ಇದ್ದಾನೆ. ಇಂಥ ಹಡಿಕೆಯ ಹಣವನ್ನು ಕೊಡುವ ವಿಷಯವನ್ನು ಗ್ರಾಮದವರ ಮುಂದಿಡಲು, ಅವರು ನಾ ಕೊಟ್ಟ ಕಂದಾಯವು ಸರಿಯಾದದ್ದು, ಅರಸನ ಅಪ್ಪಣೆಯನ್ನು ನಾನು ಮೀರಲಿಲ್ಲ ಎಂದು ಬರಹವನ್ನು ನನಗೆ ಕೊಟ್ಟಿದ್ದಾರೆ. ಆದರೂ ರಾಜನು ಊರವರನ್ನೊಡಗೊಂಡು ಪುನಃ ನನ್ನಿಂದ ಹಡಿಕೆಯನ್ನು ಬೇಡುತ್ತಾನೆ. ಅವನ್ನು ನಾನು ಕೊಡಲಿಲ್ಲ. ಅರಸನು ಕೊಟ್ಟಂಥ ಪಟ್ಟಿಯು ನನ್ನ ಮನೆಯಲ್ಲಿದೆ. ಆದರೂ ಅವನು ಹೆಚ್ಚಿಗೆ ಬೇಡಿದರೆ ಅವನಿಗೆ ತಿಳಿಸಿ ಹೇಳುವ ಒಡೆಯರಾರು? ಯಾಕಂದರೆ ನಾನು ಒಕ್ಕಲು ಆಗಿದ್ದೇನೆ. ಮತ್ತು ಅವನು ನನ್ನ ಒಡೆಯನು. ಆದರೂ ಅವನು ಮೀರಿ ಕಂದಾಯವನ್ನು ತೆಗೆದುಕೊಳ್ಳುವೆನೆಂದರೆ, ನಾನು ಅವನ ಸೆರೆ ಸಂಕೊಲೆಯ ಬಂಧನವನ್ನು ಹೊಂದಲು ಸಿದ್ಧನಿದ್ದೇನೆ. ಆದರೆ ಇದರಿಂದ ಗುತ್ತಿಗೆಗಾರರಿಗೆ ಕುಳಗಳು ಉಳಿಯಲಾರವು. ರಾಜನೇ, ನಾನು ನಿನಗೆ ಈ ಹೆಚ್ಚಿನ ಕಂದಾಯವನ್ನು ಕೊಟ್ಟಿನಾದರೆ, ನನ್ನ ಹಟ್ಟ ಕೊಟ್ಟಗೆಗೆ ನಿಜವಾದ ಒಡೆಯನಾದ ಪರಮಾತ್ಮನ ಆಣೆ ಎಂದು ಹೇಳುತ್ತಾನೆ. ಅಂದರೆ ತನ್ನ ಹಟ್ಟ ಕೊಟ್ಟಗೆಯ ಒಡೆಯನು ರಾಜನಲ್ಲ, ಆದರೆ ಪರಮಾತ್ಮನು, ಎಂಬ ಭಾವವನ್ನು ಇಟ್ಟುಕೊಂಡು ವಚನಕಾರನು ಈ ವಚನವನ್ನು ಪ್ರತಿಜ್ಞಾಪೂರ್ವಕವಾಗಿ ನುಡಿದಿದ್ದಾನೆ.

ಈ ಕಡೆಯ ಅರನೆಯ ವಚನದಿಂದ ಮುದ್ದಯ್ಯನಿದ್ದ ಕಾಲದಲ್ಲಿ ರಾಜರು ಕಂದಾಯವನ್ನು ಹೇಗೆ ವಸೂಲು ಮಾಡುತ್ತಿದ್ದರೆಂಬದು ಕೆಲಮಟ್ಟಿಗೆ ತಿಳಿದು ಬರುತ್ತಿದೆ. ಅವರು ಪ್ರತಿಯೊಬ್ಬ ಒಕ್ಕಲಿಗನು ಕಂದಾಯವನ್ನು ಎಷ್ಟು ಕೊಡಬೇಕೆಂಬುದನ್ನು ಈಗಿನಂತೆ ನಿರ್ಧರಿಸದೆ ಗ್ರಾಮದವರೆಲ್ಲರೂ ಕೂಡಿ ಒಟ್ಟಾಗಿ ಎಷ್ಟು ಕೊಡಬೇ

ಕೆಂಬುದನ್ನು ಅವರು ಗೊತ್ತುಪಡಿಸಿ ಅದನ್ನು ವಸೂಲು ಮಾಡಲಿಕ್ಕೆ ಗುತ್ತಿಗೆಗಾರರನ್ನು ನೇಮಿಸುತ್ತಿದ್ದಂತೆ ತೋರುತ್ತದೆ. ಈ ಗುತ್ತಿಗೆಗಾರರು ಹಳ್ಳಿಯ ಪಂಚರ ಸಹಾಯದಿಂದ ಕಂದಾಯವನ್ನು ವಸೂಲು ಮಾಡಿ ರಾಜರಿಗೆ ಅದನ್ನು ಕಳಿಸಿಕೊಡುವರು. ಅವರು ಈ ಕಂದಾಯವಲ್ಲದೆ ಅನ್ಯಾಯವಾಗಿ ಹೆಚ್ಚಿಗೆ ಹಣವನ್ನು ತಮ್ಮಗೋಸ್ಕರ ಎತ್ತುತ್ತಿದ್ದುದನ್ನು ಈ ವಚನದಲ್ಲಿ ಹೇಳಿದೆ. ಹೀಗೆ ಅವರು ಎತ್ತುವದನ್ನು ಒಕ್ಕಲು ಮುದ್ದಯ್ಯನು ವಿರೋಧಿಸಿದ್ದಾನೆ. ಅವನು ವಿರೋಧಿಸುವ ಪೂರ್ವದಲ್ಲಿ ನ್ಯಾಯವಾಗಿ ತಾನೆಷ್ಟು ರಾಜನಿಗೆ ಕೊಡಬೇಕೆಂಬುದನ್ನು ಊರವರಿಗೆ ರಾಜನು ಕೊಟ್ಟ ಪಟ್ಟಿಯ ಮೂಲಕ ಮೊದಲು ಗೊತ್ತುಪಡಿಸಿಕೊಳ್ಳುತ್ತಾನೆ. ಇದರಿಂದ ರಾಜರು ಊರವರು ಕೊಡತಕ್ಕ ಕಂದಾಯದ ವಿಷಯವಾಗಿ ಕೆಲವೊಂದು ಬರಹವನ್ನು ತಯಾರಿಸುತ್ತಿದ್ದು ಇದಕ್ಕೆ 'ಪಟ್ಟಿ' ಎಂಬ ಹೆಸರಿದ್ದಹಾಗೆ ತೋರುತ್ತದೆ. ಗುತ್ತಿಗೆಗಾರನು ಇದರಲ್ಲಿ ನಿರ್ದೇಶವಾದದ್ದಕ್ಕಿಂತಲೂ ಹೆಚ್ಚು ಹಣ ಬೇಡಲು ಮುದ್ದಯ್ಯನು ಮೊದಲು ಅರಸನನ್ನುಕಂಡು ಅವನಿಗೆ ಈ ವಿಷಯವಾಗಿ ದೂರು ಹೇಳಿದ್ದಾನೆ. ಆದರೆ ಅರಸನು ಅದನ್ನು ಅಲಕ್ಷಿಸಿದ ಹಾಗೆ ತೋರುತ್ತದೆ. ಆ ಮೇಲೆ ಮುದ್ದಯ್ಯನು ಅರಸನ ಅನ್ಯಾಯವನ್ನು ಊರವರ ಮುಂದೆ ಇಡಲು ಅವರು ಅವನನ್ನು ಸಮರ್ಥಿಸಿದ್ದಾರೆ. ಇದರ ತರುವಾಯ ಅರಸನು ಹೆಚ್ಚಿನ ಹಣವನ್ನು ಅನ್ಯಾಯವಾಗಿ ಊರಿನ ಎಲ್ಲ ಜನರಿಂದ ಬೇಡಿದ ಹಾಗೆ ಈ ವಚನದಲ್ಲಿ ಹೇಳಿದೆ. ಆಗ ಒಕ್ಕಲು ಮುದ್ದಯ್ಯನು ಅದನ್ನು ತಾನು ಕೊಡುವದಿಲ್ಲೆಂದು ಇಲ್ಲಿ ಪ್ರತಿಜ್ಞೆಮಾಡಿದ್ದಾನೆ. ಅವನು ಹೀಗೆ ಕಂದಾಯವನ್ನು ಕೊಡದಿದ್ದರ ಪರಿಣಾಮವೇನಾಯಿತೆಂಬುದು ಮಾತ್ರ ಈ ವಚನದಲ್ಲಾಗಲಿ ಇಲ್ಲವೆ ಅವನ ಚರಿತ್ರೆಯಲ್ಲಾಗಲಿ ಹೇಳಿಲ್ಲ. ಅವನು ತನ್ನ ಪ್ರತಿಜ್ಞೆಯನ್ನು ನಡಿಸಿದಂತೆ ತೋರುತ್ತದೆ. ಹೀಗೆ ತನ್ನ ಒಕ್ಕಲುತನ ಕಾಯಕವನ್ನು ನಡಿಸುತ್ತ ಮುದ್ದಯ್ಯನು ತನ್ನ ಇಷ್ಟಲಿಂಗದಲ್ಲಿ ಐಕ್ಯವಾದನೆಂದು ಈ ವಚನದಿಂದ ತಿಳಿದು ಬರುತ್ತಿದೆ.

ಕಾಯಕ ಮಾಡುವಲ್ಲಿ ಶರಣನು ನ್ಯಾಯವಾದದ್ದಕ್ಕೋಸ್ಕರ ಮಾತ್ರ ಹಣವನ್ನು ವೆಚ್ಚ ಮಾಡತಕ್ಕದ್ದು, ಅನ್ಯಾಯವಾದದ್ದಕ್ಕೋಸ್ಕರ ವೆಚ್ಚಮಾಡಬಾರದೆಂಬ ಭಾವವು ಇದರಲ್ಲಿದೆ. ಹೀಗೆ ಮಾಡು

ವಲ್ಲಿ ಏನಾದರೂ ಹಣ ಉಳಿದರೆ ಅದನ್ನು ಅವನು ದಾಸೋಹಕ್ಕೆ ಅಂದರೆ ಗುರು ಲಿಂಗ ಜಂಗಮಕ್ಕೋಸ್ಕರ ಮತ್ತು ತಾನು ಮಾಡಬೇಕಾದ ಸತ್ಕಾರ್ಯಗಳಿಗೋಸ್ಕರ ವಿನಿಯೋಗಿಸತಕ್ಕದ್ದು. ಇದು ಶಿವಶರಣರ ನಡೆಯಾಗಿರುತ್ತದೆ. ಈ ತತ್ವಗಳು ಒಕ್ಕಲು ಮುದ್ದಯ್ಯನ ಚರಿತ್ರೆಯಲ್ಲಿ ಅಡಕವಾಗಿರುತ್ತವೆ.

ಪಿಟ್ಟವ್ವೆಯಾದರೂ ಒಕ್ಕಲು ಮುದ್ದಯ್ಯನಂತೆ ಅರಸನ ಅನ್ಯಾಯದ ಕಾರ್ಯಗಳನ್ನು ವಿರೋಧಿಸಿದ್ದಾಳೆ. ಅವಳು ಹೀಗೆ ವಿರೋಧ ಮಾಡುತ್ತಿರುವಲ್ಲಿ ಕಡೆಗೆ ಅವಳಿಗೆ ಜಯವು ಪ್ರಾಪ್ತವಾಗಿರುತ್ತದೆ. ಕಡೆಗೆ ಒಬ್ಬ ಬಲಾಢ್ಯರಾಜನು ಸಹ ಅವಳಿಗೆ ಸನ್ಮಾನಮಾಡುವ ಪ್ರಸಂಗವು ಬಂದಿತು.

ಶಿವಶರಣರು ಬಹುತರವಾಗಿ ಬಡವರು. ಅವರು ತಮ್ಮ ಶಿವಾನುಭವದಂತೆ ನಡೆಯುವಲ್ಲಿ ಉಚ್ಚವರ್ಗದವರ ಹಗೆತನಕ್ಕೆ ಗುರಿಯಾಗುವ ಪ್ರಸಂಗಗಳು ಅವರಿಗೆ ಆಗಿಂದಾಗ್ಗೆ ಬರುತ್ತಿದ್ದವು. ಅರಸರ ಬಲಾತ್ಕಾರಗಳನ್ನೂ ಸಹ ವಿರೋಧಿಸುವ ಪ್ರಸಂಗಗಳು ಅವರಿಗೆ ಬಂದಿವೆ. ಆಗ ಅವರು ಹೇಗೆ ನಡೆದರೆಂಬುದನ್ನು ಒಕ್ಕಲು ಮುದ್ದಯ್ಯ ಮತ್ತು ಪಿಟ್ಟವ್ವೆ ಇವರ ಚರಿತ್ರೆಗಳಿಂದ ನಾವು ಚನ್ನಾಗಿ ಅರಿತುಕೊಳ್ಳಬಹುದಾಗಿದೆ.

ಕೆಲವು ಚರಿತ್ರೆಗಳಲ್ಲಿ ಒಕ್ಕಲು ಮುದ್ದಯ್ಯ ಎಂಬ ಹೆಸರಿನ ಬದಲಾಗಿ ಒಕ್ಕಲು ಮುಗ್ಧಯ್ಯನೆಂಬ ಹೆಸರು ಬಂದಿರುತ್ತದೆ. ಆದರೆ ಅವನು ಮುಗ್ಧನಾಗಿರದೆ ಜ್ಞಾನಿಯೂ ಶಿವಾನುಭವಿಯೂ ಆಗಿ ಲೌಕಿಕ ವ್ಯವಹಾರದಲ್ಲಿ ಜಾಣನಾಗಿದ್ದನೆಂದು ಅವನ ವಚನಗಳಿಂದ ತಿಳಿದು ಬರುತ್ತಿದೆ. ಆದ್ದರಿಂದ ಒಕ್ಕಲು ಮುದ್ದಯ್ಯನೆಂಬ ಹೆಸರೇ ನಿಜವಾದುದೆಂದು ನಮಗೆ ತೋರುತ್ತದೆ.

ವೈಜವ್ವೆ.

ವೈಜವ್ವೆಯ ಚರಿತ್ರೆಯು ನಿಜಾಮನ ರಾಜ್ಯದಲ್ಲಿರುವ 'ಪರಳಿ ವೈಜನಾಥ' ಎಂಬ ಹೆಸರಿನ ಪ್ರಸಿದ್ಧ ದೇವಾಲಯಕ್ಕೆ ಸಂಬಂಧಿಸಿರುತ್ತದೆ. ಆಕೆಯ ಮೂಲಕವಾಗಿಯೇ ಈ ದೇವಾಲಯವು ಉಂಟಾಗಿರುತ್ತದೆ.

ಪರಳೀಗ್ರಾಮವು ನಿಜಾಮು ಇಲಾಖೆಯಲ್ಲಿ ಬೀಡ ಜಿಲ್ಲೆಯಲ್ಲಿರುವ ಮೋಮಿನಾಬಾದ ಎಂಬ ತಾಲೂಕಿನಲ್ಲಿರುತ್ತದೆ. ಇದು ಗೋದಾವರೀ ತೀರ ಪ್ರದೇಶದಲ್ಲಿ ಅದರ ಬಲಭಾಗದಲ್ಲಿದೆ. ಇದು ಸೊಲ್ಲಾಪುರ ಪಟ್ಟಣದ ಉತ್ತರಕ್ಕೆ ಸುಮಾರು ೧೩೦ ಮೈಲು ದೂರವಿರುತ್ತದೆ. ಗೋದಾವರಿಯು ಪರಳಿಯಿಂದ ಉತ್ತರಕ್ಕೆ ೧೫–೨೦ ಮೈಲುಗಳ ಮೇಲೆ ಹರಿಯುತ್ತಿದೆ. ಇದರ ಪೂರ್ವದ ಹೆಸರು ಪರಿವಳಿಗೆ ಎಂಬುದಾಗಿತ್ತು.

ಈ ಪರಿವಳಿಗೆಗೆ ಸಮೀಪವಾಗಿ ಒಂದು ಶಿವಪುರವಿದ್ದು ಅಲ್ಲಿ ಒಬ್ಬ ಶಿವಭಕ್ತನು ತನ್ನ ಹೆಂಡತಿಯೊಡನೆ ಸುಖವಾಗಿ ವಾಸ ಮಾಡುತ್ತಿದ್ದನು. ಉಭಯ ದಂಪತಿಗಳು ಶಿವನಲ್ಲಿ ಪೂರ್ಣ ವಿಶ್ವಾಸವುಳ್ಳವರು. ಯಾವಾಗಲೂ ಲಿಂಗಪೂಜೆಯಲ್ಲಿ ನಿರತರಾದವರು. ಅವರಿಗೆ 'ವೈಜವ್ವೆ' ಎಂಬ ಹೆಸರಿನ ಮಗಳು ಹುಟ್ಟಿದಳು. ಅವಳು ತನ್ನ ತಾಯಿತಂದೆಗಳಂತೆಯೇ ಲಿಂಗ ಭಕ್ತಿಯುಳ್ಳವಳಾಗಿ ಲಿಂಗಾನುಭವಿಯಾಗಿ ಆಚರಿಸುತ್ತ ಬಂದಳು. ಅವಳು ಹೀಗೆ ಬೆಳೆಯುತ್ತ ಯೌವ್ವನಾವಸ್ಥೆಯನ್ನು ಹೊಂದಿದಳು.

ಹೀಗಿರಲಾಗಿ ವೈಜವ್ವೆಯ ತಂದೆಯ ತಂಗಿಯು ಪರಿವಳಿಗೆ ಗ್ರಾಮದಲ್ಲಿರುತ್ತಿದ್ದಳು. ಅವಳು ಒಂದು ದಿನ ತನ್ನ ಅಣ್ಣನನ್ನು ಕಾಣಲಿಕ್ಕೆಂದು ಅವನಿದ್ದ ಗ್ರಾಮಕ್ಕೆ ಬಂದಳು. ಅವಳು ವೈಜವ್ವೆಯನ್ನು ನೋಡಿ ಅವಳನ್ನು ತನ್ನ ಮಗನಾದ ನೇಮಿಸೆಟ್ಟಿಗೆ ಕೊಡಬೇಕೆಂದು ತನ್ನ ಅಣ್ಣನಿಗೆ ಕೇಳಿದಳು. ಅದಕ್ಕೆ ಅವನು— ನೀವು ಜೈನರು. ನಾವು ಶಿವಭಕ್ತರು. ನೇಮಿಸೆಟ್ಟಿಯು ನನಗೆ ಸೋದರಳಿಯನಾದರೇನಾಯಿತು? ನಾನು ನನ್ನ ಮಗಳನ್ನು ಶ್ರವಣರಿಗೆ ಕೊಡುವದಿಲ್ಲ ಎಂದು ಹೇಳಿದನು. ಅದಕ್ಕೆ ಅವನ ತಂಗಿಯು— ಅಣ್ಣನೇ, ನೀನು

ನಿನ್ನ ಬೆನ್ನುಬಿದ್ದ ತಂಗಿಗೆ ಲೇಸು ಮಾಡಿದೆ. ನಾನು ವೈಜವ್ವೆಯನ್ನ ಎಂದೂ ಬಿಡುವವಳಲ್ಲ. ಅವಳನ್ನು ನನ್ನ ಮಗನಿಗೆ ನೀನು ಕೊಡಲೇ ಬೇಕೆಂದು ಛಲ ಹಿಡಿದು ಮನೆಯಲ್ಲಿ ಕುಳಿತಳು. ಆದರೂ ಅವಳ ಅಣ್ಣನು ಅದಕ್ಕೆ ಒಪ್ಪದಿರಲು ಅವಳು ಎರಡು ಮೂರು ದಿವಸಗಳ ವರೆಗೂ ಉಪವಾಸವಿದ್ದಳು. ಆಗ ಬಂಧುಬಳಗದವರು ಅದನ್ನು ನೋಡಿ ಅಣ್ಣನ ಮನೆಯಲ್ಲಿ ನೆರೆದು ಅವನಿಗೆ— ನೀನು ಹೀಗೆ ಕ್ರೂರತನ ಮಾಡಬೇಡ. ಹಿರಿಯರಲ್ಲಿ ನೆಂಟರಲ್ಲಿ ಹೀಗೆ ಛಲವಿರಬಾರದು. ನಿನ್ನ ತಂಗಿಯು ಜೈನಳಾದರೇನಾಯಿತು? ಅವಳ ಮಗನಿಗೆ ನಿನ್ನ ಮಗಳನ್ನು ಕೊಡುವದೇ ಉಚಿತವಾದದ್ದು ಎಂದು ಹೇಳಲು, ಅವನು ಅವಕ್ಕೆ ಒಪ್ಪಿ ತನ್ನ ತಂಗಿಗೆ— ನನ್ನ ಮಗಳನ್ನು ನಿನ್ನ ಮಗನಿಗೆ ಕೊಟ್ಟೆನು ಎಂದು ಅವಳಿಗೆ ಮಾತನ್ನು ಕೊಟ್ಟನು. ಆಮೇಲೆ ಉಭಯತರು ಲಗ್ನದ ಸಿದ್ಧತೆಯಲ್ಲಿ ತೊಡಗಿದರು.

ಆದರೆ ವೈಜವ್ವೆಯು ಹರನಲ್ಲಿ ಪೂರ್ಣ ಭಕ್ತಿಯುಳ್ಳವಳು. ಅವಳು ತನ್ನನ್ನು ಒಬ್ಬ ಜೈನನಿಗೆ ಕೊಟ್ಟು ಲಗ್ನಮಾಡುತ್ತಾರೆಂಬುದನ್ನು ಕೇಳಿ, ಮನದಲ್ಲಿ ಅತ್ಯಂತವಾಗಿ ನೊಂದು ತನ್ನಲ್ಲಿ— ಈಗ ನಾನೇನು ಮಾಡಲಿ? ನಾನು ಭವಿಯನ್ನ ಸೋಂಕದೆ ಹೇಗಿರಲಿ? ತಿಳಿವಿನಲ್ಲಿ ಹುಟ್ಟಿದ ನಾನು ಮರವೆಯಲ್ಲಿ ಹೇಗೆ ಇರಲಿ? ಪರಮಾತ್ಮನೇ, ನಿನ್ನನ್ನು ಇನ್ನುಮೇಲೆ ನಾನು ಹೇಗೆ ನೆನೆವೆನು? ನೀನು ನನ್ನನ್ನು ರಕ್ಷಿಸು, ರಕ್ಷಿಸು ಎಂದು ಶೋಕಿಸಹತ್ತಿದಳು. ಹೀಗಿರಲು ಆ ದಿನ ರಾತ್ರಿ ಅವಳ ಕನಸಿನಲ್ಲಿ ಪರಮಾತ್ಮನು ಬಂದು— ವೈಜವ್ವೆಯೇ, ನೀನು ಚಿಂತೆ ಮಾಡಬೇಡ. ನಾನು ಯಾವಾಗಲೂ ನಿನ್ನ ಸಮೀಪದಲ್ಲಿರುವೆನು. ನನ್ನನ್ನು ನಂಬು. ನೀನು ನೇಮಿಸೆಟ್ಟಿಯನ್ನು ಮದುವೆಯಾಗು. ಜಗತ್ತಿನಲ್ಲಿ ನಿನ್ನ ಹೆಸರು ಕಡೆಯ ವರೆಗೆ ಉಳಿಯುವಂತೆ ಮಾಡುವೆನು ಎಂದು ಹೇಳಿದನು. ಮರುದಿವಸ ಲಗ್ನ ಕಾರ್ಯವು ಪ್ರಾರಂಭವಾಯಿತು. ಲಗ್ನವು ಮುಗಿಯಿತು. ತಂದೆಯು ಮಗಳನ್ನು ಅಳಿಯನಿಗೆ ಒಪ್ಪಿಸಿದನು. ಅಳಿಯನು ಅವಳನ್ನು ಕರೆದುಕೊಂಡು ತನ್ನ ಗ್ರಾಮವಾದ ಪರಿವಳಿಗೆಗೆ ಬಂದನು.

ಆದರೆ ವೈಜವ್ವೆಗೆ ಗಂಡನ ಮನೆಯಲ್ಲಿ ಎಲ್ಲವೂ ಕತ್ತಲೆಯಾದಂತೆ ತೋರಹತ್ತಿತು. ಅವಳ ಮನಸ್ಸಿನಲ್ಲಿ ಎಷ್ಟುಮಾತ್ರವೂ ಸಮಾಧಾನವಿರಲಿಲ್ಲ. ಅಲ್ಲಿ ತನ್ನ ಲಿಂಗಪೂಜೆಯಲ್ಲಿರಲು ಅವಳಿಗೆ ಎಷ್ಟುಮಾತ್ರವೂ ಅವಕಾಶವಿರಲಿಲ್ಲ. ಆದರೂ ಅವಳು ಯಾವಾಗಲೂ ಲಿಂಗಧ್ಯಾನದಲ್ಲಿಯೇ ಇರುವಳು. ಹರಿಹರ ಮಹಾಕವಿಯು ಅವಳ ಲಿಂಗಾಚರಣೆಯನ್ನು ವರ್ಣಿಸಿರುವದು ಹೇಗೆಂದರೆ— ಆಗ ಅವಳು ಭಸಿತ ರುದ್ರಾಕ್ಷಿಗಳನ್ನು ತನ್ನ ಮನವೆಂಬ ಶರೀರದಲ್ಲಿ ಧರಿಸಿದಳು. ಅದರಲ್ಲಿಯ ಹುಸಿ, ಲೋಭಗಳೆಂಬ ಕಸವನ್ನು ಉಡುಗಿಬಿಟ್ಟಳು. ತನ್ನ ಹೃದಯಕಮಲದ ಕರ್ಣಿಕಾ ಪೀಠದಲ್ಲಿ ಸದಮಳ ಪ್ರಕಾಶ ರೂಪವಾದ ಲಿಂಗವನ್ನು ಸ್ಥಾಪಿಸಿ ಅದು ಬೆಳಗುವಂತೆ ಮಾಡಿದಳು. ತನ್ನ ಮನಸ್ಸು ಎಂಬುದನ್ನು ಅದಕ್ಕೆ ಅರ್ಪಿಸಿದಳು. ಲಿಂಗದ ಬಗ್ಗೆ ಅವಳಲ್ಲಿ ಉಂಟಾದ ಪ್ರೀತಿಯ ಉಸಿರೇ ಅದಕ್ಕೆ ಧೂಪವಾಯಿತು. ತನ್ನ ನೆನಹಿನ ಅರಿವಿನ ಅಚ್ಚು ಬೆಳಗಿನ ಪ್ರಕಾಶವೇ ಅವಳಿಗೆ ದೀಪವಾಯಿತು. ಈ ತೆರದ ಭಕ್ತಿಯೋಗದಿಂದ ಪರಮಾತ್ಮನನ್ನು ಅವಳು ತಣಿಸುತ್ತ ಲಿಂಗಾಂಗ ಸಾಮರಸ್ಯದಲ್ಲಿ ಜೈನನಾದ ಗಂಡನ ಮನೆಯಲ್ಲಿ ಲಿಂಗ ಸುಖದಲ್ಲಿರಹತ್ತಿದಳು. ಅವಳು ಜೈನರಲ್ಲಿದ್ದರೂ ತಿಲದ ತೈಲದಂತೆ ಹೊದ್ದಿಯೂ ಹೊದ್ದದಂತೆ ಇದ್ದಳು. ಹೀಗೆ ಗುಪ್ತಭಕ್ತಿಯಿಂದ ಅವಳು ತನ್ನ ಪತಿಯ ಮನೆಯಲ್ಲಿ ಕಾಲ ಕಳೆಯಹತ್ತಿದಳು.

ಹೀಗಿರಲು ಒಂದು ದಿನ ನೇಮಿಸೆಟ್ಟಿಯು ವೈಜವೆಗೆ— ನಾನು ಇಂದಿನ ದಿನ ಜೈನ ಮುನಿಗಳಿಗೆ ಊಟಹಾಕುತ್ತೇನೆ. ಅವರಿಗೆ ನಾನಾ ತರಹದ ಸೊಗಸಾದ ಅಡಿಗೆಯನ್ನು ಮಾಡು, ಎಂದು ಹೇಳಿ ಆಹಾರ ಪದಾರ್ಥಗಳನ್ನು ತಂದು ಅವಳಿಗೆ ಕೊಡಲು, ಅವಳು ಹಾಲೋಗರ, ಹಾಲುಂಸೆ, ಹಾಲುಮುಂಡಿಗೆ, ತರಗು, ಲಡ್ಡುಗೆ, ಇಡ್ಡಲಿಗೆ, ಹಾಲು ಪಾಯಸ, ಬೋನ ಮೊದಲಾದ ರುಚಿ ಪದಾರ್ಥಗಳನ್ನು ಸಿದ್ಧಪಡಿಸಿದಳು. ಆಗ ಅವಳು ಮನಸ್ಸಿನಲ್ಲಿ— ಅಕ್ಕಟಾ, ಈ ವಸ್ತುಗಳು ಶಿವನಿಗಾಗಲಿಲ್ಲ. ಅವುಗಳಿಂದ ನಾನು ಮಹೇಶ್ವರರನ್ನು ತೃಪ್ತಿಪಡಿಸಲಿಲ್ಲ. ಅವು ಭವಿಗಳಿಗೆ ಹೋಗುತ್ತವೆ. ನನ್ನ ತಂದೆಯು ನನ್ನನ್ನು ಭವಿಗಳಿಗೆ ಕೊಟ್ಟಿದ್ದರಿಂದ ಶಿವನೇ, ನಿನ್ನ ಭಕ್ತರ ಸೇವೆ ಮಾಡುವದು ನನ್ನಿಂದ ಆಗದಂತಾಗಿದೆ, ಎಂದು ಮನದಲ್ಲಿ ನೊಂದು ಕಣ್ಣೀರಿಡುತ್ತ ಕುಳಿತಳು.

ಹೀಗೆ ಅವಳು ಕುಳಿತಿರಲು ಶಿವನಿಗೆ ಕರುಣೆಯುಂಟಾಗಿ ಅವನು ಒಬ್ಬ ಜಂಗಮನ ವೇಷವನ್ನು ಧಾರಣ ಮಾಡಿ ನೇಮಿಸೆಟ್ಟಿ ಇದ್ದ ಮನೆಯ ಮುಂದೆ ಬಂದುನಿಂತು— ನಾವು ಪರವೂರಿಂದ ಬಂದಿದ್ದೇವೆ. ನಿಮಗೆ ಶಿವನ ಕರುಣವಾಗಲಿ ಎಂದು ನುಡಿಯಲು ವೈಜವ್ವೆಯು ಆ ಧ್ವನಿಯನ್ನು ಕೇಳಿ ಹೊರಗೆ ಬಂದು ಅಲ್ಲಿ ಒಬ್ಬ ಜಂಗಮನು ನಿಂತಿದ್ದನ್ನು ಕಂಡು ಅವಳು ಹರುಷಿತಳಾಗಿ— ನನ್ನ ಬಯಕೆಯು ಈಡೇರಿತು. ನೀವು ಒಳ್ಳೇ ಸಮಯಕ್ಕೆ ಬಂದಿರಿ ಎಂದು ನುಡಿಯುತ್ತ ಅವನಿಗೆ ಸಾಷ್ಟಾಂಗವೆರಗಿದಳು. ಆಮೇಲೆ ಅವಳು ತಾನು ಸಿದ್ಧಮಾಡಿದ್ದ ಪಕ್ವಾನ್ನಗಳನ್ನು ತಂದು ಅವನಿಗೆ ನೀಡಿ— ಇನ್ನುಮೇಲೆ ನೀವು ಇಲ್ಲಿ ನಿಲ್ಲಬೇಡಿರಿ. ಇಷ್ಟರಲ್ಲಿಯೇ ಶ್ರವಣರು ಬರತಕ್ಕವರಿದ್ದಾರೆ. ನೀವು ಅವರ ಕಣ್ಣಿಗೆ ಬೀಳದಂತೆ ಹೋಗಿರಿ, ಎಂದು ನುಡಿದಳು. ಹೀಗೆ ಅವಳು ನುಡಿಯುವಷ್ಟರಲ್ಲಿಯೇ ನೇಮಿಸೆಟ್ಟಿಯು ಜಿನ ಮುನಿಗಳನ್ನು ಕರೆದು ಕೊಂಡು ಮನೆಯನ್ನು ಪ್ರವೇಶಿಸಿದನು. ಆ ಮುನಿಗಳು ವೈಜವ್ವೆಯು ಊಟದ ಪದಾರ್ಥಗಳನ್ನು ಒಬ್ಬ ಜಂಗಮನಿಗೆ ನೀಡುತ್ತಿರುವದನ್ನು ಕಂಡು ಅವರು ನೇಮಿಸೆಟ್ಟಿಗೆ— ನೀವು ಮಾಡಿದ ಅಡಿಗೆಯನ್ನು ನಾವು ಇನ್ನುಮೇಲೆ ಮುಟ್ಟಲಾರೆವು. ಆ ಗೊರವನು ಅದನ್ನು ಎಂಜಲು ಮಾಡಿದ್ದಾನೆ ಎಂದು ಅಂದು, ಅವರೆಲ್ಲರೂ ಮನೆಯನ್ನು ಬಿಟ್ಟು ಹೊರಟು ಹೋದರು.

ನೇಮಿಸೆಟ್ಟಿಯು ವೈಜವ್ವೆಯು ಮಾಡಿದ್ದನ್ನು ತಿಳಿದವನಾಗಿ ಅತ್ಯಂತ ಕುಪಿತನಾಗಿ ಅವಳಿಗೆ— ನೀನೇನು ಮಾಡಿದೆ? ಅನ್ನವನ್ನು ಜಂಗಮನಿಗೆ ನೀಡಿ ಕೆಡಿಸಿಬಿಟ್ಟಿಯಾ? ಮುನಿಗಳು ಹಸಿದುಕೊಂಡು ಹೊರಟು ಹೋದರು, ಅರುಹನ ವ್ರತಕ್ಕೆ ನೀನು ಭಂಗತಂದೆ, ಎಂದು ನುಡಿದನು. ಅದಕ್ಕೆ ಅವಳು— ಜನರೆಲ್ಲ ಅಡಿಗೆ ಮಾಡುವದು ಅಗ್ನಿಯಿಂದ. ಆದರೆ ಆ ಅಗ್ನಿಯು ಶಿವನ ಹಣೆಗಣ್ಣಿನ ಎಂಜಲು. ಅಂಥ ಎಂಜಲಿಂದಾದ ಆಹಾರವನ್ನು ನೀವೆಲ್ಲ ಉಣ್ಣುವಿರಿ. ಅದನ್ನು ಜಂಗಮನಿಗೆ ನೀಡಿದಲ್ಲಿ ಎಂಜಲು ಹೇಗೆ? ನೀವು ಅರುಹನೆಂದು ಪೂಜಿಸುವ ವಸ್ತುವು ಭೂಮಿಯೊಳಗಿಲ್ಲ. ಅದು ವೇದದಲಿಲ್ಲ. ಶಾಸ್ತ್ರದಲಿಲ್ಲ. ಬತ್ತಲೆಯ ಬೊಂಬೆಗಳನ್ನು ನೀವು ಪೂಜಿಸಿ ಬಳಲುವದೇಕೆ, ಎಂದು ನಿಷ್ಠುರವಾಗಿ ನುಡಿದಳು. ಅದನ್ನು ನೇಮಿಸೆಟ್ಟಿಯು ಕೇಳಿ ಕೆರಳಿದವನಾಗಿ ಅವಳನ್ನು ಹೊಡೆದು

ಬಡೆದು ಘಾಸಿಮಾಡಹತ್ತಿದನು. ಆ ಅಬಲೆಯನ್ನು ಮುಟ್ಟಿ ಮುಟ್ಟಿ ಒಳಿತಾಗಿ ಬಡಿಯಹತ್ತಿದನು. ಆದರೆ ಅವಳನ್ನು ಹೊಡೆದ ಹಾಗೆ ಆ ಹೊಡೆತಗಳು ಪಟ್ಟಣದಲ್ಲಿದ್ದ ಜೈನರಿಗೆಲ್ಲ ತಾಕಹತ್ತಿದವು. ಆದರೆ ಅವರಿಗೆ ಹೀಗೇಕಾಯಿತೆಂಬದು ಮಾತ್ರ ಆಗ ಏನೂ ತಿಳಿಯದೆ ಗಟ್ಟಿಯಾಗಿ ಮೊರೆ ಇಡಹತ್ತಿದರು. ಅಷ್ಟರಲ್ಲಿ ಸೂರ್ಯಾಸ್ತಮಯವಾಯಿತು.

ವೈಜವ್ವೆಯು ಪತಿಯು ಹೊಡೆದ ಪೆಟ್ಟುಗಳಿಂದ ಬಹಳ ನೊಂದು ದುಃಖ ಪಡುತ್ತ ಪರಮಾತ್ಮನ ಸ್ಮರಣೆಯಲ್ಲಿಯೇ ಮುಳಗಿದಳು. ಆಗ ರಾತ್ರೆಯಲ್ಲಿ ಶಿವನು ಆಕೆಯ ಕನಸಿನಲ್ಲಿ ಬಂದು— ವೈಜವ್ವೆಯೇ ಅಂಜಬೇಡ, ಚಿಂತಿಸಬೇಡ- ನಾಳೆ ಪಟ್ಟಣದಲ್ಲಿ ಒಂದು ಅದ್ಭುತ ನಾಗುವದು. ನಾನು ಪಟ್ಟಣದಲ್ಲಿಯ ಜಿನನ ಶಿರವನ್ನೊಡೆದು ಅಲ್ಲಿ ಮೂಡುವೆನು, ಅಂಜಬೇಡ, ಎಂದು ಸಮಾಧಾನ ಹೇಳಿ ಅಂತರ್ಧಾನನಾದನು. ವೈಜವ್ವೆಯು ಅದನ್ನು ಕೇಳಿ— ನನ್ನಮೇಲೆ ಶಿವನ ಕರುಣವಿದೆ ಎಂದು ತಿಳಿದು ಹರುಷಿತಳಾಗಿ ಬೆಳಗಿನಲ್ಲೆದ್ದು ಶಿವನನ್ನು ಸ್ಮರಿಸುತ್ತ ಕುಳಿತಳು.

ಮರುದಿನ ಮುಂಜಾವಿನಲ್ಲಿ ಶ್ರವಣರು ಎಂದಿನಂತೆ ಬಸದಿಗೆ ಹೋಗಿ ಅದರ ಕದವನ್ನು ತೆರೆಯಲು ಪ್ರಯತ್ನಿಸಿದರು. ಆದರೆ ಅದು ತೆರೆಯದೆ ಹೋಯಿತು. ಅವರು ಎಷ್ಟು ಪ್ರಯತ್ನಮಾಡಿದರೂ, ಅದು ತೆರೆಯಲಿಲ್ಲ. ಇದೇನು ಕಂಟಕ ಬಂದಿತೆಂದು ಅವರು ನುಡಿಯುತ್ತಿರಲು ಅವರಲ್ಲೊಬ್ಬನು— ನೇಮಿಸೆಟ್ಟಿಯು ನಿನ್ನೆ ವೈಜವ್ವೆಯನ್ನು ಹೊಡೆದ ಮೂಲಕ ನಾವೆಲ್ಲರೂ ಗಾಸಿಯಾದೆವು. ಆ ಪೆಟ್ಟುಗಳು ನಮ್ಮ ಮೇಲೆ ಬಿದ್ದವು, ಎಂದು ಹೇಳಲು ಅಲ್ಲಿ ನೆರೆದವರು— ನಮಗೂ ಪೆಟ್ಟು ಬಿದ್ದಿವೆ. ಬಸದಿಯ ಬಾಗಿಲು ತೆರೆಯದ್ದಕ್ಕೆ ವೈಜವ್ವೆಯನ್ನು ಹೊಡೆದದ್ದೇ ಕಾರಣವಿರಬಹುದೆಂದು ಅವರಿಗೆ ತೋರಿತು. ಆಗ ಅವರೆಲ್ಲರೂ ಕೂಡಿಕೊಂಡು ವೈಜವ್ವೆ ಇದ್ದಲ್ಲಿಗೆ ಬಂದು ಅವಳಿಗೆ— ನಿನಗಾದ ನೋವಿನಿಂದ ನಾವು ಬಳಲಿದೆವು. ನಮ್ಮನ್ನು ಕ್ಷಮಿಸು. ಅಲ್ಲದೆ ಅರುಹನು ಕದವನ್ನಿಕ್ಕಿಕೊಂಡು ನಮ್ಮನ್ನು ಕಾಡಹತ್ತಿದ್ದಾನೆ. ನೀನು ಅಲ್ಲಿಯ ವರೆಗೆ ಬಂದು ಕದವು ತೆರೆಯುವಂತೆ ಮಾಡು ಎಂದು ಹೇಳಿಕೊಂಡರು.

ಆಗ ವೈಜವ್ವೆಯು ಪರಮಾತ್ಮನ ಕರುಣೆಯು ನನ್ನ ಮೇಲೆ ಇದೆ ಎಂಬ ನಂಬುಗೆಯಿಂದ ಅವಳು ಅವರೊಡನೆ ಜಿನಾಲಯಕ್ಕೆ ಹೋದಳು. ಅದರ ಬಾಗಿಲಲ್ಲಿ ನಿಂತು ಶಿವನನ್ನು ಕುರಿತು—ಸಕಲ ಭುವನ ತಿಮಿರ ಹರನೇ ಕರುಣಿಸು, ಕರುಣಿಸು. ದುರಿತ ಹರನೇ, ಕರುಣಿಸು, ಕರುಣಿಸು. ಹೀಗೆ ಸ್ತುತಿಸುತ್ತ ಆ ಜೈತ್ಯಾಲಯದ ಬಾಗಿಲನ್ನು ಮುಟ್ಟಿದಳು. ಅವಳು ಮುಟ್ಟಿದ ಕೂಡಲೆ ಆ ಬಾಗಿಲು ಫಕ್ಕನೆ ತೆರೆದು ಬಿಟ್ಟಿತು. ಆದರೆ ಒಳಗೆ ನೋಡುತ್ತಾರೆಯೇ, ಜಿನನ ಶಿರವು ಒಡೆದು ಬಿದ್ದಿತ್ತು, ಅದರ ಸ್ಥಳದಲ್ಲಿ ಶಿವಲಿಂಗವು ಮೂಡಿತ್ತು ಮತ್ತು ಸುತ್ತಲಿದ್ದ ಬತ್ತಲೆ ಗೊಂಬೆಗಳು ಅಲ್ಲಲ್ಲಿ ಉರುಳಿ ಬಿದ್ದಿದ್ದವು.

ಅಲ್ಲಿ ನೆರೆದಿದ್ದ ಜೈನರು ದೇವಾಲಯದಲ್ಲಿ ಈ ಅದ್ಭುತವಾದ ದ್ದನ್ನು ಕಂಡು ಅವರು ವೈಜವ್ವೆಗೆ ನಮಿಸಿ, ಇನ್ನು ಮೇಲೆ ನಾವು ಜಿನ ಧರ್ಮವನ್ನು ಬಿಡುವೆವು. ನಮಗೆ ಲಿಂಗದೀಕ್ಷೆ ಮಾಡೆಂದು ಅವಳಿಗೆ ಹೇಳಿಕೊಂಡರು. ನೇಮಿಸೆಟ್ಟಿಯು ಸಹ ಲಿಂಗದೆದುರಿನಲ್ಲಿ ನಮಸ್ಕರಿಸಿ, ವೈಜವ್ವೆಗೆ—ನಾನು ಪಾಪಿಷ್ಠನು, ನಿನ್ನನ್ನು ನೋಯಿಸಿದೆನು. ಇದಕ್ಕೋಸ್ಕರ ನನ್ನನ್ನು ಕ್ಷಮಿಸು ಎಂದು ಬೇಡಿಕೊಂಡನು. ಅದಕ್ಕೆ ವೈಜವ್ವೆಯು—ನೀನು ನನ್ನ ಪತಿಯಾದುದರಿಂದ ನಿನಗೆ ಪಾಪವು ಉಂಟಾಗಲಾರದು ಎಂದು ನುಡಿದು ಎಲ್ಲರಿಗೆ ಗುರುಲಿಂಗಜಂಗಮದ ರೀತಿಯನ್ನು ತಿಳಿಸಿ ಲಿಂಗದೀಕ್ಷೆಯನ್ನು ಮಾಡಿದಳು. ಆಗ ನೇಮಿಸೆಟ್ಟಿಯು ನನಗೇನಪ್ಪಣೆ ಎಂದು ಕೇಳಲು, ಅವಳು— ಪರಮಾತ್ಮನು ಲಿಂಗವಾಗಿ ಇಲ್ಲಿ ಮೂಡಿದ್ದಾನೆ. ಈ ದೇವನನ್ನು ನೀನು ಅರ್ಚಿಸುತ್ತ ಪರಮಾತ್ಮನಲ್ಲಿ ಬೆರೆ ಎಂದು ನುಡಿಯುತ್ತ ತಾನು ಆ ಲಿಂಗದಲ್ಲಿಯೇ ಐಕ್ಯಳಾದಳು. ಆ ಲಿಂಗವು ಅಂದಿನಿಂದ ವೈಜನಾಥಲಿಂಗವೆಂಬ ಹೆಸರಿನಿಂದ ನಾಡಿನಲ್ಲೆಲ್ಲ ಪ್ರಸಿದ್ಧವಾಯಿತು.

ವೈಜನಾಥ ಲಿಂಗವು ಉತ್ತರ ಕರ್ನಾಟಕದಲ್ಲಿಯೂ ಮಹಾರಾಷ್ಟ್ರದೇಶದಲ್ಲಿಯೂ ಪುಣ್ಯಕರವಾದ ಅತ್ಯಂತ ಪವಿತ್ರವಾದ ದೇವಸ್ಥಾನವೆಂದು ಪ್ರಸಿದ್ಧವಾಗಿರುತ್ತದೆ. ಈ ಪ್ರಕಾರ ಪರಳೀ ವೈಜನಾಥ ಲಿಂಗವು ಶಿವಶರಣಿಯರಲ್ಲಿ ಅತ್ಯಂತ ಖ್ಯಾತಿಯನ್ನು ಪಡೆದ ವೈಜವ್ವೆಯದಾಗಿರುತ್ತದೆ. ಈ ಶಿವಾಲಯಕ್ಕೆ ಎಲ್ಲ ಸಮಾಜದವರು ಈಗಲೂ ಬಹು ಭಕ್ತಿಯಿಂದ ನಡೆದುಕೊಳ್ಳುತ್ತಾರೆ.

ಶಿವಾನುಭವ

ವರ್ಷ ೨೦ | ಡಿಸಂಬರ ೧೯೪೫. | ಸಂಚಿಕೆ ೩

ಚನ್ನಬಸವೇಶ್ವರ ವಚನ ವಿಶೇಷಗಳು.

ಲೇಃ— ಶ್ರೀ. ಜ. ಪ. ಚನ್ನಬಸವರಾಜದೇಶಿಕೇಂದ್ರ ಸ್ವಾಮಿಗಳವರು,
ಜಗದ್ಗುರು ಶ್ರೀಮನ್ನಿಡುಮಾಮಿಡಿ ಶ್ರೀಶೈಲ ಸಂಸ್ಥಾನ.)

ಈ ಪೂರ್ವಾಚಾರ್ಯರು ಯಾರು?

ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನು ತನ್ನ ಈ ಒಂದೆರಡು ವಚನಗಳಲ್ಲಿ 'ಆಚಾರ್ಯ' ಪದವನ್ನು ಪ್ರಯೋಗಿಸಿದ್ದಾನೆ. ಯಾರಾದರಾಗಲಿ ವಿರಕ್ತರಾಗಿ ಮರಳಿ ವಿಷಯಗಳಿಗೆಳಸಿದರೆ ಅವರನ್ನು ಪೂರ್ವಾಚಾರ್ಯರು ಅಂಗೀಕರಿಸರೆಂದು ಹೇಳಿ ತನ್ನ ಹಿಂದಿದ್ದ ಆಚಾರ್ಯರನ್ನು ಹಾರ್ದಿಕವಾಗಿ ಮನ್ನಿಸಿದ್ದಾನೆ; ಮನನ ಮಾಡಿದ್ದಾನೆ.

"ಅರ್ಥೇಷಣ, ಪುತ್ರೇಷಣ, ದಾರೇಷಣ ಎಂಬ ಈಷಣತ್ರಯವನೆ ಬಿಟ್ಟು ಮುಂಡೆಯ ಬೋಳಿಸಿದ ಬಳಿಕ ಮರಳಿ ಹೊನ್ನಿಂಗೆರಗಿದೊಡೆ ಗುರುದ್ರೋಹ. ಹೆಣ್ಣಿಂಗೆರಗಿದೊಡೆ ಲಿಂಗದ್ರೋಹ. ಮಣ್ಣಿಂಗೆರಗಿದೊಡೆ ಜಂಗಮದ್ರೋಹ. ಆತ ಪೂರ್ವಾಚಾರ್ಯರ ಪೊರ್ದುಗೆಯೆ?....."

ಎಂದು ಕೇಳುತ್ತಾನೆ. ಇಲ್ಲಿ 'ಪೂರ್ವಾಚಾರ್ಯರ' ಎಂದು ಷಷ್ಠಿ ಬಹುವಚನ ಪ್ರಯೋಗವಿದೆ. ನಾಮನಿರ್ದೇಶವಿಲ್ಲ. ಈ ಪೂರ್ವಾಚಾರ್ಯರು ಯಾರು? ಅಲ್ಲದೆ,

"ಅನುಭಾವವೆಂಬುವದೆಂತೆಂದೊಡೆ, ಆಚಾರ್ಯಂಗೆ ಆಚಾರ್ಯಾನುಭಾವ. ಶಿಷ್ಯಂಗೆ ಶಿಷ್ಯನನುಭಾವ.....ಲಿಂಗಾಂಗಸಂಗ ಸಮರಸೈಕ್ಯದ ಸವ್ಯದ್ಧಿಯನೆ ಬಿಚ್ಚಿ ಷಟ್‌ಸ್ಥಲವೆಂದು ಆ ಷಟ್‌ಸ್ಥಲ ಸಂಯೋಗದ ನೆಲೆಯನರಿದು ನಿರ್ಧರಿಸಿ ನಿಲಬೇಕಾಗಿ ನಾವು ರೂಪು ಕ್ರಯಕ್ಕೆ ಮುಖವಾಯಿತ್ತೆಂದಂದು ಇದೇ ಶ್ರೀಮಹಾದೇಶಿಕೇಂದ್ರನ ರಹಸ್ಯ ಬ್ರಹ್ಮವೆಂದು ಹೇಳಿಕೊಟ್ಟು ಅನುಶ್ರುತವನ್ನಾಡುವ ಉಪದೇಶವೆಂದು ಗ್ರಹಿಸುವುದು.....ಇದೇ ವಸ್ತುವೆಂದು, ಇದೆ ಷಟ್‌ಸ್ಥಲದ ಮುದ್ದಿಯೆಂದು ಇದು ಕರಸ ಕಟ್ಟಿರ್ದ ಎರಕವೆಂದು, ಆ ದೇಶಿಕೇಂದ್ರನೆಂಬ ಶ್ರೀಗುರುರಾಯನು ಶಿಷ್ಯೋತ್ತಮನಿಗೆ ಬೋಧಿಸಲು, ಆಚಾರ್ಯ ನಿರೂಪಿಸಿದ ಷಟ್‌ಸ್ಥಲದ ಬ್ರಹ್ಮವನು ಮಹಾ ಪ್ರಸಾದವೆಂದು ಕೈಕೊಂಡು ಆ ಮಹಾ ಶ್ರೀಗುರುಲಿಂಗನೆಂಬ ಗುರುವಾಚಾರ್ಯಂಗೆ ಸಾಷ್ಟಾಂಗ ಪ್ರಣತನಾಗಿ....."

ಅನುಭವದಲ್ಲಿ ಆಚಾರ್ಯನಿಗಿರುವ ಮುಖ್ಯಾಂಗವನ್ನು ಬಿತ್ತರಿಸುವ ಈ ವಚನದಲ್ಲಿ ಆಚಾರ್ಯ, ದೇಶಿಕ ಎಂಬುದಾಗಿ ಹೆಚ್ಚಾಗಿ ಪ್ರಯೋಗವಿರುವುದು ಗಮನಾರ್ಹವಾದುದು. ಈ ಎರಡು ಪದಗಳು 'ಗುರು'ವನ್ನೆ ಗುರಿಯಿಟ್ಟು ಪ್ರಯೋಗಿಸಿದವುಗಳೆಂಬುದಕ್ಕೆ 'ಆ ದೇಶಿಕೇಂದ್ರನೆಂಬ ಶ್ರೀಗುರುರಾಯನು' 'ಗುರುವಾಚಾರ್ಯಂಗೆ' ಎಂಬ ಪದ ಪ್ರಯೋಗಗಳೇ ಸಬಲ ಸಾಕ್ಷಿಗಳಾಗಿವೆ. ಆದರೆ ಈ ಗುರುವಾಚಾರ್ಯರು ಯಾರು? ಎಂಬ ಪ್ರಶ್ನೆಗೆ— ಜಿಹಾಸೆಗೆ ಉತ್ತರವನ್ನು ಸಂಶೋಧಕರು ಸಿದ್ಧಗೊಳಿಸಬೇಕಾಗಿದೆ.

ಶ್ರೀಶೈಲ ಸಿಂಹಾಸನ!

"ಶ್ರೀಶೈಲ ಸಿಂಹಾಸನದ ಮೇಲೆ ಕುಳ್ಳಿರ್ದು, ಆ ಪುರದ ಬಾಗಿಲೊಳು ತಳಿತಳಿಯಂಗಳು, ಆ ಗಿರಿಯ ಸುತ್ತಲು ಗಾಳಿ ದೆಸೆದೆಸೆಗೆ ಬೀಸುತ್ತಿರಲು,.....ಗುರುಮಾರ್ಗಾಚಾರವಿಡಿದು ಬಂದು,.....ಧರದಿಂದೆ ತ್ರಿಸ್ಥಾನವನರುಹಿ.....ಗಿರಿಯ ಶಿಖರವನೇರಿ,... ಆ ಪುರಕ್ಕೆ ತಾನೆ ಒಡೆಯನಾಗಿ, ಪರಮ ಪರಿಣಾಮದಿಂದೆ ಓಲಾಡುತಿರ್ದರಯ್ಯ....."

ಇದು ಪ್ರಾಣಲಿಂಗಿಯು ಮಹಾಲಿಂಗಸ್ಥಲದ ವಚನ. ಪ್ರಾಣಲಿಂಗಿಯಾದವನು ಮಹಾಲಿಂಗಸ್ಥಲದವನಾಗಬೇಕಾದರೆ ತನ್ನಂತರಂಗದ ತ್ರಿಸ್ಥಾನ (ತ್ರಿಕೂಟ) ವಾಸಿಯಾಗಬೇಕು. ಆ ತ್ರಿಸ್ಥಾನ (ತ್ರಿಕೂಟ) ವನ್ನು ಶ್ರೀಗಿಂಗೆ ಉಪಮಿಸಿ ಹೇಳುವ ರೂಢಿಯು ವಚನಕಾರರಲ್ಲಿದೆ. ಆದರೆ ಚನ್ನಬಸವಣ್ಣನು ಇಲ್ಲಿ ಬರೀ ಶ್ರೀಗಿರಿಯೆಂದು ಉಪಮಿಸದೆ 'ಶ್ರೀಶೈಲ ಸಿಂಹಾಸನ' ಎಂದು ಉಪಮಿಸುತ್ತಾನೆ. ಹೀಗೆ ಉಪಮಿಸಬೇಕಾದರೆ ಅದಕ್ಕೆ ಮೊದಲೆ ಆಚಾರ್ಯರ 'ಶ್ರೀಶೈಲ ಸಿಂಹಾಸನ'ದ ಏರ್ಪಾಟು ಇದ್ದಿರಬೇಕೆಂದು ಊಹೆಯಾಗುತ್ತದೆ. ಈ ಊಹೆಗೆ ಸಿಂಹಾಸನ ಪದ ಪ್ರಯೋಗವು ಉಪಷ್ಟಂಬಕವಾಗಿ ನಿಂತಿದೆ. 'ಒಡೆಯನಾಗಿ' ಎಂಬ ಪ್ರಯೋಗವೂ ಸಹಾಯಕವಾಗಿದೆ.

ಮಠಪತಿಯ ಏರ್ಪಾಟು.

ಕಾಯವೇ ಶಿವಾಲಯ, ಕಮಳಾದ್ಯ ಮಂಟಪವೇ ಸುಖಾಸನ ನೋಡಯ್ಯ! ಜ್ಞಾನಾರೂಢ ಪ್ರಾಜ್ಞೇಶ್ವರನೆಂಬಾತನಲ್ಲಿಗೆ ದೇವರು ನೋಡಯ್ಯ! ಆಲ್ಲಿಪ್ಪ ಇಂಬಿನ ಮಠಪತಿ ಹಂಸದೇವನೆಂಬಾತನಾ ದೇವರ ಪೂಜಿಸುವ....."

ಇದು ಅದೇ ಸ್ಥಲದ ಮತ್ತೊಂದು ವಚನ. ಕಾಯ ಶಿವಾಲಯ. ಕಮಳಾದ್ಯಮಂಟಪ ಸುಖಾಸನ. ಪ್ರಾಜ್ಞೇಶ್ವರನೆ ದೇವರು. ಹಂಸದೇವನೆ ಪೂಜಿಸುವ ಮಠಪತಿ.— ಎಂದು ಶಿವಾಲಯದ ರೂಪಕವಿತ್ತು ಪ್ರಾಣಲಿಂಗಿಯ ಸ್ವರೂಪವನ್ನು ನಿರೂಪಿಸುತ್ತಾನೆ. ಸಮಾಜದ ಸಂಬಂಧಕ್ಕೆ ಒಳಪಟ್ಟ ಅಲ್ಲಲ್ಲಿನ ಸ್ಥಾವರ ದೇವಸ್ಥಾನಗಳ ಪೂಜೆಯು ಇಂದಿಗೂ ಮಠಪತಿಗಳಿಂದಲೇ ನಡೆಯುತ್ತಿರುವಂತೆ ಅಂದೂ ಸಹ ಏರ್ಪಾಟು ಇತ್ತೆಂದು ಇದರಿಂದ ವ್ಯಕ್ತವಾಗುತ್ತದೆ. ಇಲ್ಲದಿದ್ದಲ್ಲಿ ಈ ರೂಪಕ್ಕೆ ಆಶ್ರಯವಿಲ್ಲ. ಇದರಿಂದ ಮಠಪತಿಯ ಪ್ರಾಚೀನತೆ ಸಿದ್ಧವಾಗುತ್ತದೆ. ಇದರೊಡನೆ ಶ್ರೀಶೈಲ ಸಿಂಹಾಸನದ ಪ್ರಾಚೀನತೆಯೂ ವ್ಯಕ್ತವಾಗುತ್ತದೆ. ಏಕೆಂದರೆ ಮಠಪತಿಗಳು ಶ್ರೀಶೈಲ ಸಿಂಹಾಸನದ ಅಧಿಕಾರಕ್ಕೆ ಒಳಪಟ್ಟವರು; ಆಡಳಿತಕ್ಕೆ ಸೇರಿದವರು. ಈ ಕಾರಣದಿಂದ ಮಠಪತಿಯನ್ನು ಏರ್ಪಡಿಸುವ ಅಧಿಕಾರವುಳ್ಳ ಶ್ರೀಶೈಲ ಸಿಂಹಾಸನವು ಮಠಪತಿಗಿಂತ ಮುಂದೆ ಇದ್ದರಲ್ಲವೆ?

ಶ್ರುತಿಪ್ರಾಮಾಣ್ಯ.

೧ ಶಿವೈಕ ನಿಷ್ಠೆಗೆ ಶ್ರುತಿ ಸಾಕ್ಷಿ!

"ಸಾಕ್ಷಿ॥ ಏಕೋಚೇವ ನದ್ವಿತೀಯ'ನೆಂಬ ಶ್ರುತಿಯನಂದು ಮತ್ತೆ ದೈವ ಉಂಟೆಂಬ ನೀಚ ಪರವಾದಿಗಳು ನೀವು ಕೇಳಿರೊ!....." (ಪುಟ-೨೬, ವಚನ-೧.)

".. ಶ್ರುತಿ॥ ಓಂಭುವಂ ಓಂಭುವಃ। ಓಂಸ್ವಃ। ಓಂಮಹಃ। ಓಂ ಜನಃ। ಓಂ ಸತ್ಯಂ। ಓಂ ನಿತ್ಯಂ। ಓಂ ತತ್ಸವಿತುರ್ವರೇಣ್ಯಂ। ಭರ್ಗೋದೇವಸ್ಯ ಧೀಮಹಿ। ಧಿಯೋಯೋನಃ। ಪ್ರಚೋದಯಾತ್।' ಇಂತೆಂಬ ಶ್ರುತಿಯೊಳಗೆ ಆ (ವಿಷ್ಣು) ಶಬ್ದವುಳ್ಳೊಡೆ ತೋರಿರೋ!....." (ಪುಟ-೨೬, ವಚನ-೨.)

೨ ವೇದಾಗಮುವನರಿದರೆ ಆಚಾರ!

"ಭೃತ್ಯಾಚಾರಿಗಲ್ಲದೆ ಭಕ್ತ್ಯಾಚಾರವಳವಡದು, ವೇದಶಾಸ್ತ್ರ ಪುರಾಣಾಗಮುವನರಿದ ಸಂಬಂಧಿಗಲ್ಲದೆ ಆಚಾರವಳವಡದು...." (ಪು. ೩೫, ವ. ೪.)

೩ ಶ್ರುತ್ಯುಕ್ತಿಗಳಿಂದ ಶಿವದೀಕ್ಷೆ!

".....ಜೀವಾತ್ಮಂ ಪರಮಾತ್ಮಂ ಚ। ಎಂಬ ಶ್ರುತಿಯಿಂದೆ ಆತನ ಆತ್ಮಶುದ್ಧತೆಯಿಂ ಆತನ ಸರ್ವಾಂಗವ ಶುದ್ಧವ ಮಾಡಿ, ಆತನ ತಂದು ಗಣಪಂಙ್ತಿಯಲ್ಲಿ ಕುಳ್ಳಿರಿಸಿ, ಆ ದೀಕ್ಷಿತನ ಜಿಹ್ವೆಯಲ್ಲಿ ಶ್ರುತಿಯನೋದಿಸಿ, ಸಾಕ್ಷೆ॥ ಓಂ ಕರ್ಮಣಾಂ। ಮನಸಾ ವಾಚಾ ಗುರೂಣಾಂ। ಭಕ್ತವತ್ಸಲಃ। ಶರೀರಾರ್ಥಂ ಪ್ರಾಣಂಚ। ಸದ್ಗುರುಭ್ಯೋ ನಿವೇದಯೇತ್॥ ಎಂದು ಮಾನಸೋಚ್ಚರಣೆಯಂ ಮಾಡಿಸಿ, ಆ ತಚ್ಛಿಷ್ಯನ ಭವವಂ ಛೇದಿಸಿ, ಆಮೇಲೆ ಅವನ ಎಬ್ಬಿಸಿ ಪ್ರಾಕಮಧ್ಯದಲ್ಲಿ ಕುಳ್ಳಿರಿಸಿ, ಶ್ರುತಿ॥ ಓಂ ಮೇನಕಾ ಮೇನಕಾ। ಎಂಬ ಮಂತ್ರದಿಂದೆ, ಅರ್ಘ್ಯೋದಕಮಂ ವಾಮ ಪ್ರದಕ್ಷಿಣವಾಗಿ ತಳಿದು....." (ಪು. ೪೬, ವ. ೫.) ಇದು ಶೈವ ಕರ್ಮವಲ್ಲ. ವೀರಶೈವ ಕ್ರಿಯೆ!

೪ ಗುರುವೂ ಸಹ ವೇದಜ್ಞನಾಗಿರಬೇಕು!

"....ನಾಲ್ಕು ವೇದದರ್ಥ, ಅಜಪಗಾಯತ್ರಿಯರ್ಥ, ಪ್ರಾಣಾಯಾಮದಿಂದ ಪ್ರಾಣಲಿಂಗ ಸಂಬಂಧವ ಮಾಡುವುದು. ಇಷ್ಟರಲ್ಲಿ ತಾನು ಸ್ವತಂತ್ರನಾದೊಡೆ, ಇಷ್ಟಲಿಂಗವನಾರಿಗಾದೊಡೆಯು ಕೊಡಬಹುದು. ಅಲ್ಲದಿದ್ದೊಡೆ ಅಂಧಕನ ಕೈಯ್ಯ ಅಂಧಕನು ಹಿಡಿದಂತೆ ಕಾಣಾ ಕೂ. ಚ. ಸಂ. ದೇವಾ" (೭೧—೨) ಇವನು ವೀರಶೈವ ಗುರು.

೫ ಶ್ರುತಿಯಿಂದ ಭಕ್ತ-ಜಂಗಮರ ಮಹತಿ!

"ಸಾಕ್ಷಿ" ಅಕಾಯ ಭಕ್ತಕಾಯಃ। ಮುಮುಕಾಯ ಸುಭಕ್ತಯೋಃ! ಎಂಬ ಶ್ರುತಿನೋದುವರಣ್ಣ ಭಕ್ತಂಗೆ ಮಹಂತೋಲಿಂಗರೂಪೇಣ ಮಹಂತೋ ಜಂಗಮುಸ್ತಥಾ ಎಂಬ ಶ್ರುತಿಯನೋದುವರಣ್ಣ ಜಂಗಮುಕ್ಕೆ ....." (೫೪-೬) ಇದು ವೀರಶೈನ ಭಕ್ತ ಜಂಗಮರ ವೈಶಿಷ್ಟ್ಯ!

೬ ಲಿಂಗಾರ್ಚಕವೇದಸ್ತುತ್ಯ!

".....ಶಿವಸಂಸ್ಕಾರದಿಂದೆ ಲಿಂಗಕರಣಂಗಳೆಂದೆನಿಸಿ ನಿತ್ಯ ಲಿಂಗಾರ್ಚನೆಯು ಮಾಡಬಲ್ಲಾತನೆ ಶೀಲವಂತನಯ್ಯ. ಆತನ ಶ್ರೀಪಾದವನು ಹಸ್ತವನೆತ್ತಿ ಹೊಗುಳುತ್ತಿರ್ದವು ವೇದಂಗಳು ಸಾಕ್ಷಿ॥ ಓಂ ಅಯಂ ಮೇ ಅಸ್ತು ಭಗವಾನ್। ಅಯಂ ಮೇ ಭಗವತ್ತರಂ। ಅಯಂ ಮೇ ವಿಶ್ವಭೇಷಜಂ ಅಯಂ ಮೇ ತತ್ ಅಯಂ ಪಿತಾ॥ ಇಂತಪ್ಪ ಲಿಂಗಾರ್ಚನೆಯು ಮಾಡಬಲ್ಲಾತನೆ ಸಂಬಂಧಿ ಎನಿಸಿಕೊಳ್ಳ ಬಲ್ಲನಯ್ಯ....." (೬೯-೧)

೭ ಶರಣ ಶಿವಸ್ವರೂಪಿ!-ಎಂದುದು ಶ್ರುತಿ.

".....ನಿಜಸಂಧಾನದ ಸಮಾಧಿಯಲ್ಲಿ ನಿಂದು ಲಿಂಗಾರ್ಚನೆಯಂ ಮಾಡುವ ಶಿವಶರಣರ ಪಾದವ ತೋರಯ್ಯ. ಸಾಕ್ಷಿ॥ ವ್ಯಾಪಾರಂ ಸಕಲಂ ತ್ಯಕ್ತ್ವಾಸ ರುದ್ರೋ ರುದ್ರಮರ್ಚಯೇತ್॥ ಎಂಬಶ್ರುತಿ ನಿಮ್ಮಶರಣರಿಗೆ ಸಂದಿತ್ತು ಕೂ. ಚ. ಸಂ. ದೇವಾ"(೭೪—೧೧)

ಹೀಗೆ ಶ್ರುತ್ಯುಕ್ತಿಗಳನ್ನು ಸಮರ್ಪಕವಾದ ರೀತಿಯಲ್ಲಿ ಸಾದೃತವಾಗಿ, ತತ್ವಸಮರ್ಥನೆಗೆ ಸಪ್ರಮಾಣವಾಗಿ ಅಂಗೀಕರಿಸಿದ್ದಾನೆ. ಇದರಿಂದ ಚನ್ನಬಸವಣ್ಣನಲ್ಲಿ ವೇದವಾಜ್ಮಯದ ವಾತ್ಸಲ್ಯವನ್ನು ಕಂಡರಿಯಬಹುದಾಗಿದೆ. ಒಂದು ವಾಜ್ಮಯವನ್ನಾಗಲಿ, ಒಂದು ಮತವನ್ನಾಗಲಿ ಜರಿದು ನುಡಿವುದು ವಿಶ್ವಾತ್ಮರ ವಿಚಾರಕ್ಕೆ - ವಿಜ್ಞಾನಕ್ಕೆ ತಕ್ಕುದಲ್ಲ. ಬೇಡಾದ್ದನ್ನು ಬಿಡಬಹುದೇ ವಿನಹ ಬೈಯುವುದು ಅದ್ವೈತಸ್ಥಿತಿಗೆ ಹಾನಿ! ಸರ್ವಾದ್ವೈತಕ್ಕೆ ಕೊರತೆ! ಈ ತತ್ವವನ್ನು ಚನ್ನಬಸವಣ್ಣನು ಅರಿತಿದ್ದನು. ಅದರಿಂದಲೆ ಅತನು ವಿಪುಲವಾಗಿ ಸಂಸ್ಕೃತ ವಾಜ್ಮಯದ ಶ್ಲೋಕಗಳನ್ನು ತನ್ನ ವಚನಗಳಲ್ಲಿ ನಿರರ್ಗಳವಾಗಿ ಉಪಯೋಗಿಸಿದ್ದಾನೆ; ಉದಹರಿಸಿದ್ದಾನೆ. ಆತನು ಉಪಯೋಗಿಸಿದ ಸಂಸ್ಕೃತ ಶ್ಲೋಕಗಳನ್ನೆಲ್ಲ ಎತ್ತಿ ಒಂದುಗೂಡಿಸಿ ಬರೆದರೆ ಒಂದು ಸಣ್ಣ ಹೊತ್ತಿಗೆಯಾಗಬಲ್ಲುದು. * ಆಗ ಆ ಸಂಸ್ಕೃತ ವಾಜ್ಮಯದಲ್ಲಿ ವೀರಶೈವ ತತ್ವವು ಹೇಗೆ ಪರಿಣತ ಸ್ಥಿತಿಗೆ ಬಂದಿತ್ತೆಂಬುದು ನಿರ್ವಿವಾದವಾಗಿ ನಿರ್ಧರವಾಗಿರುತ್ತದೆ. ನಿಮೀಲಿತ ನಯನಗಳನ್ನು ನಿರ್ಮೀಲಿತಗೊಳಿಸುತ್ತದೆ.

ಆಚಾರವಿಚಾರವಿಲ್ಲದೆ ಬರೀ ಬಾಯಿಂದ ಹೇಳುವ ಮಾತುಗಳು-ಮಂತ್ರಗಳು ಅವೆಲ್ಲಿಯವಾಗಲಿ ಅಮಾನ್ಯ! ಅಪ್ರಯೋಜಕ! ಅದು ಪರಿಜ್ಞಾನವಲ್ಲ; ಪರಿಪಾಟ. ಮನಸ್ಸನ್ನು ಮುಟ್ಟಿ ಜೀವನವನ್ನು ಮಾರ್ಪಡಿಸಿ ಹಸನಾಗಿ ಮುಂಗುರಿಯ ಹೊಂಗನಸನ್ನು ನೆನಸನ್ನಾಗಿಸುವಂತಿದ್ದರೆ ಅದು ವೇದವಾಗಲಿ ವಚನವಾಗಲಿ ಇನ್ನಾವುದಾಗಲಿ ಅದೇ ಶಿರೋಧಾರ್ಯ; ಅದೇ ಹೃದಯಸ್ಪರ್ಶಿ; ಅದೇ ಅನುಸರಣೀಯ. ಅದಿಲ್ಲದೆ ಬರೀ ಉದರಪೋಷಣೆಗಾಗಿ ಉಪಯೋಗಿಸುವ ವೇದೋಕ್ತಿಗಳು ಹೇಗೆ, ಅಪ್ರಯೋಜಕಗಳೊ ಹಾಗೆ ವಚನಗಳೂ ಅಪ್ರಯೋಜಕಗಳುಃ—

"ಹೊರವೇಷದಲಿ ವಿಭೂತಿ ರುದ್ರಾಕ್ಷಿಯನಳವಡಿಸಿಕೊಂಡು ವೇದಶಾಸ್ತ್ರಪುರಾಣಾಗಮ ಮೊದಲಾಗಿ, ಪುರಾತರ ವಚನ ಬಹು ಪಾಠಕರು ಎನಿಸಿಕೊಂಡು, ಅನ್ನದಾನ-ವಸ್ತ್ರದಾನ-ಕನ್ಯಾದಾನ-

* ಈ ಕೆಲಸವನ್ನು ಬರೆಹವು ಹೊತ್ತಿಗೆಯು ರೂಹನ್ನು ತಾಳುವಯೋಗ ಒದಗಿ ಬಂದಲ್ಲಿ ಮಾಡಬೇಕೆಂಬ ಸಂಕಲ್ಪವಿದೆ.

ಸವರ್ಣದಾನಂಗಳನೀವವರ ಬಾಗಿಲ ಕಾಯ್ದು ಬಣ್ಣದ ಪುತ್ಥಳಿಯಂತೆ ಹೋಗಿ ನಿಂದು, ಹೊಸ್ತಲಲ್ಲಿ ತುಳಿದಾಡಿಕೊಂಡಿಹ ನಿತ್ಯನೇಮದ ಹಿರಿಯರೆಲ್ಲರು ನೀವು ಕೇಳಿರೋ. ಸಾಕ್ಷಿ॥ ವಾಯುವೃದ್ಧ ತಪೋವೃದ್ಧ ವೇದವೃದ್ಧ ಬಹುಶ್ರುತಃ। ಸರ್ವಸಾಧನವೃದ್ಧಸ್ಯ ದ್ವಾರೇ ತಿಷ್ಠಂತಿ ಕಿಂಕರಾಃ॥" "ಎಂಬ ಶ್ರುತಿ ದಿಟವಾಯಿತ್ತು. ಇಂತಿವನೆಲ್ಲವನರಿದಂತಹ ಹಿರಿಯರು ಲಕ್ಷ್ಮಿಯ ಮನೆಯ ದ್ವಾರಪಾಲಕರಾದರು. ಆ ಅರುಹಿಂಗೆ ಇದು ವಿಧಿಯೆ? ಎಲೆಲೆ ಕೂ. ಚ. ಸಂಗಯ್ಯ ನೀ ಮಾಡಿದ ಮರಹು."

"...ಹೊರವೇಷದಲ್ಲಿ ನಾಮರೂಪುಕ್ರಿಯೆವಿಡಿದು, ವಾಗ್ಬ್ರಹ್ಮಗಳೆನಿಸುವ ವಾಚಾಳಕರಿಗೆಲ್ಲಿಹದೊ? ಅದೆಂತೊ? ಅದೆತ್ತಣ ಸುದ್ದಿಯೊ? ಕೂ. ಚ. ಸಂ. ದೇವಾ?"

ಇವುಗಳಿಂದ ಅರ್ಥಾನುಭವವಿಲ್ಲದವರ ಮಾತುಗಳಾಗಲಿ ಮಂತ್ರಗಳಾಗಲಿ ಅವು ಚನ್ನಬಸವಣ್ಣನಿಗೆ ಮಾನ್ಯವಿಲ್ಲ. ಅವರೂ ನಿಷ್ಪ್ರಯೋಜಕರು—ಎಂಬುದು ವ್ಯಕ್ತವಾಗುವದಲ್ಲದೆ ವೇದವಾಜ್ಮಯದಲಿಯೂ ವಚನವಾಜ್ಮಯದಲ್ಲಿಯೂ ಸಹ ಸಮುಭಾವಿ, ಸಮುಗುಣಗ್ರಾಹಿ ಎಂಬುದು ಚನ್ನಾಗಿ ವಿಶದವಾಗುತ್ತದೆ.

ಚನ್ನಬಸವಣ್ಣನು ಅನ್ಯದೈವಗಳ ಹಳಿಯುತ್ತಾನೆ. ಆದರೆ ಅನ್ಯದೈವಗಳಾವು ಎಂಬುದಕ್ಕೆ ಅವನು ಹೇಳುವುದು ಬೇರೆ. ಅದು ಈ ರೀತಿಃ—

"...ಇನ್ನು ಅನ್ಯದೈವವೆಂಬುವವಾವಾವೆಂದಡೆ, ಪ್ರಾಣೋಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕ್ರಕರ, ದೇವದತ್ತ, ಧನಂಜಯ ದಶವಾಯುಗಳುಂಟಾಗಿ ತನ್ನ ತಾನರಿವ ಪುರುಷಂಗೆ ಇವೇ ಅನ್ಯದೈವ ಕಾಣಿರೋ॥"

ಎಂತಹ ಸಹಜವಾದ ಸಾರ್ಥವಾದ ಮಾತಿದು! ವಾಯುಗಳ ಹರಿದಾಟದಿಂದಲೆ ಮನದ ಹರಿದಾಟ! ಏಕನಿಷ್ಠೆಗೆ-ಏಕೈಕವೃತ್ತಿಗೆ ಇವೇ ಭಂಗಕಾರಿಗಳು. ಆದ್ದರಿಂದ ಅವು ಅನ್ಯದೈವಗಳು. ಆ ದಶವಾಯುಗಳನ್ನು ದಮನಮಾಡಬೇಕು. ಅವನ್ನು ದಮನಿಸಬೇಕಾದಲ್ಲಿ ಪ್ರಸಾದತತ್ವ ಪ್ರಾಮುಖ್ಯವಾದದು. ಅವನ್ನು ದಮನಿಸಬೇಕಾದಲ್ಲಿ ಪ್ರಸಾದ

ಮೂಲಕ ಪ್ರಯತ್ನಿಸುವುದು. 'ಆಚಾರ ಸಹಿತ ಲಿಂಗಭಕ್ತನಾದೊಡೆ ಅನ್ಯ ದೈವವೆಂಬುದು ತನ್ನಲ್ಲಿಯೇ ಅರಿಯಬೇಕು.' ಎಂದು ಸಿದ್ಧಾಂತ ಮಾಡಿದ್ದಾನೆ.

ಆಲಿಂಗಿಗಳು ಭವಿಗಳೆಂದು ಬೀಳ್ಗಳೆವುದಕ್ಕಿಂತಲೂ—'ಅರಿಷಡ್ವರ್ಗಮಲತ್ರಯಂಗಳೆಂಬ ಭವಿಯನರಿಯಬೇಕು.' (೬೯—೧) ಇವನ್ನು ಭಕ್ತರಾಗಿಸಲು ಪ್ರಯತ್ನಿಸಬೇಕು.—ಎಂದು ಹೇಳುವ ಚನ್ನಬಸವಣ್ಣನು ವಿಚಾರಲಹರಿಯಲ್ಲಿ ಎಷ್ಟು ಮುಂದುವರಿದಿದ್ದಾನೆ! ಎಂತಹ ವಿಶಾಲ ಸಮಭಾವ ಸ್ವಭಾವದವನಾಗಿದ್ದಾನೆ, ಎಂಬುದನ್ನು ಅರಿಯುಬಹುದಾಗಿದೆ

ಹಿಂದೆ ಸಂದ ಯುಗಂಗಳು!

ಚನ್ನಬಸವಣ್ಣನು ಬ್ರಹ್ಮಸೃಷ್ಟಿಗೆ ತನ್ನ ಹಿಂದೆ ಸಂದ ಯುಗಂಗಳೆಷ್ಟೆಂಬುದನ್ನು ನಿರ್ದುಷ್ಟವಾಗಿ ನಿರೂಪಿಸಿದ್ದಾನೆ! ಪ್ರಪಂಚದ ಕಾಲ ಪರಿಮಿತಿಯನ್ನು ಪರಿಗಣಿಸಿದ್ದಾನೆ; ಅದೆಷ್ಟೆಂಬುದನ್ನು ಇಲ್ಲಿ ನೋಡಿರಿ!

"ಹಿಂದೆ ಸಂದ ಯುಗಂಗಳು ಶತಕೋಟಿ ಸಂಖ್ಯೆಯ ಮೇಲೆ
ಏಳುಲಕ್ಷದಸಾವಿರದ ಏಳುನೂರೆಪ್ಪತ್ತು ಯುಗಂಗಳು..." (೨೭-೩)

ನಾಲ್ಕು ಯುಗಂಗಳ ಕಾಲ.

ಕೃತಯುಗಃ ಜೌತೀಸಲಕ್ಷ ಐವತ್ತಾರು ಸಾವಿರ—೩೪೫೬೦೦೦
ತ್ರೇತಾಯುಗಃ ಹದಿನೇಳುಲಕ್ಷ ಇಪ್ಪತ್ತೆಂಟುಸಾವಿರ—೧೭೨೮೦೦೦
ದ್ವಾಪರಯುಗಃ ಎಂಟುಲಕ್ಷ ಅರವತ್ತುನಾಲ್ಕುಸಾವಿರ— ೮೬೪೦೦೦
ಕಲಿಯುಗಃ ನಾಲ್ಕುಲಕ್ಷ ಮೂವತ್ತೆರಡುಸಾವಿರ — ೪೩೨೦೦೦

ಹೀಗೆಂದು ಸೃಷ್ಟಿಯ ಆದಿಯಿಂದ ತಾನಿರುವ ವರೆಗಿನ ಮತ್ತು ನಾಲ್ಕು ಯುಗಗಳ ಕಾಲಪರಿಮಿತಿಯನ್ನು ಹೇಳಿದ್ದಾನೆ. ನಾಲ್ಕುಯುಗಗಳ ಈ ಕಾಲ ಹೇಗೆ ದಿಟವೋ ಹಾಗೆ ಹಿಂದೆ ಸಂದ ಯುಗಂಗಳ ಗಣನೆಯೂ ದಿಟವೆಂದೇ ಹೇಳಬೇಕು. ಇದು ಇವನ ಕಾಲಜ್ಞಾನದ ಒಂದು ಕುರುಹು.

ಕಡೆನುಡಿಗಳು.

ಹನ್ನೆರಡನೆಯ ಶತಮಾನದ ಶಿವಶರಣರ ಕಾಲ ಆಧ್ಯಾತ್ಮಿಕ ಸಾಧನೆಯ ಕಾಲವಾಗಿದ್ದಂತೆ ಸಮಾಜ ಸುಧಾರಣೆಯ ಕಾಲವೂ ಆಗಿದ್ದಿತು.

ಹಲಕೆಲ ಶಿವಶರಣರು ಈ ಕಾರ್ಯದಲ್ಲಿ ತವ ತಮಗೆ ತಕ್ಕಂತೆ ಶಕ್ತ ವಿದ್ದಷ್ಟು ತೊಡಗಿದರು. ಇಂಥವರಲ್ಲಿ ಚನ್ನಬಸವಣ್ಣನು ಅಗ್ರಗಣ್ಯನು. ಈತನು ನಿಷ್ಪಕ್ಷಪಾತಬುದ್ಧಿಯಿಂದ ನಿರ್ದಾಕ್ಷಿಣ್ಯವಾಗಿ ನಿರ್ದುಷ್ಟಸಿದ್ಧಿಯಿಂದ ಸಮಾಜ ಜೀವನವನ್ನ-ಷಟ್‌ಸ್ಥಲಸಿದ್ಧಾಂತವನ್ನು ವಿಮರ್ಶಿಸಿದ್ದಾನೆ;- ವಿವರಿಸಿದ್ದಾನೆ. ಕೊರತೆಗಳನ್ನು ತುಂಬಿತಂದು ಕಳೆಗೊಳಿಸಿದ್ದಾನೆ. ಇದರ ಫಲವಾಗಿ ವೀರಶೈವರಲ್ಲಿ ಶೈವದ ಎಡೆಯಾಟ-ಹೊಯ್ದಾಟ ನಿಂತು ಸಮಾಜಾಭಿಮಾನವು ಬೇರೂರಿತು. ವಿಶಾಲತತ್ವವು ಕಳೆದುಂಬಿ ಕೊನರಿತು;-ಕಾಯ್ಪಿಟ್ಟಿತು. 'ಷಟ್‌ಸ್ಥಲಚಕ್ರವರ್ತಿ'ಯಾಗಿದ್ದಂತೆ 'ಸಮಾಜ ಸುಧಾರಕಾಗ್ರಣಿ'ಯೂ ಆದನು.

ಚನ್ನಬಸವಣ್ಣ ಮಹಾಜ್ಞಾನಿ; ಮಹಾನುಭಾವಿ. ತೇಜಸ್ವಿ; ಓಜಸ್ವಿ. ಸುಧಾರಕ; ವಿಮರ್ಶಕ. ಆತನ ವಚನ ವಾಣಿಯಲ್ಲಿ ಈ ವ್ಯಕ್ತಿತ್ವ ಹೆಜ್ಜೆಹೆಜ್ಜೆಗೂ ಹೊಳೆಯುತ್ತದೆ. ಮಾತುಮಾತಿಗೂ ಮಿಂಚುತ್ತದೆ. ಚನ್ನಬಸವಣ್ಣನು ಅವಲೋಕಿಸಿದುದನ್ನು ಆಳವಾಗಿ ಆಲೋಚಿಸುತ್ತಾನೆ; ಆಲೋಚಿಸಿದ್ದನ್ನ ಅನುಭವಿಸುತ್ತಾನೆ; ಅನುಭವಿಸಿದ್ದನ್ನು ಭಾವಗರ್ಭಿತವಾಗಿ ಬಿಚ್ಚಿ ಆಡುತ್ತಾನೆ. ಆದ್ದರಿಂದ ಅಲ್ಲಿ ಸತ್ವವಿದೆ. ಸತ್ಯವಿದೆ. ಆತನು ತನ್ನ ಹಿಂದಿದ್ದ ತನ್ನೊಡನಿದ್ದ ಸಮಾಜದ ಕೊರತೆಗಳನ್ನು ಕಂಡರೀತಿ, ಮುಂಬರಿವ ಸಮಾಜ ಹೇಗೆ ಹೆಜ್ಜೆಹಾಕಬೇಕೆಂಬುದನ್ನು ಹೇಳುವ ನೀತಿ ಇವು ಆದರ್ಶವಾಗಿವೆ; ಅನನ್ಯಸಾಧಾರಣವಾಗಿವೆ. ಅಲ್ಲದೆ ಆತನ ಜ್ಞಾನಾನುಭವಗಳ ಮೆರಗಿಗೆ ಒರೆಗಲ್ಲಾಗಿವೆ. ಜ್ಞಾನದ ರೂಪನ್ನೂ ಅನುಭವದ ತಿರಳನ್ನೂ ವಚನರೂಪದಲ್ಲಿ ಚನ್ನಾಗಿ ಚಿತ್ರಿಸಿದ್ದಾನೆ. ಸಾಮಾಜಿಕ ಕೊರತೆಗಳನ್ನು ಕಣ್ಣಾರೆ ಕಂಡು ಕಡುನೊಂದು ಸರಿಪಡಿಸಿದ್ದಾನೆ. ಆತನ ಆ ಜ್ಞಾನಾನುಭವಗಳಿಗೆ ಆಗಮಾವಮ್ನಾಯ ವಚನಗಳು ಬೆಂಬಲವಿದ್ದು ಒಂದು ಹೊಸ ಪ್ರತಿಭೆಯನ್ನು ನವನೈತಿತ್ಯವನ್ನು ತಂದುಕೊಟ್ಟವೆ.

ಬಸವಣ್ಣ ಹೃದಯವನ್ನು ಕರಗಿಸುತ್ತಾನೆ. ಚನ್ನಬಸವಣ್ಣ ಮೆದುಳನ್ನು ಮೆರಗಿಸುತ್ತಾನೆ. ಬಸವಣ್ಣನದು ಬಾಹ್ಯಚಿನ್ಹವುಳ್ಳ ಸಕಲರನ್ನೂ ಸಂಗನೆಂದು ಭಾವಿಸುವ ಭಕ್ತಿ; ಚನ್ನಬಸವಣ್ಣನದು ಬಾಹ್ಯಾಭ್ಯಂತರಗಳನ್ನು ಆಳವಾಗಿ ಅಳೆದು ಕಾಣುವ ದೃಷ್ಟಿ. ಸಕಲರಲ್ಲಿ ಏಕತ್ವವನ್ನು ಭಾವಿಸುವ ಭಕ್ತಿಗೂ, ಒಂದನ್ನು ಸರ್ವರಲ್ಲಿ ಸಮೀಕ್ಷಿಸುವ ದೃಷ್ಟಿಗೂ

ವ್ಯತ್ಯಾಸವಿಲ್ಲದಿದ್ದರೂ ಮಾರ್ಗ ಬೇರೆ. ಈ ಗುಣದಿಂದ ಎಡಹುವಾಗ ಎತ್ತಿ ಹಿಡಿಯುವ ಶಕ್ತಿ ಚನ್ನಬಸವಣ್ಣನಲ್ಲಿ ವೈಗೂಡಿ ಬಂದಿದೆ. ಆದ್ದರಿಂದ ಆತ ಅಳಿಯನಾದರೂ ಬಸವಣ್ಣನಿಗೆ ಆದರ್ಶ ವ್ಯಕ್ತಿ! ಹೀಗಿದ್ದರೂ ಚನ್ನಬಸವಣ್ಣನು ಆ ಹೆಮ್ಮೆಯನ್ನು ಇಟ್ಟುಕೊಂಡಿಲ್ಲ. ಸೋದರ ಮಾವನಾದ ಬಸವಣ್ಣನಲ್ಲಿದ್ದ ತನ್ನ ಪೂಜ್ಯಭಾವವನ್ನು ತೊರೆದವನಲ್ಲ. ಭಕ್ತಿಸಾಮ್ರಾಜ್ಯದಲ್ಲಿ ಬಸವಣ್ಣನನ್ನು ಮನಸಾರೆ ಒಪ್ಪಿದ್ದಾನೆ. ಭಕ್ತಿಯನ್ನೂ ವಿರಕ್ತಿಯನ್ನೂ ತನ್ನ ಜ್ಞಾನಾಗ್ನಿಯ ಮೂಕ್ಷೆಯಲ್ಲಿ ಬೆಸದಿದ್ದಾನೆ. ಜ್ಞಾನಘನನಾದ ಚನ್ನಬಸವಣ್ಣನು ಜನಿಸದಿದ್ದರೆ, ಭಕ್ತಿಬಲ್ಲಿದನಾದ ಬಸವಣ್ಣನಿಗೂ ವಿರತಿವಿಶಿಷ್ಟನಾದ ಅಲ್ಲಮಪ್ರಭುವಿಗೂ ಸಂದಿಗ್ಧ ಸಮಯದಲ್ಲಿ ಯಾರು ತಾನೆ ಹೊಂದಾವಣಿಕೆ ಮಾಡುತ್ತಿದ್ದರು? ಕೊರತೆಯಿಂದ ಕೂಡಿದ ಸಾಮಾಜಿಕ ಆಚಾರ-ವಿಚಾರಗಳನ್ನು ಇನ್ನಾರು ಪರಿಪೂರ್ತಿಗೊಳಿಸುತ್ತಿದ್ದರು? ಸಾಮಾಜಿಕ ಸಂಪ್ರದಾಯಗಳನ್ನು ಯಾರು ತೊಡೆದುಹಾಕುತ್ತಿದ್ದರು?

ಚನ್ನಬಸವಣ್ಣನ ಜ್ಞಾನ ಅಮೇಯ; ಆತನ ವ್ಯಕ್ತಿತ್ವ ಅನುಪಮೇಯ. ಅವನಿಗೆ ಯಾರೂ ಸಾಟಿಯಿಲ್ಲ. ಚನ್ನಬಸವಣ್ಣನಿಗೆ ಸಾಟಿ ಚನ್ನಬಸವಣ್ಣನೆ! ಹೇಮಗಿರಿಗೆ ಹಿಮಕಣವು ಸಾಟಿಯಾದೀತೆ? ಆತನ ಆ ಜ್ಞಾನದ ಉಜ್ವಲ ಸೀಮೆಗೆ ಗೀಟನ್ನೆಳೆವುದು ಸಾಧ್ಯವಾದೀತೆ?

ಆದರೂ ಈ ಮಾತನ್ನು ಹೇಳದೆ ಸಮಾಧಾನವಿಲ್ಲ. ಚನ್ನಬಸವಣ್ಣನ ಚಿನ್ಮಯ ಜೀವನ ನಿರೀಕ್ಷಣದಲ್ಲಿ ಈ ಮೂರು ಅಂಶಗಳು ನಮ್ಮ ಗಮನವನ್ನು ಸೆಳೆಯುತ್ತವೆ. ೧ ಚನ್ನಬಸವಣ್ಣನು ಆತ್ಮಜ್ಞಾನಿಯಾದನು. ೨ ಸಾಮಾಜಿಕ ಸಂಪ್ರದಾಯಗಳನ್ನು ಕತ್ತರಿಸಿ, ಕೊರತೆಗಳನ್ನು ತುಂಬಿ, ಸಮಾಜ ಸುಧಾರಕನಾದನು; ಷಟ್‌ಸ್ಥಲ ಚಕ್ರವರ್ತಿಯಾದನು. ೩ ರಾಜಕೀಯ ರಂಗಕ್ಕಿಳಿದು ಚಿಕ್ಕ ದಣ್ಣಾಯಕನಾದನು.

ಇದು ಆತನ ವ್ಯಕ್ತಿತ್ವ. ಇನ್ನು ಆತನ ವಾಣಿಯಾದ ವಚನವನ್ನುದ್ದೇಶಿಸಿ ಎರಡು ಮಾತುಗಳನ್ನು ಹೇಳದೆ ತೃಪ್ತಿ ತೀರದು; ಬರೆಕ ಮುಗಿಯದು.

ಆತನ ವಚನ ಆತನು ಸಮಾಜದಲ್ಲಿ ಕೃಷಿ ಮಾಡಿದುದರ ಫಲ. ಜ್ಞಾನಾನುಭವಗಳ ರಸಘಟ್ಟ. ಷಟ್‌ಸ್ಥಲ ಸಿದ್ಧಾಂತದ ಸರ್ವಸ್ವ. ಆಗಮ

ಪ್ರಾಮಾಣ್ಯಗಳ ಅಂಗೀಕಾರಕ್ಕೆ ಆಗರ. ವಿಮರ್ಶೆ-ವಿವರಣೆಗಳ ಮೂಲಕ ಸಾಮಾಜಿಕ ಆಧ್ಯಾತ್ಮಿಕ ನೀತಿ ನಿಯಮಗಳ ಪ್ರತಿಪಾದನೆ—ಪಾಲನೆ ನಡೆದಿವೆ ಅದರಲ್ಲಿ!

ಬಸವಣ್ಣನ ವಚನದಲ್ಲಿ ಆತನ ಸಾಧನಜೀವನ ಹೋರಾಟವು ಹೊರಹೊಮ್ಮುವಂತೆ ಇಲ್ಲಿ ಚನ್ನಬಸವಣ್ಣನ ಜೀವನಾಂಶಗಳು -ಹೋರಾಟಗಳು ತೋರಿಬರುವದಿಲ್ಲ. ಕೇವಲ ಆತನ ಬೌದ್ಧಿಕ ಪರಿಶ್ರಮದಿಂದೊದಗಿದ ಪರಿಪಕ್ವತೆಯ ಹೊಗರೇರಿದೆ. ಬಸವಣ್ಣನದು ಜನರನ್ನು ಭಕ್ತಿಮಾರ್ಗಕ್ಕೆ ಆಕರ್ಷಿಸುವದರಲ್ಲಿ ಆಸಕ್ತಿ. ಚನ್ನಬಸವಣ್ಣನದು ಕುಂದು ಕೊರತೆಗಳನ್ನು ತುಂಬುವದರಲ್ಲಿ ಅನುರಕ್ತಿ.

ಪರಮತಗಳ ಜಂಝಾವಾತದ ಆ ಘಾತದಿಂದ ವಿಶೀರ್ಣವಾದ ಮತ ಧರ್ಮಗಳು, ಮರ್ಮಗಳು ಅಸ್ತವ್ಯಸ್ತಗಳಾಗಿ ಅಪರಿಪೂರ್ಣಗಳಾಗಿ ಸಾಮಾಜಿಕರಲ್ಲಿ ಆಚರಣೆಗೆ ದಿಕ್ಕುದೆಸೆ ತೋರದೆ ಅಲ್ಲೋಲ ಕಲ್ಲೋಲವೆದ್ದಾಗ ಚನ್ನಬಸವಣ್ಣನ ವಚನ ತುಂಬಾ ಕೆಲಸವಾಡಿದೆ. ನೂತನವಾಗಿ ಸೇರಿದ ಸೇರುವ ಸಾಮಾಜಿಕರಿಗೆ ಈತನ ವಚನ ತನ್ನ ಜ್ಞಾನದೀಪವನ್ನು ಬೆಳಗಿಸಿ ಹೊಂಬೆಳಗನಿತ್ತು ಮುಂದಾರಿ ತೋರಿದೆ. ಮನೋಭಾವಗಳಲ್ಲಿಯೂ ಮತಧರ್ಮಗಳಲ್ಲಿಯೂ ಜೀವನರೀತಿಯಲ್ಲಿಯೂ ನೀತಿಯಲ್ಲಿಯೂ ಸುಘಟಿತವಾದ ಸತ್ಯವಾದ ಏಪಾರ್ಟನ್ನಿಸಗಿದೆ. ಮುಗ್ಗರಿಸುವಾಗ ಮುಂಗೈಯಿತ್ತು ಎತ್ತಿದೆ. ತಾತ್ವಿಕ ವಿವರಣೆ, ನೈತಿಕ ವಿಚಾರಣೆ, ಸಾಮಾಜಿಕ ಸುಧಾರಣೆ, ಷಟ್‌ಸ್ಥಲ ಪ್ರತಿಪಾದನೆ ಇವು ಈ ವಚನದ ಹೃದಯ ನಾಡಿಗಳು.

ಅರಿವು, ಆಚರಣೆ ಚನ್ನಬಸವಣ್ಣನ ವಚನದ ಎರಡು ಕಣ್ಣುಗಳು. ಈ ಎರಡು ಕಣ್ಣೋಟಕ್ಕೆ ಪರವಸ್ತು ಒಂದೇ ದೃಶ್ಯಕಳೆ! ಪರಿಣಾಮ ಒಂದೇ ಪರಿತೃಪ್ತಿ!

ಒಟ್ಟಿನಲ್ಲಿ ಚನ್ನಬಸವಣ್ಣನ ಜ್ಞಾನಾನುಭವಗಳ ಕಿಡಿಗಳು ಆತನ ವಚನರೂಪದಲ್ಲಿ ತೊಳಗುತ್ತಿವೆ; ಬೆಳಗು ತೋರುತ್ತಿವೆ. ಅವುಗಳ ಪ್ರಯೋಜನವನ್ನು ಪಡೆಯುವುದು ಪಾಠಕರ ಜ್ಞಾನೋಪಾಸಕರ ಕೆಲಸ. ಆತನ ಅಚ್ಚಳಿಯದ ಕೃತಿಯಲ್ಲಿ ಆತನ ಜ್ಞಾನದ ಪ್ರತಿಮೆಯಿದೆ.

ಅದನ್ನು ತಿಳಿದೋದುವವರು ತಿಳಿಗಣ್ಣಿನಿಂದ ಚನ್ನಾಗಿ ದಿಟ್ಟಿಸಬಹುದು. ಅಂದಾಚಂಸಿದಲ್ಲಿ ಸಾಕ್ಷಾತ್ಕರಿಸಿಕೊಳ್ಳಬಹುದು.

ಚಿನ್ಮಯಮೂರ್ತಿ ಚನ್ನಬಸವಣ್ಣನವರ ವಚನಾಭ್ಯಾಸದ ಫಲವಾಗಿ ನಮ್ಮಬಗೆಗೆ ಬಂದ ಪರಿಯಲ್ಲಿ ಈ ವಿಶೇಷಗಳನ್ನು ವಿವರಿಸಿದ್ದಾಗಿದೆ. ಇವುಗಳಲ್ಲಿ ಕೆಲವು ವಿವಾದಾಸ್ಪದವಾಗಿ ಕಾಣಬಹುದು ಕೆಲವರಿಗೆ ! ಬೇರೆ ಕೆಲವರಿಗೆ ಅವೇ ಸಂಶೋಧನಕ್ಕೆ ಸೀಳ್ದಾರಿಯಾಗಿ ಪರಿಣಮಿಸಬಹುದು. ಇದು ದೀರ್ಘವಾದ ಸಾಸ. ಇದರಲ್ಲಿ ಪ್ರಕೃತಿ ಸಿದ್ಧವಾಗಿ ಸೇರಿರಬಹುದು ದೋಷ. ಅದು ವಿಮರ್ಶಕರ ಕೆಲಸ. ಇಷ್ಟು ಮಾತ್ರ ಹೇಳಬಲ್ಲೆವು. ಇದು ನಮ್ಮ ಹರಕುಶೈಲಿಯ ವಸಕು ತಿಳಿವಿನ ಉದ್ಯಮ—ಎಂದು.

ಕನ್ನಡಿಗರು, ಹೆಚ್ಚಾಗಿ ವೀರಶೈವರು ಹೀಗೆಯೆ ಬೇರೆ ವಚನಗಳನ್ನು ಆಳವಾಗಿ ವ್ಯಾಸಂಗ ಮಾಡಿ ಅರಗಿಸಿಕೊಂಡು ತಂತಮ್ಮ ರಸವತ್ತಾದ ರಚನೆಯ ಮುಖದಲ್ಲಿ ಚಿತ್ರಿಸಲಿ! ಇದರಿಂದ ಈಗಿನ ನಾಡಿನ ನೀತಿ ನಿಯತಿಗಳು, ಸಮಾಜದ ಸ್ಥಿತಿಗತಿಗಳು ಸ್ವಲ್ಪಮಟ್ಟಿಗೆ ತಹಬಂದಿಗೆ ಬಂದಾವು? ಸುಖಶಾಂತಿಗಳು ನೆಲೆಗೊಂಡಾವು? ವಚನವಾಙ್ಮಯದ ವಿಶೇಷ ವಿಚಾರಗಳು ಬೆಳಗುಗಂಡಾವು?

ಇಂದಿನ ಸಾಮಾಜಿಕ ಸಂದೇಹಗಳಿಗೂ ಸಮಸ್ಯೆಗಳಿಗೂ ಈ ಬರೆಹವು ಸ್ವಲ್ಪ ಸಮಾಧಾನಕಾರಕವಾದಲ್ಲಿ ಪಟ್ಟ ಪರಿಶ್ರಮ ಸಾರ್ಥಕ! ಹಾಗಾದೀತೆಂದೇ ಭಾವಿಸಿ ವಿರಮಿಸಲಾಗಿದೆ.

ನಡೆಸು ಬಾರ!

ಎಂಟು ಶತಕಗಳಾಚೆ ತೋರಿಯಡಗಿದ ಬೆಳಕೆ,
ಇಂದೇಕೆ ತೋರಲೊಲ್ಲೆ ?
ನಿನ್ನ ಕಿರಣ ದ್ಯುತಿಯದೆನಿತು ಬೆಳಕನು ಬೀರಿ
ಮಾನವನ ಹೆದ್ದಾರಿ ಜ್ಯೋತಿಮಯವಾಯ್ತು ! ೪

ನಾನೆ ಕಿರಿಯನು ಎನಗೆ ಕಿರಿಯರಿಲ್ಲೆಂದೆಂದು
ಬಕುತರಿಗೆ ಹಿರಿಯರಿಲ್ಲೆನುತ ಸಾರಿ,
ಪರಧನದ ಪರಸತಿಯ ಪರವಿಷಯದಾಪೇಕ್ಷೆ
ಇಹಪರವ ಸಾಧಿಸದು–ಎಂದು ತೋರಿಸಿಹೆ. ೯

ತನುಮನದ ಧನದ ಬರಿ ಬಯಲಾಸೆಯಿಂದಿಲ್ಲ
ನಿಜಸುಖದ ಘನದರಿವು ಎಂದು ಸಾರಿರುವೆ.
ತನ್ನ ತಾ ನರಿಯುವುದೆ ಬಾಳಗುರಿಯೆಂಬುದನು
ಉನ್ನತದಿ ತೋರಿ ನೀ ನಡೆದು ನುಡಿದೆ ೧೨

ಜೀವನಲಿ ಹುದುಗಿರುವ ವಿವಿಧ ಮಲಿನತೆಯನ್ನು
ವಾಕ್ಪರುಷದಿಂ ತೊಡೆದು ಹಸನುಗೈದೆ.
ಶಬ್ದ ಸೋಪಾನವನು ರಚಿಸಿರುವೆ, ನಲವಿನಿಂ
ಬದ್ಧ ಜೀವಿಗಳನ್ನು ಮೇಲಕೊಯ್ಯೆ. ೧೬

ನುಡಿಗಿಂತ ನಡೆ ಮುಂದು, ನಡೆದು ಬದುಕಿರಿ ಎಂದು
ಅರಿವಿನಾಳದ ಮೂಲ ಮಂತ್ರವನು ಉಸಿರ್ದೆ.
ಕಾಯಕದ ಹಿರಿಮೆಯನು ಕಾಯದಾ ನೆಲೆಯನ್ನು
ಕಾರುಣ್ಯದಿಂ ತೋರ್ದೆ ಜಗದ ಕಣ್ಗೆ. ೨೦

ಸತ್ಯಸಹ ಶುದ್ಧವಹ ಕಾಯಕವೆ ಕೈಲಾಸ
ವೆಂಬುದನು ನೀನಂದೆ ತೋರಿ ಮೆರೆದೆ.
ಕಾಯಸವೆಯದ ಬಕುತಿ ಮನಕರಗದಾಯುಕುತಿ
ಪರಮಾತ್ಮನೆಡೆಗಾಯ್ತು ದೂರವೆಂದೆ. ೨೪

ಬಕುತರಾ ಬಕುತರಂಗೆ ಶರಣೆಂದು ತಲೆವಾಗಿ
ಹಿಂಯ ಶರಣನು ತಾನೆಯೆನಿಸಿ ಬಾಳ್ದೆ.
ಪರಮಾನುಭವ ಮೂರ್ತಿ, ನಿನ್ನಿದಂತಹ ಸ್ಫೂರ್ತಿ !
ಮತ್ತೆಂದು ಬಹುದಿಲ್ಲಿ ಕಾರುಣ್ಯ ಕೀರ್ತಿ ? ೨೮

ಜಡಜಾಡ್ಯದಿಂ ಬೆಂದು ಬಸವಳಿದು ಹೋಗಿಹುದು
ಜನ ಜನಾಂಗವ ದಿಂದು ನಿಜವ ಮರೆತು.
ಮಾಯೆಯಾವರಣವದು ಜೀವ ಜಾಲವ ಸುತ್ತಿ
ಬಾಳ ಹಾದಿಯು ಮಾಡಿ ಕಗ್ಗಲ್ಲ ಕಾಡು. ೨೯

ಬಾಳುವುದು ಬದುಕುವುದು ವಿಷಯ ಲಾಲಸೆಗೆಂದು
ಮುಂಕುತನದಲಿ ಕೆಡಹಿ ನಾಶಗೈದಿಹುದು.
ಮೇರೆ ವಿೂರುತಲಿರುವ ಪಾಪರಾಶಿಯನೊತ್ತಿ
ಧರ್ಮಸಾಮ್ರಾಜ್ಯವನು ಕಟ್ಟು ಬೇಗ ! ೩೦

ಭಾರತಾಂಬೆಯ ನೊಂದ ಮಕ್ಕಳನು ಸಾರಿ,
ಬಸವ ವಸುಧೆಗೆ ಬೆಳಕ ಮತ್ತೆ ಬೀರಿ !
ಹಿಂದಿನಾ ವೈಭವವ ನಿಂದೊಮ್ಮೆ ತೋರುಬಾ,
ಇಂದಿನಾ ಜನತೆಯನು ನಡೆಸು ಬಾರ ! ೪೦

— ಬಿ. ನಂಜುಂಡಪ್ಪ

ವಚನ ವಾಙ್ಮಯದ ವೈಭವವು.

(ಲೇ॥—ಹು. ಬ ಳಲಬುಗಿ ಬಿ. ಎ. ವಿಜಾಪುರ ಸತ್ಯಶರಣ ಸಮಾಜ ಸೇವಕ.)

'ವಿಭವೋ ಹಿ ವೇದಶಬ್ದಾಃ' ಎಂದು ಯಾಸ್ಕಮುನಿಯು ತನ್ನ ನಿರುಕ್ತ ಶಾಸ್ತ್ರದಲ್ಲಿ ಆಧಾರವಾಗಿಟ್ಟುಕೊಂಡು ವೈದಿಕ ಶಬ್ದಗಳಿಗೆ ಆದಿ ಭೌತಿಕ, ಆದಿದೈವಿಕ ಹಾಗೂ ಆಧ್ಯಾತ್ಮಿಕವೆಂಬ ಮೂರು ತರದ ಅರ್ಥಗಳು ಆಗುವವೆಂದು ಹೇಳಿದ್ದಾನೆ. ಇದರಿಂದ ದೈವಿಕ ಶಬ್ದಗಳಿಗೆ ಒಂದು ನಿಶ್ಚಿತಾರ್ಥವಿಲ್ಲವೆಂದು ಸ್ಪಷ್ಟವಾಗುತ್ತದೆ. ಸಂಶಯ ಪರಿಹಾರಾರ್ಥವಾಗಿ ಸಂದರ್ಭಾನುಸಾರವಾಗಿಯೂ ಅನುಮಾನ ಪ್ರಮಾಣಕ್ಕನುಗುಣವಾಗಿಯೂ ಅರ್ಥಮಾಡಲು ಅವಕಾಶವಿರುತ್ತದೆ. ಆದರೆ ಅದೇ ವಚನಗಳ ಕಡೆಗೆ ನೋಡಿರಿ. ಅವು ನಿಶ್ಚಿತಾರ್ಥವನ್ನೇ ಬೋಧಿಸುವವು. ಅಲ್ಲಿ ಅನುಮಾನ ಸಂದೇಹಗಳಿಗೆ ಆಸ್ಪದವಿಲ್ಲ.

'ಕೆರೆ ಹಳ್ಳ ಭಾವಿಗಳು ವೈದೆಗೆದರೆ ಗುಳ್ಳೆ, ಗೊರಜೆ, ಚಿಪ್ಪು ಕಾಣಬಹುದು. ವಾರಿಧಿ ವೈದೆಗೆದರೆ ರತ್ನಂಗಳ ಕಾಣಬಹುದು. ಕೂಡಲ ಸಂಗನ ಶರಣರು ಮನದೆರೆದು ಮಾತನಾಡಿದರೆ ಲಿಂಗವ ಕಾಣಬಹುದು.' ಎಂಬದಾಗಿ ಶ್ರೀ ಬಸವಣ್ಣನವರು ಉದಾಹರಿಸಿದ್ದಾರೆ. ಮತ್ತು ಭಕ್ತರ ನುಡಿಯ ಗಡಣದ ನಡುವೆ ರಾಶಿಯಾಗಿಪ್ಪನು ಶಿವನು' ಎಂದು ಮತ್ತೊಂದೆಡೆಯಲ್ಲಿ ಉದಹರಿಸಿದ್ದಾರೆ. ಇದರಿಂದ ಸ್ಪಷ್ಟವಾಗಿ ತಿಳಿದು ಬರುವದೇನಂದರೆ ವಚನಗಳು ಅನುಭವದ ನುಡಿಗಳು. ಸ್ವಯಂ ಸ್ಫೂರ್ತಿಯುಕ್ತನಾಗಿರುವವು. ಮತ್ತು ನಿಶ್ಚಿತಾರ್ಥವನ್ನು ಬೋಧಿಸುವವು. ಅಲ್ಲದೆ ಪರವಸ್ತು ದರ್ಶಕವಾಗಿರುವವು. ಇನ್ನೂ ಹೇಳುವದಾದರೆ ಶಾಸ್ತ್ರಕ್ಕೆ ಸಾವಿರ ಮುಖಗಳೆಂಬ ನಾಣ್ನುಡಿಯು ಬಳಕೆಯಲ್ಲಿರುವದು ಮತ್ತು ಶ್ರೀ ಶಂಕರಾಚಾರ್ಯರು 'ಶಬ್ದಜಾಲಂ ಮಹಾರಣ್ಯಂ ಚಿತ್ತಭ್ರಮಣಕಾರಕಂ' ಎಂದು ಶಬ್ದರಾಶಿಯು ಮುಮುಕ್ಷುಗಳ ಚಿತ್ತವನ್ನು ಗೊಂದಲದಲ್ಲಿ ನೂಕುವದಾಗಿದೆ, ಎಂದು ಘಂಟಾಘೋಷವಾಗಿ ಸಾರಿರುವರು.

ತಮ್ಮ ಅನುಭವವನ್ನು ಯಥಾರ್ಥವಾಗಿ ಸಂಶಯ ಬಾರದಂತೆ ತಿಳಿಸುವದಕ್ಕಾಗಿಯೇ ಸತ್ಯಶರಣರು ಮಾತೃಭಾಷೆಯಾದ ಕನ್ನಡದಲ್ಲಿಯೇ ಸುಗಮವಾಗಿಯೂ ಸುಲಲಿತವಾಗಿಯೂ ನುಡಿದಿರುವರು. ಸಂಸ್ಕೃತವು ನಿರ್ವಾಣಭಾಷೆಯೆಂದು ಹೆಸರಾಗಿರುವದು ನಿಜ. ಆದರೆ ಸತ್ಯಶರಣರು ತಮ್ಮ ಲಿಂಗಾನುಸಂಧಾನದ ಯೋಗದಲ್ಲಿ ನುಡಿದ ಶಿವಾನುಭವದ ನುಡಿಗಳಿಗೆ ಕನ್ನಡವು ಕನ್ನಡಿಯಾಗಿದೆ. ಆದುದರಿಂದ ಕನ್ನಡವು ಶಿವನುಡಿಯಾಗಿರುವದರಿಂದ ನಿರ್ವಾಣಭಾಷೆಗಿಂತ ಹೆಚ್ಚು ಗೌರವವನ್ನು ಪಡೆದುಕೊಂಡಿರುವದು, ಭಾಷೆಯ ಗೌರವವು ಅದರೊಳಗಿನ ಸಂಸ್ಕೃತಿಯ ಮೇಲೆ ಅವಲಂಬಿಸಿರುತ್ತದೆ. ಸತ್ಯಶರಣರ ಜೀವಿತಧ್ಯೇಯವಾದ ಲಿಂಗಾಂಗಸಾಮರಸ್ಯದಂಥ ಅನುಪಮ ಸಂಸ್ಕೃತಿಯನ್ನು ಒಳಕೊಂಡಿರುವದರಿಂದ ಕನ್ನಡಕ್ಕೆ 'ಕೈಲಾಸ ಭಾಷೆ'ಯೆಂದರೂ ಸಲ್ಲುವದು.

ಆತ್ಮಸಾಕ್ಷಾತ್ಕಾರವು ಉದಾತ್ತವಾದ ವೇದಾಂತಶಾಸ್ತ್ರದ ಕೊನೆಯ ಮೆಟ್ಟು. ಆದರೆ ಅದು ವೀರಶೈವ ಧರ್ಮದ ಪ್ರಾರಂಭದ ಮೆಟ್ಟು. ಚಿನ್ಮಾತ್ರಬ್ರಹ್ಮಜ್ಞಾನದಿಂದ ವ್ಯಾವಹಾರಿಕ ದ್ವೈತಬಂಧವಳಿವುದೇ ಮೋಕ್ಷವೆಂದು ವೇದಾಂತಿಗಳು ಹೇಳುತ್ತಾರೆ. ತನ್ನ ಹೃದಯದಲ್ಲಿ ಆತ್ಮನಿದ್ದು, ಒಡನೆ ಪರಮಾತ್ಮನಿದ್ದು ಈ ಜ್ಞಾನವು ಕರಗತವಾಗಿ ಜೀವಪರದಾರ ದ್ವೈತಭಾವವಳಿದು ಸಾಮರಸ್ಯವುಂಟಾಗಿ ನಿಜೈಕ್ಯಹೊಂದುವದೇ ವೀರಶೈವದ ಮೂಲಧ್ಯೇಯವು. ಇದನ್ನು ತಿಳಿಯದ ಪರಕೀಯ ಪಂಡಿತರು ಆತ್ಮಸಾಕ್ಷಾತ್ಕಾರವು ವೀರಶೈವರ ಕೊನೆಯ ಗುಟ್ಟೆಂದೂ, ವಚನಗಳು ಕನ್ನಡ ವೇದಗಳೆಂದು ಭ್ರಾಂತಿಗೊಂಡು ಉಲ್ಲೇಖಿಸಿರುವರು. ಆದರೆ ವಚನಗಳು ವೇದಾಗಮೋಪನಿಷತ್ತುಗಳ ತಾತ್ಪರ್ಯವನ್ನು ಒಳಕೊಂಡು ವಿಶೇಷಾರ್ಥವುಳ್ಳವುಗಳಾಗಿರುವವು. ಆದುದರಿಂದ ಅವುಗಳಿಗೆ ಶಿವಾನುಭವ ಗ್ರಂಥಗಳೆಂಬ ಗೌರವ ಶಬ್ದವು ಸಲ್ಲುವದು. ಶ್ವೇತಾಶ್ವತರೋಪನಿಷತ್ತಿನಲ್ಲಿ ಹೇಳಿದ 'ತಿಲೇಷು ತೈಲಂ ದಧ್ನೀನೀವ ಸರ್ಪಿರಾಪಃ ಸ್ರೋತಸ್ಸ್ವರಣೀಷು ಚಾಗ್ನಿಃ । ಏವಮಾತ್ಮಾತ್ಮನಿ ಗೃಹ್ಯತೇಸೌ ಸತ್ಯೇನೈನಂ ತಪಸಾಯೋನುಪಶ್ಯತಿ॥' ಎಳ್ಳಿನಲ್ಲಿ ಎಣ್ಣೆಯೂ, ಮೊಸರಿನಲ್ಲಿ ತುಪ್ಪವೂ, ಬುಗ್ಗೆಗಳಲ್ಲಿ ನೀರೂ, ಕಟ್ಟಿಗೆಯಲ್ಲಿ ಬೆಂಕಿಯೂ ಇರುವಂತೆ ತನ್ನ ಆತ್ಮನೊಳು ಪರಮಾತ್ಮನಿರುವನೆಂದು ಹೇಳಿದ ಮರ್ಮವನ್ನು ತಿಳಿದ ಬಸವಣ್ಣನವರು—

'ಉದಕದೊಳಗೆ ಬಚ್ಚಿಟ್ಟ ಬಯಕೆಯು ಕಿಚ್ಚಿನಂತೆ ಇದ್ದಿತ್ತು. ಸಸಿಯೊಳಗಣ ರಸದ ರುಚಿಯಂತೆ ಇದ್ದಿತ್ತು. ನನೆಯೊಳಗಣ ಪರಿಮಳದಂತೆ ಇದ್ದಿತ್ತು. ಕೂಡಲಸಂಗಮದೇವರ ನಿಲವು ಕನ್ನೆಯ ಸ್ನೇಹದಂತೆ ಇದ್ದಿತ್ತು' ಎಂದು ಅಂದಿರುವರು. ಇವೆರಡರ ನಡುವಿನ ತಾರತಮ್ಯವನ್ನು ನೋಡಿರಿ. ಶ್ವೇತಾಶ್ವತರ ವಚನವು ಬ್ರಹ್ಮಾಂಡದೊಳಗಿನ ಬಹಿರಂಗದ ಉದಾಹರಣೆಗಳನ್ನಷ್ಟೇ ಹೇಳುತ್ತದೆ. ಆದರೆ ಬಸವಣ್ಣನವರ ವಚನವು ಬಹಿರಂಗದ ಉದಾಹರಣೆಗಳನ್ನಷ್ಟು ಕೊಟ್ಟು ಮುಂದೆ ಬಂದು ಪಿಂಡಾಂಡದೊಳಗಿನ ಸಂಗತಿಗಳನ್ನು ಎದುರಿಟ್ಟು ತೋರಿ (ಕನ್ನಡ ಸ್ನೇಹದ ಉದಾಹರಣೆ ಗಂಡನನ್ನು ಮೋಹಗೊಳಿಸುವದಾದ ಲಾವಣ್ಯ ಸ್ನೇಹರಸವು, ಚಿಕ್ಕ ಬಾಲಕಿಯಲ್ಲಿ ಹುದುಗಿದ್ದಹಾಗೆ) ಮನವರಿಕೆಯಾಗುವಂತೆ ಹೇಳುತ್ತದೆ. ಇದಲ್ಲದೆ ಭಗವದ್ಗೀತೆಯಲ್ಲಿ ಹೇಳಿದ

ಈಶ್ವರಃ ಸರ್ವಭೂತಾನಾಂ ಹೃದ್ದೇಶೇರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥
ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ ॥

ಭಗವಂತನ ಈ ಉಪದೇಶದ ಸಾರವನ್ನೇ ಬಸವಣ್ಣನವರು ತಮ್ಮ ವಚನದಲ್ಲಿ ಶೇಖರಿಸಿರುವರು.

'ಶಿವ ಏಕೋಧ್ಯೇಯಃ ಶಿವಂ ಕರಃ ಸರ್ವಮನ್ಯತ್ಪರಿತ್ಯಜ್ಯ । ಅಥರ್ವ ಶರಸ್' ಎಲ್ಲವನುಳಿದು ಮಂಗಲಪ್ರದನಾದ ಶಿವನನ್ನೇ ಚಿಂತಿಸತಕ್ಕದ್ದು' ಎಂದು ಅಥರ್ವ ಶಿಖೆಯೆಂಬ ಉಪನಿಷತ್ತು ಹೇಳುತ್ತದೆ. ಆದರೆ ಶಿವಧ್ಯಾನದ ಈ ಮರ್ಮವನ್ನು ಬಸವಣ್ಣನವರು ಹ್ಯಾಗೆ ಹೃದಯಂಗಮವಾಗಿಯೂ ಕೂಲಂಕಷವಾಗಿಯೂ ಹೇಳಿರುವರು ನೋಡಿರಿ.

'ಆರಾಧ್ಯ ಪ್ರಾಣಲಿಂಗವೆಂದರಿದು ಪೂರ್ವಗುಣವಳಿದು ಪುನರ್ಜಾತನಾದ ಬಳಿಕ ಸಂಸಾರಬಂಧುಗಳೆನ್ನವರೆಂದರೆ ನಂಟುಭಕ್ತಿ ನಾಯಕ ನರಕ ಇಂತೆಂದುದು ಕೂಡಲಸಂಗನ ವಚನ.'

ವೇದಗಳೊಳಗಿನ ಋಕ್ಕುಗಳನ್ನು ತೆಗೆದುಕೊಳ್ಳೋಣ.

ಇಂದ್ರಂ ಮಿತ್ರಂ ವರುಣಮಗ್ನಿ ಮಾಹು
ರಥೋ ದಿವ್ಯಃ ಸ ಸುಪರ್ಣೋಗರುತ್ಮಾನ್ ।

ಏಕಂ ಸದ್ವಿಪ್ರಾ ಬಹುಧಾ ವದಂತ್ಯ ।
ಗ್ನಿಂ ಯಮಂ ಮಾತಹಿಶ್ವಾನ ಮಾಹುಃ ॥
ಋಗ್ವೇದ ಮಂಡಲ ೧ ಸೂಕ್ತ ೧೬೪.

ಒಬ್ಬನೇ ದೇವರನ್ನು ಯಮನೆಂದೂ ಅಗ್ನಿಯೆಂದೂ ಇಂದ್ರನೆಂದೂ ವಾಯುವೆಂದೂ ವರುಣನೆಂದೂ ಹೀಗೆಯೇ ಹೇಳುತ್ತಿರುವರು ಎಂಬ ದಾಗಿ ಋಗ್ವೇದದಲ್ಲಿ ಹೇಳಿರುವದು. ಆದರೆ

'ದೇವನೊಬ್ಬ ನಾಮ ಹಲವು. ಪರಮಪತಿವ್ರತೆಗೆ ಗಂಡನೊಬ್ಬ. ಮತ್ತೊಂದಕ್ಕೆರಿಗಿದರೆ ಕಿವಿಮೂಗ ಕೊಯ್ವನು. ಹಲವು ದೈವದ ಎಂಜಲ ತಿಂಬವರರೇನೆಂಬೆ ಕೂಡಲಸಂಗಮದೇವಾ.'

ಹೀಗೆಂದು ಬಸವಣ್ಣನವರು ಪರಮ ಪತಿವ್ರತೆಯ ಉದಾಹರಣೆಯನ್ನು ಕೊಟ್ಟು ಏಕಭಾವಭಕ್ತಿಯಿಂದ ಇರಬೇಕೆಂದು ಸ್ಪಷ್ಟಮಾಡಿರುವರು. ಮತ್ತು ಭಗವದ್ಗೀತೆಯಲ್ಲಿಯ 'ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ ।' ಭಕ್ತಿಯು ಅನನ್ಯವಾಗಿರಬೇಕೆಂದು ಹೇಳಿರುವರಲ್ಲದೆ ವಿಪರೀತವಾದಲ್ಲಿ ಒದಗುವ ಘೋರ ಶಿಕ್ಷೆಯನ್ನು ಉದಾಹರಿಸಿದ್ದಾರೆ.

'ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯಚಿತ್ ಧನಂ ॥ (ಈಶಾವಾಸ್ಯೋಪನಿಷತ್ತು) ಹುಲ್ಲುಕಡ್ಡಿ ಮೊದಲು ಮಾಡಿ ಎಲ್ಲೆಡೆಯಲ್ಲಿಯೂ ಪರಮನು ವ್ಯಾಪಿಸಿರುವನು. ಅವನು ಕೊಟ್ಟಷ್ಟರಲ್ಲಿ ಸಂತೋಷಪಡು. ಎರಡನೆಯವರ ದ್ರವ್ಯಕ್ಕೆ ಆಶೆ ಮಾಡಬೇಡ ಎಂದು, ಈಶಾವಾಸ್ಯೋಪನಿಷತ್ತು ಹೇಳುತ್ತದೆ. ಇದನ್ನು ಬಸವಣ್ಣನವರು ತಮ್ಮ ವಚನದಲ್ಲಿ ಹೇಳಿರುವ ಪರಿಯನ್ನು ನೋಡಿರಿ.

'ನೀನಿಕ್ಕಿದ ಬಿಯ್ಯದಲ್ಲಿ ವಂಚನೆಯುಳ್ಳೊಡೆ, ಸಂಗ, ನಿಮ್ಮ ತೊತ್ತತನಕ್ಕೆ ದೂರವಯ್ಯ! ಕದ್ದು ತಿಂದಡೆ ಕೈ ಹಿಡಿದೊಮ್ಮೆ ಬಡಿದು ತುಡುಗುಣಿತನವ ಬಿಡಿಸಯ್ಯ! ಜಂಗಮ ಮನೆಗೆ ಬಂದಲ್ಲಿ ಓಸರಿಸಿದರೆ ಮೂಗಹಿಡಿದು ಕೊಯ್ಯಯ್ಯಾ ! ಕೂಡಲಸಂಗಮದೇವಾ'

ಪರಮಾತ್ಮನು ಕೊಟ್ಟಷ್ಟರಲ್ಲಿ ಭೋಗಿಸಬೇಕಲ್ಲದೆ ಅದರಲ್ಲಿಯೇ ಜಂಗಮುದಾಸೋಹ ಮಾಡಬೇಕೆಂದು ಹೇಳಿರುವರು. ತನಗೆ ಕೊರತೆಯಾದರೂ ಚಿಂತೆಯಿಲ್ಲ. ವಂಚನೆಯಿಲ್ಲದೆ ಅತಿಥಿಯಾಗಿ ಮನೆಗೆ ಬಂದ ಶಿವಭಕ್ತನ ತೃಪ್ತಿಪಡಿಸಬೇಕೆಂದು ಹೆಚ್ಚಿನ ಆಶಯವನ್ನು ವಚನದಲ್ಲಿ ಭರತಿಮಾಡಿರುವರು.

ಶ್ರೀ ಬಸವಣ್ಣನವರು ಗಾಯತ್ರಿ ಮಂತ್ರದ ನಿಜಾರ್ಥವನ್ನು ಬಲ್ಲವರಾದುದರಿಂದ ಈ ಮುಖ್ಯ ಮಂತ್ರಾಧಿದೇವತೆಯಾದ ಶಿವನನ್ನು ಹಾರುವರು ಅರಿಯಲಿಲ್ಲೆಂದು ನಿಷೇಧಿಸಿದ್ದಾರೆ.

'ವೇದವನೋದಿದ ವಿಪ್ರರು ಹೊನಲಲ್ಲಿ ಹೋದ ಕೇಡ ನೋಡಿರೇ! ಭರ್ಗೋದೇವಸ್ಯಧೀಮಹಿ ಎಂಬರು. ಒಬ್ಬರಿಗಾದರೂ ವಿಚಾರವಿಲ್ಲ. ನೋಡಿರೇ ಕೂಡಲ ಸಂಗಮದೇವಾ.'

'ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್' ॥ ಪಾಪನಾಶಕನಾಗಿ ಲೋಕಾಧ್ಯಕ್ಷನಾದ ಸೂರ್ಯನಿಗಿಂತಲೂ ಮಿಗಿಲಾದ ಹಾಗೂ ನಮ್ಮ ಬುದ್ಧಿ ಪ್ರೇರಕನಾದ ಶಿವನನ್ನು ನಾನು ಧ್ಯಾನಿಸುತ್ತೇನೆ.

ಇದರಂತೆಯೇ ಉತ್ತಮ ಸೂಕ್ತವೆನಿಸಿದ ಪುರುಷ ಸೂಕ್ತದ ವಿವರಣೆಯನ್ನು ಬಸವಣ್ಣನವರು ತಮ್ಮ ವಚನದಲ್ಲಿ ಯಥಾರ್ಥವಾಗಿ ಮಾಡಿರುವರು. ವಾಚಕರ ಅವಗಾಹನಕ್ಕಾಗಿ ಸೂಕ್ತದ ಮೂಲವನ್ನು ಕನ್ನಡ ವಚನವನ್ನು ಇದರಡಿಯಲ್ಲಿ ಬರೆಯುತ್ತಿದೆ.

ಸಹಸ್ರಶೀರ್ಷಾಪುರುಷಃ ಸಹಸ್ರಾಕ್ಷಃ ಸಹಸ್ರ ಪಾತ್ ।
ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ ದಶಾಂಗುಲಂ ॥
ಬ್ರಾಹ್ಮಣೋಸ್ಯ ಮುಖಮಾಸೀದ್ ಬಾಹೂ ರಾಜನ್ಯಃ ಕೃತಃ ।
ಊರೂ ತದಸ್ಯಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ॥
ಚಂದ್ರಮಾ ಮನಸೋ ಜಾತಶ್ಚಕ್ಷೋಃ ಸೂರ್ಯೋ ಅಜಾಯತ ।
ನಾಭ್ಯಾ ಆಸೀದಂತರಿಕ್ಷಂ ಶೀರ್ಷ್ಣೋ ದ್ಯೌಃ ಸಮವರ್ತತ ॥
ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ತಥಾ ಲೋಕಾನ್ ಅಕಲ್ಪಯತ್ ॥

'ರುದ್ರ ಮುಖದಲ್ಲಿ, ವಿಷ್ಣು ಭುಜದಲ್ಲಿ, ಜಂಘೆಯಲ್ಲಿ ಅಜನ ಜನನವು. ಇಂದ್ರ ಪಾದದಲ್ಲಿ, ಚಂದ್ರ ಮನದಲ್ಲಿ, ಚಕ್ಷುವಿನಲ್ಲಿ ಸೂರ್ಯ ಜನನವು. ಮುಖದಲ್ಲಿ ಅಗ್ನಿ, ಪ್ರಾಣದಲ್ಲಿ ವಾಯು, ನಾಭಿಯಲ್ಲಿ ಅಂತರಿಕ್ಷವು. ಶಿರದಲುದಯ ತೆತ್ತೀಸಕೋಟಿ ದೇವರ್ಕಳು. ಪಾದತಳ ದಲ್ಲಿ ಭೂವಿ ಜನನವು. ಶ್ರೋತ್ರದಲ್ಲಿ ದಶದಿಕ್ಕು. ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ. ಅಕ್ಷಯನಗಣಿತನು. ಸಾಸಿರತಲೆ, ಸಾಸಿರಕಣ್ಣು, ಸಾಸಿರ ಕೈ, ಸಾಸಿರ ಪಾವ, ಸಾಸಿರ ಸನ್ನಿಹಿತ ನಮ್ಮ ಕೂಡಲಸಂಗಮದೇವ.'

ಮೇಲಿನ ವಿವರದಿಂದ ವಚನಗಳು ವೇದಗಳಿಗಿಂತ ಮೇಲಾದ ವೆಂದೂ ಅಥವಾ ಶಿರೋಭಾಗವೆಂದೂ ಅವುಗಳ ಧ್ಯೇಯವಾದ ಲಿಂಗಾಂಗ ಸಾಮರಸ್ಯವು ಆತ್ಮಸಾಕ್ಷಾತ್ಕಾರವಾದ ಮೇಲೆ ಸಾಧಿಸುವ ಉತ್ತರಭಾಗ ವೆಂದೂ ಸತ್ಯಶರಣರು ಶಿವನ ಅಮರಗಣರೆಂದೂ ಅವರ ನುಡಿಗಳು ಶಾಶ್ವತವಾದ ಹಾಗೂ ಲೋಕೋಪಕಾರಕವಾದ ಶಿವಾನುಭವ ವಾಕ್ಯ ಗಳೆಂದೂ ಹೊಳೆಯದಿರಲಾರದು.

ಮಾದರಿಯ ಮಾಧ್ಯಮಿಕ ಶಾಲೆ.

ಲೇಖಕರ— ಓರ್ವಶಿಕ್ಷಕ.

(ವೀರಶೈವರಲ್ಲಿ ಅನೇಕ ವಿಧದ ಉಪಯುಕ್ತ ಕಾರ್ಯಗಳನ್ನು ಮಾಡಬೇಕೆಂಬ ಅಪೇಕ್ಷೆಯುಂಟಾಗಿರುವದು ಅದರ ಭಾವೀ ಪ್ರಗತಿಯ ಚಿನ್ಹವಾಗಿದೆ. ಇದರ ಪರಿಣಾಮವಾಗಿ ಅವರಲ್ಲಿ ಅನೇಕ ಶೈಕ್ಷಣಿಕ ಧಾರ್ಮಿಕ ಮತ್ತು ಸಾಮಾಜಿಕ ಸಂಸ್ಥೆಗಳು ಉಂಟಾಗಹತ್ತಿವೆ. ವೀರ ಶೈವರು ನಿಬಿಡವಾಗಿ ವಾಸಿಸುವ ಸ್ಥಳಗಳಲ್ಲಿ ಪ್ರಾಥಮಿಕ ಶಾಲೆಗಳೂ, ಕಾಲೇಜಗಳೂ, ವಿದ್ಯಾರ್ಥಿನಿಲಯಗಳೂ, ಫ್ರೀ ಬೋರ್ಡಿಂಗಗಳೂ, ತರುಣ ಸಂಘಗಳೂ, ಶಿವಾನುಭವ ಸಂಘಗಳೂ, ಪರೀಕ್ಷಾಕೇಂದ್ರ ಗಳೂ, ಅಕ್ಕನ ಬಳಗಗಳೂ ಕಾರ್ಯವಾಡುತ್ತಲಿವೆ. ಆದರೆ ಒಂದು ಸಂಸ್ಥೆಯನ್ನು ಸ್ಥಾಪಿಸುವದು ಕಷ್ಟದ ಕೆಲಸವಲ್ಲ. ಅದು ಸ್ಥಾಪಿತವಾದ ಬಳಿಕ ಅದನ್ನು ನಡಿಸಿಕೊಂಡು ಹೋಗುವದು ಯಾವಾಗಲೂ ಬಹು ದುಸ್ತರದ ಕೆಲಸವು. ಯಾಕಂದರೆ ಅದರ ಕಾರ್ಯಕರ್ತರಿಗೆ ಜನತೆ

ಯಲ್ಲಿರುವ ಉಪೇಕ್ಷಾಭಾವ, ವಿರೋಧಭಾವ, ಇವುಗಳನ್ನು ಎದುರಿ ಸುವ ಪ್ರಸಂಗಗಳು ಆಗಿಂದ್ದಾಗ್ಗೆ ಬರುವದುಂಟು. ಇದರಿಂದ ಇವರು ಬಹು ತೀವ್ರವಾಗಿ ನಿರುತ್ಸಾಹವುಳ್ಳವರಾಗಿ ತಾವು ಕೈಕೊಂಡ ಕಾರ್ಯಗಳನ್ನು ಅಲ್ಲಿಯೇ ಬಿಟ್ಟು ಬಿಡುವದು ತೋರಿಬರುತ್ತದೆ. ಈ ಕಾರಣದಿಂದ ಸ್ಥಾಪಿತವಾದ ಸಂಸ್ಥೆಗಳು ಬಹು ತೀವ್ರವಾಗಿ ನಿಂತು ಹೋಗಿಬಿಡುತ್ತವೆ.

ಈ ಸ್ಥಿತಿಯುಂಟಾಗದಂತೆ ಸಮಾಜ ಪ್ರಮುಖರೂ, ಕಾರ್ಯಕರ್ತರೂ, ಪತ್ರಿಕಾಕಾರರೂ, ಜನತೆಯನ್ನು ಆಗಿಂದಾಗ್ಗೆ ಎಚ್ಚರಿಸುವದು ಬಹು ಅವಶ್ಯವು. ಇದು ಅವರ ಮುಖ್ಯ ಕಾರ್ಯವಾಗಿರಬೇಕು. ಆದುದರಿಂದ ಈ ಧ್ಯೇಯದಿಂದ ಬರೆದ ಲೇಖಗಳಿಗೆ ನಾವು ಇನ್ನು ಮೇಲೆ ಶಿವಾನುಭವ ಪತ್ರಿಕೆಯಲ್ಲಿ ಸ್ಥಾನ ಕೊಡಬೇಕೆಂದು ಇಚ್ಛಿಸಿದ್ದೇವೆ. ಈಗ ವೀರಶೈವ ಸಮಾಜದಲ್ಲಿ ಶಿಕ್ಷಣ ಸಂಸ್ಥೆಗಳು ಬಹು ಮಹತ್ವದ ಕಾರ್ಯ ಮಾಡುತ್ತಲಿವೆ. ಆದ್ದರಿಂದ ಅವುಗಳ ಏಳ್ಗೆಯ ಉದ್ದೇಶವನ್ನು ಇಟ್ಟು ಕೊಂಡು ಬರೆದ ಲೇಖಗಳಿಗೆ ನಾವು ಪ್ರಥಮ ಸ್ಥಾನವನ್ನು ಕೊಡಿಬೇ ಕೆಂದಿದ್ದೇವೆ. ಒಬ್ಬ ಶಿಕ್ಷಣ ತಜ್ಞರು ಈ ಕೆಳಗಿನ ಲೇಖನವನ್ನು ಬರೆದಿ ದ್ದಾರೆ. ಇದನ್ನು ನಮ್ಮಲ್ಲಿಯ ಶಿಕ್ಷಣ ಪ್ರೇಮಿಗಳು ಗಮನಿಸಬೇಕೆಂತಲೂ ಅವರು ಇದರಲ್ಲಿ ನಮ್ಮೊಡನೆ ಸಹ ಕರಿಸಬೇಕೆಂತಲೂ ನಮ್ಮ ವಿನಂತಿ ಇದೆ—ಸಂಪಾದಕ.)

ಒಂದು ಮಾಧ್ಯಮಿಕ ಶಾಲೆಯು ಮಾದರಿಯದಾಗಬೇಕಾದರೆ ಅನೇಕ ಸಂಗತಿಗಳನ್ನು ಗಮನಿಸಬೇಕಾಗುತ್ತದೆ. ಉದಾಹರಣಾರ್ಥ ವಾಗಿ ಕಟ್ಟಡ, ಉಪಕರಣ, ಅನಭ್ಯಸ್ತವಿಷಯಗಳು, ಅಭ್ಯಸ್ತವಿಷಯ ಗಳು, ವಿದ್ಯಾರ್ಥಿಗಳು, ಶಿಕ್ಷಕರು, ಮುಖ್ಯೋಪಾಧ್ಯಾಯರು, ಸಂಸ್ಥೆಯ ಪಾಲಕರು—ಇವಲ್ಲ ವಿಷಯಗಳನ್ನು ಪರ್ಯಾಲೋಚಿಸುವದು ಅವಶ್ಯ ಕವಾದೆ.

ಕಟ್ಟಡ.

ಮಾದರಿಯ ಮಾಧ್ಯಮಿಕ ಶಾಲೆಗೆ ಅತ್ಯಂತ ಭವ್ಯವಾದ ಮತ್ತು ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಕಟ್ಟಡವೇನೂ ಬೇಡ. ಶಿಕ್ಷ ಣವನ್ನೇನೂ ಕಟ್ಟಡಕ್ಕೆ ಕೊಡಬೇಕಾಗಿಲ್ಲ. ನಿರ್ಜೀವವಾದ ಕಟ್ಟಡಕ್ಕೆ

ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡುವದಕ್ಕಿಂತ ಸಜೀವ ವಸ್ತು ಗಳಾದ ಶಿಕ್ಷಕರು ವಿದ್ಯಾರ್ಥಿಗಳಿಗಾಗಿ ಅದೇ ಹಣವನ್ನು ವೆಚ್ಚಮಾಡಿ ವರೆ ಅದೆಷ್ಟೋ ಫಲಕಾರಿಯಾದೀತು. ಪ್ರಾಚೀನಕಾಲದ ಗುರುಕುಲ ಗಳು ಬನದ ಸೃಷ್ಟಿ ಸೌಂದರ್ಯದ ಮಧ್ಯದಲಿ ಗಿಡಗಳ ನೆರಳಿನ ಕೆಳಗೆ ನಡೆಯುತ್ತಿದ್ದವು. ಆಗಿನ ಶಿಕ್ಷಣವಾದರೋ ಈಗಿನ ಶಿಕ್ಷಣಕ್ಕಿಂತ ಯಾವ ದೃಷ್ಟಿಯಿಂದಲೂ ಕಡಿಮೆತರಹದ್ದಾಗಿರಲಿಲ್ಲ. ಆದರೆ ಸದ್ಯದ ಶಿಕ್ಷಣವು ಸೊಬಗು ಸೌಕರ್ಯಗಳುಳ್ಳ ನಗರಗಳ ಕೇಂದ್ರ ಸ್ಥಾನವನ್ನಲಂಕರಿಸಿದ್ದ ರಿಂದ ಅದಕ್ಕೆ ಅನುಗುಣವಾಗಿ ಕಟ್ಟಡಗಳ ಅವಶ್ಯಕತೆಯುಂಟಾಯಿತು. ಆದ್ದರಿಂದ ತಕ್ಕಮಟ್ಟಿಗೆ ಹಣವನ್ನು ವೆಚ್ಚಮಾಡಿ ಸಾಲೆಗೆ ಅವಶ್ಯ ಬೀಳುವ ಕಟ್ಟಡವನ್ನು ಕಟ್ಟಿಸುವದು ವಿಹಿತ. ಶಿಕ್ಷಣಕ್ಕೆ ಕಟ್ಟಡವು ಅವಶ್ಯವಾದರೂ ಪ್ರಾಮುಖ್ಯವಲ್ಲ; ಗೌಣವಾದುದು. ಇದನ್ನರಿತು ಸಂಸ್ಥೆಯ ಚಾಲಕರು ಆದಷ್ಟು ಕಡಿಮೆ ಹಣದಲ್ಲಿ ಮಾಟವಾದ ಮತ್ತು ಭದ್ರವಾದ ಕಟ್ಟಡವನ್ನು ಕಟ್ಟಿಸಬೇಕು. ಮಾದರಿಯ ಭವ್ಯ ಕಟ್ಟಡ ಕಟ್ಟಿಸಿ ಒಳಗೆ ಏನೂ ಹುರುಳಿಲ್ಲದಿದ್ದರೇನು ಪ್ರಯೋಜನ?

ಉಪಕರಣಗಳು.

ಮಾದರಿಯ ಶಾಲೆಗೆ ಯೋಗ್ಯ ಕಟ್ಟಡ ಅವಶ್ಯವಿರುವವಂತೆ ಉಪ ಕರಣಗಳಾದರೂ ಅವಶ್ಯ ಬೇಕಾಗುತ್ತವೆ. ಆಧುನಿಕ ಪದ್ಧತಿಗೆ ತಕ್ಕಂತೆ ವರ್ಗದ ಕೋಣೆಯಲ್ಲಿ ಕುರ್ಚಿ, ಮೇಜು, ಡೆಸ್ಕು, ಕಪಾಟು, ಫಳ, ಖಡು, ಒರಸುವ ಬಟ್ಟೆ, ಕಸದ ಬುಟ್ಟಿ, ಮುಸಿಯ ದೌತಿ, ಟಾಕು, ಪುಸ್ತಕು, ನೋಟಬುಕ್ಕು, ನಕಾಶೆ, ಕಂಪಾಸ ಪೆಟ್ಟಿಗೆ, ಚಿತ್ರದ ಪಟ ಗಳು, ವಿವಿಧ ವಿಷಯದ ಪಟಗಳು ಇವೆಲ್ಲ ಸಾಧನಗಳು ಬೇಕೇಬೇ ಕಾಗುತ್ತವೆ. ಕುಶಲನಾದ ಶಿಕ್ಷಕನು ಅವುಗಳ ಉಪಯೋಗವನ್ನು ಜಿನ್ನಾಗಿಯೇ ಮಾಡಿಕೊಂಡು ಶಿಕ್ಷಣವನ್ನು ಪ್ರಗತಿಪರವಾಗಿಯೂ ಪರಿ ಣಾಮಕಾರಿಯಾಗಿಯೂ ಮಾಡುವನು. 'ಹೇಡಿಯ ಕೈಯಲ್ಲಿ ಚಂದ್ರಾ ಯುಧವಿದ್ದು ಫಲವೇನು?॥' ಎಂಬಂತೆ ಅನನುಭವಿಗಳೂ ಅಶಿಕ್ಷಿತರೂ ಆದ ಶಿಕ್ಷಕರಿಗೆ ಎಲ್ಲ ಉಪಕರಣಗಳು ಮುಂದಿದ್ದರೂ, ಅವುಗಳನ್ನು ಪಯೋಗಿಸುವ ಜಾಣ್ಮೆಯಿಲ್ಲದಿದ್ದರೆ ಶಿಕ್ಷಣವು ಅಷ್ಟು ಫಲಕಾರಿಯಾ ಗಲಾರದು. ಅದೇ ಮೇರೆಗೆ ಸಾಯಿನ್ಸ ಮತ್ತು ಡ್ರಾಯಿಂಗ

ಶಿಕ್ಷಣಕ್ಕೆ ಅನೇಕ ಉಪಕರಣಗಳ ಅವಶ್ಯಕತೆ ಯುಂಟು. ಇದಲ್ಲದೆ ಸಾಲೆಯಲ್ಲಿ ಬಾಲಕರಿಗಾಗಿ ವರ್ತಮಾನಪತ್ರ, ಪುಸ್ತಕ ಸಂಗ್ರಹ, ಮ್ಯಾಜಿಕ್ ಲ್ಯಾಂಟರ್ನ, ಮುಂತಾದ ಅನುಕೂಲತೆಗಳೂ ಅವುಗಳ ಯೋಗ್ಯ ಉಪಯೋಗವೂ ಆಗುವದು ವಿಹಿತ. ಅದರಂತೆ ಶಾರೀರಿಕ ಶಿಕ್ಷಣದ ಸಲುವಾಗಿ ವಿಸ್ತೀರ್ಣವಾದ ಆಟದ ಬೈಲು, ಅದಕ್ಕೆ ತಕ್ಕ ಅನೇಕ ಆಟದ ಸಾಮಗ್ರಿಗಳು ಇದ್ದರೆ ವಿವಿಧ ಮನೋರಂಜನೆಯ ಶಾರೀರಿಕ ಶಿಕ್ಷಣಕ್ಕೆ ಕಳೆಯುಂಟಾಗುವದು. ಶಾಲೆಗೆ ಹೊಂದಿ ಅನೇಕ ಪ್ರಕಾರದ ಹೂ ಕಾಯಿ ವನಸ್ಪತಿಗಳಿಂದ ಶೋಭಿಸುವ ತೋಟವಿದ್ದರೆ ಬಾಲಕರ ಉಲ್ಲಾಸವೃತ್ತಿಗೆ ಅನುಕೂಲವಾಗುವದು. ಇವೆಲ್ಲ ಅನು ಕೂಲತೆಗಳನ್ನೊದಗಿಸಿಕೊಟ್ಟರೂ, ಕೈಲಾಗದ ಶಿಕ್ಷಕರು ಗಂಟು ಬಿದ್ದರೆ ಶಿಕ್ಷಣವು ಮಾದರಿಯಾಗುವದೊತ್ತಟ್ಟಿಗುಳಿದು ಉಪಕರಣಗಳೇ ನಿರ ರ್ಥಕವೆಂಬ ಮಟ್ಟಿಗೆ ನಾವು ಬಂದು ಮುಟ್ಟುವೆವು.

ಅನಭ್ಯಸ್ತ ವಿಷಯಗಳು.

ವಿದ್ಯಾರ್ಥಿಗಳ ಪರೀಕ್ಷೆಯ ವಿಷಯಗಳಿಗಷ್ಟೇ ಗಮನಿಸಿದೆ ಅಭ್ಯಾ ಸಪತ್ರಿಕೆಗೆ ಬಾಹ್ಯವಾದ ಇತರ ವಿಷಯಗಳನ್ನು ಲಕ್ಷಿಸುವದೂ ಮಾದ ರಿಯ ಶಾಲೆಯ ದ್ಯೋತಕವು. ಉದಾಹರಣಾರ್ಥವಾಗಿ ಬಾಲಕರಿಗೆ ಐತಿಹಾಸಿಕ ಮತ್ತು ಔದ್ಯೋಗಿಕ ಸ್ಥಳಗಳ ಪ್ರವಾಸ, ಸ್ಕಾವುಟಿಂಗ, ವಕ್ತೃತ್ವಕಲೆ, ನಾಟ್ಯಸಂಗೀತ ಪ್ರಹಸನ, ಕೈಬರಹದ ಮಾಸಿಕ, ಕೈಗಾ ರಿಕೆಯ ವಸ್ತುಸಂಗ್ರಹಾಲಯ, ಸಾಮೂಹಿಕ ಪ್ರಾರ್ಥನೆ ಮುಂತಾದ ವಿಷಯಗಳನ್ನು ಅನುಕೂಲಿಸಿ ಕೊಡಬೇಕು. ಅದರಿಂದ ಬಾಲಕರ ಬುದ್ಧಿಶಕ್ತಿಯು ವಿಕಾಸಹೊಂದುತ್ತದೆ. ಹೃದಯವು ಆನಂದೋಲ್ಲಾಸ ಗಳಿಂದ ನಲಿದಾಡುತ್ತದೆ. ಈ ಪ್ರತಿಯೊಂದು ವಿಷಯದಲ್ಲಿಯೂ ಶೈಕ್ಷ ಣಿಕ ಯೋಗ್ಯತೆಯು ಹುದುಗಿಕೊಂಡಿರುತ್ತದೆ. ಯಾವ ಶಾಲೆಯಲ್ಲಿ ಇವೆಲ್ಲ ಅನುಕೂಲತೆಗಳಿಗೆ ಸ್ಥಾನವಿಲ್ಲವೋ ಅದು ಎಂದಿಗೂ ಮಾದ ರಿಯ ಶಾಲೆಯಾಗಲಾರದು.

ಶಿಕ್ಷಣಕ್ಕೆ ಬೇಕಾದ ವಿಷಯಗಳು.

ಈಗಿನ ವಿದ್ಯಾರ್ಥಿಗಳನ್ನು ಮುಂದೆ ಒಳ್ಳೇ ನಾಗರಿಕರನ್ನಾಗಿ ಮಾಡುವದೇ ಶಿಕ್ಷಣದ ಮುಖ್ಯಧ್ಯೇಯವಾಗಿರುವದರಿಂದ ಮೇಲೆ ಕಾಣಿ

ಸಿದ ಎಲ್ಲ ವಿಷಯಗಳು ಅವಶ್ಯವಾಗಿದ್ದರೂ ಗೌಣವಾಗಿವೆ. ಮುಖ್ಯವಾಗಿ ಬೇಕಾದ ವಿಷಯಗಳೆಂದರೆ ಬಾಲಕ, ಶಿಕ್ಷಕ, ವಿಷಯ ಇವು ಮೂರೇ. ಶಿಕ್ಷಣ ಹೊಂದುವವನು ಬಾಲಕ, ಶಿಕ್ಷಣ ಕೊಡುವವನು ಶಿಕ್ಷಕ, ಶಿಕ್ಷಣಕ್ಕೆ ಬೇಕಾದುದು ವಿಷಯ. ವಿದ್ಯಾರ್ಥಿಗೆ ವಿದ್ಯೆಯನ್ನು ಗಳಿಸಬೇಕೆಂಬ ಹಂಬಲವಿರಬೇಕು. ಆ ವಿದ್ಯಾರ್ಥಿಗೆ ಮಾದರಿಯ ಶಿಕ್ಷಣವನ್ನು ಕೊಡಬೇಕಾದರೆ ಆದರ್ಶ ಶಿಕ್ಷಕನು ಬೇಕು. ಕಲಿಯ ತಕ್ಕ ವಿಷಯಗಳು ಬಾಲಕನ ಜೀವನಾಧಾರಕ್ಕೆ ಅವಶ್ಯವಾಗಿರಬೇಕು. ಈ ಕಾರ್ಯದಲ್ಲಿ ಸಹಾಯಕರು, ಸಹಾನುಭೂತಿಯುಳ್ಳವರೆಂದರೆ ಆಯಾಯ ಸಂಸ್ಥೆಯ ಚಾಲಕರು, ಬಾಲಕರ ತಾಯ್ತಂದೆಗಳು ಅಥವಾ ಪಾಲಕರು, ಸಮಾಜ, ಮತ್ತು ವಿದ್ಯಾಖಾತೆಯ ಮೇಲಧಿಕಾರಿಗಳು. ಇವೆಲ್ಲ ಮಹನೀಯರ ಯೋಗ್ಯವಾದ ಸಲಹೆ ಸಹಾಯ ಸಹಕಾರಿಗಳಿಂದ ಮಾದರಿಯ ಶಿಕ್ಷಣಕ್ಕೆ ಕಳೆಬರುತ್ತದೆ.

ಬಾಲಕನು ಸರ್ವಾಂಗಸುಂದರವಾದ ಬೆಳವಣಿಗೆಯನ್ನು ಹೊಂದಿ ಧೀನಾಗರಿಕನಾಗಿ ಸುಖರೂಪದಿಂದ ಬಾಳಬೇಕಾದರೆ ಆತನ ಶಾರೀರಿಕ, ಬೌದ್ಧಿಕ, ಔದ್ಯೋಗಿಕ ಮತ್ತು ನೈತಿಕ ಶಿಕ್ಷಣಗಳ ಕಡೆಗೆ ಲಕ್ಷಗೊಡುವದು ಪ್ರತಿಯೊಂದು ಆದರ್ಶಶಾಲೆಯ ಮುಖ್ಯ ಕರ್ತವ್ಯವು. ಇವೆಲ್ಲವು ಒಳ್ಳೇ ಸುಗನುವಾಗಿಯೂ ಒಳ್ಳೇ ಪರಿಣಾಮಕಾರಿಯಾಗಿಯೂ ಜರಗುವಂತೆ ಶಿಕ್ಷಕರು ಪ್ರಯತ್ನಿಸಬೇಕು. ಅದಕ್ಕಾಗಿ ಸಂಸ್ಥೆಯ ಚಾಲಕರೂ, ಹುಡುಗರ ಪಾಲಕರೂ, ಸಮಾಜವೂ, ವಿದ್ಯಾಖಾತೆಯೂ ಯೋಗ್ಯ ಸಲಹೆ ಪ್ರೋತ್ಸಾಹಗಳನ್ನೀಯಬೇಕು. ಶಿಕ್ಷಣದಿಂದಲೇ ಬಾಲಕನ ಸಂಸ್ಕೃತಿಯು ಬೆಳೆಯುತ್ತದೆ. ಬಾಲಕನ ಶಾರೀರಿಕ, ಬೌದ್ಧಿಕ ಕಾಯಿಕ, ನೈತಿಕ ಸಂಸ್ಕೃತಿಗಳಲ್ಲಿ ಯಾವದಾದರೊಂದು ಕಡಿಮೆಯಾದರೆ ಆ ಶಿಕ್ಷಣವು ಸಂಪೂರ್ಣವೆನಿಸುವದಿಲ್ಲ. ಇವೆಲ್ಲವುಗಳಿಗೂ ಶಿಕ್ಷಣ ಸಂಸ್ಥೆಯಲ್ಲಿ ಆಸ್ಪದವು ಇದ್ದೇ ತೀರಬೇಕು. ಅಂದರೇನೇ ಆದು ಮಾದರಿಯ ಶಾಲೆಯಾಗುವದು.

(ಮುಂದುವರಿಯುವದು.)

ಕಥಾಂತರಗಳು:— ವೈಜವ್ವೆಯ ವಿಷಯವಾಗಿ ಕೆಲವು ಗ್ರಂಥಗಳಲ್ಲಿ ಕಥಾಂತರಗಳಿವೆ. ಅವುಗಳಲ್ಲಿ ಮುಖ್ಯವಾದುದು ಯಾವದೆಂದರೆ- ವೈಜವ್ವೆಯು ಜೈನ ಮುನಿಗಳಿಗೆಂದು ಸಿದ್ಧಮಾಡಿದ ಆಹಾರಪದಾರ್ಥಗಳನ್ನು ಒಬ್ಬ ಜಂಗಮನಿಗೆ ಕೊಟ್ಟದ್ದನ್ನು ಅವಳ ಗಂಡನು ನೋಡಿ ಬಹಳ ಕೋಪಗೊಂಡು ಅವಳನ್ನು ಬಹಳ ಹೊಡೆದು ಬಡಿದು ಮನೆಯ ಹೊರಗೆ ಹಾಕಿದನು. ಆಗ ಅವಳು ದುಃಖಿಸುತ್ತ ಬೀದಿಯಿಂದ ಹೋಗುತ್ತಿರಲು ಮಧ್ಯದಲ್ಲಿ ಒಂದು ದೇವಾಲಯವನ್ನು ಕಂಡು ಅದು ಹರನ ಗುಡಿ ಎಂದು ತಿಳಿದು ಒಳಗೆ ಪ್ರವೇಶಿಸಿದಳು. ಆದರೆ ಅದು ಒಂದು ಜೈತ್ಯಾಲಯವಾಗಿತ್ತು. ದುಃಖದ ಭರದಲ್ಲಿ ಅವಳ ಕಣ್ಣಿಗೆ ಎಲ್ಲವೂ ಪುಬ್ಬಗವಿದು ಆವುದೂ ನಿಚ್ಚಳವಾಗಿ ಕಾಣುತ್ತಿದ್ದಿಲ್ಲ. ಅವಳು ದೇವಾಲಯವನ್ನು ಪ್ರವೇಶಿಸಿ ಅಲ್ಲಿಯ ಜಿನಮೂರ್ತಿಯು ಲಿಂಗವೆಂದು ಭಾವಿಸಿ ನಮಸ್ಕರಿಸಿದಳು. ಆಗ ಅವಳ ಭಾವನೆಯ ಮೂಲಕ ಆ ಮೂರ್ತಿಯು ಒಡೆದು ಹೋಗಿ ಅದರ ಸ್ಥಳದಲ್ಲಿ ಒಂದು ಲಿಂಗವು ಉದ್ಭವಿಸಿತು. ಅದೇ ವೈಜನಾಥ ಲಿಂಗವಾಯಿತು. ಗ್ರಾಮದಲ್ಲಿದ್ದ ಜೈನರು ಈ ಅದ್ಭುತವನ್ನು ಕಂಡು ವೈಜವ್ವೆಯು ಮಹಾತ್ಮಳೆಂದು ಭಾವಿಸಿ ಅವರೆಲ್ಲರೂ ಲಿಂಗಧಾರಿಗಳಾದರು.

ವೈಜವ್ವೆಯ ಹೆಸರು ಗಣಸಹಸ್ರದಲ್ಲಿ ಬಂದಿದೆ. ಆದ್ದರಿಂದ ಅವಳು ಪುರಾತನಳು. ಅವಳು ವೀರಶೈವ ಚಳವಳಿಯ ಆರಂಭಕಾಲದಲ್ಲಿ ಇದ್ದಂತೆ ತೋರುತ್ತದೆ. ಬಹುಶಃ ಬಸವೇಶ್ವರನಕಿಂತಲೂ ಕೆಲಕಾಲ ಹಿಂದಿನವಳಿರಬಹುದು. ಆಗ ಜೈನ, ವೀರಶೈವ ಮತ್ತು ಬ್ರಾಹ್ಮಣ ಸಮಾಜಗಳಲ್ಲಿ ಮತಾಂತರಗಳು ಪರಸ್ಪರ ಬಹಳ ಹೆಚ್ಚಾಗಿ ಆಗುತ್ತಿದ್ದವು. ಆದ್ದರಿಂದಲೇ ವೈಜವ್ವೆಯ ತಂದೆಯು ಅವಳನ್ನು ಒಬ್ಬ ಜೈನನಿಗೆ ಕೊಟ್ಟು ಲಗ್ನ ಮಾಡಿದ್ದಾನೆ. ಇಂಥ ಉದಾಹರಣೆಗಳು ಹಿಂದಿನ ಕಾಲದಲ್ಲಿರುವ ಶಿವಶರಣರಲ್ಲಿ ಅನೇಕವಿರುತ್ತವೆ. ಆದರೆ ಬಸವೇಶ್ವರನ ಕಾಲದಲ್ಲಿ ಶಿವಶರಣರ ಉದಾರ ತತ್ವಗಳು ದೇಶದಲ್ಲಿ ಪ್ರಸಾರವಾಗುತ್ತ ಹೋದಹಾಗೆ ಕೆಲಕಾಲದ ಮೇಲೆ ಈ ಮೂರು ಸಮಾಜಗಳು ತೀರ ಭಿನ್ನ ಭಿನ್ನವಾದವೆಂದು ತೋರುತ್ತದೆ.

ಈ ಕಾಲದಲ್ಲಿ ಗೋದಾವರೀತೀರ ಪ್ರದೇಶದಲ್ಲಿ ಉರಿಲಿಂಗದೇವ, ಉರಿಲಿಂಗಪೆದ್ದಿ, ಕಾಳವ್ವೆ, ಕೋಲಂಬೆ ಮೊದಲಾದ ಶಿವಶರಣ ಶಿವ

ಶರಣಿಯರು ಆಗಿಹೋಗಿದ್ದಾರೆ. ಕುಂಬಾರ ಗುಂಡಯ್ಯನು ಇದ್ದ ಬಲ್ಲುಕಿ ಅಥವಾ ಭಾಲ್ಕಿ ಗ್ರಾಮವಾದರೂ ಈ ಪ್ರಾಂತಕ್ಕೆ ಸಮೀಪವಾಗಿಯೇ ಇದೆ. ಇದರಿಂದ ಶಿವಶರಣರ ತತ್ವಗಳು ಈ ಭಾಗದಲ್ಲೆಲ್ಲ ಪ್ರಸಾರವಾಗುತ್ತಲಿದ್ದದರಿಂದ ವೀರಶೈವ ಸಮಾಜದ ಉದಯವು ಈ ಉತ್ತರ ಭಾಗದಲ್ಲಿ ಉಂಟಾಗಿರುತ್ತದೆ.

ಈ ಭಾಗದಲ್ಲಾದ ಶಿವಶರಣ ಶರಣಿಯರಲ್ಲಿ ಕೆಲವರು ಕನ್ನಡ ವಚನಕಾರರಿದ್ದಾರೆ. ಈಗಲೂ ಇಲ್ಲಿಯ ಅನೇಕ ಗ್ರಾಮಗಳ ಹೆಸರುಗಳೂ ಕೂಡ ಕನ್ನಡವಿರುತ್ತವೆ. ಆದ್ದರಿಂದ ೧೧ನೇ ಮತ್ತು ೧೨ನೇ ಶತಮಾನಗಳಲ್ಲಿ ಈ ಗೋದಾವರೀ ತೀರ ಪ್ರದೇಶವು ೯ನೇ ಶತಮಾನದಲ್ಲಿ ಆಳಿದ ರಾಷ್ಟ್ರಕೂಟ ಅರಸನಾದ ನೃಪತುಂಗನ ಕಾಲದಲ್ಲಿದ್ದಂತೆ ಕನ್ನಡನಾಡಾಗಿತ್ತೆಂದು ತೋರುತ್ತದೆ.

ದೇವಿಯರ ತ್ರಿವಿಧಿಯಲ್ಲಿ ಪೈಜವ್ವೆಯ ಉಲ್ಲೇಖವಿರುವದು ಹೇಗೆಂದರೆ:—

ರಾಜಾನ್ನದಡಿಗೆಯನ್ನೂ । ರ ಜೈನರಿಗುಣಿಸದೆ
ರಾಜಶೇಖರಗೆ ಉಣಿಸಿ ನಿತ್ಯವ ಪಡೆದ
ಪೈಜಕ್ಕವ್ವೆಯೆ ಶರಣಾಗು ॥

ಏಕಾಂತದ ರಾಮಯ್ಯ.

ನಿಜಾಮನ ರಾಜ್ಯದಲ್ಲಿ ಕಲಬುರ್ಗಿ ಜಿಲ್ಲೆಯಲ್ಲಿ ಆಲ್ದಿ ಎಂಬ ಗ್ರಾಮವಿದೆ. ಅದು ಈಗ ಒಂದು ತಾಲೂಕಿನ ಸ್ಥಳವಾಗಿರುತ್ತದೆ. ಅದು ಸೊಲ್ಲಾಪುರ ಪಟ್ಟಣದ ಪೂರ್ವಕ್ಕೆ ೨೨ ಮೈಲುಗಳ ಮೇಲೆ ಇರುವ ಅಕ್ಕಲಕೋಟೆಯಿಂದ ೩೦ ಮೈಲು ದೂರವಿರುತ್ತದೆ. ಈ ಗ್ರಾಮದ ಪೂರ್ವದ ಹೆಸರು 'ಆಲಂದೆ' ಎಂಬುದಾಗಿತ್ತು.

ಈ ಆಲಂದೆ ಗ್ರಾಮದಲ್ಲಿ ವತ್ಸಗೋತ್ರದ 'ಪುರುಷೋತ್ತಮ ಭಟ್ಟ' ಎಂಬ ಹೆಸರಿನ ಬ್ರಾಹ್ಮಣನು ಅಲ್ಲಿಯ ಬ್ರಹ್ಮಪುರಿ ಅಂದರೆ ಬ್ರಾಹ್ಮಣರ ಕೇರಿಯಲ್ಲಿ ವಾಸಮಾಡುತ್ತಿದ್ದನು. ಅವನ ಹೆಂಡತಿಯ ಹೆಸರು

ಸೀತಾದೇವಿಯು. ಅವರಿಗೆ ಮಕ್ಕಳಿದ್ದಿಲ್ಲ. ಅವರು ತಮ್ಮ ಗ್ರಾಮದಲಿ ಅತ್ಯಂತ ಪ್ರಸಿದ್ಧಿ ಹೊಂದಿದ ಸೋಮನಾಥ ದೇವರಿಗೆ[೧] ಉಭಯ ದಂಪತಿಗಳು ತಮಗೆ ಒಬ್ಬ ಮಗನಾಗಬೇಕೆಂದು ಬೇಡಿಕೊಂಡು ಆ ದೇವರನ್ನು ಯಾವಾಗಲೂ ಪೂಜಿಸುವರು. ಹೀಗಿರಲು ಅವರಿಗೆ ಒಬ್ಬ ಮಗನು ಹುಟ್ಟಿದನು. ಅವನಿಗೆ ಅವರು 'ರಾಮ' ಎಂಬ ಹೆಸರನ್ನಿಟ್ಟರು.

ರಾಮನು ದೊಡ್ಡವನಾದ ಹಾಗೆ ಅವನಲ್ಲಿ ಶಿವಭಕ್ತಿಯು ಹೆಚ್ಚುತ್ತಲೇ ಬಂದಿತು. ಅವನು ನುಡಿದ ನುಡಿಯಲ್ಲಿ ಎಂದೂ ತಪ್ಪನು. ಹಿಡಿದ ಭಾಷೆಯನ್ನು ಬಿಡನು. ಅತ್ಯಂತ ನಿಸ್ಪೃಹವೃತ್ತಿಯುಳ್ಳವನು. ಶಿವಜ್ಞಾನಿಯಾಗಿ ಶಿವಯೋಗದಲ್ಲಿ ಯಾವಾಗಲೂ ನಿರತನು. ಅವನು ತನ್ನ ಶಿವಯೋಗಾಚರಣೆಯನ್ನು ಪಾಲಿಸುತ್ತ ಏಕಾಂತದಲ್ಲಿ ಧ್ಯಾನಮಗ್ನನಾಗಿ ಕಾಲಕಳೆಯುವನು. ಅವನ ಈ ಅಚಲವಾದ ಗುಪ್ತಭಕ್ತಿಯನ್ನು ಜನರು ನೋಡಿ ಅವನನ್ನು 'ಏಕಾಂತದ ರಾಮಯ್ಯ'ನೆಂಬ ಹೆಸರಿನಿಂದ ಕರೆಯಹತ್ತಿದರು. ಈ ಹೆಸರಿನಿಂದಲೇ ಅವನು ನಾಡಿನಲ್ಲಿ ಪ್ರಸಿದ್ಧನಾದನು.

ಆಲಂದೆ ಗ್ರಾಮದಲ್ಲಿ ಏಕಾಂತದ ರಾಮಯ್ಯನು ಶಿವಯೋಗಾಚರಣೆಯಲ್ಲಿ ಕಾಲಕಳೆಯುತ್ತಿರಲು ಅವನ ಮನಸ್ಸಿನಲ್ಲಿ ಶಿವಶರಣರು ತಮ್ಮ ಮಹಾತ್ಮೆಯನ್ನು ತೋರಿಸಿದ ಸ್ಥಳಗಳನ್ನು ನೋಡಬೇಕೆಂಬ ಕುತೂಹಲವು ಉಂಟಾಯಿತು. ಆಗ ಅವನು ಮೊದಲು ತನ್ನ ಗ್ರಾಮದಿಂದ ೩೬ ಮೈಲು ದೂರವಿರುವ ಕಲ್ಯಾಣ ಪಟ್ಟಣಕ್ಕೆ ಹೋಗಿ ಅದಕ್ಕೆ ಸಮೀಪವಾಗಿದ್ದ 'ಶಿವಪುರ' ಎಂಬ ಗ್ರಾಮಕ್ಕೆ ಬಂದನು. ಅದು ಕಲ್ಯಾಣಕ್ಕೆ ಹೋಗಿಬರುವ ಶಿವಶರಣರ ಮುಖ್ಯ ಅವಾಸಸ್ಥಾನವಾಗಿತ್ತು. ಅಲ್ಲಿ ಅವನು ಶಿವಾನುಭವ ಗೋಷ್ಠಿಯಲ್ಲಿ ಕೆಲಕಾಲವಿದ್ದು ಅಲ್ಲಿಂದ ದಕ್ಷಿಣ ದೇಶಕ್ಕೆ ಹೊರಟು, ಅಲ್ಲಲ್ಲಿಯ ಶಿವಶರಣರನ್ನು ಕಾಣುತ್ತ 'ಪುಲಿಗೆರೆ' ಅಂದರೆ ಈಗಿನ ಲಕ್ಷ್ಮೇಶ್ವರಕ್ಕೆ ಬಂದನು. ಅದು ಸೋಮಯ್ಯನ ಸ್ಥಾನವು. ಅಲ್ಲಿ ಅವನಿಂದುಂಟಾದ 'ಹುಲಿಗೆರೆಯ ಸೋಮನಾಥ'ನನ್ನು ಸಂದರ್ಶಿಸಿ

(೧, ಸೋಮನಾಥ ದೇವಾಲಯವನ್ನು ಉಲ್ಲೇಖಿಸುವ ಶಿಲಾಶಾಸನವು ಈ ಗ್ರಾಮದಲ್ಲಿ ಈಗಲೂ ಇದೆ. ವಿ॥ ದೇಸಾಯಿ ಪಾಂಡುರಂಗರಾವ ಇವರ ಲೇಖನವನ್ನು ಶರಣ ಸಾಹಿತ್ಯ ೪-೫, ಪು.೧೨೮ ರಲ್ಲಿ ನೋಡಿರಿ)

ಅಲ್ಲಿಂದ ಹೊರಟು ಅನೇಕ ಶಿವಶರಣರು ವಾಸಮಾಡುತ್ತಿದ್ದ ಬನವಾಸಿ ಪ್ರಾಂತದ ಕಡೆಗೆ ಹೊರಟನು. ಈ ನಾಡಿನಲ್ಲಿ ಬಳ್ಳಿಗಾವಿ, ಅಲ್ಲದೆ ಬನವಾಸಿಯ ಈಶಾನ್ಯ ದಿಕ್ಕಿಗೆ ೨೪ ಮೈಲುಗಳ ಮೇಲೆ ಇರುವ 'ರೇವಣಸಿದ್ಧಗಿರಿ' ಮುತ್ತಿಗಿ, ಹಿರೇಜಂಬೂರು ಇವೇ ಮೊದಲಾದ ಶಿವಶರಣರ ಕ್ಷೇತ್ರಗಳನ್ನು ಸಂದರ್ಶಿಸಲು ಹೊರಟು ಮಾರ್ಗದಲ್ಲಿ ಪುಲಿಗೆರೆಯಿಂದ ದಕ್ಷಿಣಕ್ಕೆ ೪೦ ಮೈಲುಗಳ ಮೇಲಿರುವ ಅಬ್ಬಲೂರು ಎಂಬ ಗ್ರಾಮವಿದ್ದು ಅಲ್ಲಿಗೆ ಬಂದನು. ಈ ಗ್ರಾಮವು ಬನವಾಸಿ ಪಟ್ಟಣದ ಪೂರ್ವ ದಿಕ್ಕಿಗೆ ೨೪ ಮೈಲು ದೂರವಿರುತ್ತದೆ.

ಅವನು ಈ ಅಬ್ಬಲೂರು ಗ್ರಾಮವನ್ನು ಪ್ರವೇಶಿಸಲಾಗಿ ಅಲ್ಲಿ ಎಲ್ಲೆಲ್ಲಿಯೂ ಜೈನರ ಸಂಚಾರವೂ ಅವರ ಬಸದಿಗಳೂ ಕಂಡ-ಬಂದವು. ಅಲ್ಲಿ ಶಿವಭಕ್ತರಾರೂ ಅವನಿಗೆ ಕಾಣಬರಲಿಲ್ಲ. ಅವನು ಆ ದಿನ ಗ್ರಾಮದಲ್ಲಿ ಬಿಡಾರಬಿಡಬೇಕೆಂದು ಯೋಚಿಸಿ ಶಿವಾಲಯವನ್ನು ಹುಡುಕುತ್ತ ಹೊರಟನು. ಹೀಗೆ ಹೋಗುವಲ್ಲಿ ಮಾರ್ಗದಲ್ಲಿ ಒಂದು ಶಿವಾಲಯವು ಅವನ ದೃಷ್ಟಿಗೆ ಬಿದ್ದಿತು. ಅದನ್ನು ನೋಡಿ ಅವನು ಅಪರ ಪ್ರವೇಶ ಮಾಡಿದನು.

ಅವನು ಒಳಗೆ ಪ್ರವೇಶಿಸಲಾಗಿ ಅದು 'ಬ್ರಹ್ಮೇಶ್ವರ ದೇವಾಲಯ' ವಿರುತ್ತದೆಂದು ಅವನಿಗೆ ತಿಳಿದುಬಂದಿತು. ಗರ್ಭಗುಡಿಯೊಳಗೆ ಹೋಗಿ ನೋಡುತ್ತಾನೆಯೇ ಒಳಗಿದ್ದ ಶಿವಲಿಂಗಕ್ಕೆ ಅರ್ಚನೆ ಪೂಜಾದಿ ಕಾರ್ಯಗಳು ಯಾವವೂ ನಡೆದಂತೆ ತೋರಲಿಲ್ಲ. ದೇವಾಲಯದಲ್ಲಿ ಎಲ್ಲೆಲ್ಲಿಯೂ ಕಸವೂ ದೂಳೂ ತುಂಬಿಹೋಗಿದ್ದವು. ರಾಮಯ್ಯನು ಅದನ್ನು ನೋಡಿ ಖಿನ್ನಮನಸ್ಕನಾಗಿ ದೇವಾಲಯವನ್ನೆಲ್ಲ ಶುಚಿಮಾಡಿ ನಿಟ್ಟುಸಿರುಬಿಡುತ್ತ ಉಮ್ಮಳಿಸುತ್ತ ಲಿಂಗದ ಪೂಜೆ ಮಾಡಬೇಕೆಂದು ಪುಷ್ಪಗಳನ್ನು ತರಲು ಹೊರಗೆಹೊರಟನು. ಅಷ್ಟರಲ್ಲಿ ಸಂಕರಗೌಡನೆಂಬ ಗ್ರಾಮದ ಜೈನ ಅಧಿಪತಿಯು ಕೆರಹುಗಾಲಿನಿಂದ ಗಳಗಳನೆ ಒಳಗೆ ಬಂದು ಗರ್ಭಗುಡಿಯಲ್ಲಿ ಬಂದು ನಿಂತನು. ಆಗ ಏಕಾಂತದ ರಾಮಯ್ಯನು ಕ್ರೋಧಾವಿಷ್ಟನಾಗಿ ಅವನಿಗೆ— ಶಿವದ್ರೋಹಿಯೇ, ಹೀಗೆ ನೀನು ಕೆರಹುಗಾಲಿನಿಂದ ಶಿವಾಲಯದ ಒಳಗೆ ಪ್ರವೇಶಿಸಬಹುದೇ? ಎಂದು ನುಡಿಯಲು, ಜೈನನು—ಗೊರವನೇ, ಇಲ್ಲೆಲ್ಲಿಯ ನಿನ್ನ ಶಿವನು? ಅವನಾರು?

ಬೊಗಳದಿರು. ಜಿನನೇ ದೈವವು. ಶಿವನೆಂಬುದು ಸುಳ್ಳು. ಆ ನಿನ್ನ ಶಿವನು ಯಾರಿಗೆ ಏನು ಕೊಟ್ಟಿದ್ದಾನೆ? ಎಂದು ನುಡಿದನು. ಅದಕ್ಕೆ ಏಕಾಂತದ ರಾಮಯ್ಯನು— ಎಲೋ ಕುನ್ನಿಯೇ, ಪರಿವಳಿಗೆಯಲ್ಲಿ ಶಿವನು ವೈಜಪ್ಪೆಗೋಸ್ಕರ ಜಿನನನ್ನು ಒಡೆದು ಲಿಂಗವನ್ನಾಗಿ ಮಾಡಿ ವೈಜನಾಥನಾದನೆಂಬುದು ನಿನಗೆ ಗೊತ್ತಿಲ್ಲವೇ? ಹುಲಿಗೆರೆಯಲ್ಲಿ ಸೋಮಯ್ಯನಿಗೋಸ್ಕರ ಶಿವನು ಜಿನನಲ್ಲಿ ಮೂಡಿ ಸೋಮನಾಥನಾದನೆಂಬುದನ್ನು ನೀನು ಅರಿಯೆಯಾ? ಪೊಟ್ಟಲಕೆರೆಯಲ್ಲಿ ದೇವರದಾಸಿಮಯ್ಯನಿಗೆ ಶಿವನು ಲಿಂಗವಾಗಿ ತೋರಿ ಅವನಿಗೆ ತವನಿಧಿಯನ್ನು ಕೊಟ್ಟುದನ್ನು ಅರಿಯೆಯಾ? ಎಂದು ಕೇಳಿದನು. ಅದಕ್ಕೆ ಆ ಜೈನನು— ಆ ಹಿಂದಿನವರ ಕಥೆಗಳನ್ನು ನನಗೆ ಹೇಳಬೇಡ. ಈಗ ನೀನು ನಿನ್ನ ತಲೆಯನ್ನು ಕತ್ತರಿಸಿಕೊಂಡು ಅದನ್ನ ಮರಳಿ ಪಡೆದರೆ ನಿನ್ನ ಶಿವನು ನಿಜವೆಂದು ನಾನು ನಂಬುತ್ತೇನೆ. ಹಾಗೆ ಮಾಡಿದಲ್ಲಿ ನಮ್ಮ ಗ್ರಾಮದ ಬಸದಿಯಲ್ಲಿಯ ಜಿನಮೂರ್ತಿಯನ್ನು ತೆಗೆದುಹಾಕಿ ಅದರ ಸ್ಥಳದಲ್ಲಿ ಲಿಂಗವನ್ನು ನಾವು ಸ್ಥಾಪಿಸುವೆವು ಎಂದು ಹೇಳಿದನು. ಅದಕ್ಕೆ ರಾಮಯ್ಯನು— ಇದು ನಿಜವೇ? ಹಾಗಾದರೆ ನನ್ನ ಕತ್ತನ್ನು ಕತ್ತರಿಸಿಕೊಳ್ಳಲು ಒಪ್ಪುತ್ತೇನೆ. ಆದರೆ ಜಿನಮೂರ್ತಿಯನ್ನು ತೆಗೆದು ಅದರ ಸ್ಥಳದಲ್ಲಿ ಲಿಂಗವನ್ನು ಪ್ರತಿಷ್ಠಿಸುವೆವೆಂದು ನೀವು ಒಂದು ಭಾಷಾಪತ್ರವನ್ನು ನನಗೆ ಬರೆದುಕೊಡಬೇಕು. ಇದಕ್ಕೆ ಒಪ್ಪುವಿರೋ ಎಂದು ಕೇಳಲು, ಅಷ್ಟರಲ್ಲಿ ಅಲ್ಲಿ ನೆರೆದಿದ್ದ ಜೈನರು ಅದಕ್ಕೆ ಒಪ್ಪಿ ಆ ರೀತಿಯಾಗಿ ಅವರು ಏಕಾಂತದ ರಾಮಯ್ಯನಿಗೆ ಒಂದು ಓಲೆಯನ್ನು ಬರೆದುಕೊಟ್ಟರು.

ಏಕಾಂತದ ರಾಮಯ್ಯನು ತನ್ನ ಕತ್ತನ್ನು ಕತ್ತರಿಸಿ ಪುನಃ ಅದನ್ನು ಪಡೆಯುವನೆಂಬ ಸುದ್ದಿಯು ಸುತ್ತಲಿನ ಗ್ರಾಮಗಳಲ್ಲಿ ಹಬ್ಬಿತು. ಆಗ ಈ ಕೌತುಕವನ್ನು ನೋಡಬೇಕೆಂದು ಅಸಂಖ್ಯ ಜನ ಭಕ್ತರೂ ಜೈನರೂ ಪಟ್ಟಣಕ್ಕೆ ಬಂದು ದೇವಾಲಯದ ಮುಂದೆ ನೆರೆದರು. ಶಿವಶರಣರಲ್ಲಿ ಅತ್ಯಂತ ಪ್ರಸಿದ್ಧನಾದ ಅಗ್ಗವಣಿಯ ಹೊನ್ನಯ್ಯನೂ ಕೂಡ ಅಲ್ಲಿಗೆ ಬಂದಿದ್ದನು.

ಹೀಗೆ ಜನರು ನೆರೆಯಲು ಏಕಾಂತದ ರಾಮಯ್ಯನು ವೀರಗಾಸೆಯನ್ನುಟ್ಟು, ಹಣೆಯಲ್ಲಿ ಭಸಿತವನ್ನಿಟ್ಟು, ನೆರೆದ ಮಹೇಶ್ವರರಿಗೆ

ನವಿಸಿ— ನನ್ನ ಶಿರವನ್ನು ಪರಮಾತ್ಮನಿಗೆ ಅರ್ಪಿಸಿ ಅದನ್ನು ಅವನಿಂದ ಪಡೆದು ಶಿವಮತದ ಶ್ರೇಷ್ಠತೆಯನ್ನು ಬೆಳಗುವೆನು ಎಂದು ಉಚ್ಚರಿಸುತ್ತ, ಶಿವನನ್ನು ಧ್ಯಾನಿಸುತ್ತ ತನ್ನ ಶಿರವನ್ನು ಕತ್ತರಿಸಿ ಪರಮಾತ್ಮನಿಗರ್ಪಿಸಿದನು. ಆಗ ಅಗ್ಗವಣಿಯ ಹೊನ್ನಯ್ಯನು ಆ ಶಿರವನ್ನು ತನ್ನ ಕಯ್ಯಲ್ಲಿ ಹಿಡಿದು ಮುಂಡಕ್ಕೆ ಹಚ್ಚುವಷ್ಟರಲ್ಲಿ ನೆರೆದ ಜೈನರು— ಇದು ಕೃತಕವು. ಮದ್ದು ಮಂತ್ರ ಮಹೇಂದ್ರ ಜಾಲವು. ಇದು ಸುಳ್ಳು. ಆದರೆ ಇನ್ನೇಳು ದಿನಗಳ ವರೆಗೆ ಈ ತಲೆಯನ್ನು ನೀವು ಹೀಗೆಯೇ ಇಟ್ಟು ಆಮೇಲೆ ಮುಂಡಕ್ಕೆ ಹತ್ತಿಸಿದರೆ ನಾವು ಒಪ್ಪುತ್ತೇವೆ. ಆಗ ನಾವು ನಮ್ಮ ಜಿನದೇವತೆಯನ್ನು ತ್ಯಜಿಸುವೆವು, ಎಂದೆನ್ನಲು ಶಿವ ಶರಣನಾದ ಅಗ್ಗವಣಿಯ ಹೊನ್ನಯ್ಯನು— ಹಾಗೆಯೇ ಆಗಲಿ ಎಂದು ನುಡಿದು, ಅವನು ಆ ತಲೆಯನ್ನು ಒಂದು ಹರಿವಾಣದಲ್ಲಿ ವಿಭೂತಿಯೊಡನೆ ಇಟ್ಟು, ಅದರಮೇಲೆ ಪಾದೋದಕವನ್ನು ತಳಿದು ಏಳು ದಿನಗಳ ವರೆಗೆ ಅಲ್ಲಿಯೇ ಇಟ್ಟನು. ಮುಂದೆ ಏಳು ದಿನಗಳಾದ ಮೇಲೆ ಹೊನ್ನಯ್ಯನು ಆ ಶಿರವನ್ನು ಮುಂಡಕ್ಕೆ ಹಚ್ಚಲು ಏಕಾಂತದ ರಾಮಯ್ಯನಿಗೆ ಪ್ರಾಣವು ಬಂದು ಅವನು ಎದ್ದು ನಿಂತನು. ಅದನ್ನು ನೆರೆದ ಜನರು ನೋಡಿ ವಿಸ್ಮಿತರಾಗಿ ಶಿವನ ಮಹಿಮೆಯನ್ನು ಹೊಗಳುವವರಾದರು.

ಏಕಾಂತದ ರಾಮಯ್ಯನಿಗೆ ಹಾಗೆ ಪ್ರಾಣವು ಬಂದದ್ದನ್ನು ನೋಡಿ ಜೈನರು ತಮ್ಮ ಜಿನನಿಗೆ ಇನ್ನುಮೇಲೆ ಪ್ರಳಯವಾಗುವದೆಂದು ಭಯ ಭೀತರಾದರು. ಆಗ ಭಕ್ತರು ಕಯ್ಯಲ್ಲಿ ಖಡ್ಗಗಳನ್ನು ಹಿಡಿದುಕೊಂಡು ಇದಿರ್ಗೊಂಡ ಜೈನರನ್ನು ಸಂಹರಿಸುತ್ತ ಬಸದಿಯನ್ನು ಪ್ರವೇಶಿಸಿದರು. ಮತ್ತು ಅಲ್ಲಿದ್ದ ಜಿನಮೂರ್ತಿಯನ್ನು ಒಡೆದು ಬತ್ತಲೆ ಬೊಂಬೆಗಳನ್ನು ಕಿತ್ತುಹಾಕಿದರು. ಆಮೇಲೆ ರಾಮಯ್ಯನು ಒಂದು ಶ್ರೇಷ್ಠತರವಾದ ಲಿಂಗವನ್ನು ಆ ಜಿನನ ಸ್ಥಳದಲ್ಲಿ ಪ್ರತಿಷ್ಠಿಸಿದನು. ಹೀಗಾದ ಬಳಿಕ ಭಕ್ತ ಜನರೆಲ್ಲರೂ ರಾಮಯ್ಯನನ್ನು ಹೊಗಳುತ್ತ ತಮ್ಮ ತಮ್ಮ ಸ್ಥಳಗಳಿಗೆ ಹೋಗುವವರಾದರು.

ಹೀಗೆ ಜಿನಾಲಯದಲ್ಲಿ ಲಿಂಗವನ್ನು ಪ್ರತಿಷ್ಠಿಸಿದ ಬಳಿಕ ಆ ಲಿಂಗಕ್ಕೆ 'ವೀರಸೋಮೇಶ'ನೆಂಬ ಹೆಸರು ಪ್ರಾಪ್ತವಾಯಿತು.

ಈ ಎಲ್ಲ ವಿವರಗಳು ಅಬಲೂರು ಗ್ರಾಮದಲ್ಲಿರುವ ಸೋಮನಾಥ ದೇವಾಲಯದ ಗೋಡೆಯಲ್ಲಿ ಈಗಲೂ ಇರುವ ಶಿಲಾಶಾಸನದಲ್ಲಿ ಲಿಖಿಸಲ್ಪಟ್ಟಿರುತ್ತವೆ. (೧) ಅವುಗಳನ್ನು ನಾವು ಮುಖ್ಯವಾಗಿ ಇಟ್ಟುಕೊಂಡು ಅವುಗಳಿಗೆ ವಿರೋಧವಲ್ಲದ ಸಂಗತಿಗಳನ್ನು ಬೇರೆ ಪುರಾಣ ಗ್ರಂಥಗಳಿಂದ ಎತ್ತಿ ಇಲ್ಲಿ ತೆಗೆದುಕೊಂಡಿರುತ್ತೇವೆ. ಈ ಶಿಲಾಶಾಸನದಲ್ಲಿ ಮುಂದೆ ಕಾಣಿಸಿದ ಐತಿಹಾಸಿಕ ಸಂಗತಿಗಳು ಹೇಳಲ್ಪಟ್ಟವೆ.

ಹೀಗೆ ಏಕಾಂತದ ರಾಮಯ್ಯನು ದೇವಾಲಯದಲ್ಲಿದ್ದ ಜಿನಪ್ರತಿಮೆಯನ್ನು ತೆಗೆದುಹಾಕಿದ ಬಳಿಕ ನಾಡಿನಲ್ಲೆಲ್ಲ ಹೀಗೆಯೇ ಮುಂದೆ ಜಿನ ಪ್ರಳಯವಾಗುವದೆಂದು ಜೈನರು ಭೀತಿಯುಳ್ಳವರಾಗಿ ಅವರು ಬಿಜ್ಜಳ ನೃಪನ ಕಡೆಗೆ ಹೋಗಿ ರಾಮಯ್ಯನು ಮಾಡಿದ ಈ ಕೃತ್ಯಗಳನ್ನು ಕುರಿತು ಬಹಳ ಹೆಚ್ಚಾಗಿ ಅವನ ಮುಂದೆ ದೂರು ಹೇಳಿದರು. ಬಿಜ್ಜಳನು ಈ ವೃತ್ತಾಂತವನ್ನು ಕೇಳಿ ಕುಪಿತನಾಗಿ ಏಕಾಂತದ ರಾಮಯ್ಯನನ್ನು ತನ್ನಲ್ಲಿಗೆ ಬರಮಾಡಿಕೊಂಡು ಅವನಿಗೆ— ನೀನಿದೇನು ಮಾಡಿದೆ? ನೀನು ಹೀಗೇಕೆ ಮಾಡಿದೆ? ಎಂದು ಕೇಳಲು ಅವನು ಜೈನರು ತನಗೆ ಬರೆದುಕೊಟ್ಟ ಭಾಷಾಪತ್ರವನ್ನು ಅವನ ಮುಂದಿರಿಸಿ ಅವನಿಗೆ— ಈ ಓಲೆಯು ನಿನ್ನ ಭಾಂಡಾರದಲ್ಲಿರಲಿ. ಜೈನರು ಒಪ್ಪಿದಲ್ಲಿ ಈಗಲೂ ಸಹ ನಾನು ನನ್ನ ತಲೆಯನ್ನು ಪುನಃ ಕತ್ತರಿಸಿಕೊಂಡು ಅದನ್ನು ಪಡೆಯುವೆನು. ಆದರೆ ನಾನು ಹೀಗೆ ಪಡೆದದ್ದಾದರೆ ಜೈನರು ಈ ನಾಡಿನಲ್ಲಿರುವಂಥ ಆನೆಸೆಜ್ಜೆ ಬಸದಿ ಮೊದಲಾದ ಎಂಟುನೂರು ಬಸದಿಗಳನ್ನು ಪಣವಾಗಿ ಒಡ್ಡಿ ಅವುಗಳಲ್ಲಿರುವ ಜಿನ ಪ್ರತಿಮೆಗಳ ಬದಲಾಗಿ ಶಿವಲಿಂಗಗಳನ್ನು ಪ್ರತಿಷ್ಠಿಸುವೆವೆಂದು ಒಪ್ಪಿಕೊಳ್ಳಬೇಕು ಎಂದು ಹೇಳಿದನು. ಅದಕ್ಕೆ ಬಿಜ್ಜಳನು ಈ ಕೌತುಕವನ್ನು ನೋಡಬೇಕೆಂದು ಆ ಬಸದಿಗಳ ಒಡೆಯರನ್ನು ತನ್ನಲ್ಲಿಗೆ ಬರಮಾಡಿಕೊಂಡು ಅವರಿಗೆ— ನೀವು ನಿಮ್ಮ ಬಸದಿಗಳನ್ನು ರಾಮಯ್ಯನಿಗೆ ಹೀಗೆ ಪಣವಾಗಿ ಇಡಲು ಒಪ್ಪಿಕೊಂಡು ಹಾಗೆ ಓಲೆಯನ್ನು ಬರಕೊಡುವಿರಾ ಎಂದು ಕೇಳಲು ಅದಕ್ಕೆ ಅವರು— ನಾವು ಈ ಮೊದಲಿಗೆ ಒಡೆದುಹೋದ ಬಸದಿಯ ವಿಷಯವಾಗಿ ದೂರು ಹೇಳಲು ಬಂದಿರು

(೧) ಅಬಲೂರು ಶಾಸನದ ಪೂರ್ಣವಿವರಗಳು ಶಿವಾನುಭವ ಸಂಚಿಕೆ ೩-೧೨-೮ ಇದರಲ್ಲಿ ಬಂದಿರುತ್ತವೆ.

ತ್ತೇವೆಯೇ ಹೊರ್ತು ಉಳಿದ ಬಸದಿಗಳನ್ನು ಪಣವಾಗಿಟ್ಟುಕೊಂಡು ಅವುಗಳಿಗೆ ಪ್ರಳಯ ಮಾಡಲು ಬಂದಿಲ್ಲ, ಎಂದು ಹೇಳಲು ಬಿಜ್ಜಳರಾಯನು ನಕ್ಕು— ನೀವಿನ್ನು ಹಿಂದಿರುಗಿ ಹೋಗಿರಿ ಎಂದು ಹೇಳಿ, ಏಕಾಂತದ ರಾಮಯ್ಯನಿಗೆ ಜಯಪತ್ರವನ್ನು ಕೊಟ್ಟನು. ಇಷ್ಟೇಅಲ್ಲ, ಏಕಾಂತದ ರಾಮಯ್ಯನು ತೋರಿಸಿದ ನಿರತಿಶಯವಾದ ಮಾಹೇಶ್ವರ ಭಕ್ತಿ ಮತ್ತು ಸಾಹಸಗಳನ್ನು ಹೊಗಳಿ ಮೆಚ್ಚಿದವನಾಗಿ ಅವನು ಸ್ಥಾಪಿಸಿದ ವೀರ ಸೋಮನಾಥ ದೇವರ ಪ್ರಸಾದ, ಜೀರ್ಣೋದ್ಧಾರ, ಅಂಗಭೋಗ, ನೈವೇದ್ಯ ಇವುಗಳ ಸಲುವಾಗಿ ಬನವಾಸಿ ೧೨ ಸಾವಿರ ಪ್ರಾಂತದಲ್ಲಿರುವ ಗೋಗಾವೆ ಎಂಬ ಗ್ರಾಮವನ್ನು ಅವನ ಪಾದಪೂಜೆ ಮಾಡಿ ಅವನಿಗೆ ಉಂಬಳಿ ಹಾಕಿ ಕೊಟ್ಟನು. ಈ ಗೋಗಾವೆ ಗ್ರಾಮಕ್ಕೆ ಈಗ ಘೋಗಾವಿ ಎಂಬ ಹೆಸರಿದ್ದು ಅದು ಅಬ್ಬಲೂರಿನ ಉತ್ತರಕ್ಕೆ ೨ ಮೈಲುಗಳ ಮೇಲೆ ಇರುತ್ತದೆ.

ಅಬ್ಬಲೂರು ಶಿಲಾಶಾಸನದಿಂದ ಏಕಾಂತದ ರಾಮಯ್ಯನು ತನ್ನ ಮಹಾತ್ಮೆಯನ್ನು ಮೆರೆಯಿಸಿದ್ದು ಬಿಜ್ಜಳರಾಯನು ಇನ್ನೂ ಚಕ್ರವರ್ತಿಯಾಗಿರದೆ ಕೇವಲ ಮಹಾಮಂಡಲೇಶ್ವರ ಎಂದರೆ ಮಾಂಡಲಿಕನಾಗಿದ್ದಾಗ ಎಂದು ತಿಳಿದುಬರುತ್ತಿದೆ. ಅವನು ಮಾಂಡಲಿಕನಾಗಿದ್ದದ್ದು ೧೧೩೮ ರಿಂದ ೧೧೫೬ ರ ವರೆಗೆ ಮಾತ್ರ. ಈ ಅವಧಿಯ ಆರಂಭಕಾಲದಲ್ಲಿ ಅವನು ಕೆಲಕಾಲ ಮಂಗಳವಾಡದಲ್ಲಿಯೂ, ಆ ಮೇಲೆ ಬನವಾಸಿ ನಾಡಿನಲ್ಲಿಯೂ ಚಾಲುಕ್ಯರಾಜರಿಗೆ ಮಾಂಡಲಿಕನಾಗಿ ರಾಜ್ಯವಾಳಿದನೆಂದು ಇತಿಹಾಸದಿಂದ ತಿಳಿದುಬರುತ್ತಿದೆ. ಆದರೆ ಈ ಅವಧಿಯ ತರುವಾಯ ಅವನು ಪ್ರಬಲನಾಗಿ ೧೧೫೬ ರಿಂದ ೧೧೬೭ ವರೆಗೆ ನೂರ್ಮಡಿ ತೈಲಪ ತ್ರಿಭುವನಮಲ್ಲ ಚಾಲುಕ್ಯರಾಜನ ಸರ್ವಾಧಿಕಾರಿಯಾಗಿ ಬನವಾಸಿಯಲ್ಲಿಯೂ ಆ ಮೇಲೆ ೧೧೬೭ ರಿಂದ ೧೧೮೯ ವರೆಗೆ ಈ ಚಾಲುಕ್ಯರಾಜನನ್ನು ತಳ್ಳಿ ಚಕ್ರವರ್ತಿಯಾಗಿ ಕಲ್ಯಾಣಪಟ್ಟಣದಲ್ಲಿಯೂ ರಾಜ್ಯವಾಳಿದನು.

ಈ ಸಂಗತಿಗಳನ್ನೆಲ್ಲ ಲಕ್ಷಿಸಿದಲ್ಲಿ ಏಕಾಂತದ ರಾಮಯ್ಯನ ಮಹಾತ್ಮೆಯು ಘಟಿಸಿದ್ದು ಬಿಜ್ಜಳನು ಬನವಾಸಿಯಲ್ಲಿ ಮಾಂಡಲಿಕನಾಗಿ ಆಳುತ್ತಿದ್ದಾಗ ಅಂದರೆ ೧೧೫೬ ರ ಕಿಂತಲೂ ಸ್ವಲ್ಪ ಮೊದಲು ಇರಬಹುದೆಂಬ ಅನುಮಾನವು ಉಂಟಾಗುತ್ತದೆ. ಆದರೆ ಬಸವೇಶ್ವರನು ಕಲ್ಯಾಣಪಟ್ಟಣಕ್ಕೆ ಬಂದು ಧರ್ಮಕ್ರಾಂತಿಯನ್ನು ಮಾಡಿದ್ದು ಬಿಜ್ಜಳನು ಚಕ್ರವರ್ತಿಯಾದಾಗ್ಗೆ, ಅಂದರೆ ೧೧೫೬ ಅಥವಾ ೧೧೬೭ ರ ತರುವಾಯ. ಆದ್ದರಿಂದ ಏಕಾಂತದ ರಾಮಯ್ಯನ ಕ್ರಾಂತಿಯ ಪ್ರಾರಂಭವು ಬಸವೇಶ್ವರನಕಿಂತಲೂ ಸ್ವಲ್ಪ ಮೊದಲು ಆಗುತ್ತದೆ.

ಬಿಜ್ಜಳನು ೧೧೬೭ ರ ವರೆಗೆ ರಾಜ್ಯವಾಳಿದ ಬಳಿಕ ಅವನ ವಂಶಜರು ೧೧೮೯ ರ ವರೆಗೆ ರಾಜ್ಯವಾಳಿದರು. ಆಮೇಲೆ ಚಾಲುಕ್ಯವಂಶದ ನೂರ್ಮಡಿ ತೈಲಪನ ಮಗನಾದ ಳನೇ ಸೋಮೇಶ್ವರನು ತನ್ನ ಸೇನಾನಾಯಕನಾದ ಬರ್ಮದೇವನ ಸಹಾಯದಿಂದ ಬಿಜ್ಜಳನ ವಂಶದ ಕಡೆಯ ಅರಸನನ್ನು ಪಟ್ಟದಿಂದ ತಳ್ಳಿ, ಮೊದಲು ಅಣ್ಣಿಗೇರಿಯಲ್ಲಿ, ಆಮೇಲೆ ಕಲ್ಯಾಣದಲ್ಲಿ ರಾಜ್ಯವಾಳಹತ್ತಿದನು. ಹೀಗೆ ಈ ರಾಜನಿಗೆ ಸಹಾಯ ಮಾಡಿದ್ದಕ್ಕಾಗಿ ಬರ್ಮದೇವನಿಗೆ 'ಚಾಳುಕ್ಯರಾಜ್ಯ ಪ್ರತಿಷ್ಠಾಪಕ'ನೆಂಬ ಹೆಸರು ಬಂದಿರುತ್ತದೆ. ಮೇಲೆ ಉಲ್ಲೇಖಿಸಿದ ಅಬ್ಬಲೂರು ಶಿಲಾಶಾಸನದಿಂದ ತಿಳಿದುಬರುವ ಬೇರೆ ಸಂಗತಿಗಳು ಆವವೆಂದರೆ:—

ಈ ಬರ್ಮದೇವ ಸೇನಾಪತಿಯೂ ರಾಜನಾದ ಸೋಮೇಶ್ವರನೂ ಸೆಲೆಯಹಳ್ಳಿಯಕೊಪ್ಪ ಎಂಬ ಗ್ರಾಮದಲ್ಲಿ ಬಿಡಾರ ಬಿಟ್ಟಾಗ್ಗೆ ಅವರು 'ಧರ್ಮಗೋಷ್ಠಿ'ಯನ್ನು ಅಲ್ಲಿ ನಡಿಸುತ್ತಾ ಇದ್ದರು. ಆಗ ಹಿಂದಿನವರೂ ನೂತನರೂ ಆದ ಶಿವಭಕ್ತರ ಗುಣಸ್ತವನವು ಅವರ ಮುಂದೆ ನಡಿಯುತ್ತಾ ಇದ್ದಿತು. ಆ ಸಮಯದಲ್ಲಿ ಸೋಮೇಶ್ವರ ರಾಜನು ಅಬ್ಬಲೂರಲ್ಲಿ ಏಕಾಂತದ ರಾಮಯ್ಯನು ನಡಿಸಿದ ಮಹಾತ್ಮೆಯನ್ನು ಕೇಳಿ, ಅವನಿಗೋಸ್ಕರ ಪೂಜ್ಯಭಾವವನ್ನು ತಾಳಿದವನಾಗಿ ಅವನನ್ನು ತಾನಿದ್ದ ಸೆಲೆಯಹಳ್ಳಿಯಕೊಪ್ಪಕ್ಕೆ ಬರಮಾಡಿಕೊಂಡನು. ಆಗ ಅವನನ್ನು ಪೂಜಿಸಿ, ಅವನು ಸ್ಥಾಪಿಸಿದ ವೀರಸೋಮನಾಥ ದೇವಾಲಯದ ಜೀರ್ಣೋದ್ಧಾರಕ್ಕೂ ಅಂಗಭೋಗ, ರಂಗಭೋಗ, ನೈವೇದ್ಯಕ್ಕೂ, ಉತ್ಸವಾದಿ ಪರ್ವಗಳಿಗೂ, ಅನ್ನದಾನ ವಿದ್ಯಾದಾನಕ್ಕೂ ಬನವಸೆ ಹನ್ನೆರಡು ಸಾವಿರ ಪ್ರಾಂತದಲ್ಲಿದ್ದ ಅಬ್ಬಲೂರು ಗ್ರಾಮವನ್ನು ಅದರ ಮೇಲಾಳಿಕೆ, ಮನ್ನೆಯ ಸುಂಕ, ದಂಡ ದೋಷ, ನಿಧಿ ನಿಕ್ಷೇಪ ಸಹವಾಗಿ ಧಾರಾಪೂರ್ವಕವಾಗಿ ರಾಮಯ್ಯನಿಗೆ ಉಂಬಳಿ ಹಾಕಿಕೊಟ್ಟನು.

ಏಕಾಂತರಾಮಯ್ಯನ ಮಹಾತ್ಮೆಯನ್ನು ತಿಳಿದುಕೊಂಡು ಅದರ ವಿವರವನ್ನು 'ಶರಣ' ಎಂಬವನಿಂದ ಈ ಶಿಲಾಶಾಸನದಲ್ಲಿ ತಿದ್ದಿ ಬರೆಯಿಸಿದನೆಂದು ತಿಳಿಯುತ್ತದೆ. ಇದು ಯಾವ ವರ್ಷ ಎಂಬುದು ಶಾಸನದಲ್ಲಿ ಹೇಳಿಲ್ಲ. ಆದರೆ ಈ ಕಾಲದಲ್ಲಿ ಏಕಾಂತದ ರಾಮಯ್ಯನು ಜೀವಿಸಿದ್ದನೆಂದು ತೋರುವದಿಲ್ಲ. ಹಿಂದಿನ ಎಲ್ಲ ಸಂಗತಿಗಳನ್ನು ಸಂಗ್ರಹಿಸಿ ಈ ಶಾಸನವನ್ನು ಬರೆಯಿಸಿದವನು ಈ ಕೇಶರಾಜನೆಂದು ತೋರುತ್ತದೆ.

ಕದಂಬವಂಶದ ಕಾಮದೇವನ ತರುವಾಯ ಅದೇ ವಂಶದ ಮಲ್ಲಿದೇವನೆಂಬ ರಾಜನು ಈ ಭಾಗವನ್ನ ಆಳುತ್ತಿದ್ದನು. ಅವನು ಸಹ ಈ ದೇವಾಲಯಕ್ಕೆ ಉಂಬಳಿಯನ್ನು ಹಾಕಿಕೊಟ್ಟಿದ್ದು ಈ ಅಬ್ಬಲೂರು ಶಾಸನದಲ್ಲಿ ಹೇಳಿದೆ. ಅವನ ಶಾಸನಗಳು ೧೨೧೯ ರಿಂದ ೧೨೩೧ ವರೆಗೆ ಉಪಲಬ್ಧವಿವೆ. ಆದರೆ ಈ ಕಾಲದಲ್ಲಿ ಏಕಾಂತದ ರಾಮಯ್ಯನು ಜೀವಿಸಿದ್ದಿಲ್ಲೆಂದು ತೋರುತ್ತಪೆ. ಶಿಲಾಶಾಸನದ ಅಕ್ಷರಗಳು ಇಲ್ಲಿಯ ಮುಂದೆ ಅಳಿಸಿ ಹೋಗಿರುವದರಿಂದ ಈ ಉಂಬಳಿ ಹಾಕಿದ ವರ್ಷವು ತಿಳಿಯುವದಿಲ್ಲ.

ಈ ಪ್ರಕಾರ ಏಕಾಂತದ ರಾಮಯ್ಯನು ಬಿಜ್ಜಳನು ೧೧೫೫ ಅಥವಾ ಅದಕ್ಕೂ ಸ್ವಲ್ಪ ಮೊದಲು ಬನವಾಸಿನಾಡಿನಲ್ಲಿ ಆಳಹತ್ತಿದಂದಿನಿಂದ ಸುಮಾರು ೪೦-೫೦ ವರ್ಷಗಳ ವರೆಗೆ ಜೀವಿಸಿ ತನ್ನ ಶಿವಯೋಗ ಸಾಮರ್ಥ್ಯವನ್ನು ಜನರಲ್ಲಿ ತೋರಿಸಿ ಪ್ರಸಿದ್ಧನಾಗಿದ್ದಾನೆ. ಈ ಕಾಲದಲ್ಲಿ ಅವನು ಅನೇಕ ರಾಜರಿಂದಲೂ ಸಾಮಂತರಿಂದಲೂ ಮನ್ನಣೆಯನ್ನು ಹೊಂದಿದ್ದಾನೆ. ಅವನು ಬಸವೇಶ್ವರನ ಸಮಕಾಲೀನನು. ಆದರೂ ಅವನು ಅವನಕಿಂತಲೂ ಸ್ವಲ್ಪಕಾಲ ಹಿಂದಿನವನು ಮತ್ತು ಅವನ ತರುವಾಯ ಸಹ ಅನೇಕ ವರ್ಷ ಜೀವಿಸಿದನು. ಈ ಕಾಲದಲ್ಲಿ ಅವನು ಈ ಭಾಗದಲ್ಲಿ ವೀರಶೈವ ಧರ್ಮವನ್ನು ವಿಸ್ತರಿಸಿರಲಿಕ್ಕೆಬೇಕೆಂಬ ಅನುಮಾನವು ಉಂಟಾಗುತ್ತದೆ.

ಏಕಾಂತದ ರಾಮಯ್ಯನ ಕಾಲದಲ್ಲಿ ಬಸವೇಶ್ವರನಕಿಂತಲೂ ಮೊದಲು ಅನೇಕ ಶಿವಶರಣರು ಆಗಿಹೋಗಿದ್ದುದು ಈ ಶಿಲಾಶಾಸನದಲ್ಲಿ ಬರ್ಮದೇವ ಮತ್ತು ಸೋಮೇಶ್ವರರಾಜ ಇವರಿಗೆ ಸಂಬಂಧಪಟ್ಟ ಉಲ್ಲೇಖಗಳಲ್ಲಿ ಬಂದಿರುತ್ತದೆ. ಇದನ್ನು ನಾವು ಲಕ್ಷಿಸತಕ್ಕದ್ದು. ಇದರಿಂದ ಬಸವೇಶ್ವರನಕಿಂತಲೂ ಮೊದಲು ಶಿವಶರಣರಿದ್ದುದು ಸ್ಪಷ್ಟವಾಗುತ್ತದೆ.

ಈ ಚಾಲುಕ್ಯ ಸೋಮೇಶ್ವರನು ೧೧೮೦ ರಿಂದ ೧೧೯೯ ವರೆಗೆ ಆಳಿದ್ದರಿಂದ ಈ ವರ್ಷಗಳ ಮಧ್ಯದಲ್ಲಿ ಈ ಉಂಬಳಿಯು ಏಕಾಂತ ರಾಮೇಶ್ವರನಿಗೆ ದೊರಕಿರಬಹುದೆಂದು ತೋರುತ್ತದೆ. ಆಗ ಅವನು ಇನ್ನೂ ಜೀವಂತ ಇದ್ದನೆಂಬುದು ಸ್ಪಷ್ಟವು.

೧೧೯೯ ರ ಸುಮಾರಿನಲ್ಲಿ ದೇವಗಿರಿ ಯಾದವರಾಜನಾದ ಭಿಲ್ಲಮನು ಚಾಲುಕ್ಯ ರಾಜ್ಯವನ್ನು ಅಭಿಯೋಗಿಸಿ ಈಗಿನ ಕಲಬುರ್ಗಿ ಮತ್ತು ವಿಜಾಪುರ ಜಿಲ್ಲೆಗಳನ್ನು ಆಕ್ರಮಿಸಿದನು. ಆದ್ದರಿಂದ ಕಲ್ಯಾಣ ಚಾಲುಕ್ಯರ ರಾಜ್ಯವು ಅಂದಿನಿಂದ ಪೂರ್ಣವಾಗಿ ನಿಂತುಹೋಯಿತು.

ಇದರ ತರುವಾಯ ಅಬ್ಬಲೂರು ಇದ್ದ ಪ್ರವೇಶವನ್ನು ಕದಂಬ ರಾಜನಾದ ಕಾಮದೇವನು ಹಾನಗಲ್ಲನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಮಾಂಡಲಿಕನಾಗಿ ರಾಜ್ಯವಾಳುತ್ತಿದ್ದನು. ಅವನು ಒಂದುದಿನ ಅಬ್ಬಲೂರಿಗೆ ಬಂದಾಗ್ಗೆ ಅಲ್ಲಿ ಬಹು ಉನ್ನತವೂ ವಿಸ್ತಾರವೂ ಆದ ವೀರಸೋಮನಾಥನ ದೇವಾಲಯವನ್ನು ಕಂಡು ಏಕಾಂತದ ರಾಮಯ್ಯನು ನಡಿಸಿದ ಮಹಾತ್ಮೆಯನ್ನು ತಿಳಿದು, ಅವನನ್ನು ತನ್ನ ರಾಜಧಾನಿಯಾದ ಹಾನಗಲ್ಲಿಗೆ ಕರೆದುಕೊಂಡು ಬಂದು, ಅವನ ಕೂಡ ಶಿವಗೋಷ್ಠಿಗಳನ್ನು ನಡಿಸಿ, ಅವನಿಗೆ ಹಾನುಗಲ್ಲು ಐದುನೂರು ಪ್ರಾಂತದಲ್ಲಿದ್ದ ಮಲ್ಲವಳ್ಳಿ ಎಂಬ ಗ್ರಾಮವನ್ನು ವೀರಸೋಮನಾಥ ದೇವರ ದೇಗುಲದ ಜೀರ್ಣೋದ್ಧಾರಕ್ಕೂ ದೇವರ ಅಂಗಭೋಗ ರಂಗಭೋಗ ನೈವೇದ್ಯಕ್ಕೂ ಉತ್ಸವಾದಿ ಪರ್ವಗಳಿಗೂ ಅನ್ನದಾನಕ್ಕೂ ರಾಮಯ್ಯನ ಕಾಲನ್ನು ತೊಳೆದು ಧಾರಾಪೂರ್ವಕವಾಗಿ ದಾನಮಾಡಿಕೊಟ್ಟನು. ಈ ಮಲ್ಲವಳ್ಳಿಯು ಈಗ ಮುಂಡುಗೋಡ ಗ್ರಾಮದ ನೈಋತ್ಯ ದಿಕ್ಕಿಗೆ ಮೂರು ಮೈಲುಗಳ ಮೇಲೆ ಇದೆ.

ಕಾಮದೇವನ ಶಿಲಾಶಾಸನಗಳು ೧೧೮೮ ರಿಂದ ೧೨೧೧ ವರೆಗೆ ಉಪಲಬ್ಧವಿರುತ್ತವೆ. ಆದ್ದರಿಂದ ಈ ಅವಧಿಯ ಮಧ್ಯದಲ್ಲಿ ಆವುದೇ ಒಂದು ವರ್ಷ ಮೇಲೆ ಕಾಣಿಸಿದ ಸಂಗತಿಯು ಘಟಿಸಿರಬಹುದು. ಈ ಕಾಲದಲ್ಲಿಯೂ ಏಕಾಂತದ ರಾಮಯ್ಯನು ಜೀವಿಸಿದ್ದನು.

ಈ ಬನವಾಸಿ ಭಾಗವನ್ನು ಕೆಲವುಕಾಲ ಕೇಶಿರಾಜ ದಂಡನಾಯಕನೆಂಬುವನು ಆಳುತ್ತಿದ್ದನು. ಅವನು ಅಬ್ಬಲೂರಿಗೆ ಬಂದಾಗ್ಗೆ

ಏಕಾಂತದ ರಾಮಯ್ಯನು ಉಚ್ಚಸ್ಥಿತಿಯನ್ನು ಹೊಂದಿದ ಶಿವಯೋಗಿಯಾಗಿದ್ದನು. ಅವನು ಹೊಂದಿದ ಈ ಸ್ಥಿತಿಯಲ್ಲಿ ಶಿವಯೋಗಿಯ ದೇಹವು ಬಯಲು ಸ್ವರೂಪವನ್ನು ಹೊಂದುತ್ತದೆಂದು ಶಿವಾನುಭವದ ತತ್ವವಿರುತ್ತದೆ. ಆಗ ಅವನು ತನ್ನ ಅಂಗಚೈತನ್ಯವನ್ನು ತನ್ನ ಧೀನದಲ್ಲಿಟ್ಟುಕೊಂಡು ತನ್ನ ಶರೀರ ಭಾಗಗಳು ಕತ್ತರಿಸಿಹೋದರೂ ಅವುಗಳನ್ನು ಅವನು ಸಮುಪಡಿಸಿಕೊಳ್ಳುವ ಸಾಮರ್ಥ್ಯವು ಅವನಲ್ಲಿ ಬರುತ್ತದೆಂಬುದು ಅನೇಕ ಶಿವಶರಣರ ಚರಿತ್ರೆಗಳಿಂದ ತಿಳಿದುಬರುತ್ತದೆ. ಇದನ್ನು ನಂಬುವದು ಅಥವಾ ಬಿಡುವದು ವಾಚಕರ ತಿಳಿವಳಿಕೆ ಮತ್ತು ವಿಶ್ವಾಸದ ಮೇಲೆ ಅವಲಂಬಿಸಿದೆ. ಆದರೆ ಐತಿಹಾಸಿಕ ದೃಷ್ಟಿಯಿಂದ ನಾವು ವಿಚಾರಮಾಡಿದಲ್ಲಿ ಏಕಾಂತದ ರಾಮಯ್ಯನು ಬನವಾಸಿನಾಡಿನಲ್ಲಿ ಅಂದರೆ ಈಗಿನ ಧಾರವಾಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಅನೇಕ ವರ್ಷ ಇದ್ದುಕೊಂಡು ವೀರಶೈವ ಧರ್ಮವನ್ನು ಇಲ್ಲಿ ಪ್ರಸಾರಗೊಳಿಸಿದನೆಂಬುದು ನಿರ್ವಿವಾದವಾಗಿರುತ್ತದೆ.

ಏಕಾಂತದ ರಾಮಯ್ಯನ ಹೆಸರು ಗಣಸಹಸ್ರದಲ್ಲಿ ಬಂದಿರುತ್ತದೆ.

ಏಕಾಂತದ ರಾಮಯ್ಯನು ವಚನಕಾರನೂ ಇದ್ದಾನೆ. ಇದರಿಂದ ಅವನು ಮೊದಲು ಬ್ರಾಹ್ಮಣನಾಗಿದ್ದರೂ ಶಿವಶರಣರ ನಡೆಯಂತೆ ನಡೆಯುತ್ತ ಶಿವಾನುಭವದ ತತ್ವಗಳನ್ನು ಬನವಾಸಿನಾಡಿನಲ್ಲಿ ಪ್ರಸಾರ ಮಾಡಿದ್ದಾನೆಂದು ನಾವು ಊಹಿಸಬೇಕಾಗುತ್ತದೆ. ಅವನ ಮುದ್ರಿಕೆಯು 'ಎನ್ನಯ್ಯ ಚನ್ನರಾಮೇಶ್ವರ' ಎಂದಿರುತ್ತದೆ. ಅವನ ಆರು ವಚನಗಳು ಮಾತ್ರ ನಮಗೆ ದೊರೆತಿರುತ್ತವೆ. ಅವುಗಳನ್ನೆಲ್ಲ ನಾವು ಕೆಳಗೆ ಕೊಟ್ಟಿದ್ದೇವೆ.

ವಚನಗಳು.

(೧) ಮನ ಲಿಂಗದಲ್ಲಿ ನಿಂದಿತ್ತೆಂಬಲ್ಲಿ ಆ ಮನ ಲಿಂಗಕ್ಕೆ ನೆಲೆಯೋ, ಲಿಂಗ ಮನದ ಸಂಗಿಯೋ, ಎಂಬುದ ತಿಳಿದೆನೆಂಬುದು ಸಂಗಿಯೋ, ನಿಸ್ಸಂಗಿಯೋ? ಬೀಜದೊಳಗಿನ ತಿರುಳು ಭೇದಿಸಿ ಪುಟ್ಟುವಲ್ಲಿ ಅದು ತನ್ನಯ ಸುನಾದದಿಂದವೋ, ಅಪ್ಪುವಿನ ಬಿಂದುವಿನ ಭೇದದಿಂದವೋ? ಈ ಉಭಯ ನೆಲೆ ಘಟಿಸಿದಲ್ಲಿ ಯೋಗಕೂಟವಾತ್ಮ

ಲಿಂಗ ಭೇದಯುಕ್ತಿ. ಭೇದಾಭೇದ ನಿಂದಲ್ಲಿ ಎನ್ನಯ್ಯ ಚನ್ನರಾಮನ ಕೂಟದ ಬೆಳಗು.

(೨) ಸಿಲೆ ಹಲವು ತೆರದಲ್ಲಿ ಹೊಲಬಿಗರಿಗೆ ಹೊಲಬಿಗನಾಗಿ, ಒಲವರವಿಲ್ಲದೆ ಅವರವರ ಭಾವದಲ್ಲಿ ನಿಲುವುದು ಸಿಲೆಯೋ, ಮನವೋ? ಆ ನಿಜದ ನೆಲೆಯ ತಿಳಿವುದು ದರ್ಪಣದ ತನ್ನೊಪ್ಪದ ಭಾವ ಎನ್ನಯ ಚನ್ನರಾಮನನರಿವಲ್ಲಿ.

(೩) ಕಲ್ಪಿತಾಂತರವನುಂಬುದು ಕಾಯವೋ? ಜೀವನ ಜೀವವೆಂದೊಡೆ ನಿರ್ನಾಮಭೇದ. ಕಾಯವೆಂದಡೆ ಅಚೇತನ ಘಟ. ಉಭಯ ಸಂಗ ಸಂಬಂಧವಾದಲ್ಲಿ ಎನ್ನಯ್ಯ ಚನ್ನರಾಮನ ಭೇದ.

(೪) ಕಾಯ ಹಲವು ಭೇದಗಳಾಗಿ ಆತ್ಮನನೇಕವೆಂಬುದದೇತರ ಮಾತು? ಬೆಂಕಿಯಿಂದಾದ ಬೆಳಗು ಸುಡಬಲ್ಲುದೇ ಬೆಂಕಿಯಲ್ಲದೆ? ಹಲವು ಘಟದಲ್ಲಿ ಅವರವರ ಹೊಲಬಿನಲ್ಲಿ ಅನುಭವಿಸುತ್ತ ಮತ್ತೊಂದರಲ್ಲಿಯ ಕೂಟಸ್ಥವಪ್ಪ ಸುಖ ಉಂಟೇ? ಈ ಗುಣ ಎನ್ನಯ್ಯ ಚನ್ನರಾಮನನಂದಲ್ಲಿ.

(೫) ಗುರುಭಕ್ತನಾದಲ್ಲಿ ಘಟಧರ್ಮವಳಿದು, ಲಿಂಗಭಕ್ತನಾದಲ್ಲಿ ಸಂಚಲವಳಿದು, ಜಂಗಮಭಕ್ತನಾದಲ್ಲಿ ತ್ರಿವಿಧಾಂಗ ಸಲೆಸಂದು, ಇಂತೀ ತ್ರಿವಿಧಭಕ್ತಿಯಲ್ಲಿ ತ್ರಿಕರಣ ಶುದ್ಧನಾದಾತ್ಮಂಗೆ ಮರ್ತ್ಯಕ್ಕೆ ಕೈಲಾಸ ಪೆಂಬ ಕಾಳು ಮಾಡಿಲ್ಲ. ಆತ ನಿತ್ಯಮುಕ್ತನೆನ್ನಯ್ಯ ಚನ್ನರಾಮನಾಗಿ.

(೬) ಅಶನ ವ್ಯಸನ ಸರ್ವವಿಷಯಾದಿಗಳಲ್ಲಿ ಹುಸಿದು ಪಿಸುಣತ್ವದಿಂದ ಗಸಣಿಗೊಂಡು ಮಾಡಿಸಿಕೊಂಬುದು ಸದ್ಗುರುವಿಗೆ ಸಂಬಂಧವಲ್ಲ. ತಿಲರಸ ವಾರಿಯ ಭೇದದಂತೆ ಮಣಿಯೊಳಗಿದ್ದ ಸೂತ್ರದಂತೆ ಅಂಗವ ತೀರ್ಚಿ ಪಾಯ್ದು ನಿಂದ ಅಹಿಯ ಅಂಗದಂತೆ ಗುರುಸ್ಥಲ ಸಂಬಂಧ ಎನ್ನಯ್ಯ ಚನ್ನರಾಮೇಶ್ವರಲಿಂಗವನರಿಯಬಲ್ಲಡೆ.

ಈ ವಚನಗಳಲ್ಲಿ ಏಕಾಂತದ ರಾಮಯ್ಯನು ಲಿಂಗಾಂಗಸಾಮರಸ್ಯದ ತತ್ವಗಳನ್ನು ವಿವೇಚಿಸಿದ್ದಾನೆ.

ಗಜೇಶ ಮಸಣಯ್ಯ.

ಅಕ್ಕಲಕೋಟೆ ಸಂಸ್ಥಾನದಲ್ಲಿ ಕರಜಿಗೆ ಎಂಬ ಹೆಸರಿನ ಒಂದು ಗ್ರಾಮವಿರುತ್ತದೆ. ಅದು ವಿಜಾಪುರ ಪಟ್ಟಣದಿಂದ ಈಶಾನ್ಯಕ್ಕೆ ೬೦ ಮೈಲುಗಳ ಮೇಲೆ ಮತ್ತು ಸೊಲ್ಲಾಪುರ ಪಟ್ಟಣದಿಂದ ಆಗ್ನೇಯಕ್ಕೆ ೨೦ ಮೈಲುಗಳ ಮೇಲೆ ಇರುತ್ತದೆ. ಈ ಗ್ರಾಮದಲ್ಲಿ ಗಜೇಶ ಮಸಣಯ್ಯನೆಂಬ ಶಿವಶರಣನು ವಾಸಮಾಡುತ್ತಿದ್ದನು.

ಎಲ್ಲ ಶಿವಶರಣರಲ್ಲಿ ಕೆಲವೊಂದು ಶಿವಾನುಭವದ ವಿಶಿಷ್ಟ ಗುಣವಿರುತ್ತದೆ. ಇಷ್ಟಲಿಂಗದ ಪೂಜೆಯನ್ನು ಸತಿಪತಿ ಭಾವದಿಂದ ಮಾಡುವದೇ ಗಜೇಶ ಮಸಣಯ್ಯನ ವೈಶಿಷ್ಟ್ಯವಾಗಿತ್ತು. ಇದರಿಂದ ಅವನು ಶ್ರೇಷ್ಠನಾದ ಶಿವಯೋಗಿ ಎಂದು ಜನರಲ್ಲಿ ಪ್ರಸಿದ್ಧನಾದನು. ಲಿಂಗ ಪೂಜೆಯನ್ನು ಮಾಡುವಲ್ಲಿ ಅವನು ಅದರಲ್ಲಿಯೇ ಮೈಮರೆದು ಬಿಡುವನು. ಆಗ ಅವನಿಗೆ ಚಳಿ, ಮಳೆ, ಬಿಸಿಲು, ಗಾಳಿ ಇವಾವೂ ಭಾಸವಾಗುತ್ತಿರಲಿಲ್ಲ. ಹೊರಗಿನದರ ಅರಿವು ಅವನಿಗೆ ಏನೂ ಉಳಿಯುತ್ತಿದ್ದಿಲ್ಲ. ಆಗ ಸರ್ಪ, ವೃಶ್ಚಿಕ, ಭೂತ ಪಿಶಾಚಿಗಳು, ಕಾಡು ಮೃಗಗಳು ಅವನನ್ನು ಸಮೀಪಿಸಲು ಹಿಂಜರಿಯುತ್ತಿದ್ದವು.

ವೀರಶೈವನು ಗುರೂಪದೇಶದಿಂದ ಇಷ್ಟಲಿಂಗವನ್ನು ಪಡೆದುಕೊಂಡು, ಗುರುವಿನಿಂದ ಅದರ ನೆಲೆಕಲೆಗಳನ್ನು ಅರಿತುಕೊಂಡು ತನ್ನ ಇಷ್ಟಲಿಂಗದಲ್ಲಿ ಧ್ಯಾನಮಗ್ನನಾಗಬೇಕು. ಇಂಥ ಧ್ಯಾನದಿಂದ ಪ್ರಾಣಲಿಂಗವು ಅವನಲ್ಲಿ ಅರಳುವದು. ಹೀಗಾಗಲು ಅದು ಅವನ ಹೃದಯ ಕಮಲಮಧ್ಯದಲ್ಲಿ ವಾಸಮಾಡಹತ್ತುತ್ತದೆ. ಆಗ ಆ ಭಕ್ತನು ನಡೆವಲ್ಲಿ, ನುಡಿವಲ್ಲಿ, ಹೊಂದುವಲ್ಲಿ, ಉಸಿರುವಲ್ಲಿ, ಕಾಣುವಲ್ಲಿ, ಕೇಳುವಲ್ಲಿ, ಲಿಂಗ ಚೈತನ್ಯವೇ ಅವನದಾಗುತ್ತದೆ. ಹೀಗೆ ಪ್ರಾಣಲಿಂಗವು ಅವನಲ್ಲಿ ತೊಳಗಿ ಬೆಳಗಹತ್ತಲು ಅವನ ಭಾವಲಿಂಗವೂ ಕೂಡ ಪ್ರಜ್ವಲಿಸಹತ್ತುತ್ತದೆ. ಅದು ಓಂಕಾರ ರೂಪಾಗಿದ್ದು ಅನೇಕ ಪ್ರಣವಮಗಳ ದ್ವಾರಾ ಅವನ ಅಂಗೋಪಾಂಗಗಳಲ್ಲಿ ಜಲಿಸಹತ್ತುತ್ತದೆ. ಹೀಗೆ ಇಷ್ಟ ಪ್ರಾಣ ಭಾವ ವಲಿಂಗಗಳನ್ನು ಭಕ್ತನು ಗ್ರಹಿಸಿ, ಅವುಗಳಾಚೆ ಇರುವ ತ್ರಿವೇಣಿಸಂಗಮವನ್ನು ಪ್ರವೇಶಿಸಿ ಅಲ್ಲಿಂದ ಮುಂದೆ ಹೋಗಿ, ನಿಷ್ಕಳಲಿಂಗ ಆಮೇಲೆ ಶೂನ್ಯಲಿಂಗ ಆಮೇಲೆ ನಿಶ್ಶೂನ್ಯಲಿಂಗ, ಇವುಗಳಲ್ಲಿದ್ದುಕೊಂಡು ಕಡೆಗೆ

ಬಯಲಲ್ಲಿ ಬೆರೆಯುವನು. ಹೀಗೆ ಬೆರೆತುಹೊಗುವದೇ ಲಿಂಗಪೂಜೆಯ ಉದ್ದೇಶವಿರುತ್ತದೆ. ಇದೇ ಶಿವಯೋಗವೆನಿಸಿಕೊಳ್ಳುತ್ತದೆ. ಹಾಗೆ ಆಚರಿಸುವವನಲ್ಲಿ ಕ್ರಮೇಣ ವಿಶ್ವಶಕ್ತಿಯು ತಲೆದೋರುತ್ತದೆ. ಇಂಥವನಿಗೆ ಬಾಹ್ಯಪೀಡೆಗಳು ತಗಲಲಾರವು. ಹೀಗೆ ಲಿಂಗಪೂಜೆಯನ್ನು ಸಾಧಿಸಿದ ಶಿವಶರಣರು ಹಿಂದಿನ ಕಾಲದಲ್ಲಿ ಅನೇಕರು ಆಗಿಹೋಗಿದ್ದಾರೆ. ಇಂಥವರಲ್ಲಿ ಗಜೇಶ ಮಸಣಯ್ಯನು ಒಬ್ಬನಾಗಿದ್ದಾನೆ.

ಹೀಗೆ ಗಜೇಶ ಮಸಣಯ್ಯನು ಇರುವಲ್ಲಿ ಅವನು ಒಂದು ದಿವಸ ಗುರುದರ್ಶನವನ್ನು ಹೊಂದಬೇಕೆಂದು ತನ್ನ ಗ್ರಾಮವಾದ ಕರಂಜಿಗೆಯಿಂದ ಹೊರಟನು. ಅವನು ಹೋಗುತ್ತಿರುವಾಗ ದಾರಿಯಲ್ಲಿ ಅವನಿಗೆ ಒಂದು ಮಹಾನದಿಯು ಹತ್ತಿತು. ಅದರ ವಿಶಾಲ ಪಾತ್ರವೂ, ಅದರ ಸುತ್ತಲೂ ಮೆರೆಯುತ್ತಿದ್ದ ಬನಗಳೂ, ಪಕ್ಷಿಗಳೂ ,ಸುಂದರವಾದ ಸೃಷ್ಟಿಯ ನೋಟವೂ, ಅವನನ್ನು ಲಿಂಗ ಪೂಜೆಗೆ ಎಳಿಸಿತು. ಆಗ ಅವನು ಅಲ್ಲಿ ಒಂದು ಏಕಾಂತ ಸ್ಥಳವನ್ನು ಆಯ್ದು ಅಲ್ಲಿ ತಳಿರು ಹಾಸಿಕೆಯನ್ನು ಹಾಸಿ, ಲಿಂಗಪೂಜೆಯನ್ನು ಮಾಡುತ್ತ ಅದರಲ್ಲಿಯೇ ಮಗ್ನನಾದನು.

ಹೀಗಿರಲು ಆಕಾಶದಲ್ಲಿ ಮೋಡಗವಿಯಿತು. ಸ್ವಲ್ಪ ವೇಳೆಯಲ್ಲಿ ಗಗನವು ಇಬ್ಭಾಗವಾಗುವದೋ ಏನೋ ಅನ್ನುವಂತೆ ಮಳೆಯು ಭೋರ್ಗರೆಯಹತ್ತಿತು. ಮೂರು ಜಾವದ ವರೆಗೂ ಅದು ಒಂದೇಸವನೇ ಸುರಿಯಿತು. ಆದರೆ ಗಜೇಶ ಮಸಣಯ್ಯನಿಗೆ ಅದರ ಅರಿವು ಆವುದೂ ಇರಲಿಲ್ಲ. ಅವನ ಶರೀರದ ಮೇಲೆ ಮಳೆ ಹನಿಗಳ ಬಲವಾದ ಹೊಡೆತಗಳು ಬೀಳುತ್ತಿದ್ದವು. ಅವನ ವಸ್ತ್ರಗಳು ನೆನೆದು ಹೋದವು. ಆದರೆ ಚಳಿಯೂ ಗಾಳಿಯೂ ಅವನಿಗೆ ಏನೂ ಅನಿಸಲಿಲ್ಲ. ಅವನು ಆ ಸ್ಥಳದಿಂದ ಕದಲಲಿಲ್ಲ. ಲಿಂಗಧ್ಯಾನದಲ್ಲಿ ಮಗ್ನನಾಗಿ ನಿಬ್ಬೆರಗಾಗಿ ಕುಳಿತು ಬಿಟ್ಟಿದ್ದನು. ಹೀಗೆ ಮೂರು ಜಾವಗಳು ಸಂದಿ ಹೋದವು. ಆಗ ನದಿಯ ನೀರು ಏರುತ್ತ ಏರುತ್ತ ಬಂದಿತು. ಅದು ಅವನ ಮೇಲೆ ಮುಸುಕಿ ಬರಹತ್ತಿತು. ಆದರೆ ಬಾಹ್ಯ ಸೃಷ್ಟಿಯು ಇಂಥ ಶಿವಯೋಗಿಗೆ ಏನು ಮಾಡಬಲ್ಲದು? ನದಿಯ ಹರಿಯುವ ನೀರು ಅವನನ್ನು ಸಮೀಪಿಸದೆ ಅವನ ಮಗ್ಗುಲಿನಿಂದ ಹಾಯ್ದು ಹೋಗಹತ್ತಿತು. ಮಸಣಯ್ಯನಲ್ಲಿದ್ದ ಲಿಂಗ ಶಕ್ತಿಯು ಅದನ್ನು ಬೇರೆ ಕಡೆಗೆ ನೂಕಿಬಿಟ್ಟಿತು. ಮುಂದೆ ಸ್ವಲ್ಪ

ಹೊತ್ತಿನಲ್ಲಿ ನದಿಯ ನೀರು ಹೆಚ್ಚೆಚ್ಚಾಗಿ ಬರಲು, ಅದು ಅವನ ಮೇಲೆ ಹಾಯ್ದು ಹೋಗದೆ ಅವನ ಹಿಂದೆ ಬಂದ ಕೂಡಲೆ ಅದು ಒಡೆದು ಇಬ್ಭಾಗವಾಗಿ ಅವನ ಸುತ್ತಲೂ ಎರಡು ಟಿಸಿಲುಗಳಾಗಿ ಹರಿದು ಹೋಗಿ, ಮುಂದೆ ಅವು ಪುನಃ ಕೂಡಿ ಹರಿದು ಹೋಗುತ್ತಿದ್ದವು. ಹೀಗೆ ನದಿಯು ತಾಳಮರದುದ್ದವಾಗಿ ಹರಿಯುತ್ತಿದ್ದರೂ ಅದು ಅವನ ಮೇಲೆ ಹಾಯದೆ ಮಗ್ಗುಲಿನಿಂದ ಹರಿದುಹೋಗುತ್ತಿತ್ತು. ಇದನ್ನು ಸಮೀಪದ ಜನರು ನೋಡಿ ಅಚ್ಚರಿಗೊಂಡು, 'ಹರಪೂಜೆಯಲ್ಲಿರುವ ಭಕ್ತನಿಗೆ ಶರಧಿಯಂಜುವದೆ'ಂಬ ನಾಣ್ನುಡಿಯು ಇಂದು ದಿಟವಾಯಿತು ಎಂದು ಕೊಂಡಾಡಿದರು. ಕೆಲವು ಹೊತ್ತಿನ ಮೇಲೆ ಮಸಣಯ್ಯನಿಗೆ ಎಚ್ಚರಾಗಲು ಅವನಿಗೆ ನಡೆದ ಸಂಗತಿಗಳು ತಿಳಿದು ಬರಲು ಅದು ಕನಸಿನಲ್ಲಿದ್ದಂತೆ ಅವನಿಗೆ ಭಾಸವಾಯಿತು. ಹೀಗೆ ಮಸಣಯ್ಯನು ಲೋಕದಲ್ಲಿ ಆಚರಿಸುತ್ತ ಲಿಂಗಾಚರಣೆಯಂತೆ ನಡಿಯುತ್ತ ಲಿಂಗಾಂಗ ಸಾಮರಸ್ಯವನ್ನು ಹೊಂದಿದನು.

ಮಸಣಯ್ಯನು ಲಿಂಗದೊಡನೆ ಸತಿಪತಿ ಭಾವದಿಂದ ಆಚರಿಸುತ್ತ ಹೀಗೆ ಸಾಮರಸ್ಯವನ್ನು ಹೊಂದಿದ್ದಾನೆ. ಅವನು ವಚನಕಾರನಿದ್ದಾನೆ. ಅವನ ವಚನಗಳು ಅತ್ಯಂತ ಶ್ರೇಷ್ಠತರವಾದವುಗಳು. ಅವನ ೫೯ ವಚನಗಳನ್ನು ನಾವು ಶಿವಾನುಭವ ಗ್ರಂಥಮಾಲೆಯಲ್ಲಿ ಪ್ರಸಿದ್ಧಿಸಿದ್ದೇವೆ. ಅವೆಲ್ಲವೂ ಸತಿಪತಿ ಭಾವದ ವಚನಗಳು. ಮಹಾದೇವಿಯಕ್ಕನ ವಚನಗಳಂತೆಯೇ ಅವು ಸೌಂದರ್ಯವುಳ್ಳವಾಗಿವೆ. ವಿಶ್ವದ ಸೌಂದರ್ಯವನ್ನು ಅವನು ಕಂಡವನಾಗಿ, ವಿಶ್ವದಲ್ಲಿ ಅವನು ಲಿಂಗವನ್ನು ಕಾಣುತ್ತಾನೆ. ವಿಶ್ವ ಶಕ್ತಿಯು ಅವನಲ್ಲಿ ಬೆರೆದು ಹೋದಂತೆ ಅವನ ವಚನಗಳಲ್ಲಿ ಭಾಸವಾಗುತ್ತದೆ. ಇಷ್ಟು ಭಾವ ಪೂರ್ಣವು ಅವಾಗಿರುತ್ತವೆ.

ಗಜೇಶಮಸಣಯ್ಯನ ಹೆಸರು ಗಣಸಹಸ್ರದಲ್ಲಿ ಬಂದಿದೆ. ಅವನು ಬಹುಶಃ ಬಸವೇಶ್ವರನ ಕಾಲದವನು. ಅವನ ವಚನಗಳನ್ನು ಹಿಂದಿನ ಕಾಲದ ವಚನಸಂಗ್ರಹಕಾರರು ಯಾವಾಗಲೂ ಉದಹರಿಸುತ್ತ ಬಂದಿದ್ದಾರೆ. ಇಷ್ಟು ಅವು ಮಹತ್ವದವಾಗಿವೆ. ಅವನ ಭಾಷೆಯು ಬಲು ಮೋಹಕವಾದದ್ದು, ಸವಿಯಾದದ್ದು, ಮೃದುವಾದದ್ದು. ಕನ್ನಡ ನುಡಿಯ ಸವಿಯು ಅವನ ವಚನಗಳಲ್ಲಿ ತುಂಬಿತುಳುಕುತ್ತದೆ. ಅವನ ಕೆಲವು ವಚನಗಳನ್ನು ಮಾದರಿಗಾಗಿ ಕೆಳಗೆ ಉದಹರಿಸುತ್ತೇವೆ.

ಶಿವಾನುಭವ

ವರ್ಷ ೨೦	ಜನೆವರಿ ೧೯೪೬.	ಸಂಚಿಕೆ ೪

ನಮ್ಮ ಪಾಠಶಾಲೆಗಳು.

(ಲೇಖಕ—ಓರ್ವ ಶಿಕ್ಷಕ)

ಪಾಠಶಾಲೆಗಳು.

ವೀರಶೈವ ಸಂಸ್ಕೃತ ಪಾಠಶಾಲೆಗಳು ಅನೇಕ ಸ್ಥಳಗಳಲ್ಲಿ ಸ್ಥಾಪಿತವಾಗಿರುವವಷ್ಟೇ! ಅವುಗಳ ಮುಖ್ಯ ಗುರಿಯೇನು? ವೀರಶೈವ ಸಂಸ್ಕೃತಿ ಮತ್ತು ಮತ ತತ್ವಗಳು ವಿದ್ಯಾರ್ಥಿಗಳಲ್ಲಿ ಅಳವಡುವಂತೆ ಮಾಡುವದೇ ಅವುಗಳ ಮುಖ್ಯ ಧ್ಯೇಯವು. ಸಂಸ್ಕೃತಿಯೆಂದರೆ ವ್ಯವಹಾರ ಕೌಶಲ್ಯ. ತಮ್ಮ ಸಮಾಜದಲ್ಲಿ ಕುಶಲತನದಿಂದ ನಡೆದುಕೊಂಡು ಪ್ರಪಂಚವನ್ನು ಸುಗಮವಾಗಿಯೂ ಸುಖರೂಪವಾಗಿಯೂ ಸಾಗಿಸಿಕೊಂಡು ಹೋಗುವಂತೆ ಬಾಲಕರನ್ನು ಸಮರ್ಥರನ್ನಾಗಿ ಮಾಡುವದೇ ಮುಖ್ಯೋದ್ದೇಶ.

ನಮ್ಮ ಸಮಾಜವು ಪ್ರಪಂಚದ ಎಲ್ಲತರಹದ ಕಸಬು ಕಾಯಕಗಳನ್ನು ಮಾಡುವ ಜನರಿಂದ ಸರ್ವಾಂಗ ಸುಂದರವಾಗಿ ಪರಿಶೋಭಿಸುತ್ತದೆ. ಅವರು ತಮ್ಮ ಕಾಯಕಗಳಲ್ಲಿ ಒಳ್ಳೆ ತಜ್ಞತೆಯನ್ನು ಪಡೆದು ಪ್ರಪಂಚದ ಸುಖೋಪಭೋಗಗಳನ್ನು ಯಥೇಚ್ಛವಾಗಿ ಭೋಗಿಸುತ್ತ ಸಮಾಜದ ಅಭಿವೃದ್ಧಿಗಾಗಿ ತನುಮನಧನಗಳಿಂದ ಸೇವೆಯನ್ನು ಸಲ್ಲಿಸುವದೇ ಸಂಸ್ಕೃತಿಯ ರಹಸ್ಯವು. ಪಾಠಶಾಲೆಗಳಲ್ಲಿ ಇಂಥ ಸಂಸ್ಕೃತಿಗೆ ಪ್ರಥಮ ಸ್ಥಾನವಿರತಕ್ಕದ್ದು. ಪಾಠಶಾಲೆಗಳಲ್ಲಿ ಹಳೇ ಪದ್ಧತಿಯ ಕಸಬು ಕಾಯಕಗಳಿಗೆ ಹೊಸತರದ ಮೆರಗನ್ನು ಕೊಟ್ಟು ಈಗಿನ ಪ್ರಪಂಚಕ್ಕೆ

ಅನುಗುಣವಾಗಿ ತಮ್ಮ ಕಾಯಕಗಳನ್ನು ಮೂರ್ಪಡಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಸೌಕರ್ಯಗಳನ್ನು ಒದಗಿಸಿಕೊಡುವದೇ ಪಾಠಶಾಲಾ ಚಾಲಕರ ಮುಖ್ಯ ಕರ್ತವ್ಯ. ಉದಾಹರಣಾರ್ಥವಾಗಿ ಹಳ್ಳಿಗಳಲ್ಲಿ ಒಕ್ಕಲತನ, ನೇಕಾರಿಕೆ, ಕುಂಬಾರಿಕೆ, ಕಂಬಾರಿಕೆ, ಬಡಿಗತನ, ಸಿಂಪಿಗತನ, ಅಂಗಡಿ ವ್ಯವಹಾರ, ಮೊದಲಾದ ಒಂದಿಲ್ಲೊಂದು ಉದ್ಯೋಗಗಳು ಇದ್ದೇ ಇರುತ್ತವೆ. ಊರೊಳಗೆ ಆಯಾಯ ಕಸಬುಗಳಲ್ಲಿ ತಜ್ಞನಾದವನನ್ನು ಆರಿಸಿ ಕಸಬುದಾರರ ಮಕ್ಕಳಿಗೆ ಆಯಾಯ ಶಿಕ್ಷಣವನ್ನು ಕೊಡಿಸಬೇಕು. ಸಮಾಜದವರು ಅಂಥ ತಜ್ಞನನ್ನು ಬೇರೆ ಕಡೆಗೆ ಕಳಿಸಿ ಯೋಗ್ಯ ಶಿಕ್ಷಣವನ್ನು ಕೊಡಿಸಿದರೆ ಊರೊಳಗೆ ಅವರು ಕುಶಲ ಶಿಕ್ಷಕರಾಗಿ ಕೆಲಸಮಾಡುವರು.

ಅದೇ ಮೇರೆಗೆ ವೀರಶೈವ ಮತತತ್ವಗಳನ್ನು ಚನ್ನಾಗಿ ಅಭ್ಯಾಸ ಮಾಡಿ ಅವುಗಳಲ್ಲಿ ಕೌಶಲ್ಯವನ್ನು ಪಡೆದ ಪಂಡಿತರಿಂದ ಶಿಕ್ಷಣವನ್ನು ಕೊಡಿಸಬೇಕು. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ನೂರೊಂದುಸ್ಥಲ ಸಕೀಲಸಂಬಂಧಗಳು ಮೊದಲಾತ ಮತ ತತ್ವಗಳನ್ನು ಪ್ರತಿಪಾದಿಸುವ ಗ್ರಂಥಗಳೆಂದರೆ, ವಚನಗಳು-ಶತಕಗಳು—ಕೈವಲ್ಯಗಳು—ಸಂಸ್ಕೃತಾಗಮಗಳು—ಪುರಾಣಗಳು ಆಗಿರುತ್ತವೆ. ಅವುಗಳ ಅಭ್ಯಾಸವನ್ನು ವಿದ್ಯಾರ್ಥಿಗಳಿಗೆ ಕ್ರಮದಿಂದ ಮಾಡಿಸುತ್ತ ಹೋದರೆ ವಿದ್ಯಾರ್ಥಿಗಳಲ್ಲಿ ತಮ್ಮ ಮತತತ್ವಗಳರಿವುಂಟಾಗುವದು. ಸ್ವಮತದಬಗ್ಗೆ ಅಭಿಮಾನವುಂಟಾಗುವದು. ಸಂಸ್ಕೃತವು ಸನಾತನ ಭಾಷೆಯಿದ್ದು ಅವುಗಳಲ್ಲಿ ಉತ್ತಮ ಸಾಹಿತ್ಯ ಗ್ರಂಥಗಳೂ ಉಪನಿಷತ್ತು, ಆಗಮ, ಭಗವದ್ಗೀತೆ ಮೊದಲಾದ ತತ್ವ ಗ್ರಂಥಗಳೂ ಇರುವವರಿಂದ ತುಲನಾತ್ಮಕ ದೃಷ್ಟಿಯ ಅಭ್ಯಾಸಕ್ಕೆ ಆ ಭಾಷೆಯನ್ನು ಪಾಠಶಾಲೆಗಳಲ್ಲಿ ತಕ್ಕಮಟ್ಟಿಗೆ ಕಲಿಸುವದು ಅವಶ್ಯಕ. ಅದರಂತೆ ಹಿಂದೀಭಾಷೆಯು ರಾಷ್ಟ್ರಭಾಷೆಯಾದ್ದರಿಂದ ಅದನ್ನು ನಿರಾಕರಿಸಿದೆ ಆ ಭಾಷೆಯು ತಿಳಿಯುವ ಮಟ್ಟಿಗೆ ಅಂದರೆ ಅದರ ಪ್ರಥಮಾ ಪರೀಕ್ಷೆಯನ್ನು ಮಾಡಿಸುವದಾದರೂ ವಿಹಿತವೇ ಆಗಿದೆ. ಇನ್ನು ಇಂಗ್ಲಿಷು ಆಳರಸರ ಭಾಷೆಯಿದ್ದು ಈಗಿನ ರಾಜಕೀಯ ವ್ಯವಹಾರಕ್ಕೆ ಅದು ಅವಶ್ಯ ಬೇಕಾದ್ದರಿಂದ ಅದರ ಅಭ್ಯಾಸವನ್ನಾದರೂ 'ಮ್ಯಾಟ್ರಿಕ್'ದವರೆಗೆ ಮಾಡಿಸುವದು ಉಪಯುಕ್ತವೆಂದು ತಿಳಿಯಬೇಕು. ಇವೆಲ್ಲ ಸಂಗತಿಗಳನ್ನು ಲಕ್ಷಿಸಿ ಒಂದು ಸನಾತನವಾದ ಯೋಜನೆಯನ್ನು ಗೊತ್ತುಪಡಿಸಿ

ಎಲ್ಲ ಪಾಠಶಾಲೆಗಳು ಅದನ್ನು ಅನುಸರಿಸಿ ನಡೆದರೆ ಸಮಾಜಕ್ಕೆ ಹಿತಕರ. ಈಗಿನ ಪಾಠಶಾಲೆಗಳಲ್ಲಿ ಕಂಡುಬರುವ ವೈವಿಧ್ಯವು ಹೋಗಿ ಅವುಗಳಲ್ಲಿ ಏಕೀಭಾವವುಂಟಾಗುವಂತೆ ಸಮಾಜದ ಮುಂದಾಳುಗಳು ಪ್ರಯತ್ನಿಸಬೇಕು.

ಈಗಿನ ಪಾಠಶಾಲೆಗಳ ಪರಿಸ್ಥಿತಿ.

ಸದ್ಯಕ್ಕೆ ನಾವು ಈಗಿನ ಪಾಠಶಾಲೆಗಳ ಪರಿಸ್ಥಿತಿಯನ್ನಷ್ಟು ಅವಲೋಕಿಸೋಣ. ನಮ್ಮವರು ಹುಬ್ಬಳ್ಳಿ-ಯಾದಗಿರಿಗಳಲ್ಲಿ ಸಂಸ್ಕೃತ ಕಾಲೇಜಗಳನ್ನು ಸ್ಥಾಪಿಸಿದ್ದಾರೆ. ಅದರಂತೆ ಸೊಲ್ಲಾಪೂರ, ಧಾರವಾಡ, ಬಾಗಲಕೋಟ, ಅಥಣಿ, ಮಹಾಗಾಂವ ಮುಂತಾದ ಅನೇಕ ಸ್ಥಳಗಳಲ್ಲಿ ಸಂಸ್ಕೃತ ಪಾಠಶಾಲೆಗಳುಂಟು. ಮಾಧ್ಯಮಿಕ ಶಾಲೆಗಳಲ್ಲಿ ಇಂಗ್ಲೀಷು ಮುಖ್ಯ ವಿಷಯವಾಗಿರುವಂತೆ ಪಾಠಶಾಲೆಗಳಲ್ಲಿ ಸಂಸ್ಕೃತವು ಮುಖ್ಯ ವಿಷಯವಾಗಿದೆ. ನಮ್ಮ ಸಂಸ್ಕೃತ ಕಾಲೇಜ ಪಾಠಶಾಲೆಗಳಲ್ಲಿ ವೀರಶೈವ ಸಂಸ್ಕೃತಿ ಮತತತ್ವಗಳ ಅಧ್ಯಯನಕ್ಕೆ ಲವಲೇಶವಾದರೂ ಅವಕಾಶವಿರದೆ ಅವು ಕಲಕತ್ತಾ, ಬನಾರಸ ವಿದ್ಯಾಪೀಠಗಳಿಗೊಳಪಟ್ಟು ಅಲ್ಲಿಯ ಪರೀಕ್ಷೆಗಳ ಅಭ್ಯಾಸಕ್ರಮವನ್ನು ಸಾಗಿಸಿರುತ್ತವೆ. ಅಲ್ಲಿಯ ಕ್ರಮದ ಪ್ರಕಾರ ಸಾಹಿತ್ಯ-ವ್ಯಾಕರಣ-ನ್ಯಾಯ-ವೇದಾಂತ ಪರೀಕ್ಷೆಗಳಿಗಾಗಿ ವಿದ್ಯಾರ್ಥಿಗಳನ್ನು ಹುರಿಗೊಳಿಸಿ ಕೊನೆಗೆ ಅವರನ್ನು ಶಾಸ್ತ್ರಿಗಳನ್ನು ಮಾಡುವದೇ ಮುಖ್ಯೋದ್ದೇಶವಾಗಿದೆ. ಈ ಶಾಸ್ತ್ರಿಗಳು ಮುಂದೆ ಎಲ್ಲಿಯಾದರೂ ಸ್ವಾವಿುಗಳ ಇಲ್ಲವೆ ಊರೊಳಗಿನ ಪ್ರಮುಖರ ಆಶ್ರಯವನ್ನು ಹೊಂದಿ ಅಲ್ಲಿ ಒಂದು ಪಾಠಶಾಲೆಯನ್ನು ಸ್ಥಾಪಿಸುವರು. ಅವರಿಗೆ ವೇತನವು ಸರಿಯಾಗಿ ನಡೆಯುವ ತನಕ ಪಾಠಶಾಲೆಗಳು ಹಾಗೂ ಹೀಗೂ ನಡೆಯುವವು. ಒಪ್ಪೊತ್ತು ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಜೀರ್ಣಿಸುತ್ತ ಹೋದರಂತೂ ಪಾಠಶಾಲೆಗಳು ನಾಮಶೇಷವಾಗುವವು. ಇಂಥ ಪಾಠಶಾಲೆಗಳಿಪ್ಪೋ ಹುಟ್ಟಿ ಬೆಳೆದು ಅಲ್ಪಾವಧಿಯಲ್ಲಿಯೇ ನಿಂತುಹೋದ ಉದಾಹರಣೆಗಳಿಪ್ಪೋ ಇವೆ. ಅನೇಕ ಶಾಸ್ತ್ರಿಗಳು ಉದರನಿರ್ವಾಹಕ್ಕೆ ಉಪಾಯವಾಣದೆ ಅನ್ನಾನ್ನಗತಿಕರಾಗಿದ್ದಾರೆ. ಇಂಗ್ಲಿಷ ಕಲಿತವರು ನೌಕರಿ ದೊರೆಯದೆ ಯಾವ ರೀತಿಯಿಂದ ತೊಳಲುತ್ತಿರುವರೋ ಅದೇ ರೀತಿಯಾಗಿ ಸಂಸ್ಕೃತ ಶಾಸ್ತ್ರಿಗಳ ಹಾಡೂ ಆಗಿದೆ.

ಪಾಠಶಾಲೆಗೆ ಬರುವ ವಿದ್ಯಾರ್ಥಿಗಳೆಂದರೆ ಮಠಸ್ಥರ ಮಕ್ಕಳು. ಅವರಿಗೆ ಕನ್ನಡ ಸಹ ಚೆನ್ನಾಗಿ ಬರುತ್ತಿರುವದಿಲ್ಲ. ವ್ಯಾಕರಣ ಜ್ಞಾನ ವಂತೂ ಎಳ್ಳಷ್ಟಿರುವದಿಲ್ಲ. ಅವರು ಒಮ್ಮೊಮ್ಮೆ ಪಾಠಶಾಲೆಗೆ ಬಂದು ಗಿಳಿಗಳಂತೆ ಅಮರಕೋಶವನ್ನು ಬಾಯಿಪಾಠ ಮಾಡಹತ್ತುವರು. ತಿಳಿಯದ ವ್ಯಾಕರಣದ ನೇಮಗಳನ್ನೂ ಶ್ಲೋಕಗಳ ಅರ್ಥವನ್ನೂ ಗಟ್ಟಿ ಮಾಡಿ ಒಪ್ಪಿಸುವರು. ಪಾಠಶಾಲಾ ಶಿಕ್ಷಣವು ಹುಡುಗರ ಬುದ್ಧಿವಿಕಾಸಕ್ಕೆ ಆಸ್ಪದ ಕೊಡದೆ ಕೇವಲ ಕಂಠ ಪಾಠವನ್ನು ಮಾತ್ರ ಹೆಚ್ಚಿಸುವಪಾಗಿರುತ್ತದೆ. ಕಂಠಪಾಠವು ಒಂದು ರೀತಿಯಿಂದ ಯೋಗ್ಯವೆಂದು ತಿಳಿಯಲ್ಪಟ್ಟರೂ ಅರ್ಥದ ಮರ್ಮವನ್ನರಿಯದ ಬಾಯಿಪಾಠವು ವ್ಯರ್ಥವೆಂದೇ ಹೇಳಬೇಕು. ಇಂಥ ಶಿಕ್ಷಣ ಕೊಡುವದರಿಂದ ವಿದ್ಯಾರ್ಥಿಗಳಿಗೆ ಯಾವ ತರಹದ ಲಾಭವೂ ಆಗದು. ಆಧುನಿಕ ಹೊಸಪದ್ಧತಿಯ ಮೇರೆಗೆ ಅವರಿಗೆ ಶಿಕ್ಷಣ ಕೊಡತಕ್ಕದ್ದು.

ಪಾಠಶಾಲೆಗಳಲ್ಲಿ ನಮ್ಮ ಮಾತೃಭಾಷೆಯಾದ ಕನ್ನಡಕ್ಕೆ ಪ್ರಾಮುಖ್ಯವಾವ ಸ್ಥಾನವಿರತಕ್ಕದ್ದು. ಅದರಲ್ಲಿಯ ಸಾಹಿತ್ಯ ಮತತತ್ವಗಳ ಪರಿಚಯವು ವಿದ್ಯಾರ್ಥಿಗಳಿಗೆ ಹೆಚ್ಚಾಗಬೇಕು. ಬರೇ ಮಠಸ್ಥರ ಮಕ್ಕಳಿಗೇಕೆ? ಎಲ್ಲ ವರ್ಗದ ಭಕ್ತರ ಮಕ್ಕಳಿಗೂ ಪಾಠಶಾಲೆಗಳಲ್ಲಿ ಪ್ರವೇಶ ದೊರೆಯಬೇಕು. ವೀರಶೈವ ಇತಿಹಾಸ ಸಂಶೋಧನೆಯ ಕಡೆಗೆ ವಿದ್ಯಾರ್ಥಿಗಳ ದೃಷ್ಟಿಕೋನವನ್ನು ಹೊರಳಿಸಬೇಕು. ನಮ್ಮಲ್ಲಿರುವ ಸಂಸ್ಕೃತ ಸಾಹಿತ್ಯವನ್ನು ತಿಳಿದುಕೊಳ್ಳುವ ಮಟ್ಟಿಗೆ ಮಾತ್ರ ನಮಗೆ ಸಂಸ್ಕೃತ ಬಂದರೆ ತೀರಿತು. ನಮ್ಮ ಮತಗ್ರಂಥಗಳು ಸಂಸ್ಕೃತದಲ್ಲಿ ವಿಶೇಷವಾಗಿರದೆ ಕನ್ನಡದಲ್ಲಿ ವೆಗ್ಗಳವಾಗಿರುವವು. ಅದಕ್ಕಾಗಿ ಕನ್ನಡವು ನಮಗೆ ಮುಖ್ಯವಲ್ಲದೆ ಸಂಸ್ಕೃತವಲ್ಲ. ಬ್ರಾಹ್ಮಣರ ಧರ್ಮಗ್ರಂಥಗಳೆಲ್ಲ ಸಂಸ್ಕೃತದಲ್ಲಿರುವದರಿಂದ ಅವರಿಗೆ ಸಂಸ್ಕೃತ ಭಾಷೆಯು ಒಂದು ವೇಳೆ ಮುಖ್ಯವಾಗಬಹುದು. ಆದರೆ ನಮಗೆ ಅದು ಗೌಣವಾಗಿದೆ. ಗೌಣವಾದುದಕ್ಕೆ ಪ್ರಾಮುಖ್ಯತೆಯನ್ನು ಕೊಡುವದು ಯೋಗ್ಯವಲ್ಲ. ನಮ್ಮವರು ನ್ಯಾಯ, ವ್ಯಾಕರಣ, ವೇದಾಂತ ಪರೀಕ್ಷೆಗಳನ್ನು ಕಟ್ಟುವದು ಸಮಂಜಸ ಕಾಣುವದಿಲ್ಲ. ಅದರಿಂದ ಯಾವ ಇಹಪರಗಳೂ ಸಾಧಿಸವು. ಸಮಾಜಕ್ಕೂ ವ್ಯಕ್ತಿಗೂ ಆ ಪರೀಕ್ಷೆಗಳಿಂದ ಯಾವ ಲಾಭವೂ ಇಲ್ಲ. ಆದ್ದರಿಂದ ನಮ್ಮವರು ಆ ಪರೀಕ್ಷೆಗಳಿಗೆ ಶರಣು ಹೊಡೆಯುವದೇ ಮುಖ್ಯ ಕೆಲಸ.

ಇನ್ನು ಮೇಲೆ ಪಾಠಶಾಲೆಗಳ ಹಾಗೂ ಸಂಸ್ಕೃತ ಕಾಲೇಜಗಳ ಅಭ್ಯಾಸಕ್ರಮದಲ್ಲಿ ಸ್ವತಂತ್ರವಾದ ಹೊಸ ಮಾರ್ಪಾಟುಗಳಾದ ಹೊರತು ಗತ್ಯಂತರವಿಲ್ಲ. ಕಲಕತ್ತಾ, ಬನಾರಸ ವಿದ್ಯಾಲಯಗಳಿಗೇಕೆ ನಮ್ಮವರು ಅಧೀನರಾಗಬೇಕು? ಸ್ವತಂತ್ರರೇಕಾಗಬಾರದು? ಅಂಥ ಕರ್ತೃತ್ವಶಕ್ತಿಯು ನಮ್ಮಲ್ಲಿಲ್ಲವೇ ಹೇಗೆ? ಈ ಪ್ರಶ್ನೆಯನ್ನು ನಮ್ಮ ಸಂಸ್ಕೃತ ಪಂಡಿತರ ಹಾಗೂ ಶಾಸ್ತ್ರಿಗಳ ಅವಗಾಹನೆಗಾಗಿ ನಾನು ಎತ್ತಿದ್ದೇನೆ. ಅವರು ಸಾರಾಸಾರ ವಿಚಾರ ಮಾಡಬೇಕು. ವೀರಶೈವ ಮತಭಾಷೆಯು ಸಂಸ್ಕೃತವಲ್ಲ, ಕನ್ನಡವೆಂಬುದನ್ನು ಎಲ್ಲರೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆದ್ದರಿಂದ ಪಾಠಶಾಲೆಗಳಲ್ಲಿ ಕನ್ನಡಕ್ಕೆ ಅಗ್ರಸ್ಥಾನವನ್ನಿತ್ತು ಸಂಸ್ಕೃತಕ್ಕೆ ಗೌಣಸ್ಥಾನವನ್ನೀಯುವದು ವಿಹಿತ.

ಇನ್ನು ಮೇಲೆ ಸಂಸ್ಕೃತ ಪಾಠಶಾಲೆಗಳ ತಳಹದಿಯನ್ನು ವೀರಶೈವ ಮತ ತತ್ವಗಳಿಗನುಗುಣವಾಗಿ ಹಾಕಿದರೆ ಕರ್ನಾಟಕದಲ್ಲಿ ಪ್ರಾಥಮಿಕ-ಮಾಧ್ಯಮಿಕ-ಉಚ್ಚಶಿಕ್ಷಣದ ವಿದ್ಯಾಲಯಗಳು ನಮ್ಮವೇ ಆಗುವವು. ಅಂಥ ಯೋಜನೆಯನ್ನು ಮಾಡುವದು ವೀರಶೈವ ಮುಖಂಡರ ಮುಖ್ಯ ಕರ್ತವ್ಯ. ನಾವು ನಮ್ಮದೇ ಆದ ಒಂದು ವಿದ್ಯಾಪೀಠವನ್ನು ಮಾಡಿಕೊಂಡು ಈಗಿನ ನಿರುಪಯೋಗಿಯಾದ ಇಂಗ್ಲಿಷ ಹಾಯಸ್ಕೂಲು ಕಾಲೇಜಗಳ ಶಿಕ್ಷಣಕ್ಕೆ ಶರಣು ಹೊಡೆಯಬಹುದು. ಆದರೆ ನಮ್ಮ ಪಾಠಶಾಲೆಗಳ ಉದ್ದೇಶ ಧ್ಯೇಯಗಳನ್ನು ಮಾರ್ಪಡಿಸಿ ಅವುಗಳಿಗೆ ಹೊಸ ಸ್ವರೂಪವನ್ನ ಮಾತ್ರ ಕೊಡಬೇಕಾಗುತ್ತದೆ. ಈ ಕಲ್ಪನೆಯು ಅನೇಕರಿಗೆ ವಿಲಕ್ಷಣವೆನಿಸಬಹುದು. ಇಂಥ ಯೋಜನೆಯು ಅಸಾಧ್ಯವಾಗಿ ತೋರಬಹುದು. ಆದರೂ ಸಮಾಜದ ಮುಂದಾಳುಗಳು ಪ್ರಯತ್ನಬಟ್ಟರೆ ಅದು ಸುಲಭವಾಗಿ ನೆರವೇರಬಹುದು. ಸಮಾಜವು ಮೊದಲಿನಂತೆ ತನ್ನ ಸಂಸ್ಕೃತಿ ಮತತತ್ವಗಳ ಪ್ರಕಾಶದಿಂದ ಪುನಃ ತಲೆಯೆತ್ತಿ ಮೆರೆಯಬಹುದು.

ಮಠವೇ ಪಾಠಶಾಲೆ.

ವೀರಶೈವರಿಗೆ ಪ್ರತಿಯೊಂದು ಹಳ್ಳಿಯಲ್ಲಿ ಸ್ವಾಮಿಗಳಿರಲಿ, ಇಲ್ಲದಿರಲಿ, ವಿರಕ್ತ ಮಠವು ಬಹುಶಃ ಇರುತ್ತದೆ. ಅಲ್ಲಿ ಪ್ರಾಪಂಚಿಕರು ಸಂಸಾರ

ಮಾಡಬಾರದು. ಮಾಡಿದರೆ ಅವರ ವಂಶವು ನಷ್ಟವಾಗುವದು. ಯಾಕಂದರೆ ಮಠವು ವಿದ್ಯಾರ್ಥಿಗಳ ನಿಲಯವು, ಪ್ರಾಪಂಚಿಕರ ಮನೆಯಲ್ಲ. ಅಲ್ಲಿ ವಿದ್ಯಾರ್ಥಿಗಳು ವಾಸಮಾಡಿಕೊಂಡಿರಬೇಕು. ಅವರಿಗೆ ಊಟದ ವ್ಯವಸ್ಥೆಯನ್ನು ಅಲ್ಲಿಯೇ ಮಾಡಿಸಬೇಕು. ವಾರದ ಮನೆಗಳನ್ನು ಹಚ್ಚಿಕೊಡಬಾರದು. ಹಚ್ಚಿಕೊಟ್ಟರೆ ವಿದ್ಯಾರ್ಥಿಗಳ ಅಭ್ಯಾಸಕ್ಕೆ ತೊಂದರೆಯಾಗುವದು ಮತ್ತು ಅವರ ಶೀಲಕ್ಕೆ ಕುಂದುಬರುವದು. ಆದ್ದರಿಂದ ಪ್ರತಿಯೊಂದು ಮಠವನ್ನು ಪಾಠಶಾಲೆಯನ್ನಾಗಿ ಮಾಡಬೇಕು. ವೀರಶೈವ ಆಚಾರ ವಿಚಾರಗಳನ್ನೂ ಮತತತ್ವಗಳನ್ನೂ ಸಂಸ್ಕೃತಿಯನ್ನೂ ಪ್ರಸಾರಗೊಳಿಸುವದಕ್ಕಾಗಿಯೇ ಹಿಂದಿನ ಹಿರಿಯರು ಮಠಗಳನ್ನು ಸ್ಥಾಪಿಸಿದ್ದಾರೆ. ಆದರೆ ಆ ಮಠಗಳೆಲ್ಲ ಕಾಲಾಂತರದಿಂದ ವ್ಯಕ್ತಿಗಳ ಸೊತ್ತಾಗಿ ಬಿಟ್ಟಿವೆ. ನಿಜವಾಗಿ ಮಠಗಳು ವ್ಯಕ್ತಿಗಳ ಆಸ್ತಿಗಳಲ್ಲ, ಸಮಾಜದ ಸೊತ್ತುಗಳು. ಆ ಮಠದ ಹಕ್ಕು ಬಾಬುಗಳಿಗಾಗಿ ಎಷ್ಟೋ ವ್ಯಕ್ತಿಗಳು ವ್ಯಾಜ್ಯಗಳಿಗಾಗಿ ಸಮಾಜದ ದುಡ್ಡನ್ನು ವ್ಯರ್ಥ ಹಾಳುಮಾಡಿದ ಉದಾಹರಣೆಗಳೆಷ್ಟೋ ಉಂಟು. ವಿದ್ಯಾರ್ಥಿಗಳ ಬದಲು ಆ ಮಠಗಳಲ್ಲಿ ಈಗ ಪ್ರಾಪಂಚಿಕರು ಮಕ್ಕಳು ಮರಿಗಳನ್ನು ಹಡೆದು ಸಂಸಾರ ಮಾಡುತ್ತಿರುವದುಂಟು. ಇದು ತೀರ ಲಾಂಛನಾಸ್ಪದವು. ಆದ್ದರಿಂದ ಹಳ್ಳಿಯ ವಿರಕ್ತ ಮಠಗಳನ್ನೆಲ್ಲ ಪುನರುಜ್ಜೀವನಗೊಳಿಸಿ ಪಾಠಶಾಲೆಗಳನ್ನು ಮಾಡುವದು ಅತ್ಯಾವಶ್ಯಕ.

ಒಬ್ಬ ಸ್ವಾಮಿಗಳ ಆಧೀನದಲ್ಲಿ ಅನೇಕ ಮಠಗಳಿರುವದರಿಂದ ಸ್ವಾಮಿಗಳು ಒಂದೇ ಊರಲ್ಲಿ ನೆಲಿಸಿರುವದಿಲ್ಲ. ಅವರು ಸದಾ ಸಂಚಾರಮಾಡುತ್ತಿರುವರು. ಆದ್ದರಿಂದ ಮಠಗಳು ಹಾಗೇ ಖಾಲಿ ಬಿದ್ದಿರುವವು. ಇಲ್ಲವೆ ಪ್ರಾಪಂಚಿಕರು ಅವುಗಳಲ್ಲಿ ವಾಸಮಾಡುತ್ತಿರುವರು. ಆದ್ದರಿಂದ ಸ್ವಾಮಿಗಳು ತಮ್ಮ ಮಠಗಳನ್ನೆಲ್ಲ ವಿದ್ಯಾಲಯಗಳನ್ನಾಗಿ ಮಾಡುವದು ಶ್ರೇಯಸ್ಕರವು. ಹಾಗೆ ಮಾಡುವ ಕಾಲವು ಈಗ ಬಂದಿದೆ. ತಾವಾಗಿಯೇ ಮಠಗಳನ್ನು ಪಾಠಶಾಲೆಗಳನ್ನು ಮಾಡುವದು ಒಳಿತು. ಇಲ್ಲದಿದ್ದರೆ ಅವು ತಾವಾಗಿಯೇ ಪಾಠಶಾಲೆಗಳಾಗುವವು. ಮಠದ ಸ್ವಾಮಿಗಳು ಹೇಳಿದಂತೆ ಭಕ್ತರೆಲ್ಲರೂ ಕೇಳುವದರಿಂದ ಆ ಊರಲ್ಲಿ ಒಂದು ಪಾಠಶಾಲೆಯು ಸಹಜದಾಗಿ ನಡೆಯುವದು. ಮಠವಿದ್ದರೆ ಸಾಕು. ಪಾಠಶಾಲೆಗೆ ಬೇರೆ ಕಟ್ಟಡದ ಅವಶ್ಯಕತೆಯಿಲ್ಲ. ಆದ್ದರಿಂದ ಸ್ವಾಮಿ

ಗಳು ಇನ್ನು ಸ್ವಾರ್ಥಪರಾಯಣರಾಗಿ ಮಠದ ಉತ್ಪನ್ನವನ್ನು ಬೆಳೆಯಿಸುವ ಗೋಜಿಗೆ ಹೋಗದೆ ಮುಂಜಾಗ್ರತೆಯಿಂದ ತಮ್ಮ ಸರ್ವಸ್ವವನ್ನೆಲ್ಲ ಪಾಠಶಾಲೆಗಾಗಿ ಧಾರೆಯೆರೆಯುವದು ಶ್ರೇಯಸ್ಕರವು. ಹಾಗೆ ಮಾಡದಿದ್ದರೆ ಈಗಿನ ಸಮಾಜವಾದದ ಕ್ರಾಂತಿಕಾಲದಲ್ಲಿ ಮಠಗಳೆಲ್ಲ ಸುಲಭವಾಗಿ ಪಾಠಶಾಲೆಗಳಾಗಬಹುದೆಂಬದನ್ನು ಸ್ವಾಮಿಗಳು ಲಕ್ಷಿಸಬೇಕು.

ಪಾಠಶಾಲೆಗಳ ಘಟನೆ.

ಪಾಠಶಾಲೆಗಳಲ್ಲಿ ಒಂದು ಕ್ರಮಬದ್ಧವಾದ ಘಟನೆಯಿರುವದು ನೆಟ್ಟಗೆ. ಹಳ್ಳಿಗಳ ಎಲ್ಲ ಪಾಠಶಾಲೆಗಳಿಗೂ ಒಂದೇ ಮಾದರಿಯ ಅಭ್ಯಾಸ ಕ್ರಮವನ್ನು ಗೊತ್ತುಪಡಿಸಬೇಕು. ಹಳ್ಳಿಯ ಪಾಠಶಾಲೆಗಳ ಅಭ್ಯಾಸವನ್ನು ಮುಗಿಸಿದ ಬಳಿಕ ವಿದ್ಯಾರ್ಥಿಗಳು ತಾಲೂಕಿನ ಸ್ಥಳಗಳಲ್ಲಿ ಸ್ಥಾಪಿತವಾಗುವ ಪಾಠಶಾಲೆಗಳಿಗೆ ಮುಂದಿನ ಅಭ್ಯಾಸಕ್ಕಾಗಿ ಹೋಗಬೇಕು. ತಾಲೂಕಿನ ಪಾಠಾಶಾಲಾಭ್ಯಾಸವು ಪೂರೈಸಿದ ನಂತರ ವಿದ್ಯಾರ್ಥಿಗಳು ಜಿಲ್ಲಾ ಸ್ಥಳಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಹೆಚ್ಚಿನ ತರಗತಿಯ ಪಾಠಶಾಲೆಗಳಿಗೆ ಅಭ್ಯಾಸವನ್ನು ಮುಂದುವರಿಸಲು ಹೋಗಬೇಕು. ಈ ಪ್ರಕಾರ ಹಳ್ಳಿ-ತಾಲೂಕ-ಜಿಲ್ಲಾ ಪಾಠಶಾಲೆಗಳಿಗೆ ಒಂದು ಸಾಮಾನ್ಯವಾದ ಅಭ್ಯಾಸಕ್ರಮವನ್ನು ಗೊತ್ತುಪಡಿಸಬೇಕು. ಹಳ್ಳಿ-ತಾಲೂಕ-ಜಿಲ್ಲಾ ವಿದ್ಯಾಸಂಸ್ಥೆಗಳಿಗೆ ಅನುಕ್ರಮವಾಗಿ ಪಾಠಶಾಲೆ, ಶಿಕ್ಷಣಾಲಯ, ವಿದ್ಯಾಮಂದಿರ ಎಂಬ ಹೆಸರುಗಳನ್ನು ಕೊಡಬಹುದು. ಇಲ್ಲವೆ ಯುಕ್ತಕಂಡ ಬೇರೆ ಸಾಮಾನ್ಯ ಹೆಸರುಗಳನ್ನು ಕೊಡಬಹುದು. ಈ ಕ್ರಮವು ಮುಂಬಯಿ, ಮದ್ರಾಸ, ಮೈಸೂರು, ನಿಜಾಮ ಪ್ರಾಂತ ಮತ್ತು ಇತರ ದೇಶೀ ಸಂಸ್ಥಾನಗಳಲ್ಲಿರುವ ಆಯಾಯ ಹಳ್ಳಿ-ತಾಲೂಕ-ಜಿಲ್ಲೆಗಳ ವಿದ್ಯಾಸಂಸ್ಥೆಗಳಿಗೂ ಸಮನ್ವಯಿಸಬೇಕು.

ಎಲ್ಲ ಪ್ರಾಂತಗಳ ಅಂದರೆ ಅಖಿಲ ಕರ್ನಾಟಕ ವೀರಶೈವರ ಪರವಾಗಿ ಆಯಾಯ ಪ್ರಾಂತದ ಪ್ರತಿನಿಧಿಗಳಿಂದ ಕೂಡಿದ ಒಂದು ವಿದ್ಯಾಪೀಠ (*University*)ಯನ್ನು ಒಂದು ಮಧ್ಯವರ್ತಿ ಸ್ಥಳದಲ್ಲಿ ಅಂದರೆ ಗದಗಿನಲ್ಲಿ ಸ್ಥಾಪಿಸಬೇಕು. ಈ ವಿದ್ಯಾಪೀಠದವರು ಆಯಾಯ ತರಗತಿಯ ಪಠ್ಯಪುಸ್ತಕ, ಅಭ್ಯಾಸಕ್ರಮ, ಪರೀಕ್ಷೆ, ಗ್ರ್ಯಾಂಟಿನ ಯೋಜನೆ,

ವಿದ್ಯಾರ್ಥಿ ವೇತನ(*Scholarships*) ಪಾರಿತೋಷಕ (*Prizes*) ಸಾಂಪತ್ತಿಕ ಯೋಜನೆ (*Funds*) ಮುಂತಾದವುಗಳ ಏರ್ಪಾಟು ಮಾಡಬೇಕು. ಈ ವಿದ್ಯಾಪೀಠದವರು ಸರಕಾರದಿಂದ ಮತ್ತು ಲೋಕನಿಯುಕ್ತ ಸಂಸ್ಥೆಗಳಿಂದ ವರುವರುಷ ಆಯಾಯ ವಿದ್ಯಾಸಂಸ್ಥೆಗಳಿಗಾಗಿ ವೆಗ್ಗಳವಾಗಿ ಗ್ರಾಂಟನ್ನು ಪಡಕೊಳ್ಳಬೇಕು. ಯಾಕಂದರೆ ಕರ್ನಾಟಕದಲ್ಲಿ ವೀರಶೈವರು ಸರಕಾರಕ್ಕೂ ಲೋಕನಿಯುಕ್ತ ಸಂಸ್ಥೆಗಳಿಗೂ ತೆರಿಗೆ, ಕರಗಳ ರೂಪದಿಂದ ಹೆಚ್ಚಾಗಿ ಹಣವನ್ನು ಸಲ್ಲಿಸುತ್ತಿರುವದರಿಂದ ಆ ಪ್ರಮಾಣವಮೇರೆಗೆ ಅವರು ವೀರಶೈವ ಸಂಸ್ಕೃತಿ ಪ್ರಸಾರಕ್ಕಾಗಿ ಗ್ರಾಂಟ್ ಬೇಡುವ ಹಕ್ಕು ಅವರಿಗುಂಟು. ಆ ಪ್ರಕಾರ ಗ್ರಾಂಟು ಸಲ್ಲಿಸುವದಾದರೂ ಸರಕಾರದ ಮತ್ತು ಲೋಕನಿಯುಕ್ತ ಸಂಸ್ಥೆಗಳ ಆದ್ಯ ಕರ್ತವ್ಯವೇ ಆಗಿದೆ. ಇದಕ್ಕಾಗಿ ಸಮಾಜದ ಮುಂದಾಳುಗಳು ಒಂದೇ ಸವನೆ ಹೋರಾಡಬೇಕು.

(ಮುಂದುವರಿದುದು.)

ವಚನ.

ಸಹಸ್ರಶೀರ್ಷಾ ಪುರುಷಃ। ಸಹಸ್ರಾಕ್ಷ ಸಹಸ್ರಪಾತ್। ಎಂದೆನಿಸುವ ಲಿಂಗದೇವನ ಕಂಡೆನಯ್ಯಾ ಎನ್ನಕರಸ್ಥಲದಲ್ಲಿ. ಸ ಭೂಮಿಂ ವಿಶ್ವತೋ ವೃತ್ವಾ। ಅತ್ಯತಿಷ್ಠದ್ದಶಾಂಗುಲಂ। ಎಂದೆನಿಸುವ ಲಿಂಗದೇವನ ಕಂಡೆನಯ್ಯಾ ಎನ್ನ ಕರಸ್ಥಲದಲ್ಲಿ. ಅಯಂ ಮೆ ಹಸ್ತೋ ಭಗವಾನ್ ಬಸವಲಿಂಗ ಪ್ರಿಯ ಕಟ್ಟಿಯ ಬಸವೇಶ್ವರಾ ಎಂದೆನಿಸುವ ಲಿಂಗದೇವನ ಕಂಡೆನಯ್ಯಾ ಎನ್ನ ಕರಸ್ಥಲದಲ್ಲಿ.

ಮಾದರಿಯ ಮಾಧ್ಯಮಿಕ ಶಾಲೆ.

ಲೇಖಕಃ— ಓರ್ವಶಿಕ್ಷಕ.

(ಹಿಂದಿನಿಂದ ಮುಂದೆ ಸಾಗಿದ್ದು)

ಶಾರೀರಿಕ ಸಂಸ್ಕೃತಿ.

ಮೊದಲು ನಾವು ಬಾಲಕನ ಶಾರೀರಿಕ ಸಂಸ್ಕೃತಿಯ ಕಡೆಗೆ ಗಮನಿಸೋಣ. ಬಾಲಕನು ವ್ಯಾಯಾಮದ ಸಲುವಾಗಿ ಸ್ವಂತ ಅಡ್ಡಾಡಲಿಕ್ಕೆ ಹೋಗಬಹುದು. ಬಾವಿಯಲ್ಲಿ ಈಸಾಡಬಹುದು. 'ಸಾಮು ಔಟಾಜೈಸು'ಗಳನ್ನು ತೆಗೆಯಬಹುದು. ಆದರೆ ಸ್ವಂತಮಾಡುವ ವ್ಯಾಯಾಮವು ಶಾರೀರಿಕ ಶಿಕ್ಷಣವೆನಿಸುವದಿಲ್ಲ. ಅವುಗಳಿಂದ ಬಾಲಕನ ಶರೀರಕ್ಕೆ ಸಾಕಷ್ಟು ವ್ಯಾಯಾಮ ದೊರೆಯುವದೇನೋ ನಿಜ. ಆದರೆ ಶಾರೀರಿಕ ಶಿಕ್ಷಣದಲ್ಲಿ ಕಂಡುಬರುವಂಥ ಗುಣಾಂಶಗಳು ಅಂಥ ವ್ಯಾಯಾಮದಲ್ಲಿ ಕಂಡುಬರಲಾರವು. ಶಾರೀರಿಕ ಶಿಕ್ಷಣದಲ್ಲಿ ಶಿಸ್ತು, ಸಾಮೂಹಿಕ ಭಾವನೆ (*Team spirit*), ನಿಯಮ ಪಾಲನೆ, ಕ್ರೀಡಾಗೌರವ (*Sportsmanship*), ಉತ್ಸಾಹ, ಪಕ್ಷಾಭಿಮಾನ, ಮೊದಲಾದ ಗುಣಗಳು ಆಡುವವರಲ್ಲಿ ಉಂಟಾಗುತ್ತವೆ. ಇದಲ್ಲದೆ ಪಕ್ಷಾಂಧತೆ, ದುಷ್ಟ ಸ್ಪರ್ಧೆ, ನಿಯಮೋಲ್ಲಂಘನ, ದುಡುಕುತನ, ಮೊದಲಾದ ದುಷ್ಪ್ರವೃತ್ತಿಗಳಿಗೆ ಶಾರೀರಿಕ ಶಿಕ್ಷಣದಲ್ಲಿ ಸ್ಥಾನವಿಲ್ಲದಿರುವದರಿಂದ ಅವು ತಾವಾಗಿಯೇ ಕುಗ್ಗಿ ಹೋಗುವವು. ಶಾರೀರಿಕ ಶಿಕ್ಷಕರು ನಿಷ್ಪಕ್ಷಪಾತ ಬುದ್ಧಿಯುಳ್ಳವರಾಗಿ ಆಟದ ಗುಣಾಂಶಗಳನ್ನು ಪ್ರೋತ್ಸಾಹಿಸುತ್ತಲೂ ದೋಷಗಳನ್ನು ಖಂಡಿಸುತ್ತಲೂ ವಿವಿಧ ಆಟಗಳಲ್ಲಿ ಉತ್ಸಾಹ ಮನೋರಂಜನೆಗಳನ್ನು ಹುಟ್ಟಿಸುತ್ತಲೂ ಸಾಗಿದರೆ ಶಾರೀರಿಕ ಶಿಕ್ಷಣವು ವಿದ್ಯಾರ್ಥಿಗಳಿಗೆ ಭಾರವಾಗದೆ ವಿನೋದಕರವಾಗಿ, ಅದು ತಮಗೆ ಅವಶ್ಯವಾಗಿ ಬೇಕೆಂಬ ಸದ್ಭಾವನೆಯು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಒಡಮೂಡುವದು. ಲಾಠಿ, ಲೇಝಿಮ್, ಡಂಬೆಲ್ಸ ಮೊದಲಾದ 'ಕಾಂಡಿಪಲಿ' ಆಟಗಳನ್ನು ಬ್ಯಾಂಡಿನ ಜೊತೆಗೆ ಸಾಗಿಸಿದರೆ ಅದೊಂದು ಒಳ್ಳೇ ಮನೋರಂಜಕ ದೃಶ್ಯವಾಗುವದು. 'ಮಾರ್ಚಿಂಗ್' ಮಾಡುವಾಗ ವೀರಾವೇಶದ ಪದಗಳನ್ನು ಬಾಲಕರು ಉತ್ಸಾಹದಿಂದ ಹಾಡಹತ್ತಿದರೆ ಅವರಿಗೆ ಶಾರೀರಿಕ ಪರಿಶ್ರಮವೇ ಅನಿಸುವದಿಲ್ಲ. ಅದೇ ಮೇರೆಗೆ

'ಕ್ಯಾಂಪ ಫಾಯರ್'ಗಳನ್ನು ಏರ್ಪಡಿಸಿ ವಿವಿಧ ಮನೋರಂಜಕವಾದ ಶಾರೀರಿಕ ಚಟುವಟಿಕೆಗಳನ್ನು ಜನರಿಗೆ ಪ್ರದರ್ಶಿಸಿದರೆ ಅದೆಂಥ ಕಣ್ಣಿನ ಹಬ್ಬವೋ!

ಸ್ಕಾವುಟ್ ಶಿಕ್ಷಣ.

ಶಾರೀರಿಕ ಶಿಕ್ಷಣದ ಜೊತೆಗೆ ಸ್ಕಾವುಟ್ ಶಿಕ್ಷಣವನ್ನು ಸೇರಿಸಿದರೆ ಬಂಗಾರಕ್ಕೆ ಸುಗಂಧವನ್ನು ಬೆರಿಸಿದಂತಾಗುವದು. ಸ್ಕಾವುಟಿನಲ್ಲಿ ಮುಖ್ಯವಾಗಿ ಸ್ವಾವಲಂಬನ, ಪರೋಪಕಾರ, ಧೈರ್ಯ, ಸಾಹಸ ಮೊದಲಾದ ಉಚ್ಚ ಗುಣಗಳು ನೆಲೆಸಿರುತ್ತವೆ. ಉದಾಹರಣಾರ್ಥವಾಗಿ ಬಾಲಕನು ತನ್ನ ಬಟ್ಟೆಯನ್ನು ತಾನೇ ಸ್ವಚ್ಛವಾಗಿ ಒಗೆದುಕೊಂಡು ಇಸ್ತ್ರಿ ಮಾಡಿಕೊಂಡರೆ ಅದೇ ಸ್ವಾವಲಂಬನ; ಬೀದಿಯಲ್ಲಿ ತಪ್ಪಿಸಿಕೊಂಡ ಶಿಶುವನ್ನು ಎತ್ತಿಕೊಂಡು ಅದರ ತಾಯಿತಂದೆಗಳ ಪತ್ತೆ ಹಚ್ಚಿ ಅವರಿಗೆ ಒಪ್ಪಿಸುವದೇ ಪರೋಪಕಾರ; ಯಾವದಾದರೂ ಮನೆಗೆ ಬೆಂಕಿ ಹತ್ತಿದಾಗ ಒಳಗಿನವರ ಜೀವ ಉಳಿಸಲಿಕ್ಕೆ ಮುಂದುವರಿಯುವದು ಧೈರ್ಯ ಸಾಹಸದ ಕೆಲಸವು. ಇಂಥ ಉತ್ತಮ ಗುಣಗಳು ಸ್ಕಾವುಟ ಶಿಕ್ಷಣದಲ್ಲಿ ಅಡಕವಾಗಿರುವದರಿಂದ ಸ್ಕಾವುಟ ಶಿಕ್ಷಕರು ಚಿಕ್ಕ ಮಕ್ಕಳಲ್ಲಿ ಅವು ಬೇರೂರುವಂತೆ ಎಲ್ಲ ತರಹದ ಅವಕಾಶಗಳನ್ನು ಒದಗಿಸಿಕೊಡಬೇಕು.

ಶಾರೀರಿಕ ಸ್ಕೌಟ ಶಿಕ್ಷಣಗಳಿಗೆ ಅನಾದರ.

ಆದರೆ ಈಗಿನ ಬಹುಶಃ ಎಲ್ಲ ಮಾಧ್ಯಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಣ, ಸ್ಕೌವುಟ ಶಿಕ್ಷಣಗಳಿಗೆ ಬಹುಮಟ್ಟಿಗೆ ಅನಾದರವುಂಟಾದದ್ದು ಕಂಡು ಬರುತ್ತದೆ. ಹಾಕಿ, ಫುಟ್‌ಬಾಲ್, ಹಾಲಿಬಾಲ್ ಮೊದಲಾದ ಪಾಶ್ಚಾತ್ಯ ಆಟಗಳು 'ಕಾಂಡಿವಲಿ'ಯ ಆಟಪಾಟಗಳೂ ಏನೋ ಹಳೆಯ ಯಂತ್ರದಂತೆ ಸಾಗಿರುತ್ತವೆ, ಶಾರೀರಿಕ ಶಿಕ್ಷಕರಿಗೆ ಎಲ್ಲವನ್ನೂ ಸಾಗಿಸಿಕೊಂಡು ಹೋಗಲಿಕ್ಕೆ ಶಕ್ಯವಿಲ್ಲ. ಅದಕ್ಕೆ ಉಳಿದ ಶಿಕ್ಷಕರ ಸಹಾಯ ಸಹಕಾರಗಳಿಲ್ಲ. ಶಾರೀರಿಕ ಶಿಕ್ಷಣವು ಪರೀಕ್ಷಾ ವಿಷಯವಲ್ಲದ್ದರಿಂದ ಎಷ್ಟೋ ಶಿಕ್ಷಕರು ಅದರ ಕಡೆಗೆ ಉದಾಸೀನ ಮಾಡುವರು. ಶಿಕ್ಷಕರ ಉದಾಸೀನತೆಯನ್ನು ಕಂಡು ಬಾಲಕರು ಮನೆಯ ಹಾದಿ ಹಿಡಿಯುವರು. ಸ್ಕಾವುಟ ಶಿಕ್ಷಣವಂತೂ ಎಷ್ಟೋ ಶಾಲೆಗಳಲ್ಲಿ ನಾಮಶೇಷವಾ

ಗಿರುವದು. ಶಾಲೆಯಲ್ಲಿ ಕಲಿಸಲ್ಪಡುವ ಅನೇಕ ವಿಷಯಗಳ ತಲೆಭಾರದ ಮೂಲಕ ವಿದ್ಯಾರ್ಥಿಗಳಲ್ಲಿ ಜಿಗಟು ಇಲ್ಲದಂತಾಗಿ ಶಾರೀರಿಕ ಶಿಕ್ಷಣವೆಂದರೆ ಅನೇಕರಿಗೆ ಮೈಗೆ ಮುಳ್ಳೇ ಬಂದಂತಾಗುತ್ತದೆ. ಶಿಕ್ಷಕರಲ್ಲಿ ೧೦೦ಕ್ಕೆ ೯೦ ಜನರು ಶಾರೀರಿಕ ಶಿಕ್ಷಣದ ಬದ್ಧ ವೈರಿಗಳಿರುತ್ತಾರೆ. ಅವರಿಗೆ ಸ್ವಂತ ಶಾರೀರಿಕ ಶಿಕ್ಷಣ ಪಡೆಯುವದು ಬೇಡ. ಹುಡುಗರನ್ನಾಡಿಸುವದೆಂದರೆ ಅವರಿಗೆ ತಲೆಬೇಸರ. ಹುಡುಗರನ್ನು ಆಡ ಹಚ್ಚಿ ಹರಟೆ ಹೊಡೆಯಲಿಕ್ಕೆ ಶಿಕ್ಷಕರ ಕೋಣೆಗೆ ಹೊರಟು ಹೋಗುವರು. ಆದುದರಿಂದ ಯಾವದೇ ಶಿಕ್ಷಣ ಸಂಸ್ಥೆಯವರಾದರೂ ಹೊಸದಾಗಿ ಶಿಕ್ಷಕರನ್ನು ನೇಮಿಸಿಕೊಳ್ಳುವಾಗ ಡಾಕ್ಟರ ಪರೀಕ್ಷೆ ಮಾಡಿಸಿ ಅವರು ೧ ತಿಂಗಳ ಸಶ್ರಮವಾದ ಶಾರೀರಿಕ ಶಿಕ್ಷಣ ಪಡೆದ ನಂತರವೇ ನೇಮಿಸಿಕೊಳ್ಳಬೇಕು. ಅಂದರೆ ದುರ್ಬಲರಾದವರು ಸಾಲೆಯ ಸನಿಹಕ್ಕೆ ಕಾಲಿಡುವದಿಲ್ಲ. ಇದಲ್ಲದೆ ಮಕ್ಕಳ ಶಾರೀರಿಕ ಶಿಕ್ಷಣದಲ್ಲಿ ಯಾವನಾದರೂ ಶಿಕ್ಷಕನು ಭಾಗವಹಿಸುವದಿಲ್ಲೆಂದು ಕಂಡು ಬಂದಲ್ಲಿ ಅಂಥವನಿಗೆ ಮೇಲಧಿಕಾರಿಗಳು ತಕ್ಕ ಶಾಸನವನ್ನು ಮಾಡಲೇಬೇಕು. ಅಂದರೇನೇ ಶಾರೀರಿಕ ಶಿಕ್ಷಣಕ್ಕೆ ಮಹತ್ವ ಬರುವದು. ಸ್ಕಾವುಟ್ ಶಿಕ್ಷಣವು ಈಗ ಕ್ರಮೇಣ ಸಾಯುತ್ತ ನಡೆದಿದ್ದರೂ ಅದರ ಪುನರುಜ್ಜೀವನವಾದರೆ ವಿದ್ಯಾರ್ಥಿಗಳಿಗೆ ಹೆಚ್ಚು ಫಲಪ್ರದವಾದೀತು.

ಹಾಸ್ಟೆಲ್ ಫ್ರೀ ಬೋರ್ಡಿಂಗಗಳು.

ಬಾಲಕನ ಶಾರೀರಿಕ ಶಿಕ್ಷಣಕ್ಕೆ ಅನುಕೂಲವಾಗಿ ಆತನ ಆರೋಗ್ಯದ ಬೆಳವಣಿಗೆಯಾದರೂ ಅವಶ್ಯವಾಗಿರುತ್ತದೆ. ಬಾಲಕನ ಆರೋಗ್ಯಕ್ಕೆ ಸಾತ್ವಿಕ ಹಾಗೂ ಪೌಷ್ಟಿಕ ಆಹಾರವು ಅವಶ್ಯವಾಗಿ ಬೇಕು. ಬಾಲಕರ ತಾಯಿತಂದೆಗಳು ಅದೇ ಊರವರಾಗಿದ್ದರೆ ವಿದ್ಯಾರ್ಥಿಗಳಿಗೆ ಎಂಥ ಊಟ ಕೊಡಬೇಕು, ಎಷ್ಟು ಪ್ರಮಾಣ ಕೊಡಬೇಕು, ಹಾಲು ಎಷ್ಟು ಕೊಡಬೇಕು ಎಂಬ ಸಂಗತಿಗಳನ್ನು ಕಾರ್ಡಿನಲ್ಲಿ ಮುದ್ರಿಸಿ ಕಳಿಸಿಕೊಡಬೇಕು. ಅದರೆ ಪರಸ್ಥಳದಿಂದ ಬಂದ ವಿದ್ಯಾರ್ಥಿಗಳು ಖಾನಾವಳಿಯಲ್ಲಿ ಊಟ ಮಾಡುವದರಿಂದ ಆ ಆಹಾರವು ಅವರ ಆರೋಗ್ಯಕ್ಕೆ ಹಿತಕರವಾಗಲಾರದು. ಆದ್ದರಿಂದ ಯೋಗ್ಯ ಆಹಾರವನ್ನು ಒದಗಿಸಿಕೊಡುವ ಹಾಸ್ಟೆಲುಗಳನ್ನು ಶಾಲೆಗಳಿಗೆ ಜೋಡಿಸುವದು ಅತ್ಯವಶ್ಯಕ. ವಿದ್ಯಾರ್ಥಿಗಳು ಬಡವರಾಗಿದ್ದರೆ ಅಂಥವರಿಗೆ ಫ್ರೀ ಬೋರ್ಡಿಂಗುಗಳ

ಅನುಕೂಲತೆಯನ್ನು ಒದಗಿಸಿಕೊಡಬೇಕು. ಆದರೆ ಅವರಿಗೆ ಕೊಡುವ ಆಹಾರವು ಮಾತ್ರ ಹಾಲು, ತುಪ್ಪ, ಕಾಯಿಪಲ್ಲೆ, ಬೆಲ್ಲ, ಸಕ್ಕರೆ ಮೊದ ಲಾದ ಸಾತ್ವಿಕ ಹಾಗೂ ಪೌಷ್ಟಿಕ ಪದಾರ್ಥಗಳುಳ್ಳದ್ದಾಗಿರಬೇಕು. ಹಾಸ್ಟೆ ಲ್ಲಿನವರು ತಾವು ಶ್ರೀಮಂತರೆಂದು ಅನೇಕ ಮೇಜವಾನಿಗಳಿಗಾಗಿ ತಾಯಿತಂದೆಗಳ ದುಡ್ಡನ್ನು ಅನಾವ್ರಯವಾಗಿ ವೆಚ್ಚ ಮಾಡುವದೆಷ್ಟು ಅನುಚಿತವೋ, ಅಷ್ಟೇ ಫ್ರೀ ಬೋರ್ಡಿಂಗಿನವರು ಬಡವರೆಂದು ತಿರುಕರಿ ಗಿಂತಲೂ ಕಡೆಯಾಗಿ ಊಟ ಹಾಕಿ ಕೆಟ್ಟ ರೀತಿಯಿಂದ ನಡೆಯಿಸಿಕೊ ಳ್ಳುವದೂ ಅನುಚಿತವು. ಆದರೆ ಆ ಬಡಮಕ್ಕಳು ತಮ್ಮ ಮಕ್ಕಳೆಂದೇ ಭಾವಿಸಿ ಅವರ ಪಾಲನ ಪೋಷಣ ಶಿಕ್ಷಣಗಳನ್ನು ಪ್ರೋತ್ಸಾಹಿಸುವದು ಆಯಾಯ ಸಂಸ್ಥೆಗಳ ಚಾಲಕರಿಂಗೂ ಗೌರವ. ಸಮಾಜಕ್ಕೂ ಗೌರವ. ಬರೇ ಊಟದ ಪ್ರಶ್ನೆಯನ್ನು ಬಿಡಿಸಲಿಕ್ಕೆ ಮಾತ್ರ ಹಾಸ್ಟೆಲ್, ಫ್ರೀ ಬೋರ್ಡಿಂಗುಗಳನ್ನು ಸ್ಥಾಪಿಸಬೇಕೆಂದಲ್ಲ. ಬಾಲಕರಲ್ಲಿ ಪರಸ್ಪರ ಕೌಟುಂಬಿಕ ಪ್ರೇಮವನ್ನು ಬೆಳೆಯಲಿಕ್ಕೂ ಅವರಲ್ಲಿ ಸ್ವಚ್ಛತೆ, ಅಚ್ಚು ಕಟ್ಟುತನ, ಶಿಸ್ತುಗಳನ್ನಂಟುಮಾಡಲಿಕ್ಕೂ ಲೆಕ್ಕ ಪತ್ರ ವ್ಯವಹಾರದ ಸಂಗತಿಗಳನ್ನು ಮಾಹಿತಿ ಮಾಡಿಕೊಳ್ಳಲಿಕ್ಕೂ ಅವರಿಗೆ ದುರ್ವ್ಯಸನಗಳು ಅಂಟಿಕೊಳ್ಳದಂತೆ ನೋಡಿಕೊಳ್ಳಲಿಕ್ಕೂ ಉತ್ತಮ ಚಟಗಳ ಅಭ್ಯಾಸಕ್ಕೆ ಅನುವು ಮಾಡಿಕೊಡಲಿಕ್ಕೂ ಹಾಸ್ಟೆಲ್ ಫ್ರೀ ಬೋರ್ಡಿಂಗುಗಳ ಅವಶ್ಯಕ ತೆಯು ಹೆಚ್ಚಾಗಿರುತ್ತದೆ. ಅವರು ಕೂಡಿ ಆಡಬಹುದು, ಕೂಡಿ ಓದ ಬಹುದು, ಕೂಡಿ ವಿಷಯಗಳನ್ನು ಚರ್ಚಿಸಬಹುದು, ಕೂಡಿಕೊಂಡು ದೇವರಿಗೆ ಪ್ರಾರ್ಥನೆ ಮಾಡಬಹುದು. ಈ ಮೇರೆಗೆ ಸಾಮೂಹಿಕ ಜೀವನ ಸೌಂದರ್ಯವು ಪ್ರತಿನಿತ್ಯ ೨೪ ತಾಸುಗಳ ವರೆಗೆ ಬಾಲಕರಿಗೆ ದೊರೆಯುತ್ತದೆ. ಆದ್ದರಿಂದ ಮಾದರಿಯ ಶಾಲೆಗೆ ಹಾಸ್ಟೆಲ್, ಫ್ರೀ ಬೋರ್ಡಿಂಗುಗಳ ಅವಶ್ಯಕತೆಯು ಹೆಚ್ಚಾಗುತ್ತದೆ.

ಶಾಲೆಯಲ್ಲಿ ಫಲಾಹಾರದ ಅಂಗಡಿ.

ಈಗಿನ ಎಷ್ಟೋ ವಿದ್ಯಾರ್ಥಿಗಳೂ ಶಿಕ್ಷಕರೂ ಚಹಾದ ಅಂಗಡಿಗಳ ದಾಸರಾಗಿ ಬಿಟ್ಟಿದ್ದಾರೆ. ಅದರಿಂದ ಅವರ ಶರೀರದ ಮೇಲೆ ಬಹಳ ಕೆಡಕು ಪರಿಣಾಮವಾಗುತ್ತದೆ. ಎಷ್ಟೋ ಸಲ ಚಹಾದಂಗಡಿಯ ತಂಗಳ ಮತ್ತು ಕರಿದ ಪದಾರ್ಥಗಳ ಸೇವನೆಯಿಂದ ಬಾಲಕರ ಮತ್ತು ಶಿಕ್ಷ

ಕರ ಆರೋಗ್ಯವು ಕೆಟ್ಟು ಹೋಗುತ್ತದೆ. ಚಹಾವಂತೂ ಪ್ರಕೃತಿಗೆ ಬಹಳೇ ಕೆಡಕೆಂದು ಬೇರೆ ಹೇಳಬೇಕಾಗಿಲ್ಲ. ಆದ್ದರಿಂದ ಶಾಲೆಯ ಕಂಪಾವುಂಡಿನಲ್ಲಿ ಒಂದು ಹಣ್ಣಿನ, ಹಾಲಿನ ಮತ್ತು ತಾಜಾ ತಿನಸುಗ ಳನ್ನು ಸಿದ್ಧಗೊಳಿಸುವ ಒಂದು ಅಂಗಡಿಯನ್ನು ಸ್ಥಾಪಿಸುವದು ವಿದ್ಯಾ ರ್ಥಿಗಳ ಆರೋಗ್ಯಕ್ಕೆ ಹಿತಕರವು. ಮಧ್ಯಾಹ್ನದ ಸೂಟಿಯಲ್ಲಿ ಹುಡು ಗರಿಗೆ ಏನಾದರೂ ತಿನಸುಗಳು ಬೇಕಾಗಿದ್ದರೆ ಸಕಾಲಕ್ಕೆ ಅವುಗಳನ್ನು ದೊರೆಯುವಂತೆ ಮಾಡಿದರೆ ಶಾಲೆಗೆ ಅದೆಷ್ಟೋ ಭೂಷಣ.

ವೈದ್ಯ ಪರೀಕ್ಷೆ.

ಎಷ್ಟೋ ಮಕ್ಕಳು ಅನೇಕ ಪ್ರಕಾರದ ರೋಗಗಳಿಂದ ಬಳಲು ತ್ತಿರುತ್ತಾರೆ. ಅವರ ತಾಯಿತಂದೆಗಳು ಊರವರಾಗಿದ್ದರೆ ಡಾಕ್ಟರರಿಗೆ ತೋರಿಸಿ ಔಷಧೋಪಚಾರ ಮಾಡಬಹುದು. ಆದರೆ ಎಷ್ಟೋ ಗುಪ್ತ ರೋಗಗಳು ವಿದ್ಯಾರ್ಥಿಗಳಿಗೆ ಅಂಟಿಕೊಂಡಿರುತ್ತವೆ. ಅವು ಪಾಲಕರ ಅಥವಾ ತಾಯ್ತಂದೆಗಳ ಗಮನಕ್ಕೆ ಬರುವದಿಲ್ಲ. ಪರಸ್ಥಳದಿಂದ ಬಂದ ಅನೇಕ ವಿದ್ಯಾರ್ಥಿಗಳು ಒಂದಿಲ್ಲೊಂದು ರೋಗದಿಂದ ಬಳಲುತ್ತಿರು ತ್ತಾರೆ. ಅವರ ಆರೈಕೆ ಮಾಡಲು ಯಾರೂ ದಿಕ್ಕಿರುವದಿಲ್ಲ. ಆದ್ದ ರಿಂದ ಬಾಲಕರ ಆರೋಗ್ಯ ಪರೀಕ್ಷೆ ಮಾಡುವದರ ಸಲುವಾಗಿ ಒಬ್ಬ ಯೋಗ್ಯ ಡಾಕ್ಟರರನ್ನು ನೇಮಿಸಿ ದಿನಾಲು ೧೦ ಕೇಸುಗಳನ್ನಾದರೂ ಅವರು ತಪಾಸು ಮಾಡಿ ಹೋಗುವಂತೆ ವ್ಯವಸ್ಥೆ ಇಡಬೇಕು. ಅಂದರೆ ಮಕ್ಕಳ ಆರೋಗ್ಯವು ಕೆಟ್ಟಿದ್ದರೆ ಶೀಘ್ರವೇ ಉಪಾಯಗಳನ್ನು ಕೈಕೊ ಳ್ಳಲು ಅನುಕೂಲವಾಗುವದು.

ಪಾಯಖಾನೆ-ಮೂತ್ರಿ ಮತ್ತು ನೀರಿನ ಟಾಕಿಗಳು.

ಶಾಲೆಯ ಕಂಪೌಂಡಿನಲ್ಲಿ ಶಾಲೆಯ ಕಟ್ಟಡದಿಂದ ಸಾಕಷ್ಟು ಅಂತ ರದಲ್ಲಿ ಪಾಯಿಖಾನೆ ಮೂತ್ರಿಗಳನ್ನು ಕಟ್ಟಿಸಬೇಕು. ಅಂದರೆ ವಿದ್ಯಾ ರ್ಥಿಗಳಿಗೂ ಶಿಕ್ಷಕರಿಗೂ ಪ್ರಸಂಗ ಬಂದಾಗ ಅನುಕೂಲವಾಗುವದು. ಅವು ಇಲ್ಲದಿದ್ದರೆ ಶಾಲೆಯ ಕಂಪೌಂಡೆಲ್ಲ ಮಲಿನವಾಗುವ ಸಂಭವ ವುಂಟು. ಒಂದು ದೊಡ್ಡ ವೃಕ್ಷದ ನೆರಳಿನಲ್ಲಿ ಹೌದಿನ ಟಾಕಿಯನ್ನಿ ರಿಸಿ ಅಥವಾ ಹೌದನ್ನು ಕಟ್ಟಿಸಿ ಅದರ ಸುತ್ತಲೂ ನೆಲಕ್ಕೆ ಪರಸಿ

ಮಾಡಿಸಿಬಿಟ್ಟರೆ ಮಧ್ಯಾಹ್ನ ಸೂಟಯಲ್ಲಿ ಚಿಕ್ಕ ಬಾಲಕರು ಅಲ್ಲಿ ಕುಳಿತು ತಮ್ಮ ಬುತ್ತಿಯನ್ನು ಸೊಗಸಾಗಿ ಊಟಮಾಡಲು ಅನುಕೂಲವಾಗುವದು. ಶಾಲೆಯ ಪ್ರತಿಯೊಂದು ಮೂಲಿಗೂ ನೀರು ತುಂಬಿದ ಛಾಂಡೆ ವಾಟಗಳನ್ನು ಇಂಸಿ ಬಾಲಕರಿಗೆ ಅನುಕೂಲ ಮಾಡಿ ಕೊಡಬೇಕು.

ಬೌದ್ಧಿಕ ಶಿಕ್ಷಣ.

ಈಗಿನ ಅಭ್ಯಾಸ ಪತ್ರಿಕೆಯ ಪ್ರಕಾರ ವಿದ್ಯಾರ್ಥಿಗಳಿಗೆ ರುಚಿಸಲಿ ಅಥವಾ ರುಚಿಸದಿರಲಿ ಅನೇಕ ವಿಷಯಗಳು ಕಲಿಸಲ್ಪಡುತ್ತಾ ಇವೆ. ಆದರೆ ಆ ಎಲ್ಲ ವಿಷಯಗಳಲ್ಲಿಯೂ ವಿದ್ಯಾರ್ಥಿಗೆ ಗತಿಯುಂಟಾಗಲಾರದು. ಅವನಿಗೆ ಅಭಿರುಚಿಯಿದ್ದ ವಿಷಯಗಳಲ್ಲಿ ಮಾತ್ರ ಗತಿಯುಂಟಾಗಿ ಉಳಿದ ವಿಷಯಗಳು ತಲೆಬೇಸರವಾಗಿ ಹಾಗೇ ಕಚ್ಚಾ ಉಳಿಯುವವು. ಆದರೆ ಎಲ್ಲ ವಿಷಯಗಳು ವಿದ್ಯಾರ್ಥಿಯ ಜೀವನಕ್ಕೆ ಅವಶ್ಯವೆಂತಲೂ ಅಲ್ಲ. ಅರ್ಥದ ಮರ್ಮವನ್ನರಿಯದ ವಿಷಯಗಳನ್ನೋದಿ ಹುಡುಗರು ಗಿಳಿಗಳಾಗುತ್ತಾರೆ. ಪರೀಕ್ಷೆಯೆಂಬ ಕಾಳಂಕ್ಕಸಿಯ ದನಡೆಗೆ ವ್ಯರ್ಥ ಬಲಿ ಬೀಳುತ್ತಾರೆ. ಬಹಳ ಓದಿ ಓದಿ ತಲೆ ಕೆಟ್ಟು, ಆರೋಗ್ಯ ಕೆಟ್ಟು, ಅಲ್ಪಾಯುಗಳಾಗುತ್ತಾರೆ. ಬೇಡಾದ ವಿಷಯಗಳನ್ನು ಕಲಿಯಲು ಬಲವಂತ ಪಡಿಸಿದರೆ ಬಾಲಕನು ಎದೆ ಬಡಕೊಂಡು ಎಲ್ಲ ವಿಷಯಗಳಲ್ಲಿಯೂ ಸರ್ವಸಾಧಾರಣ ಪ್ರಗತಿಯುಳ್ಳವನಾಗುವನು. ಆದ್ದರಿಂದ ವಿದ್ಯಾರ್ಥಿಗೆ ಹೆಚ್ಚಿಗೆ ವಿಷಯಗಳನ್ನು ಪರೀಕ್ಷೆಗಿಡುವದು ಅತನ ಶಾರೀರಿಕ ಹಾಗೂ ಮಾನಸಶಾಸ್ತ್ರದೃಷ್ಟಿಯಿಂದ ಹಿತಕರವಲ್ಲ. ಆದ್ದರಿಂದ ಕೆಳಗೆ ಕಾಣಿಸಿದ ೫ ವಿಷಯಗಳಲ್ಲಿ ಮಾತ್ರ ಪರೀಕ್ಷೆ ಕಟ್ಟಲು ವಿದ್ಯಾರ್ಥಿಗೆ ಆಸ್ಪದವಿರಬೇಕು.

(೧) ಮಾತೃಭಾಷೆ (ಅಗತ್ಯ)
(೨) ರಾಷ್ಟ್ರಭಾಷೆ (ಅಗತ್ಯ)
(೩) ಸಾಮಾನ್ಯ ಮಾತೃಭಾಷೆ
(೪) ಒಂದು ಕೈಗಾರಿಕೆ (ಅಗತ್ಯ)
(೫) ಸನಾತನ ಭಾಷೆ
(೬) ಇತಿಹಾಸ
(೭) ಭೂಗೋಲ
(೮) ಅಂಕಗಣಿತ
(೯) ಬೀಜಗಣಿತ
(೧೦) ಭೂಮಿತಿ
(೧೧) ಜಮಾಖರ್ಚು
(೧೨) ಪದಾರ್ಥವಿಜ್ಞಾನ ಶಾಸ್ತ್ರ
(೧೩) ರಸಾಯನ ಶಾಸ್ತ್ರ
(೧೪) ಪ್ರಾಣಿ ಶಾಸ್ತ್ರ
(೧೫) ವನಸ್ಪತಿ ಶಾಸ್ತ್ರ
(೧೬) ಇಂದ್ರಿಯ ವಿಜ್ಞಾನ ಶಾಸ್ತ್ರ
(೧೭) ಆರೋಗ್ಯ ಶಾಸ್ತ್ರ
(೧೮) ಲೇಖನ ಕಲೆ

(೧೯) ಗಾಯನ ಕಲೆ
(೨೦) ನಾಟ್ಯಕಲೆ
(೨೧) ಕಾವ್ಯರಚನಾ ಕಲೆ
(೨೨) ಗಮಕ ಕಲೆ
(೨೩) ಒಕ್ಕಲುತನ
(೨೪) ವ್ಯಾಪಾರ.

ಈಗ *Jack of all trades is the master of none* ಅಂದರೆ "ಎಲ್ಲಾ ಬಲ್ಲಪ್ಪಾ ಕೇಳಿದರೆ ಕಲ್ಲಪ್ಪಾ" ಎಂಬ ಪರಿಸ್ಥಿತಿಯು ಕಂಡು ಬರುತ್ತಿದೆ. ಆದ್ದರಿಂದ ಬಾಲಕರು ಇಂಗ್ಲಿಷ ೧ನೇ ಇಯತ್ತೆಗೆ ಬಂದ ಕೂಡಲೆ ತಮ್ಮ ಮನಸ್ಸಿಗೆ ರುಚಿಸುವ ೫ ವಿಷಯಗಳನ್ನಾರಿಸಿಕೊಳ್ಳಲಿಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ಆ ಪ್ರಕಾರ ಆ ವಿಷಯಗಳಲ್ಲಿ ಅವರಿಗೆ ಒಳ್ಳೇ ಶಿಕ್ಷಣ ಕೊಡಬೇಕು. ಅಂದರೆ ಶಿಕ್ಷಣವು ಹೆಚ್ಚು ಫಲಕಾರಿಯಾಗುವದು. ಪರೀಕ್ಷೆಗಾಗಿ ಗಿಳಿಯಂತೆ ಪಾಠಮಾಡುವ ಮತ್ತು ಆರೋಗ್ಯವನ್ನು ಕೆಡಿಸಿಕೊಳ್ಳುವ ಅನಿಷ್ಟಪ್ರಸಂಗವನ್ನು ತಪ್ಪಿಸಿದಂತಾಗುವದು. ಆದರೆ ಪ್ರತಿಯೊಂದು ವಿಷಯದಲ್ಲಿ ವಿದ್ಯಾರ್ಥಿಗೆ ಸ್ವಲ್ಪಿಲ್ಲ ಸ್ವಲ್ಪ ಜ್ಞಾನವಿರುವದು ಅವಶ್ಯವೆಂದು ತಿಳಿದರೆ ಆಯಾಯ ವಿಷಯಗಳ ಮೇಲೆ ತಜ್ಞ ಶಿಕ್ಷಕರಿಂದ ವ್ಯಾಖ್ಯಾನ ಮ್ಯಾಜಿಕ್‌ಲ್ಯಾಂಟರ್ನ ಲೆಕ್ಚರ್ಸಗಳ ಮುಖಾಂತರ ಸಾಮೂಹಿಕ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಮಾಡಿಕೊಡಬಹುದು. ಆದರೆ ಆ ವಿಷಯಗಳು ಪರೀಕ್ಷೆಗಾಗಿ ಇರಕೂಡದು.

(ಮುಂದುವರಿವುದು.)

ನಿವೃತ್ತ ಮುಖ್ಯ ನ್ಯಾಯಾಧೀಶರಾದ ರಾಜಧರ್ಮ ಪ್ರವೀಣ ದಿವಾನಬಹಾದ್ದೂರ ಶ್ರೀಮಾನ್ ಪಿ. ಮಹದೇವಯ್ಯ ಬಿ. ಏ. ಬಿ. ಎಲ್. ಇವರ ಭಾಷಣ.

ಬೆಂಗಳೂರು ಚಿಕ್ಕಪೇಟೆ ಶ್ರೀಮಹಾಂತಿನ ಮಠದಲ್ಲಿ ಮೈಸೂರು ಸಂಸ್ಥಾನದ ದಿವಾನರವರಾದ ಪ್ರಧಾನ ಶಿರೋಮಣಿ ಶ್ರೀಮಾನ್ ಎನ್. ಮಾಧವರಾವ ಬಿ. ಏ. ಬಿ. ಎಲ್. ಸಿ. ಐ. ಇ. ಇವರ ಅಧ್ಯಕ್ಷತೆಯಲ್ಲಿ ತಾ॥ ೨೯-೩-೧೯೨೯ನೇ ದಿನ ಏರ್ಪಡಿಸಿದ್ದ ರಾಷ್ಟ್ರೀಯ ಪ್ರಾರ್ಥನೆಯ ದಿನಾಚರಣೆಯ ಸಂಬಂಧವಾದ ಸಾರ್ವಜನಿಕ ಮಹಾಸಭೆಯಲ್ಲಿ ರಾಜಧರ್ಮ ಪ್ರವೀಣ ದಿವಾನ್‌ಬಹಾದ್ದೂರ ಪಿ. ಮಹದೇವಯ್ಯ ಬಿ. ಏ. ಬಿ. ಎಲ್, ಇವರು ಮಾಡಿದ ಸ್ವಾಗತ ಭಾಷಣದಲ್ಲಿ ವೀರಶೈವ ಮತ ಪುರಾತನತ್ವದ ಸಂಬ್ರಂಧವಾಗಿ ಮತ್ತು ಅದರ ವೈಶಿಷ್ಟ್ಯದ ಸಂಬಂಧವಾಗಿ ಮನನೀಯವಾಗಿ ವಿವೇಚನೆಯು ಇರುವದರಿಂದ ಅದಕ್ಕೆ ಸಂಬಂಧಿಸಿದ ಅವರ ಭಾಷಣದ ಭಾಗವನ್ನು ನಾವು ವಾಚಕರ ಅವಗಾಹನೆಗೋಸ್ಕರ ಇಲ್ಲಿ ಕೊಟ್ಟಿದ್ದೇವೆ. ಅವರು ತಮ್ಮ ಭಾಷಣದ ಆರಂಭದಲ್ಲಿ ಸಮಾರಂಭದ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸುತ್ತ ಬ್ರಿಟಶರಿಗೆ ಜಯವನ್ನು ಕೋರುತ್ತ ಮುಂದೆ ನುಡಿದುದು ಏನೆಂದರೆ—

"ಭಗವಾನ್ ಶ್ರೀ ರೇಣುಕಾಚಾರ್ಯರ ಶುಭನಾಮವು ವೀರಶೈವರಿಗೆ ವಿಜಯದ ಪರ್ಯಾಯ ಶಬ್ದವಾಗಿದೆ. ಪವಿತ್ರರಾದ ಶ್ರೀ. ಆಚಾರ್ಯರು ವೀರಶೈವ ಮತಸ್ಥಾಪಕರಾದ ಸುಪ್ರಸಿದ್ಧ ಪಂಚಾಚಾರ್ಯರಲ್ಲಿ ಒಬ್ಬರಾಗಿದ್ದರು. ಮದರಾಸ ಸರ್ಕಾರದ ಸಿವಿಲ್ ಸರ್ವಿಸಿನಲ್ಲಿ ಕೆಲಸ ಮಾಡುತ್ತಿದ್ದ ಸುಪ್ರಸಿದ್ಧ ತೆಲಗು ಪಂಡಿತರಾದ ದಿವಂಗತ ಶ್ರೀ. ಸಿ. ಪಿ. ಬ್ರೌನ್ ಅವರು ಪ್ರೊ. ಎಚ್. ಎಚ್. ವಿಲ್ಸನ್‌ರವರ ಕೋರಿಕೆಯಂತೆ ಈ ವೀರಶೈವ ಸಿದ್ಧಾಂತದ ವಿಷಯವಾಗಿ ಹೆಚ್ಚು ಪರಿಶ್ರಮವನ್ನು ಪಡೆದು ಮದರಾಸ್ ಜರ್ನಲ್ ಆಫ್ ಲಿಟರೇಚರ್ ಅಂಡ್ ಸೈನ್ಸ್ (*Madras Journal of Literature and Science Vol. XI*) ಎಂಬ ಗ್ರಂಥದ ಹನ್ನೊಂದನೆಯ ಸಂಪುಟದಲ್ಲಿ ಒಂದು ಲೇಖನವನ್ನು ಪ್ರಕಟ

ಮಾಡಿದರು. ಈ ಪ್ರಬಂಧದಲ್ಲಿ ಆ ಪ್ರಖ್ಯಾತ ವಿದ್ವನ್ಮಣಿಗಳು ಶ್ರೀ ರೇಣುಕಾಚಾರ್ಯರ ಮತ್ತು ಇತರ ಆಚಾರ್ಯರ ಜೀವನ ಚರಿತ್ರೆಯ ವಿಷಯವನ್ನು ಹೇಳಿರುವುದಲ್ಲದೆ ವೀರಶೈವ ತತ್ವಸಿದ್ಧಾಂತದ ಕೆಲವು ಸ್ವರೂಪಗಳನ್ನು ಪ್ರಾಚೀನ ಗ್ರೀಕರ ತತ್ವಸಿದ್ಧಾಂತದೊಡನೆ ಹೋಲಿಸಿರುತ್ತಾರೆ. ಬ್ರಹ್ಮಸೂತ್ರಗಳ ಮೇಲೆ ವೀರಶೈವ ಸಿದ್ಧಾಂತದ ದೃಷ್ಟಿಯಿಂದ ವ್ಯಾಖ್ಯಾನರೂಪವಾಗಿ ಶ್ರೀಪತಿ ಪಂಡಿತರಿಂದ ರಚಿಸಲ್ಪಟ್ಟಿರುವ "ಶ್ರೀಕರಭಾಷ್ಯ" ವೆಂಬ ಮಹಾ ಗ್ರಂಥಕ್ಕೆ ನನ್ನ ಮಿತ್ರರಾದ ರಾಜಚರಿತವಿಶಾರದ ರಾವ್ ಬಹದ್ದೂರ್ ಶ್ರೀಮಾನ್ ಸಿ. ಹಯವದನರಾವ ಬಿ. ಏ., ಬಿ. ಎಲ್ ರವರು ಸುಪ್ರಖ್ಯಾತ ಟೀಕಾರೂಪವಾದ ವಿದ್ವತ್ಪರಿಪೂರ್ಣವಾದ ದೀರ್ಘ ಪ್ರಸ್ತಾವನೆಯನ್ನು (introduction) ಬರೆದಿದ್ದಾರೆ. ವಿಮರ್ಶಾತ್ಮಕ ಈ ವ್ಯಾಖಾನವು ಪಾಶ್ಚಾತ್ಯ ಮತ್ತು ಪೌರಸ್ತ್ಯ ದೇಶಗಳ ಸುಪ್ರಸಿದ್ಧ ಪಂಡಿತರಾದ ಪ್ರೊ॥ ಬ್ಯಾರಡೇಲ ಕೀತ್ (Prof, Barreidale Keith.) ಮೊದಲಾದ ಮಹನೀಯರ ಮೆಚ್ಚುಗೆಯನ್ನು ಪಡೆದಿದೆ. ಈ ಮಹಾ ಗ್ರಂಥದಲ್ಲಿ ರೇಣುಕಾಚಾರ್ಯರ ಜ್ಞಾನಭಂಡಾರದ ಅಳನೀಳಗಳನ್ನು ಸಹ ನೋಡಬಹುದು. ಕಡೂರ ಜಿಲ್ಲೆಯಲ್ಲಿರುವ ಶ್ರೀ ರೇಣುಕಾಚಾರ್ಯರ ಪೀಠವಾದ ಶ್ರೀ ಬಾಳೆಹೊನ್ನೂರು ಸಂಸ್ಥಾನದ ಮತ್ತು ವೀರಶೈವಮತ ಸಿದ್ಧಾಂತದ ವಿಷಯಗಳು, ಮೈಸೂರು ಸರ್ಕಾರದವರು ಪ್ರಕಟಿಸಿರುವ ೧೯೧೧ನೆಯ ಇಸವಿಯ ಜನಗಣತಿಯ ವರದಿಯಲ್ಲಿ (The Mysore Census Report. ೧೯೧೧) ಮುದ್ರಿತವಾಗಿವೆ.

ಅತ್ಯಂತ ಪ್ರಾಚೀನವಾದ "ಸಿದ್ಧಾಂತ ಶಿಖಾಮಣಿ" ಎಂಬ ಮತಗ್ರಂಥದಲ್ಲಿ ಶ್ರೀ ರೇಣುಕಾಚಾರ್ಯರು ಪ್ರಸಿದ್ಧ ಮಹರ್ಷಿಗಳಾದ ಪೂಜ್ಯ ಅಗಸ್ತ್ಯರಿಗೆ ವೀರಶೈವಮತ ಸಿದ್ಧಾಂತ ತತ್ವಗಳನ್ನು ಉಪದೇಶ ಮಾಡಿದರೆಂದು ತಿಳಿದುಬರುತ್ತದೆ. ಅಷ್ಟೇ ಅಲ್ಲದೆ ಶ್ರೀ ರೇಣುಕಾಚಾರ್ಯರು "ಚಂದ್ರಮೌಳೀಶ್ವರ" ಲಿಂಗವನ್ನು ಸುಪ್ರಖ್ಯಾತರಾದ ಶ್ರೀ ಶಂಕರಾಚಾರ್ಯರಿಗೆ ಅನುಗ್ರಹಿಸಿದ್ದರೆಂಬ ವಿಷಯಕ್ಕೆ ಅನೇಕ ಪ್ರಮಾಣಗಳು ದೊರೆತಿವೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಈ ಕೆಳಗೆ ಹೇಳಲಾಗಿದೆ.—

೧. ಶ್ರೀ ಶೃಂಗೇರಿಮಠದ ಪುಸ್ತಕ ಭಂಡಾರದಲ್ಲಿ "ಗುರುವಂಶ ಕಾವ್ಯ" ಎಂಬ ಗುರುಪರಂಪರೆಯ ಚರಿತ್ರೆಗಳನ್ನು ಒಳಗೊಂಡ ಗ್ರಂಥ.

೨. "ಶಿವತತ್ವರತ್ನಾಕರ" ವೆಂಬ ಮತಗ್ರಂಥಕ್ಕೆ ಇಂಡಿಯಾ ಸರ್ಕಾರದ ಪ್ರಾಚ್ಯವಸ್ತು ಶೋಧಕರಾದ ರಾವಬಹದ್ದೂರ ಶ್ರೀಮಾನ್ ಎಚ್. ಕೃಷ್ಣಶಾಸ್ತ್ರೀ, ಬಿ. ಏ. (Rao Bahadur H.Krishna Sastry, B. A.) ಅವರು ಬರೆದಿರುವ ಪ್ರಸ್ತಾವನೆ.

೩. ಮದರಾಸ ಸರ್ಕಾರದ ಕನ್ನಡ ಸೀನಿಯರ ಟ್ರಾನ್ಸ್‌ಲೇಟರಾದ ಶ್ರೀಮಾನ್ ಬಿ. ರಾಮರಾವ, ಎಂ. ಏ. ಎಲ್ ಎಲ್. ಬಿ. (B. Ramarao, M. A. LL. B.) ಅವರು ಮತ್ತು ಮದರಾಸ ಸರ್ಕಾರದ ಪ್ರಾಚ್ಯಪುಸ್ತಕ ಭಂಡಾರದ ವಿದ್ವಾನ್ ಪಿ. ಸುಂದರಶಾಸ್ತ್ರಿಯವರೂ ದೇವನಾಗರೀ ಅಕ್ಷರದಲ್ಲಿ ಪ್ರಕಟಮಾಡಿರುವ ಅದೇ ಗ್ರಂಥದಲ್ಲಿರುವ ಆಧಾರಗಳು.

೪. ಶ್ರೀ ವಿದ್ಯಾರಣ್ಯ ವಿರಚಿತವಾದ "ಪಿತಾಮಹಸಂಹಿತೆ" ಮತ್ತು ಧಾರತಿ ಕೃಷ್ಣಯತಿಗಳು ಬರೆದಿರುವ "ವಿದ್ಯಾರಣ್ಯಕೃತಿ" ಎಂಬ ಗ್ರಂಥಗಳಲ್ಲಿ ದೊರೆಯುವ ಆಧಾರಗಳು.

೫. ಮೈಸೂರು ಸರ್ಕಾರದವರು ಪ್ರಕಟಿಸಿರುವ "ಕೆಳದಿನೃಪ ವಿಜಯ" ಎಂಬ ಗ್ರಂಥದಲ್ಲಿ ಸಿಕ್ಕುವ ಆಧಾರಗಳು. ಹಿಂದೆ ಸೂಚಿತವಾಗಿರುವ "ಚಂದ್ರವೌಳೀಶ್ವರ" ಲಿಂಗವು ಈಗಲೂ ಶ್ರೀ ಶೃಂಗೇರಿ ಮಠದಲ್ಲಿ ಅತ್ಯಂತ ಪೂಜ್ಯಸ್ಥಾನವನ್ನು ಹೊಂದಿರುವುದಲ್ಲದೆ ಅದಕ್ಕೂ ಪ್ರತಿದಿನವೂ ಪೂಜೆಪುರಸ್ಕಾರಗಳು ನಡೆಯುತ್ತಿವೆ.

ಭರತಖಂಡದಲ್ಲಿ ವೀರಶೈವರ ಒಟ್ಟು ಜನಸಂಖ್ಯೆಯು ಸಮಾರು ಅರವತ್ತು ಲಕ್ಷ. "ಕಾಶಿಕಾಂಡ", "ಶ್ರೀಶೈಲಕಾಂಡ" ಮತ್ತು "ಪಾಶುಪತತಂತ್ರ" ಮೊದಲಾದ ಗ್ರಂಥಗಳಲ್ಲಿ ಅಗಸ್ತ್ಯ, ಗೌತಮ, ದಧೀಚಿ, ದೂರ್ವಾಸ, ವ್ಯಾಸ, ಸಾನಂದ, ಕಶ್ಯಪ ಮತ್ತು ಉಪಮನ್ಯು ಮೊದಲಾದ ಸುಪ್ರಸಿದ್ಧ ಮಹರ್ಷಿಗಳು ವೀರಶೈವ ಸಿದ್ಧಾಂತದ ತತ್ವರಹಸ್ಯಗಳನ್ನು ತಿಳಿದು ಆಚರಿಸುತ್ತಿದ್ದರೆಂಬುದು ಗೊತ್ತಾಗುತ್ತದೆ. ನಳ, ಕಕುತ್ಸ ಮತ್ತು ಪುರೂರವಸ್ಸು ಮೊದಲಾದ ಚಕ್ರವರ್ತಿಗಳು ವೀರಶೈವ ಮತದ ಪರಮ ಭಕ್ತರಾಗಿದ್ದರೆಂತಲೂ ತಿಳಿದುಬರುತ್ತದೆ. ತಮ್ಮ ಮತವು ವೇದದಷ್ಟೇ ಪ್ರಾಚೀನವಾದುದೆಂದು ವೀರಶೈವರು ನಂಬುತ್ತಾರೆ. ಗತಿಸಿದ ಕಾಶಿಯ ಮಹಾಮಹೋಪಾಧ್ಯಾಯ ಶ್ರೀ ಶಿವಕುಮಾರ ಪಂಡಿತರಿಂದ ವ್ಯಾಖ್ಯಾನ ಬರೆಯಲ್ಪಟ್ಟಿರುವ "ಲಿಂಗಧಾರಣ ಚಂದ್ರಿಕೆ" ಎಂಬ ಗ್ರಂಥವು ಲಿಂಗಧಾರಣ ವಿಷಯದಲ್ಲಿ ಪರಮಪ್ರಮಾಣವೆಂದು ವೀರಶೈವರ ಅಭಿಪ್ರಾಯವಾಗಿದೆ. ಮೈಸೂರು ಸಂಸ್ಥಾನದ ಸುಪ್ರಸಿದ್ಧ ಆಸ್ಥಾನ ವಿದ್ವಾಂಸರಾದ ವೇದಶಿಖಾಮಣಿ ರಾಮಾನುಜಾಚಾರ್ಯರು 'ಶಿವಾದ್ವೈತಮಂಜರಿ' ಯೆಂಬ ಪ್ರಾಚೀನ ವೀರಶೈವ ಸಿದ್ಧಾಂತ ಗ್ರಂಥಕ್ಕೆ ಬರೆದಿರವ ವ್ಯಾಖ್ಯಾನವು ಈ ಸಂದರ್ಭದಲ್ಲಿ ಗಮನಾರ್ಹವಾಗಿದೆ. ಈ ಗ್ರಂಥವನ್ನ ಪ್ರಚುರಪಡಿಸುವ ಸಲುವಾಗಿ "ಪಂಚಾಚಾರ್ಯಪ್ರಭಾ" ಪತ್ರಿಕೆಯ ಸಂಪಾದಕರಾದ ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳು ಈ ಗ್ರಂಥವನ್ನು ಕನ್ನಡಕ್ಕೆ ಪರಿವರ್ತನೆ ಮಾಡಿಸಿದರು. ಮತ್ತು ಇದು ಕೀರ್ತಿಶೇಷರಾದ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರವರಿಗೆ ಸಮರ್ಪಿಸಲ್ಪಟ್ಟಿದೆ. ಶೈವಮತವು ಪ್ರಾಚೀನ ಕಾಲದಲ್ಲಿ ಬಹಳ ದೂರ ವ್ಯಾಪಿಸಿತ್ತೆಂಬುದೂ, ಭರತಖಂಡದ ವಿವಿಧ ಭಾಗಗಳಲ್ಲಿ ಪಂಚಾಚಾರ್ಯರು ಈ ಮತವನ್ನು ಪ್ರಚುರಪಡಿಸಿದರಂಬುದೂ, ಅನೇಕ ರಾಜರು ಈ ಮತಾನುಯಾಯಿಗಳಾಗಿದ್ದು ಗೌರವಿಸುತ್ತಿದ್ದರೆಂಬುದೂ, ಇತಿಹಾಸ ಪ್ರಸಿದ್ಧವಾದ ವಿಷಯಗಳಾಗಿವೆ. ನೂತನ ಸಂಶೋಧನೆಗಳಿಂದ ಈ ವಿದ್ಯಮಾನಗಳು ಸ್ಥಿರಪಟ್ಟಿವೆ. ಮಹಮ್ಮದೀಯರ ಪ್ರಥಮ ಆಕ್ರಮಣ ಕಾಲದಲ್ಲಿ ಭರತಖಂಡದಲ್ಲಿ ಒಂದು ಕೋಟಿ ಇಪ್ಪತ್ತು ಲಕ್ಷ ಲಿಂಗಗಳು ಇದ್ದವೆಂದು ಐತಿಹಾಸಿಕ ಪ್ರಮಾಣಗಳಿಂದ ಗೊತ್ತಾಗುತ್ತದೆ. ಕ್ರೈಸ್ತ ಮತವು ಅಭಿವೃದ್ಧಿಯಾಗುವದಕ್ಕೆ ಮೊದಲೇ ಬಹಳ ದೂರ ದೇಶಗಳಲ್ಲಿಯೂ ಸಹ ಶೈವಮತವು ತನ್ನ ಪ್ರಭಾವವನ್ನು ಬೀರಿತ್ತೆಂದೂ, ಯುರೋಪ, ಆಫ್ರಿಕ ಮತ್ತು ಅಮೇರಿಕ ದೇಶಗಳಲ್ಲಿಯೂ ಸಹ ಶೈವ ದೇವಾಲಯಗಳು ಕಟ್ಟಲ್ಪಟ್ಟಿದ್ದವೆಂದೂ ಖಚಿತವಾದ ಆಧಾರಗಳಿಂದ ಗೊತ್ತಾಗುತ್ತದೆ. "ನಿರ್ಮಾಲ್ಯ ರತ್ನಾಕರ" ವೆಂಬ ಪುಸ್ತಕದಲ್ಲಿ ಕಾಶಿಯ ಬಾಬು ಶ್ರೀ ವೇಣೀಸಿಂಹರೆಂಬ ಪಂಡಿತರು ಅಫ್ಘಾನಿಸ್ಥಾನ್, ಚಿತ್ರಾಲ್, ಕಾಬೂಲ್, ಬಾಕ್, ಬೊಖಾರ, ಮೆಕ್ಕಾ, ಬೇಖಿಲಾನ್, ಈಜಿಪ್ಟ, ಗ್ರೀಸ, ಇಟಲಿ, ಗ್ಲಾಸ್ಗೋ, ಬ್ರೆಜಿಲ ಮುಂತಾದ ದೇಶಗಳಲ್ಲಿ ಶೈವಧರ್ಮವು ಪ್ರಚುರವಾಗಿತ್ತೆಂದು ತಿಳಿಸಿರುತ್ತಾರೆ. ಜಾವಾ, ಬೋರ್ನಿಯೋ, ಅಸ್ಸಾಂ ಮುಂತಾದ ದೇಶಗಳಲ್ಲಿ ಈಗ ಸಿಕ್ಕಿರತಕ್ಕ ಆಧಾರಗಳಿಂದ ಆ ದೇಶಗಳಲ್ಲಿಯೂ ಸಹ ಶೈವಮತವು ಪ್ರಚಾರದಲ್ಲಿತ್ತೆಂದು ಕಂಡುಬರುತ್ತದೆ,

ನೇಪಾಳ, ಕಾಶ್ಮೀರ, ಕಾಶಿ, ಉಜ್ಜಯನಿ, ಚೋಳ ಇತ್ಯಾದಿ ದೇಶಗಳ ರಾಜರುಗಳು ವೀರಶೈವಮತದ ಅನನ್ಯ ಭಕ್ತರಾಗಿದ್ದರೆಂದು ಪ್ರಾಚೀನ ಶಾಸನಗಳಿಂದ ತಿಳಿದುಬರುತ್ತದೆ. ಬೊಂಬಾಯಿ ಪ್ರಾಂತದ ರಾಯಲ ಏಷಿಯಾಟಿಕ ಸೊಸೈಟಿಯ ಹನ್ನೊಂದನೆಯ ರಿಪೋರ್ಟಿನಲ್ಲಿ ಕ್ರಿ. ಶ. ಹತ್ತನೇ ಶತಮಾನದಲ್ಲಿಯೂ ಸಹ ಆ ಪ್ರಾಂತದ ಅನೇಕ ರಾಜರು ವೀರಶೈವಮತಕ್ಕೆ ಬಹಳ ಗೌರವವನ್ನು ಕೊಡುತ್ತಿದ್ದರೆಂಬುದನ್ನು ಸೂಚಿಸುವ ಶಾಸನಗಳಿವೆ. ಮತ್ತು ದಕ್ಷಿಣ ದೇಶದಲ್ಲಿ ಕ್ರಿ. ಶ. ಆರನೆಯ ಶತಮಾನದಲ್ಲಿ "ಅತ್ಯಂತರಾಮ", "ರಾಜಸಿಂಹ", "ಗುಣಭಾರ" ಮೊದಲಾದ ಪಲ್ಲವರಾಜರು ವೀರಶೈವರಾಗಿದ್ದರೆಂಬುದನ್ನು ತಿಳಿಸುವ ಶಾಸನಗಳಿವೆ. ತಮ್ಮೆಲ್ಲರಿಗೂ ತಿಳಿದಿರುವಂತೆ ನಮ್ಮ ಮೈಸೂರು ರಾಜಮನೆತನದವರೂ ಕ್ರಿ. ಶ. ೧೫೯೯ ರಿಂದ ೧೮೦೫ ರವರೆಗೆ ವೀರಶೈವ ಮತಾನುಯಾಯಿಗಳಾಗಿದ್ದರು. ಕೊಡಗಿನ ಮತ್ತು ನಗರರಾಜ್ಯದ ರಾಜರೂ ಸಹ ವೀರಶೈವರಾಗಿದ್ದರು.

(ಮುಂದುವರಿಯುವುದು.)

ಸ್ಫುಟ ವಿಚಾರಗಳು.

(೧) ಶಿವಾನುಭವ ಪತ್ರಿಕೆಯು ಈ ವರೆಗೆ ವೀರಶೈವ ಸಂಸ್ಕೃತಿ ಸಂಶೋಧನೆಯ ಮತ್ತು ವೀರಶೈವ ಗ್ರಂಥಪ್ರಕಟನೆಯ ಕಾರ್ಯಗಳನ್ನು ಮಾಡುತ್ತ ಬಂದಿರುತ್ತದೆ. ಆದ್ದರಿಂದ ವೀರಶೈವ ಮತ ತತ್ವವಿಚಾರಗಳ ನಿರೂಪಣೆಗೆ ಅದರಲ್ಲಿ ಮಹತ್ವಸ್ಥಾನವು ಕೊಡಲ್ಪಟ್ಟಿತ್ತು. ಈ ಕಾರ್ಯವನ್ನು ಅದು ಇನ್ನು ಮುಂದಾದರೂ ಮುಂದುವರಿಸುತ್ತಲೇ ಇರುವದು. ಆದರೆ ಈಜೆಗೆ ಪೇಪರ ಕಂಟ್ರೋಲರರು ಈ ಪತ್ರಿಕೆಗೆ ಗೊತ್ತುಪಡಿಸಿದ ಕಾಗದದ ಪ್ರಮಾಣವು ಅತ್ಯಲ್ಪವಾಗಿರುವದರಿಂದ ಅದರ ಪುಟಗಳ ಸಂಖ್ಯೆಯನ್ನು ಬಹಳ ಕಡಿಮೆ ಮಾಡಬೇಕಾಗಿದೆ. ಆದರೆ ಕೆಲವು ದಿವಸಗಳಲ್ಲಿ ಈ ಸ್ಥಿತಿಯು ಉಳಿಯದೆ ಹೆಚ್ಚಿಗೆ ಕಾಗದಗಳು ದೊರೆಯಬಹುದೆಂದು ನಾವು ಆಶಿಸಿದ್ದೇವೆ. ಆ ಸಮಯವು ಬಂದಕೂಡಲೆ ನಾವು

ಮೊದಲಿಂತೆ ಪುಟ ಸಂಖ್ಯೆಗಳನ್ನು ಹೆಚ್ಚಿಸಿ ಅನೇಕ ಬಗೆಯ ವಿಷಯಗಳನ್ನು ಇದರಲ್ಲಿ ಮೊದಲಿನಂತೆ ನಿರೂಪಿಸುತ್ತ ಹೋಗುವೆವು. ಆದರೂ ಪತ್ರಿಕೆಯ ಈಗಿನ ಪುಟಗಳಲ್ಲಿಯೇ ವೀರಶೈವ ಸಮಾಜಕ್ಕೆ ಸಂಬಂಧಿಸಿದ ಅನೇಕ ಪ್ರಚಲಿತ ಮಹತ್ವದ ವಿಷಯಗಳ ಬಗ್ಗೆ ವಿವೇಚನೆಯನ್ನು ಮಾಡಲೆಣಿಸಿದ್ದೇವೆ.

ವೀರಶೈವ ತತ್ವ ಸಂಶೋಧನೆಯ ಕಾರ್ಯವು ಎಷ್ಟು ಮಹತ್ವವಾದದ್ದೋ ಅಷ್ಟೇ ಅವುಗಳ ಪ್ರಸಾರವಾದರೂ ಮಹತ್ವದ್ದಿರುತ್ತದೆ. ಈ ಕಾರ್ಯವನ್ನು ವೀರಶೈವ ಸಮಾಜದವರು ಕೆಳಗೆ ಕಾಣಿಸಿದ ಮಾರ್ಗಗಳಿಂದ ಮಾಡುವದು ಶಕ್ಯವಿರುತ್ತದೆ. (೧) ಶಿವಾನುಭವ ಸಂಘಗಳು (೨) ವೀರಶೈವ ಮಠಗಳು (೩) ವೀರಶೈವ ಪಾಠಶಾಲೆಗಳು (೪) ವಿದ್ಯಾರ್ಥಿನಿಲಯಗಳು (೫) ವೀರಶೈವರು ನಡಿಸುತ್ತಿರುವ ಶಿಕ್ಷಣಾಲಯಗಳು. ಇವುಗಳ ಮೂಲಕ ಈ ಕಾರ್ಯವನ್ನು ಮುಂದುವರಿಸಬಹುದಾಗಿದೆ. ಈ ಸಂಸ್ಥೆಗಳ ದ್ವಾರಾ ವೀರಶೈವ ಸಂಸ್ಕೃತಿಯನ್ನು ಕರ್ನಾಟಕದಲ್ಲಿ ಪ್ರಸಾರಪಡಿಸುವದು ಶಕ್ಯವಿರುತ್ತದೆ. ಈ ದೃಷ್ಟಿಯನ್ನಿಟ್ಟುಕೊಂಡು ಬರೆದ ಲೇಖಗಳಿಗೆ ನಾವು ಇನ್ನು ಮುಂದೆ ಪತ್ರಿಕೆಯಲ್ಲಿ ಮಹತ್ವದ ಸ್ಥಾನವನ್ನು ಕೊಡಬೇಕೆಂದು ಯೋಚಿಸಿದ್ದೇವೆ. ಈ ಧೋರಣದ ಮೂಲಕ ಶಿವಾನುಭವ ಪತ್ರಿಕೆಯ ಸ್ವರೂಪದಲ್ಲಿ ಕೆಲಮಟ್ಟಿಗೆ ಬದಲಾವಣೆಯಾದಂತೆ ಅನೇಕರಿಗೆ ಭಾಸವಾಗಬಹುದು. ಆದರೆ ತತ್ವಸಂಶೋಧನೆಯು ಎಷ್ಟು ಮಹತ್ವವಾದದ್ದೋ ಅಷ್ಟೇ ಅಥವಾ ಅದಕ್ಕೂ ಹೆಚ್ಚು ಅದರ ಪ್ರಸಾರಕಾರ್ಯವೂ ಮಹತ್ವದ್ದಿರುವದರಿಂದ ಹಾಗೆ ಅವರು ಭಾವಿಸಲಿಕ್ಕಿಲ್ಲೆಂದು ನಾವು ಎಣಿಸಿದ್ದೇವೆ. ಇಂಥ ವಿಷಯಗಳೊಡನೆ ತತ್ವಸಂಶೋಧನೆ, ತತ್ವ ವಿವೇಚನೆ, ವೀರಶೈವ ಸಮಾಜ ಚರಿತ್ರೆ ಈ ವಿಷಯಗಳಿಗೂ ಕೂಡ ಎಂದಿನಂತೆ ಉಚ್ಚ ಸ್ಥಾನವನ್ನು ಕೊಡಲಾಗುವದು.

ಈಗಿನ ಸಂಚಿಕೆಯಲ್ಲಿ ಒಬ್ಬ ಮಹನೀಯರು ವೀರಶೈವ ಪಾಠಶಾಲೆಗಳ ವಿಷಯವಾಗಿ ಒಂದು ಲೇಖವನ್ನು ಬರೆದದ್ದು ಅದರಲ್ಲಿ ಮಾಡಿದ ಸೂಚನೆಗಳನ್ನು ಪಾಠಶಾಲೆಯ ಚಾಲಕರೂ ಅವುಗಳಲ್ಲಿಯ ಶಿಕ್ಷಕರೂ ಗಮನಿಸುವರೆಂದು ನಾವು ಆಶಿಸಿದ್ದೇವೆ. ಹಾಗೆಯೇ 'ಮಾಧ್ಯಮಿಕ ಶಾಲೆ'ಗಳ ವಿಷಯವನ್ನೂ ಮುಂದುವರಿಸಿದ್ದೇವೆ.

(೨) ನಾವು ಈಚೆಗೆ ವೀರಶೈವ ಸಮಾಜದಲ್ಲಿ ಆಗಿಹೋಗಿರುವ ಶಿವಶರಣರ ಚರಿತ್ರೆಗಳನ್ನು ಸಂಶೋಧಿಸಿ ಬರೆಯುತ್ತ ಇರುವದು ನಮ್ಮ ವಾಚಕರಿಗೆ ಗೊತ್ತೇ ಇದೆ. ಈ ಚರಿತ್ರೆಗಳು ಅನೇಕ ಗ್ರಂಥಗಳಲ್ಲಿ ಖಂಡಶಃ ಉಪಲಬ್ಧವಿದ್ದು ಅವುಗಳನ್ನೆಲ್ಲ ಸಂಗ್ರಹಿಸಿ ಈ ಚರಿತ್ರೆಗಳಲ್ಲಿರುವ ವೈಶಿಷ್ಟ್ಯಕ್ಕೆ ಕುಂದುಬಾರದಂತೆ ಅವುಗಳಲ್ಲಿ ಸುಸಂಬದ್ಧತೆಯನ್ನುಂಟು ಮಾಡಿ ಅವುಗಳು ವಾಚಕರಿಗೆ ಗ್ರಾಹ್ಯವಾಗುವ ರೀತಿಯಿಂದ ನಿರೂಪಿಸುವದು ಬಹು ಶ್ರಮದ ಕೆಲಸವಾಗಿದೆ. ಇದು ಬಹು ಹಗುರಾದ ಕಾರ್ಯವೆಂದು ನಮಗೆ ಆರಂಭದಲ್ಲಿ ತೋರಿತ್ತು. ಆದರೆ ಪ್ರತ್ಯಕ್ಷ ಕಾರ್ಯವನ್ನು ಕೈಕೊಂಡ ಬಳಿಕ ಯೋಗ್ಯವಾದವುಗಳನ್ನು ಆರಿಸುವದು ಮತ್ತು ನಿರೂಪಿಸುವದು, ಅಲ್ಲದೆ ವೀರಶೈವ ಇತಿಹಾಸದ ಮೇಲೆ ಪ್ರಕಾಶವನ್ನು ಕೆಡಹುವಂತಹ, ಮಹತ್ವದ ಸಮಾಜ ಕಾರ್ಯವಾಡಿದಂತಹ, ಮತ್ತು ಕಾಲ್ಪನಿಕವಲ್ಲದಂತಹ ಶಿವಶರಣರ ಚರಿತ್ರೆಗಳನ್ನು ಆಯುವದು, ಇವೆಲ್ಲವೂ ಬಹು ದುಸ್ತರವಾದುವೆಂದು ತೋರಿಬರಹತ್ತಿದೆ. ಆದರೂ ನಾವು ಈ ಕಾರ್ಯವನ್ನು ಶಕ್ಯವಿದ್ದಷ್ಟರ ಮಟ್ಟಿಗೆ ಮುಂದುವರಿಸುತ್ತಲಿದ್ದೇವೆ. ಆದರೆ ಇದರಲ್ಲಿ ನಮ್ಮ ಕೆಲವು ವಾಚಕರು ಅನಿರೀಕ್ಷಿತವಾದ ಆಕ್ಷೇಪಣೆಗಳನ್ನು ಎತ್ತಿ ನಮಗೆ ಪತ್ರಗಳನ್ನು ಬರೆಯುತ್ತಿದ್ದು ಅವುಗಳನ್ನು ನಮ್ಮ ವಾಚಕರ ಇದಿರಿಗೆ ಇಡುವದು ಅವಶ್ಯವೆಂದು ತೋರುತ್ತಿದೆ. ನಾವು ಶಿವಶರಣರ ಚರಿತ್ರೆಗಳನ್ನು ಬರೆದದ್ದಾದರೆ ಸಮಾಜದಲ್ಲಿ ಅಂಥ ಶ್ರದ್ಧೆಯನ್ನು ಹೆಚ್ಚಿಸುತ್ತೇವೆಂತಲೂ ಅಶಕ್ಯವಾದ ಪವಾಡಗಳಿಗೆ ನಾವು ನಿಷ್ಕಾರಣವಾಗಿ ಹೆಚ್ಚಿನ ಸ್ಥಾನ ಕೊಡುತ್ತೇವೆಂತಲೂ ಅವುಗಳಲ್ಲಿ ನಿರೂಪಿತವಾದ ಸಂಗತಿಗಳು ವೀರಶೈವತ್ವಕ್ಕೆ ವಿರೋಧವಾದವುಗಳೆಂತಲೂ ಇವರ ಆಕ್ಷೇಪಣೆಗಳಾಗಿವೆ ಆದರೆ ಇವರು ಹೀಗೆ ಆಕ್ಷೇಪಿಸುವಲ್ಲಿ ಈ ಚರಿತ್ರೆಗಳಲ್ಲಿಯ ಮುಖ್ಯ ಮರ್ಮಗಳನ್ನ ತಿಳಿದುಕೊಳ್ಳಲು ಪ್ರಯತ್ನಿಸಿಲ್ಲವೆಂದು ನಮ್ಮ ತಿಳುವಳಿಕೆ ಇದೆ. ಯಾಕಂದರೆ ಅವುಗಳಲ್ಲಯ ಸಂಗತಿಗಳನ್ನವಲೋಕಿಸಿದಲ್ಲಿ ಪ್ರತಿಯೊಂದು ಚರಿತ್ರೆಯಲ್ಲಿ ಕೆಲವೊಂದು ಶಿವಾನುಭವದ ತತ್ವವಾಗಲಿ ಇಲ್ಲವೆ ಉಚ್ಚ ಧಾರ್ಮಿಕ ಅಥವಾ ಸಾಮಾಜಿಕ ಅಥವಾ ನೈತಿಕ ವಿಷಯವಾಗಲಿ ಅಡಕವಾಗಿರುವದು ಯಾರ ಲಕ್ಷಕ್ಕೆ ದಲ್ಲಾದರೂ ಬರುವಂತೆ ಇದೆ. ಅಲ್ಲದೆ ನಾವು ಆರಿಸಿ ಬರೆಯುತ್ತಲಿರುವ ಈ ಶಿವಶರಣರು ಐತಿಹಾಸಿಕ ಪುರುಷರೆಂಬುದನ್ನು ನಾವು ಶಕ್ಯವಿದ್ದ

ಷ್ಟರ ಮಟ್ಟಿಗೆ ಸ್ಥಾನಿಕ ಶೋಧಮಾಡಿ ಅವರ ಚರಿತ್ರೆಗಳನ್ನು ನಿರೂಪಿಸುತ್ತಲಿದ್ದೇವೆ. ಈ ಸಂಗತಿಗಳನ್ನು ತಿಳಿದ ನಮ್ಮ ವಾಚಕರಲ್ಲನೇಕರು ಈ ನಮ್ಮ ಪ್ರಯತ್ನವನ್ನು ಪ್ರೋತ್ಸಾಹಿಸುತ್ತಾ ಇದ್ದಾರೆ. ಆದರೆ ನಮ್ಮ ಇದಿರಿಗೆ ಬಂದ ಮುಖ್ಯ ಆಕ್ಷೇಪಣೆಗಳಲ್ಲಿ ಶಿವಶರಣರು ಇಷ್ಟಲಿಂಗಧಾರಕರಿದ್ದರೂ ಅವರು ಸ್ಥಾವರಲಿಂಗಗಳ ಪೂಜೆಯನ್ನು ಮಾಡುತ್ತಿದ್ದರ ಬಗ್ಗೆ ಉಲ್ಲೇಖಗಳಿದ್ದು ಅವು ವಿಶ್ವಾಸಾರ್ಹವಲ್ಲವೆಂದು ಕೆಲವರ ಅಭಿಪ್ರಾಯವಿರುತ್ತದೆ. ನಿಜವಾಗಿ ಇದು ವಿಚಾರಾರ್ಹವಾಗಿರುತ್ತದೆ.

(೩) ಈ ಆಕ್ಷೇಪಣೆಯನ್ನು ಕುರಿತು ಕೆಲವು ಮಹನೀಯರು ನಮ್ಮ ಸೂಚನೆಯನ್ನು ಮನ್ನಿಸಿ ಕೆಳಗೆ ಕಾಣಿಸಿದಂತೆ ತಮ್ಮ ಅಭಿಪ್ರಾಯಗಳನ್ನು ನಮ್ಮ ಕಡೆಗೆ ಕಳಿಸಿಕೊಟ್ಟಿದ್ದಾರೆ.

ಪ್ರೊ॥ ಎಮ್. ಆರ್. ಸಾಖರೆಯವರು, ಪ್ರೊಫೆಸರ ಲಿಂಗರಾಜ ಕಾಲೇಜ ಬೆಳಗಾವಃ— ''ಇಷ್ಟಲಿಂಗಪೂಜೆಯು ಬಸವೇಶ್ವರನಿಂದಲೇ ಆರಂಭವಾಯಿತೆಂದು ನನ್ನ ಸ್ಪಷ್ಟ ಅಭಿಪ್ರಾಯವಿದೆ. ಅವನು ಮೊದಲು ಸ್ಥಾವರಲಿಂಗಪೂಜಕನಾಗಿದ್ದು ಅದರಿಂದ ಅವನಿಗೆ ತೃಪ್ತಿಯುಂಟಾಗಲಿಲ್ಲ. ಅವನು ಉಪನಯನ ಸಂಸ್ಕಾರವನ್ನು ಅಲ್ಲಗಳೆದು ತನ್ನ ಮನೆಯನ್ನು ತೊರೆದು ಕೂಡಲಸಂಗಮಕ್ಕೆ ಹೋಗಿ ಅಲ್ಲಿ ಯೋಗ ಸಾಧನೆಯಲ್ಲಿ ತೊಡಗಿದನು. ಆದರೆ ಅಲ್ಲಿಯ ಸ್ಥಾವರಲಿಂಗಪೂಜೆಯಿಂದ ಅವನಿಗೆ ಸಮಾಧಾನವೆನಿಸಲಿಲ್ಲ. ಆದರೆ ಅವನು ಬಹು ಜನ ಸಮಾಜದ ಉದ್ಧಾರವನ್ನಪೇಕ್ಷಿಸುವವನಾದ್ದರಿಂದ ಇಷ್ಟಲಿಂಗದ ವಿಚಾರವು ಅವನಿಗೆ ಹೊಳೆಯಿತು. ಅದರ ಸಾಧನೆಯ ರೀತಿಗಳನ್ನು ಅವನು ಕಂಡು ಹಿಡಿದು ಅವುಗಳನ್ನು ಅವನು ಬೋಧಿಸಿದನು. ಅವು ಸುಲಭ ಮತ್ತು ಸಾದಾ ರೀತಿಯುವು ಇವೆ. ಅವುಗಳನ್ನು ಅವನ ಸಮಕಾಲೀನರಾದ ಅನೇಕ ಶಿವಜ್ಞಾನಿಗಳು ಒಪ್ಪಿಕೊಂಡರು. ಆದರೆ ಹಲವರು ಚಿಕ್ಕುಂದಿನಿಂದ ಸ್ಥಾವರಲಿಂಗಪೂಜೆಯಲ್ಲಿ ತೊಡಗಿದವರಾದ್ದರಿಂದ ಅವರು ಸ್ಥಾವರವನ್ನು ಕೂಡಲೇ ಬಿಟ್ಟುಬಿಡಲಿಲ್ಲ. ಆದರೂ ಮುಂದೆ ಇಷ್ಟಲಿಂಗದ ವಿಚಾರಗಳು ರೂಢವಾಗುತ್ತ ಹೋದ ಹಾಗೆ ಹಿಂದುಗಡೆಗೆ ಪ್ರಚಿದ್ಧಿಯನ್ನು ಹೊಂದಿದ ಶಿವಶರಣರೂ ಕೂಡ ಸ್ಥಾವರ ಪೂಜೆಯನ್ನು ಬಿಟ್ಟುಬಿಟ್ಟರು.'' ಹೀಗೆ ಇವರ ಅಭಿಪ್ರಾಯವಿರುತ್ತದೆ.

ಶ್ರೀ ಜಗದ್ಗುರು ಚನ್ನಬಸವದೇಶಿಕೇಂದ್ರ ಸ್ವಾಮಿಗಳು ನಿಡುಮಾವಿಡಿ ಮಠ ಇವರು ಈ ವಿಷಯದಲ್ಲಿ ಅಭಿಪ್ರಾಯಪಟ್ಟಿರುವದೇನಂದರೆ— ಬಸವಾದಿ ಪ್ರಮಥರು ಸ್ಥಾವರಲಿಂಗವನ್ನು ಒಪ್ಪಿರುವದರಿಂದ ಅದನ್ನು ಅಲ್ಲಗಳೆಯಲು ಬರಲಾರದು. 'ಇಷ್ಟಲಿಂಗವು ಸ್ಥಾವರವೆಂದೇ' ಶಿವಶರಣರ ವಾದ. (ಇದು ಜಂಗಮದೃಷ್ಟಿಯಿಂದ) 'ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ' ಇತ್ಯಾದಿ ಕೆಲ ವಚನಗಳು ಇದನ್ನು ಪುಷ್ಟೀಕರಿಸುತ್ತಿವೆ. ವ್ಯಕ್ತಿಗತ ಚೈತನ್ಯವನ್ನು ಆಹ್ವಾನಿಸಿ ನೆಲೆಗೊಳಿಸಿರುವದರಿಂದ ಅದು ಸ್ಥಾವರವಲ್ಲೆಂದು ತಾತ್ವಿಕ ಮತ. ಕೆಲ ಶಿವಶರಣರು ಪ್ರಾಜಿಸಿದ ಬಳ್ಳಹಿಕ್ಕಿಗಳಲ್ಲಿ ಅವರೇ ಸ್ವತಃ ಅವ್ಯಕ್ತವಾದ ಸಮಷ್ಟಿಚೈತನ್ಯವನ್ನು ಆಹ್ವಾನಿಸಿ ಪ್ರತ್ಯಕ್ಷ ಕಂಡು ಅನುಭವಿಸಿರುವರು. ಈ ದೃಷ್ಟಿಯಿಂದ ಅವರು ಇಷ್ಟಲಿಂಗಪೂಜಕರು. ವೀರಶೈವತ್ವಕ್ಕೆ ಸಲ್ಲುವರು. 'ಇಷ್ಟಲಿಂಗ' ಇದರ ಅರ್ಥ 'ತನಗೆ ಇಷ್ಟವಾದ ದೇವ' ಎಂಬುದೆ ಸಹಜಾರ್ಥ. ಶಾಸ್ತ್ರಗಳ ರೀತಿಯಲ್ಲಿ 'ಇಷ್ಟವಾದುದನ್ನು ಕೊಡುವಲಿಂಗ' ಎಂದರೂ ಸರಿಯೇ. ಇವೆರಡೂ ಅರ್ಥಗಳು ಆ ಶಿವಶರಣರು ಆರಾಧಿಸಿದ ಲಿಂಗಗಳಲ್ಲಿ ಸಮನ್ವಯವಾಗುತ್ತವೆ. ಅಲ್ಲದೆ ಅವರು ಒಲಿಸುವ ಮುನ್ನ ಅವು ಸ್ಥಾವರ. ಒಲಿಸಿ ಒಳ್ಗಣ್ಣಿನಿಂದ ಕಂಡು ತದಾತ್ಮತ್ವವನ್ನು ಪಡೆದ ಮೇಲೆ ಆ ಲಿಂಗಗಳು ಇಷ್ಟಲಿಂಗಗಳಾಗವೆ? ಅಗತ್ಯ ಅಗಬಲ್ಲವು, 'ಶಿಲೆ ಇಷ್ಟಲಿಂಗವಾದಂತೆ'. ಇದು ನಮ್ಮ ಅಭಿಪ್ರಾಯವನ್ನು ಸಂಕ್ಷಿಪ್ತವಾಗಿ ಲಿಖಿಸಲಾಗಿದೆ.

ಈ ಪ್ರಕಾರ ಭಿನ್ನಾಭಿಪ್ರಾಯಗಳನ್ನು ಉಭಯ ಮಹನೀಯರು ವ್ಯಕ್ತಪಡಿಸಿದ್ದಾರೆ. ವಾಚಕರು ಶಿವಶರಣರ ಚರಿತ್ರೆಗಳನ್ನು ಓದಿದವರಿದ್ದು ಅವರಲ್ಲಿ ಬಹು ಜನರು ಶಿವಾನುಭವದ ತತ್ವಗಳನ್ನು ಮನನ ಮಾಡಿಕೊಂಡವರೂ ಇದ್ದಾರೆ. ಈ ಮಹತ್ವದ ವಿಷಯವನ್ನು ಕುರಿತು ಅವರೂ ಕೂಡ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಬಹುದು. ಸ್ಥಳಸಂಕೋಚದ ಮೂಲಕ ನಾವು ನಮ್ಮ ಅಭಿಪ್ರಾಯುನ್ನು ಇಲ್ಲಿ ಪ್ರಕಟಿಸಿರುವದಿಲ್ಲ.

ಕನ್ನಡನಾಡಿನಲ್ಲಿ ಧಾರವಾಡ ಜಿಲ್ಲೆ ಹಾವೇರಿ ತಾಲೂಕಿನಲ್ಲಿ ವರದಾನದಿಯ ದಂಡೆಯ ಮೇಲೆ ಒಂದು ಕರಜಿಗೆ ಮತ್ತು ಅಕ್ಕಲಕೋಟೆ ಸಂಸ್ಥಾನದಲ್ಲಿ ಬೇರೊಂದು ಕರಜಿಗೆ ಹೀಗೆ ಎರಡು ಕರಜಿಗೆ ಗ್ರಾಮಗಳಿವೆ. ಇವುಗಳಲ್ಲಿ ಅಕ್ಕಲಕೋಟೆ ಸಂಸ್ಥಾನದಲ್ಲಿಯ ಕರಜಿಗೆಯೇ ಮುಸಣಯ್ಯನ ಗ್ರಾಮವೆಂದು ನಮಗೆ ತೋರುತ್ತದೆ. ಅವನ ಕಥೆಯನ್ನು ನೋಡಲಾಗಿ ಅವನು ಲಿಂಗಪೂಜೆಗೋಸ್ಕರ ಕುಳಿತ ನದಿಯು ಅವನ ಗ್ರಾಮವಿದ್ದ ನದಿಯ ದಂಡೆಯ ಮೇಲಿರದೆ ಅದರಿಂದ ದೂರವಾಗಿತ್ತೆಂದು ಕಂಡುಬರುತ್ತಿದೆ. ಹಾವೇರಿ ತಾಲೂಕಿನಲ್ಲಿಯ ಕರಜಿಗೆಯು ವರದಾನದಿಯ ದಂಡೆಯ ಮೇಲೆಯೇ ಇದೆ. ಆದ್ದರಿಂದ ಅದು ಮುಸಣಯ್ಯನ ಗ್ರಾಮವೆಂದು ತೋರುವದಿಲ್ಲ. ಈಚೆಗೆ ಪ್ರಸಿದ್ಧವಾದ ಶಿಲಾಹಾರರ ಒಂದು ಶಿಲಾಶಾಸನದಿಂದ ಮುಸಣಯ್ಯನ ಇಷ್ಟದೇವತೆಯಾದ 'ಗಜೇಶ್ವರ' ದೇವಾಲಯವು ಈ ಕರಜಿಗೆಯಲ್ಲಿಯೇ ಇದ್ದುದು ಗೊತ್ತಾಗುತ್ತದೆ. (೧) ಅಕ್ಕಲಕೋಟೆಯ ಹಿಂದಿನ ಅಧಿಪತಿಗಳು ತಮ್ಮಲ್ಲಿ ಸಂಗ್ರಹಿಸಿದ ಒಂದು ಶಿಲಾಶಾಸನದಿಂದ ತಿಳಿದುಬರುವದೇನೆಂದರೆ— "ತಗರ ಪುರವರಾಧೀಶ್ವರ, ಜೀಮೂತವಾಹನಾನ್ವಯ ಶರಚ್ಚಂದ್ರ ಸೆಳಆಕುಳಕಮಳ ಮಾರ್ತಂಡ, ಚಾಮುಂಡಿಕಾದೇವೀ ಲಬ್ಧವರ ಪ್ರಸಾದ, ಮುಂತಾದ ಬಿರುದುಗಳಿಂದ ಅಂಕಿತನಾದ ಈ ಇಂದರಸನು ಮೇಲೆ ನಿರ್ದಿಷ್ಟವಾದ ದಿನ ರಾಜ್ಯಾಂಗದ ಇನ್ನಿಬ್ಬರು ಅಧಿಕಾರಿಗಳೊಡನೆ ಸೇರಿ ಕರಜಿಗೆಯ ಶ್ರೀಸಿದ್ಧಗಜ್ಜೇಶ್ವರ ದೇವರ ಅಂಗಭೋಗ ನಿವೇದ್ಯಾದಿಗಳ ನಿಮಿತ್ತವಾಗಿ ಆ ದೇವರ ಮಠದ ಆಚಾರ್ಯರಾದ ಶ್ರೀಜ್ಞಾನಸಿದ್ಧ ದೇವರ ಪಾದೆಗಳನ್ನು ತೊಳೆದು ಆಣನ್ನೂರು—ಮುನ್ನೂರು ಈ ಭಾಗಕ್ಕೆ ಸೇರಿದ ಅಂಕುಲಿಗೆ—ಐವತ್ತು ಈ ಪ್ರದೇಶದೊಳಗಣ ಕರಂಜಿಗೆ ಎಂಬ ಗ್ರಾಮದಲ್ಲಿ ಭೂಮಿಯೇ ಮೊದಲಾದ ವಸ್ತುಗಳನ್ನು ಸರ್ವನಮಸ್ಯವಾಗಿ ದತ್ತಿಬಿಡುವನು" ಎಂಬ ಭಾವವುಳ್ಳ ಬರೆಹವು ಈ ಶಿಲಾಶಾಸನದಲ್ಲಿದೆ. ಇದರಲ್ಲಿ ನಿರ್ದೇಶಿಸಲ್ಪಟ್ಟ ಅಣಂದೂರು ಈಗಿನ ಅಕ್ಕಲ

---

(೧) ಮಿ. ಪಾಂಡುರಂಗ ಭೀ. ದೇಸಾಯಿ ಎಮ್. ಏ. ಇವರು ಪ್ರಬುದ್ಧ ಕರ್ನಾಟಕ ಪತ್ರಿಕೆಯ ೨೭ನೇ ಸಂಪುಟ ಸಂಚಿಕೆ ೨ ಪುಟ ೬೫ (೧೯೪೫ ಡಿಸೆಂಬರ) ಇದರಲ್ಲಿ ಪ್ರಕಟಮಾಡಿದ 'ಶಿಲಾಹಾರರ ಒಂದು ಪ್ರಾಚೀನ ಶಾಖೆ' ಎಂಬ ಶಿರೋಲೇಖವುಳ್ಳ ಬರಹ ನೋಡಿರಿ.

ಕೋಟಿ ಗ್ರಾಮದ ಉತ್ತರಕ್ಕೆ ೧೯ ಮೈಲು ದೂರವಿರುತ್ತದೆ. ಅಂಕುಲಿಗೆಯು ಈಗಿನ ಅಕ್ಕಲಕೋಟೆಯೇ ಇರುತ್ತದೆ. ಅಕ್ಕಲಕೋಟೆಯನ್ನು ಈಗಲೂ ಹಳ್ಳಿಯ ಜನರು ಅಂಕಲಕೋಟಿ ಎಂದು ಕರೆಯುತ್ತಾರೆ. ಕರಂಜಿಗೆಯು ಈ ಗ್ರಾಮಕ್ಕೆ ಸಮೀಪವಾಗಿರುವ ಕರಜಿಗೆಯು. ಇದೇ ಗಜೇಶ ಮಸಣಯ್ಯನ ಗ್ರಾಮವು. ಶಾಸನದಲ್ಲಿ ಉಲ್ಲೇಖವಾದ 'ಶ್ರೀಸಿದ್ಧಗಜ್ಜೇಶ್ವರ ದೇವರು' ಮಸಣಯ್ಯನ ಇಷ್ಟದೇವತೆಯಾದ 'ಗಜೇಶ್ವರ' ಎಂಬುದಿರುತ್ತದೆಂದು ನಮಗೆ ತೋರುತ್ತದೆ. ಗಜ್ಜೇಶ್ವರ ದೇವರು ಎಂಬುದರ ಬದಲು ಗಜೇಶ್ವರ ಎಂಬ ಹೆಸರು ಇವನ ವಚನಗಳಲ್ಲಿ ಬಂದಿರಬಹುದು. ಇದಲ್ಲದೆ ಈ ಕರಜಿಗೆಯ ಗ್ರಾಮದಲ್ಲಿ 'ಗಜ್ಜೇಶ್ವರ' ಎಂಬ ಹೆಸರಿನ ದೇವಾಲಯವು ಈಗಲೂ ಇರುತ್ತದೆ. ಈ ಗ್ರಾಮದಿಂದ ಪೂರ್ವಕ್ಕೆ ೪೦ ಮೈಲುಗಳ ಮೇಲೆ 'ಮನಹಳ್ಳಿ' ಎಂಬ ಗ್ರಾಮವಿದ್ದು ಅಲ್ಲಿ ಮಸಣಯ್ಯನ ದೇವಾಲಯವೂ ಉಂಟು. ಈಗ ಈ ಮನಹಳ್ಳಿ ಗ್ರಾಮವು ಕಲಬುರ್ಗಿ ಜಿಲ್ಲೆಯಲ್ಲಿ ತಾಲೂಕು ಸ್ಥಳವಾದ ಆಲ್ದಿಯ ಪೂರ್ವಕ್ಕೆ ಆರು ಮೈಲುಗಳ ಮೇಲಿರುತ್ತದೆ. ಈ ದೇವಾಲಯದ ಜಾತ್ರೆಯು ಪ್ರತಿವರುಷವಾಗುತ್ತದೆ. ಇಲ್ಲಿ ಮಸಣಯ್ಯನು ಕೆಲಕಾಲ ವಾಸಿಸಿರಬಹುದೆಂದು ತೋರುತ್ತದೆ. ಈ ಗ್ರಾಮದಿಂದ ಆರು ಮೈಲುಗಳ ಮೇಲೆ 'ತೊರೆ' ಅಥವಾ 'ಬೆಣ್ಣಿತೊರೆ' ಎಂಬ ಹೆಸರಿನ ಒಂದು ದೊಡ್ಡ ಹಳ್ಳವು ಹರಿಯುತ್ತಿದೆ. ಮಸಣಯ್ಯನು ಲಿಂಗಪೂಜೆಗೋಸ್ಕರ ಕುಳಿತ ನದಿಯು ಇದೇ ಆಗಿರಬಹುದೆಂದು ತೋರುತ್ತದೆ. ಇವೆಲ್ಲ ಸಂಗತಿಗಳನ್ನು ನಿರೀಕ್ಷಿಸಿದಲ್ಲಿ ಮಸಣಯ್ಯನ ಗ್ರಾಮವು ಅಕ್ಕಲಕೋಟೆಗೆ ಸಮೀಪವಿರುವ ಕರಜಿಗೆಯೇ ಇರುತ್ತದೆಂದು ತೋರುತ್ತದೆ. ಈ ಕರಜಿಗೆಯು ತರ್ದವಾಡಿ ಎಂದರೆ ಮಂಗಳವಾಡ ನಾಡಿನಲ್ಲಿ, ಮಂಗಳವಾಡದಿಂದ ಪೂರ್ವಕ್ಕೆ ೪೦ ಮೈಲುಗಳ ಮೇಲೆ ಇರುತ್ತದೆ. ಈ ಭಾಗದಲ್ಲಿಯೇ ಬಸವೇಶ್ವರನ ಕಾಲದಲ್ಲಿ ಬಹುಜನ ಶಿವಶರಣರು ಆಗಿಹೋಗಿದ್ದಾರೆ.

ಮಸಣಯ್ಯನ ಕೆಲವು ವಚನಗಳನ್ನು ಮಾತ್ರ ನಾವು ಇಲ್ಲಿ ಉದಹರಿಸುತ್ತೇವೆ.

ವಚನಗಳು.

(೧) ಆಲಿಕಲ್ಲು, ಮರದ ಗಿರಿಯಲಿಹ ಮಗಮಗಿಸುವ ಗಾಳಿ, ಉಂಡು ಉರವಣಿಸುವ ಪಕ್ಷಿಗಳು, ಸರಗೈವ ಕೋಗಿಲೆ, ಗಗನದ

ಚಂದ್ರಮ, ನೀವತ್ತ ಸಾರಿರೇ. ಆಗಲಲಾರೆನು ಸಖಿಯೇ. ಬೆಳುದಿಂಗಳು ಬಿಸಿಲಾಯಿತ್ತು. ಆಗಲಲಾರೆನು ಎನ್ನಿನಿಯನ. ದಶಾವಸ್ಥೆಗೊಂಡೆನು ಮಹಾಲಿಂಗ ಗಜೇಶ್ವರನನುಳಿದಡೆ.

(೨) ಗಿಡುಮರದ ಕುರುಬಿತಿಯ ಜವ್ವನದಂತೆ ನುಡಿಯಲರಿಯದೆ ಮುಗ್ಧೆಯಾಗಿರ್ದೆನವ್ವಾ. ಹಗಲನರಿಯದ ಜಕ್ಕವಕ್ಕಿಯಂತೆ ಮನಬಯಸುತಿರ್ದೆನವ್ವಾ. ಹಲವು ಕಾಲ ಎಲವದ ಮರನ ಸಾರಿರ್ದರಗಿಳಿಯಂತಾದೆನವ್ವಾ. ಇಂದೆಮ್ಮ ಮಹಾಲಿಂಗ ಗಜೇಶ್ವರನ ಬರವ ಕಾಣದೆ ಇವರೆಲ್ಲರ ವಿಧಿಯ ಹೊತ್ತೆನವ್ವಾ.

(೩) ಋತುಕಾಲ ಕೋಗಿಲೆಯಂತೆ ನುಡಿಯದಂತಿರ್ದಳಲ್ಲಾ. ಪರಿಮಳ ತಪ್ಪಿದ ಭ್ರಮರನಂತೆ ಸುಳಿ ಸುಳಿಗೊಳುತಿರ್ದಳಲ್ಲಾ. ಫಲವು ತಪ್ಪಿದ ಬಂಜೆವನದೊಳಗಣ ಅರಗಿಳಿಯಂತಿರ್ದಳಲ್ಲಾ. ದರದುರದ ಜವ್ವನದಲ್ಲಿ ತೋರಣದೆಲೆಯಂತೆಯಾದಳಲ್ಲಾ. ಮಹಾಲಿಂಗ ಗಜೇಶ್ವರನ ನೆರೆವ ಭರದಿಂದ ಮರುಳುಗೊಂಡಳಲ್ಲಾ.

(೪) ಒಳಗೆ ಶೋಧಿಸಿ, ಹೊರಗೆ ಧವಳಿಸಿ, ಭಾವದಿಂದ ಗುಡಿ ತೋರಣವ ಕಟ್ಟಿದೆನಯ್ಯ. ಲಿಂಗ ಬಾರಯ್ಯ. ಎನ್ನ ದೇವ ಬಾರಯ್ಯ. ಎನ್ನಂತರಂಗದ ಪರಂಜ್ಯೋತಿಯೇ, ನಿಮ್ಮ ನಾನಿದಿಂಗೊಂಬೆ. ನೀ ಬಾರಯ್ಯ. ಎನ್ನ ಮಹಾಲಿಂಗ ಗಜೇಶ್ವರಾ ನೀ ಬಾರಯ್ಯ.

(೫) ನೀನೊಲಿದು ಕೂರ್ತವರು, ನಿಮಗೊಲಿದು ಕೂರ್ತವರು, ನಿಮ್ಮ ಸರಿಯೇ ಅವರು, ನಿಮ್ಮ ರೂಹೇ ಅವರು. ಆಳಾರು, ಅರಸಾರೆಂದು ಅರಿಯಬಾರದು. ನಿಮ್ಮ ರೂಹೇ. ಮಹಾಲಿಂಗ ಗಜೇಶ್ವರನ ನೊಲಿದು ಪೂಜಿಸಿದವರು ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ, ಸಾಯುಜ್ಯ ಪದವಿಗಳ ಪಡೆದರು. ಎನಗೆ ನಿಮ್ಮ ತೊತ್ತು ಸೇವೆಯೇ ಸಾಕು.

(೬) ಮಾತಂಗಿಯ ಹೊಳೆಯಲಿ ಉತ್ತಮನ ನೆಳಲು ಸುಳಿದಡೆ ರೂಹು ಹೊಲೆಯನಾಗಬಲ್ಲುದೇ ಅಯ್ಯ? ಮರ್ತ್ಯಲೋಕದ ಮಾನವರೊಗೆ ಶರಣ ಸುಳಿದಡೆ ಶರಣ ಸೂತಕಿಯಾಗಬಲ್ಲನೇ ಅಯ್ಯ? ಮರ್ತ್ಯರ ಭವಿತನವ ಅಗಿದೊಗೆಯದೆ ಮಾಬನೇ ಮಹಾಲಿಂಗ ಗಜೇಶ್ವರಯ್ಯ?

(೭) ಮಾಗಿಯ ಹುಲ್ಲಿನ ಸೋಂಕಿನಂತೆ ತನು ಪುಳುಕಿತಳಾದ ಳವ್ವೆ. ನುಡಿ ತೊದಲು. ಆತನ ಒಲುಮೆ ಆಧಾರವಾಗಿದ್ದಳವ್ವೆ. ಬಿಳಿಯ ತುಂಬಿ ಕುಂಕುಮದ ರಜದಲ್ಲಿ ಬಂಡುಂಡಂತೆ ಮಹಾಲಿಂಗ ಗಜೇ ಶ್ವರನಲ್ಲಿ ತನ್ನ ತಾನೆ ರತಿಯಾಗಿರ್ದಳವ್ವೆ.

(೮) ದೇವರ ನೆನೆದು ಮುಕ್ತರಾದೆವೆಂಬ ಯುಕ್ತಿಶೂನ್ಯರ ಮಾತು ಕೇಳಲಾಗದು. ಅದೇನು ಕಾರಣವೆಂದಡೆ, ದೇವರ ನೆನೆದವರಿಂಗೆ ದೇವ ರುಂಟೇ? ದೂರದೂರದಲ್ಲಿದ್ದವರ ನೆನೆವರಲ್ಲದೆ ಸಮೀಪದಲ್ಲಿದ್ದವರನಾರು ನೆನೆದವರಿಲ್ಲ. ಇದನರಿದು ನಿನ್ನೊಳಡಗಿ ನಾ ನಿನ್ನ ನೆನೆಯಲಿಲ್ಲ. ನನ್ನೊಳಡಗಿ ನೀನೆನಗೆ ಮುಕ್ತಿಯನೀಯಲಿಲ್ಲ. ಇದು ಕಾರಣ ನಾ ನಿನ್ನ ನೆನೆಯಲಿಲ್ಲ ಮಹಾಲಿಂಗ ಗಜೇಶ್ವರಾ.

(೯) ಬಾಲಕ ಹಾಲ ಸವಿದಂತೆ, ಮರುಳನ ಮನದ ನೆನಹಿನಂತೆ, ಮೂಗ ಕಂಡ ಕನಸಿನಂತೆ, ಮೆಯ್ಯರಿಯದ ನೆಳಲಿನಂತೆ, ಬಂಜೆಯ ಮನದ ಸ್ನೇಹದಂತೆ, ಮಹಾಲಿಂಗ ಗಜೇಶ್ವರನಲ್ಲಿ ಐಕ್ಯ. ವಾರಿಕಲ್ಲ ಪತ್ಥಳಿ ಕರಗಿ ಅಪ್ಪುವ ಕೂಡಿದಂತಾಯಿತ್ತು.

(೧೦) ಹೊಸ ಮದುವೆಯ ಹಸೆಯಡಗದ ಮುನ್ನ, ಹೂಸಿದ ಅರಿಸಿನ ಬಿಸಿಲಿಂಗೆ ಹರಿಯದ ಮುನ್ನ, ತನು ಸಂಚಲವಡಗಿ ಮನವು ಗುರುಕಾರುಣ್ಯವ ಪಡೆದು ಹುಸಿಯಲ್ಲದಿರ್ದಡೆ ಭಕ್ತನೆಂಬೆ. ಹಿಡಿಯ ಲಿಲ್ಲದಿರ್ದಡೆ ಮಹೇಶ್ವರನೆಂಬೆ. ತನುವಿಲ್ಲದಿರ್ದಡೆ ಪ್ರಸಾದಿಯೆಂಬೆ. ಜೀವವಿಲ್ಲದಿರ್ದಡೆ ಪ್ರಾಣಲಿಂಗಿಯೆಂಬೆ. ಆಸೆ ಇಲ್ಲದಿರ್ದಡೆ ಶರಣ ನೆಂಬೆ. ಇದರ ಸಂಪರ್ಕ ವಿಯೋಗವಾದಡೆ ಐಕ್ಯನೆಂಬೆ. ಐಕ್ಯದ ಸಂತೋಷ ಹಿಂಗಿದಡೆ ಜ್ಯೋತಿರ್ಮಯನೆಂಬೆ. ಇಂತಾಗಬೇಕೆಂಬ ಈ ಮನದ ದೇಹವನರಿದಡರಿಯದು, ತರಿದಡರಿಯದು, ಬೈದಡರಿಯದು, ಕೊಯ್ದಡರಿಯದು, ನಿಂದಿಸಿದಡರಿಯದು, ಸ್ತುತಿಸಿದಡರಿಯದು, ಸುಖ ವನರಿಯದು, ದುಃಖವನರಿಯದು. ಈ ಚತುರ್ವಿಧದ ತಾಗುನಿರೋ ಧವನರಿಯದಿರ್ದಡೆ ಆತನೇ ಮಹಾಲಿಂಗ ಗಜೇಶ್ವರನೆಂಬೆ.

ಇವೆಲ್ಲವೂ ಅಮೋಘವಾದ ವಚನಗಳು. ಭಕ್ತಿಯ ಪ್ರವಾಹವು ಇವುಗಳಲ್ಲಿ ಹೇಗೆ ಪ್ರವಹಿಸುತ್ತದೆಂಬುದನ್ನು ವಾಚಕರು ಲಕ್ಷಿಸತಕ್ಕದ್ದು.

ಈ ವಚನಗಳನ್ನು ನೋಡಿದಲ್ಲಿ ಶಿವಶರಣರು ಕನ್ನಡವನ್ನು ಚನ್ನಾಗಿ ಬಲ್ಲವರು, ಅತ್ಯಂತ ವಿದ್ವಾಂಸರು, ಜ್ಞಾನಿಗಳು, ಶಿವಾನುಭವದಂತೆ ನಡೆದವರು, ಅನುಭವವನ್ನು ಹೊಂದಿ ನುಡಿದವರು, ಎಂಬುದು ಸ್ಪಷ್ಟವಾಗುತ್ತದೆ. ನಾವು ಮೇಲೆ ಕಾಣಿಸಿದ ೧೦ ನೆಯ ಒಂದೇ ಒಂದು ವಚನದಲ್ಲಿ ಷಟ್‌ಸ್ಥಲಗಳ ಮರ್ಮವನ್ನೆಲ್ಲ ಗಜೇಶಮಸಣಯ್ಯನು ಹೇಗೆ ಸ್ಪಷ್ಟಪಡಿಸಿದ್ದಾನೆಂಬುದನ್ನು ವಾಚಕರು ಲಕ್ಷಿಸತಕ್ಕದ್ದು.

ನುಲಿಯ ಚಂದಯ್ಯ.

ಕಲ್ಯಾಣ ಪಟ್ಟಣದಲ್ಲಿ ನುಲಿಯ ಚಂದಯ್ಯನೆಂಬ ಶಿವಶರಣನು ವಾಸಮಾಡುತ್ತಿದ್ದನು. ಅವನು ದಿನಾಲು ಹಳ್ಳಕ್ಕೆ ಹೋಗಿ ಅಲ್ಲಿದ್ದ ಪೆದೆಯ ಹುಲ್ಲನ್ನು ಕೊಯ್ದು ಅದರಿಂದ ಹಗ್ಗ ಮತ್ತು ಕಣ್ಣಿಗಳನ್ನು ಮಾಡಿ ಅವುಗಳನ್ನು ಮಾರಿ, ಬಂದ ಹಣದಿಂದ ಜಂಗಮ ದಾಸೋ ಹವನ್ನು ನಡಿಸುತ್ತಿದ್ದನು. ಇದೇ ಅವನ ಕಾಯಕವಾಗಿತ್ತು. ಇದ ರಿಂದ ಅವನಿಗೆ 'ನುಲಿಯ ಚಂದಯ್ಯ'ನೆಂಬ ಹೆಸರು ಪ್ರಾಪ್ತವಾಗಿತ್ತು.

ಅವನು ಜಂಗಮ ದಾಸೋಹವು ಲಿಂಗಪೂಜೆಗಿಂತ ಅಧಿಕವು, ಲಿಂಗಕ್ಕೆ ಮಾಡುವ ಅಷ್ಟವಿಧ ಪೂಜೆ, ಷೋಡಶೋಪಚಾರಗಳು ಲಿಂಗ ಪೂಜೆಯಲ್ಲ, ಲಿಂಗ ಪೂಜೆಯು ಜಂಗಮ ಪೂಜೆಯಲ್ಲಿಯೇ ಅಡಕವಾ ಗಿರುತ್ತದೆ, ಎಂದು ಭಾವಿಸಿ, ಜಂಗಮ ಪೂಜೆಯಲ್ಲಿ ಮಗ್ನನಾಗಿರು ತ್ತಿದ್ದನು. ಮತ್ತು ಲಿಂಗ ಪೂಜೆಗೆ ಯಾವ ಸ್ಥಾನವಿದೆಯೋ ಅದನ್ನು ಅವನು ಉಪೇಕ್ಷಿಸುತ್ತಿದ್ದನು.

ಶಿವಾನುಭವದ ಪ್ರಕಾರ ಜಂಗಮತ್ವವು ಲಿಂಗಕ್ಕೆ ಚೈತನ್ಯಾತ್ಮಕ ವಾಗಿರುತ್ತದೆ. ಆದ್ದರಿಂದ ಅವನು ಜಂಗಮ ತತ್ವವೇ ಶ್ರೇಷ್ಠವಾದುದು, ಗುರೂಪದೇಶವು ಇಷ್ಟಲಿಂಗದಲ್ಲಿ ರೂಪುಗೊಂಡಿರುವದರಿಂದ ಅದು ಕೇವಲ ಕ್ರಿಯೆಯ ಅಥವಾ ಆಚಾರದ ದ್ಯೋತಕವಾಗಿದೆ ಎಂತಲೂ ಜಂಗಮವು ಜ್ಞಾನಕ್ಕೆ ಸಂಬಂಧಿಸಿರುವದರಿಂದ ಅದು ಕ್ರಿಯೆಗಿಂತ ಅಧಿಕವಾದುದೆಂತಲೂ ತಿಳಿದು ಅದರಂತೆ ಆಚರಿಸುವವನಾಗಿದ್ದನು.

ಹೀಗಿರುವಲ್ಲಿ ಅವನು ಒಂದು ದಿವಸ ಹಳ್ಳಕ್ಕೆ ಹೋಗಿ ಮೆದೆಯ ಹುಲ್ಲನ್ನು ಕೊಯ್ಯುತ್ತಿರುವಾಗ ಅವನು ಧಾರಣಮಾಡಿಕೊಂಡಿದ್ದ ಇಷ್ಟ ಲಿಂಗವು ಅವನನ್ನು ಪರೀಕ್ಷಿಸುವ ಉದ್ದಿಶ್ಯವಾಗಿ ಅವನ ಸೆಜ್ಜೆಯೊಳಗಿಂದ ಹೊರಗೆ ಜಗುಳಿ ನೀರಿನಲ್ಲಿ ಬಿದ್ದಿತು. ಆದರೆ ಚಂದಯ್ಯನು ಅದನ್ನು ಎತ್ತಿ ತೆಗೆದುಕೊಂಡು ಧಂಸಿಕೊಳ್ಳಲಿಲ್ಲ. ಅವನು ಹಾಗೆಯೇ ಮೆದೆಯ ಹುಲ್ಲನ್ನು ಕೊಯ್ದು ಹೊರಗಟ್ಟಿ ಹೊತ್ತುಕೊಂಡು ಮನೆಯ ಹಾದೀ ಹಿಡಿದನು.

ಲಿಂಗಕ್ಕೆ ಜಂಗಮವು ಪ್ರಾಣವಾದುದು. ಆದುದರಿಂದ ಜಂಗಮ ಪ್ರಾಣಿಯಾದ ಚಂದಯ್ಯನು ಲಿಂಗವನ್ನು ಬಿಟ್ಟು ಮನೆಗೆ ಹೊರಡಲು ಆ ಲಿಂಗವೂ ಕೂಡ ಅವನ ಜೆನ್ನುಹತ್ತಿ ಹೋಗಲು ಸಿದ್ಧವಾಯಿತು. ಆಗ ಅದು ಅವನಿಗೆ – ಎಲೋ ಚಂದಯ್ಯನೇ, ನಾನೂ ನಿನ್ನ ಕೂಡ ಮನೆಗೆ ಬರುತ್ತೇನೆ. ನಿನ್ನನ್ನು ಬಿಟ್ಟು ನಾನಿರಲಾರೆನು, ಎಂದು ನೀರಿನ ಹೊರಗೆ ಬಂದು ಧ್ವನಿಮಾಡಿತು. ಅದನ್ನು ಚಂದಯ್ಯನು ಕೇಳಿ, ಲಿಂಗಕ್ಕೆ—ನೀನು ನಿನ್ನ ಭಾವವು ಹೇಗೆ ಇದೆಯೋ ಹಾಗೆಯೇ ಮಾಡು. ಆದರೆ ನನಗೆ ಮಾತ್ರ ನನ್ನ ಜಂಗಮ ಸೇವೆಯೇ ಇರಲಿ, ಎಂದು ನುಡಿದು ಮುಂದೆ ಹೋಗುತ್ತಿರಲು, ಆ ಲಿಂಗವು ತನ್ನ ವೃತ್ತ, ಗೋಳಕ, ಗೋಮುಖಾಕಾರಗಳನ್ನು ಬಿಟ್ಟು ಪುರುಷಾಕಾರವನ್ನು ತಳೆದು—ಚಂದಯ್ಯನೇ, ನಾನು ಬಂದೆನು. ನನ್ನನ್ನು ಬಿಟ್ಟು ಹೋಗಬೇಡ ಎಂದೆನ್ನಲು, ಅದಕ್ಕೆ ಚಂದಯ್ಯನು—ಮೊದಲು ನನ್ನನ್ನು ಬಿಟ್ಟು ನೀನೇ ಹೋಗಿರುವಿ. ಈಗ ನನ್ನ ಕೂಡ ಬರುವೆನೆಂದರೆ ಅದಕ್ಕೆ ನಾನು ಒಪ್ಪುವದಿಲ್ಲ, ಎಂದು ನುಡಿದನು. ಅದಕ್ಕೆ ಆ ಲಿಂಗಪುರುಷನು—ನೀನೊಲ್ಲೆನೆಂದರೆ ನಾನು ನಿನ್ನನ್ನು ಬಿಡುವದಿಲ್ಲ, ಎಂದು ಅಂದು ಅವನ ಜೆನ್ನು ಹತ್ತಿ ಬರಹತ್ತಿದನು.

ಹೀಗೆ ಉಭಯತರು ಬರುತ್ತಾ ಇರುವಲ್ಲಿ, ದಾರಿಯಲ್ಲಿ ಶರಣ ಶ್ರೇಷ್ಠನಾದ ಮಡಿವಾಳ ಮಾಚಿದೇವನು ನದಿಯ ದಂಡೆಯ ಮೇಲೆ ಸೀರೆಗಳನ್ನು ಒಗೆಯುತ್ತ ನಿಂತದ್ದನ್ನು ಆ ಲಿಂಗದೇವನು ಕಂಡನು. ಆಗ ಅವನು ಚಂದಯ್ಯನಿಗೆ ಅಂದದ್ದು—ಇಲ್ಲಿ ಮಾಚಿದೇವನಿದ್ದಾನೆ. ಅವನ ಬಳಿಗೆ ನಾವು ಹೋಗುವಾ ಎಂದು ಹೇಳಲು, ಉಭಯತರು ಅವನಲ್ಲಿಗೆ ಬರಲು, ಮಾಚಿದೇವನು ಅವರಿಬ್ಬರಿಗೆ ನಮಸ್ಕರಿಸಿ—

ನೀವಿಬ್ಬರು ಇಲ್ಲೇಕೆ ಬಂದಿರೆಂದು ಕೇಳಲು, ಆ ಲಿಂಗದೇವನು—ನಾನು ಚಂದಯ್ಯನ ಸೆಜ್ಜೆಯಿಂದ ಹೊರಗೆ ಬಿದ್ದೆನು. ಇದೇ ನನ್ನ ತಪ್ಪಾಯಿತು. ಇಷ್ಟಕ್ಕೆ ಚಂದಯ್ಯನು ನನ್ನನ್ನು ಬಿಟ್ಟುಕೊಟ್ಟು ಹೋಗಬೇಕೇ? ಇವನಿಗೆ ತಾವು ತಿಳಿ ಹೇಳಬೇಕೆಂದು ಅವನಿಗೆ ಬಿನ್ನವಿಸಿಕೊಂಡನು.

ಆಗ ಮಾಚಯ್ಯನು ಚಂದಯ್ಯನಿಗೆ— ನಿನ್ನ ಇಷ್ಟಲಿಂಗವು ನಿನ್ನ ಜೆನ್ನುಹತ್ತಿ ಬಂದರೆ, ಹೀಗೆ ನೀನು ಬಿಟ್ಟು ಹೋಗಬೇಕೇ? ಇದು ಶಿವ ಶರಣರ ನಡೆಯಲ್ಲ ಎಂದೆನ್ನಲು, ಚಂದಯ್ಯನು— ಸೆಜ್ಜೆಯಿಂದ ಲಿಂಗವು ಬಿದ್ದಿತು ಮತ್ತು ಪುನಃ ಬಂದಿತು ಎಂಬುದಿಲ್ಲ. ಘನಲಿಂಗವು ಎಲ್ಲೆಡೆಯಲ್ಲಿಯೂ ಪರಿಪೂರ್ಣವಾಗಿರುತ್ತದೆ. ಆದ್ದರಿಂದ ಲಿಂಗವು ಹೋಯಿತು, ಬಂದಿತು ಎಂಬ ಸಂದೇಹವು ಇರಲಾಗದು. ಇಂಥ ಸಂದೇಹವು ಇದ್ದುದಾದರೆ, ಆ ಲಿಂಗವು ಹೇಗೆ ಉಳಿದೀತು? ಆತ್ಮನು ಹೋದರೆ ಈ ಘಟವು ಹೇಗೆ ಉಳಿದೀತು? ನನ್ನ ಜಂಗಮತ್ವದಲ್ಲಿಯೇ ಲಿಂಗವಿದೆ ಎಂದು ನುಡಿದನು.

ಅದಕ್ಕೆ ಮಾಚಯ್ಯನು— ದೇಹಧರ್ಮವಿರುವ ತನಕ ಲಿಂಗಪೂಜೆಯನ್ನು ಬಿಡಕೂಡದು. ಗುರುಲಿಂಗಜಂಗಮಗಳಿಗೆ ಸಹ ಲಿಂಗವಿದೆ. ಅವೂ ಕೂಡ ತಮ್ಮ ತಮ್ಮ ಲಿಂಗಗಳನ್ನು ಪೂಜಿಸಬೇಕು. ತನ್ನನ್ನು ತಾನು ಅರಿಯಬೇಕಾದರೆ ಅಂಗದಲ್ಲಿ ಲಿಂಗವಿರಬೇಕು ಎಂದು ಹೇಳಿದನು.

ಅದಕ್ಕೆ ಚಂದಯ್ಯನು— ಭಾವಶುದ್ಧವಾಗಿರುವದೇ ಗುರುಪೂಜೆ. ಜ್ಞಾನಶುದ್ಧವಾಗಿರುವದೇ ಲಿಂಗಪೂಜೆ. ತ್ರಿಕರಣಶುದ್ಧವಾಗಿರುವದೇ ಜಂಗಮಪೂಜೆ. ಇದೇ ಪರಮಾತ್ಮನಿಗೆ ಅರ್ಪಿತವು ಎಂದು ಅಂದನು.

ಅದಕ್ಕೆ ಮಾಚಯ್ಯನು— ಚಂದಯ್ಯನೇ, ಇದೊಂದು ದೊಡ್ಡ ತೊಡಕು. ಇದು ನನಗೆ ತಿಳಿಯದು. ಶಿವಾನುಭವಮಂಟಪದಲ್ಲಿ ಬಸವಾದಿ ಪ್ರಮಥರಿದ್ದಾರೆ. ಅಲ್ಲಿಗೆ ನಾವು ಮೂವರೂ ಹೋಗುವಾ ಎಂದು ನುಡಿದನು.

ಅದಕ್ಕೆ ಚಂದಯ್ಯನು— ನನಗೆ ಜಂಗಮಾರ್ಚನೆಯ ವೇಳೆಯಾಗಿದೆ. ಅದನ್ನು ನಾನು ಬಿಡಲಾರೆನು. ಅದು ಮುಗಿದ ಬಳಿಕ ಶಿವಾನು

ಭವ ಮಂಟಪಕ್ಕೆ ಬರುವೆನು. ಅಷ್ಟರಲ್ಲಿ ನೀನೂ ಅಲ್ಲಿಗೆ ಬರಬೇಕೆಂದು ಬಿನ್ನವಿಸಿಕೊಂಡನು.

ಆಮೇಲೆ ಲಿಂಗದೇವನು ಚಂದಯ್ಯನಿಗೆ— ನಿನ್ನ ಜಂಗಮಾರ್ಚನೆಯಲ್ಲಿ ನಾನು ನಿನಗೆ ನೆರವಾಗುವೆನು. ನಿನ್ನ ಕೂಡ ಬರಲು ನನಗೆ ಅಪ್ಪಣೆಕೊಡಬೇಕು ಎಂದು ಕೇಳಿಕೊಳ್ಳಲು, ಚಂದಯ್ಯನು—ನೀನು ಬರುವದಾದರೆ, ನೀನು ನನ್ನ ಕಾಯಕ ಮಾಡಬೇಕು. ಇಗೋ, ಈ ನನ್ನ ಮೆಲೆಯ ಹುಲ್ಲನ್ನು ಹೊತ್ತುಕೊಂಡು ನಡೆ. ಅದರಿಂದ ನೀನು ನುಲಿಯನ್ನು ಹೊಸೆದು ಕಣ್ಣಿಯನ್ನು ಮಾಡಿ ಅದನ್ನು ಮಾರಿ ಅದರಿಂದ ಬಂದ ಹಣದಿಂದ ನೀನು ನನ್ನ ಜಂಗಮದಾಸೋಹದಲ್ಲಿ ನೆರವಾಗಬೇಕು. ಇದಕ್ಕೆ ಒಪ್ಪಿದೆಯಾದರೆ ನನ್ನ ಕೂಡ ಬಾ ಎಂದು ಹೇಳಲು ಆ ಲಿಂಗದೇವನು ಅದಕ್ಕೆ ಒಪ್ಪಲು, ಉಭಯತರು ಮಡಿವಾಳಯ್ಯನನ್ನು ನಮಸ್ಕರಿಸಿ ಮನೆಯ ಕಡೆಗೆ ಹೊರಟರು.

ಅವರು ಮನೆಗೆ ಬಂದ ಬಳಿಕ ಲಿಂಗದೇವನು ತಾನು ಒಪ್ಪಿಕೊಂಡ ಪ್ರಕಾರ ನುಲಿಯನ್ನು ಹೊಸೆದು ಹಗ್ಗವನ್ನು ಮಾಡಹತ್ತಿದನು. ಅದರಿಂದ ಒಂದು ಕಣ್ಣಿಯನ್ನು ಮಾಡಿ ಅದನ್ನು ಅಂಗಡಿಗೆ ಮಾರಲಿಕ್ಕೆ ಹೋಗಲು ಅಂಗಡಿಯವನು ಈ ನುಲಿಯು ಬಹಳ ಗಂಟುಳ್ಳದ್ದಿದೆ ಎಂದು ಧಿಕ್ಕರಿಸಿಬಿಟ್ಟನು. ಆಗ ಅವನು ಪೇಟೆಯಲ್ಲಿಯ ಬೇರೆ ಅಂಗಡಿಗಳಿಗೆ ಹೋಗಿ ತೋರಿಸಲು, ಅಂಗಡಿಯವರಾರೂ ತೆಗೆದುಕೊಳ್ಳಲಿಲ್ಲ. ಆಗ ಲಿಂಗದೇವನು ಜಂಗಮಕಾಯಕವು ನನ್ನಿಂದ ಚಂದಯ್ಯನಿಗೆ ತಪ್ಪುವದೆಂದು ಭೀತಿಯುಳ್ಳವನಾಗಿ, ಕಡೆಗೆ ಉಪಾಯಗಾಣದೆ ಬಸವೇಶ್ವರನಲ್ಲಿಗೆ ಹೋಗಿ ಕಣ್ಣಿಯನ್ನು ಮಾರತೆಗೆದುಕೊಳ್ಳಲು ಅವನಿಗೆ ಕೇಳಿದನು. ಅವನು ನಡೆದ ಎಲ್ಲ ಸಂಗತಿಗಳನ್ನು ತನ್ನ ಲಿಂಗದಲ್ಲಿ ತಿಳಿದು, ಆ ಕಣ್ಣಿಗೆ ಒಂದು ಸಾವಿರ ಹೊನ್ನುಗಳನ್ನು ಕೊಟ್ಟು ಅದನ್ನು ತೆಗೆದುಕೊಂಡನು. ಆಗ ಲಿಂಗದೇವನು ಬಹಳ ಹರುಷಿತನಾಗಿ ಆ ಹಣವನ್ನು ತೆಗೆದುಕೊಂಡು ಚಂದಯ್ಯನಲ್ಲಿಗೆ ಬಂದು ಆ ಹಣವನ್ನೆಲ್ಲ ಅವನ ಮುಂದೆ ಸುರಿಯಲು ಅದನ್ನು ಚಂದಯ್ಯನು ಕಂಡು ಇಷ್ಟು ಹಣ ನಿನಗೆ ಎಲ್ಲಿಂದ ಬಂದಿತು? ಇದನ್ನು ನೀನು ಕಳವು ಮಾಡಿ ತಂದೆಯಾ? ಎಂದು ಕೇಳಲು, ಲಿಂಗದೇವನು ನಡೆದ ಎಲ್ಲ ಸಂಗತಿಗಳನ್ನು ತಿಳಿ

ಸಲು ಚಂದಯ್ಯನು— ಇದು ಕಾಯಕದ ರೀತಿಯಲ್ಲ. ಈ ಕಣ್ಣಿಯ ಬೆಲೆಯು ಒಂದು ಹಾಗ ಮಾತ್ರ. ಆದ್ದರಿಂದ ಈ ಹೊನ್ನುಗಳನ್ನು ಬಸವೇಶ್ವರನಿಗೆ ತಿರುಗಿ ಕೊಟ್ಟು ಒಂದು ಹಾಗದಷ್ಟು ರೊಕ್ಕ ಮಾತ್ರ ತಂದುಕೊಡು ಎಂದು ಹೇಳಿದನು.

ಆಗ ಲಿಂಗದೇವನು ಖಿನ್ನಮನಸ್ಕನಾಗಿ ಬಸವೇಶ್ವರನಲ್ಲಿ ತಿರುಗಿ ಬಂದು ಹೊನ್ನುಗಳನ್ನೆಲ್ಲ ಅವನಿಗೆ ಕೊಟ್ಟು ಅವನಿಂದ ಕಣ್ಣಿಯ ಬೆಲೆ ಒಂದು ಹಾಗ ಮಾತ್ರ ತಂದು ಚಂದಯ್ಯನಿಗೆ ತಂದೊಪ್ಪಿಯಾಗಿಸಿದನು. ಚಂದಯ್ಯನು ಅದರಿಂದ ಜಂಗಮಾರ್ಚನೆಯ ಪದಾರ್ಥಗಳನ್ನು ತಂದು ಜಂಗಮನಿಗೆ ನೀಡಿ ಅಂದಿನ ದಿನ ತನ್ನ ಶಿವಭಕ್ತಿಯನ್ನು ಆಚರಿಸಿದನು.

ಆಮೇಲೆ ಚಂದಯ್ಯನು ತಾನು ಮಡಿವಾಳಮಾಚಿದೇವನಿಗೆ ಮಾತು ಕೊಟ್ಟಂತೆ ಲಿಂಗದೇವನೊಡನೆ ಶಿವಾನುಭವಮಂಟಪಕ್ಕೆ ಬಂದು ಅಲ್ಲಿ ನೆರೆದಿದ್ದ ಪ್ರಭುದೇವ, ಬಸವ, ಮಡಿವಾಳಮಾಚಿದೇವ, ಚನ್ನಬಸವ ಮೊದಲಾದ ಶಿವಜ್ಞಾನಿಗಳಿಗೆ ಸಾಷ್ಟಾಂಗವೆರಗಿದನು ಮತ್ತು ಆವರೆಗೆ ನಡೆದ ಸಂಗತಿಗಳನ್ನೆಲ್ಲ ಅವರಿಗೆ ನಿವೇದಿಸಿದನು.

ಚಂದಯ್ಯನು ತನ್ನ ಆಚರಣೆಯನ್ನು ಕುರಿತು ಶಿವಶರಣರೊಡನೆ ಅಂದದ್ದೇನೆಂದರೆ— ಗುರುಸೇವೆಯಿಂದ ಇಹದಲ್ಲಿ ಮತ್ತು ಲಿಂಗಸೇವೆಯಿಂದ ಪರದಲ್ಲಿ ಸುಖವಿದೆ. ಆದರೆ ಜಂಗಮಸೇವೆ ಮಾಡಿದಲ್ಲಿ ಇಹಪರವೆರಡೂ ಸಾಧಿಸುತ್ತವೆ. ಗುರುಪೂಜಕರು ಲಿಂಗವನ್ನರಿಯರು ಮತ್ತು ಲಿಂಗಪೂಜಕರು ಜಂಗಮವನ್ನರಿಯರು. ಆದರೆ ಭಕ್ತರು ಜಂಗಮದಾಸೋಹದಿಂದ ಗುರು ಮತ್ತು ಲಿಂಗ ಇವರಡನ್ನೂ ಅರಿತುಕೊಂಡು ಅವುಗಳನ್ನು ತಮ್ಮ ಒಳಗು ಮಾಡಿಕೊಳ್ಳಲು ಸಾಮರ್ಥ್ಯವನ್ನು ಹೊಂದುವರು. ಗುರು ಲಿಂಗ ಜಂಗಮ ಈ ಮೂವರೂ ಜಂಗಮದಲ್ಲಿರುತ್ತಾರೆ. ಆದ್ದರಿಂದ ಜಂಗಮ ದಾಸೋಹವೇ ಘನತರವಾದದ್ದೆಂದು ಪಾಡಿಸಿದನು.

ಆದರೆ ಪ್ರಭುದೇವ, ಮಡಿವಾಳ ಮಾಚಿದೇವ ಮೊದಲಾದ ಶಿವಶರಣರು ಚಂದಯ್ಯನ ಅಭಿಪ್ರಾಯವನ್ನು ಒಪ್ಪದೆ, ಅದನ್ನು ಖಂಡಿ

ಸುತ್ತ ನುಡಿದದ್ದೇನೆಂದರೆ— ಅಂಗವಿರುವ ವರೆಗೆ ಲಿಂಗ ಪೂಜೆಯನ್ನು ಮಾಡಲೇಬೇಕು. ರತ್ನ ವಿಶೇಷವಿದ್ದರೂ ಅದು ಕುಂದಣದಲ್ಲಿ ಸಂದಿರುವಂತೆ, ಭಕ್ತನು ಲಿಂಗದಲ್ಲಿ ಸಂದಿರಬೇಕು. ಭಕ್ತನು ಜಂಗಮ ದಾಸೋಹದಲ್ಲಿದ್ದರೂ ಅವನು ಲಿಂಗದಿಂದ ದೂರನಾಗಿರಬಾರದು. ಗುರು ಲಿಂಗ ಜಂಗಮಗಳು ಈ ಮೂವರೂ ಪರಸ್ಪರಾವಲಂಬಿಗಳು. ಅವು ಒಂದನ್ನೊಂದು ಬಿಟ್ಟು ಇರಲಾರವು ಎಂದು ವಾದಿಸಿದರು.

ಹೀಗೆ ಎಲ್ಲರೂ ಅನೇಕ ರೀತಿಯಿಂದ ವಾದಮಾಡಿ ಕೊನೆಗೆ ಅವರೆಲ್ಲರೂ ಗುರುಲಿಂಗ ಜಂಗಮದ ರೀತಿಯನ್ನು ಶಿವಜ್ಞಾನಿಯಾದ ಚನ್ನಬಸವಣ್ಣನು ಬಲ್ಲನು, ಅವನು ಅದನ್ನು ತಿಳುಹಬೇಕೆಂತಲೂ ಅವನು ಹೇಳಿದ್ದನ್ನು ಎಲ್ಲರೂ ಒಪ್ಪಬೇಕೆಂತಲೂ ಎಲ್ಲರೂ ಒಡಂಬಡಲು, ಚನ್ನಬಸವಣ್ಣನು ಇವುಗಳ ಮರ್ಮವನ್ನು ಹೇಳುವಲ್ಲಿ ವಿವರಿಸಿದ್ದೇನೆಂದರೆ:—ಗುರುಲಿಂಗ ಜಂಗಮಗಳು ಒಂದನ್ನು ಬಿಟ್ಟು ಒಂದು ಇರಲಾರವು. ಈ ತ್ರಿವಿಧವು ಕೂಡಿದರೆ ಮಾತ್ರ ಅದು ಜಂಗಮದಾಸೋಹವಾಗುವದು. ಗುರುಕರುಣವೇ ಲಿಂಗವು. ಆ ಲಿಂಗದ ನಿಜತ್ವವೇ ಜಂಗಮವು. ಹೀಗೆ ಭಾವಿಸಿ ಆಚರಿಸುವದೇ ಬಹಿರಂಗದ ವರ್ತನೆಯು. ಇವುಗಳಿಗೆ ಅಂತರಂಗದ ವರ್ತನೆಯೂ ಕೂಡ ಇದೆ. ಆಗ ಸುಜ್ಞಾನವೇ ಜಂಗಮವು. ಆ ಜಂಗಮದ ನಡೆಯೇ ಲಿಂಗವು. ಈ ಎರಡರ ಏಕತ್ವಸಿದ್ಧಿಯೇ ಗುರುವು. ಆದ್ದರಿಂದ ಜಂಗಮ ದಾಸೋಹವಿಲ್ಲದಿದ್ದರೆ ಲಿಂಗತೃಪ್ತಿಯಾಗಲಾರದು. ಹಾಗೆಯೇ ಅಂಗದ ಮೇಲೆ ಲಿಂಗವಿಲ್ಲದಿದ್ದರೆ ಜಂಗಮ ಸೇವೆಯೂ ಘಟಿಸಲಾರದು. ಯಾಕಂದರೆ ಜಂಗಮದ ಅಂಗವು ಲಿಂಗವಾಗಿರುತ್ತದೆ. ಆ ಲಿಂಗ ಚೈತನ್ಯದ ಅರಿವೇ ಜಂಗಮವಾಗಿರುತ್ತದೆ. ಹೀಗೆ ಅವುಗಳ ಪರಸ್ಪರ ಸಂಬಂಧವಿದೆಂದು ಹೇಳಿ ಇದಕ್ಕೆ ಅವನು ಉದಾಹರಣೆಯನ್ನು ಕೊಟ್ಟದ್ದೇನಂದರೆ ಅಂಗವೇ ಮಣ್ಣು, ಲಿಂಗವೇ ಮರವು, ಫಲವೇ ಜಂಗಮವು, ಫಲದ ರುಚಿಯೇ ಪ್ರಸಾದವು ಎಂದು ಹೇಳಬಹುದು. ಗುರು ಲಿಂಗ ಜಂಗಮದ ಪರಸ್ಪರ ಸಂಬಂಧವು ಹೀಗೆ ಇದೆ, ಎಂದು ವಿವರಿಸಿ ನುಡಿದನು. ಇದನ್ನು ಅಲ್ಲಿ ನೆರೆದ ಎಲ್ಲ ಶಿವಶರಣರು ಒಪ್ಪಿದರು. ಅಲ್ಲದೆ ಚಂದಯ್ಯನೂ ಕೂಡ ಒಪ್ಪಿಕೊಂಡು ಇಷ್ಟಲಿಂಗವನ್ನು ಆದರಿಸುವವನಾದನು. ಅಂದಿನಿಂದ ನುಲಿಯ ಚಂದಯ್ಯನು ಕ್ರಿಯಾಜ್ಞಾನ

ಗಳ ಭೇದವನ್ನು ಅರಿತುಕೊಂಡು ಗುರು ಲಿಂಗ ಜಂಗಮಗಳನ್ನು ಸೇವಿಸುವವನಾಗಿ ದಾಸೋಹಿಯಾಗಿ ಅಂತ್ಯದಲ್ಲಿ ಲಿಂಗಾಂಗ ಸಾಮರಸ್ಯವನ್ನು ಹೊಂದಿದನು.

ಶಿವಶರಣರು ಸ್ವತಂತ್ರ ವಿಚಾರಿಗಳು. ಅವರು ತಮ್ಮ ಅನುಭವದಂತೆ ನಡಿಯುವವರು, ಮತ್ತು ನುಡಿಯುವವರು. ಆದ್ದರಿಂದ ಅವರು ಸಮಾಜದಲ್ಲಿ ಉಚ್ಚಸ್ಥಿತಿಯನ್ನು ಹೊಂದಿದವರಾದರು. ಅವರು ಅನುಭವಿಗಳಾದರೂ ಹಠವಾದಿಗಳಾಗಿರಲಿಲ್ಲ. ಅವರು ನಿರಾತಂಕವಾಗಿ ತಮ್ಮ ಅನುಭವಗಳನ್ನು ಇತರ ಶರಣರೊಡನೆ ಹೇಳಿ ಪರಸ್ಪರ ವಿಚಾರವಿನಿಮಯ ನಾಡುವರು. ಹೀಗೆ ಎಲ್ಲರೂ ಕೂಡಿ ವಿಚಾರಮಾಡಿದ್ದನ್ನು ಅವರು ತಮ್ಮ ತಮ್ಮ ವಚನಗಳ ಮೂಲಕ ಎಲ್ಲ ಕಡೆಗೂ ಪ್ರಸಾರಮಾಡುವರು. ಇವರಿಂದ ವೀರಶೈವ ವಾಙ್ಮಯದಲ್ಲಿ ಅತ್ಯಂತ ಶ್ರೇಷ್ಠವಾದ ವಚನ ವಾಙ್ಮಯವು ಉಂಟಾಗಿರುತ್ತದೆ.

ಬಸವೇಶ್ವರನ ಕಾಲದಲ್ಲಿ ಗುರು ಲಿಂಗ ಜಂಗಮ ಇವುಗಳ ವಿಷಯವಾಗಿ ಬಹು ದೀರ್ಘವಾದ ವಿಚಾರಗಳು ನಡೆದಿದ್ದು ಕಂಡುಬರುತ್ತದೆ. ಭಕ್ತನು ತನ್ನಲ್ಲಿಯೇ ಗುರುತತ್ವ ಲಿಂಗತತ್ವ ಜಂಗಮ ತತ್ವಗಳನ್ನು ಉಂಟುಮಾಡಿಕೊಂಡು ಲಿಂಗಾಂಗ ಸಾಮರಸ್ಯವನ್ನು ಹೊಂದತಕ್ಕದ್ದು. ಇದೇ ಅವನ ಆಚರಣೆಯಾಗಿರತಕ್ಕದ್ದು. ಈ ವಿವರಗಳು ನುಲಿಯ ಚಂದಯ್ಯನ ಚರಿತ್ರೆಯಲ್ಲಿ ಬಂದಿರುತ್ತವೆ. ಇದಲ್ಲದೆ ಶಿವಶರಣರು ಶಿವಾನುಭವ ಮಂಟಪದಲ್ಲಿ ನೆರೆದು ತಮಗುಂಟಾದ ಅನುಭವಗಳನ್ನು ಹೇಗೆ ಪರಸ್ಪರ ಚರ್ಚಿಸಿ ತಮ್ಮ ನಡೆಗಳನ್ನು ಸರಿಪಡಿಸಿಕೊಳ್ಳುತ್ತಿದ್ದರೆಂಬುದೂ ಈ ಚರಿತ್ರೆಯಿಂದ ತಿಳಿದು ಬರುತ್ತದೆ.

ನುಲಿಯ ಚಂದಯ್ಯನು ವಚನಕಾರನಿದ್ದಾನೆ. ಅವನ ನಾಲ್ಕು ವಚನಗಳು ಮಾತ್ರ ನಮಗೆ ದೊರೆತಿವೆ. ಆದರೆ ಅವನ ಅನೇಕ ವಚನಗಳು ಶೂನ್ಯ ಸಂಪಾದನೆ ಗ್ರಂಥದಲ್ಲಿ ಉದಹರಿಸಲ್ಪಟ್ಟಿವೆ. ಅವುಗಳಲ್ಲಿ ಕೆಲವುಗಳನ್ನು ಮಾತ್ರ ನಾವು ಇಲ್ಲಿ ಉದಹರಿಸಿದ್ದೇವೆ. ಇವನ ಮುದ್ರಿಕೆಯು 'ಚಂದೇಶ್ವರ' ಎಂದಿದೆ.

ನುಲಿಯ ಚಂದಯ್ಯನ ಗ್ರಾಮವಾವುದೆಂಬುದು ನಿಶ್ಚಿತವಾಗಿ ತಿಳಿದಿಲ್ಲ. ಅವನ ಗ್ರಾಮವು ವಿಜಾಪುರ ಪಟ್ಟಣದಿಂದ ಪೂರ್ವಕ್ಕೆ ೧೮ ಮೈಲು ಗಳ ಮೇಲಿರುವ 'ಶಿವಡಿಗಿ' ಎಂಬುದೇ ಇರುತ್ತದೆಂದು ಅಲ್ಲಿ ಐತಿಹ್ಯವಿದೆ.

ವಚನಗಳು.

(೧) ಕಂದಿಸಿ, ಬಂಧಿಸಿ, ಕಂಡವರ ಬೇಡಿತಂದು ಜಂಗಮಕ್ಕೆ ಮಾಡಿಹೆನೆಂಬ ದಂಡುಗದ ಮಾಟಕ್ಕೆ ಲಿಂಗ ನೈವೇದ್ಯ ಸಲ್ಲದು. ತನು ಕರಗಿ ಮನ ಬಳಲಿ ಬಂದ ತೆರದನುವನರಿದು ಸಂಶಯವಿಲ್ಲದೆ ಜಂಗಮ ಲಿಂಗಕ್ಕೆ ಪಾಸೋಹ ಮಾಡುವುದೇ ಮಾಟ. ಕಾರೆಯ ಕಾಯಿ ಕಾಡ ಸೊಪ್ಪಾದರೂ ಕಾಯಕದಿಂದ ಬಂದುದ ಲಿಂಗಾರ್ಪಿತವಲ್ಲದೆ ದುರಾಸೆ ಯಿಂದ ಬಂದುದು ಅನರ್ಪಿತ. ಇದು ಕಾರಣ ಸತ್ಯ ಶುದ್ಧ ಕಾಯಕದ ನಿತ್ಯ ದ್ರವ್ಯವಾದರೆ ಚಂದೇಶ್ವರ ಲಿಂಗಕ್ಕೆ ನೈವೇದ್ಯ.

(೨) ಭಾವಶುದ್ಧವಾಗಿಪ್ಪುದೇ ಗುರುಪೂಜೆ. ಜ್ಞಾನಶುದ್ಧವಾಗಿ ಪ್ಪುದೇ ಲಿಂಗಪೂಜೆ. ತ್ರಿಕರಣಶುದ್ಧವಾಗಿಪ್ಪುದೇ ಜಂಗಮಪೂಜೆ. ಈ ತ್ರಿವಿಧಭೇದದಲ್ಲಿ ತ್ರಿವಿಧಾರ್ಪಣವ ಸಮರ್ಪಿಸಿ ನಿಂದುದೇ ಚಂದೇಶ್ವರ ಲಿಂಗಕ್ಕೆ ಅರ್ಪಿತ.

(೩) ಸತ್ಯಶುದ್ಧ ಕಾಯಕದಲ್ಲಿ ಬಂದ ದ್ರವ್ಯದಲ್ಲಿ ಚಿತ್ತ ವಿಸ್ಮಯ ವಾಗದಿರಬೇಕು. ನೇಮದ ಕೂಲಿಯಂದಿನ ನಿತ್ಯನೇಮದಲ್ಲಿ ಸಂದಿರ ಬೇಕು. ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾವಿಸಿ ದ್ರವ್ಯವ ಹಿಡಿದರೆ ತಾ ಮಾಡುವ ಸೇವೆ ನಷ್ಟವಯ್ಯ. ನನಗೆ ಜಂಗಮದ ಪ್ರಸಾದದಾಗು ಚಂದೇಶ್ವರಲಿಂಗಕ್ಕೆ ಪ್ರಾಣವಯ್ಯ.

ಪೋಳಿಗೆಯ ಮಾರಯ್ಯ.

ಕಾಶ್ಮೀರ ದೇಶದಲ್ಲಿ ಮಾಂಡವ್ಯಪುರವೆಂಬ ರಾಜಧಾನಿಯಲ್ಲಿ 'ಮಹಾದೇವರಾಜ'ನೆಂಬ ಅರಸನು ಆಳುತ್ತಿದ್ದನು. ಅವನು ಆಳು ತ್ತಿದ್ದ ದೇಶವು ೧ ಲಕ್ಷದ ಮೇಲೆ ೨೫ ಸಾವಿರದ ರಾಜ್ಯವಾಗಿತ್ತು. ಅವನ ಹೆಂಡತಿಯ ಹೆಸರು ಗಂಗಾಂಬಿಕೆಯು. ಆ ದೇಶದಲ್ಲಿ ಎಲ್ಲೆಲ್ಲಿಯೂ ತೈವಮತಸ್ಥರು. ಅವರು ಅಗಮುಜ್ಜರು, ಲಿಂಗನಿಷ್ಠರು, ಸದಾಚಾರಿ ಗಳು. ಮಹಾದೇವರಸನಾದರೂ ಅತ್ಯಂತ ಧರ್ಮನಿಷ್ಠನಾಗಿ ಪ್ರಜೆಗಳ ಅನುರಾಗವನ್ನು ಸಂಪಾದಿಸಿ ರಾಜ್ಯವಾಳುತ್ತಿದ್ದನು.

೧೧ನೇ ೧೨ನೇ ಶತಮಾನಗಳಲ್ಲಿ ಕಾಶ್ಮೀರ ದೇಶದ ಬಹುಜನ ಪಂಡಿತರು ಕರ್ನಾಟಕಕ್ಕೆ ಬಂದು ಅಲ್ಲಿಯ ರಾಜರಿಂದ ಮನ್ನಣೆಯನ್ನು ಹೊಂಮತ್ತಿದ್ದರು. ಕರ್ನಾಟಕದ ಜಂಗಮರೂ ಶಿವಾನುಭವಿಗಳೂ ಕೂಡ ಕಾಶ್ಮೀರ ದೇಶಕ್ಕೆ ಹೋಗಿ ಅಲ್ಲಿ ತಮ್ಮ ಶಿವಜ್ಞಾನವನ್ನು ಬೋಧಿ ಸುವವರಾಗಿದ್ದರು. ಮತ್ತು ಅವರಲ್ಲಿ ಬಹುಜನರು ಅಲ್ಲಿಯೇ ವಾಸ ಮಾಡುತ್ತಿದ್ದರು.

ಬಸವೇಶ್ವರನು ಕಾಶ್ಮೀರ ದೇಶದಲ್ಲಿ ಶಿವಜ್ಞಾನಿಗಳಾದ ಬಹುಜನ ಜಂಗಮರು ವಾಸ ಮಾಡಿಕೊಂಡಿದ್ದನ್ನು ತಿಳಿದು ಅವರನ್ನು ಕಲ್ಯಾಣಕ್ಕೆ ಬರಮಾಡಿಕೊಳ್ಳಬೇಕೆಂದು ಅಪೇಕ್ಷಿಸಿ ಒಬ್ಬ ಸೆಟ್ಟಿಯ ವೇಷವನ್ನು ಧಾರ ಣಮಾಡಿ ಮಾಂಡವ್ಯಪುರಕ್ಕೆ ಬಂದು ಮಹಾದೇವರಸನ ರಾಜ್ಯದಲ್ಲಿದ್ದ ಆರು ಸಾವಿರ ಜಂಗಮರನ್ನು ಗುಪ್ತರೀತಿಯಿಂದ ಕರೆದುಕೊಂಡು ಬಂದ ನೆಂಬ ಐತಿಹ್ಯವಿದೆ. ಹಿಂದಿನ ಕಾಲದಲ್ಲಿ ಕರ್ನಾಟಕಕ್ಕೂ ಮಧ್ಯ ಮತ್ತು ಉತ್ತರ ಹಿಂದುಸ್ತಾನಗಳಲ್ಲಿರುವ ಗುಜರಾಥ, ಒಡಿಸಾಪ್ರಾಂತ, ಉತ್ತರ ಆಂಧ್ರ, ಕಾಶ್ಮೀರ, ಸಂಯುಕ್ತಪ್ರಾಂತಗಳಿಗೂ ನಿಕಟ ಸಂಬಂಧವಿದ್ದುದು ಆಯಾ ದೇಶಗಳಲ್ಲಿ ಆಳಿದ ಕರ್ನಾಟಕ ರಾಜಮನೆತನಗಳ ಇತಿಹಾಸ, ಶಿವಶರಣರ ಚರಿತ್ರೆಗಳು ಮತ್ತು ಅಲ್ಲಿ ಈಗಲೂ ಇರುವ ಕುರುಹುಗಳ ಮತ್ತು ಮಠಗಳ ಅಸ್ತಿತ್ವ ಇವುಗಳಿಂದ ಸಿದ್ಧವಾಗುತ್ತದೆ.

ಮಹಾದೇವರಾಜನ ತಂಗಿಯ ಹೆಸರು ನಿಜದೇವಿಯು. ಅವಳು ಶಿವಾನುಭವಕ್ಕೆ ಮೆಚ್ಚಿದವಳಾಗಿ ತನ್ನ ರಾಜವೈಭವವನ್ನು ತೊರೆದು

ಕಲ್ಯಾಣ ಪಟ್ಟಣಕ್ಕೆ ಬಂದು 'ಬೊಂತಾದೇವಿ' ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದಾಳೆ. ಅವಳು ವಚನಕಾರಳೂ ಇದ್ದಾಳೆ.

ಹೀಗಿರಲು ಒಂದಾನೊಂದು ದಿವಸ ಮಹಾದೇವರಸನ ಗುರುವಿನ ಒಡಹುಟ್ಟಿದವರು ಕಲ್ಯಾಣ ಪಟ್ಟಣದಿಂದ ಕಾಶ್ಮೀರಕ್ಕೆ ತಿರುಗಿ ಬಂದು ಅವನನ್ನ ಕಾಣಲು, ಅವನು ಅವರಿಗೆ ಹಣವನ್ನು ಕಾಣಿಕೆಯಾಗಿ ಕೊಡ ಹೋದನು. ಆದರೆ ಅವರುಃ—ಈ ಹಣವು ನಮಗೆ ಬೇಡ ಎಂದೆನ್ನಲು, ಅರಸನು–ಹಾಗಾದರೆ ನಿಮಗೇನು ಬೇಕು? ಎಂದು ಕೇಳಲು ಅವರು—ಈ ರಾಜ್ಯದಿಂದ ನಿನಗೆ ಬಂದುದು ನಮಗೆ ಬೇಡ. ಆದರೆ ನಿನ್ನ ಉದ್ಯೋಗದಿಂದ ಬಂದ ಹಣವಿದ್ದರೆ ಅದನ್ನ ಕೊಡು ಎಂದು ಹೇಳಿದರು. ಇಂಥ ಹಣವು ಅರಸನಲ್ಲಿ ಇಲ್ಲದ್ದರಿಂದ ಅವನು ತನ್ನ ವೇಷವನ್ನು ಬದಲಿಸಿಕೊಂಡು ಒಬ್ಬ ಕಮ್ಮಾರನ ಕುಲಿಮೆಯಲ್ಲಿ ಹೋಗಿ ಆಳಿ ಕೂಲಿಯನ್ನು ಮಾಡುತ್ತ ನಿಂತುಕೊಂಡು ಕಬ್ಬಿಣವನ್ನು ಬಡಿಯಲಿಕ್ಕೆ ಹತ್ತಿದನು. ಹೀಗೆ ಕಾಯಕವನ್ನು ಮಾಡಿ ಆ ಕಮ್ಮಾರನ ಕಡೆಯಿಂದ ಒಂದು ಕಬ್ಬಿಣದ ಗಟ್ಟಿಯನ್ನು ಕೂಲಿಯಾಗಿ ತೆಗೆದುಕೊಂಡು ಬಂದು ಅದನ್ನು ತನ್ನ ಗುರುವಿನ ಒಡಹುಟ್ಟಿದವರಿಗೆ ಕಾಣಿಕೆಯಾಗಿ ತಂದು ಕೊಟ್ಟನು. ಅವರು ಅದನ್ನು ಆನಂದದಿಂದ ಸ್ವೀಕರಿಸಿ ತೆಗೆದುಕೊಂಡು ಹೋಗಲು ಅದು ಅವರಲ್ಲಿ ಚಿನ್ನವಾಯಿತು!

ರಾಜನು ತಾನು ಕೂಲಿಯಾಗಿ ಕೊಟ್ಟ ಕಬ್ಬಿಣದ ತುಂಡು ಹೀಗೆ ಚಿನ್ನವಾದುದನ್ನು ಕೇಳಿ ಅವನಲ್ಲಿ ವಿರಕ್ತಿಯುಂಟಾಯಿತು. ಅವನಲ್ಲಿ ರಾಜ್ಯಮೋಹವು ತಪ್ಪಿತು. ಅವನು—ಈ ರಾಜ್ಯವು ಅನಿತ್ಯವಾದುದು, ಇದರಲ್ಲಿ ಹುರುಳಿಲ್ಲ ಎಂದು ಭಾವಿಸಿ ತನ್ನ ಪಟ್ಟಣವನ್ನು ತನ್ನ ಮಗನಾದ 'ಲಿಂಗಾರತಿ'ಗೆ ಕೊಟ್ಟು, ಶಿವಶರಣರಿಂದ ಶಿವಾನುಭವವನ್ನು ಅರಿಯಬೇಕೆಂದು ಕಲ್ಯಾಣ ಪಟ್ಟಣಕ್ಕೆ ಹೊರಟನು. ಅವನೊಡನೆ ಸಾಧ್ವಿಯಾದ ಅವನ ಹೆಂಡತಿ ಗಂಗಾಂಬಿಕೆಯೂ ಹೊರಟಳು.

ಕಲ್ಯಾಣ ಪಟ್ಟಣವು ಕಾಶ್ಮೀರ ದೇಶದಿಂದ ಬಹು ದೂರವಾಗಿರುತ್ತದೆ. ಆದರೆ ಉಭಯತರು ಮಾರ್ಗಕ್ರಮಣ ಮಾಡುವಲ್ಲಿ ಅವರಿಗೆ ಶಿವಭಕ್ತಿಯೇ ರಥವಾಯಿತು. ಜ್ಞಾನವೇ ಅವರಿಗೆ ಚತ್ತರಿಗೆಯಾಯಿತು. ಲಿಂಗಾಂಗ ಸಮರಸಾಚರಣೆಯೇ ಅವರಿಗೆ ಸಕಲೋಪಚಾರವಾಯಿತು.

ಪಂಚೇಂದ್ರಿಯಗಳೇ ಅವರಿಗೆ ಚತುರಂಗಬಲವಾಯಿತು. ಹೀಗೆ ಅವರು ಮಾರ್ಗಾಯಾಸವಿಲ್ಲದೆ ಆನಂದದಿಂದ ಮಾರ್ಗ ಕ್ರಮಣ ಮಾಡುತ್ತ ಭೂ ಕೈಲಾಸವೆನಿಸಿಕೊಂಡ ಕಲ್ಯಾಣ ಪಟ್ಟಣಕ್ಕೆ ಬಂದು ಮುಟ್ಟಿದರು.

ಅವರು ಕಲ್ಯಾಣಕ್ಕೆ ಬಂದಬಳಿಕ ಅವರು ತಾವಾರೆಂಬುದನ್ನು ಯಾರಿಗೂ ತಿಳಿಯಗೊಡಲಿಲ್ಲ. ಮಹಾದೇವರಾಜನು ತಾನು ಮೋಳಿಗೆಯ ಮಾರಯ್ಯನೆಂತಲೂ, ಗಂಗಾಂಬಿಕೆಯು ತಾನು ಮಹಾದೇವಿಯಮ್ಮನೆಂತಲೂ ಹೆಸರು ಇಟ್ಟುಕೊಂಡರು. ರಾಜನು ಕಟ್ಟಿಗೆಯ ಕಾಯಕವನ್ನು ಕೈಕೊಂಡು, ದಿನಾಲು ಕಾಂತಾರಕ್ಕೆ ಹೋಗಿ ಕೊಡಲಿಯಿಂದ ಕಟ್ಟಿಗೆಗಳನ್ನು ಕಡಿದು ತಂದು, ಅಂಗಡಿಗಳಲ್ಲಿ ಮಾರಿ, ಇದರಿಂದ ಬಂದ ಹಣದಿಂದ ಜಂಗದು ದಾಸೋಹ ಕಾರ್ಯಗಳನ್ನು ನಡಿಸಹತ್ತಿದನು. ಅವನು ಹೀಗೆ ಕಾಯಕವನ್ನು ಮಾಡುತ್ತ ಶಿವಾನುಭವದ ಆಚರಣೆಯಲ್ಲಿ ನಿರತನಾಗಿ ಪಟ್ಟಣದಲ್ಲಿ ಒಬ್ಬ ಶ್ರೇಷ್ಠ ಶಿವಾನುಭವಿ ಎಂದು ಹೆಸರು ಹೊಂದಿದನು. ಅವನಿಗೆ ಈ ಮಾರ್ಗವು ರಾಜವೈಭವದ ಉಪಭೋಗಕ್ಕಿಂತಲೂ ಹೆಚ್ಚಿಗೆ ಸುಖವೆನಿಸಿತು.

ಕಲ್ಯಾಣ ಪಟ್ಟಣದಲ್ಲಿದ್ದ ಜಂಗಮರು ಮೋಳಿಗಿ ಮಾರಯ್ಯನ ಈ ಉನ್ನತವಾದ ಶಿವಾನುಭವದ ನಡೆಯನ್ನು ತಿಳಿದವರಾಗಿ ಅವರು ಅವನನ್ನು ಬಸವೇಶ್ವರನ ಮುಂದೆ ಬಹಳ ಹೊಗಳಹತ್ತಿದರು. ಗುಣಗ್ರಾಹಿಯಾದ ಬಸವೇಶ್ವರನು ಅದನ್ನು ಕೇಳಿ ಮಾರಯ್ಯನನ್ನು ನೋಡಬೇಕೆಂದು ಒಂದು ದಿವಸ ತನ್ನ ಮಂತ್ರಿಯ ಉಡುಪುಗಳನ್ನು ತೆಗೆದಿಟ್ಟು ಒಬ್ಬ ಸಾಮಾನ್ಯ ಭಕ್ತನ ವೇಷವನ್ನು ಧರಿಸಿಕೊಂಡು ಅವನ ಮನೆಗೆ ಬಂದನು. ಆಗ ಮಾರಯ್ಯನು ಮನೆಯಲ್ಲಿ ಇದ್ದಿದ್ದಿಲ್ಲ. ಅವನು ಕಟ್ಟಿಗೆ ಕಡಿಯಲಿಕ್ಕೆ ಅಡವಿಗೆ ಹೋಗಿದ್ದನು. ಆದರೆ ಮನೆಯಲ್ಲಿ ಅವನ ಹೆಂಡತಿ ಮಹಾದೇವಿಯಮ್ಮನು ಇದ್ದದ್ದನ್ನು ನೋಡಿ ಬಸವೇಶ್ವರನು ಅವಳಿಗೆ ನಮಸ್ಕರಿಸಲು, ಅವಳು ಇವನೊಬ್ಬ ದೇಶಾಂತರಿ ಎಂದು ಭಾವಿಸಿ, ಅವನಿಗೆ ಲಿಂಗಾರ್ಚನೆಯನ್ನು ಮಾಡಿಸಿ ಬಹಳ ಸತ್ಕರಿಸಿದಳು. ಬಸವೇಶ್ವರನು ಅವರ ಮನೆಯನ್ನು ನೋಡುತ್ತಾನೆಯೇ, ಒಳಗೆ ಸೌಕರ್ಯದ ಪದಾರ್ಥಗಳೇನೂ ಕಾಣಲಿಲ್ಲ. ಇದರಿಂದ ಮಾರಯ್ಯನು ಅತ್ಯಂತ ಬಡವನಾಗಿರುತ್ತಾನೆಂದು ಅವನಿಗೆ ಕಂಡು ಬಂದಿತು.

ಆವ್ವರಿಂದ ಅವನು ಪ್ರಸಾದವನ್ನು ಭುಂಜಿಸಿ ಹೊರಗೆ ಹೋಗುವ ಕಾಲ
ದಲ್ಲಿ ಪ್ರತಿಯೊಂದರಲ್ಲಿ ಸಾವಿರ ಹೊನ್ನು ತುಂಬಿದ ಎರಡು ಜಾಳಿಗೆಗಳನ್ನು
ಮಹಾದೇವಿಯಮ್ಮನಿಗೆ ತಿಳಿಯದಂತೆ ಮನೆಯಲ್ಲಿರಿಸಿ ಅವಳಿಗೆ ಕೈಮು
ಮುಗಿದು 'ಶರಣಾರ್ಥಿ' ಎಂದು ಹೇಳಿ ಹೊರಟು ಹೋದನು.

ಮೋಳಿಗೆಯ ಮಾರಯ್ಯನು ಮಧ್ಯಾಹ್ನ ಸಮಯದಲ್ಲಿ ಕಾಡಿನಿಂದ
ಕಟ್ಟಿಗೆಯ ಹೊರೆಯನ್ನು ಹೊತ್ತು ತಂದು ಮನೆಯ ಬಾಗಿಲಲ್ಲಿ ಚಲ್ಲಿ
ಸ್ನಾನಕ್ಕೆಂದು ಮಜ್ಜನ ಶಾಲೆಗೆ ಹೋದನು. ಅಲ್ಲಿ ನೋಡುತ್ತಾನೆಯೇ,
ಅಲ್ಲಿ ಒಂದು ಮೂಲೆಯಲ್ಲಿ ಹೊನ್ನು ತುಂಬಿದ ಎರಡು ಜಾಳಿಗೆಗಳನ್ನು
ಕಂಡನು. ಅದರ ವಿಷಯವಾಗಿ ಸತಿಯನ್ನು ಕೇಳಲಾಗಿ ಅವಳು ಒಬ್ಬ
ಭಕ್ತನು ಇಲ್ಲಿಗೆ ಬಂದಿದ್ದನು, ಅವನು ಶಿವಾರ್ಚನೆ ಮಾಡಿ ಹೋದನು,
ಎಂದು ತಿಳಿಸಿದಳು. ಆಗ ಮಾರಯ್ಯನು ಹಾಗೆ ಬಂದು ಹೋದವನು
ಮತ್ತು ಹಣವನ್ನಿಟ್ಟವನು ಬಸವೇಶ್ವರನೇ ಅಹುದು ಎಂದು ಆಗಲೇ ತಿಳಿ
ದವನಾಗಿ—ನಾವು ದುಡಿದದ್ದು ನಮಗೆ ಸಾಲುತ್ತದೆ. ನಾವು ಸುಖಿಗಳು.
ನಮಗೆ ಈ ದುಡ್ಡಿನ ಹೆಮ್ಮೆ ಬೇಡ. ಆದರೆ ಬಸವೇಶ್ವರನು ನಾವು ನಿರ್ಧನಿಕ
ರೆಂದು ಈ ಹೊನ್ನನ್ನು ನಮಗೆ ಕೊಟ್ಟು ಹೋಗಿದ್ದಾನೆಯೇ? ನಾವು
ಬಡವರೇ? ಎಂದು ಕೋಪಿಸಿಕೊಂಡಿರಲು, ಅಷ್ಟರಲ್ಲಿ ಇಬ್ಬರು ಜಂಗ
ಮರು ಮನೆಗೆ ಬಂದರು. ಮಾರಯ್ಯನು ಅವರನ್ನು ಮನೆಯಲ್ಲಿ ಬರ
ಮಾಡಿಕೊಂಡು ಅವರಿಗೆ ಆ ಹೊನ್ನಿನ ಎರಡೂ ಜಾಳಿಗೆಗಳನ್ನು ಕೊಟ್ಟು
ಬಿಟ್ಟನು. ಮತ್ತು ಅವರ ಪಾದತೀರ್ಥವನ್ನು ತೆಗೆದುಕೊಂಡು ಕಾಯ
ಕದಿಂದ ತಾನು ತಂದಿದ್ದ ಕಟ್ಟಿಗೆಗಳ ಮೇಲೆ ಆ ತೀರ್ಥವನ್ನು ಚೆಲ್ಲ
ಲಾಗಿ ಅವು ಹೊನ್ನದಂಡಗಳಾದವು. ಮಾರಯ್ಯನು ಅವುಗಳನ್ನು ಕಡಿ
ಕಡಿದು ತನ್ನ ಮನೆಗೆ ಬರುತ್ತಿದ್ದ ಜಂಗಮರಿಗೆ ಕೊಟ್ಟು ಬಿಡಹತ್ತಿದನು.
ಹೀಗೆ ಅವನು ಬಹುಜನ ಜಂಗಮರಿಗೆ ಕಾಣಿಕೆಗಳನ್ನು ಕೊಟ್ಟನು.

ಈ ಸಂಗತಿಯು ಬಸವೇಶ್ವರನಿಗೆ ತಿಳಿಯಲಾಗಿ, ಅವನು—ನಾನು
ತಪ್ಪು ಮಾಡಿದೆನೆಂದು ಅವನಿಗೆ ಎನಿಸಿತು. ಅವನಿಗೆ ಪಶ್ಚಾತ್ತಾಪವಾ
ಯಿತು. ಅವನು ಕೂಡಲೆ ಮೋಳಿಗೆಯ ಮಾರಯ್ಯನ ಮನೆಗೆ ಹೋಗಿ
ಅವನಿಗೆ—ನಾನು ನಿಮಗೆ ತಪ್ಪು ಮಾಡಿದೆನು, ನನ್ನನ್ನು ಕ್ಷಮಿಸಬೇಕು,
ಎಂದು ಪತಿಪತಿಗಳೀರ್ವರ ಚರಣಕ್ಕೆರಗಿದನು.

ಶಿವಾನುಭವ

ವರ್ಷ ೨೦ | ಫೆಬ್ರುವರಿ ೧೯೪೬. | ಸಂಚಿಕೆ ೫

ನಿವೃತ್ತ ಮುಖ್ಯ ನ್ಯಾಯಾಧೀಶರಾದ ರಾಜಧರ್ಮ ಪ್ರವೀಣ
ದಿವಾನಬಹಾದ್ದೂರ ಶ್ರೀಮಾನ್ ಪಿ. ಮಹಾದೇವಯ್ಯ
ಬಿ. ಎ. ಬಿ. ಎಲ್.

ಇವರ ಭಾಷಣ.

(ಹಿಂದಿನ ಸಂಚಿಕೆಯಿಂದ ಸಾಗಿ ಮುಗಿದದ್ದು.)

ವೀರಶೈವ ಸಮಾಜದ ಐತಿಹಾಸಿಕ ಮಹತ್ವ.

ವೀರಶೈವ ಸಮಾಜದ ಮಹತ್ವವು ಇದರಲ್ಲಿರುವ ಪಂಚಪೀಠಗಳ ಇತಿಹಾಸದಿಂದಲೂ ತಿಳಿಯುವಂತಿದೆ.

(೧) ಕಾಶಿಯಲ್ಲಿರುವ ಪ್ರಸಿದ್ಧವಾದ ಜಂಗಮವಾಡಿ ಮಠವು ಪಂಚಾಚಾರ್ಯರ ಇನ್ನೊಂದು ಪ್ರಾಚೀನ ಪೀಠವಾಗಿದೆ. ಇದನ್ನು ಶ್ರೀ ವಿಶ್ವಾರಾಧ್ಯರು ಸ್ಥಾಪಿಸಿದರು. ಇದಕ್ಕೆ ಹಿಂದೂರಾಜರಲ್ಲದೆ ಸುಪ್ರ ಸಿದ್ಧರಾದ ಹುಮಾಯೂನ್, ಅಕ್ಬರ್, ಜಹಾಂಗೀರ್, ಷಹಜಹಾನ್, ಔರಂಗಜೇಬ್, ಮಹಮ್ಮದ್‌ಷಹ ಮೊದಲಾದ ಮೊಗಲ್ ಚಕ್ರವರ್ತಿ ಗಳೂ ಸಹ ಈ ಸಂಸ್ಥಾನಕ್ಕೆ ಭೂದಾನಮಾಡಿರುತ್ತಾರೆ. ಈಗ ಕಾಶಿಯ ವಿಶ್ವವಿದ್ಯಾನಿಲಯವು ಕಟ್ಟಲ್ಪಟ್ಟಿರುವ ನಿವೇಶನವು ಹಿಂದೆ ಶ್ರೀ ಜಂಗಮ ವಾಡಿ ಸಂಸ್ಥಾನಕ್ಕೆ ಸೇರಿತ್ತು. ಸಂಸ್ಥಾನಾಧಿಪತಿಗಳಾದ ಶ್ರೀ ಸ್ವಾಮಿ ಗಳವರು ಅದನ್ನು ವಿಶ್ವವಿದ್ಯಾನಿಲಯಕ್ಕೆ ಕೊಟ್ಟಿರುತ್ತಾರೆ.

(೨) ಹಿಮಾಲಯದ ತಪ್ಪಲು ಪ್ರದೇಶದಲ್ಲಿರುವ ಶ್ರೀ ಕೇದಾರ ಪೀಠವು ಪಂಚಾಚಾರ್ಯರ ಮತ್ತೊಂದು ಪವಿತ್ರ ಪೀಠವಾಗಿದೆ. ಇದನ್ನು ಶ್ರೀ ಏಕೋರಾಮ ಶಿವಾಚಾರ್ಯರು ಸ್ಥಾಪಿಸಿದರು. ಮಹಾಭಾರತದಲ್ಲಿ ಪ್ರಸಿದ್ಧನಾಗಿರುವ ಜನಮೇಜಯರಾಜನು ಈ ಮಠದ ಆನಂದಲಿಂಗ ಜಂಗಮಂಗೆ ದತ್ತಿಯನ್ನು ಬಿಟ್ಟದ್ದನೆಂದು ತಾಮ್ರಶಾಸನದಿಂದ ಗೊತ್ತಾಗುತ್ತದೆ. ಮತ್ತು ಈ ದತ್ತಿಯ ತಾಮ್ರಶಾಸನದಲ್ಲಿರುವಂತೆ ಈಗಲೂ ಸಹ ಅಲ್ಲಿ ಕಂಡುಬರುವ ೧೪೧ ಗ್ರಾಮಗಳು ಶ್ರೀ ಮಠದ ಅನುಭವದಲ್ಲಿವೆ. ಟೆಹ್ರಿ (*Tehri*) ಸಂಸ್ಥಾನದ ರಾಜರು ಈ ಮಠದ ಶಿಷ್ಯರು. ಉದಯಪುರ, ಕಾಶ್ಮೀರ, ನೇಪಾಳ ಮತ್ತು ಇತರ ಹದಿಮೂರು ಸಂಸ್ಥಾನಗಳ ರಾಜರುಗಳು ಈ ಮಠಕ್ಕೆ ವರ್ಷ ವರ್ಷವೂ ಕಾಣಿಕೆಗಳನ್ನು ಒಪ್ಪಿಸುತ್ತಿದ್ದಾರೆ. ಶ್ರೀಮಠದ ಪವಿತ್ರತೆ ಮತ್ತು ಗೌರವಗಳನ್ನು ಮನಗಂಡು ಬ್ರಿಟಿಷ್ ಸರ್ಕಾರದವರೂ ಕೂಡ ಈ ಸಂಸ್ಥಾನದ ಶ್ರೀಗಳವರು ಎಪ್ಪತ್ತೆರಡು ಬಿರುದಾವಳಿಗಳೊಡನೆ ಭರತಖಂಡದಲ್ಲೆಲ್ಲಾ ಸಂಚಾರ ಮಾಡಬಹುದೆಂದು ರಹದಾರಿ ಕೊಟ್ಟಿರುತ್ತಾರೆ. ಕೀರ್ತಿಶೇಷರಾದ ಶ್ರೀಮಾನ್ನಾಲ್ವಡಿ ಕೃಷ್ಣರಾಜ ಒಡೆಯರವರು ಕೈಲಾಸ ಪರ್ವತದಿಂದ ಹಿಂತಿರುಗಿ ದಯಮಾಡುವಾಗ ಮೂರು ದಿನಗಳು ಈ ಮಠದಲ್ಲಿ ಬಿಡಾರ ಮಾಡಿ ದಿವ್ಯವಾದ ಪೂಜೆಯನ್ನು ನಡೆಯಿಸಿದರು.

ಆಮೇಲೆ ಉಪನ್ಯಾಸಕರು ಈಗಿನ ಶ್ರೀಮಹಾಂತಿನ ಮಠದ ಅಧ್ಯಕ್ಷರಾದ ಶ್ರೀಗಂಗಾಧರ ಶಿವಾಚಾರ್ಯಸ್ವಾಮಿಗಳು ಆಗ ನಡಿಸಿದ್ದ ವಿಶೇಷ ಪೂಜಾದಿ ಕಾರ್ಯಗಳನ್ನು ವಿವರಿಸುತ್ತ ಮನುಷ್ಯನು ಆಚರಿಸಬೇಕಾದ ಆಧ್ಯಾತ್ಮಿಕ ಜೀವನವನ್ನು ಕುರಿತು ಹೇಳಿದ್ದೇನೆಂದರೆ:—

ಆಧ್ಯಾತ್ಮಿಕ ಜೀವನ.

ನಾವು ಜೀವಿಸುತ್ತಿರುವ ಈ ಆಧುನಿಕ ಯುಗದಲ್ಲಿ ಐಹಿಕ ಸುಖಾಪೇಕ್ಷೆಯೇ ಜನಗಳ ಮನಸ್ಸಿನಲ್ಲಿ ಆಧಿಪತ್ಯಮಾಡುತ್ತಿದ್ದರೂ, ಭಾರತವು ಪ್ರಪಂಚದಲ್ಲೆಲ್ಲಾ ಅತ್ಯಂತ ಆಧ್ಯಾತ್ಮಿಕ ದೇಶವೆಂತಲೂ ಭಾರತವೇ ನೈತಿಕ ಕ್ಷೇತ್ರಗಳಲ್ಲಿ ಎಲ್ಲ ಜನಾಂಗಗಳ ಮುಂದಾಳಾಗುವುದೆಂತಲೂ ನಂಬುವ ಜನರು ಈಗಲೂ ಅನೇಕರಿರುವರು. ಭಾರತದ ಆಧ್ಯಾತ್ಮಿಕ ಜೀವನವನ್ನು ರಾಜಕೀಯ ಜಳವಳಿಯ ಬಿರುಗಾಳಿಗಳು ಈಗ ಸದ್ಯದಲ್ಲಿ ಮರೆಮಾಚಿದ್ದರೂ ಸದರಿ ಆಧ್ಯಾತ್ಮಿಕ ಜೀವನವು ನಂದಿಹೋಗದೆ ಇನ್ನೂ ಜೀವಂತವಾಗಿಯೇ ಇರುವುದೆಂದು ವಿಚಾರಜ್ಞರು ಅಭಿಪ್ರಾಯಪಡುತ್ತಾರೆ. ಈಗಿನ ಯಾವ ವಿಶ್ವವಿದ್ಯಾನಿಲಯಗಳಲ್ಲಿಯೂ ಬೋಧಿಸಲಿಕ್ಕೆ ಸಾಧ್ಯವಾಗದಿರುವ ಅಮೂಲ್ಯವಾದ ಜ್ಞಾನಜ್ಯೋತಿಯ ಬೆಳಕನ್ನು ವಿಶ್ವದಲ್ಲಿ ಹರಡುವ ಮಹತ್‌ಶಕ್ತಿಯುಳ್ಳ ಋಷಿಗಳು ಈಗಲೂ ಇಂಡಿಯಾ ದೇಶದಲ್ಲಿರುವರೆಂತಲೂ ವಿಚಾರಜ್ಞರು ಅಭಿಪ್ರಾಯಪಡುತ್ತಾರೆ. ಈಗಿನ ಕಾಲದಲ್ಲಿ ವಿದ್ಯಾವಂತರಾದ ನಾಸ್ತಿಕರಿದ್ದಾಗ್ಯೂ ಆತ್ಮಸ್ವರೂಪವನ್ನು ತಿಳಿಯಲು ಧ್ಯಾನವೊಂದೇ ಅತ್ಯುತ್ತಮವಾದ ಸಾಧನವೆಂಬುದನ್ನು ಆಧ್ಯಾತ್ಮಿಕ ಪ್ರಪಂಚವು ಒಪ್ಪಿರುತ್ತದೆ. ಆದರೆ ಸರಿಯಾದ ಆತ್ಮಜ್ಞಾನವನ್ನು ಪಡೆಯುವುದು ಕಷ್ಟಸಾಧ್ಯವಾದುದೆಂಬುದರಲ್ಲಿ ಸಂಶಯವಿಲ್ಲ. "ನಾಲ್ಕುಸಾವಿರ ತತ್ತ್ವಶಾಸ್ತ್ರಗ್ರಂಥಗಳೂ ಕೂಡ ಆತ್ಮಸ್ವರೂಪವು ಹೇಗಿರುವುದೆಂಬುದನ್ನು ಬೋಧಿಸಲಾರವು" ಎಂದು ಸುಪ್ರಸಿದ್ಧ ತತ್ತ್ವಶಾಸ್ತ್ರವೇತ್ತನಾದ ವಾಲ್ಟೇರ್ (*Voltaire*) ಮಹಾಶಯನು ಸಾರಿ ಹೇಳಿರುತ್ತಾನೆ.

ಧ್ಯಾನ.

ಪಾಶ್ಚಾತ್ಯ ದೇಶಗಳಲ್ಲಿ ಧ್ಯಾನವೆಂಬುದೊಂದು ಕಣ್ಮರೆಯಾದ ಕಲೆಯಾಗಿರುವುದೆಂಬ ಭಾವನೆಯಿರುವುದಾದರೂ ಪ್ರಪಂಚದ ಸುಪ್ರಸಿದ್ಧರಾದ ಅನೇಕ ವ್ಯಕ್ತಿಗಳು ಈ ಧ್ಯಾನಮಾರ್ಗದಿಂದ ಆವೇಶವನ್ನು ಪಡೆದರೆಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಕಾರಾಗೃಹದಲ್ಲಿ ಧ್ಯಾನಸಾಧನೆಮಾಡಿ "ನನ್ನನ್ನು ನಾನು ನೋಡಿದೆ" ಎಂಬುದಾಗಿ ಜಗತ್ಪ್ರಸಿದ್ಧ ವೃತ್ತಪತ್ರಿಕಾ ಸಂಪಾದಕನಾದ (*William T Stead*) ಎಂಬುವನು ಹೇಳಿರುವನು. ಪ್ರಪಂಚದ ಸುಪ್ರಸಿದ್ಧ ಸಂಶೋಧಕರಲ್ಲೊಬ್ಬನಾದ ಥಾಮಸ್ ಏ. ಎಡಿಸನ್ (*Thomas A. Edison*) ಎಂಬುವನು ಈ ಇಂಗ್ಲೆಂಡ್ ದೇಶದ ರಾಜಕವಿಯಾದ ಲಾರ್ಡ್ ಟೆನಿಸನ್ (*Lord Tennysou*) ಎಂಬುವನು ಧ್ಯಾನಮಾರ್ಗವನ್ನು ಹೊಗಳುತ "ನೀನು ನಿನ್ನ ಆತ್ಮ ಗುಹೆಯನ್ನು ಪ್ರವೇಶ ಮಾಡಿದರೆ, ಅಂತರಾತ್ಮನ ದಿವ್ಯವಾಣಿಯನ್ನು ಕೇಳಿ ಆನಂದವನ್ನು ಪಡೆಯುವೆ" ಎಂದು ಹೇಳಿರುವನು. ಸುಪ್ರಸಿದ್ಧ ಗಣಿತ ಶಾಸ್ತ್ರಜ್ಞನೂ ಮತ್ತು ಜ್ಯೋತಿಷ್ಯನೂ ಆದ ಸರ್ ಐಸಾಕ್ ನ್ಯೂಟನ್ (*Sir Isac Newton*) ಎಂಬ ಮೇಧಾ

ವಿಯು ಒಂದಾನೊಂದು ಪ್ರಾತಃಕಾಲ ಬಹಳ ಹೊತ್ತಿನವರೆಗೆ ಅರ್ಧನಗ್ನನಾಗಿ ಧ್ಯಾನಮಗ್ನನಾಗಿದ್ದುದನ್ನು ಅನೇಕರು ನೋಡಿರುವುದು ಸರ್ವವಿದಿತವಾಗಿದೆ. ಇಂಡಿಯ ಮತ್ತು ಈಜಿಪ್ಟ ದೇಶಗಳಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿಯಾಗಿದ್ದ ಫೀಲ್ಡ ಮಾರ್ಶಲ್ ಲಾರ್ಡ ಕಿಚನರ್ (*Field Marshal Lord Kitchener*) ಅವರು ತಮ್ಮ ದೀರ್ಘಕಾಲದ ಅಧಿಕಾರಾವಧಿಯಲ್ಲಿ ಪ್ರಾಚೀನ ಧ್ಯಾನಮಾರ್ಗವನ್ನು ಗುಪ್ತವಾಗಿ ಅಭ್ಯಾಸ ಮಾಡಿ, "ಅಸುವಾನ್" (*Assuan*) ಪಟ್ಟಣದಹತ್ತರ ನೈಲ್ ನದಿಯಲ್ಲಿ ಅವರ ಹೆಸರಿನಿಂದ ಕರೆಯಲ್ಪಟ್ಟಿರುವ ದ್ವೀಪವೊಂದರಲ್ಲಿ ಧ್ಯಾನಾಭ್ಯಾಸಮಾಡುತ್ತಿದ್ದರೆಂಬ ವಿಷಯವು ಈಚೆಗೆ ಪ್ರಕಾಶಕ್ಕೆ ಬಂದಿದೆ. ಸಾಮಾನ್ಯ ಮನುಷ್ಯರಲ್ಲಿ ಮನಸ್ಸಿನ ಬೆಳಕು ಅನಿರ್ದಿಷ್ಟವಾಗಿ ಚದುರಿ ಹೋಗಿರುವುದು. ಆದರೆ ಒಂದು ವಿಶಿಷ್ಟವಾದ ಸಾಧನಾಶಕ್ತಿಯಿಂದ ಮನಸ್ಸಿನ ಅಂತಹ ಬೆಳಕನ್ನು ಕೇಂದ್ರೀಕರಿಸಿದರೆ ಜಾಜ್ವಲ್ಯಮಾನವಾದ ಜ್ಯೋತಿಯಾಗುವುದು. ಯಾವ ಪದಾರ್ಥದ ಮೇಲಾಗಲಿ ಈ ಜ್ಯೋತಿಯ ಕಿರಣವನ್ನು ಬಿಟ್ಟುದಾದರೆ ಆ ಪದಾರ್ಥವನ್ನು ಸಮಗ್ರವಾಗಿ ನೋಡಬಹುದಲ್ಲದೆ, ಅದರಿಂದ ಉಪಯುಕ್ತವಾದ ವಿಷಯಗಳನ್ನೂ ತಿಳಿದುಕೊಳ್ಳಬಹುದು. ನೆಲದಮೇಲೆ ಅನೇಕ ದಿವಸಗಳಿಂದ ಬಿದ್ದಿರುವ ಕಾಗದದ ಜೂರು ಯಾರ ಮನಸ್ಸಿನಲ್ಲಿಯೂ ಯಾವ ಕೌತುಕವನ್ನೂ ಹುಟ್ಟಿಸುವದಿಲ್ಲ. ಆದರೆ ಸೂರ್ಯ ಕಿರಣಗಳ ಶಾಖವನ್ನು ಕೇಂದ್ರೀಕರಿಸಿ ಸುಡುವ ಶಕ್ತಿಯನ್ನು ನಿದರ್ಶಿಸುವ ಲೆನ್ಸ್ (*Lens*) ಎಂಬ ಉಪಕರಣದ ಸಹಾಯದಿಂದ ಆ ಕಾಗದವನ್ನು ನಾವು ಸುಟ್ಟಾಗ ಮಾತ್ರ ಅದರ ಪ್ರಭಾವವು ಗೋಚರವಾಗುತ್ತದೆ. ಹಾಗೆಯೇ ಮಾನವನ ಮನಸ್ಸಿನಲ್ಲಿಯೂ ಆಕರ್ಷಕ ಮತ್ತು ವಿರೋಧಕ ಗುಣಗಳಿರುವವು. ಅದರ ಆಕರ್ಷಣ ಕ್ರಿಯೆಯು ಅಗೋಚರವಾಗಿ ಮನುಷ್ಯನ ಅಂತರಾತ್ಮನಲ್ಲಿ ಒಂದೇ ಸಮನಾಗಿ ಸಾಗುತ್ತಲೇ ಇರುವುದು. ನಮಗೆ ಅದು ಅಗೋಚರವಾದರೂ ನಿಶ್ಶಬ್ದವಾಗಿಯೂ ಗುಪ್ತವಾಗಿಯೂ ಅದರ ಪ್ರಭಾವವು ಎಡೆಬಿಡದೆ ನಡೆಯುತ್ತಲೇ ಇರುವುದು. ಪ್ರಕೃತಿಯು ಆತ್ಮಶಕ್ತಿಗೆ ಅಧೀನವಾಗಿರುವ ವಿಷಯವನ್ನು ನಿದರ್ಶನ ಪೂರ್ವಕವಾಗಿ ಒಬ್ಬ ಯೋಗಿಯು ತೋರಿಸಿದಾಗ ಅದನ್ನು ಆತ್ಯಾಶ್ಚರ್ಯಕರವಾದ ಪವಾಡವೆನ್ನುವರು. ಅಥವಾ ಮಹಿಮಾಶಾಲಿಯಾದ ಸುಪ್ರಸಿದ್ಧ ಏಸುಕ್ರಿಸ್ತನಂತಹ ಮಹ

ನೀಯನೊಬ್ಬನು ಅನೇಕರ ಹೃದಯ ಪರಿವರ್ತನೆ ಮಾಡಿದರೆ ಆಗ ನಾವು ಚಿತ್ತಸಂಯಮದಲ್ಲಿ ಅಡಗಿರುವ ಶಕ್ತಿಯು ಎಷ್ಟು ಮಹತ್ವವಾದುದೆಂಬುದನ್ನು ಮನಸಾರೆ ಅರಿಯುವವು. ಒಂದು ದೈವಿಕೋದ್ದೇಶವು ಇಡೀ ವಿಶ್ವದಲ್ಲೆಲ್ಲಾ ಅಡಗಿರುವುದೆಂದು ವಿಜ್ಞಾನಿಗಳು ಹೇಳುತ್ತಾರೆ. ಯಾವನು ಶುದ್ಧ ಧ್ಯಾನವನ್ನು ಅಭ್ಯಾಸಿಸಿ ಕಲಿಯುವನೋ ಅಂತವನು ಆ ದೈವಿಕೋದ್ದೇಶದ ಜೊತೆಗೆ ಬೆರೆತು ವಿಳಿತನಾಗುವನು. ಅನಂತರ ಆ ದೈವಿಕೋದ್ದೇಶವು ಆ ಧ್ಯಾನಿಯನ್ನು ಅಜ್ಞಾನಿಗಳಾದ ಮಾನವರ ಉದ್ಧಾರಕ್ಕಾಗಿ ಪವಿತ್ರವಾದ ಸಲಕರಣೆಯನ್ನಾಗಿ ಭಾವಿಸಿ ಉಪಯೋಗಿಸಿಕೊಳ್ಳುವುದು. ಇಡೀ ವಿಶ್ವವು ಭಗವಂತನ ಚಿತ್ತದ ಒಂದು ಲೀಲೆಯೆಂಬ ಸಿದ್ಧಾಂತಕ್ಕೆ ಚತುರರಾದ ವಿಜ್ಞಾನಿಗಳು ಬಂದಿರುತ್ತಾರೆ.

ಮನುಷ್ಯನು ಸಹಜವಾಗಿ ಆಧ್ಯಾತ್ಮಿಕವೃತ್ತಿಯೆಂಬುದನ್ನು ಶಾಸ್ತ್ರಜ್ಞರೆಲ್ಲರೂ ಒಪ್ಪುತ್ತಾರೆ. ದೈವಸೃಷ್ಟಿಯ ಮಹದದ್ಭುತ ಕೌತುಕಗಳಲ್ಲಿ ಮಾನವನ ಆಂತರಿಕ ಮನಸ್ಸು ಒಂದಾಗಿದೆ ಎನ್ನುವುದನ್ನು ಸಹ ಒಪ್ಪುತ್ತಾರೆ. ಪರಮಾತ್ಮನೆಂಬ ರತ್ನಭಾಂಡಾರವು ನಮ್ಮ ಹೃದಯದಲ್ಲಿಯೇ ಹುದುಗಿರುವುದೆಂದು ಜ್ಞಾನಿಗಳ ಅಭಿಪ್ರಾಯ. ಮಾನವನಲ್ಲಿರುವ ದೇವತ್ವಕ್ಕೆ ನಿದರ್ಶನ ಬೇಕೆಂದರೆ ನಿನ್ನ ಹೃದಯದಲ್ಲಿ ನೆಲೆಸಿರುವ ಅಂತರಾತ್ಮನ ನುಡಿಗಳನ್ನು ಆಲಿಸಬೇಕು. ದೃಷ್ಟಿಗೆ ಅಗೋಚರವಾಗಿ, ಧ್ಯಾನ ಚಿಂತನೆಗಳಿಗೆ ಆಧಾರಭೂತನಾದ ಅಂತರಾತ್ಮನು ಮನುಷ್ಯನ ದಿನಚರ್ಯೆಯ ಕ್ರಿಯೆ ಪ್ರತಿಕ್ರಿಯೆಗಳನ್ನು ನಿರ್ದೇಶಿಸುವನು ಮತ್ತು ಮಾನವನಿಗೆ ಏಕಾಂತದಲ್ಲಿ ಗೋಚರವಾಗುವನು. ಮನುಷ್ಯನ ಚಿತ್ತದಲ್ಲಿ ಪದೇ ಪದೇ ಮೂಡುವ ಭಾವನೆಗಳೂ ಅವನ ಹೃದಯದಲ್ಲಿ ತುಂಬಿರುವ ಚಿಂತನೆಗಳೂ ಅಗೋಚರವಾದ ಅವನ ಅಧಿಕಾರಿಗಳು. ಮತ್ತು ಅವುಗಳೇ ಅತನ ಆತ್ಮ ಸ್ವರೂಪಾಗಿ ಪರಿಣಮಿಸುತ್ತವೆ. ಮನಸ್ಸಿನ ಭಾವನೆಯು ಮನುಷ್ಯನ ಮೇಲೂ ಪ್ರಕೃತಿಯ ಮೇಲೂ ತನ್ನ ಪ್ರಭಾವವನ್ನು ಬೀರಬಲ್ಲುದೆಂದು ಹೇಳುತ್ತಾರೆ. ಇಡೀ ಪ್ರಕೃತಿಯು ಒಂದು ಒತ್ತಡಿಕೆದ ಶಕ್ತಿಯೆಂದೂ, ಎಲ್ಲ ಮನುಷ್ಯರು ಈ ಶಕ್ತಿಯ ಜೈತನ್ಯ ಚಲನ ಸ್ವರೂಪರೆಂದೂ ಅತ್ಯಂತ ಸೂಕ್ಷ್ಮಸಾಧನ ಸಲಕರಣೆಗಳ ಮೂಲಕ ಮಾನವನ ಭಾವನೆಗಳನ್ನು ಚಿತ್ರದಂತೆ ಕಾಗದದ ಮೇಲೆ ರೂಪಿಸಬಹುದೆಂದೂ, ವಿಜ್ಞಾನಿಗಳು ಹೇಳುತ್ತಾರೆ. ಅಷ್ಟಲ್ಲದೆ ಮನುಷ್ಯನ ಮನ

ಸ್ಸಿನಲ್ಲಿ ಆಕರ್ಷಣ ವಿದ್ಯುತ್ಕಣಗಳಿರುವುವೆಂದೂ, ಭಾವನೆಗಳ ಭಾವ ಚಿತ್ರಗಳನ್ನು (*Photographs*) ಸೋಟೋ ತೆಗೆಯಬಹುದೆಂದೂ, ಮತ್ತು ವಿದ್ಯುದಾವೇಗ ಕಣಗಳಿಂದ ಕೂಡಿದ ಮನುಷ್ಯನ ಬುದ್ಧಿಶಕ್ತಿಯನ್ನು ಬೆಳಕಿನ ಕಿರಣಗಳನ್ನಾಗಿ ಮಾರ್ಪಡಿಸಬಹುದೆಂದೂ ವಿಜ್ಞಾನಿಗಳು ಪ್ರಯೋಗಗಳ ಮೂಲಕ ತೋರಿಸಿರುತ್ತಾರೆ. ಈ ಆತ್ಮನಿರ್ದೇಶಕ ವಿಜ್ಞಾನವು ಐದುಸಾವಿರ ವರ್ಷಗಳ ಹಿಂದೆಯೇ ನಮ್ಮ ಭರತಖಂಡದಲ್ಲಿ ಪ್ರಚಲಿತವಾಗಿತ್ತೆಂಬುದು ಸರ್ವವಿದಿತವಾಗಿದೆ. "ಅನಂತ" (*Infinite*) ದ ರಹಸ್ಯಮಯ ಅನಿರ್ವಚನೀಯ ಗರ್ಭದಿಂದ ಮನುಷ್ಯನು ಹೊರಹೊಮ್ಮುತ್ತಾನೆ. ಇವನಲ್ಲಿ ಅಪ್ರಕಟಿತ ಮಾನಸಿಕ ಶಕ್ತಿಯೂ, ಆಧ್ಯಾತ್ಮಿಕ ಬುದ್ಧಿಸಂಪತ್ತೂ ಇವೆ. ಆಧ್ಯಾತ್ಮಿಕ ಕಲೆಯಲ್ಲಿ ನುರಿತ ಭರತಖಂಡವು ಮಾನವನಲ್ಲಿ ಅಡಗಿರತಕ್ಕ ಈ ಶಕ್ತಿಗಳನ್ನು ಅಭಿವೃದ್ಧಿಗೊಳಿಸಿ, ಅವುಗಳ ಸಂಪೂರ್ಣ ಉಪಯೋಗವನ್ನು ಪಡೆಯುವ ಮಾರ್ಗವನ್ನು ತಿಳಿದುಕೊಂಡಿರುತ್ತದೆ. ಕ್ರಮವಾದ ಧ್ಯಾನದಿಂದ ಸ್ವಲ್ಪಕಾಲವಾದರೂ ಬಾಹ್ಯ ಪ್ರಪಂಚವನ್ನು ಮರೆತು ಸಮಾಧಿಯೋಗದಿಂದ ಆಂತರಿಕ ಪ್ರಪಂಚಕ್ಕೆ ಮನಸ್ಸನ್ನು ತಿರುಗಿಸಿದರೆ ಮಾತ್ರ ಶಾಂತಿಯು ದೊರಕುತ್ತದೆ. ಈ ಶಾಂತಿಯೇ ಜ್ಞಾನದ ಹುನ್ನೆಲೆ. ಶುದ್ಧ ಧ್ಯಾನವು ಮನುಷ್ಯನಲ್ಲಿ ಅಡಗಿರುವ ಆತ್ಮವೃತ್ತಿಯನ್ನು ವಿಕಾಸಗೊಳಿಸುವುದಲ್ಲದೆ ಅವನ ಎಲ್ಲಾ ಕಾರ್ಯಗಳಿಗೂ ಅತ್ಯಂತ ಸ್ಫೂರ್ತಿಯನ್ನು ಕೊಡುತ್ತದೆ. ಇದೇ ಮಾನವನ ಅಂತರಂಗ ತತ್ತ್ವವಾಗಿದೆ. ಈ ತತ್ತ್ವವನ್ನೇ ನಂಬಿ ಆಲಿವರ್ ಕ್ರಾಮ್‌ವೆಲ್ (*Oliver Cromwell*), ಮಾರ್ಕಸ್ ಆರೇಲಿಯಸ್ (*Marcus Araelius*). ಅಶೋಕ (*Asoka*), ಅಕ್ಬರ್ (*Akbar*) ಶಿವಾಜಿ (*Sivaji*) ಮುಂತಾದ ಜಗತ್ ಪ್ರಖ್ಯಾತ ಮಹನೀಯರು ತಮ್ಮ ಧ್ಯೇಯವನ್ನು ಸಾಧಿಸಿರುತ್ತಾರೆ. ಆದುದರಿಂದ ಎಲ್ಲ ಕಾಲಗಳಲ್ಲಿಯೂ, ಎಲ್ಲ ದೇಶಗಳಲ್ಲಿಯೂ, ಧ್ಯಾನ ಮತ್ತೆ ತಪಸ್ಸುಗಳು ಶಾಂತಿಗೂ, ಜಯಕ್ಕೂ ಬಹು ಮುಖ್ಯ ಸಾಧನಗಳೆಂದು ಪರಿಗಣಿತವಾಗಿವೆ. ಪ್ರಾಮಾಣಿಕ ಹೃದಯದ ಅಂತರಾಳದಿಂದ ಹೊಂಟ ಪ್ರಾರ್ಥನೆಗಳು ಮೇಲಕ್ಕೆ ಭಗವತ್ಸಾನ್ನಿಧ್ಯಕ್ಕಡರಿ ಕಾಮಿತಾರ್ಥವನ್ನು ಖಂಡಿತವಾಗಿಯೂ ತರುವುವೆಂದು ನಾನು ಮನಃಪೂರ್ವಕವಾಗಿ ನಂಬಿರುತ್ತೇನೆ.

ನಮ್ಮ ಪಾಠಶಾಲೆಗಳು.

ಲೇಖಕಃ— ಓರ್ವಶಿಕ್ಷಕ.

(ಹಿಂದಿನಿಂದ ಮುಂದೆ ಸಾಗಿ ಮುಗಿದದ್ದು.)

[ಹಿಂದಿನ ಸಂಚಿಕೆಯಲ್ಲಿ ಲೇಖಕರು ಈಗಿನ ಪಾಠಶಾಲೆಗಳ ಶೋಚನೀಯ ಸ್ಥಿತಿಯನ್ನು ವಿವರಿಸುತ್ತ ಅವುಗಳ ಪುನರ್ಘಟನೆಯನ್ನು ಕುರಿತು ಕೆಳಗೆ ಕಾಣಿಸಿದ ಸೂಚನೆಗಳನ್ನು ಮಾಡಿದ್ದಾರೆ. ಈಗಿನ ಪಾಠಶಾಲೆಗಳು, ಸಂಸ್ಕೃತ ಕಾಲೇಜಗಳು, ಶಿವಯೋಗಮಂದಿರ ಇಂಥ ಸಂಸ್ಥೆಯವರು ಕೂಡಿಕೊಂಡು ಧಾರ್ಮಿಕ ಶಿಕ್ಷಣದ ಒಂದು ಯೋಜನೆಯನ್ನು ಏರ್ಪಡಿಸುವದು ಅತ್ಯಾವಶ್ಯಕವು. ಇಂಥ ಯೋಜನೆಯನ್ನು ಅವರು ಮಾಡಿ ಅದನ್ನು ಪ್ರಯೋಗದಲ್ಲಿ ತಂದರೆ ಸಮಾಜದಲ್ಲಿರುವ ಅಸಂಖ್ಯ ಮಠಗಳ ಮತ್ತು ಭಕ್ತರ ಸುಧಾರಣೆಗೆ ಅದು ಕಾರಣವಾಗದೆ ಇರದು.

—ಸಂಪಾದಕ.]

ಅಭ್ಯಾಸಕ್ರಮ.

ಹಳ್ಳಿಯ ಪಾಠಶಾಲೆಗಳಲ್ಲಿ ಪ್ರಾಥಮಿಕ ವರ್ಗದ, ತಾಲೂಕಿನ ಶಿಕ್ಷಣಾಲಯಗಳಲ್ಲಿ ಮಾಧ್ಯಮಿಕ ವರ್ಗದ, ಜಿಲ್ಲೆಯ ವಿದ್ಯಾಮಂದಿರಗಳಲ್ಲಿ ಪ್ರೌಢವರ್ಗದ, ಅಭ್ಯಾಸಕ್ರಮಗಳನ್ನೇರ್ಪಡಿಸಬೇಕು. ಪ್ರಾಥಮಿಕ ಶಿಕ್ಷಣಕ್ಕೆ ೫ ವರ್ಷ, ಮಾಧ್ಯಮಿಕ ಶಿಕ್ಷಣಕ್ಕೆ ೪ ವರ್ಷ, ಪ್ರೌಢಶಿಕ್ಷಣಕ್ಕೆ ೪ ವರ್ಷ ಈ ಪ್ರಕಾರ ಅವಧಿಯನ್ನು ಕಲ್ಪಿಸಬೇಕು.

ಪ್ರಾಥಮಿಕ ಶಿಕ್ಷಣವು ಮುಗಿಯುವದರೊಳಗಾಗಿ ವಿದ್ಯಾರ್ಥಿಗೆ ಸುಮಾರು ೨೫೦ ಶರಣರ ವಚನಗಳು, ೨೫೦ ಸರ್ವಜ್ಞನ ವಚನಗಳು, ೨೫ ಕೈವಲ್ಯಗಳೊಳಗಿನ ತತ್ವಪದಗಳು, ೫೦ ಶರಣರ ಕಥೆಗಳು, ವೀರಶೈವ ಮತತತ್ವಗಳ ಸಾಮಾನ್ಯಜ್ಞಾನ, ವೀರಶೈವರ ಇತಿಹಾಸ, ಕರ್ನಾಟಕ ಮತ್ತು ಹಿಂದುಸ್ಥಾನದ ಭೂಗೋಲ, ವ್ಯಾಕರಣ, ಪತ್ರವ್ಯವಹಾರ, ಜಮಾಖರ್ಚು, ಬಾಯಿಲೆಕ್ಕ, ಅಂಗಡಿಲೆಕ್ಕ, ಕ್ಷೇತ್ರಫಲದ ಲೆಕ್ಕ, ಭೂಮಿ ಅಳೆಯುವದು, ಬಡ್ಡಿಲೆಕ್ಕ, ಶರೀರಸಂಗೋಪನಶಾಸ್ತ್ರ, ಗಾಯನಕಲೆ, ಚಿತ್ರಕಲೆ ಇಷ್ಟು ವಿಷಯಗಳನ್ನೊಳಕೊಂಡ ಕ್ರಮಿಕ ಪುಸ್ತಕಗಳನು

ಆಯಾಯ ತರಗತಿಗಳಿಗೆ ತಕ್ಕಂತೆ ರಚಿಸಬೇಕು. ಇದಲ್ಲದೆ ಪ್ರಾಥಮಿಕ ವರ್ಗದಲ್ಲಿ ಆಯಾಯ ವಿದ್ಯಾರ್ಥಿಗಳ ಮನೆತನದ ಉದ್ಯೋಗದ ಬಗ್ಗೆ ಚೆನ್ನಾಗಿ ಮಾಹಿತಿಯನ್ನು ಮಾಡಿಕೊಡಬೇಕು.

ಮಾಧ್ಯಮಿಕ ಶಿಕ್ಷಣದಲ್ಲಿ ೫೦೦ ಶರಣರ ವಚನ ಸಂಗ್ರಹ, ಸರ್ವಜ್ಞನ ವಚನಸಂಗ್ರಹ, ವೀರಶೈವ ಕಾವ್ಯಸಂಗ್ರಹ (೧೦೦೦ ಪದ್ಯಗಳು) ಇಂಗ್ಲಿಷ ೩ನೇ ಇಯತ್ತೆಯ ವರೆಗೆ ಅಭ್ಯಾಸ, ಹಿಂದೀಪ್ರಾಥಮಿಕ ಪರೀಕ್ಷೆಯ ವರೆಗೆ ಅಭ್ಯಾಸ, ಸಂಸ್ಕೃತ ಭಾಂಡಾರಕರ ೧-೨ ಪುಸ್ತಕಗಳು ಮತ್ತು ಹಿತೋಪದೇಶ ಸಂಪೂರ್ಣ ಮತ್ತು ಅಷ್ಟಾವರಣ-ಪಂಚಾಚಾರ ಷಟ್‌ಸ್ಥಲಗಳ ಬಗ್ಗೆ ಗ್ರಂಥಗಳ ಹಾಗೂ ವಿವಿಧ ಲೇಖಗಳ ಅಭ್ಯಾಸ, ರಾಜಕೀಯ ಹಾಗೂ ಪ್ರಾಕೃತಿಕ ಭೂಮಂಡಲ ಭೂಗೋಲ, ವಿವಿಧ ದೇಶಗಳ ಸುಧಾರಣೆಯ ಇತಿಹಾಸ, ವೀರಶೈವ ಇತಿಹಾಸದ ಸವಿಸ್ತಾರವಾದ ಅಭ್ಯಾಸ, ಗಾಯನ ಚಿತ್ರಕಲೆಗಳ ಅಭ್ಯಾಸವನ್ನು ಮುಂದುವರಿಸುವದು, ಬ್ರಹ್ಮಚರ್ಯ ಪಾಲನೆಯ ಮಹತ್ವ- ಧ್ಯಾನ ಪ್ರಾರ್ಥನೆಗಳ ಮಹತ್ವದ ಬಗ್ಗೆ ಗ್ರಂಥಗಳ ಅಭ್ಯಾಸ-ಇಷ್ಟೆಲ್ಲ ವಿಷಯಗಳಿಗೆ ತಕ್ಕಂತೆ ಕ್ರಮಿಕ ಪುಸ್ತಕಗಳ ರಚನೆಯಾಗಬೇಕು. ಮಾಧ್ಯಮಿಕ ವರ್ಗದ ಅಭ್ಯಾಸವು ಪೂರೈಸಿದ ಬಳಿಕ ವಿದ್ಯಾರ್ಥಿಯು ವೀರಶೈವರಿಂದ ಸ್ಥಾಪಿಸಲ್ಪಡುವ ಔದ್ಯೋಗಿಕ ಹಾಗೂ ಯಾಂತ್ರಿಕ ಶಾಲೆಗಳಿಗೆ ಹೋಗಿ ೫ ವರ್ಷ ಆ ಶಿಕ್ಷಣ ಪಡೆಯಬಹುದು. ಈ ವಿಷಯವಾಗಿ ಮುಂದೆ ವಿಸ್ತಾರವಾಗಿ ಹೇಳಿದೆ. ಈ ಅಭ್ಯಾಸವು ವೀರಶೈವರು ಕೈಕೊಳ್ಳತಕ್ಕ ಕಾಯಕದ ತತ್ವಕ್ಕೆ ಅನುಗುಣವಾಗಿರುತ್ತದೆ.

ಪ್ರೌಢ ಶಿಕ್ಷಣದಲ್ಲಿ ವೀರಶೈವ ಕಾವ್ಯಗಳ ಅಭ್ಯಾಸ, ಮತತತ್ವ ಗ್ರಂಥಗಳ ಅಭ್ಯಾಸ, ತುಲನಾತ್ಮಕರೀತಿಯಿಂದ ಭಿನ್ನ ಮತತತ್ವಗಳ ಅಭ್ಯಾಸ, ವಿಮರ್ಶಾಕಲೆ, ಲೇಖನಕಲೆ, ಗಮಕಕಲೆ, ಕಾವ್ಯರಚನಾಕಲೆ, ಪುರಾಣ ಕೀರ್ತನ ಕಲೆ, ನಾಟಕಸಂಗೀತಕಲೆ, ಸಂಸ್ಕೃತ ಪಂಚ ಮಹಾ ಕಾವ್ಯ-ನಾಟಕಗಳ ಅಭ್ಯಾಸ, ಆಗಮ ಉಪನಿಷತ್ತು ಭಗವದ್ಗೀತೆಗಳ ಅಭ್ಯಾಸ, ಇಂಗ್ಲಿಷ್ ಮ್ಯಾಟ್ರಿಕ್ಕಿನ ವರೆಗೆ ಅಭ್ಯಾಸ, ಇವೆಲ್ಲ ವಿಷಯುಗಳಿಗನುಗುಣವಾಗಿ ಪಠ್ಯಪುಸ್ತಕಗಳ ವ್ಯವಸ್ಥೆ ಮಾಡಬೇಕು. ಈ ಶಿಕ್ಷಣ ಕ್ರಮವನ್ನು ಪೂರೈಸಿದ ಬಳಿಕ ವಿದ್ಯಾರ್ಥಿಯು ವೀರಶೈವರ

ರವಾಗಿ ಸಾಮಾಜಿಕ ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯ ಕ್ಷೇತ್ರಗಳಲ್ಲಿ ಪ್ರವೇಶಿಸಿ ಜನಸೇವೆ-ಕನ್ನಡನಾಡನುಡಿ ಸೇವೆ-ರಾಷ್ಟ್ರಸೇವೆಗಳನ್ನು ಫಲಕಾರಿಯಾಗಿ ಮಾಡುವ ಯೋಗ್ಯತೆ ಕರ್ತೃತ್ವಶಕ್ತಿಗಳನ್ನು ಪಡೆಯುತ್ತಾನೆ. ಈಗಿನ ಪ್ರಾಥಮಿಕ-- ಮಾಧ್ಯಮಿಕ--ಉಚ್ಚಶಿಕ್ಷಣಗಳು ನಿರುಪಯೋಗಿಯೆಂಬ ಅಪವಾದವನ್ನು ಈ ಮಾದರಿಯ ರಸವತ್ತಾದ ಶಿಕ್ಷಣಯೋಜನೆಯಿಂದ ನೀಗಿಕೊಳ್ಳುವದು ವಿಹಿತ.

ಪರೀಕ್ಷೆ ಮತ್ತು ಪದವಿಗಳ ಕ್ರಮ.

ವಿದ್ಯಾಪೀಠದವರು ಆಯಾಯ ಅಭ್ಯಾಸ ಕ್ರಮಕ್ಕನುಗುಣವಾಗಿ ಪ್ರಾಥಮಿಕ ಪರೀಕ್ಷೆ, ಮಾಧ್ಯಮಿಕ ಪರೀಕ್ಷೆ, ಪ್ರೌಢ ಪರೀಕ್ಷೆ, ಹೀಗೆ ಪರೀಕ್ಷೆಯ ಕ್ರಮಗಳನ್ನು ಗೊತ್ತುಪಡಿಸಿ ಆಯಾಯ ಕೇಂದ್ರಗಳಲ್ಲಿ ವರುಷ ವರುಷ ಆಯಾಯ ಪರೀಕ್ಷೆಗಳು ನಡೆಯುವಂತೆ ಏರ್ಪಾಡು ಮಾಡಬೇಕು. ಮತ್ತು ಆಯಾಯ ಪರೀಕ್ಷೆಗಳಿಗನುಗುಣವಾಗಿ ಆವುಗಳಲ್ಲಿ ತೇರ್ಗಡೆಯಾದವರಿಗೆ ಯೋಗ್ಯ ಪದವಿಗಳನ್ನು ಗೊತ್ತು ಪಡಿಸಿ ಪದವಿದಾನಮಾಡಬೇಕು. ಉದಾಹರಣಾರ್ಥವಾಗಿ ಪ್ರಾಥಮಿಕ ಮಾಧ್ಯಮಿಕ ಪ್ರೌಢ ಪರೀಕ್ಷೆಗಳಿಗನುರೂಪವಾಗಿ ಕ್ರಮದಿಂದ **'ವೀರಶೈವ ಪ್ರವೇಶಕ'** 'ವೀರಶೈವ ಪ್ರಬೋಧಕ', ಮತ್ತು 'ವೀರಶೈವ ಪ್ರಕಾಶಕ' ಎಂಬ ಪದವಿಗಳನ್ನು ಕೊಡಬಹುದು. ಇಲ್ಲವೆ ಯುಕ್ತ ಕಂಡಂತೆ ಆಯಾಯ ಪದವಿಗಳಿಗೆ ಭಿನ್ನ ಹೆಸರುಗಳನ್ನು ಕೊಡಬಹುದು. ಪ್ರಾಥಮಿಕ ಪರೀಕ್ಷೆಗಳು ತಾಲೂಕಗಳಲ್ಲಿಯೂ ಮಾಧ್ಯಮಿಕ ಪರೀಕ್ಷೆಗಳು ಜಿಲ್ಲೆಯ ಸ್ಥಳಗಳಲ್ಲಿಯೂ ಪ್ರೌಢ ಪರೀಕ್ಷೆಗಳು ವಿದ್ಯಾಪೀಠದವರು ಗೊತ್ತುಪಡಿಸುವ ಕೇಂದ್ರಗಳಲ್ಲಿಯೂ ನಡೆಯಬೇಕು. ಪರೀಕ್ಷಾ ಕ್ರಮವನ್ನು ಈಗಿನ ವಿಶ್ವವಿದ್ಯಾಲಯದವರು ಮಾಡುವ ರೀತಿಯಲ್ಲಿ ಮಾಡಬೇಕು. ಪ್ರಾಥಮಿಕ ಮಾಧ್ಯಮಿಕ ಪರೀಕ್ಷೆಗಳು ವಿದ್ಯಾಪೀಠದ ಜಿಲ್ಲಾ ಶಾಖೆಯ ಕೆಳಗೆ ಇರತಕ್ಕದ್ದು. ಪ್ರಶ್ನೆ ಕಾಗದ ಪರೀಕ್ಷಕರ ನೇಮಣೂಕೆ ಮುಂತಾದ್ದನ್ನು ಜಿಲ್ಲಾ ಶಾಖೆಯವರೇ ಮಾಡಬೇಕು. ಪ್ರೌಢ ಪರೀಕ್ಷೆಯ ಎಲ್ಲ ಹೊಣೆಗಾರಿಕೆಯು ಮುಂಬಯಿ ವಿದ್ಯಾಪೀಠದ ಸ್ವಾಧೀನದಲ್ಲಿದ್ದು ಅವರೇ ಅದರ ಎಲ್ಲ ವ್ಯವಸ್ಥೆಯನ್ನು ನೋಡಿಕೊಳ್ಳಬೇಕು. ಅದರಂತೆ ಪ್ರಮಾಣ ಪತ್ರ ಪದವಿದಾನಗಳ ವಿಷಯದಲ್ಲಿ ಜಿಲ್ಲಾ ಶಾಖೆಯವರು ಪ್ರಾಥಮಿಕ ಮಾಧ್ಯಮಿಕ

ಪರೀಕ್ಷೆಗಳಿಗೂ ವಿದ್ಯಾ ಪೀಠದವರು ಪ್ರೌಢ ಪರೀಕ್ಷೆಯ ಸಂಬಂಧವುಳ್ಳವರಾಗಿರಬೇಕು. ಪ್ರಮಾಣಪತ್ರ ಪದವಿದಾನಗಳೆಲ್ಲ ಕನ್ನಡದಲ್ಲಿಯೇ ಮುದ್ರಿಸಲ್ಪಡಬೇಕು.

ಈ ಹೊಸ ಯೋಜನೆಯು ಧೋರಣ.

ಪ್ರಾಥಮಿಕ ಶಿಕ್ಷಣ ಕ್ರಮವನ್ನು ವೀರಶೈವ ಬಾಲಬಾಲಕಿಯರಿಗೆಲ್ಲ ಉಚಿತವಾಗಿ ಒತ್ತಾಯದಿಂದ ಕಲಿಸಬೇಕು. ಮಾಧ್ಯಮಿಕ ಪ್ರೌಢ ಶಿಕ್ಷಣವನ್ನು ಅವರವರಿಗೆ ಐಚ್ಛಿಕವಾಗಿ ಬಿಟ್ಟುಬಿಡಬೇಕು. ಪ್ರಾಥಮಿಕ ಪರೀಕ್ಷೆಯಲ್ಲಿ ತೇರ್ಗಡೆಯಾದ ಬಳಿಕ ವಿದ್ಯಾರ್ಥಿಗಳು ತಮ್ಮ ಮನಸ್ತನದ ಹೋರೆಯನ್ನು ಕುಶಲತನದಿಂದ ನಡೆಯಿಸಿಕೊಂಡು ಹೋಗಲು ಸಮರ್ಥರಾಗುವರು. ಅವರು ವ್ಯವಹಾರದಲ್ಲಿ ಯಾರಿಗೂ ಮೋಸಹೋಗುವ ಕಾರಣವಿಲ್ಲ. ನಿರಕ್ಷರಿಗಳೆಂಬ ಅಪವಾದದಿಂದ ಅವರು ದೂರಾಗುವರು. ಅವರಿಗೆ ಊರೊಳಗಿನ ಗ್ರಾಮಸ್ಥರ, ಸಾಹುಕಾರರ ಹಾಗೂ ಸರಕಾರಿ ಅಧಿಕಾರಿಗಳ ಕಾಟವು ತಪ್ಪಿ ಹೋಗುವದು. ಹಳ್ಳಿಯ ಸುಶಿಕ್ಷಿತರು ಒಕ್ಕ ಟ್ಟಾಗಿ "ಕೋ-ಅಪರೇಟಿವ್ಹ" ಸಂಘವನ್ನು ಸ್ಥಾಪಿಸಿಕೊಂಡು ತಮ್ಮ ಅಡ ಚಣಿಗಳನ್ನು ದೂರಮಾಡಿಕೊಳ್ಳಬಹುದು. ಪಂಚಾಯತಿಗಳನ್ನು ಸ್ಥಾಪಿ ಸಿಕೊಂಡು ತಮ್ಮ ಊರಿನ ನ್ಯಾಯಗಳನ್ನು ತೀರಿಸಿಕೊಳ್ಳಬಹುದು. ಒಕ್ಕಟ್ಟಿನಿಂದ ಕಾಲಕಾಲಕ್ಕೆ ಊರಲ್ಲಿ ವಿವಿಧ ಮನೋರಂಜನೆಯ ಹಾಗೂ ಉಪಯುಕ್ತ ಪ್ರದರ್ಶನ ಪ್ರಯೋಗಗಳಿಂದ ಊರಿನ ಸರ್ವಾಂಗ ಸುಂದರವಾದ ಉನ್ನತಿಯನ್ನು ಮಾಡಿಕೊಳ್ಳಬಹುದು.

ಈಗಿನ ವಿದ್ಯಾರ್ಥಿಗಳು ಮುಲಕ ಪರೀಕ್ಷೆ ಪಾಸಾದಬಳಿಕ ಹೆಚ್ಚು ಗುಣಗಳು ದೊರೆತರೆ ಲೋಕಲ್ ಬೋರ್ಡ ಶಾಲೆಯ ಶಿಕ್ಷಕರಾಗುವರು. ಕಡಿಮೆ ಗುಣಗಳಿದ್ದರೆ ಇಂಗ್ಲೀಷ ಕಲಿಯಲಿಕ್ಕೆ ಹೋಗುವರು ಇಲ್ಲವೆ ಮನೆಯ ಹಾದೀ ಹಿಡಿಯುವರು. ಅವರು ಪ್ರಪಂಚದಲ್ಲಿ ಯಾತಕ್ಕೂ ಬಾರದವರಾಗಿರುತ್ತಾರೆ. ಆದರೆ ಮೇಲ್ಕಂಡ ಯೋಜನೆಯಿಂದ ಅಂಥ ಯಾವ ಪ್ರಮಾದಗಳೂ ಆಗಲಾರವು.

ಮಾಧ್ಯಮಿಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ವಿದ್ಯಾರ್ಥಿಗಳು ಬಿಟ್ಟರೆ ಅವರು ತಮ್ಮ ಮನೆಯ ಉದ್ಯೋಗವನ್ನು ಚೆಚ್ಚು ಸುಗಮ

ವಾಗಿ ಸಾಗಿಸಿಕೊಂಡು ಹೋಗಬಹುದು. "ಕಾಯಕವೇ ಕೈಲಾಸ" ವಾದ ಕಾರಣ ಅವರು ತಮ್ಮ ಹೋರೆಯನ್ನು ಸಾಗಿಸಿಕೊಂಡು ಹೋಗಲು ಒಣ ದುರಭಿಮಾನವನ್ನೆಣಿಸಲಾರರು. ಯಾಕಂದರೆ ಅವರಿಗೆ ಅಂಥ ಶಿಕ್ಷಣವೇ ದೊರೆತಿರುತ್ತದೆ. ಒಂದು ವೇಳೆ ಅವರು ಎಷ್ಟೋಹಳ್ಳಿಯ ಪಾಠಶಾಲೆಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡಬಹುದು. ಇಲ್ಲವೆ ಬೋಧ ಕರಾಗಿ ಹಳ್ಳಿಗಳಲ್ಲಿ ಸಂಚರಿಸಿ ಧರ್ಮಜಾಗ್ರತಿ ಜನಜಾಗ್ರತಿಯನ್ನು ಮಾಡ ಬಹುದು. ಅಥವಾ ವೀರಶೈವರಿಂದ ಸ್ಥಾಪಿತಲಾಗುವ ಯಾಂತ್ರಿಕ ಔದ್ಯೋಗಿಕ ಕಾರ್ಯಾಲಯಗಳಲ್ಲಿ ಸೇರಿ ಮುಂದಿನ ಶಿಕ್ಷಣ ಪಡೆಯ ಬಹುದು. ಇಲ್ಲವೆ ಪ್ರೌಢ ಶಿಕ್ಷಣಕ್ಕಾಗಿ ಜಿಲ್ಲಾ ಸ್ಥಳಗಳಿಗೆ ಹೋಗಬ ಹುದು. ಮ್ಯಾಟ್ರಿಕ್ ಪರೀಕ್ಷೆಯಾದ ಬಳಿಕ ಕಾರಕೂನಿಕೆಗಾಗಿ ಹೆಣ ಗಾಡುವಂತೆ ನಮ್ಮ ಶಿಕ್ಷಣ ಯೋಜನೆಯಿರಕೂಡದು.

ಪ್ರೌಢವರ್ಗದಲ್ಲಿ ಉತ್ತೀರ್ಣರಾದವರು ಸಂಘಶಕ್ತಿಯಿಂದ ವರ್ತ ಮಾನಪತ್ರ, ಮಾಸಪತ್ರಿಕೆ, ಗ್ರಂಥರಚನೆ, ಇತಿಹಾಸ ಸಂಶೋಧನೆ, ನಾಟಕ, ಕೀರ್ತನ, ಕಥಾ ಕಾದಂಬರಿಗಳ ಪ್ರಕಟನೆ ಮುಂತಾದ ಬೌದ್ಧಿಕ ಕಾರ್ಯಗಳಲ್ಲಿ ಕೆಲಸ ಮಾಡಬಹುದು. ಇಲ್ಲವೆ 'ಶಿವಾನುಭವ ಸಂಘ' 'ಸಾಹಿತ್ಯ ಮಂಡಲ' ಮುಂತಾದ ಕೂಟಗಳನ್ನು ಏರ್ಪಡಿಸಿ ಮತತತ್ವಗಳ ಚರ್ಚೆ, ಉದ್ಗ್ರಂಥಗಳ ಅಭ್ಯಾಸ ಮುಂತಾದ್ದನ್ನು ಮಾಡಬಹುದು. ಮುನಸಿಪಾಲಿಟಿ ಲೋಕಲ್ ಬೋರ್ಡುಗಳ ಸದಸ್ಯರಾಗಿ ಜನಸೇವೆಮಾಡ ಬಹುದು. ವೀರಶೈವರಿಂದ ಸ್ಥಾಪಿತವಾಗುವ **'ವೀರಶೈವ ರಾಜಕೀಯ ಮಂಡಲ'**ದಲ್ಲಿ ಸೇರಿ ಕರ್ನಾಟಕದ ವಿಶೇಷತಃ ವೀರಶೈವರ ಹಿತದ ಪ್ರಶ್ನೆಗಳನ್ನು ಬಿಡಿಸಿಕೊಳ್ಳಬಹುದು. ದೊಡ್ಡದೊಡ್ಡ ನಗರಗಳಿಗೆ ಹೋಗಿ ಪಂಡಿತರ ಸಭೆಯಲ್ಲಿ ವ್ಯಾಖ್ಯಾನ ಪ್ರವಚನಗಳನ್ನು ಹೇಳಿ ಜನರಲ್ಲಿ ನಮ್ಮ ಮತತತ್ವಗಳನ್ನು ಪ್ರಕಟಗೊಳಿಸಬಹುದು. **ಈ** ರೀತಿಯಿಂದ **ಈ ಹೊಸಧೋರಣೆಯು** ನಮಗೆ ಒಳ್ಳೆ ಲಾಭಕರವೆಂದು ಹೇಳಲು ಅಡ್ಡಿ ಇಲ್ಲ. ಈಗಿನ ಪದವೀಧರರಂತೆ ಸರಕಾರಿ ನೌಕರಿ ಮಾಡಬೇಕೆಂಬ ಹಂಬಲವು ತಪ್ಪುವದು.

ವಾಚನಾಲಯಗಳ ವಿಸ್ತಾರ.

ಹಳ್ಳಿ-ತಾಲೂಕ-ಜಿಲ್ಲೆಗಳ ವಿದ್ಯಾಸಂಸ್ಥೆಗಳಿಗನುಗುಣವಾಗಿ ವಿವಿಧ ವಿಷಯಗಳ ಪುಸ್ತಕಸಂಗ್ರಹ, ವರ್ತಮಾನಪತ್ರ, ಮಾಸಿಕ, ಮುಂತಾ

ದವುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಕ್ರಮಬದ್ಧವಾದ ಶಿಕ್ಷಣ ಲಾಭವನ್ನು ಮಾಡಿಕೊಡಬೇಕು. ಆ ಬಗ್ಗೆ ಒಬ್ಬ ಪ್ರತ್ಯೇಕ ಶಿಕ್ಷಕನನ್ನು ನೇಮಿಸುವದಂತೂ ಪರಮಸುಖ. ಅಂದರೆ ವಿದ್ಯಾರ್ಥಿಗಳು ವ್ಯವಹಾರಜ್ಞಾನ ಶೂನ್ಯರಾಗದೆ ಜಗತ್ತಿನ ಎಲ್ಲ ಸಂಗತಿಗಳನ್ನು ತಿಳಿದುಕೊಂಡು ತಮ್ಮ ಬುದ್ಧಿಯನ್ನು ವಿಕಾಸಮಾಡಿಕೊಳ್ಳುವರು. ಮತ್ತು ತಮ್ಮ ಸ್ಥಿತಿಗತಿಗಳನ್ನು ಕಾಲಕ್ಕನುಗುಣವಾಗಿ ಹೇಗೆ ಮಾರ್ಪಡಿಸಿಕೊಳ್ಳಬೇಕೆಂಬದನ್ನು ರಿತುಕೊಳ್ಳುವರು.

ಶಾರೀರಿಕ ಶಿಕ್ಷಣ.

ಪ್ರಾಥಮಿಕ ವರ್ಗದಲ್ಲಿ ಹೊಸ ಮಾದರಿಯ ವಿವಿಧ ಮನೋರಂಜನೆಯ ಆಟಗಳನ್ನು ಕ್ರಮಗೊಳಿಸಿ ವಿದ್ಯಾರ್ಥಿಗಳನ್ನು ಆಟಕ್ಕೆ ಹಚ್ಚಬೇಕು. ಅದರಿಂದ ಅವರ ಶಾರೀರಿಕ ಶಕ್ತಿ-ಬುದ್ಧಿಶಕ್ತಿ-ನೈತಿಕ ಶಕ್ತಿಗಳು ಬೆಳೆದು ಉಲ್ಲಾಸವೃತ್ತಿಯು ಹೆಚ್ಚುವದು, ಉತ್ಸಾಹವು ತುಂಬಿ ತುಳುಕುವದು. ಮುಂದೆ 'ವಿದ್ಯಾರ್ಥಿಗಳು ಮಾಧ್ಯಮಿಕ ವರ್ಗಕ್ಕೆ ಬರಲು ಅವರಿಗೆ ವಿವಿಧ ಆಸನ, ಸೂರ್ಯನಮಸ್ಕಾರ, ಸರ್ವಾಂಗ ಸುಂದರ 'ಕವಾಯಿತು'ಗಳನ್ನು ಕಲಿಸಿಕೊಡಬೇಕು. ಅಂದರೆ ಅವರ ಕಾಯವು ದೃಢವಾಗಿ ಪುಷ್ಟಿಗೊಳ್ಳುವದು, ಜ್ಞಾಪಕಶಕ್ತಿಯು ಹೆಚ್ಚುವದು. ಹಾಗೇ ಅವರು ಪ್ರೌಢಶಿಕ್ಷಣದಲ್ಲಿ ಪ್ರವೇಶಿಸಿದಾಗ ಪೋಲೀಸ ಪದ್ಧತಿಯ 'ಶಿಸ್ತಿನ ಕವಾಯಿತನ್ನು ಕಲಿಸಬೇಕು. ಅದರಿಂದ ಅವರ ಜೀವನವು ಒಳ್ಳೆ ಶಿಸ್ತು-ಕ್ರಮಬದ್ಧತೆ-ಅಚ್ಚುಕಟ್ಟುತನದಿಂದ ಕೂಡಿ ನಾಗರಿಕತೆಗೆ ಕಳೆಯನ್ನುಂಟು ಮಾಡುವದು.

ಔದ್ಯೋಗಿಕ ಹಾಗೂ ಯಾಂತ್ರಿಕ ಶಿಕ್ಷಣಾಲಯಗಳು.

ಮಾಧ್ಯಮಿಕ ಶಿಕ್ಷಣವು ಪೂರೈಸಿದನಂತರ ವಿದ್ಯಾರ್ಥಿಗೆ ಈಗಿನ ಕಾಲಕ್ಕೆ ತಕ್ಕಂತೆ ಒಂದಿಲ್ಲೊಂದು ಔದ್ಯೋಗಿಕ ಹಾಗೂ ಯಾಂತ್ರಿಕ ಕಲೆಯನ್ನು ಕಲಿಸಿ ಅವನ ಉಪಜೀವನ ಮಾರ್ಗಕ್ಕೆ ಅನುಕೂಲ ಮಾಡಿಕೊಡಬೇಕು. ಜಗತ್ತೆಲ್ಲ ಯಾಂತ್ರಿಕಮಯವಾಗುತ್ತ ನಡೆದದ್ದರಿಂದ ಒರೇ ಹಳೆಯ ಪದ್ಧತಿಯ ಮನೆಯ ಉದ್ಯೋಗಗಳನ್ನವಲಂಬಿಸಿದರೆ ಪ್ರಪಂಚ ಬೆಳೆದಿರುವ ಈಗಿನ ಕಾಲದಲ್ಲಿ ಉದರನಿರ್ವಾಹಕ್ಕೆ

ಕೊಂದರೆಯಾಗುವದು. ಆದ್ದರಿಂದ ಅಂಥ ಯಾಂತ್ರಿಕ ಉದ್ಯೋಗದ ಶಿಕ್ಷಣವನ್ನು ವಿದ್ಯಾರ್ಥಿಗೆ ಅವಶ್ಯವಾಗಿ ಕೊಡಬೇಕು. ನಮ್ಮ ದೇಶವು ಅನೇಕ ವಿಧವಾದ ಕಚ್ಚಾಮಾಲುಗಳಿಂದ ಕೂಡಿದ ನಾಡು. ಇಲ್ಲಿ ವಿವಿಧ ಕಾರ್ಯಾಲಯ ಗಿರಣಿಗಳನ್ನು ಸ್ಥಾಪಿಸಿ ಬಹು ವಿಧದ ವಸ್ತುಗಳನ್ನು ಸಿದ್ಧಗೊಳಿಸಿ ಜಗತ್ತಿನ ಪೇಟೆಗಳಿಗೆ ಕಳಿಸಿಕೊಡುವ ಸುದಿನಗಳು ಬೇಗನೆ ಬರಬಹುದು. ಪ್ರತಿಯೊಂದು ಹಳ್ಳಿಯು ಕೂಡ ಒಂದು ಸಣ್ಣ ಯಾಂತ್ರಿಕ ಉದ್ಯೋಗದ ಕೇಂದ್ರವಾಗಬಹುದು. ಆದ್ದರಿಂದ ವೀರಶೈವ ಮುಖಂಡರು ವಿವಿಧವಾದ ಯಾಂತ್ರಿಕ ಶಾಲೆಗಳು ಕರ್ನಾಟಕದಲ್ಲಿ ಸ್ಥಾಪಿಸಲ್ಪಡುವಂತೆ ಸರಕಾರಕ್ಕೆ ಒತ್ತಾಯಪಡಿಸಬೇಕು. ಯುದ್ಧಕಾಲದ ಯಾಂತ್ರಿಕ ಶಿಕ್ಷಣ ಕೇಂದ್ರಗಳು ಶಾಂತಿಕಾಲದ ಶಿಕ್ಷಣಾಲಯಗಳಾಗುವವೆಂದು ಸರಕಾರದವರು ಹೇಳಿದ್ದಾರೆ. ಅದರ ಲಾಭವನ್ನು ಕರ್ನಾಟಕದಲ್ಲಿ ಜನತೆಗೆ ಒದಗಿಸಿಕೊಡುವಂತೆ ಸರಕಾರದ ಬೆನ್ನುಹತ್ತಬೇಕು. ಉದಾಹರಣಾರ್ಥವಾಗಿ ಸಬಕಾರ, ಬಿರಡಿ, ಜಾಣಿ, ಕಾಜಿನ ಸಾಮಾನುಗಳು, ಮಳಿಗಳು, ಕಾಗದ, ಸಿಮೆಂಟ ಮುಂತಾದ ವಿವಿಧ ಕಾರ್ಯಾಲಯಗಳು ನಮ್ಮ ಕರ್ನಾಟಕದಲ್ಲಿ ನಡೆಯಬಹುದು. ಅವುಗಳಿಗೆ ತಕ್ಕ ಶಿಕ್ಷಣವು ಅವಶ್ಯವಾದುದು. ಒಂದು ಜಿಲ್ಲೆಯ ಸ್ಥಳದಲ್ಲಿ ವಿವಿಧಪ್ರಕಾರದ ಖ-ಟ ಯಾಂತ್ರಿಕ ಶಿಕ್ಷಣದ ಕೇಂದ್ರಗಳನ್ನು ಸಹಜವಾಗಿ ತೆಗೆದು ಆ ಮೂಲಕ ವಿದ್ಯಾರ್ಥಿಗಳಿಗೆ ಶಿಕ್ಷಣಕೊಡಬಹುದು. ವಿಜಾಪುರ ಜಿಲ್ಲೆಯಲ್ಲಿ ವಿಜಾಪೂರ, ಬಾಗಲಕೋಟೆ, ತಾಳಿಕೋಟೆ, ಗುಳೇದಗುಡ್ಡ, ಇಳಕಲ್ಲ ಮುಂತಾದ ವ್ಯಾಪಾರಿ ಕೇಂದ್ರಗಳಲ್ಲಿ ಒಂದೊಂದು ಔದ್ಯೋಗಿಕ ಅಥವಾ ಯಾಂತ್ರಿಕ ಶಾಲೆಯನ್ನು ಸ್ಥಾಪಿಸಿದರೆ ಎಷ್ಟೋ ವಿದ್ಯಾರ್ಥಿಗಳ ಉಪಜೀವನಕ್ಕೆ ಮಾರ್ಗಮಾಡಿಕೊಟ್ಟಂತಾಗುವದು. ಇದಕ್ಕಾಗಿ ಸಮಾಜದ ಮುಂದಾಳುಗಳು ಟೊಂಕಕಟ್ಟಿ ಹೋರಾಡಲೇಬೇಕು.

ವೀರಶೈವ ವಿಧಾನಕ್ರಮ.

ವೀರಶೈವರ ಮತಸ್ಥರು ಸಮಾಜದಲ್ಲಿ ಅನೇಕ ವಿಧಾನಗಳನ್ನು ಸೇರಪೇರಿಸುತ್ತಿದ್ದಾರೆ. ಉದಾಹರಣಾರ್ಥವಾಗಿ ನಾಮಕರಣ, ಲಿಂಗಧಾರಣ, ದೀಕ್ಷೆ, ಶುದ್ಧೀಕರಣ, ಅಭಿಷೇಕ, ವಿವಾಹವಿಧಿ, ಅಂತ್ಯವಿಧಿ ಮುಂತಾದವುಗಳಲ್ಲಿ ಒಂದೇ ಪ್ರಕಾರವು ಕಂಡುಬರುವದಿಲ್ಲ. ಸುತಿ

ಕ್ಷಿತರಾದ ಶಾಸ್ತ್ರಿಗಳಾಗಲಿ ಪಂಡಿತರಾಗಲಿ ಸಂಸ್ಕೃತದ ಆಯಾಯ ಮಂತ್ರಗಳನ್ನು ಹೇಳಬಹುದು. ಅಶಿಕ್ಷಿತರಾದ ಮಠಸ್ಥರು ಯಾವ ಮಂತ್ರವಿಲ್ಲದೆ ತಮಗೆ ತಿಳಿದ ರೀತಿಯಲ್ಲಿ ಏನೇನೋ ಹೇಳಿ ವಿಧಾನವನ್ನು ಪೂರೈಸುವರು. ಆದ್ದರಿಂದ ಈ ಎಲ್ಲ ಸಂಗತಿಗಳಲ್ಲಿ ಎಲ್ಲ ಕಡೆಗೂ ಏಕತ್ವವಿರುವದು ವಿಹಿತ. ಆ ಮಂತ್ರಗಳೆಲ್ಲ ಸಂಸ್ಕೃತವಾದ ಶುದ್ಧ ಕನ್ನಡದಲ್ಲಿಯೇ ರಚಿಸಲ್ಪಡಬೇಕು. ಲಿಂಗಪೂಜೆಯಾದರೋ ವೇದೋಕ್ತ ಅಥವಾ ಪುರಾಣೋಕ್ತವಾದ ಸಂಸ್ಕೃತ ಮಂತ್ರಗಳಿಂದ ನಡೆಯಿಸಲ್ಪಡುತ್ತಾ ಇದೆ. ಅಶಿಕ್ಷಿತರು ಯಾವ ಮಂತ್ರವನ್ನು ಅರಿಯದೆ ಮೂಕಪೂಜೆಯನ್ನು ಮಾಡುತ್ತಿರುವರು. ಆದ್ದರಿಂದ ಅಶಿಕ್ಷಿತರಿಗೂ ಸಹ ಸುಲಭವಾಗಿ ತಿಳಿಯುವಂಥ ಸುಲಭ ಕನ್ನಡ ಲಿಂಗ ಪೂಜಾ ಮಂತ್ರಗಳನ್ನು ಬಳಕೆಯಲ್ಲಿ ತರಬೇಕು. ಇದಲ್ಲದೆ ಪಂಚಾಂಗ ಮುಹೂರ್ತಮುಂತಾದ ವಿಷಯಗಳು ಜನಕ್ಕೆ ಅವಶ್ಯ ಬೇಕಾಗುತ್ತವೆ. ಅವುಗಳನ್ನು ಮಠಸ್ಥರ ಮಕ್ಕಳಿಗೆ ಕಲಿಸಿಕೊಡಬೇಕು. ಪ್ರಾಥಮಿಕ ಪರೀಕ್ಷೆಯಲ್ಲಿಯೇ ಎಲ್ಲವೂ ಮುಗಿದು ಹೋಗಬೇಕು. ಕನ್ನಡದಲ್ಲಿ ಹೇಳುವ ಮಂತ್ರಗಳಿಂದ ಜನರಿಗೆ ಸುಲಭವಾಗಿ ಅರ್ಥಬೋಧವಾಗುವದಲ್ಲದೆ, ಅವರಲ್ಲಿ ಭಕ್ತಿಭಾವನೆಯು ಬೆಳೆಯುವದು. ಅದಕ್ಕೆ ಶಿವನು ಮೆಚ್ಚುವನು. ಅರ್ಥವನ್ನರಿಯದೆ ತಪ್ಪುತಪ್ಪಾಗಿ ಹೇಳುವ ಸಂಸ್ಕೃತ ಮಂತ್ರಗಳಿಂದ ಶಿವನು ಸಂತುಷ್ಟನಾಗಲಾರನು. ಮಾತೃಭಾಷೆಯೇ ಶಿವನಿಗೆ ಪ್ರಿಯವಲ್ಲದೆ ಅನ್ಯಭಾಷೆಯಲ್ಲ. ಸಂಸ್ಕೃತ ಭಾಷೆಯ ಮಂತ್ರಗಳಿಂದಲೇ ಶಿವನು ತೃಪ್ತಿಬಡುವನೆಂಬದು ತಪ್ಪು ತಿಳುವಳಿಕೆ. ಆದ್ದರಿಂದ ಎಲ್ಲ ತರಹದ ವಿಧಾನ ಮಂತ್ರಗಳು ತಾಯ್ನುಡಿಯಲ್ಲಿಯೇ ಇರುವಂತೆ ವ್ಯವಸ್ಥೆ ಮಾಡಬೇಕು. ಅವು ಸಾಮಾನ್ಯ ಜನತೆಗೂ ಮುಟ್ಟಬೇಕು.

ವೀರಶೈವ ರಾಜಕೀಯ ಮಂಡಳ.

ಪ್ರೌಢ ಶಿಕ್ಷಣ ಹೊಂದಿದ ಬಳಿಕ ರಾಜಕೀಯ ಪ್ರವೃತ್ತಿಯುಳ್ಳವರು ವೀರಶೈವರಿಂದ ಸ್ಥಾಪಿತವಾಗುವ 'ಅಖಿಲ ವೀರಶೈವ ರಾಜಕೀಯ' ಮಂಡಳದಲ್ಲಿ ಸೇರಿ ನಮ್ಮ ಜನರಿಗೆ ನಿರುದ್ಯೋಗದ ಗಾಳಿಯು ಸೋಂಕದಂತೆ ಆಯಾಯ ಖಾತೆಗಳಲ್ಲಿ, ಕಾರ್ಯಾಲಯಗಳಲ್ಲಿ, ಬ್ಯಾಂಕುಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ, ಯಾಂತ್ರಿಕೋದ್ಯೋಗಗಳಲ್ಲಿ ಸೇರಿಸಿ ಆವರಿಗೆ

ಉಪಜೀವನದ ಮಾರ್ಗವನ್ನು ನೂಡಿಕೊಡಬೇಕು. ಕರ್ನಾಟಕದಲಿ ಬಹುಸಂಖ್ಯಾಕರಾದ ನಮಗೆ ಸಲ್ಲತಕ್ಕ ಹಕ್ಕುಬಾಧ್ಯತೆಗಳಾವು? ಸೊಬಗು ಸೌಕರ್ಯಗಳಾವು? ಎಂಬದನ್ನು ಪರ್ಯಾಲೋಚಿಸಿ ಅವುಗಳ ಬಗ್ಗೆ ಹೋರಾಡಬೇಕು. ನಮ್ಮ ಜನರ ವ್ಯಾಪಾರವು ಮಾರವಾಡಿ ಗುಜರಾತಿಗಳ ಕೈ ಸೇರಿದ್ದು ಅದು ಪುನಃ ನಮ್ಮ ಕೈಸೇರುವಂತೆ ಯಾವ ಉಪಾಯಗಳನ್ನು ಯೋಜಿಸಬೇಕೆಂಬದನ್ನು ಆಲೋಚಿಸಬೇಕು. ನಮ್ಮಲ್ಲಿ ಶ್ರೀಮಂತರು "ಶೇರಹೋಲ್ಡರರಾಗಿ" ವಿಧವಿಧದ ಕಾರ್ಯಾಲಯಗಳನ್ನು ನಡೆಯಿಸಿಕೊಂಡು ಹೋಗಲಿಕ್ಕೆ ಬೆಂಬಲ ಸಹಾಯಗಳನ್ನೊದಗಿಸಿಕೊಡಬೇಕು. ನಾವು ಸರಕಾರಕ್ಕೆ ಸಲ್ಲಿಸುವ ಕರ ತೆರಿಗೆಗಳ ಎಷ್ಟನೇ ಅಂಶವನ್ನು ನಮ್ಮ ಜನದ ಹಿತಕ್ಕಾಗಿ ಪ್ರತಿಫಲರೂಪದಿಂದ ಕೇಳಬಹುದೆಂಬದನ್ನು ವಿಚಾರಿಸಿ ಹಾಗೆ ಆ ಹಣವನ್ನು ಪಡೆದುಕೊಂಡು ಸಮಾಜ ಹಿತದ ಕೆಲಸಗಳಲ್ಲಿ ಅದನ್ನು ವಿನಿಯೋಗಿಸಿಕೊಳ್ಳಬೇಕು. ವೀರಶೈವರ ಒಂದೊಂದು ಮೆಡಿಕಲ್ ಟೆಕ್ನಿಕಲ್, ಮತ್ತು ಕಾಮರ್ಶಿಯಲ್ ಶಾಲೆಯು ಕನಿಷ್ಟಪಕ್ಷಕ್ಕೆ ಜಿಲ್ಲೆಗೊಂದಾದರೂ ಸದ್ಯಕ್ಕೆ ಸ್ಥಾಪಿತವಾಗುವಂತೆ ಈ ಮಂಡಳದವರು ಹೆಣಗಾಡಬೇಕು. ಮುನಸಿಪಾಲಿಟಿ, ಲೋಕಲ್‌ಬೋರ್ಡ ಕಾಯಿದೆಕೌನ್ಸಿಲ್, ಅಸೆಂಬ್ಲಿಗಳಿಗೆ ಯೋಗ್ಯರಾದ ನಮ್ಮ ಹುರಿಯಾಳುಗಳನ್ನು ಆರಿಸಿ ಕಳಿಸಿಕೊಡಲಿಕ್ಕೆ ಪ್ರಯತ್ನಿಸಬೇಕು. ಕರ್ನಾಟಕ ಏಕೀಕರಣವಾದರೆ ಈ ಎಲ್ಲ ಸೌಕರ್ಯಗಳು ಸುಲಭವಾಗಿ ಪ್ರಾಪ್ತಿಸುವದರಿಂದ ನಮ್ಮ ರಾಜಕೀಯ ಮಂಡಳದವರು ಮೊದಲು ಅತ್ತಕಡೆಗೆ ಹೆಚ್ಚಾಗಿ ಗಮನಿಸಬೇಕು. ಈ ಮಂಡಳದಲ್ಲಿ ಎಲ್ಲ ಜಿಲ್ಲೆಗಳ ವತಿಯಿಂದ ೫೦ ಜನ ಸಭಾಸದರಿರುವದು ವಿಹಿತ. ಒಟ್ಟಿನಮೇಲೆ ಅವರು ನಮ್ಮ ಅಡಚಣಿಗಳನ್ನು ದೂರಮಾಡಿ ಸೌಕರ್ಯಗಳನ್ನು ಒದಗಿಸಿಕೊಡುವಂತೆ ಪ್ರಯತ್ನಿಸಬೇಕು.

ವಿದ್ಯಾಪೀಠದ ಶಾಖೆಗಳು.

ಮಧ್ಯವರ್ತಿ ವಿದ್ಯಾಪೀಠವು ಕೇಂದ್ರಸ್ಥಾನದಲ್ಲಿ ಸ್ಥಾಪನೆಯಾದ ಬಳಿಕ ಜಿಲ್ಲೆಗೊಂದೊಂದರಂತೆ ಅದರ ಶಾಖೆಗಳು ಇರತಕ್ಕದ್ದು. ವಿದ್ಯಾಪೀಠಕ್ಕೆ ಮುಖ್ಯಾಧಿಪತಿ (*Chancellor*) ಮತ್ತು ಕಾರ್ಯಾಧಿಪತಿ (*Registrar*) ಎಂಬ ಅಧಿಕಾರಿಗಳಿರಬೇಕು. ಇವರು ತಮ್ಮ ಕಚೇ

ರಿಗೆ ಬೇಕಾಗುವ ಕೆಲಸಗಾರರನ್ನು ನೇಮಿಸಿಕೊಂಡು ಕಾರ್ಯನಡೆಯಿಸಬೇಕು. ಇವರಿಗೆ ಸಲಹೆಕೊಡಲಿಕ್ಕೆ ಪ್ರತಿವರ್ಷ ಸಾಮಾನ್ಯ ಸಭೆಯಲ್ಲಿ ಆರಿಸಿಕೊಡುವ ೫ ಜನರ ಸಲ್ಲಾಗಾರ ಕಮೀಟಿ ಇಂತಕ್ಕದ್ದು. ಈ ಕಮೀಟಿಯವರು ವರ್ಷಕ್ಕೆ ೩ ಸಲ ಕೂಡಬೇಕು. ಈ ವಿದ್ಯಾಪೀಠದವರು ಪರೀಕ್ಷಾ ಫೀ, ಸರಕಾರಿಗ್ರ್ಯಾಂಟು, ಸಾರ್ವಜನಿಕ ಫಂಡು, ಸ್ವಾಮಿಗಳಿಂದ ಬಂದ ದಾನ, ಇವೆಲ್ಲ ರೀತಿಯಿಂದ ಉತ್ಪನ್ನದ ಬಾಬುಗಳನ್ನು ಹೆಚ್ಚಿಸಿಕೊಳ್ಳಬೇಕು. ಈ ಹಣದ ವಿನಿಯೋಗವನ್ನು ಅವರು ಪ್ರತಿವರ್ಷ ಅಂದಾಜು ಪತ್ರಿಕೆಯನ್ನು ಸಿದ್ಧಗೊಳಿಸಿ ಅಪ್ರಕಾರ ಆಯಾಯ ಜಿಲ್ಲೆಗಳಲ್ಲಿ ಸ್ಥಾಪಿತವಾಗುವ ಶಾಖಾ ವಿದ್ಯಾಪೀಠಗಳಿಗೆ ಹಂಚುತ್ತ ಹೋಗಬೇಕು. ಈ ಶಾಖಾ ವಿದ್ಯಾಪೀಠದವರು ಹಳ್ಳಿ, ತಾಲೂಕ, ಜಿಲ್ಲಾ ಸ್ಥಳಗಳ ವಿದ್ಯಾಸಂಸ್ಥೆಗಳಿಗೆ ಬೇಕಾಗುವ ಧನಸಹಾಯ, ಸೇಮಣಾಕು, ವರ್ನಾವರ್ಗಿ, ಪರೀಕ್ಷಾ ಯೋಜನೆ ಮುಂತಾದ್ದನ್ನು ಮಾಡಿಕೊಳ್ಳಬೇಕು.

ವಿದ್ಯಾಪೀಠದವರು ಪ್ರಾಥಪರೀಕ್ಷೆಯ ಹೊಣೆಗಾರಿಕೆಯನ್ನು ವಹಿಸಿಕೊಂಡರೆ ಜಿಲ್ಲಾ ವಿದ್ಯಾಪೀಠದವರು ಪ್ರಾಥಮಿಕ ಪರೀಕ್ಷೆಗಳ ಹೊಣೆಯನ್ನು ಹೊರಬೇಕು. ಶಾಖಾ ವಿದ್ಯಾಪೀಠಗಳಿಗೆ ಉಪಾಧಿಪತಿ (*Vice-Chancellor*) ಮತ್ತು ಉಪಕಾರ್ಯಾಧಿಪತಿ (*Sub-Ragistrar*) ಎಂಬ ಅಧಿಕಾರಿಗಳಿರಬೇಕು. ಅವರು ತಮಗೆ ಬೇಕಾಗುವ ನೌಕರರನ್ನು ತಾವೇ ನೇಮಿಸಿಕೊಳ್ಳಬೇಕು. ಅವರು ಪ್ರತಿಯೊಂದು ತಾಲೂಕಿನಿಂದ ಆರಿಸಲ್ಪಡುವ ೫ ಜನ ಸಲ್ಲಾಗಾರ ಕಮೀಟಿಯ ಸಹಾಯದಿಂದ ಕಾರ್ಯಗಳನ್ನು ನಿರ್ವಹಿಸಬೇಕು.

ಅಖಿಲ ವೀರಶೈವ ಮಹಾಸಭೆಯ ಅಧಿವೇಶನ.

ಸಮಾಜದವರು ಮೊದಲು ಲಕ್ಷಿಸತಕ್ಕ ಮುಖ್ಯ ವಿಷಯವೆಂದರೆ ಅಖಿಲ ವೀರಶೈವ ಮಹಾಸಭೆಯನ್ನು ಬೇಗನೆ ಕರೆದು ಅಖಿಲ ವೀರಶೈವ ಪಾಠಶಾಲೆಗಳ ಏಕೀಕರಣ—ಕೇಂದ್ರೀಕರಣ—ವಿದ್ಯಾಪೀಠದ ಯೋಜನೆ ಇತ್ಯಾದಿ ವಿಷಯಗಳ ಬಗ್ಗೆ ಮುಂಜೂರಿಯನ್ನು ಪಡೆಯಬೇಕು. ಈಗ ನಮ್ಮ ಸಮಾಜದಲ್ಲಿ ಅನೇಕ ಶಾಸ್ತ್ರಿಗಳು—ಪದವೀಧರು—ವಕೀಲರು—ಪಂಡಿತರು ವೀರಶೈವ ಮತ ತತ್ವಗಳ ಅಭ್ಯಾಸ, ಸಾಹಿತ್ಯಸೇವೆ, ಇತಿಹಾಸ ಸಂಶೋಧನೆ ಮುಂತಾದ ಸ್ತುತ್ಯ ಕಾರ್ಯವನ್ನು ಮಾಡಿರುವದರಿಂದ ಅಂಥವರ ಯಾದಿಯನ್ನು ಮುಂಚಿತವಾಗಿ ಪ್ರಕಟನಾ ರೂಪದಿಂದ ಸಿದ್ಧಗೊಳಿಸಿ ಮಹಾಸಭೆಯಲ್ಲಿ ಅಂಥವರಿಗೆ "ವೀರಶೈವ ಪ್ರಕಾಶಕ" ಎಂಬ ಕೊನೆಯ ಪದವಿಯನ್ನು ಕೊಟ್ಟು ಪ್ರಮಾಣ ಪತ್ರವನ್ನು (*Certificate*) ಸಮರ್ಪಿಸಬೇಕು. ಆ ಸರ್ಟಿಫಿಕೇಟುಗಳನ್ನು ಮಹಾಸಭೆಯ ಅಧ್ಯಕ್ಷರ ಸಹಿಯಿಂದ ಹಂಚಬೇಕು. ಮುಂದೆ ಈ ಪದವಿಗಳನ್ನು ಪಡೆದವರಿಗೆ ವಿದ್ಯಾಪೀಠದ ಸದಸ್ಯತ್ವದ ಚುನಾವಣೆಗೆ ನಿಲ್ಲುವ ಅಧಿಕಾರವುಂಟಾಗುವದು. ಎಲ್ಲ ಪಾಠಶಾಲೆಗಳ ಕರ್ತೃತ್ವ ಭಾರವೆಲ್ಲ ವಿದ್ಯಾಪೀಠವನ್ನವಲಂಬಿಸಿದ್ದರಿಂದ ಅದರ ನಿರ್ಮಾಣಕ್ಕೆ ನೊದಲು ಸದಸ್ಯರ ಅರ್ಹತೆಯನ್ನು ತೃಪ್ತಿಗೊಳಿಸುವದು ಯುಕ್ತವಾಗಿದೆ.

ಈ ನನ್ನ ವಿಚಾರವು ಸಮಾಜದ ಮನಸ್ಸಿಗೆ ಬರಲಿ ಅಥವಾ ಬಿಡಲಿ ಆ ಮಾತು ಬೇರೆ. ಯಾವದು ನನಗೆ ಯುಕ್ತವೆನಿಸುತ್ತದೆಯೋ ಹಾಗೆ ಸಮಾಜದ ಮುಂದಿರಿಸುವದು ಯೋಗ್ಯವೆಂದು ನನಗೆ ಅನಿಸಿದ್ದರಿಂದ ಈ ಸಾಹಸಕ್ಕೆ ಕೈನೀಡಿದ್ದೇನೆ. ಸುಜ್ಞರು ಈ ವಿಷಯವನ್ನು ತುಂಬಾ ಲಕ್ಷಿಸುವರೆಂದು ಆಶಿಸುತ್ತೇನೆ.

ಕನಕ ಪಕ್ಷಿ?

(ಶ್ರೀ. ಜಗದ್ಗುರು ಜನ್ನ ಬಸವರಾಜೇಂದ್ರ ಮಹಾಸ್ವಾಮಿಗಳು,
ನಿಡುವಾಮಿಡಿ ಮಠ ಪೊ. ಗುಳೂರು.)

ಕನಕ ಪಕ್ಷಿ
ಕಣ್ಣಮುಂದೆ ಹಾರಿಹೋಯ್ತು
ಮನವೆ ಸಾಕ್ಷಿ
ಬಣ್ಣವೊಂದು ತಿಳಿಯದಾಯ್ತು

ಹೊನ್ನ ಹಕ್ಕಿ
ಕಣ್ಣಿನಂಚಿನಲ್ಲಿ ತನ್ನ
ಗೂಡನಿಕ್ಕಿ
ಚಿನ್ನ ಬದುಕು ಗಳಿಸಿ ಮುನ್ನ—ಕನಕಪಕ್ಷಿ

ಅಂದಿನಿಂದ
ಕರಣ ಶಾಪೆಗಳಲಿ ಸುಳಿದು
ಅಂದದಿಂದ
ಹರಣವಾಂತು ಮನವ ನೆಳೆದು—ಕನಕಪಕ್ಷಿ

ರೂಪು ರುಚಿಯು
ಶಬ್ದಸ್ಪರ್ಶ ಗಂಧವೂಡಿ
ಪಾಪ ಝರಿಯು
ತುಂಬಿ ತುಳುಕಿ ಸಿಡಿದು ನೋಡಿ—ಕನಕಪಕ್ಷಿ

ಮೋಹ ಗಳಿಸಿ
ಕರ್ಮ ಜಾಲನೆಸಗ ಹಚ್ಚಿ
ದಾಹಗೊಳಿಸಿ
ಧರ್ಮ ಕಾರ್ಯಗಳನು ಮುಚ್ಚಿ—ಕನಕಪಕ್ಷಿ

ಹೊನ್ನ ಹಕ್ಕಿ
ಹೊನ್ನ ಶೂಲದಂತೆ
ಬಣ್ಣವುಕ್ಕಿ
ಬಣ್ಣಗೆಟ್ಟ ರುಚಿಯ ಕಕ್ಕಿ—ಕನಕಪಕ್ಷಿ

ಮರಳು ಮನವು
ಬಯಲ ನಂಬಿ ಬರಿಯ ತುಂಬಿ
ಕರುಳು ಕೊರೆದು
ಪ್ರಯವಿಳಿದಿರೆ ಸುತ್ತಿ ಸಿಂಬಿ—ಕನಕಪಕ್ಷಿ

ನೂರು ವರುಷ
ಇರುವೆನೆಂದು ಗುಡಿಯ ಕಟ್ಟಿ
ತೋರಿ ನಿಮಿಷ
ತೊರೆದುದೇನು ಗಡಿಯ ಮೆಟ್ಟಿ—ಕನಕಪಕ್ಷಿ

ಜನ್ನ ಬಸವ
ತನ್ನ ಅಸುವ ಎಂದು ಮೂಡಿ
ಜನ್ನ ಜಸವ
ತನ್ನತನವ ಗಳಿಸದೋಡಿ—ಕನಕಪಕ್ಷಿ

ಸ್ಫುಟ ವಿಷಯಗಳು.

ಸ್ಥಾವರ ಲಿಂಗಗಳು:—ಶಿವಶರಣರ ಚರಿತ್ರೆಗಳನ್ನು ನಿರೀಕ್ಷಿಸಿದಲ್ಲಿ ಸ್ಥಾವರಲಿಂಗ ಮತ್ತು ಜಂಗಮಲಿಂಗ, ಇಷ್ಟಲಿಂಗ ಮತ್ತು ಪ್ರಾಣಲಿಂಗ ಇವುಗಳಲ್ಲಿರುವ ಸಂಬಂಧವಾವುದು, ಇಷ್ಟಲಿಂಗಧಾರಿಯು ಸ್ಥಾವರಲಿಂಗಗಳನ್ನು ಪೂಜಿಸಬಹುದೋ ಹೇಗೆ, ಸ್ಥಾವರಲಿಂಗ ಪೂಜೆಯು ಶಿವಶರಣರಿಗೆ ಮಾನ್ಯವೋ ಹೇಗೆ, ಮಾನ್ಯವಾಗಿದ್ದರೆ ಅದು ಎಷ್ಟರ ಮಟ್ಟಿಗೆ ಇವೇ ಮೊದಲಾದ ವಿಷಯಗಳು ನಮ್ಮ ವಿಚಾರಕ್ಕೆ ಬರುವವು. ಇವು ಅನೇಕರಿಗೆ ಮತಭೇದದ ಪ್ರಶ್ನೆಗಳಾಗಿಯೂ ತೋರಬಹುದು. ಈ ವಿಷಯಗಳನ್ನು ಪರಿಶೀಲಿಸುವದು ಅವಶ್ಯಕವಾಗಿರುತ್ತದೆ.

ಶಿವಾನುಭವದ ತತ್ವಗಳನ್ನು ಪರಿಶೀಲಿಸಿದಲ್ಲಿ ಶಿವಶರಣರ ವಿಚಾರಗಳಲ್ಲಿ ಮತಭೇದಗಳಿರುವದು ಬಹುಶಃ ಎಲ್ಲಿಯೂ ತೋರಿಬರುವದಿಲ್ಲ. ಮೇಲೆ ಕಾಣಿಸಿದ ವಿಷಯದಲ್ಲಿಯೂ ಅವರಲ್ಲಿ ಭಿನ್ನತೆಯು ಇದ್ದದ್ದು ಕಂಡುಬರುವದಿಲ್ಲ.

ವೀರಶೈವನು ಕ್ರಮಯುಕ್ತವಾಗಿ ಲಿಂಗಧಾರಣೆಯನ್ನು ಹೊಂದಿದ ಬಳಿಕ ಅವನು ೩, ೬, ೧೮, ೩೬, ಮತ್ತು ೨೧೬ ಈ ಸ್ಥಲಗಳಂತೆಯೂ ನೂರೊಂದು ಸ್ಥಳಗಳಂತೆಯೂ ಆಚರಿಸುತ್ತ ಲಿಂಗಾಂಗ ಸಾಮರಸ್ಯವನ್ನು ಹೊಂದಬೇಕು. ಇದನ್ನು ಅವನು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳಿಗೆ ಸಂಬಂಧಪಟ್ಟ ಆಚಾರಗಳಂತೆ ನಡೆಯುತ್ತ ಹೊಂದತಕ್ಕದ್ದು. ಅವನು ಹಾಗೆ ಆಚರಿಸಿದ್ದಾದರೆ, ಅವನು ತಪ್ಪು ದಾರಿಯನ್ನು ಹಿಡಿಯಲಾರನು. ಈ ವಿಷಯದಲ್ಲಿ ವೀರಶೈವ ವಾಙ್ಮಯದಲ್ಲಿಯೂ ಶಿವಶರಣರ ನಡೆಯಲ್ಲಿಯೂ ಭಿನ್ನಾಭಿಪ್ರಾಯಗಳಿರುವದಿಲ್ಲ.

ಲಿಂಗಧಾರಿಯಾದವನು ಲಿಂಗದ ನೆಲೆಕಲೆಗಳನ್ನು ಅರಿಯಬೇಕು, ಅವುಗಳ ಸಕೀಲಗಳನ್ನು ಅವನು ಅರಿತುಕೊಂಡು ಅವುಗಳನ್ನು ತನ್ನಲ್ಲಿ ಸ್ಥಾಪ್ಯಮಾಡಿಕೊಳ್ಳಬೇಕು, ಹೀಗೆ ಅವನು ಆಚರಿಸುತ್ತ ಲಿಂಗಾಂಗ ಸಾಮರಸ್ಯವನ್ನು ಹೊಂದಬೇಕು. ಇದು ಶಿವಾನುಭವದ ನಡೆಯಾಗಿದೆ. ಬಹುಜನ ಶಿವಶರಣರು ವಚನಕಾರರಿದ್ದು, ಅವರೆಲ್ಲರು ಈ ತತ್ವವನ್ನು ಅಂಗೀಕರಿಸಿ ಅದರಂತೆ ನಡೆದು ನಿರವಯ ಸ್ಥಿತಿಯನ್ನು ಹೊಂದಿರುತ್ತಾರೆ. ಹೀಗಿದ್ದರೂ ಅವರು ಸ್ಥಾವರಕ್ಕೆ ಸಂಬಂಧಿಸಿಕೊಂಡು ಆಚರಿಸಿದ್ದು ಕಂಡುಬರುತ್ತದೆ. ಸ್ಥಾವರಲಿಂಗಗಳನ್ನು ಆದರಿಸುವದರಿಂದ

ತಮ್ಮ ತ್ರಿಲಿಂಗದ ಆಚರಣೆಗೆ ಬಾಧಕವಲ್ಲೆಂದು ಅವರು ಭಾವಿಸಿದ ಹಾಗೆ ತೋರುತ್ತದೆ.

ಅನೇಕ ಶಿವಶರಣರು ಶಿವಾನುಭವ ಮಾರ್ಗದಂತೆ ನಡೆಯುತ್ತಿರುವಾಗ ಅವರಲ್ಲಿ ಒಂದು ಅಲೌಕಿಕ ಶಕ್ತಿಯು ಉದ್ಭವಿಸಿದ್ದು ಅವರ ಚಂತ್ರೆಗಳಿಂದ ಕಂಡುಬರುತ್ತದೆ. ಈ ಶಕ್ತಿಯ ಮೂಲಕ ಅವರು ನೋಡಿದಲ್ಲಿ, ಹಿಡಿದಲ್ಲಿ, ಮುಟ್ಟಿದಲ್ಲಿ, ಮತ್ತು ಭಾವಿಸಿದಲ್ಲಿ ಪರಶಿವನು ಲಿಂಗರೂಪಾಗಿ ಪ್ರಕಟವಾದದ್ದರ ಉಲ್ಲೇಖಗಳು ಬರುತ್ತವೆ. ಶಿವಾನುಭವದ ಆಚರಣೆಯು ಪೂರ್ಣವಾದಾಗ ಇದು ಅಸಂಭಾವ್ಯವಲ್ಲ. ಹೀಗೆ ಲಿಂಗವು ಅವರಿಂದ ಪ್ರಕಟವಾದ ಸ್ಥಳಗಳಲ್ಲಿ ಭಾವಿಕರು ಅವುಗಳ ಗುರುತಿಗಾಗಿ ಸ್ಥಾವರಲಿಂಗಗಳನ್ನು ಸ್ಥಾಪಿಸಿದ್ದೂ ಮುಂದೆ ಅವುಗಳಿಗೆ ದೇವಾಲಯಗಳನ್ನು ಕಟ್ಟಿಸಿದ್ದೂ ಅವುಗಳಿಗೆ ಬಹುಜನರು ಮನ್ನಣೆಯನ್ನು ಕೊಡಹತ್ತಿದ್ದೂ ತೋರಿಬರುತ್ತದೆ. ಆದರೆ ಯಾವ ವರೆಗೆ ಭಕ್ತನು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳ ಮರ್ಮವನ್ನು ಅರಿತುಕೊಂಡು ಆಚರಿಸುತ್ತಾನೋ ಆ ವರೆಗೆ ಹಿಂದಿನ ಮಹಾತ್ಮರು ಮಾಡಿದ ಕಾರ್ಯಗಳ ನೆನಪಿಗೋಸ್ಕರ ಉಂಟಾದ ಇಂಥ ದೇವಾಲಯಗಳನ್ನು ಅಥವಾ ಸ್ಥಾವರಗಳನ್ನು ಆದರದಿಂದ ಕಾಣುವದು ಲಿಂಗಾಚಾರಕ್ಕೆ ವಿರೋಧವಾದುದೆಂದು ಹೇಳಲು ಬರಲಾರದು. ಆದರೆ ಒಂದುವೇಳೆ ಷಟ್‌ಸ್ಥಲಾಚರಣೆಯನ್ನು ಪೂರ್ಣವಾಗಿ ಬಿಟ್ಟುಕೊಟ್ಟು ಅಥವಾ ತಿರಸ್ಕರಿಸಿ ಇಂಥ ಬಾಹ್ಯ ಆಚರಣೆಗಳಿಗೆ ಮನಗೊಟ್ಟರೆ ಅದುಮಾತ್ರ ಲಿಂಗಧಾರಿಗೆ ದೋಷಾಸ್ಪದವಾಗಬಹುದು. ಶಿವಶರಣರ ಚರಿತ್ರೆಗಳನ್ನು ನೋಡಿದಲ್ಲಿ ಅವರು ಲಿಂಗಾಂಗಸಾಮರಸ್ಯದ ಮಾರ್ಗವನ್ನು ತೊರೆದು ಕೇವಲ ಸ್ಥಾವರ ಲಿಂಗಗಳ ಆರಾಧನೆಗೆ ತೊಡಕಿಕೊಂಡಿದ್ದು ಕಂಡುಬರುವದಿಲ್ಲ. ಅವರು ತಮ್ಮ ಲಿಂಗಾನುಭವದಿಂದ ಲಿಂಗಶಕ್ತಿಯನ್ನು ಬೆಳಿಸಿಕೊಂಡು ಎಲ್ಲವನ್ನೂ ಲಿಂಗವಾಗಿ ಕಾಣುತ್ತಾರೆ. ಆದ್ದರಿಂದ ಅವರು ಬಾಹ್ಯಲಿಂಗವನ್ನು ಕೆಲವೊಂದು ಕಾರಣದ ಸಲುವಾಗಿ ಆದರಿಸಿದ ಮಾತ್ರಕ್ಕೆ ಅವರ ತ್ರಿಲಿಂಗದ ಆಚರಣೆಯಲ್ಲಿ ಚ್ಯುತಿಯುಂಟಾಯಿತೆಂದು ಹೇಳಲಿಕ್ಕೆ ಬರಲಾರದು.

ಕರ್ನಾಟಕದೇಶದಲ್ಲಿ ಅಸಂಖ್ಯ ಶಿವಾಲಯಗಳಿದ್ದು ಅವುಗಳಲ್ಲಿ ಬಹುಜನ ಪೂಜಕರು ವೀರಶೈವರಿದ್ದುದು ಕಂಡುಬರುತ್ತದೆ. ಅವರ

ಇಂಥ ಸ್ಥಾನಗಳಿಗೆ ಯಾವ ಕಾಲದಲ್ಲೂ ಯಾರೂ ಭಂಗತಂದಂತೆ ಕಂಡು ಬರುವದಿಲ್ಲ. ಒಂದು ವೇಳೆ ಹೀಗೆ ಅರ್ಜಿಸುವದು ಶಿವಾನುಭವಕ್ಕೆ ಹೊರತಾಗಿದ್ದರೆ ಅವರು ಹೀಗೆ ಶಿವಾಲಯಗಳಲ್ಲಿ ಉಳಿಯುತ್ತಿದ್ದಿಲ್ಲ. ವಚನಕಾರರು ಶಿವಾಲಯಗಳನ್ನು ತ್ಯಜಿಸಿದ್ದು ಅವರ ಚರಿತ್ರೆಗಳಿಂದ ಕಂಡು ಬರುವದಿಲ್ಲ. ಇಷ್ಟೆಅಲ್ಲ, ವಚನಗಳ ಮುದ್ರಿಕೆಗಳು ಇಂಥ ಶಿವಾಲಯಗಳನ್ನು ನಿರ್ದೇಶಿಸುತ್ತವೆ. ಆದರೆ ಇಷ್ಟರಿಂದ ಅವರು ತ್ರಿಲಿಂಗಗಳಿಗೆ ಹೊರತಾಗಿ ಅರ್ಚಿಸಿದರೆಂದು ಹೇಳಲಿಕ್ಕೆ ಬರಲಾರದು.

ಕೆಲವು ವಚನಗಳಲ್ಲಿ ಸ್ಥಾವರಲಿಂಗಗಳನ್ನು ವಚನಕಾರರು ಟೀಕಿಸಿದ್ದು ಕಂಡುಬರುತ್ತದೆ. ತ್ರಿಲಿಂಗಗಳನ್ನು ಬಿಟ್ಟು ಹೀಗೆ ಅರ್ಚಿಸುವದು ಸರಿಯಾದ ಮಾರ್ಗವಲ್ಲೆಂದು ಅವರ ಅಭಿಪ್ರಾಯವೆಂದು ತೋರುತ್ತದೆ. ವಚನಕಾರರು ಕೆಲವೊಂದು ವಿಷಯವನ್ನು ಪ್ರತಿಪಾದನೆ ಮಾಡುವಲ್ಲಿ ತಮ್ಮ ವಿಚಾರಗಳನ್ನು ಸ್ಪಷ್ಟಪಡಿಸುವದಕ್ಕೋಸ್ಕರ ಒಮ್ಮೊಮ್ಮೆ ಕಠೋರವಾದ ಭಾಷೆಯನ್ನು ಉಪಯೋಗಿಸುವದುಂಟು. ಆದರೆ ಯಾವ ಸಂದರ್ಭದಲ್ಲಿ ಅವರು ಹೀಗೆ ನುಡಿಯುತ್ತಾರೋ ಆದನ್ನು ನಾವು ಲಕ್ಷಿಸತಕ್ಕದ್ದು. ಅವರು ಅರವತ್ತು ನಾಲ್ಕು ಶೀಲಗಳನ್ನೂ ಕರ್ಮಠತನವನ್ನೂ ಜಂಗಮರನ್ನೂ ಬಹು ತೀಕ್ಷ್ಣವಾದ ಶಬ್ದಗಳಿಂದ ಅಗಿಂದಾಗ್ಗೆ ಜರಿಯುವದುಂಟು. ಆದರೆ ಶಿವಾನುಭವದ ತತ್ವಗಳನ್ನು ಲಕ್ಷಿಸಿ ಇಂಥ ಜರಿಯುವಿಕೆಗೆ ಯಾವ ಸ್ಥಾನವನ್ನು ಕೊಡತಕ್ಕದ್ದೋ ಅಷ್ಟರಮಟ್ಟಿಗೆ ಅದಕ್ಕೆ ಮಹತ್ವಕೊಡುವದು ಯುಕ್ತವೆಂದು ತೋರುತ್ತದೆ.

ಶಿವಾನುಭವ ಸಂಘಗಳು:—ಶಿವಶರಣರು ರಚಿಸಿರುವ ವಚನ ವಾಙ್ಮಯವು ಎಷ್ಟು ಘನತರವಾದುದೆಂಬದನ್ನು ಈಗ ಎಲ್ಲರ ತಿಳುವಳಿಕೆಗೆ ಬಂದಿರುತ್ತದೆ. ಅದರ ಪರಶೀಲನೆಯೂ ಕೂಡ ಕೆಲಮಟ್ಟಿಗೆ ಎಲ್ಲ ಕಡೆಗೂ ನಡೆದಿರುತ್ತದೆ. ಆದರೆ ಈ ಕಾರ್ಯವು ಇನ್ನೂ ವೈಯ್ಯಕ್ತಿಕವಾಗಿ ಸಾಗಿರುತ್ತದೆಯೇ ಹೊರ್ತು ವ್ಯಾಪಕವಾಗಿ ಸಾಗಿರುವದಿಲ್ಲ. ಇದು ಉಂಟಾಗಬೇಕಾದರೆ ಸಣ್ಣ ದೊಡ್ಡ ಗ್ರಾಮಗಳಲ್ಲೆಲ್ಲ ಶಿವಾನುಭವ ಸಂಘಗಳ ಏರ್ಪಾಡು ಆಗುವದು ಬಹು ಅವಶ್ಯವು. ಇಂಥ ಸಂಘಗಳು ಬೇರೆ ಬೇರೆ ಜಿಲ್ಹೆಗಳಲ್ಲಿ ಸ್ಥಾಪಿತವಾಗಿರುತ್ತದೆ. ಆದರೆ ಅವುಗಳ ಸಂಖ್ಯೆಯು ಅತ್ಯಲ್ಪವಾಗಿರುತ್ತದೆ. ಜಿಲ್ಲೆಯಲ್ಲೆಲ್ಲ ಕೂಡಿ ಹತ್ತೆಂಟು ಸಂಘಗಳು ಸಹ ಇರುವದಿಲ್ಲ. ಮತ್ತು ಇದ್ದವುಗಳು ಕೂಡ ಸುವ್ಯವಸ್ಥೆ

ಯಿಂದ ಕಾರ್ಯ ಮಾಡುವದಿಲ್ಲ. ಇಂಥ ಸಂಸ್ಥೆಗಳಲ್ಲಿ ಹಲಕೆಲವರು ಶ್ರದ್ಧೆಯಿಂದ ಕಾರ್ಯ ಮಾಡುತ್ತಿರುವದೇನೋ ನಿಜವು. ಆದರೆ ಗ್ರಾಮಗಳಲ್ಲಿ ಬಹುಜನರ ಉಪೇಕ್ಷಾಭಾವ, ಯೋಗ್ಯ ವಾಚನ ಪುಸ್ತಕಗಳ ಕೊರತೆ, ನಿಶ್ಚಿತ ಕಾರ್ಯ ಘೋರಣದ ಅಭಾವ, ಇವುಗಳ ಮೂಲಕ ಅನೇಕ ತೊಂದರೆಗಳು ಉಂಟಾಗಿರುವದು ಕಂಡು ಬರುತ್ತದೆ. ಆದರೆ ಬಹು ಜನರು ಈ ಕಾರ್ಯವನ್ನು ಸುಸಂಘಟಿತ ರೀತಿಯಿಂದ ಎಡೆಬಿಡದೆ ಮಾಡುವದನ್ನು ಬಿಟ್ಟು ದೊಡ್ಡ ಪರಿಷತ್ತುಗಳನ್ನು ಮಾತ್ರ ಏರ್ಪಡಿಸಿ ನಿಶ್ಚಿತ ವಕ್ತೃಗಳನ್ನು ಬರಮಾಡಿಕೊಂಡು ಅವರ ಭಾಷಣಗಳನ್ನು ಮಾಡಿಸುವದೂ ಆ ಕಾಲದಲ್ಲಿ ಗಾಯನ ನಾಟಕ ಇಂಥ ಮನೋರಂಜನೆಯ ಕಾರ್ಯಗಳನ್ನು ಏರ್ಪಡಿಸುವದೂ ಉಂಟು. ಈ ಬಗೆಯ ಕಾರ್ಯಕ್ರಮಗಳನ್ನು ಇಟ್ಟ ಪರಿಷತ್ತುಗಳನ್ನು ಮಾಡಿದರೆ ಅವುಗಳ ಪರಿಣಾಮಗಳು ಕ್ಷಣಿಕವಾಗುತ್ತವೆ. ಹಾಗೆ ಪ್ರಯತ್ನಿಸುವದಕ್ಕಿಂತ ಶಿವಾನುಭವದ ಕೆಲವೊಂದು ಗ್ರಂಥವನ್ನು ತೆಗೆದುಕೊಂಡು ಆಸಕ್ತಿಯುಳ್ಳವರು ಅದನ್ನು ಚನ್ನಾಗಿ ಓದಿ ಅದರಲ್ಲಿಯ ತತ್ವಗಳನ್ನು ಪರಿಶೀಲನೆ ಮಾಡುವದೂ ಹೀಗೆ ಪರಿಶೀಲನೆ ಮಾಡಿ ಅವುಗಳನ್ನು ಗ್ರಾಮದಲ್ಲಿಯ ಜನರಿಗೆ ತಿಳಿಸಿ ಹೇಳುವದೂ ಈ ಬಗೆಯ ಪ್ರಯತ್ನಗಳು ಇಡೀ ವರ್ಷ ಸಾಗಬೇಕು. ಅಲ್ಲದೆ ವಚನಶಾಸ್ತ್ರದಲ್ಲಿ ಬಿಕ್ಕಟ್ಟಿನ ವಿಷಯಗಳು ಅನೇಕ ಇರುತ್ತವೆ. ಅವುಗಳ ಬಗ್ಗೆ ಚರ್ಚೆಗಳು ಯಾವಾಗಲೂ ನಡೆಯಬೇಕು. ಈ ತರದ ಪ್ರಯತ್ನಗಳಿಂದ ಸಮಾಜದಲ್ಲಿ ಉಚ್ಚ ವಾತಾವರಣವು ಉಂಟಾಗುತ್ತದೆ ಹೀಗೆ ಮಾಡುವದೇ ಸಮಾಜದ ಪ್ರಗತಿಯ ದ್ಯೋತಕವಾಗಿದೆ.

ವೀರಶೈವ ಸಮಾಜದಲ್ಲಿ ಈ ವರೆಗೆ ಶಿವಾನುಭವ ಸಂಘಗಳು ಎಲ್ಲೆಲ್ಲಿ ಸ್ಥಾಪಿತವಾಗಿರುತ್ತವೆ ಮತ್ತು ಅವು ಹೇಗೆ ನಡಿದಿವೆ ಎಂಬುದನ್ನು ತಿಳಿಯುವದು ಬಹು ಅವಶ್ಯವಿದೆ. ಆದ್ದರಿಂದ ಅವುಗಳ ಚಾಲಕರು ಅವು ತಮ್ಮಲ್ಲಿ ಸ್ಥಾಪಿತವಾದ ತಾರೀಖು, ಮಾಡುತ್ತಿರುವ ಕಾರ್ಯಗಳು, ಇವುಗಳನ್ನು ನಮಗೆ ತಿಳಿಸಬೇಕೆಂದು ನಮ್ಮ ಸೂಚನೆ ಇದೆ. ಈ ಸಂಗತಿಗಳು ತಿಳಿದಲ್ಲಿ ಅವುಗಳಲ್ಲಿ ಪರಸ್ಪರ ಸಂಘಟನೆಯನ್ನು ಹೇಗೆ ಮಾಡಬೇಕೆಂಬುದನ್ನು ಗೊತ್ತುಪಡಿಸಲು ಕಾರ್ಯಕರ್ತರಿಗೆ ಬಹಳ ಸಹಾಯವಾಗುವದು.

ಶಿವಶರಣರ ಸ್ಥಾನಗಳು:— ಕರ್ನಾಟಕದಲ್ಲಿ ಅನೇಕ ಶಿವಶರಣರು ಪ್ರಸಿದ್ಧಿಗೆ ಬಂದಿದ್ದಾರೆ. ಇಲ್ಲಿಯಂತೆಯೇ ಅವರು ಆಂಧ್ರ:

ದ್ರಾವಿಡ, ಗುರ್ಜರ ಮೊದಲಾದ ದೇಶಗಳಲ್ಲಿಯೂ ಉತ್ಪನ್ನರಾಗಿದ್ದಾರೆ. ಅವರೆಲ್ಲರ ಸುಸಂಬದ್ಧವಾದ ಚರಿತ್ರೆಗಳನ್ನು ಸಂಶೋಧಿಸಿದಲ್ಲಿ ವೀರಶೈವ ಇತಿಹಾಸದಮೇಲೆ ಬಹು ಮಹತ್ವದ ಪ್ರಕಾಶವು ಬೀಳದೆ ಇರದು. ಈ ಸಂಗತಿಯು ಈ ಪತ್ರಿಕೆಯಲ್ಲಿ ನಾವು ಪ್ರಕಟಿಸುತ್ತ ಬಂದಿರುವ ಶಿವ ಶರಣರ ಚರಿತ್ರೆಗಳಿಂದ ವಾಚಕರಿಗೆ ತಿಳಿದುಬರುವಂತಿದೆ. ಈ ಚರಿತ್ರೆಗಳನ್ನು ಬರೆಯುವಲ್ಲಿ ನಾವು ಈ ಶರಣರು ಯಾವ ಯಾವ ದೇಶಗಳಲ್ಲಿ ಮತ್ತು ಗ್ರಾಮಗಳಲ್ಲಿ ಆಗಿಹೋದರು ಮತ್ತು ಅವರು ಯಾವ ಕಾಲಗಳಲ್ಲಿ ಜೀವಿಸಿದರು ಎಂಬದನ್ನು ಶಕ್ಯವಿದ್ದಷ್ಟರಮಟ್ಟಿಗೆ ಗೊತ್ತು ಪಡಿಸಿ ನಿರ್ದೇಶಿಸುತ್ತ ಬಂದಿದ್ದೇವೆ. ಆದರೆ ಇಂಥ ಸಂಗತಿಗಳನ್ನು ನಾವು ಕಂಡುಹಿಡಿಯುವದು ಈಗಿನ ಕಾಲದಲ್ಲಿ ಸುಲಭವಾದುದಲ್ಲ. ಯಾಕಂದರೆ ಹೋದ ಒಂದು ಸಾವಿರ ವರ್ಷಗಳಲ್ಲಿ ಅವರ ಚರಿತ್ರೆಗಳು ಜನರ ಲಕ್ಷದಿಂದ ಮರೆಮಾಜಿ ಹೋಗಿರುತ್ತವೆ. ಅನೇಕ ವೀರಶೈವ ಗ್ರಂಥಕಾರರು ಶಿವಶರಣರ ಚರಿತ್ರೆಗಳನ್ನು ಬರೆದಿದ್ದರೂ ಅವರಲ್ಲಿ ಯಾರೂ ನಾವು ಮೇಲೆ ಹೇಳಿದಂತೆ ಸಂಶೋಧನ ಪೂರ್ವಕವಾಗಿ ಅವುಗಳನ್ನು ಬರೆದಿಲ್ಲ. ಆದ್ದರಿಂದ ನಮ್ಮ ವಿವರಣೆಗಳಲ್ಲಿ ದೋಷಗಳಿರಬಹುದೆಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ನಮ್ಮ ವಾಚಕರು ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದಲ್ಲಿ ಈ ದೋಷಗಳು ಬಹುಮಟ್ಟಿಗೆ ದೂರಾಗಬಹುದೆಂದು ಎಡೆಸಿದ್ದೇವೆ. ಅವರು ತಮ್ಮ ಜಿಲ್ಲೆ, ತಾಲೂಕ, ಅಥವಾ ಗ್ರಾಮದಲ್ಲಿ ಯಾವ ಯಾವ ಶಿವಶರಣರು ಆಗಿಹೋದರೆಂಬದನ್ನು ಸ್ಥಾನಿಕ ವೃತ್ತಾಂತಗಳ ಸಹಾಯದಿಂದ ಗೊತ್ತುಪಡಿಸಿ ನಮಗೆ ತಿಳಿಯಪಡಿಸಿದಲ್ಲಿ ಅವರು ಈ ಕಾರ್ಯದಲ್ಲಿ ನಮಗೆ ಬಹಳ ಸಹಾಯಮಾಡಿದಂತಾಗುವದು. ಅವರು ತಮ್ಮ ಭಾಗಗಳಲ್ಲಿ ಎಲ್ಲೆಲ್ಲಿ ಜಾತ್ರೆಗಳಾಗುತ್ತವೆ, ಅವು ಯಾವ ದೇವರ ಜಾತ್ರೆಗಳು ಇರುತ್ತವೆ, ಅಲ್ಲಿ ಮುಖ್ಯ ದೇವಾಲಯಗಳು ಯಾವವು, ಅವುಗಳ ಹೆಸರು, ಗ್ರಾಮ ಮತ್ತು ಸ್ಥಾನಿಕ ಐತಿಹ್ಯಗಳು ಇವುಗಳನ್ನು ಸಂಗ್ರಹಿಸಿ ನಮಗೆ ಅವುಗಳನ್ನು ತಿಳಿಸಿದಲ್ಲಿ ನಾವು ಅವರಿಗೆ ಬಹಳ ಆಭಾರಿಯಾಗುವೆವು. ಇದರಿಂದ ಅವರು ವೀರಶೈವ ಸಂಶೋಧನದ ಕಾರ್ಯದಲ್ಲಿಯೂ, ಮಹತ್ವದ ಸೇವೆ ಮಾಡಿದಂತಾಗುವದು.

ಅಂದಿನಿಂದ ಮೋಳಿಗೆಯ ಮಾರಯ್ಯನ ಮಹಿಮೆಯು ಕಲ್ಯಾಣಪಟ್ಟಣದಲ್ಲೆಲ್ಲ ಮತ್ತಿಷ್ಟು ಹೆಚ್ಚಿಗೆ ಎಲ್ಲರಿಗೂ ಅರಿಕೆಯಾಗಹತ್ತಿತು. ಅವನಿಗೆ ಶಿವಾನುಭವಮಂಟಪದಲ್ಲಿ ಶ್ರೇಷ್ಠಸ್ಥಾನವು ಉಂಟಾಯಿತು. ಅವನು ಅತ್ಯಂತ ಜ್ಞಾನಿಯು ಮತ್ತು ಶಿವಾನುಭವಿಯು. ಆದ್ದರಿಂದ ಮಂಟಪದಲ್ಲಿ ನಡೆಯುತ್ತಿದ್ದ ಶಿವಾನುಭವ ಗೋಷ್ಠಿಗಳಲ್ಲಿ ಅವನು ನುಡಿದ ವಿಚಾರಗಳನ್ನು ಎಲ್ಲ ಶಿವಶರಣರು ಅತ್ಯಂತವಾಗಿ ಮನ್ನಿಸಹತ್ತಿದರು.

ಮೋಳಿಗೆಯ ಮಾರಯ್ಯನು ಶ್ರೇಷ್ಠತರಗತಿಯ ವಚನಕಾರನಿದ್ದಾನೆ. 'ನಿಷ್ಕಳಂಕ ಮಲ್ಲಿಕಾರ್ಜುನ' ಎಂಬುದು ಅವನ ಮುದ್ರಿಕೆಯು. ಅವನು ರಚಿಸಿದ ವಚನಗಳಲ್ಲಿ ಶಿವಾನುಭವದ ಉಚ್ಚ ವಿಚಾರಗಳು ತುಂಬಿ ಹೋಗಿರುತ್ತವೆ. ಅವನ ಏಳೆಂಟು ನೂರು ವಚನಗಳು ಈಗ ಉಪಲಬ್ಧವಿರುತ್ತವೆ. ಅವನ ಉಕ್ತಿಗಳನ್ನು ಉದಹರಿಸದ ಯಾವ ವಚನ ಸಂಗ್ರಹಕಾರನೂ ಇರುವದಿಲ್ಲ. ಅವನ ಅನೇಕ ವಚನಗಳನ್ನು ನಾವು ವಚನಶಾಸ್ತ್ರಸಾರ ಭಾಗ ೧ ಈ ಗ್ರಂಥದಲ್ಲಿ ಹೇರಳವಾಗಿ ಉದಹರಿಸಿದ್ದೇವೆ. ಆದುದರಿಂದ ಅವುಗಳನ್ನು ನಾವು ಇಲ್ಲಿ ಮಾದಿರಿಗಾಗಿ ಬೇರೆ ಉದಹರಿಸಿರುವದಿಲ್ಲ.

ಮೋಳಿಗೆಯ ಮಾರಯ್ಯನು ಬಸವೇಶ್ವರನ ಅಂತ್ಯಕಾಲದ ವರೆಗೂ ಕಲ್ಯಾಣಪಟ್ಟಣದಲ್ಲಿಯೇ ಇದ್ದನು. ಶಿವಶರಣರು ಉಳಿವಿಗೆ ಹೋದ ಬಳಿಕ ಸಹ ಅವನು ಅವರೊಡನೆ ಕಲ್ಯಾಣಬಿಟ್ಟು ಬೇರೆಕಡೆಗೆ ಹೋದಂತೆ ತೋರುವದಿಲ್ಲ. ಅವನು ಕಲ್ಯಾಣಪಟ್ಟಣದ ಸಮೀಪದಲ್ಲಿಯೇ ವಾಸ ಮಾಡಿಕೊಂಡು ಅಲ್ಲಿಯೇ ಐಕ್ಯಹೊಂದಿದನೆಂದು ತೋರುತ್ತಿದೆ. ಅವನ ಹೆಸರಿನ ಒಂದು ಸ್ಥಾನವು ಕಲ್ಯಾಣದಿಂದ ಹುಮನಾಬಾದಿಗೆ ಹೋಗುವ ದಾರಿಯಲ್ಲಿ ೮–೧೦ ಮೈಲುಗಳ ಮೇಲೆ ಈಗಲೂ ಇರುತ್ತದೆ. ಅಲ್ಲಿಯೇ ಅವನು ಶಿವೈಕ್ಯನಾಗಿರಬಹುದೆಂದು ತೋರುತ್ತದೆ.

ಈಪ್ರಕಾರ ಮೋಳಿಗೆಯ ಮಾರಯ್ಯನು ತನ್ನ ರಾಜಪದವಿಯನ್ನು ಬದಿಗೊತ್ತಿ, ಕಲ್ಯಾಣಕ್ಕೆ ಬಂದು ಅಲ್ಲಿ ಒಂದು ಕಾಯಕವನ್ನು ಕೈಕೊಂಡು ಸಾದಾವೃತ್ತಿಯವನೂ, ಶ್ರೇಷ್ಠ ಶಿವಜ್ಞಾನಿಯೂ, ಉಚ್ಚತರದ ವಚನಕಾರನೂ ಎನಿಸಿಕೊಂಡು ಶಿವಶರಣರಲ್ಲಿ ಉನ್ನತಸ್ಥಾನವನ್ನು ಹೊಂದಿದ್ದಾನೆ.

ಅವನ ವಚನಗಳು ಅತ್ಯಂತ ಉದಾತ್ತವಾದವುಗಳು. ಅವು ಕನ್ನಡ ವಾಙ್ಮಯದಲ್ಲಿ ಉಚ್ಚ ಸ್ಥಾನವನ್ನು ಹೊಂದಿರುತ್ತವೆ.

ಮಹಾದೇವಿಯವ್ವ

ಮಹಾದೇವಿಯವ್ವನು ಮೋಳಿಗೆಯ ಮಾರಯ್ಯನ ಹೆಂಡತಿಯು. ಮೋಳಿಗೆಯ ಮಾರಯ್ಯನು ಕಾಶ್ಮೀರದೇಶದಲ್ಲಿ ಮಹಾದೇವರಾಜನೆಂಬ ಹೆಸರಿನಿಂದ ಮಾಂಡವ್ಯಪುರದಲ್ಲಿ ರಾಜ್ಯವನ್ನಾಳುವಾಗ ಮಹಾದೇವಿಯವ್ವನು ರಾಜವೈಭವವನ್ನು ಅನುಭವಿಸಿದವಳು. ಅವಳ ಮೊದಲಿನ ಹೆಸರು ಗಂಗಾದೇವಿ ಎಂಬುದಾಗಿತ್ತು. ಆದರೆ ಮುಂದೆ ಅವಳೂ ಅವಳ ಪತಿಯಾದ ಮೋಳಿಗೆಯ ಮಾರಯ್ಯನೂ ಮಾರಯ್ಯನ ತಂಗಿಯಾದ ಬೊಂತಾದೇವಿಯೂ ಶಿವಾನುಭವಕ್ಕೆ ಪ್ರೀತಿಯನ್ನು ವಹಿಸಿದವರಾದರು. ಅವರಲ್ಲಿ ಬೊಂತಾದೇವಿಯು ಲಗ್ನವನ್ನು ತ್ಯಜಿಸಿ ಶಿವಶರಣರನ್ನು ಕಾಣಬೇಕೆಂದು ಕಲ್ಯಾಣಪಟ್ಟಣಕ್ಕೆ ಹೋದಳು. ಆಮೇಲೆ ಮೋಳಿಗೆಯಮಾರಯ್ಯನೂ ಅದೇರೀತಿಯಾಗಿ ಕಲ್ಯಾಣಕ್ಕೆ ಹೊರಡಲು ಗಂಗಾದೇವಿಯೂ ಕೂಡ ಪತಿಯೊಡನೆ ಹೋಗಲು ಸಿದ್ಧಳಾದಳು. ಅವಳು ಕಲ್ಯಾಣಕ್ಕೆ ಹೋದಬಳಿಕ ಮಹಾದೇವಿಯವ್ವನೆಂದು ಹೆಸರನ್ನಿಟ್ಟುಕೊಂಡಳು. ಅಲ್ಲಿ ಉಭಯದಂಪತಿಗಳು ಶಿವಾನುಭವದಲ್ಲಿ ಕಾಲಕಳೆಯಹತ್ತಿದರು. ರಾಜವೈಭವಕ್ಕಿಂತಲೂ ದಿನಾಲು ಕಾಯಕವನ್ನು ಮಾಡಿ ಅದರಿಂದ ಬಂದುದರಲ್ಲಿ ತೃಪ್ತರಾಗಿರುವದೇ ಅವರಿಗೆ ಸುಖವೆನಿಸಿತು. ಬಸವೇಶ್ವರನ ಸನ್ನಿಧಿಯಲ್ಲಿ ಶಿವಶರಣರು ನಡಿಸುತ್ತಿದ್ದ ಶಿವಾನುಭವಗೋಷ್ಠಿಗಳಲ್ಲಿರುವರು. ಉಭಯತರೂ ವಚನಗಳನ್ನು ರಚಿಸಿದ್ದಾರೆ. ಮಹಾದೇವಿಯವ್ವನ ಮುದ್ರಿಕೆಯು 'ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ' ಎಂದಿದೆ. ಅವಳ ೪೧ ವಚನಗಳು ಮಾತ್ರ ನಮಗೆ ಉಪಲಬ್ಧವಿವೆ. ಅವುಗಳಲ್ಲಿ ಕ್ರಿಯಾಜ್ಞಾನಗಳ ಸಂಬಂಧ, ಇಷ್ಟಲಿಂಗ ಪ್ರಾಣಲಿಂಗಗಳ ಪರಸ್ಪರ ಸಂಬಂಧ, ಷಟ್‌ಸ್ಥಲಗಳ ಸ್ವರೂಪ, ಇವುಗಳನ್ನು ಬಹು ಮಾರ್ಮಿಕವಾಗಿ ವಿವೇಚಿಸಿದ್ದಾಳೆ. ಈಕೆಯ ವಚನಗಳಲ್ಲಿ ಕೆಲವುಗಳನ್ನು ಮಾತ್ರ ಮಾದಿರಿಗಾಗಿ ಇಲ್ಲಿ ಉದಹರಿಸಿದ್ದೇವೆ.

ವಚನಗಳು.

(೧) ಮಣ್ಣಿನಿತ್ತು ನಿನ್ನ ಕಂಡಿಹೆನೆಂದರೆ ಜಗಭರಿತ ನೀನು. ಹೊನ್ನಿನಿತ್ತು ನಿಮ್ಮ ಕಂಡಿಹೆನೆಂದರೆ ಹಿರಣ್ಯಮೂರ್ತಿ ನೀನು. ಹೆಣ್ಣು ಕೊಟ್ಟು ನಿಮ್ಮ ಕಂಡಿಹೆನೆಂದರೆ ತ್ರಿವಿಧಶಕ್ತಿಮೂರ್ತಿ ನೀನು. ಮನವನಿತ್ತು ಕಂಡಿಹೆನೆಂದರೆ ಮನೋಮೂರ್ತಿ ನೀನು. ಎನಗೇನು ನಿನಗಿತ್ತ ಕಾಂಬ ಕಾಣಿಕೆ? ನೀನು ಸಿಕ್ಕುವುದಕ್ಕೆ ಕ್ರಿಯಲ್ಲಿ ನಿರತ, ಸದ್ಭಾವದಲ್ಲಿ ಶುದ್ಧ. ಹಿಡಿದುದ ಬಿಡದೆ ಬಿಟ್ಟುದ ಹಿಡಿಯದೆ, ನಿಶ್ಚಯವಪ ನಿಜಜ್ಞಾನಿಗಳಲ್ಲಿ ಬೆಚ್ಚಂತಿದ್ದರೆ ನೀನು ಅಲ್ಲಿ ತಪ್ಪದಿಪ್ಪೆ ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ.

(೨) ಹೃತ್ಕಮಲ ಮಧ್ಯದಲ್ಲಿ ಲಿಂಗವ ಸರ್ವಾಂಗದಲ್ಲಿ ವೇಧಿಸಿ ಪರಿಪೂರ್ಣವಪ್ಪ ಲಿಂಗವ ಅಂತರ್ಮುಖದಿಂದ ಬಾಹ್ಯಮುಖಕ್ಕೆ ತಂದಲ್ಲಿ ಪಂಚಸ್ಥಾನದಲ್ಲಿಪ್ಪ ಲಿಂಗವ ಕರಸ್ಥಲದಲ್ಲಿ ಮೂರ್ತಿಗೊಳಿಸಲಿಕ್ಕಾಗಿ ಕಂಗಳ ತುಂಬಿ ಬಾಹ್ಯದೃಷ್ಟಿಯಿರತು ಲಿಂಗದೃಷ್ಟಿ ಪರಿಪೂರ್ಣವಾದಲ್ಲಿ ದೃಕ್ಕಿಂಗೆ ತೋರುವದೆಲ್ಲವೂ ಲಿಂಗಮಯವಾಗಿ ಏನ ಮುಟ್ಟಿ ಹಿಡಿದಲ್ಲಿಯೂ ಪುಷ್ಪಮಯವಾಗಿ ಜಿಹ್ವೆಯಲ್ಲಿ ತೊರಿದ ಅಪ್ಪುರಸ ಮುಂತಾದುದೆಲ್ಲವೂ ಅರ್ಪಿತಮಯವಾಗಿ ಇಂತಪ್ಪ ವ್ಯವಧಾನ ಸರ್ವಾಂಗ ಲಿಂಗಿಯ ವಿವರ. ಇಷ್ಟ ಅರಿವೆಂದು ಉಭಯದ ದೃಷ್ಟ ಕೆಟ್ಟಲ್ಲಿ ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನೆಂಬುದಕ್ಕೆ ಇದಿರಿಡೆಯಿಲ್ಲ.

(೩) ಮೂಲದ ಬೇರಿನ ಸುಗಂಧ ಎಲೆಬಳ್ಳಿಯನೇತಕ್ಕೆ ವೇಧಿಸದು? ಕುಸುಮದ ಸುವಾಸನೆ ತನ್ನಯ ತೊಟ್ಟು ಎಲೆ ಕೊನರು ಬೇರುವನೇಕೆ ವೇಧಿಸದು? ಇದು ಇಷ್ಟಪ್ರಾಣಯೋಗದ ಭೇದ. ಗಿಡು ಗಿಡುವಿಗೆ ಕುರುಹಲ್ಲದೆ ಗಂಧ ಗಂಧ ಕೂಡಿದಲ್ಲಿ ದ್ವಂದ್ವವಡಗಿ ಬೆರೆದಲ್ಲಿ ಕದಂಬಗಂಧವಲ್ಲದೆ ಒಂದರ ಗಂಧವೆಂದು ಸಂಧಿಸಿ ತೆಗೆಯಲಿಲ್ಲ. ಆವರು ನಿಂದ ಸ್ಥಲಕ್ಕೆ ಸಂಬಂಧವಾಗಿಪ್ಪರು. ಇದು ದೃಷ್ಟಾನುಭಾವ ಸಿದ್ಧ, ಸರ್ವಸ್ಥಲಭೇದ, ವಿಶ್ವತೋಮುಖರೂಪು. ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳ ಮಲ್ಲಿಕಾರ್ಜುನನು ತತ್ಪ್ರಭಕ್ತಿಸ್ವರೂಪನು.

(೪) ನೀರು ನೆಲನಿಲ್ಲದೆ ಇರಬಹುದೇ? ಬೀಜ ನೆಲೆಯಿಲ್ಲದೆ ಹುಟ್ಟಬಹುದೇ? ಜ್ಞಾನ ಕ್ರಿ ಇಲ್ಲದೆ ಅರಿಯಬಹುದೇ? ಚಿತ್ತ ಚಿತ್ತವಿಲ್ಲದೆ ವಸ್ತು ಲಕ್ಷಿಸಿ ಗ್ರಹಿಸಬಹುದೇ? ಇಂತೀ ಕ್ರಿಜ್ಞಾನ ಸಂಬಂಧ ಸ್ಥಲಭಾವ. ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಉಭಯಸ್ಥಲಭೇದ.

ಸೊಡ್ಡಳ ಬಾಚರಸ.

ಸೊಡ್ಡಳ ಬಾಚರಸನು ಬಿಜ್ಜಳನ ಆನೆ ಮತ್ತು ಕುದುರೆಗಳಿಗೆ ಧಾನ್ಯವನ್ನು ಅಳೆದು ಕೊಡುವ ಅರಮನೆಯ ಆಧಿಕಾರಿಯಾಗಿದ್ದನು. ಅವನು ಅರಮನೆಯಲ್ಲಿ ಧಾನ್ಯದ ಕಣಜಗಳನ್ನು ಇಟ್ಟುಕೊಂಡು ಅವು ಗಳಲ್ಲಿದ್ದ ಧಾನ್ಯಗಳನ್ನು ದಿನಾಲು ಸೇವಕರಿಗೆ ಅಳೆದು ಕೊಡುವನು. ತಾನು ಹೀಗೆ ಅಳೆದು ಕೊಟ್ಟದ್ದರ ಲೆಕ್ಕವನ್ನು ಗಣಕರಿಂದ ಬರೆಯಿ ಸುತ್ತ ಬಿಜ್ಜಳರಾಜನಲ್ಲಿ ಬಹು ದಿವಸಗಳಿಂದಲೂ ಊಳಿಗವನ್ನು ಮಾಡುತ್ತಬಂದನು. ಅವನು ಮೊದಲು ಬಲದೇವ ಮಂತ್ರಿಯಿಂದ ಈ ಸ್ಥಳಕ್ಕೆ ನೇಮಿಸಲ್ಪಟ್ಟು ಅವನಿಗೆ ಅತ್ಯಂತ ನಂಬಿಗಸ್ತನಾಗಿದ್ದನು. ಮುಂದೆ ಬಸವೇಶ್ವರನು ಬಿಜ್ಜಳನ ಭಂಡಾರದ ಮೇಲೆ ಕೋಶಾಧಿಪತಿ ಯಾಗಿ ನೇಮಿಸಲ್ಪಟ್ಟ ಬಳಿಕ ಅವನ ನಿದರ್ಶನದಲ್ಲಿ ಸೊಡ್ಡಳ ಬಾಚರ ನು ಪಡಿಯನ್ನು ಅಳೆದು ಕೊಡುವ ತನ್ನ ಕಾಯಕವನ್ನು ನಡಿಸುತ ಬಂದನು. ಬಸವೇಶ್ವರನು ಅವನ ಸತ್ಯತೆಯನ್ನೂ ನಿಷ್ಠೆಯನ್ನೂ ನೋಡಿ ಅವನಲ್ಲಿ ಅತ್ಯಂತ ಅನುರಾಗವನ್ನು ತಾಳಿದವನಾಗಿದ್ದನು.

ಸೊಡ್ಡಳ ಬಾಚರಸನು ಸೌರಾಷ್ಟ್ರ ಅಂದರೆ ಗುಜರಾಥ ದೇಶದಲ್ಲಿ ಅತ್ಯಂತ ಪ್ರಸಿದ್ಧಿಹೊಂದಿದ ಸೋಮನಾಥನ ಕೇವಲ ಭಕ್ತನಾಗಿದ್ದನು. ಅವನು ದಿನಾಲು ಸೋಮನಾಥನನ್ನು ಬಹು ಭಕ್ತಿಯಿಂದ ಭಜಿಸುವನು. ಅಲ್ಲದೆ ಅವನು ಶ್ರೇಷ್ಠತರಗತಿಯ ಶಿವಾನುಭವಿಯೂ ಆಗಿದ್ದನು. ಬಸ ವೇಶ್ವರನ ಸಮ್ಮುಖದಲ್ಲಿ ನಡಿಯುತ್ತಿದ್ದ ಶಿವಾನುಭವ ಗೋಷ್ಠಿಗಳಲ್ಲಿ ಯಾವಾಗಲೂ ನಿರತನಾಗಿ ಇತರ ಶಿವಶರಣರಂತೆ ತಾನೂ ತನ್ನ ಅನು ಭವಗಳನ್ನು ವಚನಗಳ ಮೂಲಕ ನಿರೂಪಿಸುವನು. ಅವನ ವಚನಗಳ ಮುದ್ರಿಕೆಯು 'ಸೊಡ್ಡಳಾ' ಅಥವಾ 'ದೇವರಾಯ ಸೊಡ್ಡಳಾ' ಎಂದಿದೆ. ನಮಗೆ ದೊರೆತ ಅವನ ೫೬ ವಚನಗಳನ್ನು ನಾವು ಶಿವಾನುಭವ ಗ್ರಂಥ ಮಾಲೆಯಲ್ಲಿ ಪ್ರಕಟಿಸಿದ್ದೇವೆ.

ಈ ಪ್ರಕಾರ ಸೊಡ್ಡಳ ಬಾಚರಸನು, ಬಸವೇಶ್ವರಸೊಡನೆ ಶಿವಾನು ಭವ ಗೋಷ್ಠಿಗಳಲ್ಲಿರುವದನ್ನು ಬಸವೇಶ್ವರನ ವಿರೋಧಿಗಳು ಕಂಡು ಅದನ್ನು ಸಹಿಸಲಾರದೆ ಉಭಯತರ ವಿಷಯನಾಗಿ ಅನೇಕ ಸುಳ್ಳು

ಕೋವೂರು ಬ್ರಹ್ಮಯ್ಯ.

ಉತ್ತರ ದೇಶದಲ್ಲಿ ಕೋವೂರೆಂಬ ಪುರವಿದ್ದು ಅಲ್ಲಿ ಬ್ರಹ್ಮಯ್ಯನೆಂಬ ಚಾಳುಕ್ಯರಾಜನು ರಾಜ್ಯವಾಳುತ್ತಿದ್ದನು. ಚಾಲುಕ್ಯರ ಕುಲದಲ್ಲಿ ಅವನೊಬ್ಬನೇ ಶಿವಭಕ್ತನು. ಕೋವೂರಿಗೆ ಸಮೀಪವಾಗಿ 'ಅಂಬು ಧಾರಾ ರಾಮನಾಥ' ಎಂಬ ಹೆಸರಿನ ಈಶ್ವರನ ದೇವಾಲಯವು ಪ್ರಸಿದ್ಧವಾಗಿತ್ತು. ಬ್ರಹ್ಮಯ್ಯನು ಈ ರಾಮನಾಥನಲ್ಲಿ ಅತ್ಯಂತ ಭಕ್ತಿಯುಳ್ಳವನಾಗಿದ್ದನು. ಅವನ ಹೆಂಡತಿಯ ಹೆಸರು ಕಳಾವತಿಯು. ಅವಳೂ ತನ್ನ ಗಂಡನಂತೆ ಕೇವಲ ಶಿವಭಕ್ತಳಾಗಿದ್ದಳು.

ಈ ಕೋವೂರು ಗ್ರಾಮವು ವಿಜಾಪುರ ಪಟ್ಟಣದ ಪಶ್ಚಿಮಕ್ಕೆ ೪೦ ಮೈಲುಗಳ ಮೇಲೆ ಈಗ ಜತ್ತಿ ಸಂಸ್ಥಾನದಲ್ಲಿರುತ್ತದೆ. ಇಲ್ಲಿಂದ ನಾಲ್ಕು ಮೈಲುಗಳ ಮೇಲೆ 'ರಾಮತೀರ್ಥ' ಎಂಬ ಹೆಸರಿನ ಅತ್ಯಂತ ಪ್ರಸಿದ್ಧವಾದ ಈಶ್ವರನ ದೇವಾಲಯವು ಈಗಲೂ ಇರುತ್ತದೆ. ಈ ಕೋವೂರು ಗ್ರಾಮವು ಮೊದಲು ದೊಡ್ಡ ಪಟ್ಟಣವಾಗಿದ್ದು ಈಗ ಸಣ್ಣ ಗ್ರಾಮವಾಗಿರುವದರಿಂದ ಅದಕ್ಕೆ 'ಕೋವಳ್ಳಿ' ಎಂಬ ಹೆಸರು ಪ್ರಾಪ್ತವಾಗಿರುತ್ತದೆಂದು ತೋರುತ್ತದೆ. ಈ ಗ್ರಾಮದಿಂದ ೩೦-೪೦ ಮೈಲುಗಳ ಸುತ್ತಳತೆಯಲ್ಲಿ ವಂದಾನಿಗುಡ್ಡಮ್ಮೆಯ ಗುಡ್ಡಾಪುರವು, ಹಾವಿನಹಾಳ ಕಲ್ಲಯ್ಯನ ಹಾವಿನಹಾಳ ಗ್ರಾಮವು, ರೇವಣಸಿದ್ಧೇಶ್ವರನಿದ್ದ ಮುಂಗಳವಾಡವು, ಹೀಗೆ ಅನೇಕ ಶಿವಶರಣರ ಸ್ಥಾನಗಳಿವೆ. ಬಸವೇಶ್ವರನ ಕಾಲದಲ್ಲಿ ಮುಂಗಳವಾಡದಲ್ಲಿಯೂ ಮಾಡಗಿಹಾಳ, ಪ್ರಚಲಿತ ಹೆಸರು 'ಮಾಡ್ಯಾಳ'ದಲ್ಲಿಯೂ ಕೆಲವು ಚಿಕ್ಕ ರಾಜಮನೆತನಗಳು ರಾಜ್ಯವಾಳುತ್ತಿದ್ದವು. ಹೀಗೆಯೇ ಕೋವೂರಲ್ಲಿ ಚಾಲುಕ್ಯ ರಾಜರ ಒಂದು ಶಾಖೆಯು ಈಕಾಲದಲ್ಲಿ ಈ ಭಾಗವನ್ನು ಆಳುತ್ತಿರಬಹುದು.

ಬೊಮ್ಮಯ್ಯನು ಕೋವೂರಲ್ಲಿ ರಾಜ್ಯವಾಳುತ್ತಿರುವಾಗ ಗ್ರಾಮದಲ್ಲೆಲ್ಲ ಜೈನರೇ ವಾಸವಾಗಿದ್ದರು. ರಾಜನ ಮುಖ್ಯ ದಳಪತಿಯೂ ಮಾವುತರೂ, ರಾಹುತರೂ, ಸೈನಿಕರೂ, ಮಂತ್ರಿಗಳೂ ಜೈನರೇ ಆಗಿದ್ದರು. ಅವನ ಕುಲಗೋತ್ರ ಬಂಧುಗಳು ಸಹ ಜೈನರು. ಆದರೆ ಅವರಲ್ಲಿ ಮುನ್ನೂರು ಜನರು ಮಾತ್ರ ಶಿವಭಕ್ತರಾಗಿ ಅರಸನೊಡನೆ ವಾಸವಾ

ಎಂದು ಕೋಪದಿಂದ ನುಡಿದನು. ಅದನ್ನು ಬಸವೇಶ್ವರನು ಕೇಳಿ ಅಂದದ್ದು— ಶಿವಭಕ್ತರನ್ನು ಚಿವುಟಿದರೆ ಹಾಲು ನಿಜವಾಗಿ ಬರುವದು. ಇದನ್ನು ಪ್ರತ್ಯಕ್ಷವಾಡಿ ತೋರಿಸುವೆನು ಎಂದು ನುಡಿದನು. ಆಗ ಬಿಜ್ಜಳನೂ ಅಲ್ಲಿ ನೆರೆದಿದ್ದ ಬ್ರಾಹ್ಮಣರೂ ಹಾಗೆ ಮಾಡಿ ತೋರಿಸು ಎಂದು ನುಡಿಯಲು ಬಸವೇಶ್ವರನು ಶಿವನಾಗಮಯ್ಯನ ಕೈಯ್ಯನ್ನು ಹಿಡಿದೆತ್ತಿ ಅವನ ಐದು ಬೆರಳುಗಳನ್ನೊತ್ತಲು ಅವುಗಳ ತುದಿಗಳಿಂದ ಹಾಲು ಧಾರೆಗಟ್ಟಿ ಸುರಿಯಹತ್ತಿತು!

ಅದನ್ನು ಬಿಜ್ಜಳನು ನೋಡಿ ಆಶ್ಚರ್ಯಬಟ್ಟನು. ಆಗ ಬಸವೇಶ್ವರನು ಬಿಜ್ಜಳನಿಗೆ—ಈಗಲಾದರೂ ಉತ್ತಮರು ಯಾರು, ಹೊಲೆಯರು ಯಾರು, ಎಂಬುದನ್ನು ನೀವು ನೋಡಿದಿರಾ? ಎಂದು ಕೇಳಿದನು. ಈ ಅದ್ಭುತವನ್ನು ಬಿಜ್ಜಳನು ನೋಡಿ ತಲೆದೂಗಿ— ಭಕ್ತರೇ ಕುಲಜರು ಎಂಬುದನ್ನು ನಾನು ಈಗ ಮನಗಂಡೆನು. ನಾನು ಬ್ರಾಹ್ಮಣರ ಮಾತನ್ನು ಕೇಳಿ ವಿಚಾರ ಮಾಡದೆ ನಿಮ್ಮಿಬ್ಬರನ್ನು ಕರೆಯಿಸಿ ದೂಷಿಸಿ ಅಪರಾಧ ಮಾಡಿದೆನು. ನನ್ನನ್ನು ಕ್ಷಮಿಸಬೇಕು ಎಂದು ನುಡಿದು ಅಲ್ಲಿದ್ದ ದ್ವಿಜರ ಗುಂಪನ್ನು ನೋಡಿ—ಈಗಲಾದರೂ ನೀವು ನೋಡಿದಿರಾ? ನಿಮ್ಮ ಹಸ್ತವನ್ನು ಹಿಂಡಿದರೆ ರಕ್ತವು ಬರುವದು. ಆದರೆ ಹಾಲು ಬಂದೀತೆ? ಬರಲಾರದು. ಅಂದ ಬಳಿಕ ಭಕ್ತರ ರಕ್ತವು ಪವಿತ್ರವಾದದ್ದೋ ಅಥವಾ ನಿಮ್ಮಲ್ಲಿಯದೋ ಎಂಬುದನ್ನು ಹೇಳಿರಿ. ಶಿವನಾಗಮಯ್ಯನೇ ಕುಲಜನು. ಇದು ಇಂದು ನನಗೆ ತೋರಿಬಂದಿತು ಎಂದು ನುಡಿದನು.

ಆಮೇಲೆ ಅವನು ಶಿವನಾಗಮಯ್ಯನಿಗೆ ಉಡುಗೊರೆಯನ್ನು ಕೊಟ್ಟು ಅವನನ್ನು ಆನೆಯ ಮೇಲೆ ಕುಳ್ಳಿರಿಸಿ ಬೀಳ್ಕೊಟ್ಟನು. ಆ ಕಾಲದಲ್ಲಿ ಶಿವನಾಗಮಯ್ಯನ ಸುತ್ತಲೂ ಅಸಂಖ್ಯ ಭಕ್ತರು ನೆರೆದರು. ಆಮೇಲೆ ಅವರು ಅವನನ್ನು ಸಂಭ್ರಮದ ಮೆರವಣಿಗೆಯಲ್ಲಿ ಕರೆದುಕೊಂಡು ಕಲ್ಯಾಣಪಟ್ಟಣದ ಬೀದಿಗಳೊಳಗಿಂದ ಹಾಯ್ದು ಬಸವೇಶ್ವರನ ಶಿವಾನುಭವ ಮಂಟಪಕ್ಕೆ ಬಂದರು. ಅಲ್ಲಿ ಅವರು ಶಿವನಾಗಮಯ್ಯನನ್ನು ನಮಸ್ಕರಿಸಿ ತಮ್ಮ ತಮ್ಮ ಮಂದಿರಗಳಿಗೆ ಹೋದರು. ಶಿವನಾಗಮಯ್ಯನು ಬಸವೇಶ್ವರನ ಸನ್ನಿಧಿಯಲ್ಲಿ ಉಚ್ಚತರದ ಶಿವಾನುಭವಿಯಾಗಿ ಶಿವಶರಣರಲ್ಲಿ ಶ್ರೇಷ್ಠ ಸ್ಥಾನವನ್ನು ಹೊಂದಿರುತ್ತಾನೆ.

ಶಿವನಾಗಮಯ್ಯನ ಹೆಸರು ಗಣಸಹಸ್ರದಲ್ಲಿ ಬಂದಿರುತ್ತದೆ. ಶಿವ ಭಕ್ತರು ತಮ್ಮ ಲಿಂಗಪೂಜಾ ಕಾಲದಲ್ಲಿ ಅವನ ಹೆಸರನ್ನು ಪಠಿಸುತ್ತ ಅವನನ್ನು ಸ್ಮರಿಸುವದುಂಟು. ಶಿವನಾಗಮಯ್ಯನು ವಚನಕಾರನೂ ಇವ್ವಾನೆ. ಅವನ ಮುದ್ರಿಕೆಯು 'ನಾಗಯ್ಯ ಪ್ರಿಯ ಚನ್ನರಾಮೇಶ್ವರಾ' ಎಂದಿದೆ. ಅವನು ಅನೇಕ ವಚನಗಳನ್ನು ರಚಿಸಿರಬಹುದು. ಆದರೆ ಅವುಗಳಲ್ಲಿ ಎರಡು ವಚನಗಳು ಮಾತ್ರ ನಮಗೆ ಉಪಲಬ್ಧವಾಗಿವೆ. ಅವುಗಳನ್ನು ನಾವು ಇಲ್ಲಿ ಉದಹರಿಸಿದ್ದೇವೆ.

ಬಸವೇಶ್ವರನು ಅಂತ್ಯಜರಿಗೆ ಶಿವಾನುಭವದ ಜ್ಞಾನವನ್ನು ಮಾಡಿ ಕೊಟ್ಟು ಅವರಿಗೆ ವೀರಶೈವ ದೀಕ್ಷೆಯನ್ನಿತ್ತು ಆಮೇಲೆ ಅವರಲ್ಲಿ ಸಾಮರಸ್ಯದಿಂದ ನಡೆದಿದ್ದು ಕಂಡುಬರುತ್ತದೆ. ಅವನು ಈಪ್ರಕಾರ ಅವರಲ್ಲಿ ಉಚ್ಚ ವರ್ತನೆಯನ್ನುಂಟು ಮಾಡಲು ಪ್ರಯತ್ನಿಸಿದ್ದಾನೆ. ಕೇವಲ ಅಂತ್ಯಜರಿದ್ದವಾತ್ರದಿಂದ ಅವನು ಅವರೊಡನೆ ಬೆರೆದಿಲ್ಲ. ಸದಾಚಾರವಿಲ್ಲದ ಲಿಂಗಭಕ್ತರನ್ನು ಅವನು ಯಾವಾಗಲೂ ಹೀಯಾಳಿಸುತ್ತಾನೆ. ಆದರೆ ಶಿವಾನುಭವಿಗಳು ಯಾವ ಕುಲದವರಿದ್ದರೂ ಅವರು ಶ್ರೇಷ್ಠ ವರ್ಣದವರೆಂದು ಅವನು ಭಾವಿಸಿದ್ದಾನೆ. ಈ ತಾರತಮ್ಯವನ್ನು ವಾಚಕರು ಲಕ್ಷಿಸುವದು ಅವಶ್ಯವೆಂದು ನಮಗೆ ತೋರುತ್ತದೆ.

ವಚನಗಳು.

(೧) ಅಂಗದ ಮೇಲೆ ಲಿಂಗವಿದ್ದ ಬಳಿಕ ಲಿಂಗಹೀನರ ಬೆರಿಸಲಾಗದು. ಅಂಗದ ಮೇಲೆ ಲಿಂಗವಿದ್ದ ಬಳಿಕ ಲಿಂಗ ಮುಂತಾಗಿ ಎಲ್ಲ ಕ್ರಿಗಳನ್ನು ಗಮಿಸಬೇಕಲ್ಲದೆ, ಅಂಗ ಮುಂತಾಗಿ ಗಮಿಸಲಾಗದು. ಲಿಂಗ ಸಂಬಂಧಿಯಾಗಿ ಅಂಗ ಮುಂತಾಗಿ ಇರ್ಪವರು ಲಿಂಗಕ್ಕೆ ದೂರವಯ್ಯ ನಾಗಪ್ರಿಯ ಚನ್ನರಾಮೇಶ್ವರಾ.

(೨) ಘನ ಸುಖ ಮಹಾ ಸುಖವ ಮುಟ್ಟಲು ಸಮಸುಖಂಗಳ ಸುಖಿಯಿಸಬಲ್ಲ. ಸುಖವನಲ್ಲಿಯೆ ಕೊಯ್ದು ಸೂಡ ಕಟ್ಟಲಿಲ್ಲ. ನಾಗಪ್ರಿಯ ಚನ್ನರಾಮೇಶ್ವರಾ ನಿಮ್ಮ ಶರಣ ಸುಖಿಸಬಲ್ಲ ಸುಖವನು.

ಇವು ಎರಡೇ ವಚನಗಳಿದ್ದರೂ ಅರ್ಥಬೋಧಕವಾಗಿವೆ.

ಬಾಯಿ. ಶಿವ ನಿಮ್ಮ ಹೊಗಳದವನ ನಾಲಿಗೆ ಭವಿಯ ನಾಲಿಗೆ, ಬಚ್ಚಲ ತಂಪಿನ ಚೌಗಿನಲ್ಲಿ ಹುಟ್ಟಿದ ಜಿಗುಣೆಯಯ್ಯಾ. ಶಿವ ನಿಮಗೆರಗದ ಕರ್ಮ ಶೂಲದ ಮೇಲಣ ಹೆಣನು. ಶಿವ ನಿಮ್ಮ ನೆನೆಯದವನ ದೇಹ ಸಂದೇಹ. ಶಿವ ನಿಮ್ಮ ಭಕ್ತನಲ್ಲದವನ ಭೋಗವು, ವಿದ್ಯೆಯು, ಕುಲವು, ಶ್ರೀಯು, ಸಾಹಸವು, ಯಶಸ್ಸು, ವಿಮಾನದ ಮೇಲಣ ಶವದ ತೋರಿಕೆಯಯ್ಯ. ಅವನೇತಕ್ಕೆ ಬಾತೆ? ಇದು ಕಾರಣ ಭವರೋಗ ನರಕಕ್ಕಾರದೆ ಶರಣು ಹೊಕ್ಕೆನಯ್ಯಾ ಸೊಡ್ಡಳಾ.

(೩) ಹುತ್ತು ಹೋರಿನೊಳಗೆ ಕೈಯ್ಯನಿಕ್ಕುಗು ಎನ್ನ ಶಿಶುವೆಂದು ಹೆತ್ತತಾಯಿ ಮಗನ ಬೆಂಬತ್ತಿ ಬಪ್ಪಂತೆ ಬೆಂಬತ್ತಿ ಬಿಡದಿರಿಂ ಭೋ. ಅಯ್ಯಾ ಎಂದರೆ ಓ ಎಂಬೆ. ಅನ್ಯವಿಷಯಕ್ಕೆ ಹರಿಯಲೀಯದೆ ಎತ್ತೆತ್ತ ನೋಡಿದತ್ತತ್ತ ಸೊಡ್ಡಳಾ.

(೪) ನಿಮ್ಮಿಂದ ನಾನಾದೆನು. ಎನಗೆ ದೇಹೇಂದ್ರಿಯ ಮನಃ ಪ್ರಾಣಾದಿಗಳಾದವು. ಆ ದೇಹೇಂದ್ರಿಯ ಮನಃ ಪ್ರಾಣಾದಿಗಳಿಗೆ ಕರ್ತನು ನೀನೆ. ಅವರ ಅರುಚಿಗೆ ಸುಖದುಃಖವೆಲ್ಲವು ನೀನೆ. ಒಳಗು ನೀನೆ, ಹೊರೆಗು ನೀನೆ. ನಾನೆಂಬುದು ನಡುವಣ ಭ್ರಾಂತು. ನಿನ್ನ ವಿನೋದ ನೀನೇ ಬಲ್ಲೆ ದೇವರಾಯ ಸೊಡ್ಡಳಾ.

(೫) ನಿನ್ನಿಂದಲಾನಾದೆನು. ಎನಗೆ ದೇಹೇಂದ್ರಿಯ ಮನಃ ಪ್ರಾಣಾದಿಗಳಿಗೆ ಕರ್ತೃ ನೀನೆ. ಅವರಾಗು ಚೇಗು ಸುಖದುಃಖವೆಲ್ಲವು ನೀನೆ. ಒಳಗೂ ನೀನೆ, ಹೊರಗೂ ನೀನೆ. ನಾನೆಂಬುದು ನಡುವಣ ಭ್ರಾಂತು. ನಿನ್ನ ವಿನೋದ, ನೀನೇ ಬಲ್ಲೆ ದೇವರಾಯ ಸೊಡ್ಡಳಾ.

ಆರೋಪಗಳನ್ನು ಹುಟ್ಟಿಸಿ ಅವುಗಳನ್ನು ಬಿಜ್ಜಳನಿಗೆ ನಿವೇದಿಸಹತ್ತಿದರು. ಬಿಜ್ಜಳನು ಅವುಗಳನ್ನು ನಂಬಿ ಉಭಯತರ ವಿಷಯವಾಗಿ ಕಲುಷಿತ ಮನಸ್ಕನಾಗಿ ಅವರೊಡನೆ ವರ್ತಿಸಹತ್ತಿದನು.

ಹೀಗಿರಲು ಶಿವರಾತ್ರಿಯ ದಿವಸವು ಸಮೀಪಕ್ಕೆ ಬರಲು ಸೊಡ್ಡಳ ಬಾಚರಸನು ಒಂದು ದಿವಸ ಬಿಜ್ಜಳನಿಗೆ – ನಾನು ಸೋಮೇಶ್ವರನ ದರ್ಶನವನ್ನು ಹೊಂದಲು ಸೌರಾಷ್ಟ್ರಕ್ಕೆ ಹೋಗಬೇಕೆಂದಿದ್ದೇನೆ. ಅಲ್ಲಿಗೆ ಹೋಗಲು ದಯವಾಡಿ ಅಪ್ಪಣೆ ಕೊಡಬೇಕೆಂದು ಅವನಿಗೆ ಕೇಳಿ ಕೊಂಡನು. ಆದರೆ ಬಿಜ್ಜಳನು ಅವನ ವಿನಂತಿಯನ್ನು ಮಾನ್ಯಮಾಡದೆ ತಿರಸ್ಕರಿಸುತ್ತ ಅಂದದ್ದೇನಂದರೆ—ಬಾಚರಸನೇ, ನಿನ್ನ ಶಿವಭಕ್ತಿಯು ಎಂತಹದು? ಸೂಳೆಯು ಉಳಿಗದಂತೆ ನಿನ್ನ ಶಿವಭಕ್ತಿಯೇ? ನಿನಗೆ ಅಲ್ಲೊಬ್ಬ, ಇಲ್ಲೊಬ್ಬ ಶಿವನೇ? ನೀವು ದೊಡ್ಡ ಶಿವಶರಣರು, ಮಹಾ ಮಹಿಮರು. ನಿಮ್ಮ ಸೋಮೇಶ್ವರನನ್ನು ಇಲ್ಲಿಯೇ ಬರಿಸಿಕೊಳ್ಳಿರಿ. ನೀವು ಹೋದರೆ ಇಲ್ಲಿ ಪಡಿಯನ್ನು ಅಳಿಯುವವರಾರು? ಎಂದು ನುಡಿದನು. ಸೊಡ್ಡಳ ಬಾಚರಸನು ಬಿಜ್ಜಳನ ಅಣಕದ ಈ ನುಡಿಗಳನ್ನು ಕೇಳಿ ಶಿವನ ನಿಂದೆಯನ್ನು ಬಿಜ್ಜಳನು ಈ ಪ್ರಕಾರ ಮಾಡುತ್ತಾನಲ್ಲಾ ಎಂದು ಖೇದಗೊಂಡು ಶಿವನು ಎಲ್ಲೆಲ್ಲಿಯೂ ಇದ್ದಾನೆಂಬ ಶಿವಶರಣರ ತತ್ವವನ್ನು ಜಗತ್ತಿನಲ್ಲಿ ಸಾರುವೆನೆಂದು ನಿಶ್ಚಯಿಸಿ ಸೋಮನಾಥನನ್ನು ಇಲ್ಲಿಯೇ ಬರಿಸಿಕೊಳ್ಳುವೆನೆಂಬ ದೃಢಭಾವವುಳ್ಳವನಾಗಿ ಕಣಜದಲ್ಲಿ ಪಡಿಯನ್ನು ಅಳಿಯುತ್ತ ಗುಜರಾಥಕ್ಕೆ ಹೋಗುವದನ್ನು ನಿಲ್ಲಿಸಿದನು.

ಸೊಡ್ಡಳ ಬಾಚರಸನು ತನ್ನ ಕಾಯಕದ ರೀತಿಯಂತೆ ಪರಮಾತ್ಮನಲ್ಲಿ ನಿಷ್ಠೆಯನ್ನಿಟ್ಟುಕೊಂಡು ಊಳಿಗವನ್ನು ನಡಿಸುತ್ತಾ ಇರಲು ಪರಮಾತ್ಮನಿಗೆ ಅದರ ಅರಿಕೆಯಾಗಿ ಅವನು ಒಬ್ಬ ಪಡಿಹಾರಿಯ ರೂಪವನ್ನು ಧರಿಸಿ ಬಾಚರಸನು ಧಾನ್ಯವನ್ನು ಅಳಿಯುತ್ತಿದ್ದ ಕಣಜದ ಸಮೀಪಕ್ಕೆಯೇ ಬಂದು ಅವನಿಗೆ ತನ್ನನ್ನು ತೋರಿಸಿಕೊಂಡು ನಾಳೆ ಶಿವರಾತ್ರಿಯ ದಿನ ಸೌರಾಷ್ಟ್ರ ಸೋಮನಾಥನು ಇಲ್ಲಿಗೆ ಬರುವದು ನಿಶ್ಚಯವು. ಅವನನ್ನು ನೀನು ಇಲ್ಲಿಯೇ ಕಾಣುವಿ. ನೀನು ಅವನಿಗೆ ಒಂದು ದೇವಾಲಯವನ್ನು ಕಟ್ಟಿಸು, ಎಂದು ಹೇಳಿ ಹೊರಟು ಹೋದನು. ಪರಮಾತ್ಮನು ಹೀಗೆ ಹೇಳಿದ್ದನ್ನು ಬಾಚರಸನು ಕೇಳಿ ಅಲ್ಲಿದ್ದ ಕಣಜಗಳನ್ನು ಬರಿದು

ಮಾಡಿ ಇಡೀ ದಿವಸ ಸೋಮೇಶ್ವರನ ಧ್ಯಾನದಲ್ಲಿಯೇ ಉಳಿದನು. ಮರುದಿನ ಸೌರಾಷ್ಟ್ರ ಸೋಮೇಶ್ವರನು ಬಿಜ್ಜಳನ ಅರಮನೆಯಲ್ಲಿ ಪ್ರಕಟವಾಗುವನೆಂಬ ಸುದ್ದಿಯು ಪಟ್ಟಣದಲ್ಲಿ ಹಬ್ಬಲು, ಬಸವ, ಚೆನ್ನಬಸವ ಮೊದಲಾದ ಶಿವಶರಣರೂ ಪಟ್ಟಣದಲ್ಲಿಯ ಬಹು ಜನರೂ ಅಲ್ಲಿಗೆ ಬಂದು ಪರಮಾತ್ಮನು ಹೇಗೆ ಉದಯಿಸುವನೆಂಬದನ್ನು ನಿರೀಕ್ಷಿಸುತ್ತ ನಿಂತುಕೊಂಡರು. ಶಿವರಾತ್ರಿಯ ಆ ದಿವಸ ಸಕಾಲದಲ್ಲಿ ದೇವ ದುಂದುಭಿಗಳು ಮೊಳಗಹತ್ತಿದವು. ಅಷ್ಟರಲ್ಲಿ ಸೌರಾಷ್ಟ್ರ ಸೋಮನಾಥನು ಕಣ್ಣಜಗಳಿವ್ದ ಆ ಕೊಟ್ಟಾರದಲ್ಲಿ ಝಗ್ಗನೆ ಪ್ರಕಾಶವಾನನಾಗಿ ಹೊರಬಿದ್ದು ಲಿಂಗರೂಪವಾಗಿ ಹೊಳೆಯಹತ್ತಿದನು. ಬಿಜ್ಜಳನು ತನ್ನ ಅರಮನೆಯಲ್ಲಿ ಹೀಗಾದದ್ದನ್ನು ಕೇಳಿ ಅವನೂ ಅಲ್ಲಿಗೆ ಬಂದು ನಡೆದ ಸಂಗತಿಗಳನ್ನು ತಿಳಿದುಕೊಂಡು ಬಾಚರಸನು ನಿಜವಾಗಿಯೇ ಮಹಿಮನು ಎಂದು ಅವನನ್ನು ಕೊಂಡಾಡುವವನಾದನು. ಆ ಮೇಲೆ ಬಸವಾದಿ ಪ್ರಮಥರು ಆ ಸ್ಥಳದಲ್ಲಿ ಒಂದು ದಿವ್ಯವಾದ ದೇವಾಲಯವನ್ನು ಕಟ್ಟಿಸಿದರು. ಈ ದೇವಾಲಯಕ್ಕೆ ಅಂದಿನಿಂದ 'ಕೊಟ್ಟಾರದ ಸೋಮನಾಥ' ನೆಂಬ ಹೆಸರು ಪ್ರಾಪ್ತವಾಯಿತು.

ಮೇಲಿನ ಘಟನೆಯ ಮೂಲಕ ಬಾಚರಸನ ಮತ್ತು ಬಸವೇಶ್ವರನ ಮಹತ್ವವು ಕಲ್ಯಾಣಪಟ್ಟಣದಲ್ಲಿ ಮೊದಲಿನಕಿಂತಲೂ ಹೆಚ್ಚಿಗೆ ಬೆಳೆಯಿತು. ಬಸವೇಶ್ವರನ ವೈರಿಗಳು ಇದನ್ನು ನೋಡಿ ಸಹಿಸಲಾರದೆ ಅವರನ್ನು ಕುಗ್ಗಿಸಲು ಹೊಸದೊಂದು ಉಪಾಯವನ್ನು ಯೋಜಿಸಿದರು. ಸೊಡ್ಡಳ ಬಾಚರಸನು ಲೆಕ್ಕವನ್ನು ಬರಿಯುವಾಗ ಶಿವಶರಣರ ಪದ್ಧತಿಯ ಪ್ರಕಾರ ಮೊದಲು 'ಓಂ ನಮಃ ಶಿವಾಯ' ಎಂಬ ಷಡಕ್ಷರ ಮಂತ್ರವನ್ನು ಬರೆದು ಕಾರ್ಯಾರಂಭ ಮಾಡುವನು. ಬಸವೇಶ್ವರನ ವಿರೋಧಿಗಳು ಇದನ್ನು ನೋಡಿ ಸಹಿಸಲಾರದವರಾದರು. ಆಗ ಅವರಲ್ಲಿ ೩೭ ಜನರು ಒಂದು ಕಪಟೋಪಾಯವನ್ನು ರಚಿಸಿ ಬಿಜ್ಜಳನಲ್ಲಿಗೆ ಹೋಗಿ, ಬಾಚರಸನು ಧಾನ್ಯದ ಲೆಕ್ಕವನ್ನು ಬರೆಯುವದಿಲ್ಲ. ಅವನು ಲೆಕ್ಕವನ್ನು ಬರಿಯುವದರ ಬದಲು 'ಕೊಟ್ಟದು ನಮಃಶಿವಾಯ, ಕೊಂಡುದು ನಮಃಶಿವಾಯ, ಉಂಡುದು ನಮಃಶಿವಾಯ, ಉಟ್ಟುದು ನಮಃಶಿವಾಯ, ಹೊದ್ದುದು ನಮಃಶಿವಾಯ,

ಹೋದುದು ಬಂದುದು ನಮಃಶಿವಾಯ' ಎಂದು ಲೆಕ್ಕವನ್ನು ಬರಿಯುತ್ತಿದ್ದಾನೆ. ಬಸವೇಶ್ವರನು ಭಂಡಾರಿಯಾಗಿದ್ದರೂ ಅವನು ಇದನ್ನು ಲಕ್ಷಿಸುವದಿಲ್ಲ. ಅವನೂ ಬಾಚರಸನೂ ಕೂಡಿಕೊಂಡು ನಿನ್ನ ಬೊಕ್ಕಸವನ್ನು ಹಾಳುಮಾಡುತ್ತಿದ್ದಾರೆ, ಎಂದು ಮೊದಲಾಗಿ ಕೊಂಡೆಯವನ್ನು ಹೇಳಿದರು.

ಬಿಜ್ಜಳನು ಅದನ್ನು ಕೇಳಿ ೭೭ ಜನ ಕರಣಿಕರನ್ನು ಕರಿಸಿ ಅವರಿಗೆ— ನೀವು ಬಾಚರಸನ ಕೈಯ್ಯಿಂದ ಒಂದು ದಿನದೊಳಗೆ ಲೆಕ್ಕವನ್ನು ತೆಗೆದುಕೊಳ್ಳಿರಿ ಎಂದು ಆಜ್ಞಾಪಿಸಿದನು. ಆಗ ಅವರೆಲ್ಲರು ಬಾಚರಸನಲ್ಲಿಗೆ ಹೋಗಿ ಲೆಕ್ಕವನ್ನು ಒಪ್ಪಿಸಲು ಕೇಳಲಾಗಿ ಅವನು ಬಸವೇಶ್ವರನನ್ನು ಕಂಡು ಲೆಕ್ಕವನ್ನು ಸಿದ್ಧಪಡಿಸಿ ಒಪ್ಪಿಸಲು ನನಗೆ ೧೧ ದಿನಗಳು ಬೇಕು, ಸಾಯಂಕಾಲದೊಳಗಾಗಿ ಇದು ನನಗೆ ಆಗದು, ಎಂದು ಹೇಳಿದನು. ಆಗ ಬಸವೇಶ್ವರನು ಈ ಅನ್ಯಾಯವನ್ನು ನೋಡಿ—ಹಾಗಾದರೆ ೧೧ ದಿವಸಗಳ ವರೆಗೆ ನಾನು ಸೂರ್ಯನು ಚಲಿಸದಂತೆ ಅವನನ್ನು ತಡೆದುಬಿಡುವೆನು, ಅಷ್ಟರಲ್ಲಿ ನೀನು ನಿನ್ನ ಲೆಕ್ಕವನ್ನು ಸಿದ್ಧಪಡಿಸಿ ಒಪ್ಪಿಸು, ಎಂದು ಹೇಳಿದನು. ಬಸವೇಶ್ವರನ ಲಿಂಗಶಕ್ತಿಯ ಮೂಲಕ ಸೂರ್ಯನು ೧೧ ದಿನಗಳ ವರೆಗೆ ಚಲಿಸದೆ ಹೋದನು. ಈ ಅವಧಿಯಲ್ಲಿ ಬಾಚರಸನು ತನ್ನ ಲೆಕ್ಕವನ್ನೆಲ್ಲ ಸಿದ್ಧಪಡಿಸಿ ಅದನ್ನು ಕರಣಿಕರಿಗೆ ಒಪ್ಪಿಸಲು ಅವರು ಅದು ಸರಿಯಾಗಿರುವದನ್ನು ನೋಡಿ ಹಾಗೆಯೇ ಅವರು ಬಿಜ್ಜಳನಿಗೆ ತಿಳಿಸಿ ಹೇಳಿದರು. ಬಿಜ್ಜಳನು ತನಗೆ ಕೊಂಡೆಯವನ್ನು ಹೇಳಿದವರ ಮೇಲೆ ಕೋಪಗೊಂಡು ಅವರನ್ನು ಬೈದನು. ಬಾಚರಸನನ್ನೂ ಬಸವೇಶ್ವರನನ್ನೂ ತನ್ನಲ್ಲಿಗೆ ಬರಮಾಡಿಕೊಂಡು ಅವರನ್ನು ಅತ್ಯಂತವಾಗಿ ಮನ್ನಿಸಿ ಕಳುಹಿಸಿಕೊಟ್ಟನು.

ಈ ಪ್ರಕಾರ ಸೊಡ್ಡಳ ಬಾಚರಸನು ಏಕನಿಷ್ಠೆಯಿಂದ ತನ್ನ ಕಾಯಕವನ್ನು ನಡಿಸುತ್ತಾ ಬಸವೇಶ್ವರನ ಸನ್ನಿಧಿಯಲ್ಲಿ ಶಿವಾನುಭವದಲ್ಲಿ ಕಾಲಕಳೆಯುತ್ತ ಶಿವಶರಣರಲ್ಲಿ ಪ್ರಸಿದ್ಧನಾದನು.

ಸೊಡ್ಡಳ ಬಾಚರಸನು ಸೌರಾಷ್ಟ್ರ ಸೋಮೇಶ್ವರನ ಭಕ್ತನಾದ್ದರಿಂದ ಅವನು ಗುಜರಾಥ ದೇಶದವನಿರಬೇಕೆಂದು ನಮಗೆ ತೋರುತ್ತದೆ. ಅವನು ಪುಲಿಗೆರೆಯ ಆದಯ್ಯನಂತೆ ವ್ಯವಹಾರಕ್ಕೋಸ್ಕರ

ಕರ್ನಾಟಕಕ್ಕೆ ಬಂದು, ಕಲ್ಯಾಣದಲ್ಲಿ ವಾಸಿಸುವವನಾದನು. ಅಲ್ಲಿ ಬಿಜ್ಜಳನ ಅನೆ ಕುದುರೆಗಳಿಗೆ ಧಾನ್ಯವನ್ನು ಪೂರೈಸಿ ಕೊಡುವ ಕಾರ್ಯವನ್ನು ಕೈಕೊಂಡನು.

'ಸೊಡ್ಡಳ' ಅಥವಾ 'ಸೊಡ್ಡಾಳು' ಇದು 'ಸೊಡ್ಡ' ಮತ್ತು 'ಆಳು' ಈ ಎರಡು ಶಬ್ದಗಳು ಕೂಡಿ ಆಗಿರುತ್ತದೆಂದು ತೋರುತ್ತದೆ. 'ಸೊಡ್ಡ' ಇದು 'ಸೌರಾಷ್ಟ್ರ' ಈ ಶಬ್ದದ ತದ್ಭವವು. ಸೊಡ್ಡಳ ಅಥವಾ ಸೊಡ್ಡಾಳು ಎಂದರೆ ಸೌರಾಷ್ಟ್ರ ದೇಶದವ ಎಂದು ಅರ್ಥವಾಗುತ್ತದೆ. ಈ ಶಬ್ದವು ಸೌರಾಷ್ಟ್ರ ಅಥವಾ ಗುಜರಾಥ ದೇಶದಲ್ಲಿ ಅತ್ಯಂತ ಪ್ರಸಿದ್ಧಿ ಹೊಂದಿದ ಸೌರಾಷ್ಟ್ರ ಸೋಮನಾಥನ ಅಥವಾ ಬಾಚರಸನ ದ್ಯೋತಕವಾಗಿರಬಹುದು. ಆದರೆ ಅವನ ವಚನಗಳ ಭಾವವನ್ನು ನೋಡಿದಲ್ಲಿ ಸೌರಾಷ್ಟ್ರ ಸೋಮನಾಥನಿಗೆ ಈ ಮುದ್ರಿಕೆಯು ಅನ್ವಯಿಸುತ್ತದೆಯೇ ಹೊರ್ತು ಬಾಚರಸನಿಗೆ ಅನ್ವಯಿಸುವದಿಲ್ಲ. ಆದ್ದರಿಂದ ಬಾಚರಸನು ಸೌರಾಷ್ಟ್ರ ಸೋಮನಾಥನನ್ನು ಕನ್ನಡ ನುಡಿಯಲ್ಲಿ 'ಸೊಡ್ಡಳಾ' ಎಂದು ಸಂಬೋಧಿಸುತ್ತ ತನ್ನ ವಚನಗಳನ್ನು ನುಡಿದ ಹಾಗೆ ನಮಗೆ ತೋರುತ್ತದೆ.

ಸೊಡ್ಡಳ ಬಾಚರಸನ ವಚನಗಳು ಬಹು ಸುಂದರವಾದವುಗಳು. ಅವುಗಳಲ್ಲಿ ಕೆಲವುಗಳನ್ನು ಮಾತ್ರ ನಾವು ಮಾದರಿಗಾಗಿ ಇಲ್ಲಿ ಕೊಟ್ಟಿದ್ದೇವೆ.

ವಚನಗಳು.

(೧) ಜವನಿದ್ದಾನೆ. ಜವನ ಪಟ್ಟಣವಿದೆ. ಮಾಮರ ಹೂಮರ ನಿದೆ, ತೋಮರನಿದೆ ನೋಡಯ್ಯ. ಅವ ಕಾರ್ಯವಾದಡೂ ದೇವ ಕಾರ್ಯವ ಮಾಡುವುದು. ಸಾವ ಕಾರ್ಯ ತಪ್ಪದು. ನೀನು ಕೆಡಬೇಡ ಕಂಡಾ. ಬೇಗ ನಂಬಿ ಪೂಜಿಸು ಸೊಡ್ಡಳ ದೇವನ ಮರುಳೇ.

(೨) ಶಿವಾ ಎಂದು ಓದದವನ ಓದು ಗಿಳಿಯೋದು. ಶಿವ ನಿಮ್ಮನಾರಾಧಿಸದವನ ಮನೆ ಕೆಮ್ಮನೆ. ಶಿವ ನಿಮ್ಮ ನೋಡದವನ ಕಣ್ಣು ಹೀಲಿಯ ಕಣ್ಣು. ಶಿವ ನಿಮ್ಮ ಹಾಡದವನ ಬಾಯಿ ಕನ್ನದ

ಶಿವಾನುಭವ

ವರ್ಷ ೨೦	ಮಾರ್ಚ-ಎಪ್ರೀಲ ೧೯೪೬.	ಸಂಚಿಕೆ ೬

ಶಿವಾನುಭವದ ಸೊಗಸು.

(ಕಥಾರೂಪವಾದುದು)

(ಲೇಖಕ:— ಶ್ರೀಯುತ ಸಿ. ನಾ. ಮಹಾಂತಣ್ಣನವರ ರಿಟಾಯರ್ಡ ಅಸಿ॥ ಎಜ್ಯುಕೇಶನಲ್ ಇನಸ್ಪೆಕ್ಟರ, ಪುಣೆ)

ಆದು ಬ್ರಿಟಿಷ—ಮೊಗಲಾಯಿಗಳ ನಡುವಿನ ಹದ್ದು. ವಿಜಾಪುರ ಜಿಲ್ಲೆಯ ಪೂರ್ವಭಾಗ. ಹುನಗುಂದ ತಾಲೂಕಿನಲ್ಲಿಯ ಒಂದು ಗ್ರಾಮ. ಆ ಗ್ರಾಮದ ಹೆಸರು ಕೋಡೀಹಾಳ. ಗ್ರಾಮಕ್ಕೆ ಒಂದೇ ಮೈಲಿನ ಅಂತರದ ಮೇಲೆ ಸಜ್ಜನಗುಡ್ಡೆಂಬ ಮೊಗಲಾಯಿಯ ಹಳ್ಳಿ. ಅದು ಇನಾಮು ಗ್ರಾಮ. ಆ ಇನಾಮುದಾರರ ಊರ ಹೊರಗೆ ಸಣ್ಣ ದೇವಾಲಯ. ಆ ದೇವಾಲಯದಲ್ಲಿ ಸದ್ಯಕ್ಕೆ ಪ್ರಸಿದ್ಧರಾದ ಶರಣಮ್ಮನವರ ವಾಸ. ಇವರ ಹುಟ್ಟು ಹಾಲುಮತವಾದರೂ ನಡೆ ವೀರಶೈವತ್ವ. ಇವರ ಈಗಿನ ವಯಸ್ಸು ಅಜಮಾಸು ಅರವತ್ತು ವರುಷ. ಬಾಲ್ಯದಲ್ಲಿ ತಂದೆಯನ್ನೂ ತಾರುಣ್ಯದಲ್ಲಿ ತಾಯಿಯನ್ನೂ ಕಳಕೊಂಡರು. ಬ್ರಹ್ಮಚರ್ಯ ವ್ರತವನ್ನು ಪಾಲಿಸುವವರು. ಗುಡುದೂರು ಗುರುಗಳಿಂದ ಲಿಂಗವನ್ನು ಪಡೆದವರು. ಶಿವಾಚಾರ ಶಿವಪೂಜೆ ಶಿವಭಕ್ತಿ ಶಿವಧ್ಯಾನ ಶಿವಜ್ಞಾನಗಳನ್ನು ಬೆಳೆಯಿಸುತ್ತ ಶಿವಶರಣೆಯೆಂಬ ಹೆಸರು ಪಡೆದವರು. ಇವರ ಸನ್ನಿಧಿಗೆ ದಿನಂಪ್ರತಿ ಬರುವ ಬಾಲಬಾಲಿಕೆಯರು ಗುರುಹಿರಿಯರು ಭಕ್ತಿ ಭಾವವನ್ನರಿತು ಶಿವಾಚಾರದ ನಡೆನುಡಿಗಳನ್ನು ಬೀರುವವರು.

ಇಂಥ ಶಿವಶರಣೆಯ ಸನ್ನಿಧಿಯ ಮೂಲಕ ಕೋಡೀಹಾಳ ಗ್ರಾಮವು ಶಿವಾಚಾರ ಸಂಪತ್ತಿನಿಂದ ತುಂಬಿ ತುಳುಕುವದು ಆಶ್ಚರ್ಯ

ವಲ್ಲ. ಅಲ್ಲಿ ಮಳೆಬೆಳೆಗಳಿಗೆ ಕೊರತೆಯಿಲ್ಲ. ಬಟ್ಟೆಬರೆಗಳಿಗೆ ಕಡಿವಿ ಇಲ್ಲ. ಈ ಗ್ರಾಮದಲ್ಲಿ ಹೊಸಪದ್ಧತಿಯ ಗೊಳ್ಳುಗಾಂಭೀರ್ಯಗಳೂ ಡೌಲು ಡಾಂಭಿಕಗಳೂ ಅಂತಃಕಲಹಗಳೂ ಇಲ್ಲವೇ ಇಲ್ಲ.

ಹೀಗಿರಲು ಈ ಊರ ಲಿಂಗವಂತ ಕಾಮುದಾರರೊಬ್ಬರು ೧೫-೨೦ ವರ್ಷಗಳ ವರೆಗೆ ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಸರಕಾರಿ ನೌಕರಿ ಮಾಡಿ ದೇಹದಾರ್ಢ್ಯವು ಕಡಿಮೆಯಾಗಲು ರಜೆಪಡಕೊಂಡು ಈ ಗ್ರಾಮಕ್ಕೆ ಕುಟುಂಬ ಸಹವಾಗಿ ಬಂದರು. ಅವರಿಗೆ ೧೫ ವರ್ಷದ ಒಬ್ಬಳೇ ಒಬ್ಬ ಮಗಳು. ಅವಳ ಹೆಸರು ಸುಶೀಲೆ. ಆಕೆಯು ಪುಣೆ ಸಾತಾರೆಗಳಲ್ಲಿ ಹುಟ್ಟಿ ಬೆಳೆದವಳಾಗಿದ್ದಳು. ತಂದೆಯವರು ದೊಡ್ಡ ಕಾಮುದಾರರಿದ್ದದರಿಂದ ಜಾತಿ-ನೀತಿ-ರೀತಿಗಳ ಭಯವು ಅವಳಿಗಿದ್ದಿಲ್ಲ. ಸಿನೇಮಾದೊಳಗಿನ ಸ್ತ್ರೀಪಾರ್ಟಿನ ಶಿಸ್ತು, ಕ್ರೈಸ್ತನ್ನರ ಊಟಪಾಟಗಳ ಕಸ್ತು, ಸ್ವಚ್ಛಂದ ವೃತ್ತಿಯ ಛಿಸ್ತುಗಳು ಮನೆಮಾಡಿದ್ದವು. ಮತದಿಂದ ವೀರಶೈವಳಾದರೂ ವೀರಶೈವತ್ವದ ಚಿಹ್ನಗಳು ಅವಳಲ್ಲಿ ಚಿಮುಕ್ಕುತ್ತಿರಲಿಲ್ಲ. ಪಾಪ! ಅವಳೇನು ಮಾಡಿಯಾಳು? ಪರಿಸ್ಥಿತಿಯಂತೆ ವಸ್ತುಸ್ಥಿತಿ. ಇದನ್ನು ಬದಲಿಸುವರಾರು?

ಅದೇ ಊರಲ್ಲಿ ಹಳೇ ನಡತೆಯ ನೀಲಮ್ಮ ಎಂಬಾಕೆಯು ಕನ್ನಡ ೪ನೇ ಇಯತ್ತೆಯ ವರೆಗೆ ಕಲಿತು ಶಾಲೆ ಬಿಟ್ಟವಳಾಗಿದ್ದಳು. ಆಕೆಯ ತಂದೆತಾಯಿಗಳ ಉದ್ಯೋಗವು ಒಕ್ಕಲತನ. ಆಕೆಯ ವಯಸ್ಸು ಹದಿನಾರು. ಅವರ ಭೂಮಿಯು ಎಂಟು ಕೂರಿಗೆ. ಮನೆಯಲ್ಲಿ ಎರಡು ಎತ್ತು, ಒಂದು ಆಕಳು, ಒಂದು ಎಮ್ಮೆ. ಅವರಲ್ಲಿ ಹೈನವು ತಪ್ಪುತ್ತಿರಲಿಲ್ಲ. ಕುಟ್ಟುವ ಬೀಸುವ ಒಗೆಯುವ ನೀರುತರುವ ಪಾತ್ರೆಗಳನ್ನು ತಿಕ್ಕುವ ಕೆಲಸಗಳು ಮನೆಯವರಿಂದಲೇ. ನೀಲಮ್ಮನು ದಿನದ ಎಲ್ಲ ಕೆಲಸಗಳಲ್ಲಿ ತಾಯಿಗೆ ನೆರವಾಗಿ ತಾಯಿಯೊಡನೆ ದಿನಂಪ್ರತಿ ಶರಣಮ್ಮನವರ ದರ್ಶನಕ್ಕೆ ಹೋಗಿ ಬರುತ್ತಿದ್ದಳು. ಅಲ್ಲಿ ನಡೆಯುವ ಪುರಾತನರ ಕಥೆಗಳನ್ನೂ ವಚನಗಳ ಸಾರಾಂಶವನ್ನೂ ಕೇಳುತ್ತಿದ್ದಳು. ವಸ್ತ್ರಾಭರಣಗಳು ವೀರಶೈವ ಪದ್ಧತಿಯನ್ನು ಪ್ರಸಿದ್ಧಿಸುತ್ತಿದ್ದವು.

ಊರನಾರಿಯರಿಲ್ಲ ದಿನಾಲು ಶರಣಮ್ಮನವರ ದರ್ಶನಕ್ಕೆ ಹೋಗುವರೆಂಬ ವಾರ್ತೆಯನ್ನು ಸುಧಾರಣೆಯ ಸುಶೀಲೆಯು ಕೇಳಿ ತನ್ನ ನೆರೆ

ಮನೆಯ ರಾಚವ್ವನೊಡನೆ ಅವಳೂ ಹೋದಳು. ಅಲ್ಲಿ ದಿನಾಲು ಸಂಜೆಯ ೫ ಗಂಟೆಯಿಂದ ೬ರ ವರೆಗೆ ಶಿವಾನುಭವವು ಸಾಗುತ್ತಿತ್ತು. ಹಳ್ಳಿಯಲ್ಲಿ ಶಾಲೆ ಕಲಿತ ಈಗಿನ ಯುವತಿಯರೇ ದಿನಾಲು ಓದುವವರು. ಶರಣಮ್ಮನವರು ಬಿಚ್ಚಿ ಹೇಳುವವರು. ಅಲ್ಲಿ ಓದುವವರೊಳಗೆ ಹಳೆ ನಡತೆಯ ನೀಲಮ್ಮ ಮುಂದಾಳುವೆಂದರೂ ಅಡ್ಡಿ ಇಲ್ಲ. ಅವಳು ಅಕ್ಕಮಹಾದೇವಿಯ ವಚನಗಳನ್ನು ಓದಿ ತನಗಾದ ಅನುಭವವನು ಹೇಳುತ್ತಿದ್ದಳು. ಹೀಗಾಗಿ ಎಲ್ಲರ ಆದರಕ್ಕೆ ಅವಳು ಪಾತ್ರಳಾಗಿದ್ದಳು.

ಸುಶೀಲೆಗೆ ಅಲ್ಲಿಯ ಸ್ಥಿತಿಗತಿಯನ್ನು ನೋಡಿ ಆಶ್ಚರ್ಯವೆನಿಸಿತು. ಅವಳು— ನಾನು ಇಂಗ್ಲಿಷ ಮರಾಠಿ ಕನ್ನಡ ಭಾಷೆಗಳ ಬಹಳಷ್ಟು ಬುಕ್ಕುಗಳನ್ನು ಓದಿರುವೆನು. ಓದಿದವರಿಂದ ಕ್ಲಿಷ್ಟ ವಿಷಯಗಳನ್ನು ಕೇಳಿರುವೆನು. ಈ ಊರಿಗೆ ಬಂದು ಹದಿನೈದು ದಿವಸಗಳಾದವು. ಇಲ್ಲಿ ನುಡಿಗಿಂತ ನಡೆಯೇ ಹೆಚ್ಚಿಗಿದೆ. ಪೊಳ್ಳು ಗೊಳ್ಳು ಸುಳ್ಳುಗಳಿಗೆ ಅವಕಾಶವಿಲ್ಲ. ನಯಭಯ ಭಕ್ತಿಗಳೂ ತಾರತಮ್ಯವೂ ರೀತಿನೀತಿಗಳೂ ಮನನೀಯವಾಗಿವೆ. ಶ್ರೀ ಶರಣಮ್ಮನವರ ಪಾದದರ್ಶನದಿಂದ ನನ್ನ ಅಂತಃಕರಣಗಳು ಕರಗಿ ನೀರಾಗಿ ಶಾಂತಿಸಾಗರದಲ್ಲಿ ತೇಲುತ್ತಲಿವೆ. ಇಲ್ಲಿ ನಿಜವಾದ ಶಾಂತಿ ಇದೆ ಎಂದು ಆಕೆಗೆ ತೋರಹತ್ತಿತು. ಆದ್ದರಿಂದ ಇಲ್ಲಿ ಎಲ್ಲರ ಕೂಡ ದಿನಂಪ್ರತಿ ಆಗಮಿಸುವಾ, ಎಂದು ಮನದಲ್ಲಿ ನಿಶ್ಚಯಿಸಿದಳು. ಅವಳು ಬಂದದಿನ ಪಂಚತತ್ವದ ವಿವರಣೆಯನ್ನು ಶರಣಮ್ಮನವರಿಂದ ಕೇಳಿ ಕೌತುಕಪಟ್ಟಳು.

ಮರುದಿನ ಜಗದುತ್ಪತ್ತಿಯ ವಿಷಯವಾಗಿ ವಚನಶಾಸ್ತ್ರವನ್ನು ಓದುವಾಗ, ಸಹಜದಿಂದ ನಿರಾಲಂಬವೂ ನಿರಾಲಂಬದಿಂದ ನಿರಾಳವೂ ನಿರಾಳದಿಂದ ನಿರವಯವೂ ನಿರವಯದಿಂದ ಅದಿಯೂ ಅದಿಯಿಂದ ಶರಣನೂ ಶರಣನಿಂದ ಪರಮೇಶ್ವರನೂ ಪರಮೇಶ್ವರನಿಂದ ಸದಾಶಿವನೂ ಸದಾಶಿವನಿಂದ ಈಶ್ವರನೂ ಈಶ್ವರನಿಂದ ರುದ್ರನೂ ರುದ್ರನಿಂದ ವಿಷ್ಣುವೂ ವಿಷ್ಣುವಿನಿಂದ ಬ್ರಹ್ಮನೂ ಬ್ರಹ್ಮನಿಂದ ಸಕಲ ಚರಾಚರಗಳೂ ಹುಟ್ಟಿದವೆಂದು ಹೇಳುವದಾಯಿತು. ಇದರ ಅರ್ಥವಿವರಣೆಯು 'ಶಿವಾನುಭವ ಶಬ್ದಕೋಶ'ದ ಗ್ರಂಥದಲ್ಲಿದ್ದರೂ ಅಂಗನೆಯರ ಅನುಭವಕ್ಕೆ ಅದನ್ನ ತಂದುಕೊಡಲು ಸಿದ್ಧರಾರೂ ಇರಲಿಲ್ಲ.

ಶರಣಮ್ಮನವರ ಶಿಶುವಾದ ನೀಲಮ್ಮನು ಹೇಳಿದ್ದು — ನಾನು ಮನೆಯಿಂದ ಇಲ್ಲಿಗೆ ಬರುವಾಗ ದಾರಿಯಲ್ಲಿ ಕುಂಬಾರ ಕಲ್ಲವ್ವನು ತನ್ನ ಮನೆಯ ಕಟ್ಟೆಯ ಮೇಲೆ ಕುಳಿತು ಕೆಸರನ್ನು ಹದ ಮಾಡುತ್ತಿದ್ದಳು. ಒಂದು ಮಣೆ ಇಟ್ಟು ನನಗೆ ಸಹಜ ಕುಳ್ಳಿರ ಹೇಳಿದಳು. ಅವಳ ಮನದಲ್ಲಿ ನನ್ನನ್ನು ಕರೆಯಬೇಕೆಂಬುದು ಇದ್ದಿಲ್ಲ. ನಾನು ಅಲ್ಲಿ ಕೂತೇ ಇಲ್ಲಿಗೆ ಬರಬೇಕೆಂಬುದಿದ್ದಿಲ್ಲ. ನಾನು ಸಹಜ ಹೋಗಿ ನಿಂತರೂ ಮಣೆಯನ್ನು ಆಶ್ರಯಿಸಬೇಕಾಯಿತು. ಮುಂದೆ ನಾನು ಕಿಟಕಿಯೊಳಗಿಂದ ಕಲ್ಲವ್ವನ ಗಂಡನು ತಿಗಣಿಯ ಮೇಲೆ ಕೆಸರು ಇಟ್ಟು ಕೈಚಾತುರ್ಯದಿಂದ ಗಡಿಗೆ ಮಾಡುವದನ್ನು ಕೂತಲ್ಲೇ ಕಂಡೆನು. ಆಗ ನನ್ನ ವಿಚಾರಾಂತ್ಯದಲ್ಲಿ ಕುಂಬಾರ ಕಲ್ಲವ್ವನು ನನ್ನನ್ನು ಯಾವ ಉದ್ದೇಶದಿಂದಲೂ ಕರೆದಿಲ್ಲ. ನಾನಾದರೂ ಯಾವ ಕಾರಣಾಂತರದಿಂದ ಅಲ್ಲಿ ಕೂತಿಲ್ಲ. ಇದೇ ಸಹಜವು. ನಾನು ಕುಳಿತದ್ದು ನಿರಾಲಂಬ ಸ್ಥಿತಿಯು, ಆಗ ನನ್ನ ಮನಸ್ಸಿನಲ್ಲಿ ಯಾವ ಕಲ್ಪನೆಯೂ ಇರಲಿಲ್ಲ. ಇದೇ ನಿರಾಳ ಸ್ಥಿತಿಯು. ಕೋಣೆಯೊಳಗೆ ಹಣಕಿ ನೋಡಿದಾಗ ನಿರವಯವು. ಕೆಸರು ಆದಿಯು. ಘಟವನ್ನು ರಚಿಸುವ ಕಲ್ಪನೆಯೇ ಶರಣಸ್ಥಿತಿಯು. ಘಟವು ಪರಮೇಶ್ವರ. ಘಟದೊಳಗಿನ ಬೈಲು ಸದಾ ಶಿವಸ್ಥಿತಿಯು. ಘಟದೊಳಗಿನ ವಾಯುವೇ ಈಶ್ವರ. ಗಡಿಗೆಯ ರೂಪೇ ರುದ್ರ. ಗಡಿಗೆಯ ಇರುವಿಕೆಯೇ ವಿಷ್ಣು. ಗಡಿಗೆಯ ಹುಟ್ಟುವಿಕೆಯು ಬ್ರಹ್ಮ. ಈ ಪ್ರಕಾರ ಆಗ್ಗೆ ಅವಳು ಶಿವಾನುಭವದ ತತ್ವಗಳಿಂದ ಆಕೆಗೆ ತೋಚಿದ ಅನುಭವವನ್ನು ವಿವೇಚಿಸಿದಳು.

ತೋರುವ ಜಗತ್ತು ಜಗದೀಶನ ಲೀಲೆಯೆಂದೂ ಅದು ಪೃಥ್ವಿ, ಆಪ್, ತೇಜ, ವಾಯು, ಆಕಾಶ ಸೂರ್ಯ ಚಂದ್ರ ಆತ್ಮರುಗಳಿಂದೊಡಗೂಡಿ ನಾಮರೂಪಕ್ರಿಯೆಗಳಿಂದ ಕಂಗೊಳಿಸುವದೆಂದೂ ಬ್ರಹ್ಮಾಂಡದಂತೆ ಪಿಂಡಾಂಡವೆಂದೂ ಪಿಂಡಸ್ಥಲದೊಳಗೆ ನಾವೆಲ್ಲ ನಿಂತು ನಿರೀಕ್ಷಿಸುವಾ ಎಂದೂ ಮರುದಿನದ ವಿಷಯದ ಉಪೋದ್ಘಾತವು ಉದ್ಘೋಷಿಸಲ್ಪಟ್ಟಿತು.

"ಮಣಿಗಳ ಸೂತ್ರದಂತೆ ತ್ರಿನಯನ ನೀನಿಪ್ಪೆಯಯ್ಯ. ಎಣಿಸುವಡೆ ತನು ಭಿನ್ನ. ಆತ್ಮನೊಬ್ಬನೇ. ಅಣುರೇಣು ಮಧ್ಯದೊಳು ಗುಣಭರಿತ ನೀನೆಂದು ಮಣಿಯುತಿಪ್ಪೆನಯ್ಯ ರಾಮನಾಥಾ."

ಆತ್ಮವು ಅಮರವಿದ್ದರೂ ಶರೀರವು ನಶಿಸಿದಾಗ ಅಂತರಿಕ್ಷದೊಳಗೆ ಬಿದಾಡಿ ಈಶ್ವರನ ತಿರೋಧಾನ ಕೃತ್ಯದಿಂದ ಮಳೆಯ ಹನಿಗಳೊಳು ಬೆರೆತು ಭೂಮಿಯೊಳು ಬಿದ್ದು ಆ ಭೂಮಿಯೊಳು ಬೆಳೆದ ಫಲಗಳ ಸ್ವೀಕಾರದಿಂದ ದಂಪತಿಗಳ ನಿಮಿತ್ತಮಾಡಿ ಆತ್ಮಜನು ಲಿಂಗರೂಪನಾಗಿ ನಿರ್ಮಾಣನಾಗುವನು. ಇದರಂತೆ ಅಂಡಜ ಪಿಂಡಜ ಜರಾಯುಜ ಉದ್ಭಿಜ್ಜಗಳ ಉತ್ಪತ್ತಿಯಾಗುವದು. ಇದಕ್ಕೆ ಪಂಚತತ್ವಗಳೂ ಶಿವನ ಅಗಾಧವಾದ ಮಹಾಕೃತ್ಯಗಳ ಮಹಿಮೆಯೂ ಕಾರಣಗಳೆಂದು ಹೇಳಬಹುದು. ಆದರೂ ಅಣುರೇಣುಗಳಲ್ಲಿ ಶಿವನು ಇರುವನೋ ಇಲ್ಲವೋ ಎಂಬುದನ್ನು ವಿಚಾರದಲ್ಲಿ ತರುವಾ. ಒಂದು ಬಿದಿರು ಕಂಬಿಯು ಅನೇಕ ಅಣುರೇಣುಗಳಿಂದ ಕೂಡಿ ಗಟ್ಟಿಯಾದ ಬಿದಿರಾಗಿದೆ. ಒಂದು ಉದ್ದವಾದ ಕೋಲನ್ನು ತೆಗೆದುಕೊಂಡು ನಿಡಿದಾಗಿ ಸೀಳಿ ಎರಡು ಮಾಡಿ ಒಂದನ್ನು ಕೆಳಗಿಟ್ಟು ಮತ್ತೊಂದರಿಂದ ಮುಸೆಯಲು ಕಿಡಿಯು ಹುಟ್ಟುವದು. ಆ ಕಿಡಿಯೇ ಆತ್ಮಾಂಶವೆಂದು ಯಾಕೆ ಅನ್ನಬಾರದು? ಇದನ್ನರಿತು ನಮ್ಮ ದೇವರ ದಾಸಿಮಾರ್ಯರು "ನಿಡಿದೊಂದು ಕೋಲನು ಕಡಿದು ಎರಡು ಮಾಡಿ, ಅಡಿಯ ಹೆಣ್ಣುಮಾಡಿ ಒಡೆತನವ ಗಂಡು ಮಾಡಿ ನಡುವೆ ಹೊಸೆದೊಡೆ ಹುಟ್ಟುವ ಕಿಚ್ಚು ಗಂಡೋ ಹೆಣ್ಣೋ ಹೇಳಾ ರಾಮನಾಥಾ" ಎಂದು ಹಾಡಿಕೊಂಡಿದ್ದಾರೆ. ಇದಲ್ಲದೆ ಮರದೊಳಗೆ ಮಂದಾಗ್ನಿಯು ಉರಿಯದಂತಿರಿಸಿದೆ. ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ. ಶರೀರದೊಳಗೆ ಆತ್ಮನ ಆರುಕಾಣದಂತಿರಿಸಿದೆ. ನೀನು ಬೆರಸಿದ ಭೇದಕ್ಕೆ ಬೆರಗಾದೆನಯ್ಯ ರಾಮನಾಥಾ." ಎಂದು ಶಿವನಿರುವ ಕುರುಹನ್ನು ಸ್ಥೂಲಕ್ಕೆ ಸ್ಥೂಲವಾಗಿಯೂ ಸೂಕ್ಷ್ಮಕ್ಕೆ ಸೂಕ್ಷ್ಮವಾಗಿಯೂ ನಿರೂಪಿಸಿದ್ದಾರೆ. ಇದನ್ನೆಲ್ಲ ಮನದಂದು ನೀಲಮ್ಮನು ಪಿಂಡಸ್ಥಲವನ್ನು ಇನ್ನೂ ಹೆಚ್ಚಾಗಿ ಮಂಡಿಸಿದಳು.

ನನೆಯೊಳಗೆ ಮನೆಮಾಡಿ ನಿಂತ ಪರಿಮಳದ ಪುಂಜದ ತೆರವಿದು. ಕಾರಮೇಘ ಮಾಲೆಯೊಳು ಮುಳುಮುಳುಗಿ ಏಳುವ ಮಿಂಚಿನ ಸಂಚಯದ ಹೋಲಿಕೆಯಿದು. ಸಾಗರವನೇ ಆಗರವ ಮಾಡಿಕೊಂಡ ಕಿಚ್ಚಿನ ಕೆಚ್ಚನ್ನು ಪೋಲುಪದಿದು. ಕನ್ನೆಯೊಳು ಮುಂದೋರದೆ ಸಂದಿರ್ದ ಸ್ನೇಹದ ಪರಿಯಿದು. ನೊರೆವಾಲೊಳಗೆ ಒದಗಿರ್ದ ಮಾನವರಿಗೆಲ್ಲ ಮಾಜದೆ ಅರುಹುವ ಅಚ್ಚ ತುಪ್ಪಿನ ಕಂಪಿನ ಪರಿಯಿದು. ಬಗೆಬಗೆಯ

ಬಣ್ಣದ ಹಣ್ಣುಗಳೊಳು ಹರಿದಾಡುವ ರಸದ ರುಚಿಯಂತಿದು. ಚಂದ್ರಕಾಂತ ಶಿಲೆಯೊಳಡಗಿ ನಿಂದಿರ್ದ ಉದಕದ ಪರಿಯಿದು. ಚಿನ್ನಾದದೊಳು ಚಿಮುಕುವ ಆನಂದದ ಅಂದವಹ ಮಂದಿರವಿದು. ಧಾತ್ರಿಯನೆ ವ್ಯಾಪಿಸಿದ ನೇತ್ರಬಿಂದುವಿನೊಳು ಸಂದಿರ್ದ ಸುಖದ ಸಾಗರವಿದು. ಶ್ರೋತ್ರದೊಳು ಸುಳಿದಾಡಿ ಮನದೊಳು ಮೂಡಿ ನಾಲಿಗೆಯೊಳು ನಲಿದಾಡುವ ಮೂಲಮಂತ್ರವಿದು. ನಾಸಿಕದೊಳು ನುಸುನುಸುಳಿ ಮುಸುಮುಸುಳಿ ಮುತ್ತುವ ವಾಸನೆಯ ಆಸನವಿದು. ಲೀಲೆಯಿಂದ ನಾಲಿಗೆಯೊಳು ನಲಿನಲಿದು ನರ್ತಿಪ ರುಚಿಯ ನಿಚಯದೊಳು ನಿಂತಿರ್ದ ನಿಗಮಾಗಮ ಮೂರ್ತಿಯಿದು. ಭುವನವನೆ ವ್ಯಾಪಿಸಿದ ಬಯಲೊಳು ಬೆರೆದ ತ್ವಕ್ಕಿನ ತೆಕ್ಕೆಯೊಳು ಸಿಕ್ಕ ಸರ್ವಾಂತರ್ಯಾಮಿಯಿದು. ಭಕ್ತಿ ಭಾವವೆಂಬ ಭವನದೊಳು ನೆಲೆಗೊಂಡು ನಿಂತ ನವನೀತವಿದು. ಶರಣನ ಸದುಹೃದಯವೆಂಬ ಸರಸಿಯೊಳು ತುಂಬಿ ತುಳುಕುವ ಕರುಣಾಮೃತದ ರಸದೊಳೋಲಾಡುವ ಓಂಕಾರವಿದು.

ಹೀಗೆ ಶಿವಾನುಭವವು ಶರಣಮ್ಮನವರ ಸನ್ನಿಧಿಯಲ್ಲಿ ಸದಾ ನಡೆಯುತ್ತಿರಲು ಸುಶೀಲೆಯು ಶಿವಾನುಭವ ಶ್ರವಣಕ್ಕೆ ಹೋಗದೆ ಇರಲಿಲ್ಲ. ಸತ್ಸಹವಾಸದಿಂದ ಆಚಾರವಿಚಾರಗಳ ವಿಮರ್ಶೆಯು ಓರಿಗೆಯ ಗೆಳತಿಯರಲ್ಲಿ ನಡೆಯಲು ಪ್ರಾರಂಭಿಸಿತು. ವೀರಶೈವಾಚಾರ ಕ್ರಿಯೆಗಳ ನಡೆನುಡಿಗಳ ಕಾರಣಾಂತರಗಳನ್ನು ಕೇಳಿಕೊಳ್ಳುವ ಕುತೂಹಲವು ಹೆಚ್ಚಾಯಿತು. ಅಂದು ಮಹಾಶಿವಯೋಗ. ಸುತ್ತಲಿನ ಹಳ್ಳಿಯ ಭಕ್ತಜನರ ಆಗಮನ, ಶರಣಮ್ಮನವರ ಸನ್ನಿಧಿ, ಆಚಾರವಂತರ ಆಗಮನ, ಶಿವಸ್ತೋತ್ರ, ಶಿವಕೀರ್ತನೆಗಳ ಶ್ರವಣ. ಇಷ್ಟಾದ ಬಳಿಕ ಪ್ರವಚನಗಳೂ ಜರಿಗಿಸಲ್ಪಟ್ಟವು. ಆ ಪ್ರವಚನಗಳ ಮಾಲೆಯಲ್ಲಿ ವೀರಶೈವ ಕ್ರಿಯಾಚಾರದ ವಿಷಯವೂ ವಿವರಿಸಲ್ಪಟ್ಟಿತು. ಸುಶೀಲೆಗೆ ಸದ್ಯಕ್ಕೆ ಬೇಕಾದ ವಿಷಯವೂ ಇದೇ ಆಗಿತ್ತು. ಇದನ್ನು ಏಕಾಗ್ರಚಿತ್ತದಿಂದ ಅವಳು ಕೇಳತೊಡಗಿದಳು.

ವೀರಶೈವಂಗೆ ಆಚಾರಗಳ ಅವಶ್ಯಕತೆ ಏಕೆ? ಆಗಲದಿರುವ ಆಷ್ಟಾವರಣಗಳೇಕೆ? ಅವುಗಳ ಅಂತರ್ಯಗಳಲ್ಲೇನಿದೆ? ಎಂಬ ವಿಚಾರವನ್ನು ಅಬಾಲವೃದ್ಧರಿಗೆ ತಿಳಿಯುವಂತೆ, ಹೊಳೆಯುವಂತೆ, ಹೃದಯದಲ್ಲಿ ಅಳಿಯುವಂತೆ ನಡೆಯಿಸಲಾಯಿತು.

ನಮ್ಮ ಶರೀರವು ಆರೋಗ್ಯದಿಂದ ಇರಬೇಕಾದರೆ ಯೋಗ್ಯ ಆಹಾರವೂ ತಕ್ಕ ಕಾಯಕವೂ ಸಾಕಷ್ಟು ನಿದ್ರೆಯೂ ಬೇಕು. ಮುಂಜಾನೆ ನಾವೆಲ್ಲರೂ ಕೈಕಾಲು ಕಣ್ಣು ಮೂಗು ಬಾಯಿ ಹಲ್ಲು ಮುಂತಾದ ರಂಧ್ರಗಳ ಸ್ವಚ್ಛತೆಯನ್ನು ಚನ್ನಾಗಿ ಮಾಡುತ್ತೇನೆ. ಬೈದೊಳೆದುಕೊಂಡು ಮಡಿಯ ಬಟ್ಟೆಗಳನ್ನು ಉಟ್ಟುಕೊಂಡು ಯಥಾಮತಿ ಇಷ್ಟಲಿಂಗದ ಪೂಜೆಯನ್ನು ನಡೆಸಿ ಮುಂಜಾನೆ ೭ ಗಂಟೆಗೆ ಕಾಯಕಕ್ಕೆ ಕೈಮೊಡಗಿಸುತ್ತೇವೆ. ನಂತರ ೫-೬ತಾಸಿನ ಮೇಲೆ ಊಟದ ಅಪೇಕ್ಷೆಯು ಆಗಹತ್ತುವದು. ಅಜಮಾಸು ೧೦ರಿಂದ ೧ ಗಂಟೆಯೊಳಗೆ ಊಟಮಾಡಿ ಕೆಲಹೊತ್ತು ವಿಶ್ರಾಂತಿಯನ್ನು ತೆಗೆದುಕೊಂಡು ಸಂಜೆಯ ೫ ಗಂಟೆಯ ವರೆಗೆ ಅಂದಿನ ಕಾಯಕವನ್ನು ಕಡೆಗಾಣಿಸಿ ಬಂದು ಸಂಜೆಯ ಊಟವನ್ನು ೮ ಗಂಟೆಯ ಒಳಗೆ ಮಾಡಿ ರಾತ್ರಿ ೧೦ ಗಂಟೆಯಿಂದ ಬೆಳಿಗ್ಗೆ ೪--೫ ಗಂಟೆಯ ವರೆಗೆ ನಿದ್ರೆ ಮಾಡುತ್ತೇವೆ. ಈ ೨೪ ತಾಸುಗಳ ಅವಧಿಯಲ್ಲಿ ಆತ್ಮನು ಬೆಳಗಿನ ಶರೀರ ಸ್ವಚ್ಛತೆಯಿಂದಾಗುವ ಆನಂದ, ಮಧ್ಯಾಹ್ನದ ಪ್ರಸಾದದ ಆನಂದ, ರಾತ್ರಿಯ ನಿದ್ರೆಯ ಆನಂದ ಇವುಗಳಲ್ಲಿ ಅಲೆದಾಡುವನು.

ಇದೇ ಅವಧಿಯಲ್ಲಿ ೨೧೬೦೦ ಉಸಿರುಗಳು ನಡೆಯುತ್ತವೆ.

ಹೃದಿ ಪ್ರಾಣೋ ಗುದೇ ಪಾನಃ ಸಮಾನೋ ನಾಭಿಮಂಡಲೇ
ಉದಾನಃ ಕಂಠದೇಶೇ ಸ್ಯಾತ್ ವ್ಯಾನಃ ಸರ್ವ ಶರೀರಿಗಃ

ವ್ಯಾನವಾಯು ಶರೀರದ ತುಂಬ ವ್ಯಾಪಿಸಿದೆ. ಅಪಾನವಾಯು ನಾಭಿಮಂಡಲದ ಕೆಳಗೆ ಗುದ ಪ್ರದೇಶದಲ್ಲಿದ್ದು ತನ್ನ ಶಕ್ತಿಯಿಂದ ಮಲವನ್ನು ಹೊರದೂಡುತ್ತದೆ. ಸಮಾನವಾಯು ನಾಭಿ ಪ್ರದೇಶದಲ್ಲಿದ್ದು ಸರ್ವ ಶರೀರಕ್ಕೂ ಅನ್ನ ನೀರನ್ನು ಹಂಚುತ್ತದೆ. ಹೃದಯಸ್ಥಾನದಿಂದ ಕಂಠ ಪ್ರದೇಶದ ವರೆಗೆ ಪ್ರಾಣವಾಯು ಪ್ರಾಣಧಾರಣದ ಕೆಲಸ ಕೈಕೊಂಡಿರುತ್ತದೆ. ಉದಾನವಾಯು ಕಂಠಪ್ರದೇಶದಲ್ಲಿದ್ದು ಸಪ್ತಸ್ವರಕ್ಕೂ ವಾಗ್ಬಲಕ್ಕೂ ಸಹಾಯ ಮಾಡುತ್ತದೆ. ಈ ಐದು ವಾಯುಗಳು ರಕ್ತಾಶಯಕ್ಕೆ ಘುಪ್ಪುಸದ್ವಾರಾ ಸಂಬಂಧಪಟ್ಟು ರಕ್ತವಾಹಿನಿಗಳಿಗೂ ಸಂಬಂಧಪಟ್ಟಿರುತ್ತವೆ.

ಗುದಪ್ರದೇಶದ ೨ ಜಘನಗಳೂ ನಾಸಿಕದ್ವಾರದ ೨ ಹೊರದಳಗಳೂ ಕೂಡಿ ೪ ದಳಗಳು. ಇವು ಆಧಾರಸ್ಥಾನಕ್ಕೆ ಸಂಬಂಧಿಸಿರುತ್ತವೆ. ಇದರಂತೆ ಷಟ್‌ಸ್ಥಲಗಳ ದಳಗಳು ೪, ೬, ೧೦, ೧೨, ೧೬, ೨ ಒಟ್ಟು ೫೦ ಆಗುವವು. ೫೦ ದಳದ ೨೪ ತಾಸಿನ ೨೧೬೦೦ ಉಸಿರುಗಳಲ್ಲಿ ೧ ದಳಕ್ಕೆ ೪೩೨ ಉಸಿರು ಆಗುವವು. (೪೩೨×೪) ಆಚಾರಲಿಂಗದ ಜಪಗಳು, (೪೩೨×೬) ಗುರುಲಿಂಗದ ಜಪಗಳು, (೪೩೨×೧೦) ಶಿವಲಿಂಗದ ಜಪಗಳು, ನಾವು ಮಾಡಿದರೂ ಮಾಡದಿದ್ದರೂ ಅವ್ಯಾಹತವಾಗಿ ನಡೆದೇ ಇರುತ್ತವೆ. ಪ್ರತಿಯೊಬ್ಬರು ಆಚಾರಲಿಂಗ ಗುರುಲಿಂಗಗಳ ಜಪವೇಳೆಗಳಲ್ಲಿ ಅಂದರೆ ಮುಂಜಾನೆ ೧೧ ಗಂಟೆಯೊಳಗೆ ಶಾರೀರಿಕ ಸ್ವಚ್ಛತೆಯನ್ನೂ ಸತ್ಯಾಯಕನನ್ನೂ ಮಾಡಲೇಬೇಕು. ಇದುವೇ ವೀರಶೈವರ ಇಷ್ಟಲಿಂಗದ ಪೂಜೆ.

೪೩೨೦ ಉಸಿರುಗಳೇ ಇಷ್ಟಲಿಂಗದ ಜಪಸಂಖ್ಯೆಯು. ಒಂದು ತಾಸಿನಲ್ಲಿ ೯೦೦ ಉಸಿರುಗಳಾಗುವವು. ಅಜಮಾಸು ಮುಂಜಾನೆ ೫ ತಾಸು ಅಂದರೆ ೧೧ ಗಂಟೆಯೊಳಗೆ ಇಷ್ಟಲಿಂಗದ ಪೂಜೆ ಮುಗಿದು ನಂತರ ಪ್ರಾಣಲಿಂಗದ ಪೂಜೆಗೆ ಆರಂಭವಾಗುವದು. ಇಷ್ಟಲಿಂಗದ ಪೂಜೆಯಲ್ಲಿ ಭೃತ್ಯಾಚಾರವು ಅಡಕವಾಗಿದೆ. ಸ್ವಂತ ಶರೀರದ ಭೃತ್ಯನಾಗಿ ಶಾರೀರಿಕ ಕಾರ್ಯಗಳು ಸುಸೂತ್ರವಾಗಿ ನಡೆಯುವಂತೆ ಹೇಗೆ ನೋಡಿಕೊಳ್ಳುವೆವೋ ಹಾಗೆಯೇ ವೀರಶೈವ ಸಮಾಜಪುರುಷನಿಗೆ ಪ್ರತಿಯೊಬ್ಬ ಭಕ್ತನು ಭೃತ್ಯಾಚಾರಿಯಾಗಲೇಬೇಕು. ತ್ರಿಕಾಲದ ಲಿಂಗಪೂಜೆಗಳಲ್ಲಿ ಮುಂಜಾನೆಯ ಪೂಜೆಯು ಎಲ್ಲಕ್ಕೂ ಹೆಚ್ಚಿನದು. ಸತ್ಯಾಯಕವು ಇಷ್ಟಲಿಂಗ ಪೂಜೆಯೊಳಗೇ ಗಣನೆಯು. ಮಧ್ಯಾಹ್ನದ ಪ್ರಾಣಲಿಂಗದ ಪೂಜೆಯೂ ಸಂಜೆಯ ಭಾವಲಿಂಗದ ಪೂಜೆಯೂ ಇಷ್ಟಲಿಂಗದ ಪೂಜೆಯನ್ನೇ ಅವಲಂಬಿಸಿವೆ.

ಶಿವಭಕ್ತನು ದಿನಾಲು ಮುಂಜಾನೆ ತನ್ನ ತನುಶುದ್ಧಿ ಮನಶುದ್ಧಿ ಭಾವಶುದ್ಧಿಗಳಿಂದ ಕಾಯಾಕಷ್ಟವಾಡಿ ತಂದ ಕಾಯಕದಿಂದಲೇ ಜಂಗಮಾರಾಧನೆ ಮಾಡಿ ಜಂಗಮಮುಖದಿಂದ ಪ್ರಾಣಲಿಂಗಕ್ಕೆ ಪಾದೋದಕ ಪ್ರಸಾದಗಳನ್ನು ಅರ್ಪಿಸಬೇಕಾಗಿದೆ. ಅಡಿಗೆ ಮಾಡುವ ಮಡದಿಯ ಮನೆ ಮೀಸಲು, ಮನ ಮೀಸಲು, ಕಣ್ಣು ಮೀಸಲು, ಕಾಲು

ಮೀಸಲು, ಜ್ಞಾನ ಮೀಸಲು, ಇರಲೇಬೇಕು. ಈ ಮೀಸಲು ಬೀಸರವೋ ಗದಿದ್ದರೆ ಕೂಡಿಕೊಂಡಿಪ್ಪ ಈಶನೆಂದು ಶಿವಶರಣರು ಹಾಡಿಕೊಂಡಿದ್ದಾರೆ.

ಮನುಷ್ಯನಿಗೆ ಮಧ್ಯಾಹ್ನಕ್ಕೆ ಊಟವು ಬೇಕೇಬೇಕು. ಭವಿಗಳಿದ್ದರೆ ಜೀವಧಾರಣ, ಭಕ್ತನಿದ್ದರೆ ಪ್ರಾಣಲಿಂಗಪೂಜೆ, ಪ್ರಾಣಲಿಂಗಾರ್ಪಿತ, ಪ್ರಾಣಲಿಂಗ ತೃಪ್ತಿ. ಈ ಪ್ರಾಣಲಿಂಗದ ಪೂಜೆಯಲ್ಲಿ ಅಷ್ಟಾವರಣ ಕ್ರಿಯೆಯೇ ಮಹತ್ವದ್ದು. ಇದು ಭವಿ (ವಿಷಯಿ)ಗಳಿಗೆ ತೀರ ಅರಿದು. ಈ ಕ್ರಿಯೆಯು ಭವಿಗಳ ಕಣ್ಣಿಗೆ ಎಂದೂ ಬೀಳುವದಿಲ್ಲ. ಈ ಅಷ್ಟಾವರಣ ಕ್ರಿಯೆಯನ್ನು ಸ್ಥೂಲದಲ್ಲಿ ಪಾದೋದಕ ಪ್ರಸಾದ ಪಡೆಯುವದಕ್ಕೂ ಸೂಕ್ಷ್ಮದಲ್ಲಿ ಒಕ್ಕುಮಿಕ್ಕು ಪ್ರಸಾದ ಪ್ರಸನ್ನತೆಗೂ ಪ್ರತಿಯೊಬ್ಬ ವೀರಶೈವ ಸದ್ಭಕ್ತನು ಅವ್ಯಾಹತವಾಗಿ ನಡಿಸಲೇಬೇಕು. ಅಂತೇ ವೀರಶೈವನಿಗೆ ಅಷ್ಟಾವರಣವು ಅಂಗವಾಗಿ ಪಂಚಾಚಾರಗಳು ಪ್ರಾಣವಾಗಿ ಏಕಲಿಂಗನೈಷ್ಠಿಕವಾಗಿರುವವು.

ಒಂದು ಮನೆಯಲ್ಲಿ ಪಡಸಾಲೆ ನಡುಮನೆ ದೇವರಮನೆ ಅಡಿಗೆಯ ಮನೆ ಬಚ್ಚಲಮನೆಗಳೆಂದು ೫ ಭಾಗಗಳು ಇರುವವೆಂದು ತಿಳಿಯುವಾ. ಶರೀರದ ಆರೈಕೆ, ಅನ್ನ, ಕಾಯಕಗಳಿಗೆ ಮನೆ ಬೇಕು. ಮುಂಜಾನೆ ಎದ್ದು ಎಲ್ಲ ಭಗಿನಿಯರು ಮನೆಯ ಎಲ್ಲ ಕೋಣೆಗಳ ಸೋಡೆ ಬಾಗಿಲು ಕಿಟಕಿಗಳ ಧೂಳುದೂಸು ಜಾಡಿಸಿ ನೆಲವನ್ನು ಉಡುಗುವರಷ್ಟೇ! ಮತ್ತು ಅಂಗಳ ಹಿತ್ತಲಗಳನ್ನು ಸ್ವಚ್ಛ ಮಾಡುವರು. ಅಂಗಳದಲ್ಲಿ ಉಪಯೋಗಿಸಿದ ಕಸಬರಿಗೆಯನ್ನು ಪಡಸಾಲೆಯಲ್ಲಿ ಉಪಯೋಗಿಸುವದಿಲ್ಲ. ಪಡಸಾಲೆಯಲ್ಲಿ ಉಪಯೋಗಿಸಿದ ಕಸಬರಿಗೆಯನ್ನು ದೇವರ ಮನೆಯಲ್ಲಿ ಉಪಯೋಗಿಸುವದಿಲ್ಲ. ಬಚ್ಚಲ ಮನೆಯ ಕಸಬರಿಗೆಯನ್ನು ಅಡಿಗೆಯ ಮನೆಗೆ ಉಪಯೋಗಿಸುವದಿಲ್ಲ. ಇದರ ಕಾರಣಗಳು ಎಲ್ಲರಿಗೆ ಸಹಜ ಹೊಳೆದಿರಬಹುದು. ಅಂಗಳದಲ್ಲಿ ಉಗುಳೋಣ ಸೀನೋಣವೂ ಪಡಸಾಲೆಯಲ್ಲಿ ಕಾಲುಜೋಡುಗಳೂ ಬಚ್ಚಲಲ್ಲಿ ಉಗುಳಿದ ಮತ್ತು ಕೈಕಾಲು ತೊಳೆದ ಹೊಲಸೂ ಇರುತ್ತವೆ. ಆದರಿಂದ ಆಯಾ ಭಾಗಗಳ ಆಚಾರದಲ್ಲಿ ಅನುಸರಿಸಿದ ಕೈಗಳನ್ನು ತೊಳಕೊಂಡೇ ಹೆಚ್ಚಿನ ಗೃಹದ ಕೆಲಸಕ್ಕೆ ಕೈಹಾಕಬೇಕಾದೀತು. ಇದನ್ನರಿತು ಹೊರಬಳಿಕೆ ಒಳಬಳಿಕೆಗಳಾಗಿವೆ. ಹೊರಗೆ ಅಡ್ಡಾಡಿ

ಬಂದರೆ ಕಾಲು ತೊಳೆದುಕೊಂಡೇ ಒಳಗೆ ಹೋಗುವ ಪರಿಪಾಠ ಬಿದ್ದಿದೆ. ಈಗಿನ ಸುಧಾರಕರು ಕೈದೊಳೆದುಕೊಳ್ಳದೆ ಒಳಬಳಿಕೆಯ ತಂಬಿಗೆ ಕೊಡಗಳನ್ನು ಮುಟ್ಟುವ ಸ್ವಚ್ಛಂದ ವೃತ್ತಿಗೆ ಬಿದ್ದಿರುವರು. ಶಿವನಿಗೆ ಸಲ್ಲತಕ್ಕ ಪ್ರಸಾದದ ಕ್ರಿಯೆಯೇ ಅಡಿಗೆಯು ಮನೆಯಲ್ಲಿ ಸಾಗುವದು. ಅಂದಬಳಿಕ ಒಲೆಸಾರಣೆ ನೆಲಸಾರಣೆ ಶಿವಪೂಜಾಗೃಹಸಾರಣೆಗಳು ಬೇಕಲ್ಲವೇ! ಪಾತ್ರೆ ಕಾಳು ಹಿಟ್ಟು ಪಲ್ಲೆಗಳು ಶುದ್ಧವಿರಬೇಕಲ್ಲವೇ? ಇವನ್ನೆಲ್ಲ ಸಿದ್ಧಶುದ್ಧ ಮಾಡಿಟ್ಟುಕೊಂಡು ಸ್ನಾನದಿಂದ ಶುಚಿಭೂತ ಳಾಗಿ ಪಾಕಂಗೆಯ್ಯಬೇಕಲ್ಲವೇ? ಅಡಿಗೆಗೆ ಮಡಿನೀರು ಬೇಕಲ್ಲವೇ? ಮಡಿನೀರು ಮಡಿಪಾತ್ರೆಯೊಳು ಹಾಕಿ ಕಾಯುಕದ ಕಾಳನ್ನು ಕುದಿಯಲಿಟ್ಟು ಬುಡಕ್ಕೆ ಕಿಡಿದೇವತೆಯು ಪ್ರಜ್ವಲಿಸಲು ಎಡೆಗೆ ಕಡುಬೆಡಗಿನ ದೇಹಾರ ಸಿದ್ಧಗೊಳ್ಳುವದು. ಈ ದೇಹಾರದ ಕ್ರಿಯೆಯೇ ಅಷ್ಟಾವರಣ ಕ್ರಿಯೆಯು. ಇದಕ್ಕನುಕೂಲವಾದ ಎಲ್ಲ ನಡೆಯೇ ಆಚಾರಗಳು.

ಬಚ್ಚಲದ ಸ್ವಚ್ಛತೆಯು ಭೃತ್ಯಾಚಾರವು. ಸರ್ವ ಕೋಣೆಗಳ ಸ್ವಚ್ಛತೆಯು ಸದಾಚಾರವು. ಅಡಿಗೆಗೆ ತಕ್ಕ ಸಹಕಾರವೇ ಲಿಂಗಾಚಾರವು. ಅಡಿಗೆಗೆ ನೊಣಕಣಗಳು ಬಾರದಂತೆ ಮಾಡುವದೇ ಗಣಾಚಾರವು. ಗುರುಲಿಂಗಜಂಗಮದ ಎಡೆಗೆ (ಪ್ರಸಾದಕ್ಕೆ) ಅನುಕೂಲವಾದ ಆಚಾರವೇ ಶಿವಾಚಾರವು.

ಇವೆಲ್ಲ ಆಚಾರಗಳನ್ನು ಶರೀರಕ್ಕೂ ಮನಕ್ಕೂ ಮನೆಗೂ ಸಂಬಂಧಿಸಿ ಹೇಳುವದಾಯಿತು. ಶರೀರದ ಅಥವಾ ಮನೆಯ ಆಚಾರಗಳೇ ಸಮಾಜದಲ್ಲಿ ಬೇರೂರಿವೆ. ಶಿವಭಕ್ತರಿಂದಧಿಕರಿಲ್ಲ, ಎನಗಿಂತ ಕಿರಿಯರಿಲ್ಲ, ಎಂಬ ವಾಕ್ಯವು ಭೃತ್ಯಾಚಾರವನ್ನು ಬಿತ್ತರಿಸುವದು. ಆಚಾರವೇ ಸ್ವರ್ಗ, ಅನಾಚಾರವೇ ನರಕ, ಎಂಬ ವಾಕ್ಯವು ಆಚಾರಗಳ ಮಹತ್ವವನ್ನು ಒತ್ತಿ ಹೇಳುವದು. ಆಚಾರಃ ಪ್ರಥಮೋಧರ್ಮಃ ಎಂಬ ವಾಕ್ಯವು ಧರ್ಮದ ಆದಿಯನ್ನು ಅಚ್ಚೊತ್ತುವದು. ಸದಾಚಾರವು ಸರ್ವಮಾನವರಿಗೂ ಬೇಕು. ಸದಾಚಾರವನ್ನು ಅನುಸರಿಸಿದ ಎಲ್ಲ ರಾಷ್ಟ್ರಗಳೂ ಶಾಂತರೀತಿಯಿಂದ ಬಾಳುತ್ತವೆ. ಇದರಿಂದ ಲೌಕಿಕ ಪಾರಮಾರ್ಥಿಕ ಸುಖಸಾಧನಕ್ಕೆ ಅನುಕೂಲವಾಗುತ್ತದೆ. ಲಿಂಗಾಚಾರದಿಂದ ಲಿಂಗಾನುಭಾವವು ಬೆಳೆಯುತ್ತದೆ. ಗಣಾಚಾರದಿಂದ ಮತಾ

ಭಿಮಾನವು ಕಂಡುಬರುತ್ತದೆ. ಶಿವಾಚಾರದಿಂದ ಸತ್ಕ್ರಿಯೆಯು ಸಾಗಿ ಲಿಂಗಾಂಗ ಸಾಮರಸ್ಯಜ್ಞಾನವಾಗಿ ಅಜ್ಞಾನಾನಂದದೊಳು ತಾನೇ ತಾನಾಗುವನು. ಆಂತೇ ಆಚಾರವಂತರು ಬಹಿರಂಗದ ಕ್ರಿಯಾಷ್ಟಾವರಣಗಳನ್ನು ಅವ್ಯಾಹತವಾಗಿ ಸಾಗಿಸಿ ಜ್ಞಾನಾಷ್ಟವರಣಗಳನ್ನೂ ಐಕ್ಯಾಷ್ಟಾವರಣಗಳನ್ನೂ ಅನುಭವಿಸುವರು.

ಅಂದಿನ ಶಿವಾನುಭವ ಪ್ರವಚನವು ಸುಶೀಲೆಗೆ ಬಲು ಸೊಗಸಿಸಿತು. ಭೃತ್ಯಾಚಾರದಿಂದ ಭಕ್ತಿಯೂ ಸದಾಚಾರದಿಂದ ಸದ್ಧರ್ಮ ಸನ್ನೀತಿ, ಸನ್ಮಾರ್ಗ, ಸದಿಚ್ಛೆ, ಸದ್ವಾಸನೆ, ಸಚ್ಛೀಲ, ಸದ್ವರ್ತನೆಗಳೂ ಲಿಂಗಾಚಾರದಿಂದ ಲಿಂಗನಿಷ್ಠೆಯೂ, ಲಿಂಗಪ್ರೇಮವೂ, ದೈವೀ ಸಂಪತ್ತೂ, ಗಣಾಚಾರದಿಂದ ಸದ್ಗುಣಗಳ ಗಟ್ಟಿಯೂ ಶಿವಾಚಾರದಿಂದ ಶಿವಯೋಗ ದೃಷ್ಟಿಯೂ ದೃಢವಾಗಿ ತನುವ ತಾಗಿ ಮನವನಿಂಬುಗೊಂಡು ಭಾವದೊಳು ಬಿಂಬಿಸಿದವು.

ಹಾಗೆಯೇ ಸುಶೀಲೆಯು ಶರಣಮ್ಮನವರ ಸಂಗದಿಂದಲೂ 'ಶಿವಾನುಭವ ಶಬ್ದಕೋಶ' ಗ್ರಂಥದ ಸಹಾಯದಿಂದಲೂ, ಅಕ್ಕಮಹಾದೇವಿಯ ವಚನಾನುಭವಗಳಿಂದಲೂ, ವಿಷಯಸುಖಾನಂದವು ಅಸ್ಥಿರವೆಂದು ಮನಗಂಡಳು. ಸಂಗನಬಸವಣ್ಣನವರ ವಚನಗಳಿಂದ ದೀಕ್ಷೆಗಳ ದಿಶೆಗಳನ್ನು ಕಂಡು ಕ್ರಿಯಾಚಾರಗಳನ್ನು ಅರಿದು ಆಚರಿಸಿ ಏಕೋತ್ತರ ಶತಸ್ಥಲದಿಂದ ಷಟ್‌ಸ್ಥಲಾಂತರ್ಗತ ನೂರೊಂದು ಸ್ಥಲಗಳ ಲಿಂಗಾಂಗ ಸಾಮರಸ್ಯ ಜ್ಞಾನಾನಂದವನ್ನು ಹೊಂದುವವಳಾದಳು.

ಶರಣರ ಇಷ್ಟಲಿಂಗ.

(ಲೇಖಕ:— ಶಿವಪ್ಪ ಗುರುಶಿದ್ದಪ್ಪ ಉಮದಿ, ಹುಬ್ಬಳ್ಳಿ)

ಶ್ರೀಮದ್ಬಸವಾದಿ ಶರಣರು ಎಷ್ಟೋ ಕಾರ್ಯಗಳನ್ನು ಮಾಡಿ ತಮ್ಮ ಅನುಭವಕ್ಕೆ ಅಳವಟ್ಟಿದ್ದನ್ನೇ ವಚನರೂಪಗಳಿಂದ ಹೊರಹೊಮ್ಮಿದ್ದಾರೆ. ಆ ವಚನಗಳನ್ನೇ ರಾ। ಬ। ಹಳಕಟ್ಟಿಯವರು ಶ್ರಮಪಟ್ಟು ಬಯಲಿಗೆ ತಂದು ಉಪಕಾರವನ್ನು ಮಾಡಿದ್ದಾರೆ. ವಚನಗಳು ಬಯಲಿಗೆ ಬಂದದರಿಂದಲೇ ಸಮಾಜದಲ್ಲಿ ವಿಚಾರಕ್ರಾಂತಿಯಾಗಿ ಮೂಢನಂಬಿಕೆಯು ಎಷ್ಟೋ ಕಡಿಮೆ ಆಗಿರುತ್ತದೆ.

ಇತ್ತಿತ್ತಲಾಗಿ ಶಿವಾನುಭವ ಪತ್ರಿಕೆಯಲ್ಲಿ ಶಿವಶರಣರ ಚರಿತ್ರೆಗಳು ಪ್ರಕಟವಾಗಲಿಕ್ಕೆ ಹತ್ತಿರುತ್ತವೆ. ಅವರ ಚರಿತ್ರೆಗಳಿಂದ ನೋಡಲಾಗಿ ಅವರಲ್ಲಿ ಕೆಲವರು ತಮ್ಮ ಇಷ್ಟಲಿಂಗದಲ್ಲಿಯೇ ಭಕ್ತಿಯನ್ನು ಇಟ್ಟು ನಡೆದುಕೊಂಡವರು ಇರುತ್ತಾರೆ. ಉಳಿದವರು ಸ್ಥಾವರಲಿಂಗಗಳಲ್ಲಿ ಭಕ್ತಿಯನ್ನು ಇಟ್ಟು ಸ್ಥಾವರಲಿಂಗಗಳಲ್ಲಿಯೇ ತಮ್ಮ ಮೇಲುತರಗತಿಯನ್ನು ಹೊಂದಿದ್ದು ಕಂಡುಬರುತ್ತದೆ. ಅದು ಅಲ್ಲದೆ ಸಂಪುಟ ೨೦ ಸಂಚಿಕೆ ೪ರ ಶಿವಾನುಭವದಲ್ಲಿ ಸ್ಫುಟವಿಚಾರಗಳಲ್ಲಿ ಶ್ರೀಶೈಲ ಸಂಸ್ಥಾನದ ಶ್ರೀಮನ್ನಿಡುವಾಮಿಡಿ ಮಠದ ಸ್ವಾಮಿಗಳು ಇಷ್ಟಲಿಂಗದ ಬಗ್ಗೆ ಅಭಿಪ್ರಾಯಪಟ್ಟಿರುವದೇನಂದರೆ— "ಬಸವಾದಿ ಪ್ರಮುಥರು ಸ್ಥಾವರಲಿಂಗವನ್ನು ಒಪ್ಪಿರುವದರಿಂದ ಅದನ್ನು ಅಲ್ಲಗಳೆಯಲು ಬರಲಾರದು." "ಇಷ್ಟಲಿಂಗವು ಸ್ಥಾವರವೆಂದೇ" ಶಿವಶರಣರ ವಾದ. (ಇದು ಜಂಗಮ ದೃಷ್ಟಿಯಿಂದ) "ಹುರಳಿಲ್ಲ ಹುರಳಿಲ್ಲ ಲಿಂಗಾರ್ಚನೆ" ಇತ್ಯಾದಿ ಕೆಲವು ವಚನಗಳು ಇದನ್ನು ಪುಷ್ಟೀಕರಿಸುತ್ತವೆ. ..... "ಇಷ್ಟಲಿಂಗ" ಇದರ ಅರ್ಥ 'ತನಗೆ ಇಷ್ಟವಾದ ದೇವ' ಎಂಬುದೆ ಸಹಜಾರ್ಥ. ಶಾಸ್ತ್ರಗಳ ರೀತಿಯಲ್ಲಿ 'ಇಷ್ಟವಾದುದನ್ನು ಕೊಡುವ ಲಿಂಗ'ವೆಂದರೂ ಸರಿಯೇ. ಹೀಗೆ ತಮ್ಮ ಅಭಿಪ್ರಾಯವನ್ನು ಬರೆದಿರುತ್ತಾರೆ. ಆದರೆ ಈ ವಿಷಯವಾಗಿ ನಾನು ಶಿವಶರಣರ ವಚನಗಳನ್ನೇ ಆಧಾರವಾಗಿಟ್ಟುಕೊಂಡು ಕೆಳಗಿನ ವಿಷಯಗಳನ್ನು ಬರೆದಿದ್ದೇನೆ.

(೧) 'ಇಷ್ಟಿ' ಅಂದರೆ ಪೂಜೆ. ಪೂಜೆಗೆ ಅರ್ಹವಾದ ಲಿಂಗವು ಇಷ್ಟಲಿಂಗವು. ಮನದಿಷ್ಟವನ್ನು ನೀಡಲೂ ಪಡೆಯಲೂ ಸಾಧನವಿದ್ದುದರಿಂದ ಅದು ಇಷ್ಟಲಿಂಗವೆನಿಸಿತು. ಶಿವಶರಣರು ತಮ್ಮ ವಚನಗಳಲ್ಲಿ ಲಿಂಗವ ಮುಟ್ಟಿದ ಕೈವೀಸಲು ಎಂದು ಹೇಳಿದ್ದಾರೆ. ಕಾರಣ ಈ ಕೈಯಿಂದ ಅನಿಷ್ಟವು ಆಗಬಾರದೆಂದೇ ಶಿವಶರಣರ ವಿಚಾರ. ಅನಿಷ್ಟದೊಡನೆ ಹೊರಾಟವೇ ಇಷ್ಟಲಿಂಗದ ಪೂಜೆ. ಆ ಅನಿಷ್ಟವು ಹೊರಗಿರಲಿ, ಒಳಗಿರಲಿ, ಮಠದಲ್ಲಿ ಇರಲಿ, ಮನೆಯಲ್ಲಿ ಇರಲಿ, ಮನಬೊಳಗೆ ಇರಲಿ, ಅದೆಲ್ಲವೂ ಅನಿಷ್ಟವೇ. ಅನಿಷ್ಟವು ವೈಯಕ್ತಿಕವಾಗಿರಲಿ, ಸಾಮಾಜಿಕವಾಗಿರಲಿ ಎಲ್ಲವೂ ಅನಿಷ್ಟವೇ? ಇಂತಹ ಅನಿಷ್ಟವಳಿದು ಇಷ್ಟವು (ಕಲ್ಯಾಣ) ಉಳಿಯಬೇಕು; ಇದುವೆ ಇಷ್ಟಲಿಂಗ ಪೂಜೆ. ಅಂಗದ ಮೇಲೆ ಧರಿಸುವ ಇಷ್ಟಲಿಂಗವು ಪೂಜೆಗೆ ಅರ್ಹವಾದದ್ದು ಇರುತ್ತದೆ. ಇಷ್ಟಲಿಂಗವನ್ನು ಧರಿಸಿ ಪೂಜೆಯನ್ನು ಮಾಡದೆ ತೀರಲಿಲ್ಲ. ಅದಕ್ಕೆ ತಕ್ಕ ನೀತಿ ನಡಾವಳಿಗಳು ಇಲ್ಲದಿದ್ದರೆ ಶರಣರು ಒಪ್ಪುವದಿಲ್ಲ. ಅಂತೆಯೇ ಬಸವಂಣನವರು "..... ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ ನೀ ಸಾಕ್ಷಿಯಾಗಿ ಭೀ ಎಂಬೆ ಕೂಡಲ ಸಂಗಮದೇವಾ" (ಲಿಂಗವಾದರೂ ಲಾಂಛನವೇ. ವಚನದಲ್ಲಿ ಲಿಂಗ ಲಾಂಛನಧಾರಿಯಾಗಿ ಎಂದು ಬಂದದೆ) ಎಂದು ಅಂದಿದ್ದಾರೆ. ಬರೇ ಭಕ್ತಿಯನ್ನು ಮಾಡಿದರೆ ಒಪ್ಪುವವರು ಅಲ್ಲ. ಸದಾಚಾರ ಸದ್ಭಕ್ತಿ ಇಲ್ಲದವರ ಆರಾಧನೆ ದಂಡ ಅಂತ ಹೇಳಿದ್ದಾರೆ.

(೨) ಶಿವಭಕ್ತನು ಇಷ್ಟಲಿಂಗವನ್ನು ಧರಿಸಿದ ಮೇಲೆ ಸ್ಥಾವರ ಲಿಂಗಗಳಿಗೆ ಭಕ್ತಿಭಾವದಿಂದ ನಡೆದುಕೊಳ್ಳಬೇಕೋ ಬೇಡವೋ ಎಂಬುದನ್ನು ನೋಡೋಣ. ಲಿಂಗಾಯತ, ಲಿಂಗವಂತ, ಲಿಂಗಾಂಗಿ ಎಂಬ ಶಬ್ದಗಳು ಶರಣನು ಸದಾ ಲಿಂಗವನ್ನು ಕೂಡಿದವನೆಂದು ಸೂಚಿಸುತ್ತವೆ. ಸ್ಥಾವರಲಿಂಗಪೂಜೆಯು ಶರಣನಿಗೆ ವರ್ಜ್ಯ. ಯಾಕಂದರೆ ಅದು ಸಕಾಮ ಭಕ್ತಿಗೆ ಕಾರಣವಾದುದು. ಇಷ್ಟಲಿಂಗವು ಪಾಷಾಣವಲ್ಲ. ಅದು ತನ್ನ ಕಳೆಯ ಸಾಕಾರವು. ಶಿಷ್ಯನ ಸ್ವವಿಮರ್ಶಶಕ್ತಿಯೇ ಚಿತ್ಶಕ್ತಿಯುಂದರುಹಿ ಅದನ್ನು ಕಲ್ಲಲ್ಲಿಟ್ಟು ಕಳೆಯಾಗಿ ತೋರುವಾತನೇ ಗುರು. ಶಿಷ್ಯನ ಭಾವದ ಮರೆಯ ಬೆಳಕನ್ನು ಗುರುವು ಕ್ರಿಯಾ ಮುಥನದ್ವಾರಾ ಹೊರಗೆಡವಿ ನಿನ್ನಂತರಂಗದ ನಿಜವೇ ಇದೆಂದು ಅರುಹಿ

ಕರದಲ್ಲಿ ಇರಿಸುವನು. ಗುರು ಮತ್ತು ಶಿಷ್ಯನ ಬೆಂಬಳಿಯಲ್ಲಿ ಹುಟ್ಟಿದ ಇಷ್ಟ ಲಿಂಗಕ್ಕೆ ಶರಣನ ಕರವೇ ಪೀಠ. ಅಂಗಳ ಪೀಠವಾದ ಲಿಂಗವನ್ನು ಶರಣನು ಪೂಜಿಸನು. ಯಾಕಂದರೆ ವಿಶ್ವವ್ಯಾಪಿಯಾದ ಪರಮಾತ್ಮನ ಶಕ್ತಿಯು ಶರಣನ ಪಿಂಡದಲ್ಲಿಯೇ ಇದ್ದು ಕರದಲ್ಲಿ ಸಣ್ಣಾಗಿ ಬಿಡುವದು. ಇದಕ್ಕೆ ಶ್ರೀ ಬಸವಂಣನವರು ''ಜಗದಗಲ ಮುಗಿಲಗಲ ನಿಮ್ಮಗಲ ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ. ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ. ಅಪ್ರಮಾಣ ಅಗೋಚರ ಅಪ್ರತಿಮ ಲಿಂಗವೇ ನೀವೆನ್ನ ಕರಸ್ಥಲದಲ್ಲಿ ಚುಳುಕಾದಿರಯ್ಯ.'' ಎಂದು ತಮ್ಮ ಅಂಗೈಯೊಳಗಿನ ಇಷ್ಟಲಿಂಗಕ್ಕೆ ಸಂಬೋಧಿಸಿದ್ದಾರೆ. ಮತ್ತು ವಚನ ''ಸದ್ಭಕ್ತರಾದವರು ಸ್ಥಾವರಲಿಂಗವಂ ಭಜನೆಯು ಮಾಡಲಾಗದು. ವನದಲ್ಲಿ ಸ್ಥಾವರ ಘನವೆಂದು ನೆನೆಯಲಾಗದು. ಅದೇನು ಕಾರಣವೆಂದಡೆ ಆದಿ ಅನಾದಿಯಿಂದತ್ತತ್ತವಾದ ಮಹಾಘನವಸ್ತುವನ್ನು ಶ್ರೀ ಗುರುಸ್ವಾಮಿ ಭೇದಿಸಿ ತಂದು, ಕೈಯಲ್ಲಿ ಇಷ್ಟಲಿಂಗವೆನಿಸಿ ಕರಸ್ಥಳಕೆ ಕೊಟ್ಟ ಬಳಿಕ ಆ ಲಿಂಗದಲ್ಲಿ ಕ್ಷೇತ್ರಗಳುಂಟೆಂದು ಭಾವಿಸಿ ಮುಕ್ತಿಯ ಪಡಿಯಲರಿಯದೆ ಖಂಡಿತ ಬುದ್ಧಿಯಿಂದೆ ಬೇರೆ ಮುಕ್ತಿಯ ಪಡೆವೆನೆಂದು ಕಂಡ ಕಂಡ ತೀರ್ಥಕ್ಷೇತ್ರಂಗಳಿಗೆಡೆಯಾಗಿ ತೊಳಲಿ ಬಳಲುವ ಭ್ರಷ್ಟ ಭವಿಗಳಿಗೆ ನರಕವೇ ಪ್ರಾಪ್ತಿಯಯ್ಯಾ ಅಖಂಡೇಶ್ವರ'' ಮತ್ತು ಅಕ್ಕಮಹಾದೇವಿಯು ''.....ಇಷ್ಟಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಶರಣೆಂದಡೆ ತಡೆಯದೆ ಹುಟ್ಟಿಸುವ ಶ್ವಾನನ ಗರ್ಭದಲ್ಲಿ...ಗುರು ಕೊಟ್ಟ ಇಷ್ಟಲಿಂಗದಲ್ಲಿಯೇ ಎಲ್ಲ ತೀರ್ಥಂಗಳು ಎಲ್ಲ ಕ್ಷೇತ್ರಂಗಳು ಇದ್ದಾವೆಂದು ಭಾವಿಸಿ ಮುಕ್ತರಪ್ಪದಯ್ಯಾ.....'' ಹೀಗೆ ಶರಣರು ನುಡಿದಿದ್ದಾರೆ. ಮತ್ತು ಶರಣಸತಿ ಲಿಂಗಪತಿಯೆಂಬ ಬಗ್ಗೆ ತೋಂಟದ ಸಿದ್ಧಲಿಂಗಯತಿಗಳು ಹೀಗೆ ಹೇಳಿದ್ದಾರೆ. "ಶ್ರೀಗುರು ಶಿವನ ಗಣಂಗಳ ಮುಖ್ಯದಲ್ಲಿ ಎನಗೆ ಉಪದೇಶಿಸುವಲ್ಲಿ ಪರಮೇಶ್ವರನ ಪಂಚಮುಖವನೇ ಪಂಚಕಲಶವಾಗಿ ಮೂರ್ತಿಗೊಳಿಸಿ ಗಣಂಗಳ ಸಾಕ್ಷಿಯಾಗಿ ಕರಸ್ಥಲಕೆ ಶಿವಲಿಂಗವ ಕೊಟ್ಟು ಈ ಲಿಂಗವೇ ಗಂಡ ನೀನೇ ಹೆಂಡತಿ ಎಂದು ಹೇಳಿ ಲಲಾಟದಲ್ಲಿ ವಿಭೂತಿಯ ಪಟ್ಟವಂ ಕಟ್ಟಿ ಹಸ್ತದಲ್ಲಿ ಕಂಕಣವ ಕಟ್ಟಿ ಪಾದೋದಕ ಪ್ರಸಾದವನಿತ್ತು ಎಂದೆಂದಿಗೂ ಸತಿಪತಿ ಭಾವ ತಪ್ಪದೇ ಇರಲಿ ಎಂದು ನಿರೂಪಿಸಿದನಯ್ಯ ಶ್ರೀಗುರು. ಆ ನಿರೂಪವ ಮಹಾ

ಪ್ರಸಾದವೆಂದು ಕೈಕೊಂಡೆನಯ್ಯ. ಇದುಕಾರಣ ಪತಿಯಲ್ಲದೆ ಅನ್ಯವ ನರಿಯೆನಯ್ಯಾ ಮಹಾಲಿಂಗ ಗುರು ಶಿವಶಿದ್ಧೇಶ್ವರ ಪ್ರಭುವೆ." ಈ ವಚನಲ್ಲಿ ಲಿಂಗವೇ ಗಂಡ ಶರಣನೇ ಹೆಂಡತಿ ಎಂದು ಹೇಳಿ ಲಿಂಗ ಪತಿಯನ್ನಲ್ಲದೆ ಅನ್ಯವನ್ನು ಅರಿಯೆನು ಎಂದು ಸ್ಪಷ್ಟವಾಗಿ ಹೇಳಿ ಲಿಂಗ ಪಾತಿವ್ರತ್ಯವನ್ನು ಕಾಯಲಿಕ್ಕೇಬೇಕೆಂದು ನುಡಿದಿದ್ದಾರೆ. ಮತ್ತು ಚನ್ನ ಬಸವಣ್ಣನವರು ಅಂದದ್ದು "ಪತಿವ್ರತೆಯಾದಡೆ ಅನ್ಯ ಪುರುಷರ ಸಂಗ ವೇತಕಯ್ಯ? ಲಿಂಗಸಂಗಿಯಾದಡೆ ಅನ್ಯ ದೈವದ ಸಂಗವೇತಕ್ಕಯ್ಯ? ಇದು ಹೇಗೆ ಕಂಡ ಕಂಡವರ ಹಿಂದೆ ಹರಿವ ಚಾಂಡಾಲಗಿತ್ತಿಯಂತೆ, ಒಬ್ಬನ ಕೈವಿಡಿದು, ಒಬ್ಬಗೆ ಮಾತುಕೊಟ್ಟು, ಒಬ್ಬಗೆ ಸನ್ನೆಯ ಮಾಡಿ ಮತ್ತೊಬ್ಬನ ಸಂಗವ ಮಾಡುವ ಹಾದರಗಿತ್ತಿಯಂತೆ ಪ್ರಾಣಲಿಂಗ ವಿಪ್ಪಂತೆ ಸ್ಥಾವರಲಿಂಗಕ್ಕೆ ಹರಿಸಿ ಪೊಡಮಡುವ ಕೋಟಲೆ ಏತಕೋ? ....." ಎಂದು ನುಡಿದಿದ್ದಾರೆ. ಈ ಎಲ್ಲ ವಚನಗಳನ್ನ ನೋಡಲಾಗಿ ಲಿಂಗವಂತರು ಶರಣರ ವಚನಶಾಸ್ತ್ರವನ್ನೆಲ್ಲ ಆಧಾರವಾಗಿಟ್ಟುಕೊಂಡು ನಡೆಯುವವರು ಗುರು ಕೊಟ್ಟ ಇಷ್ಟಲಿಂಗವಿರುತಿರಲು ಸ್ಥಾವರ ಲಿಂಗಕ್ಕೆ ನಡೆದುಕೊಳ್ಳಬಾರದೆಂದೇ ಸ್ಪಷ್ಟವಾಗುತ್ತದೆ. ಮತ್ತು ಗುರು ಕೊಟ್ಟ ಲಿಂಗಕ್ಕೆ ಇಷ್ಟಲಿಂಗವೆಂದೇ ಅಂದಿದ್ದಾರೆ.

ಕೆಲವು ಶಿವಶರಣರು ಮೊದಲಿಗೆ ಸ್ಥಾವರಲಿಂಗಕ್ಕೆ ನಡೆದುಕೊಂಡು ಮುಂದೆ ಶಿವಾನುಭವ ಚರ್ಚೆಯಲ್ಲಿ ಒಂದು ಸ್ಥಿತಿಗೆ ಬಂದು ಅದನ್ನೇ ತಮ್ಮ ವಚನ ರೂಪದಲ್ಲಿ ಹೊರಗೆಡಿವಿದಂತೆ ತೋರುತ್ತದೆ. ಅನ್ನೆ ಪ್ರಮುಖರಾದ ಬಸವ, ಚನ್ನಬಸವ, ಅಲ್ಲಮಪ್ರಭು, ಮಡಿವಾಳಮಾಚಿದೇವ, ಅಕ್ಕಮಹಾದೇವಿ ಮುಂತಾದವರು ಎಲ್ಲಿಯೂ ಲಿಂಗವಂತರಿಗೆ ಸ್ಥಾವರ ಲಿಂಗಗಳಿಗೆ ನಡಕೊಳ್ಳಲಿಕ್ಕೆ ಹೇಳಿಲ್ಲ. ಅನಂತರ ಆಗಿ ಹೋದ ಶ್ರೀತೋಂಟದ ಸಿದ್ಧಲಿಂಗಯತಿಗಳು, ಷಣ್ಮುಖಸ್ವಾಮಿಗಳು ಸ್ವತಂತ್ರ ಸಿದ್ಧಲಿಂಗೇಶ್ವರರು, ಮೈಲಾರ ಬಸಪ್ಪನವರು, ಮುಳುಗುಂದ ಮಹಾಂತ ಸ್ವಾಮಿಗಳು ಮುಂತಾದವರು ಸಹ ಸ್ಥಾವರಲಿಂಗಗಳಿಗೆ ನಡಕೊಳ್ಳಲಿಕ್ಕೆ ಹೇಳಿಲ್ಲ. ಸ್ಥಾವರಲಿಂಗಗಳ ಗುಡಿಗಳಲ್ಲಿ ಪೂಜಾರಿಗಳು ವೀರಶೈವರಿರುವದರಿಂದ ಲಿಂಗವಂತರು ಸ್ಥಾವರಲಿಂಗಗಳಿಗೆ ನಡೆದುಕೊಳ್ಳಬೇಕು ಎಂದು ನಮಗೆ ತೋರುವದಿಲ್ಲ. ಯಾಕಂದರೆ ಪೂಜಾರಿಗಳಷ್ಟೇ ಅಲ್ಲ

ಸಮಾಜದಲ್ಲಿ ಬಹಳೇ ಜನರು ಲಿಂಗವನ್ನು ಕಟ್ಟಿಕೊಂಡು ಸ್ಥಾವರಕ್ಕೆ ನಡೆದುಕೊಳ್ಳುವದು ಪ್ರತ್ಯಕ್ಷ ಕಾಣಿಸುತ್ತದೆ. ಹೀಗೆ ಇರುವದರಿಂದ ಶರಣರ ತತ್ವವೇ ಹಾಗೆಂದು ಹೇಳಲಿಕ್ಕೆ ಬರುವದಿಲ್ಲ. ಕೆಲವು ಜನರು ಮಾತ್ರ ಶರಣರ ತತ್ವವನ್ನು ಆಚರಣೆಯಲ್ಲಿ ತಂದಿದ್ದಾರೆ. ಪತ್ರಿಕೆಗಳೂ, ಶಿವಾನುಭವ ಸಂಘಗಳೂ ಶಿವಾನುಭವಿಗಳೂ ಪ್ರಯತ್ನಪಟ್ಟು ಪ್ರಚಾರ ಮಾಡಿದರೆ ಮಾತ್ರ ಜನಜಾಗ್ರತೆಯಾಗುತ್ತದೆ.

ಸಂದರ್ಶನ.

(ವಚನ)

"ಕಟ್ಟಿಯ ಬಸವೇಶ್ವರ."

ತನುವ ಪೂಜಿಸಿ ಗುರುವ ಕಂಡೆ. ಮನವ ಪೂಜಿಸಿ ಲಿಂಗವ ಕಂಡೆ ಧನವ ಪೂಜಿಸಿ ಜಂಗಮವ ಕಂಡೆ. ಗುರು ಲಿಂಗಜಂಗಮಗಳ ಪೂಜಿಸಿ ಭಕ್ತನ ಕಂಡೆ. ಭಕ್ತನ ಪೂಜಿಸಿ ಬಸವಲಿಂಗಪ್ರಿಯ ಕಟ್ಟಿಯ ಬಸವೇಶ್ವರನ ಕಂಡೆ.

ವಚನ ೧.

"ಘಟ ಪಟ ಮಠ ಮನೆಗಳಾಶೆಯಿಂದ, ಬರೆಕುಟಿಲ ಕುಹಕದ ಮಟಮಟ ಸಟಿ ಮನವಲ್ಲದೆ ದಿಟಮನವೆಲ್ಲಿಹುದುಹೇಳಾ? "ನೋಡಿ ಬಲ್ಲವರು ಸುಖಭೋಗದಳಿಯಾಶೆಯೊಡಗೂಡಿ ಕೆಡದಿರಿ." ಎಂದಾದ್ಯರ ವಚನ ಮುಂಟಾಗಿ, ಬಿಡುಬಿಡು ಪುಸಿ ಘಟ ಪಟ, ಮಠ ಮನೆ ಭೋಗದಳಿಯಾಶೆಯ ಮರುಳೆ. ಹಿಡಿ ಮಂಗಲಮೂರ್ತಿ ಎವ್ಮಾರಾಧ್ಯ ಚಿಲ್ಲಿಂಗಮೂರ್ತಿಯ ನೆನಹು, ನುತಿ, ಪೂಜೆಯ, ಮನ, ಮಾತು, ಮೈಗಳಿಂದ, ಕೇಡಿಲ್ಲದ ಸುಖವಪ್ಪುದು ತಪ್ಪದು ನಿನಗೆ ಮರುಳೆ.

ಈ ಪ್ರಕಾರ ಕಳಾವತಿಯು ತನ್ನ ಮನಸ್ಸಿನಲ್ಲಿ ಧೈರ್ಯವನ್ನು ತಂದುಕೊಂಡು ತನ್ನ ಪತಿಯು ಗಣಪರ್ವಕ್ಕೋಸ್ಕರ ಹೋಗುವ ಕಾಲದಲ್ಲಿ ಅವನು ಕೊಟ್ಟ ಸಲಹೆಗಳಂತೆ ಮಂತ್ರಿಗಳೊಡನೆ ರಾಜ್ಯಭಾರ ನಡಿಸಹತ್ತಿದಳು. ಹೀಗೆ ಆರು ತಿಂಗಳುಗಳು ಕಳೆದುಹೋದವು.

ಈ ಅವಧಿಯು ಮುಗಿದ ತರುವಾಯ ಅರಸನು ಅಂಬುಧಾರಾ—ರಾಮನಾಥನ ದೇವಾಲಯದಿಂದ ರಾಜಧಾನಿಗೆ ಬರಲು ಉದ್ಯುಕ್ತನಾದನು. ಈ ಸುದ್ದಿಯನ್ನು ಜೈನರು ಕೇಳಿ ಅವರು ತಮ್ಮ ಋಷಿಗಳನ್ನು ಕೂಡಿಕೊಂಡು ಅರಸನನ್ನು ಕಾಣಬೇಕೆಂದು ದೇವಸ್ಥಾನಕ್ಕೆ ಬಂದರು. ಆಗ ಅರಸನು ತನ್ನ ೩೦೦ ಜನ ಭಕ್ತರೊಂದಿಗೆ ಒಂದು ವಿಶಾಲವಾದ ಆಲದ ವೃಕ್ಷದಡಿಯಲ್ಲಿ ದೇವಾಲಯದ ಬಳಿಯಲ್ಲಿಯೇ ಕುಳಿತುಕೊಂಡು ಶಿವಾನುಭವ ಸದ್ಗೋಷ್ಠಿಯಲ್ಲಿದ್ದನು. ಜೈನರು ಅವನ ಸಮೀಪದಲ್ಲಿ ಬಂದು ಕಾಣಿಕೆಗಳನ್ನು ಅರ್ಪಿಸಿ ಅವನಿಗೆ ನಮಿಸಿ ಅಲ್ಲಿಯೇ ಕುಳಿತರು. ಅವರು ಅಲ್ಲಿದ್ದ ಪ್ರಶಾಂತವಾದ ಉಚ್ಚ ಶಿವಾನುಭವದ ವಾತಾವರಣವನ್ನು ನೋಡಿ ಸೈರಿಸದೆ ಅರಸನಿಗೆ— ರಾಜನೇ, ನೀನು ಈ ವರೆಗೆ ನಡಿಸುತ್ತಿದ್ದ ಪರ್ವವು ಕ್ಷೇಮದಿಂದ ಮುಗಿಯಿತೇ? ಆದರೆ ಇದರಿಂದ ನಿನಗೆ ಆದ ಪ್ರಯೋಜನವೇನು? ಇದರಲ್ಲಿ ನೀನು ಯಾವ ಪ್ರತ್ಯಕ್ಷ ಫಲವನ್ನು ಹೊಂದಿದೆ? ಎಂದು ವಿಡಂಬಿಸಿ ನುಡಿದರು. ಅರಸನು ಅದನ್ನು ಕೇಳಿ ಕೆರಳಿದವನಾಗಿ—ಮರುಳುಗಳಿರಾ, ನಿಮಗೆ ಭಕ್ತಿಯೆಂಬುದು ತಿಳಿಯದು. ನಿಮಗೆ ದೇವರ ಕಲ್ಪನೆ ಇಲ್ಲ. ಮನುಷ್ಯನು ಆಳ ಲಕ್ಷ ಜನ್ಮಗಳನ್ನು ತಾಳಿ ಆ ಮೇಲೆ ಶಿವಭಕ್ತನಾಗಿ ಹುಟ್ಟುವನೆ. ನಾನು ಈಗ ಭಕ್ತನಾಗಿ ಜೀವಿಸಿರುವದೇ ನನಗೆ ದೊರೆತ ಪ್ರತ್ಯಕ್ಷ ಫಲವು. ಇದಕ್ಕಿಂತಲೂ ಹೆಚ್ಚಿನ ಪ್ರಯೋಜನವು ದೊರಕಬೇಕಾದುದಾದರೂ ಅವುದು? ಎಂದು ನುಡಿದನು. ಅದಕ್ಕೆ ಜೈನ ಋಷಿಗಳು ಅವನಿಗೆ—ನೀವು ೬ ತಿಂಗಳುಗಳ ವರೆಗೆ ಏಕಾಂತವಾಸ ಮಾಡಿ ಅವ ಮಹಿಮೆಗಳನ್ನು ಮಾಡಲು ಕಲಿತಿರುವಿರಿ ಎಂದು ಕೇಳಿದರು. ಇದಕ್ಕೆ ಅರಸನು— ಶಿವಾನುಭವಿಗಳ ಅದ್ಭುತ ಶಕ್ತಿಯನ್ನು ನೀವೇನು ಬಲ್ಲಿರಿ? ಅವರು ಸೃಷ್ಟಿಸಬಲ್ಲರು, ಸೃಷ್ಟಿಸಿದ್ದನ್ನು ಅಳಿಸಬಲ್ಲರು, ಎಂದು ನುಡಿದನು. ಇದನ್ನು ಜೈನರು ಕೇಳಿ ಬೇರೊಂದೆಡೆಗೆ ಹೋಗಿ, ಒಂದು ಉಪಾಯವನ್ನು ನೆನೆದು ಅರಸನಿದ್ದಲ್ಲಿಗೆ ಬಂದು – ಅರಸನೇ, ಇಗೋ

ನೋಡು ನಮ್ಮ ಸಾಮರ್ಥ್ಯವನ್ನು, ಎಂದು ಹೇಳಿ ಕುಟಿಲ ಮಂತ್ರಗಳನ್ನು ಉಚ್ಚರಿಸುತ್ತ ಅಕ್ಷತೆಗಳನ್ನು ಅರಸನು ಕುಳಿತಿದ್ದ ಆ ವಟಪ್ಪದ ಮೇಲೆ ಚಲ್ಲಲು, ಆ ಕ್ಷಣವೇ ಅದು ಧಗ ಧಗನೆ ಉರಿಯುಹತ್ತಿತು. ಮತ್ತು ಅದು ನಿಮಿಷಾರ್ಧದಲ್ಲಿ ಭಸ್ಮವಾಯಿತು. ಹೀಗಾದುದನ್ನು ಜೈನರು ಅರಸನಿಗೆ ತೋರಿಸಿ— ನೋಡಿದೆಯಾ ನಮ್ಮ ಈ ಅದ್ಭುತ ಸಾಮರ್ಥ್ಯವನ್ನು? ಎಂದು ಗರ್ವದಿಂದ ನುಡಿಯಲು, ಅರಸನು—ನಿಮಗೆ ಶಿವಶರಣರ ಮಹಿಮೆಯ ರೀತಿಯು ತಿಳಿದಿಲ್ಲ. ಅದನ್ನು ಶಿವಾನುಭವಿಗಳೇ ಬಲ್ಲರು. ಈ ವೃಕ್ಷವನ್ನ ನೀವು ಭಸ್ಮ ಮಾಡಿದ ಬಳಿಕ, ಇಗೋ ಅದರ ಶೇಷವು ಈ ಬೂದಿಯಲ್ಲಿದೆ. ಈ ಶೇಷದ ಮೂಲಕವೇ ನಾನು ಈ ವೃಕ್ಷವನ್ನು ಪುನಃ ಮೊದಲಿನಂತೆ ಚಿಗಿಯಿಸಬಲ್ಲೆನು, ಎಂದು ನುಡಿದು ಅರಸನು ಶಿವನನ್ನು ನೆನೆಯುತಾಗಿ ಆ ಕ್ಷಣವೇ ಆ ವೃಕ್ಷವು ಬೂದಿಯೊಳಗಿಂದ ಅಂಕುರಿಸಿತು, ಅಂಕುರಿಸಿ ಪಲ್ಲವಿಸಿತು, ಮತ್ತು ಮೊದಲಿನಂತೆ ಒಂದು ವಿಶಾಲವಾದ ಮರವಾಯಿತು, ಮುಂದೆ ಅದಕ್ಕೆ ಪುಷ್ಪ ಫಲಗಳಾದವು. ಜೈನರು ಅರಸನಲ್ಲಿ ಈ ಅಗಾಧವಾದ ಶಕ್ತಿಯು ಉಂಟಾದದ್ದನ್ನು ನೋಡಿ, ಅಂಜಿ ಓಡಿ ಹೋಗಹತ್ತಿದರು. ಆದರೆ ಅರಸನು ನಗುತ್ತ ಅವರನ್ನು ತನ್ನಲ್ಲಗೆ ಬರಮಾಡಿಕೊಂಡು ಅವರಿಗೆ— ಶಿವಾನುಭವಿಯು ಯಾರನ್ನೂ ನಿಷ್ಕಾರಣವಾಗಿ ಕ್ಲೇಶಪಡಿಸುವದಿಲ್ಲ. ನೀವು ಜಿನಧರ್ಮವನ್ನು ಬಿಟ್ಟು ಭಕ್ತರಾಗಿರಿ ಎಂದು ಹೇಳಿದನು. ಹೀಗೆ ಹೇಳಿದ್ದಕ್ಕೆ ಜೈನ ಋಷಿಗಳು ಮತ್ತಿಷ್ಟು ಕೆರಳಿದವರಾಗಿ ರಾಜಧಾನಿಗೆ ಹೊರಟು ಹೋದರು.

ಇಷ್ಟಾದಮೇಲೆ ಅರಸನು ತನ್ನ ಮುನ್ನೂರು ಜನ ಭಕ್ತರನ್ನು ಕೂಡಿಕೊಂಡು ಅರಮನೆಗೆ ಬಂದು ಅಲ್ಲಿದ್ದ ಸಿಂಹಾಸನದ ಮೇಲೆ ಕುಳಿತುಕೊಂಡನು. ಆಗ ಅರಮನೆಯಲ್ಲಿಯ ಸ್ತ್ರೀಯರು ಅವನಿಗೆ ಆರತಿಯನ್ನು ಬೆಳಗಿ ಅವನನ್ನು ಸ್ವಾಗತಿಸಿದರು. ಅವರಲ್ಲಿ ಅವನ ಹೆಂಡತಿಯಾದ ಕಳಾವತಿಯೂ ಇದ್ದಳು. ಆದರೆ ಅವಳು ಆರತಿಯನ್ನು ಬೆಳಗುತ್ತಿರುವಾಗ್ಗೆ, ಆಕೆಯ ಮನದಲ್ಲಿ ಮಗನು ಮಾಡಿದ ದುಃಖವು ಉಕ್ಕೇರಿ ಬಂದಿತು. ಅವಳ ಕಣ್ಣೊಳಗಿಂದ ಅಶ್ರುಗಳು ದಳದಳನೆ ಸುರಿಯಹತ್ತಿದವು. ಅದನ್ನು ಅರಸನು ನೋಡಿ ಇದೇನೆಂದು ಭಯಪಟ್ಟು ಕೇಳಲು, ರಾಣಿಯು— ನಾನೇನು ಹೇಳಲಿ ಎಂದು ರೋದಿಸ

ಹತ್ತಿದಳು. ಅವಳು ಅವನಿಗೆ— ಅರಮನೆಯಲ್ಲಿ ನಿಮ್ಮ ಮಗನಿದ್ದರೆ, ಅವನು ಇಲ್ಲಿಗೆ ಬಂದು ನಿಮ್ಮನ್ನು ಕಾಣದೆ ಉಳಿಯುತ್ತಿದ್ದನೇ ಎಂದು ಅನ್ನಲು, ಅರಸನು ಗಾಬರಿಗೊಂಡು— ಕುಮಾರಸೇನಾದನು ಎಂದು ಕೇಳಲು, ರಾಣಿಗೆ ಹೇಳುವದಾಗದಿರಲು— ಅರಸನು ಬಾಗಿಲಿನ ರಕ್ಷಕನನ್ನು ಕರೆದು ಕೇಳಲು ಆವನು - ಒಬ್ಬ ಜೈನನು ಭಕ್ತನ ವೇಷವನ್ನು ಧರಿಸಿಕೊಂಡು ಅರಮನೆಯನ್ನು ಪ್ರವೇಶಿಸಿ ಬಾಲಕನನ್ನು ಕತ್ತಿಯಿಂದ ತಿವಿದು ಕೊಂದ ಹಾಕಿದನೆಂದು ಹೇಳಿದನು.

ಅರಸನು ಈ ಸುದ್ದಿಯನ್ನು ಕೇಳಿದ ಕೂಡಲೆ ಉದ್ರೇಕಗೊಂಡು ಘುಡಿಘುಡಿಸುತ್ತ— ಬಾಲಕನ ಮೃತಶರೀರವೆಲ್ಲಿದೆ ಎಂದು ಕೇಳಲು ಸೇವಕರು ಆ ಶರೀರವನ್ನು ಇಟ್ಟಿದ್ದ ಸ್ಥಳಕ್ಕೆ ಅರಸನನ್ನು ಕರೆದುಕೊಂಡು ಬಂದು ಅದನ್ನು ಅವನಿಗೆ ತೋರಿಸಿದರು.

ಅರಸನು ಬಾಲಕನ ಮೃತದೇಹವನ್ನು ನೋಡಿ ಬಾಲಕನಿಗೆ— ನಿನಗೆ ಶ್ರವಣರು ಈ ರೀತಿ ಮಾಡಿದರೇ ಎಂದೆನ್ನುತ್ತ, ಪರಮಾತ್ಮನನ್ನು ಮಂತ್ರಪೂರ್ವಕವಾಗಿ ಧ್ಯಾನಿಸುತ್ತ— ಏಳೇಳು ಕುಮಾರನೇ, ಈ ಪೃಡಪದ ಸಮಾಧಿಯು ನಿನಗೆ ಸಾಕು ಎಂದೆನ್ನಲು, ಕುಮಾರನು ನಿದ್ರೆಯಿಂದ ಎಚ್ಚೆತ್ತವನಂತೆ ಎದ್ದು ಕುಳಿತು, ಇದಿರಿಗೆ ತನ್ನ ತಂದೆಯನ್ನು ಕಂಡು ಅವನನ್ನು ಬಿಗಿದಪ್ಪಿದನು. ಆಗ ಕಳಾವತಿಗೂ ಭಕ್ತಜನರಿಗೂ ಆನಂದವು ಉಕ್ಕೇರಿಬಂದಿತು. ಎಲ್ಲರಿಗೂ ಹರ್ಷವಾಯಿತು. ಇದನ್ನು ನೋಡಿ ಅರಸನು— ನಾಳಿನ ಸೋಮವಾರ ಪಟ್ಟಣದಲ್ಲಿ ಅದ್ಭುತವಾಗಿ ಗಣಪರ್ವವು ಸಾಗಲಿ ಎಂದು ಆಜ್ಞೆಯನ್ನಿತ್ತನು.

ಈ ಗಣಪರ್ವಕ್ಕೆ ಬೇಕಾಗುತ್ತಿದ್ದ ನೆಲ್ಲು ಮೊದಲಾದ ಧಾನ್ಯಗಳನ್ನು ಕುಟ್ಟಬೇಕೆಂದು ಪಡಿಯರರು ಪಟ್ಟಣಿಗರಿಗೆ ಹೇಳಿದರು. ಆದರೆ ಅವರು ಜೈನರೇ ಇದ್ದದರಿಂದ ಅವರಲ್ಲಿ ಯಾರೂ ಅರಸನಿಗಾಗಿ ಈ ಕೆಲಸವನ್ನು ಮಾಡಲು ಒಪ್ಪಲಿಲ್ಲ. ಆಗ ಮಾರಿಮುಡಿಗಳು ಬೊಮ್ಮಿತಂದೆಯ ಮುಂದೆ ಬಂದು ನಿಂತು ಅವನಿಗೆ— ನಿನ್ನ ಈ ಸೇವೆಯನ್ನು ನಾವು ಮಾಡುವೆವು. ಆದರೆ ಇದಕ್ಕೊಸ್ಕರ ಶಿವಪುರವೆಂದೆಣಿಸಿಕೊಂಡ ನಿನ್ನ ಅರಮನೆಯನ್ನು ನಾವು ಪ್ರವೇಶಮಾಡಲು ಅಂಜುತ್ತೇವೆ. ನಾವು

ಬೇರೆ ಕಡೆಗೆ ಹೋಗಿ ಕಾಳನ್ನೆಲ್ಲ ಕುಟ್ಟಿತರುವೆವು ಎಂದು ಹೇಳಲು ಅರಸನು ಅದಕ್ಕೆ ಒಪ್ಪಲಾಗಿ ಅವು ಮರುದಿನ ಮುಂಜಾವಿನೊಳಗಾಗಿ ಕೊಟ್ಟ ಕಾಳುಗಳನ್ನೆಲ್ಲ ಹಸನುಮಾಡಿ ಕುಟ್ಟಿ ಅರಮನೆಯ ಇದಿರಿಗೆ ತಂದುಹಾಕಿದವು. ಆಮೇಲೆ ಪಟ್ಟಣದಲ್ಲಿ ಮಹತ್ತರವಾದ ಸವಾರಂಭದಿಂದ ಗಣಪರ್ವವು ನಡೆಯಿತು.

ಈ ರೀತಿ ಅರಸನ ಕಾರ್ಯಗಳು ವಿಜೃಂಭಣೆಯಿಂದ ನಡೆದದ್ದನ್ನು ಪಟ್ಟಣದಲ್ಲಿಯ ಶ್ರವಣರು ನೋಡಿ ಮತ್ತಿಷ್ಟು ಕೆರಳಿದವರಾಗಿ ಅರಸನಿಗೆ— ಪರ್ವಪರ್ವವೆಂದು ನಿಮ್ಮ ಭಕ್ತರು ಉಂಡುಂಡು ಹೋಗುತ್ತಿದ್ದಾರೆ. ಆದರೆ ನೀವು ಪರಮಾತ್ಮನು ಸರ್ವವ್ಯಾಪಿಯು ಎಂದು ಹೇಳುತ್ತೀರಿ. ಇದು ಒಂದುವೇಳೆ ನಿಜವಾದರೆ ನಿಮ್ಮ ಅಂಬುಧಾರಾ—ರಾಮನಾಥನನ್ನು ಇಲ್ಲಿಯೇ ಈ ಪಟ್ಟಣದಲ್ಲಿ ತಂದು ತೋರಿಸಬೇಕು, ಎಂದು ಅನ್ನಲು ಇದಕ್ಕೆ ಅರಸನು— ಏಕಾಗವೊಲ್ಲದು ಎಂದು ನುಡಿದು ಹರನು ಇಲ್ಲಿಗೆ ಬರಬೇಕೆಂದು ನೆನೆಯುತ್ತ ಒಬ್ಬ ಪಡಿಹಾರಿಯನ್ನು ಕರೆದು— ನೀನು ಅಂಬುಧಾರಾ—ರಾಮನಾಥನಲ್ಲಿಗೆ ಹೋಗಿ ಅವನಿಗೆ ಪಟ್ಟಣದಲ್ಲಿ ಬರಹೇಳು ಎಂದು ಹೇಳಿಕಳಿಸಿದನು. ಅವನು ಹಾಗೆಯೇ ದೇವಾಲಯದಲ್ಲಿ ಹೋಗಿ ಉಚ್ಚರಿಸಲು ಸ್ವಲ್ಪ ಹೊತ್ತಿನಲ್ಲಿಯೇ ಅರಮನೆಯ ಪ್ರವೇಶದ್ವಾರದಲ್ಲಿಯೇ ಕೋಟಿ ಸೂರ್ಯ ಪ್ರಕಾಶದಿಂದ ಬೆಳಗುತ್ತ ರಾಮನಾಥನು ಝಗ್ಗನೆ ಕಾಣಿಸಿಕೊಂಡನು. ಅರಸನು ಆ ಮೂರ್ತಿಯನ್ನು ನೋಡಿ ಅದಕ್ಕೆ ನಮಸ್ಕರಿಸಿ ಭಕ್ತರೊಂದಿಗೆ ಪರಮಾತ್ಮನನ್ನು ಸ್ತುತಿಸುವವನಾದನು. ಆದರೆ ಪಟ್ಟಣದಲ್ಲಿಯ ಜೈನರು ಪರಮಾತ್ಮನು ವಿಶ್ವವ್ಯಾಪಿಯು ಎಂದು ಅರಸನು ಹೇಳಿದ್ದು ಸತ್ಯವಾಯಿತೆಂಬದನ್ನು ನೋಡಿ ಮನಸ್ಸಿನಲ್ಲಿ ಮತ್ತಿಷ್ಟು ತಳಮಳಗೊಂಡರು.

ಬ್ರಹ್ಮಯ್ಯನು ಪಟ್ಟಣದಲ್ಲಿ ಜೈನರು ಹೀಗೆ ಅನೇಕ ರೀತಿಯಿಂದ ತನ್ನನ್ನು ವಿರೋಧಿಸುತ್ತಿರುವದನ್ನು ನೋಡಿ ಅವರಿಗೆ ಅಂದದ್ದು— ನೀವು ನನ್ನ ಬಾಲಕನನ್ನು ಕೊಂದುಹಾಕಿದಿರಿ. ಇದು ನಿಮ್ಮ ಮೊದಲನೆಯ ಅಪರಾಧವು. ಆಮೇಲೆ ನಾನು ರಾಮನಾಥನ ದೇವಾಲಯದಲ್ಲಿ ದ್ದಾಗ್ಗೆ ಭಕ್ತರ ಮಹತ್ವವನ್ನು ನೀವು ಹೀಯಾಳಿಸಿ ನುಡಿದಿರಿ. ಇದು ನಿಮ್ಮ ಎರಡನೆಯ ಅಪರಾಧವು. ಈಗ ನೀವು ವಿಶ್ವವ್ಯಾಪಿಯಾದ ಪರಮಾತ್ಮನನ್ನು ನಂಬದೆ ಅವನನ್ನು ನಿಂದಿಸಿ ನುಡಿದಿರಿ. ಇದು ನಿಮ್ಮ ಮೂರನೆಯ ಮಹಾಪರಾಧವು. ನೀವು ಭಕ್ತರ ಮತ್ತು ಪರಮಾತ್ಮನ ಮಹಿಮೆಯನ್ನು ಪ್ರತ್ಯಕ್ಷ ಕಂಡರೂ ಹೀಗೆ ನಡೆಯುತ್ತೀರಿ. ನಿಮ್ಮದು ಶಿವದ್ರೋಹವು ಎಂದೆನ್ನಲು ಪಟ್ಟಣದಲ್ಲಿದ್ದ ಎಂಟುಸಾವಿರ ಶ್ರವಣರು ಇದನ್ನು ಕೇಳಿ, ಒಟ್ಟಾರೆ ಸೇರಿ, ಭಕ್ತರನ್ನೆಲ್ಲ ಸಂಹರಿಸಬೇಕೆಂದು ನಿಶ್ಚಯಿಸಿ, ಶಸ್ತ್ರಾಸ್ತ್ರಗಳನ್ನು ಧರಿಸಿಕೊಂಡು ಶಿವಪುರವೆಂದೆನಿಸಿಕೊಳ್ಳುತ್ತಿದ್ದ ಅರಸನ ಅರಮನೆಯ ಮೇಲೆ ಸಾಗಿಬಂದು ಅದಕ್ಕೆ ಮುತ್ತಿಗೆಯನ್ನು ಹಾಕಿ ಯುದ್ಧವನ್ನು ಆರಂಭಿಸಿದರು.

ಬೊಮ್ಮಿತಂದೆಯು ಇದನ್ನು ನೋಡಿ ಮನಮರುಗಿ— ಈ ಶ್ರವಣರ ಬುದ್ಧಿಯು ಮಸುಳಿಸಿದೆ. ಇದಕ್ಕೆ ತಕ್ಕ ಪ್ರತೀಕಾರ ಮಾಡದೆ ಬಿಡೆನೆಂದು ಕೆಲಬಲದಲ್ಲಿದ್ದ ತನ್ನ ಮುನ್ನೂರು ಜನ ಭಕ್ತರಿಗೆ ಕಣ್ಸನ್ನೆ ಮಾಡಲು ಅವರು ಅರಸನ ಇಂಗಿತವನ್ನರಿತು ತಮ್ಮ ಶಸ್ತ್ರಗಳನ್ನು ಝಳಪಿಸುತ್ತ ಜೈನರ ಪಡೆಯ ಮೇಲೆ ನುಗ್ಗಿ ಇದಿರಿಗೆ ಬಂದವರನ್ನು ಸಂಹರಿಸುತ್ತ ಮುಂದುವರಿದರು. ಆಗ ಅವರೆಲ್ಲರೂ ಓಡಿ ಹೋದರು. ಆಮೇಲೆ ಭಕ್ತರು ಬಸದಿಗಳಲ್ಲಿ ನುಗ್ಗಿ ಜಿನಪ್ರತಿಮೆಗಳನ್ನು ಕಿತ್ತು ಬಿಸುಟಿಹಾಕಿದರು. ಆಮೇಲೆ ಅವರು ಅರಸನಿಗೆ— ಅವುಗಳ ಸ್ಥಳದಲ್ಲಿ ಶಿವಲಿಂಗಗಳನ್ನು ಸ್ಥಾಪಿಸಬಹುದೇ ಎಂದು ಕೇಳಲು ಅರಸನು ಇಂಥ ದೇವಾಲಯಗಳನ್ನು ಶಿವಭಕ್ತರು ಪ್ರವೇಶಿಸಕೂಡದು, ಅವು ಶಿವನಿಗೆ ಸಲ್ಲವು ಎಂದು ಹೇಳಲು ಅವರು ಆ ಬಸದಿಗಳನ್ನೆಲ್ಲ ಕೆಡಿಸಿ ನೆಲಸಮಮಾಡಿಬಿಟ್ಟರು.

ಕೋವೂರಲ್ಲಿ ಈ ಪ್ರಕಾರ ಘಟನೆಗಳು ನಡೆದ ಬಳಿಕ ಎಲ್ಲವೂ ಶಾಂತವಾಯಿತು. ಅಲ್ಲಿ ಶಿವಾನುಭವ ಸದ್ಗೋಷ್ಠಿಗಳು ನಿರಾತಂಕವಾಗಿ ನಡೆಯತೊಡಗಿದವು. ಯಾವಾಗಲೂ ಶಿವಗೀತಗಳು ಕೇಳಬರಹತ್ತಿದವು. ಅರಸನು ಅವುಗಳಿಗೆ ಮೆಚ್ಚಿ ಉದಾರಭಾವದಿಂದ ಗಾಯಕರಿಗೂ ಮಹೇಶ್ವರರಿಗೂ ಮೆಚ್ಚುಗೆಗಳನ್ನು ಹೇರಳವಾಗಿ ಕೊಡಹತ್ತಿದನು. ಹೀಗೆ ಕೆಲವು ದಿವಸಗಳು ಗತಿಸಿದ ಮೇಲೆ ಒಂದಾನೊಂದು ದಿವಸ ಶರಣ ಗೋಷ್ಠಿಗಳು ನಡೆದ ಕಾಲದಲ್ಲಿ ನಂದಿಯುಂಡಿಗೆಯು ಇದ್ದ ಒಂದು ಶಿವಲಿಖಿತವು ಸಭಾಮಧ್ಯದಲ್ಲಿ ಅರಸನ ಇದಿರಿಗೆ ಮೇಲಿನಿಂದ ಕೇಳಕ್ಕೆ ಬಂದು ಬಿದ್ದಿತು.

ಅದನ್ನು ಅರಸನು ತೆಗೆದುಕೊಂಡು ತನ್ನ ತಲೆಯ ಮೇಲೆ ಇಟ್ಟು ಅದನ್ನು ಓದಿಸಿ ನೋಡಲು, ಅದರಲ್ಲಿ ರಾಜನಿಗೆ—ನಿನ್ನ ಮುನ್ನೂರು ಜನ ಭಕ್ತರನ್ನು ಕೂಡಿಕೊಂಡು ನನ್ನ ಸನ್ನಿಧಿಗೆ ಬರಬೇಕು ಎಂದು ಬರೆದಿದ್ದಿತ್ತು. ಬ್ರಹ್ಮಯ್ಯನು ಅದನ್ನು ನೋಡಿ ನಾನು ಈವರೆಗೆ ಭಕ್ತರ ಕೂಡ ಶಿವಾನ ಭವದಲ್ಲಿ ಸುಖವಾಗಿ ಕಾಲ ಕಳೆದೆನು. ಇನ್ನು ಮೇಲೆ ನಾನು ಈ ಸಂಸಾರವನ್ನು ನೀಗಿ ಶಿವನ ಅಪ್ಪಣೆಯಂತೆ ಅವನ ಸಾನ್ನಿಧ್ಯವನ್ನು ಸೇರುವೆನು, ಎಂದು ಸಂತೋಷಬಟ್ಟನು. ಆ ಮೇಲೆ ಅವನು ತನ್ನ ಮುನ್ನೂರು ಜನ ಭಕ್ತರಿಗೆ ಪತ್ರದಲ್ಲಿದ್ದ ಈ ಸಂಗತಿಯನ್ನು ತಿಳಿಸಲು ಅವರು ಸಹ ಅರಸನ ಕೂಡ ಶಿವನ ಸಾನ್ನಿಧ್ಯವನ್ನು ಹೊಂದಬೇಕೆಂದು ಅಪೇಕ್ಷೆಬಟ್ಟರು.

ಆಮೇಲೆ ಬ್ರಹ್ಮಯ್ಯನು ತನ್ನ ಮಗನನ್ನು ಕರೆದು ಅವನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ಅವನಿಗೆ—ನೀನು ಯಾವಾಗಲೂ ಶಿವಭಕ್ತನಾಗಿರು, ಈ ಕೋವೂರು ಪುರವನ್ನು ಚನ್ನಾಗಿ ಪಾಲಿಸು, ಶಿವಭಕ್ತರ ವಚನಗಳನ್ನು ನಂಬು, ನಂಬಿ ಅವುಗಳಂತೆ ನಡೆ, ಎಂದು ಉಪದೇಶಿಸಿ ತನ್ನ ಮುನ್ನೂರು ಜನ ಭಕ್ತರೊಂದಿಗೆ ಅಂಬುಧಾರಾ—ರಾಮನಾಥನ ದೇವಾಲಯದ ಕಡೆಗೆ ಹೊರಟನು. ಆಗ ಅವರೆಲ್ಲರ ಕೈಯ್ಯಲ್ಲಿ ಕಹಾಳಗಳೂ ಮಸೆದ ಆಯುಧಗಳೂ ಹೊಳೆಯುತ್ತಿದ್ದವು. ಕಹಳೆಗಳು ಸುತ್ತಲೂ ಭೋರ್ಗರೆಯುತ್ತಿದ್ದವು. ಹೀಗೆ ಅವರು ದೇವಾಲಯಕ್ಕೆ ಹೋಗಿ ರಾಮನಾಥನ ಇದಿರಿಗೆ ಎಲ್ಲರೂ ನಿಂತು–ದೇವದೇವನೇ, ನಾವು ಈ ನಶ್ವರ ತನುವಿನಲ್ಲಿ ಇನ್ನುಮೇಲೆ ಇರಲು ಇಚ್ಛಿಸುವದಿಲ್ಲ. ನಾವು ಅದನ್ನು ನಿನಗೆ ಅರ್ಪಿಸಲು ಸಿದ್ಧರಾಗಿದ್ದೇವೆ ಎಂದು ನುಡಿದರು. ಅಷ್ಟರಲ್ಲಿ ಬೊಮ್ಮಯ್ಯನು ತನ್ನ ಖಡ್ಗವನ್ನು ಕೈಯ್ಯಲ್ಲಿ ಹಿಡಿದುಕೊಂಡು ತನ್ನ ಕತ್ತನ್ನು ಕತ್ತರಿಸಿ ಅದನ್ನು ರಾಮನಾಥನ ಇದಿರಿಗೆ ಇಟ್ಟನು. ಆ ಮೇಲೆ ಉಳಿದ ಭಕ್ತರು ತಮ್ಮ ಸುರಿಗೆಗಳಿಂದ ತಮ್ಮ ಹೊಟ್ಟೆಯನು ಬಗಿದುಕೊಂಡು ಹೊರಬಿದ್ದ ಕರುಳುಗಳನ್ನು ಈಶ್ವರನ ಮುಂದಿಟ್ಟರು. ಅವರಲ್ಲಿ ಕೆಲವರು ಪರಶುವಿನಿಂದ ತಮ್ಮನ್ನು ಕಡಿದುಕೊಂಡರು. ಆ ಕಾಲದಲ್ಲಿ ರಾಮನಾಥನ ಇದಿರಿಗೆ ರಕ್ತದ ಪ್ರವಾಹವು ಹರಿಯಿತು. ಅಷ್ಟರಲ್ಲಿ ಮುನ್ನೂರು ಪುಷ್ಪಕ ವಿಮಾನಗಳು ಆಕಾಶ ಮಾರ್ಗದಿಂದ ದೇವಾಲಯದಲ್ಲಿ ಇಳಿದು ಅಲ್ಲಿದ್ದ ೩೦೦ ಜನ ಭಕ್ತರನ್ನು ತೆಗೆದುಕೊಂಡು

ಗಗನದಲ್ಲಿ ಹಾರಿ ಹೋದವು. ಈ ಪ್ರಕಾರ ಕೋವೂರ ಬ್ರಹ್ಮಯ್ಯನೂ ಅವನ ೩೦೦ ಜನ ಭಕ್ತರೂ ಶಿವಪದವನ್ನು ಹೊಂದಿ ಶಿವಶರಣರಲ್ಲಿ ಉಚ್ಚಸ್ಥಾನವನ್ನು ಹೊಂದಿದ್ದಾರೆ.

ಕೋಹೂರು ಬ್ರಹ್ಮಯ್ಯನ ಹೆಸರು ಗಣಸಹಸ್ರದಲ್ಲಿ ಬಂದಿದೆ. ಆದ್ದರಿಂದ ಅವನು ಹಿಂದಿನ ಕಾಲದ ಶಿವಶರಣನು. ಆದರೆ ಅವನು ಬಸವೇಶ್ವರನಕಿಂತಲೂ ಹಿಂದಿನವನೋ ಅಥವಾ ಅವನ ತರುವಾಯದವನೋ ಎಂಬುದನ್ನು ತಿಳಿಯಲು ವಿಶ್ವಾಸಾರ್ಹವಾದ ಸಂಗತಿಗಳು ಅವನ ಚರಿತ್ರೆಯಲ್ಲಿ ದೊರಕುವದಿಲ್ಲ. ಅವನ ಚರಿತ್ರೆಯಲ್ಲಿ ಬಸವನ ಉಲ್ಲೇಖವೇನೂ ಇರುವದಿಲ್ಲ. ಆದ್ದರಿಂದ ಅವನು ಅವನಿಗೆ ಸಮಕಾಲೀನನೆಂದು ತೋರುವದಿಲ್ಲ. ಅವನು ಚಾಲುಕ್ಯ ವಂಶದವನೆಂದು ಅವನ ಚರಿತ್ರೆಯಲ್ಲಿ ಹೇಳಲ್ಪಟ್ಟಿರುತ್ತದೆ. ಬಿಜ್ಜಳನ ಕಾಲದಲ್ಲಿ ಚಾಲುಕ್ಯರು ರಾಜ್ಯದಿಂದ ತಳ್ಳಲ್ಪಟ್ಟವರಾಗಿದ್ದರೂ ಅವರ ಶಾಪೆಗಳು ಕರ್ನಾಟಕದಲ್ಲಿ ಅಲ್ಲಲ್ಲಿ ನೆಲಸಿದ್ದವು. ಇಂಥ ಒಂದು ವಂಶಕ್ಕೆ ಕೋಹೂರು ಬೊಮ್ಮಯ್ಯನು ಹೊಂದಿದವನಾಗಿರಬೇಕು. ಅವನು ಬಹುಶಃ ಬಸವೇಶ್ವರನಕಿಂತಲೂ ಈಚಿನವನಾಗಿರಬೇಕು. ಬಸವೇಶ್ವರ ಮತ್ತು ಚನ್ನಬಸವೇಶ್ವರ ಇವರ ತರುವಾಯ ದೇಶದಲ್ಲೆಲ್ಲ ವೀರಶೈವ ಮತವು ಕ್ರಮೇಣ ಅನೇಕ ವರ್ಷಗಳವರೆಗೆ ವಿಸ್ತಾರಹೊಂದುತ್ತ ಬಂದಿತೆಂದು ತಿಳಿಯುತ್ತಿದೆ. ಇಂಥ ಪ್ರಸಾರ ಕಾಲದಲ್ಲಿಯೇ ಕೋಹೂರು ಬ್ರಹ್ಮಯ್ಯನು ಪ್ರಸಿದ್ಧಿಗೆ ಬಂದಿರಬೇಕು.

ಕೋಹೂರು ಬ್ರಹ್ಮಯ್ಯನು ಜೈನರನ್ನು ವಿರೋಧಿಸುವಾಗ ಅವನು ಅದರಲ್ಲಿ ಯಶಸ್ಸನ್ನು ಹೊಂದಿದನೆಂಬ ಭಾವವು ಅವನ ಚರಿತ್ರೆಯಲ್ಲಿ ವ್ಯಕ್ತವಾಗುತ್ತದೆ. ಆದರೆ ಅವನ ಚರಿತ್ರೆಯನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದಲ್ಲಿ ನಿಜಸ್ಥಿತಿಯು ಹೀಗಿರದೆ ಜೈನರೇ ವೀರಶೈವರನ್ನು ಕಡೆಯವರೆಗೂ ಹಿಂಸಿಸುತ್ತ ಬಂದರೆಂದು ಅನುಮಾನಿಸಬೇಕಾಗುತ್ತದೆ.

ಮಾರುಡಿಗೆಯ ನಾಚಯ್ಯ.

ವಿಜಾಪುರ ಜಿಲ್ಲೆಯಲ್ಲಿ ಒಂದು ತಾಲೂಕು ಸ್ಥಳವಾದ ಸಿಂದಿಗಿ ಗ್ರಾಮದಿಂದ ಪೂರ್ವಕ್ಕೆ ೨೪ ಮೈಲುಗಳ ಮೇಲೆ ಕಲಬುರ್ಗಿ ಜಿಲ್ಲೆಯಲ್ಲಿ ಶಿವಪುರವೆಂಬ ಒಂದು ಗ್ರಾಮವಿರುತ್ತದೆ. ಆಲ್ಲಿ 'ನಾಚಯ್ಯ' ಅಥವಾ 'ನಾಚಿದೇವ' ಎಂಬ ಹೆಸರಿನ ಶಿವಭಕ್ತನು ತಿಲಕಾಯಕ ಎಂದರೆ ಗಾಣಿಗರ ಉದ್ಯೋಗವನ್ನು ಮಾಡುತ್ತ ಉಪಜೀವಿಸುತ್ತಿದ್ದನು. ಅವನು ಅದರಿಂದ ಉಪಜೀವಿಸುತ್ತ ಉಳಿದದ್ದನ್ನು ದಾಸೋಹಕಾರ್ಯ ಗಳಿಗೆ ಉಪಯೋಗಿಸುವನು. ಅವನು ಮಲ್ಲಿಕಾರ್ಜುನನ ಕೇವಲ ಭಕ್ತನು ಮತ್ತು ಲಿಂಗಧಾರಿಯು. ಅವನು ಶಿವಾನುಭವಿಯಾಗಿ ವೀರಭಕ್ತಿಯಿಂದ ಆಚರಿಸುವವನಾಗಿದ್ದನು. ಅವನು ಲಿಂಗದಲ್ಲಿ ಏಕ ನಿಷ್ಠೆಯುಳ್ಳವನು, ನಿಶ್ಶಂಕ ವೃತ್ತಿಯುಳ್ಳವನು, ಮತ್ತು ಭಕ್ತನಿಂದೆಯನ್ನ ಎಂದಿಗೂ ಸೈರಿಸನು. ಈ ರೀತಿಯಾಗಿ ಅವನು ತನ್ನ ಗ್ರಾಮದಲ್ಲಿ ಗಣಾಚಾರದಿಂದ ನಡೆಯುತ್ತ ಸುತ್ತಲೂ ಹೆಸರುವಾಸಿಯಾಗಿದ್ದನು.

ಶಿವಪುರದಿಂದ ಪೂರ್ವಕ್ಕೆ ೨೦ ಮೈಲುಗಳ ಮೇಲೆ ಮಾರುಡಿಗೆ ಎಂಬ ಗ್ರಾಮವಿದೆ. ಇದು ಈಗ ಕಲಬುರ್ಗಿ ಜಿಲ್ಲೆಯಲ್ಲಿದೆ. ಆ ಗ್ರಾಮ ದಲ್ಲಿ ಆಗ ಇರುವವರೆಲ್ಲರೂ ಜೈನರು. ಅಲ್ಲಿ ಎಲ್ಲಕಡೆಗೂ ಅವರ ಬಸದಿಗಳು. ಆದರೆ ಗ್ರಾಮದಲ್ಲಿ ಬ್ರಹ್ಮೇಶ್ವರನ ದೇವಾಲಯವೆಂದು ಒಂದೇ ಒಂದು ಲಿಂಗದ ಗುಡಿಯು ಇದ್ದಿತು. ಆದರೆ ಅದನ್ನು ಸಹ ಆ ಜೈನರು ಕೆಡವಿಹಾಕಿ ಅದರ ತಮ್ಮಡಿ (ದೇವಾಲಯದ ಸೇವಕ ಅಥವಾ ಪೂಜಾರಿ) ಯನ್ನು ಹೊಡೆದುಬಡಿದು ಅವನನ್ನು ಗ್ರಾಮದ ಹೊರಗೆ ಹಾಕಿಬಿಟ್ಟರು. ಆದ್ದರಿಂದ ಅವನು ಮಾರುಡಿಗೆಯನ್ನು ಬಿಟ್ಟು ನಾಚಿದೇವನಿದ್ದ ಶಿವಪುರದಲ್ಲಿ ಬಂದು ವಾಸಿಸಹತ್ತಿದನು.

ಹೀಗಿರುವಲ್ಲಿ ಒಂದುದಿನ ನಾಚಿದೇವನ ಕನಸಿನಲ್ಲಿ ಪರಮಾತ್ಮನು ಬಂದು, ಅವನಿಗೆ— ನೀನು ಭಕ್ತರ ನೋವನ್ನು ಗಣಿಸುವದಿಲ್ಲ. ಹೀಗೆ ಮಾಡಬೇಡ. ಇಗೋ ನೋಡು, ನನ್ನ ಮೈಯ್ಯಮೇಲೆ ಬಾಸುಳಗಳಿ ದ್ದಿವೆ. ಒಬ್ಬ ಭಕ್ತನು ಮಾರುಡಿಗೆಗೆ ಬಂದಿರಲು ಜೈನರು ಅವನನ್ನು ಒಳಿತಾಗಿ ಹೊಡೆದುಬಡಿದು ಗ್ರಾಮದ ಹೊರಗಟ್ಟಿದರು. ಅವನು

ನಿಮ್ಮೂರ ಕೆರೆಯ ದಂಡೆಯ ಮೇಲೆಯೇ ಈಗ ಬಂದಿದ್ದಾನೆ. ಅವ ನನ್ನು ನೀನು ಕಾಣು. ಭಕ್ತರ ನೋವೇ ನನ್ನ ನೋವು. ಆ ಭಕ್ತನ ಮೈಮೇಲಿನ ಬಸುಳುಗಳೇ ನನ್ನ ಮೈಮೇಲೆ ಎದ್ದಿವೆ ಎಂದು ಹೇಳಿ ಅಂತರ್ಧಾನನಾದನು. ಆಗ ನಾಚಿದೇವನಿಗೆ ಎಚ್ಚರಾಯಿತು. ಅವನು ಮರುದಿನ ಮುಂಜಾವಿನಲ್ಲೆದ್ದು ಗ್ರಾಮದಲ್ಲಿಯ ಭಕ್ತರಿಗೆ ತನಗೆ ಬಿದ್ದ ಕನಸನ್ನು ಹೇಳಿ, ಅವರನ್ನು ಕರೆದುಕೊಂಡು ಕೆರೆಯ ಏರಿಗೆ ಬಂದನು. ಅಲ್ಲಿ ಒಬ್ಬ ಭಕ್ತನು— ಅಯ್ಯೋ, ಮಹಾದೇವನೇ, ಎಂದು ಒರ ಲುತ್ತ ಬಿದ್ದಿದ್ದನ್ನು ಕಂಡನು. ನಾಚಿದೇವನು ಅವನನ್ನು ಸಂತೈಸಿ ಅವನನ್ನು ಎತ್ತಿಕೊಂಡು ತನ್ನ ಮನೆಗೆ ಬಂದು ಉಪಚರಿಸಿದನು. ಆಮೇಲೆ ಅವನಿಗೆ— ನಿನಗೇನಾಯಿತೆಂದು ಕೇಳಲು ಅವನು ಹೇಳಿದುದು ಏನೆಂದರೆ--

ಜೈನರು ನನಗೆ ಹಿಂಸೆ ಮಾಡಿದ್ದನ್ನು ನಿಮಗೆ ಎಷ್ಟೆಂತು ಹೇಳಲಿ! ನಾನು ಬಣಜಿಗ ಕಾಯಕದವನು. ನಾನು ಸರಕುಗಳನ್ನು ಹೇರಿ ಕೊಂಡು ಗ್ರಾಮಗಳಿಗೆ ಹೋಗಿ ಅಲ್ಲಿ ವ್ಯಾಪಾರ ಮಾಡಿಕೊಂಡು ಮಾರು ಡಿಗೆ ಎಂಬ ಗ್ರಾಮಕ್ಕೆ ಬಂದೆನು. ಅಲ್ಲಿ ಎಲ್ಲಿ ನೋಡಿದರೂ ಜೈನ ಬಸದಿಗಳೇ. ಕಡೆಗೆ ನಾನು ಒಬ್ಬ ಜೈನನ ಮನೆಯ ಮುಂದಣ ಅಂಗ ಣದಲ್ಲಿ ವಾಸ್ತವ್ಯಮಾಡಿ ಲಿಂಗಾರ್ಚನೆಯನ್ನು ಮಾಡಿಕೊಳ್ಳುವಷ್ಟರಲ್ಲಿ ಜೈನರ ಒಂದು ತಂಡವು ಬಂದು ನನ್ನ ಮೇಲೆ ನುಗ್ಗಿ, ನನ್ನನ್ನು ನೆಲಕ್ಕೆ ಕೆಡಹಿ, ನಾನು ಪೂಜೆಗೋಸ್ಕರ ಇಟ್ಟಿದ್ದ ಅಗ್ಗವಣಿಯನ್ನು ನೆಲಕ್ಕೆ ಚೆಲ್ಲಿ, ಪುಷ್ಪಗಳನ್ನು ಅತ್ತಿತ್ತ ಹರಿವಿ, ಹಚ್ಚಿದ ದೀಪವನ್ನು ನಂದಿಸಿ, ನನ್ನನ್ನ ಬೆತ್ತದಿಂದ ಹೊಡೆದು ಬಡಿದು ಗಾಸಿ ಮಾಡಹತ್ತಿ ದರು. ನಾನು ಹೇಗೋ ಅವರ ಕೈಯ್ಯಿಂದ ಪಾರಾಗಿ ಓಡಿ ಹೋದೆನು. ಆದರೆ ಅವರು ನನ್ನನ್ನು ಬಿಡದೆ ಬೆನ್ನಟ್ಟಿ ಒಳಿತಾಗಿ ಹೊಡೆದರು. ಆಗ ನಾನು ಮೂರ್ಛೆ ಹೋದೆನು. ನನಗೆ ಎಚ್ಚರಾದ ಬಳಿಕ ಮೈತುಂಬ ಗಾಯಗಳಾಗಿ ನೆತ್ತರು ಸೋರುತ್ತಿದ್ದಿತು. ಅದರಲ್ಲೂ ನಾನು ಕಲ್ಲುಮುಳ್ಳು ಗಳನ್ನು ತುಳಿಯುತ್ತ, ಎಡಹುತ್ತ, ಬತ್ತಲೆಯಾಗಿ ನಡೆದುಕೊಂಡು ಈ ಗ್ರಾಮಕ್ಕೆ ಬಂದೆನು. ಅಷ್ಟರಲ್ಲಿ ನನಗೆ ಮೂರ್ಛೆಯು ಬಂದಿತು. ಆಗ ನನ್ನ ಕನಸಿನಲ್ಲಿ ಪರಮಾತ್ಮನು ಬಂದು— ನೀನು ಅಂಜಬೇಡ. ಇಲ್ಲಿ ನಾಚಿತಂದೆಯೆಂಬ ಗಣಾಧೀಶ್ವರನಿದ್ದಾನೆ, ಅವನಿಗೆ ನೀನು ಮೊರೆ

ಹೊಗು, ಅವನು ನಿನ್ನನ್ನು ರಕ್ಷಿಸುತ್ತಾನೆ, ಎಂದು ಹೇಳಿದನು. ಇದೇ ನಿರ್ಭಾಗ್ಯನಾದ ನನ್ನ ವೃತ್ತಾಂತವು. ನನ್ನ ಶಿವಾಚಾರದ ಹಾನಿಯು ಎಂದು ಗಟ್ಟಿಯಾಗಿ ರೋದಿಸಹತ್ತಿದನು.

ಅವನ ವೃತ್ತಾಂತವನ್ನು ಗ್ರಾಮದಲ್ಲಿದ್ದ ಭಕ್ತರು ಕೇಳಿ ಬಹಳ ಮರುಗಿದರು. ಅವರು ಮಾರುಡಿಗೆಯಲ್ಲಿದ್ದ ಶಿವಾಲಯವನ್ನು ಈ ಮೊದಲಿಗೆ ಜೈನರು ನಾಶಮಾಡಿದರು. ಈಗ ಒಬ್ಬ ಶಿವಭಕ್ತನನ್ನು ಗಾಸಿಮಾಡಿದರು. ಇದಕ್ಕೆ ಪ್ರತೀಕಾರ ಮಾಡಬೇಕೆಂದು ಅವರು ನಿಶ್ಚಯಿಸಿದರು. ಗಣಾಚಾರ ನಿರತನಾದ ಮಾಚಿದೇವನು ಅತ್ಯಂತ ಕೆರಳಿದನು. ಅವರೆಲ್ಲರೂ ಮಾರುಡಿಗೆಯನ್ನು ಪ್ರವೇಶಿಸಿ ಅಲ್ಲಿಯ ಮುಖ್ಯ ಜಿನಾಲಯದಲ್ಲಿ ಮಲ್ಲಿನಾಥನನ್ನು ಪ್ರತಿಷ್ಠಿಸಬೇಕೆಂದು ನಿರ್ಧರಿಸಿದರು. ಆದರೆ ಅಲ್ಲಿಯ ಜೈನರು ಶಿವಭಕ್ತರನ್ನು ತಮ್ಮ ಗ್ರಾಮದೊಳಗೆ ಬರಗೊಡರು. ಆದ್ದರಿಂದ ಒಂದು ಉಪಾಯವನ್ನು ಯೋಚಿಸಿ ಮದುವೆಯ ಸಂಭ್ರಮದ ನೆವವನ್ನ ಮುಂದೆ ಮಾಡಿಕೊಂಡು ಗ್ರಾಮವನ್ನು ಪ್ರವೇಶಿಸಬೇಕೆಂದು ಗೊತ್ತು ಪಡಿಸಿಕೊಂಡರು. ಆಗ ನಾಚಿದೇವನು ಒಂದು ಬಂಡಿಯ ಮೇಲೆ ಒಂದು ದಿವ್ಯವಾದ ಶಿವಲಿಂಗವನ್ನ ಬಿಜಯಮಾಡಿಸಿ, ಅದು ಮದು ಮಗನ ಬಂಡಿ ಎಂದು ಹೇಳಿ, ಅದನ್ನು ತಳಿರುಗಳಿಂದ ಶೃಂಗರಿಸಿ ಅದಕ್ಕೆ ಕಾಪಿನ ಆಳುಗಳನ್ನು ನಿಯಮಿಸಿ ತಾನು ಮತ್ತು ತನ್ನೊಡನೆ ಹದಿಮೂರು ಜನ ಭಕ್ತರು ಆ ತಳಿರುಬಂಡಿಯನ್ನೇರಿ ಮಾರುಡಿಗೆಗೆ ಹೊರಟರು. ಅವರು ಎಲ್ಲರೂ ಸಾಯಂಕಾಲದಲ್ಲಿ ಆ ಗ್ರಾಮದ ಹೊರಗೆ ಬಂದಿಳಿದರು.

ಆಗ ಗ್ರಾಮದ ಜೈನರು ಅವರಿಗೆ— ನೀವೆಲ್ಲಿಗೆ ಹೋಗುತ್ತೀರೆಂದು ಕೇಳಲು ಅವರು ನಾವು ಮದುವೆಗೆ ಹೋಗುತ್ತೇವೆಂದು ಹೇಳಲು ಅವರು- ನೀವು ರಾತ್ರಿ ಇಲ್ಲಿ ಹೊರಗೆ ಇರಬೇಡಿರಿ. ತುಡುಗರ ಹಾವಳಿ ಬಹಳ ಇದೆ ಎಂದು ಅವರನ್ನು ಕರೆದುಕೊಂಡು ತಮ್ಮ ಹಿರಿಯ ಜಿನಾಲಯದ ಮುಂದೆ ಇಳಿಸಿದರು. ಅಲ್ಲಿ ಆ ಭಕ್ತರು ತಳುವಿದ ಬಳಿಕ ಅವರು ಮಧ್ಯರಾತ್ರಿಯಲ್ಲಿ ಜಿನಾಲಯವನ್ನು ಪ್ರವೇಶಿಸಿ ಒಳಗಿದ್ದ ಜಿನಪ್ರತಿಮೆಯನ್ನು ಕೆಡಿವಿ ಅಲ್ಲಿದ್ದ ಬತ್ತಲೆ ಬೊಂಬೆಗಳನ್ನು ಒಡೆದು ಹಾಕಿ ಅಲ್ಲಿ ಮಲ್ಲಿಕಾರ್ಜುನ ಲಿಂಗವನ್ನು ಪ್ರತಿಷ್ಠಿಸಿದರು.

ಮರುದಿನ ಬೆಳಿಗ್ಗೆ ಜೈನ ಪಂಡಿತನೊಬ್ಬನು ಪೂಜೆಗೋಸ್ಕರ ಜಿನ ಮಂದಿರವನ್ನು ಪ್ರವೇಶಿಸುತ್ತಿರಲು ಅಲ್ಲಿದ್ದ ನಾಚಿದೇವ ಮೊದಲಾದ ಶಿವ ಭಕ್ತರು ಅವನನ್ನು ಒಳಗೆ ಬರಗೊಡದೆ ಹೊರಗಟ್ಟಿದರು. ಆದರೆ ಒಳಗೆ ಜಿನಪ್ರತಿಮೆಗಳು ಒಡೆದು ಹೋದದ್ದನ್ನು ಅವನು ಕಂಡು ಗ್ರಾಮದ ಲ್ಲಿದ್ದ ಜೈನರಿಂಗೆ ಇದನ್ನು ಹೇಳಲಾಗಿ ಅವರು ಮೋಸವಾಯಿತೆಂದು ತಿಳಿದು ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ ಮಂದಿರಕ್ಕೆ ಮುತ್ತಿಗೆಯನ್ನು ಹಾಕಿದರು. ಆದರೆ ನಾಚಿದೇವನೂ ಅವನೊಡನೆ ಬಂದಿದ್ದ ಜನರೂ ಅಂಜದೆ ಅವರೊಡನೆ ದೇವಾಲಯದ ಮುಂದೆ ಕಾದಿ ಅವರನ್ನು ಹಿಂದ ಕ್ಕಟ್ಟಿದರು. ಆದರೆ ಅಷ್ಟರಲ್ಲಿ ನಾಚಿದೇವನ ಸಂಗಡವಿದ್ದ ಹದಿಮೂರು ಜನ ಗಣಾಧೀಶ್ವರರು ಆ ಸಮಯದಲ್ಲಿ ಬಂದ ವಿಮಾನುಗಳಿಂದ ಕೈಲಾಸಕ್ಕೆ ಹೊರಟು ಹೋದರು. ನಾಚಿದೇವನೊಬ್ಬನೇ ಉಳಿದನು. ಆದರಿ ಅವನು ಹಿಂಜರಿಯಲಿಲ್ಲ. ದೇವಾಲಯದ ಬಾಗಿಲಲ್ಲಿ ಜೈನರ ಕೂಡ ಹೋರಾಡುತ್ತ ಅವರನ್ನು ತರುಬಿಕೊಂಡು ನಿಂತನು.

ಅಷ್ಟರಲ್ಲಿ ಮಾರುಡಿಗೆಯಲ್ಲಿ ನಡೆದ ಕದನದ ವೃತ್ತಾಂತವನ್ನು ಶಿವಪುರದಲ್ಲಿದ್ದ ಗಣಕುಲವು ಕೇಳಿ ಅವರೆಲ್ಲರೂ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ ವೃಷಭಧ್ವಜವನ್ನು ಹಾರಿಸುತ್ತ, ಒಂದು ಬಂಡಿ ತುಂಬ ಲಿಂಗಗಳನ್ನು ಅಣಿಮಾಡಿಕೊಂಡು ಮಾರುಡಿಗೆಯ ಗ್ರಾಮವನ್ನು ಪ್ರವೇ ಶಿಸಿದರು. ಆಗ ರಣಸಂಕುಳವು ಹೆಚ್ಚಾಯಿತು. ಆದರಲ್ಲಿ ಜೈನರು ಚದರಿಹೋದರು. ಆಮೇಲೆ ಭಕ್ತರು ಗ್ರಾಮದಲ್ಲಿದ್ದ ಬಸದಿಗಳಲ್ಲಿಯ ಜಿನಪ್ರತಿಮೆಗಳೆಲ್ಲವನ್ನ ಒಡೆದುಹಾಕಿದರು ಮತ್ತು ಅವುಗಳ ಸ್ಥಳದಲ್ಲಿ ಲಿಂಗಪ್ರತಿಷ್ಠೆಯನ್ನು ಮಾಡಿದರು. ಹೀಗೆ ಜಿನಪುರವೆಂದು ಪ್ರಸಿದ್ಧಿ ಯನ್ನು ಹೊಂದಿದ್ದ ಆ ಮಾರುಡಿಗೆ ಗ್ರಾಮವು ಶಿವಪುರವಾಯಿತು.

ಹೀಗೆ ನಾಚಿದೇವನೂ ಅವನೊಡನೆ ಇದ್ದ ಭಕ್ತರೂ ಮಾರುಡಿಗೆ ಯಲ್ಲಿ ಲಿಂಗಪ್ರತಿಷ್ಠೆಯನ್ನು ಮಾಡಿದ ಬಳಿಕ ಅವರು ಆ ಗ್ರಾಮದ ಸುತ್ತಲೂ ಇದ್ದ ಗ್ರಾಮಗಳಲ್ಲಿಯ ಬಸದಿಗಳಲ್ಲಿ ಸಹ ಲಿಂಗಗಳನ್ನು ಪ್ರತಿಷ್ಠಾಪಿಸತೊಡಗಿದರು. ಹೀಗೆ ಈ ಭಾಗದಲ್ಲಿದ್ದ ಅನೇಕ ಬಸದಿಗಳು ಶಿವಾಲಯಗಳಾದವು.

ಹೀಗೆ ಮಾರುಡಿಗೆಯು ಶಿವಪುರವಾದ ಬಳಿಕ ನಾಚಿದೇವನು ಅಲ್ಲಿಯೇ ವಾಸಮಾಡಹತ್ತಿದನು. ಅಂದಿನಿಂದ ಅವನು 'ಮಾರುಡಿಗೆಯ ನಾಚಯ್ಯ'ನೆಂದು ಶಿವಶರಣರಲ್ಲಿ ಬಹು ಪ್ರಸಿದ್ಧನಾದನು. ಅವನು ಕಡೆಗೆ ಈ ಗ್ರಾಮದಲ್ಲಿಯೇ ಲಿಂಗೈಕ್ಯನಾದನು.

ಮಾರುಡಿಗೆಯ ನಾಚಯ್ಯನ ಹೆಸರು ಗಣಸಹಸ್ರದಲ್ಲಿ ಬಂದಿರುತ್ತದೆ. ಆದ್ದರಿಂದ ಅವನು ಹಿಂದಿನಕಾಲದವನು. ಆದರೆ ಅವನು ಕೋಹೂರು ಬ್ರಹ್ಮಯ್ಯನಂತೆ ಬಸವೇಶ್ವರನ ತರುವಾಯ ಪ್ರಸಿದ್ಧಿಗೆ ಬಂದಂತೆ ತೋರುತ್ತದೆ.

ಮಾರುಡಿಗೆಯ ನಾಚಯ್ಯನು ವಚನಕಾರನಿದ್ದಾನೆ. 'ನಾಚಯ್ಯ ಪ್ರಿಯ ಮಲ್ಲಿನಾಥಾ' ಎಂಬುದೇ ಅವನ ಮುದ್ರಿಕೆಯು. ನಾಚಯ್ಯನು ಶೂರಪುರುಷನು. ಬಸವೇಶ್ವರನ ಕಾಲದಲ್ಲಿ ಅವನಂತೆ ಅನೇಕ ಶೂರಪುರುಷರು ಉದಯವಾಗಿ ಅವರು ತಮ್ಮ ನಿತ್ಯದ ಕಾಯಕಗಳನ್ನು ಮಾಡಿಕೊಂಡು ಹೇಗೆ ಆಧ್ಯಾತ್ಮಿಕ ವೃತ್ತಿಯಲ್ಲಿ ತೊಡಗಿರುತ್ತಿದ್ದರೆಂಬುದು ಲಕ್ಷಿಸತಕ್ಕ ವಿಷಯವಾಗಿದೆ. ಇದು ಆಗಿನ ಕಾಲದ ವಿಚಾರ ಕ್ರಾಂತಿಯನ್ನು ತೋರಿಸುತ್ತದೆ. ನಾಚಿದೇವನ ನಾಲ್ಕು ವಚನಗಳು ಮಾತ್ರ ನಮಗೆ ಉಪಲಬ್ಧವಿದ್ದು ಅವುಗಳನ್ನೆಲ್ಲ ನಾವು ಇಲ್ಲಿ ಕೊಟ್ಟಿದ್ದೇವೆ.

ವಚನಗಳು.

(೧) ಹೆಂಡಿರೆನ್ನದೆ, ಮಕ್ಕಳೆನ್ನದೆ, ತೊತ್ತಿರೆನ್ನದೆ, ಬಂಟರೆನ್ನದೆ, ಹಗೆಗಳೆನ್ನದೆ, ತಪ್ಪೆನ್ನದಯ್ಯ. ಜಾಗ್ರತ್ ಸ್ವಪ್ನ ಸುಷುಪ್ತಿ

---

೧ ೧೯೨೩ ರಲ್ಲಿ ಪ್ರಸಿದ್ಧವಾದ ವಚನಶಾಸ್ತ್ರಸಾರ ಭಾಗ-೧ ಇದರಲ್ಲಿಯ ಮುದ್ರಿಕೆಗಳ ಕೈಬರಹದ ನಮ್ಮ ಮೂಲ ಟಿಪ್ಪಣಿಗಳಲ್ಲಿ ಈ ಮುದ್ರಿಕೆ 'ಇದ್ದ ವಚನಕಾರನು 'ದಶಗುಣಸಿಂಗಿದೇವ' ಅಥವಾ 'ನಾಚಯ್ಯ' ಎಂದಿದೆ. 'ನಾಚಯ್ಯ' ಈ ಹೆಸರಿನ ಮುಂದೆ ಸಂಶಯಯುಕ್ತ ಚಿನ್ಹವಿದೆ. ಆದ್ದರಿಂದ ನಾವು 'ದಶಗುಣಸಿಂಗಿದೇವ' ಈತನು ವಚನಕಾರನೆಂದು ಆ ಗ್ರಂಥದಲ್ಲಿ ಕಾಣಿಸಿದ್ದೇವೆ. ಆದರೆ ಈ ಮುದ್ರಿಕೆಯುಳ್ಳ ವಚನಕಾರನು ನಾಚಯ್ಯನೆಂದು ಈ ಚರಿತ್ರೆಯಲ್ಲಿ ಉಲ್ಲೇಖವಾಪ ಅವನ ಇಷ್ಟದೇವತೆಯ ಹೆಸರಿನಿಂದ ತಿಳಿದುಬರುತ್ತದೆ.

ಯಲ್ಲಿ ತಪ್ಪೆನ್ನದಯ್ಯ. ನಾಚಯ್ಯ ಪ್ರಿಯ ಮಲ್ಲಿನಾಥಯ್ಯ ನೀನಿದ್ದವರ ನೀನೆನ್ನದ ತಪ್ಪೆನ್ನದಯ್ಯ.

(೨) ಸತಿ-ಸುತ ಮಾತಾಪಿತರಿಗೆಂದು ಹಡೆದಡೆ ನಿಮ್ಮಾಣೆ ಕಂಡಯ್ಯ. ಮಾನವ ಸೇವೆಯ ಮಾಡಿದಡೆ ನಿಮ್ಮಾಣೆ ಕಂಡಯ್ಯ. ನೀವಲ್ಲದನ್ಯಕ್ಕೆರಗಿದಡೆ ನಿಮ್ಮ ಆಣೆ ಕಂಡಯ್ಯ. ಎನ್ನ ಸತಿಯುಲ್ಲದನ್ಯ ಸತಿಗಳುಪಿದಡೆ ನಿಮ್ಮಾಣೆ ಕಂಡಯ್ಯ. ತನುಮನ ವಂಚನೆಯಾದಡೆ ನಾಚಯ್ಯಪ್ರಿಯ ಮಲ್ಲಿನಾಥಯ್ಯ ನಿಮ್ಮಾಣೆ ಕಂಡಯ್ಯ.

(೩) ಪೂರ್ವಕರ್ಮವ ಕೆಡಿಸಿದನೆನ್ನ ಗುರು. ಉಭಯ ಕರ್ಮವ ಬಿಡಿಸಿ ತೋರಿದ. ಶರಣರವರಿಂದ ಬದುಕಿದೆನು. ತೋರಿದನು ಸದ್ಭಕ್ತರವರಿಂದ. ಬದುಕಿದೆನು, ನಾಚಯ್ಯಪ್ರಿಯ ಮಲ್ಲಿನಾಥಯ್ಯ ಗುರುವಿಂದ ಬದುಕಿದೆನು. ನಿಮ್ಮ ಹಂಗೇನು?

(೪) ಮುಂಚಿದೆವಯ್ಯ ಪರಬ್ರಹ್ಮವ. ಮುಂಚಿದೆವಯ್ಯ ಸಾಲೋಕ್ಯ ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಪದವಿಯ. ಮುಂಚಿದೆವಯ್ಯ ನಾಚಯ್ಯಪ್ರಿಯ ಮಲ್ಲಿನಾಥಾ ನಿಮ್ಮಿಂದ.

ಅಜಗಣ್ಣ.

ಅಜಗಣ್ಣನು ಗದಿಗಿನಿಂದ ಆಗ್ನೇಯ ದಿಕ್ಕಿನಲ್ಲಿ ೮ ಮೈಲುಗಳ ಮೇಲೆ ಇರುವ ಲಕ್ಕುಂಡಿ ಎಂಬ ಗ್ರಾಮದವನು. ಈ ಗ್ರಾಮವು ಪುರಾತನ ಕಾಲದಲ್ಲಿ ಬಹು ಪ್ರಸಿದ್ಧವಾದದ್ದು. ಅಜಗಣ್ಣನಿಗೆ ಮುಕ್ತಾಯಕ್ಕ ಎಂಬ ತಂಗಿಯು ಇದ್ದು ಅವಳ ಗಂಡನ ಊರು 'ಮುಸಳಿಕಲ್ಲು' ಎಂಬುದಾಗಿತ್ತು. ಆದ್ದರಿಂದ ಅವಳು ಈ ಗ್ರಾಮದಲ್ಲಿಯೇ ವಾಸಿಸುತ್ತಿದ್ದಳು. ಅಜಗಣ್ಣನ ಗ್ರಾಮವು ಲಕ್ಕುಂಡಿಯಾಗಿದ್ದರೂ ಅವನು ಏವುದೋ ಒಂದು ಕಾರಣದಿಂದ ಅಲ್ಲಿರದೆ ತನ್ನ ತಂಗಿಯೊಡನೆ ಮುಸಳಿಕಲ್ಲು ಗ್ರಾಮದಲ್ಲಿರುತ್ತಿದ್ದನು.

ಅಜಗಣ್ಣನು ಈ ಮುಸಳಿಕಲ್ಲು ಗ್ರಾಮದಲ್ಲಿ 'ಹಲಾಯುಧ ಕಾಯಕ' ಎಂದರೆ ಒಕ್ಕಲುತನವನ್ನು ಮಾಡುತ್ತ ಪಾಸೋಹಿಯಾಗಿ

ದ್ದನು. ಅವನು ಒಬ್ಬ ಶ್ರೇಷ್ಠ ಶಿವಜ್ಞಾನಿಯು. ಲಿಂಗಾರ್ಚನೆಯಲ್ಲಿ ಮಗ್ನನಾಗಿ ಯಾವಾಗಲೂ ಶಿವಯೋಗಾಚರಣೆಯಲ್ಲಿರುತ್ತಿದ್ದನು. ಅವನು ತನ್ನ ಅರ್ಚನೆಯ ಕಾಲದಲ್ಲಿ ಪಂಚಾಕ್ಷರೀ ಜಪಗಳನ್ನು ಉಚ್ಚ ಸ್ವರದಿಂದ ಎಲ್ಲರೂ ಕೇಳುವಂತೆ ಅನ್ನುತ್ತ ತನ್ನ ಪೂಜಾದಿ ಕಾರ್ಯಗಳನ್ನು ನೆರವೇರಿಸುವನು. ಹೀಗೆ ಪೂಜೆ ಮಾಡುವದೇ ಅವನಿಗೆ ವಾಡಿಕೆಯಾಗಿತ್ತು.

ಅಜಗಣ್ಣನು ತಾನು ಮಾಡಿಕೊಂಡಿದ್ದ ಹೊಲದಲ್ಲಿ ಕಡಲೆಯನ್ನು ಬಿತ್ತಿದ್ದನು. ಅವನು ಅದನ್ನು ಕಾಯಲಿಕ್ಕೆ ರಾತ್ರಿಯಲ್ಲಿ ಹೋದಾಗ ಅವನಿಗೆ ಒಂದು ದೃಶ್ಯವು ಕಣ್ಣಿಗೆ ಬಿದ್ದಿತು. ಅವನಿಂದ ಸ್ವಲ್ಪ ದೂರದಲ್ಲಿ ಮೂರು ಮಾರು ಉದ್ದ ಮತ್ತು ಮೂರು ಮಾರು ಅಗಲ ಹೀಗೆ ಜಗ್ಗನೆ ನೆಲದ ಮೇಲೆ ಒಂದು ಪ್ರಕಾಶವು ಬಿದ್ದಿತು. ಅಜಗಣ್ಣನು ಅದನ್ನು ನೋಡಿ ಚಕಿತನಾಗಿ ದಿಟ್ಟಿಸಿ ನೋಡುವಷ್ಟರಲ್ಲಿ ಅಲ್ಲಿ ಒಂದು ಮಹಾ ಘಟಸರ್ಪವು ತನ್ನಲ್ಲಿ ಹುದುಗಿದ್ದ ಜೀವರತ್ನವನ್ನು ಹೊರಗೆ ಉಗುಳಿ, ಅದರ ಪ್ರಕಾಶದಲ್ಲಿ ತನ್ನ ಆಹಾರವನ್ನು ಹುಡುಕುತ್ತ ಅಲ್ಲಲ್ಲಿ ಸುತ್ತುತ್ತಿತ್ತು. ಅಜಗಣ್ಣನು ಅದನ್ನು ನೋಡುತ್ತ ಕೆಲಹೊತ್ತು ನಿಲ್ಲಲು, ಅಷ್ಟರಲ್ಲಿ ಆ ಸರ್ಪನ ಸಮೀಪದಲ್ಲಿ ಏನೋ ಒಂದು ಸದ್ದಾಗಲು, ಅದಕ್ಕೆ ಸಂಶಯ ಬಂದು, ಕೂಡಲೆ ಆ ರತ್ನವನ್ನು ನುಂಗಿಕೊಂಡು ತನ್ನ ಹುತ್ತನ್ನು ಹೊಕ್ಕುಬಿಟ್ಟಿತು.

ಇದನ್ನು ಅಜಗಣ್ಣನು ನೋಡಿ ಅವನ ಮನಸ್ಸಿನಲ್ಲಿ ಒಂದು ಪ್ರಕಾಶವು ಹೊಳೆಯಿತು. ಆಗ ಅವನು ವಿಚಾರಮಾಡಿದ್ದೇನಂದರೆ— ಶಿವ ಶಿವಾ, ಇಂಥ ಪ್ರಾಣಿಯು ತನ್ನ ಜೀವರತ್ನವನ್ನು ಎಷ್ಟು ಗೋಪ್ಯವಾಗಿ ಇಟ್ಟುಕೊಳ್ಳುತ್ತಿದೆಯಲ್ಲಾ! ಹಾಗೆಯೇ ನಾನು ಪರಮಪವಿತ್ರವಾದ ಮತ್ತು ಪ್ರಾಣದಂತಿರುವ ಇಷ್ಟಲಿಂಗವನ್ನು ಗೋಪ್ಯದಲ್ಲಿ ಪೂಜಿಸತಕ್ಕದ್ದಲ್ಲವೇ? ಆ ಸರ್ಪನು ಸ್ವಲ್ಪ ಸದ್ದಾಗಲು ಭೋರೆನ್ನದೆ ಸುಮ್ಮನೆ ಹೋಗಿಬಿಟ್ಟಿತು. ಹಾಗೆಯೇ ನಾನು ಪಂಚಾಕ್ಷರೀ ಮಂತ್ರವನ್ನು ಗಟ್ಟಿಯಾಗಿ ಉಚ್ಚರಿಸದೆ ಅದನ್ನು ನಾನು ಗೌಪ್ಯವಾಗಿ ಇಟ್ಟುಕೊಳ್ಳತಕ್ಕದ್ದಲ್ಲವೇ? ಅಜಗಣ್ಣನು ಶಿವಾನುಭವ ಶಾಸ್ತ್ರಗಳನ್ನು ಚನ್ನಾಗಿ ಓದಿದವನು. ಆವನು ಹೀಗೆ ವಿಚಾರಮಾಡುತ್ತಿರಲು ಅವನಿಗೆ ಲಿಂಗದ ಸ್ವರೂಪದ ವಿಷಯ

ವಾಗಿ ವಾತುಲಾಗಮದಲ್ಲಿಯ ಒಂದು ಉಕ್ತಿಯು ನೆನಪಿಗೆ ಬಂದು ಅದನ್ನು ಅಂದದ್ದುಃ— "ಪರಂ ಗೂಢಂ ಶರೀರಸ್ಥಂ ಲಿಂಗಕ್ಷೇತ್ರಮನಾದಿವತ್ । ಯದಾದಿವಿಮೂಶ ತೇಜಂ ತಲ್ಲಿಂಗ ಪಂಚ ಸಂಜ್ಞಕಂ ॥ ಪರಮಾತ್ಮನು ಪರವಸ್ತುವು, ಗೂಢನು, ಅಂಗದಲ್ಲಿಯೇ ಇರುವವನು, ಲಿಂಗರೂಪಾಗಿರುವಂಥವನು, ಅನಾದಿಯು ಹೀಗೆ ಇದ್ದಾನೆ. ಇದರಲ್ಲಿ ಪರಮಾತ್ಮನು ಲಿಂಗರೂಪಾಗಿದ್ದಾನೆ ಮತ್ತು ಅವನು ವಸ್ತುಗಳಲ್ಲಿ ಗೂಢವಾಗಿ ವಾಸಮಾಡುತ್ತಾನೆಂದಿದೆ. ಅಲ್ಲದೆ ಲಿಂಗವನ್ನು ಪೂಜಿಸುವಲ್ಲಿ ಆ ಪೂಜೆಯನ್ನು 'ಪಾಪಿ, ಕೋಪಿ, ವ್ರತಭ್ರಷ್ಟ, ಜಾರ, ಚೋರ, ಹುಸಿಕ, ಶಿವನಿಂದಕರು" ಎಂದೂ ನೋಡಲಾಗದು ಎಂದು ಶಿವಶರಣರ ನುಡಿಯು ಇದೆ. ಆದ್ದರಿಂದ ಗುರೂಪದೇಶದ ಮಂತ್ರದ ಉಚ್ಚರಣೆಯನ್ನು ದುಷ್ಟರು ಕೇಳಬಾರದು. ಆದರೆ ನಾನು ಪ್ರಕಟತವಾಗಿ ಇಂಥ ಮಂತ್ರವನ್ನು ಉಚ್ಚಾರ ಮಾಡುತ್ತೇನೆ. ಇದು ನನ್ನ ತಪ್ಪು. ಇನ್ನು ಮೇಲೆ ನಾನು ಗುಪ್ತವಾಗಿ ಲಿಂಗಪೂಜೆಯನ್ನು ಮಾಡುವೆನು. ಮಂತ್ರವನ್ನು ಮನದಲ್ಲಿಯೇ ಸ್ಮರಿಸುವೆನು ಎಂದು ನಿಶ್ಚಯ ಮಾಡಿಕೊಂಡು ರಾತ್ರಿಯಲ್ಲಿ ಹೊಲದಲ್ಲಿಯೇ ಮಲಗಿ ಅಜಗಣ್ಣನು ಮರುದಿನ ಬೆಳಿಗ್ಗೆ ಮನೆಗೆ ಹೊರಟು ಬಂದನು.

ಅವನು ಮನೆಗೆ ಬಂದಬಳಿಕ ಗುಪ್ತದಲ್ಲಿ ಲಿಂಗಪೂಜೆಯನ್ನು ಮಾಡುತ್ತ ಮನದಲ್ಲಿಯೇ ಪಂಚಾಕ್ಷರಿಯನ್ನು ನೆನೆಯುತ್ತ ಲಿಂಗ ಧ್ಯಾನ ಮಾಡಹತ್ತಿದನು. ಇದರಿಂದ ಅವನ ಲಿಂಗವು ಅವನ ಅಮಳೋಕ್ಯದಲ್ಲಿ ಅಡಗಿತು. ಅದು ಅವನಿಗೆ ಪ್ರಾಣಸ್ವರೂಪವಾಯಿತು. ಅವನು ಅದಕ್ಕೆ ಅಂತರಂಗದಲ್ಲಿ ನಿರ್ಗುಣ ಅಷ್ಟವಿಧಾರ್ಚನೆಯನ್ನು ಮಾಡಹತ್ತಿದನು. ಆಗ ಅವನ ಆನಂದಜಲವೇ ಅದಕ್ಕೆ ಮಜ್ಜನೋದಕವಾಯಿತು. ಅವನ ಸುಬುದ್ಧಿಯೇ ಗಂಧವಾಯಿತು. ನಿತ್ಯತ್ವವೇ ಅಕ್ಷತೆಯಾಯಿತು. ಅವನ ಹೃದಯಕಮಲವೇ ಅದಕ್ಕೆ ಪುಷ್ಪವಾಯಿತು. ಅವನ ಸ್ವಾನುಭಾವವೇ ಅದಕ್ಕೆ ಧೂಪವಾಯಿತು. ಸಮ್ಯಜ್ಞಾನವೇ ಆರತಿಯಾಯಿತು. ಅವನ ಆತ್ಮನೇ ಅದಕ್ಕೆ ನೈವೇದ್ಯವಾಯಿತು. ಅವನ ನಿಜಭಕ್ತಿರಾಗರಸವೇ ತಾಂಬೂಲವಾಯಿತು. ಹೀಗೆ ಅವನ ಇಷ್ಟಲಿಂಗವು ಅವನಿಗೆ ಪ್ರಾಣಲಿಂಗವಾಗಲು ಅದನ್ನು ಅಂತರಂಗದಲ್ಲಿ ಅರ್ಚಿಸುತ್ತ, ಮನದಲ್ಲಿ ಮಂತ್ರವನ್ನು ನೆನೆಯುತ್ತ, ಅಂತರಂಗಪೂಜೆ

ಯಲ್ಲಿ ಮಗ್ನನಾದನು. ಅಜಗಣ್ಣನ ಈ ಹೊಸರೀತಿಯನ್ನು ಜನರು ನೋಡಿ ಅವನಿಗೆ— ನಿನ್ನ ಅಂಗದಲ್ಲಿ ಲಿಂಗಪೂಜೆ, ಮುಂತ್ರೋಚ್ಚಾರ ಇವೆಲ್ಲಿವೆ? ಅವು ಕಾಣುವದಿಲ್ಲವಲ್ಲಾ! ಎಂದು ಕೇಳಲು ಅವನು ಅವರಿಗೆ ಏನೂ ಉತ್ತರವನ್ನು ಕೊಡದೆ ಸುಮ್ಮನಾಗುವನು. ಅಜಗಣ್ಣನು ಲಿಂಗೈಕ್ಯನಾಗಿ ವ್ಯವಹರಿಸುತ್ತಿದ್ದ ಈ ರೀತಿಯನ್ನು ಜನರು ಅರಿಯದೆ ಅವನು ಹುಚ್ಚನಾದನೆಂದು ಭಾವಿಸಹತ್ತಿದರು. ಆದರೆ ಲಿಂಗದಲ್ಲಿರುವ ಇಂಥ ಭಕ್ತನಿಗೆ ಷಡೂರ್ಮಿಗಳು ಅಂದರೆ ಹಸಿವೆ, ನೀರಡಿಕೆ, ಶೋಕ, ಮೋಹ, ಜನನ, ಮರಣ ಇವುಗಳು ಹತ್ತುವದಿಲ್ಲ. ಆದರಂತೆಯೇ ಅರಿಷಡ್ವರ್ಗಗಳು ಅಂದರೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ಉಂಟಾಗಲಾರವು. ಇಂಥವರು ಹುಚ್ಚರಹಾಗೆ ತೋರುತ್ತಾರೆ. ಆದರೆ ಅಗ್ನಿಯಲ್ಲಿ ಹೇಗೆ ಕರ್ಪೂರವು ಉರಿಯುತ್ತದೆಯೋ ಹಾಗೆಯೇ ಅವರು ಲಿಂಗದಲ್ಲಿ ಬೆಳಗುತ್ತಿರುತ್ತಾರೆ. ಸ್ವಲ್ಪ ದಿವಸಗಳಲ್ಲಿ ಅಜಗಣ್ಣನ ಅವಸ್ಥೆಯು ಹೀಗಾಯಿತು.

ಈ ಪ್ರಕಾರ ಅಜಗಣ್ಣನು ಲಿಂಗದಲ್ಲಿ ಆಚರಿಸುತ್ತಿರುವಾಗ ಪರಮಾತ್ಮನು ಅವನ ಶಿವಯೋಗಸಾಧನೆಯನ್ನು ನೋಡಿ ಪ್ರೀತನಾಗಿ ಅವನನ್ನು ತನ್ನಲ್ಲಿ ಇಂಬಿಟ್ಟುಕೊಳ್ಳಬೇಕೆಂದು ಬಯಸಿ, ಒಂದು ದಿನ ಅಜಗಣ್ಣನು ಮನೆಯಿಂದ ಹೊರಬೀಳುವಾಗ ಪರಮಾತ್ಮನು ಅವನಿಗೆ ಪ್ರತ್ಯಕ್ಷನಾಗಿ ನನ್ನಲ್ಲಿ ನೀನು ಬರಬೇಕೆಂದು ಹೇಳಿದನು. ಅದಕ್ಕೆ ಅಜಗಣ್ಣನು— ನಾನು ನಿನ್ನಲ್ಲಿ ಬರಲಾರೆನು. ನಾನು ನನ್ನ ಗುಪ್ತಾಚಾರದಲ್ಲಿದ್ದುಕೊಂಡು ನನ್ನ ಸಮಾಧಿಯಲ್ಲಿಯೇ ನಾನು ಮುಕ್ತನಾಗುವೆನು. ಇದರಲ್ಲಿಯೇ ನನಗೆ ಸಂತೋಷವು, ಎಂದು ಹೇಳಲು ಪರಮಾತ್ಮನು ಹಾಗೆಯೇ ಹೊರಟು ಹೋದನು.

ಹೀಗೆ ಅಜಗಣ್ಣನು ತನ್ನ ತಂಗಿಯೊಡನೆ ಕೆಲವು ಕಾಲ ಕಳೆಯುತ್ತಿರಲು ಒಂದು ದಿನ ಅವನು ತನ್ನ ಹೊಲವನ್ನು ನೋಡಿ ಮನೆಗೆ ತಿರುಗಿ ಬರುವಾಗ ಮನೆಯ ತಲೆಬಾಗಿಲು ಅವನ ತಲೆಗೆ ಒಳಿತಾಗಿ ತಾಕಿತು. ಅದರಿಂದ ಅವನಿಗೆ ಬಹಳ ನೋವಾಯಿತು. ಆಗ ಅಕಸ್ಮಾತ್ತಾಗಿ ಅವನ ಬಾಯಿಂದ— 'ನಮಃ ಶಿವಾಯ' ಎಂಬ ಅಕ್ಷರಗಳು ಹೊರಟವು. ಹೀಗೆ ಅವನ ಗುಪ್ತವಾಗಿದ್ದ ಮುಂತ್ರವು ಬಹಿ

ರಂಗದಲ್ಲಿ ಹೊರಪಟ್ಟ ಕೂಡಲೆ ಅವನ ಅಮುಳೋಕ್ಯದಲ್ಲಿ ಹುದುಗಿದ್ದ ಲಿಂಗವು ಅವನ ಕರಸ್ಥಲದಲ್ಲಿ ಹೊರಗೆ ಬಂದಿತು ಮತ್ತು ಅವನು ಉಚ್ಚರಿಸಿದ ಆ ಮುಂತ್ರವು ಬಯಲೊಳಗೆ ಬೆರೆದು ಅದರ ಕೂಡ ಅವನ ಪ್ರಾಣವೂ ಹೋಗಿ ಬಿಟ್ಟಿತು!! ಆಗ ಅವನ ಮೃತದೇಹವು ಕಳಚಿಬಿದ್ದಿತು.

ಅಲ್ಲಿನ್ದ ಭಕ್ತರು ಇದನ್ನು ನೋಡಿ ಚಕಿತರಾದರು. ಅಜಗಣ್ಣನ ಶಿವಾನುಭವವು ಎಷ್ಟು ಅಗಾಧವಾದುದು ಎಂದು ಅವನನ್ನು ಹೊಗಳಹತ್ತಿದರು. ಅವರು ಅವನ ಅಮುಳೋಕ್ಯದಲ್ಲಿ ಹುದುಗಿದ್ದ ಲಿಂಗವು ಬಹಿರಂಗದಲ್ಲಿ ಅವನ ಕರಸ್ಥಲಕ್ಕೆ ಬರಲು ಮುಂತ್ರವು ಪ್ರಕಟವಾಗಿ ಅದು ಇಷ್ಟಲಿಂಗವಾಗಿ ಹೊರಗೆ ಕಾಣಬಂದಿದ್ದರಿಂದ ಮುಂತ್ರವೂ ಲಿಂಗವೂ ಒಂದೇ ಎಂದು ಅವರಿಗೆ ಪ್ರತ್ಯಕ್ಷ ತೋರಿಬಂದಿತು. ಮತ್ತು ಮುಂತ್ರದೊಡನೆ ಅವನ ಪ್ರಾಣವು ಹೋದದ್ದರಿಂದ ಅವನು ಮುಂತ್ರ ಶರೀರಿಯೂ ಆಗಿದ್ದನೆಂಬದೂ ಅವರಿಗೆ ತಿಳಿದುಬಂದಿತು. ಆಮೇಲೆ ಅವರೆಲ್ಲರೂ ಅಜಗಣ್ಣನ ಪ್ರಾಣವಿಲ್ಲದ ಶರೀರದ ಸುತ್ತಲೂ ನೆರೆದು ಅವನನ್ನು ಅಲಂಕರಿಸಿ ಅವನು ಬಯಸಿದಂತೆ ಅವನ ಆಚರಣೆಗೆ ಯುಕ್ತವಾದ ನಿರ್ವಾಣ ಸಮಾಧಿಯಲ್ಲಿರಿಸಿದರು.

ಅಜಗಣ್ಣನು ವಚನಕಾರನಿದ್ದಾನೆಂದು ಚನ್ನಬಸವೇಶ್ವರನ ಒಂದು ವಚನದಿಂದ ತಿಳಿದುಬರುತ್ತದೆ. ಅದರಲ್ಲಿ ಅವನು ಹೇಳುವದೇನೆಂದರೆ— "ಆದ್ಯರ ಅರುವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ. ದಣ್ಣಾಯಕರ ಇಪ್ಪತ್ತ ವಚನಕ್ಕೆ ಪ್ರಭುದೇವರ ಹತ್ತು ವಚನ. ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ. ಅಜಗಣ್ಣನ ಐದು ವಚನಕ್ಕೆ ಕೂಡಲ ಚನ್ನಸಂಗಯ್ಯನಲ್ಲಿ ಮಹಾದೇವಿಯಕ್ಕಗಳ ಒಂದು ವಚನ" ಎಂದು ಹೇಳಿದ್ದಾನೆ. ಇದರಿಂದ ಅಜಗಣ್ಣನು ಉಚ್ಚತರದ ಶಿವಜ್ಞಾನಿಯಾಗಿದ್ದನೆಂದು ತಿಳಿಯುತ್ತದೆ. ಆದರೆ ನಮಗೆ ಅವನ ಯಾವ ವಚನವು ದೊರೆತಿಲ್ಲ. ಮತ್ತು ಅವನ ಮುದ್ರಿಕೆಯೂ ಕೂಡ ತಿಳಿದಿಲ್ಲ. ಆದರೆ ಶಿವಶರಣರಲ್ಲಿ ಅವನ ಸ್ಥಾನವು ಬಹಳ ಉಚ್ಚತರದ್ದಿರುತ್ತದೆಂಬದು ಅನೇಕ ವೀರಶೈವ ಗ್ರಂಥಗಳಿಂದ ತಿಳಿದುಬರುತ್ತದೆ.

ಮುಕ್ತಾಯಕ್ಕ.

ಮುಕ್ತಾಯಕ್ಕನು ಅಜಗಣ್ಣನ ತಂಗಿಯು. ಇಬ್ಬರೂ ಹುಟ್ಟಿದ ಊರು ಗದಗಿನಿಂದ ೮ ಮೈಲುಗಳ ಮೇಲಿರುವ ಲಕ್ಕುಂಡಿಯು. ಆದರೆ ಮುಕ್ತಾಯಕ್ಕನ ಗಂಡನ ಗ್ರಾಮವು 'ಮಸಳಿಕಲ್ಲು' ಎಂಬುದಾಗಿತ್ತು. ಅಜಗಣ್ಣನು ಯಾವುದೋ ಒಂದು ಕಾರಣದಿಂದ ಲಕ್ಕುಂಡಿಯನ್ನು ಬಿಟ್ಟು ತನ್ನ ತಂಗಿಯು ಕೂಡ ಮಸಳಿಕಲ್ಲು ಗ್ರಾಮದಲ್ಲಿ ಬಂದು ಇರಹತ್ತಿದನು. ಅವನು ಅಲ್ಲಿಯೇ ಒಕ್ಕಲುತನದ ಕಾಯಕವನ್ನು ಮಾಡುತ್ತ ವಾಸಿಸುತ್ತಿದ್ದನು.

ಅಜಗಣ್ಣನು ಶ್ರೇಷ್ಠತರದ ಶಿವಾನುಭವಿಯು. ಲಿಂಗಪೂಜೆಯಲ್ಲಿ ಮಗ್ನನಾಗಿ ಲಿಂಗವೇ ತಾನಾಗಿ ಆಚರಿಸುವವನಾಗಿದ್ದನು. ಮುಕ್ತಾಯಕ್ಕನು ಅವನಲ್ಲಿ ಅತ್ಯಂತ ಭಕ್ತಿಭಾವವುಳ್ಳವಳಾಗಿ ಅವನು ತನ್ನ ಗುರುವೆಂದು ಭಾವಿಸಿ ವರ್ತಿಸುತ್ತಿದ್ದಳು. ಅವಳು ವಚನಕಾರಳಿದ್ದಾಳೆ. ಅವಳು ತನ್ನ ಒಂದು ವಚನದಲ್ಲಿ ಹೇಳಿರುವದೇನೆಂದರೆ –

(೧) ಗುರುವಾಕ್ಯದಿಂದಲ್ಲದೆ ಗುರುವನರಿಯಬಾರದು. ಗುರುವಾಕ್ಯದಿಂದಲ್ಲದೆ ಲಿಂಗವನರಿಯಬಾರದು. ಗುರುವಾಕ್ಯದಿಂದಲ್ಲದೆ ಜಂಗಮವನರಿಯಬಾರದು. ಗುರುವಾಕ್ಯದಿಂದಲ್ಲದೆ ಪ್ರಸಾದವನರಿಯಬಾರದು. ಗುರುವಾಕ್ಯದಿಂದಲ್ಲದೆ ತನ್ನನರಿಯಬಾರದು. ಹಿಂದಣ ಜನ್ಮದಲ್ಲಿ ಗುರುವಾಕ್ಯವಿಡಿದು ಗುರುವ ಪೂಜಿಸಿ ಇಂದು ಜ್ಞಾನೋದಯವಾದರೆ ಜ್ಞಾನವಾಯಿತ್ತೆಂದು ಗುರುವಾಕ್ಯವ ಮೀರಿ ಆಯಿತ್ತೆನಬಹುದೇ? ತನ್ನಲ್ಲಿ ತಾನು ಸನ್ನಿಹಿತನಾದೆನೆಂದಡೆ ಗುರುವಿಲ್ಲದೆ ಆಗದು ಕೇಳಾ. ಎನ್ನ ಅಜಗಣ್ಣನೆಂಬ ಗುರುವಿಂದಲ್ಲದೆ ಅರೂಢದ ಕೂಟವು ಸ್ವಯಂವಾಗದು ಕೇಳಾ.

ಇದರಲ್ಲಿ ಅವಳು ಅಜಗಣ್ಣನು ತನ್ನ ಗುರುವೆಂದು ಹೇಳಕೊಂಡಿದ್ದಾಳೆ. ಅವನಿಂದಲೇ ಅವಳು ಲಿಂಗಧಾರಣವನ್ನು ಹೊಂದಿರಬಹುದು.

ಹೀಗೆ ಉಭಯತರು ಇರುವಲ್ಲಿ ಹಿಂದೆ ಅಜಗಣ್ಣನ ಕಥೆಯಲ್ಲಿ ಹೇಳಿದಂತೆ ಅಜಗಣ್ಣನು ಮರಣಹೊಂದಿದನು. ಆಗ ಅವಳು ಅವನಿಗೋಸ್ಕರ ಅತ್ಯಂತ ದುಃಖವನ್ನು ತಾಳಿ ಶೋಕಪಡಹತ್ತಿದಳು. ಆ ಸಮ

ಯದಲ್ಲಿ ಅಲ್ಲಮಪ್ರಭುವು ಬನವಾಸಿನಾಡಿನಿಂದ ಸಂಚರಿಸುತ್ತ ಮಸಳಿಕಲ್ಲು ಗ್ರಾಮಕ್ಕೆ ಬಂದಿರಲು ಅವನು ಅವಳನ್ನು ಕಂಡು ಅವಳಿಗೆ – ನೀನು ಲೌಕಿಕರಂತೆ ಹೀಗೆ ಶೋಕಿಸಬೇಡ. ಅಜಗಣ್ಣನು ಇಹದಲ್ಲಿ ಶರೀರ ಸಂಬಂಧಿಯಾಗಿ ಆಚರಿಸಲಿಲ್ಲ. ಇಂಥವನ ಸಲುವಾಗಿ ಭಕ್ತರು ದುಃಖಪಡಬಾರದು ಎಂದು ಸಂತೈಸಿದನು. ಆಗ ಮುಕ್ತಾಯಕ್ಕನು ತನ್ನ ದುಃಖವನ್ನು ಮರೆದು ಅಜಗಣ್ಣನೆಂಬ ತನ್ನ ಪ್ರಾಣಲಿಂಗದಲ್ಲಿ ಐಕ್ಯವನ್ನು ಹೊಂದಿ ಲಿಂಗಾಂಗಸಾಮರಸ್ಯವನ್ನು ಹೊಂದಿದಳು.

'ಶೂನ್ಯಸಂಪಾದನೆ' ಗ್ರಂಥದಲ್ಲಿ ಮುಕ್ತಾಯಕ್ಕಗಳ ಸಂಪಾದನೆಯೆಂಬ ಅಧ್ಯಾಯವಿದ್ದು ಅದರಲ್ಲಿ ಅಲ್ಲಮಪ್ರಭು ಮತ್ತ ಮುಕ್ತಾಯಕ್ಕ ಇವರ ತಾತ್ವಿಕ ಸಂಭಾಷಣೆಯು ಇದೆ. ಅದರಲ್ಲಿ ಮುಕ್ತಾಯಕ್ಕನ ಹೆಸರಿನಿಂದ ಉಲ್ಲೇಖವಾದ ಅನೇಕ ವಚನಗಳಿರುತ್ತವೆ. ಆದರೆ ಶೂನ್ಯಸಂಪಾದನೆಯು ಗ್ರಂಥಕಾರನು ಕಥಾಸಂದರ್ಭಕ್ಕೆ ಅನುಸರಿಸಿ ವಚನಗಳನ್ನು ಹೊಸದಾಗಿ ರಚಿಸಿ ಅಲ್ಲಲ್ಲಿ ಸೇರಿಸುವದು ಕಂಡುಬರುತ್ತದೆ. ಆದ್ದರಿಂದ ಈ ಗ್ರಂಥದಲ್ಲಿಯ ವಚನಗಳನ್ನು ಬಿಟ್ಟು ಬೇರೆ ಸ್ವತಂತ್ರ ಗ್ರಂಥಗಳಲ್ಲಿ ನಾಲ್ಕು ವಚನಗಳು ಮಾತ್ರ ನಮಗೆ ದೊರೆತಿವೆ. ಅವುಗಳಲ್ಲೊಂದನ್ನು ನಾವು ಮೇಲೆ ಉದಹರಿಸಿದ್ದೇವೆ. ಉಳಿದ ಮೂರು ವಚನಗಳನ್ನು ನಾವು ಕೆಳಗೆ ಕೊಡುತ್ತೇವೆ.

(೨) ಆರು ಇಲ್ಲದವಳೆಂದು ಅಳಿಗೊಳಲುಬೇಡ. ಅಳಿಗೊಂಡಡೆ ಅನು ಅಂಜುವಳಲ್ಲ. ಒಲವಿನ ಒತ್ತೆ ಕಲ್ಲನು ಬೆವರಿಸಬಲ್ಲೆ ಕಾಣಿರೋ. ಅಪ್ಪಿದವರನಪ್ಪಿದರ ತರಗೆಲೆಯಂತೆ ರಸವನರಸಿದವರುಂಟೇ ಅಜಗಣ್ಣ ತಂದೆ?

(೩) ಅಳಿಯೋಗಡಗಿದ ಪರಿಮಳದಂತೆ, ಪತಂಗದೊಳಗಡಗಿದ ಅನಲದಂತೆ, ಶಶಿಯೊಳಡಗಿದ ಷೋಡಶಕಳೆಯಂತೆ, ಉಲುಹಡಗಿದ ವಾಯುವಿನ ಪರಿಯಂತೆ, ಸಿಡಿಲೊಳಗಡಗಿದ ಗಾತ್ರದ ತೇಜದಂತೆ ಇರ ಬೇಕಯ್ಯ ಯೋಗ ಎನ್ನ ಅಜಗಣ್ಣ ತಂದೆಯಂತೆ.

ಇದರಲ್ಲಿ ಮುಕ್ತಾಯಕ್ಕನು ತನ್ನ ಅಣ್ಣನ ಯೋಗದ ರೀತಿಯನ್ನು ವರ್ಣಿಸಿದ್ದಾಳೆ.

(೪) ಉಟ್ಟುದು ತೊರೆದಂಗೆ ಊರೇನು, ಕಾಡೇನು? ನನ್ನ ಸಂತಾನಕ್ಕೆ ಕುಲವೇನು, ಫಲವೇನು? ಹುಟ್ಟುಗೆಟ್ಟಾದಂಗೆ ಪುಣ್ಯವೇನು, ಪಾಪವೇನು? ಅದು ಕೆಟ್ಟುದು, ಕೆಟ್ಟುದು. ತನ್ನತಾನರಿಯದೆ, ಬಟ್ಟಬಯಲಲ್ಲಿ ಬಿದ್ದೆ ಅಜಗಣ್ಣತಂದೆ.

ಇದರಲ್ಲಿ ಮುಕ್ತಾಯಿಯು ಅಜಗಣ್ಣನ ಲಿಂಗಾಂಗ ಸಾಮರಸ್ಯವನ್ನು ವರ್ಣಿಸಿದ್ದಾಳೆ.

ಈ ಪ್ರಕಾರ ಮುಕ್ತಾಯಕ್ಕನು ಶ್ರೇಷ್ಠ ಶಿವಾನುಭವಿ ಎಂದು ಶಿವಶರಣರಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದಾಳೆ.

ಅಜಗಣ್ಣ ಮತ್ತು ಮುಕ್ತಾಯಕ್ಕ ಇವರು ಮಸಳೀಕಲ್ಲು ಎಂಬ ಗ್ರಾಮದಲ್ಲಿ ವಾಸಿಸುತ್ತಿದ್ದರು. ಆದರೆ ಈ ಹೆಸರಿನ ಗ್ರಾಮವು ಲಕ್ಕುಂಡಿಯ ಸಮೀಪದಲ್ಲಿ ಎಲ್ಲಿಯೂ ಇರುವದಿಲ್ಲ. ಆದರೆ 'ಮಸಳಿ' ಎಂಬ ಹೆಸರಿನ ಗ್ರಾಮವು ವಿಜಾಪುರದಿಂದ ಈಶಾನ್ಯಕ್ಕೆ ೪೦ ಮೈಲುಗಳ ಮೇಲೆ ಇಂಡಿ ತಾಲೂಕಿನಲ್ಲಿದೆ. ಅಲ್ಲಿ ಅನೇಕ ಪುರಾತನ ಅವಶೇಷಗಳು ಈಗಲೂ ಇವೆ. ಹಿರೇಮಸಳಿ ಮತ್ತು ಚಿಕ್ಕಮಸಳಿ ಎಂಬ ಎರಡು ಗ್ರಾಮಗಳು ಒಂದು ದೊಡ್ಡ ಹಳ್ಳದ ಇಬ್ಬದಿಗೆ ಇವೆ. ಮೊದಲು ಇವೆರಡೂ ಗ್ರಾಮಗಳು ಒಂದೇಯಾಗಿರಬಹುದು. ಮೊದಲಿನ ಕಾಲದಲ್ಲಿ ಈ ಪ್ರದೇಶದಲ್ಲಿಯ ಅನೇಕ ಗ್ರಾಮಗಳಲ್ಲಿ ಶಿವಶರಣರು ಉದ್ಭವಿಸಿದ್ದು ಕಂಡುಬರುತ್ತದೆ. ವಿಜಾಪುರ ಮತ್ತು ಅದರ ನೆರೆಪ್ರದೇಶದಲ್ಲಿ ಜನರು ತಮ್ಮ ಮಕ್ಕಳಿಗೆ ಈಗಲೂ ಅಜಗಣ್ಣಪ್ಪ, ಅಜಗಣವ್ವ ಮುತ್ತಪ್ಪ, ಮುತ್ತವ್ವ ಎಂದು ಹೆಸರಿಡುವ ಪದ್ಧತಿಯು ಬಹಳವಿದೆ. ಇವು ಅಜಗಣ್ಣ ಮುಕ್ತಾಯಕ್ಕಗಳ ಹೆಸರುಗಳಿವೆ. ಆದ್ದರಿಂದ ಈ ಮಸಳಿಯೇ ಅಜಗಣ್ಣ, ಮುಕ್ತಾಯಕ್ಕಗಳ ಗ್ರಾಮವಾಗಿರಬಹುದೆಂದು ತೋರುತ್ತದೆ.

ಗದಗಿಗೆ ಸಮೀಪವಿರುವ ಲಕ್ಕುಂಡಿಯು ಮಸಳಿಯಿಂದ ಬಹು ದೂರವಿದೆ. ಅದು ಸುಮಾರು ೧೫೦ ಮೈಲುಗಳಾಗಬಹುದು. ಹಿಂದಿನ ಕಾಲದಲ್ಲಿ ಇಷ್ಟು ದೂರ ಶರೀರಸಂಬಂಧವಿರುವದು ಸಂಭವನೀಯವೆಂದು ತೋರುವದಿಲ್ಲ. ಆದರೆ ತಾಳೀಕೋಟೆಯ ಸಮೀಪಕ್ಕೆ ಬೇರೊಂದು ಲಕ್ಕುಂಡಿಯು ಇದ್ದು ಅದು ಮಸಳಿಯಿಂದ ೪೫ ಮೈಲು ಮಾತ್ರ ದೂರವಿದೆ. ಈ ಗ್ರಾಮವು ಅಜಗಣ್ಣನ ಮೂಲಗ್ರಾಮವಾಗಿರಬಹುದೋ

ಹೇಗೆಂಬುದು ವಿಚಾರಮಾಡತಕ್ಕ ವಿಷಯವಾಗಿದೆ. ಈ ಭಾಗದಲ್ಲಿ ಅನೇಕ ಶಿವಶರಣರು ಆಗಿ ಹೋಗಿದ್ದಾರೆ.

ಅಲ್ಲಮಪ್ರಭುವು ಬನವಾಸಿ ನಾಡಿನಿಂದ ಹೊರಟು ಕಪ್ಪಡಿಸಂಗಮಕ್ಕೆ ಬಂದನೆಂಬ ಉಲ್ಲೇಖಗಳಿವೆ. ಅಲ್ಲಿಂದ ಅವನು ಸೊಲ್ಲಾಪುರಕ್ಕೆ ಹೋಗುವಾಗ್ಗೆ ಕಪ್ಪಡಿಸಂಗಮದಿಂದ ಉತ್ತರಕ್ಕೆ ೪೦ ಮೈಲುಗಳ ಮೇಲಿರುವ ಹಿಪ್ಪರಗಿಗೆ (ಇದು ಮಡಿವಾಳ ಮಾಚಿದೇವನ ಸ್ಥಾನವು) ಇಲ್ಲಿಗೆ ಬಂದು ಅಲ್ಲಿಂದ ಉತ್ತರಕ್ಕೆ ೩೫ ಮೈಲುಗಳ ಮೇಲಿರುವ ಮಸಳಿ ಗ್ರಾಮಕ್ಕೆ ಬಂದು ಅಲ್ಲಿಂದ ಮುಂದೆ ಮಂಗಳವಾಡಕ್ಕೆ ಸಮೀಪವಿರುವ ಬಾಲಗಾವಿ ಗ್ರಾಮ (ಇಲ್ಲಿ ಅಲ್ಲಮಮಹಾಪ್ರಭುವಿನ ದೇವಸ್ಥಾನವಿದೆ.) ಅಲ್ಲಿಂದ ಸೊಲ್ಲಾಪುರಕ್ಕೆ ಹೋದಂತೆ ತೋರುತ್ತದೆ. ಈ ಗ್ರಾಮಗಳೆಲ್ಲವೂ ಹೆಜ್ಜುಕಡಿಮೆ ಒಂದೇ ರೇಷೆಯಲ್ಲಿರುತ್ತವೆ. ಅಲ್ಲಮಪ್ರಭುವು ಈ ಪ್ರಕಾರ ಸೊಲ್ಲಾಪುರಕ್ಕೆ ಹೋಗಿ ಅಲ್ಲಿಂದ ಅವನು ಪೂರ್ವದಿಕ್ಕಿಗೆ ಸರಳರೇಷೆಯಲ್ಲಿರುವ ಕಲ್ಯಾಣಕ್ಕೆ ಹೋಗಿರಬಹುದು.

ಈ ಮಸಳೀ ಗ್ರಾಮದಲ್ಲಿ 'ರೆಬ್ಬವ್ವೆ'ಯ ಪುರಾತನ ದೇವಾಲಯವಿರುತ್ತದೆ. ರೆಬ್ಬವ್ವೆ ಅಥವಾ ರೆಮ್ಮೆವ್ವೆಯ ಚರಿತ್ರೆಯನ್ನು ನಾವು ಶಿವಶರಣರ ಚರಿತ್ರೆಗಳು ಭಾಗ ೧ ಪುಟ ೧೧೦ ಇದರಲ್ಲಿ ಕೊಟ್ಟಿದ್ದೇವೆ. ಇವಳು ಕಲ್ಯಾಣದಲ್ಲಿ ರಾಟೆಯಿಂದ ನೂಲುವ ಕಾಯಕವನ್ನು ಮಾಡಿಕೊಂಡಿದ್ದಳು. ಆದರೆ ಇವಳು ಮೊದಲು ಮಸಳೀ ಗ್ರಾಮದವಳಿದ್ದದರಿಂದ ಅವಳ ಗುಡಿಯು ಇಲ್ಲಿರುತ್ತದೆಂದು ತೋರುತ್ತದೆ. ಇಲ್ಲಿಂದ ಮುಂದೆ ಅವಳು ಕಲ್ಯಾಣಕ್ಕೆ ಹೋಗಿರಬಹುದು. ಇವಳು ವಚನಕಾರಳಿದ್ದು ಅವಳ ಮುದ್ರಿಕೆಯು ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ ಎಂದಿದೆ. ಈ ರೆಮ್ಮವ್ವೆಯಲ್ಲದೆ 'ಏಲೇಶ್ವರ' ಎಂಬ ಮುದ್ರಿಕೆಯನ್ನಿಟ್ಟುಕೊಂಡು ವಚನಗಳನ್ನು ರಚಿಸಿದ ರೆಮ್ಮವ್ವೆ ಎಂಬ ಬೇರೊಬ್ಬ ವಚನಕಾರಳು ಆಗಿ ಹೋಗಿದ್ದಾಳೆ. ಅವಳು ಏಲೇಶಕೇತಯ್ಯನ ಗ್ರಾಮವಾದ ಏಲೇರಿ ಇಲ್ಲಿಯವಳು. ಈ ಎರಡನೇ ರೆಮ್ಮವ್ವೆಯ ಚರಿತ್ರೆಯನ್ನು ನಾವು ಶಿವಶರಣರ ಚರಿತ್ರೆಗಳು ಭಾಗ ೧ ಪುಟ ೫೩ ಇದರಲ್ಲಿ ಕೊಟ್ಟಿದ್ದೇವೆ.

ಮುಕ್ತಾಯಿಯ ಹೆಸರು ಗಣಸಹಸ್ರದಲ್ಲಿ ಬಂದಿದೆ. ಆದ್ದರಿಂದ ಇವಳು ಹಿಂದಿನವಳು. ಇವಳ ವಿಷಯವಾಗಿ ದೇವಿಯರ ತ್ರಿವಿದಿಯಲ್ಲಿ ವರ್ಣನೆ ಇರುವದು ಹೇಗೆಂದರೆ—

ಭಕ್ತಿಸಾಗರ ಮೇಷ್ಟ್ರೆ। ರಕ್ತಿಯಾ ನೆಲೆವನೆಯು
ಮುಕ್ತಿಯಾ ಕೋಶ ಇವನಂಗದೊಳು ತಾ೪ದ
ಮುಕ್ತಾಯಕ್ಕನೆ ಶರಣಾಗು.

ತಾಳೀಕೋಟೆಯ ಶಿವದೇವ.

ತಾಳೀಕೊಟ್ಟೆ ಎಂಬ ಗ್ರಾಮದಲ್ಲಿ ಶಿವದೇವನೆಂಬ ಶಿವಶರಣನು ವಾಸಮಾಡುತ್ತಿದ್ದನು. ತಾಳೀಕೊಟ್ಟೆ ಅಥವಾ ಕೊಟ್ಟೆ ಎಂಬ ಗ್ರಾಮವು ವಿಜಾಪುರ ಜಿಲ್ಲೆಯಲ್ಲಿ ವಿಜಾಪುರದಿಂದ ಆಗ್ನೇಯದಿಕ್ಕಿಗೆ ೪೫ ಮೈಲು ಗಳ ಮೇಲೆ ಇರುತ್ತಿದೆ. ಈಗ ಅದಕ್ಕೆ ತಾಳೀಕೋಟೆ ಎಂಬ ಹೆಸ ರಿದೆ. ಶಿವದೇವನು ಶ್ರೇಷ್ಠತರಗತಿಯ ಶಿವಾನುಭವಿಯು. ಅವನು ಮೊದಲು ಧನಿಕನು. ಆದರೆ ಅವನು ಭಕ್ತಮಾಹೇಶ್ವರರಿಗೆ ತಾನು ಗಳಿಸಿದ್ದನ್ನೆಲ್ಲ ದಾನಧರ್ಮ ಮಾಡುತ್ತ ಬಂದದ್ದರಿಂದ ಅವನು ಸ್ವಲ್ಪ ಕಾಲದಲ್ಲಿ ನಿರ್ಧನಿಕನಾದನು. ಆದರೆ ಅವನು ಅದಕ್ಕೋಸ್ಕರ ಎಷ್ಟು ಮಾತ್ರವೂ ಖೇದಪಡದೆ ತನ್ನ ಶಿವಾನುಭವದ ಆಚರಣೆಯನ್ನು ಬಿಡದೆ ಸ್ವಯಜಂಗಮಸ್ಥಲದಲ್ಲಿ ಆಚರಿಸುತ್ತ ಬಂದನು.

ಜಂಗಮಲಿಂಗದಲ್ಲಿ ಸ್ವಯ, ಚರ, ಪರವೆಂದು ನೂರು ವಿಧ ಗಳಿವೆ. ಸ್ವಯ ಜಂಗಮನಾಗಿರುವವನು ಸ್ವಸ್ಥಾನದಲ್ಲಿದ್ದುಕೊಂಡು ಶಿವಧ್ಯಾನಪರಾಯಣನಾಗಿರುತ್ತಾನೆ. ಚರಜಂಗಮನು ಶಿವಾನುಭವಿ ಯಾಗಿ ಧರ್ಮೋದ್ಧಾರ ಕಾರ್ಯಗಳನ್ನು ಮಾಡುತ್ತ ಸಂಚರಿಸುತ್ತಾನೆ. ಮತ್ತು ಪರಜಂಗಮನು ತಾನು ಮತ್ತು ಜಗತ್ತು ಇವುಗಳಿಗೆ ಮೀರಿ ದವನಾಗಿ ಚಿದಾತ್ಮನಲ್ಲಿ ಯಾವಾಗಲೂ ಬೆರೆತುಕೊಂಡಿರುತ್ತಾನೆ. ಆದರೆ ಶಿವದೇವನು ಸ್ವಯ ಜಂಗಮಸ್ಥಲದಲ್ಲಿದ್ದುಕೊಂಡು ಲಿಂಗಮುಖವಾಗಿ ತನ್ನ ಆಚರಣೆಗಳನ್ನು ಆಚರಿಸುತ್ತ ತನ್ನ ಲಿಂಗಚೈತನ್ಯದಲ್ಲಿ ವ್ಯವಹ ರಿಸುವವನಾಗಿದ್ದನು.

ಹೀಗೆ ಶಿವದೇವನು ಸ್ವಯಜಂಗಮನಾಗಿ ಆಚರಿಸುವಲ್ಲಿ ತನ್ನ ಆಚರಣೆಗೆ ಅನುಕೂಲವಾಗಬೇಕೆಂದು ತನ್ನ ಗ್ರಾಮವನ್ನು ಬಿಟ್ಟು ಪಾವನದೇವನೆಂಬ ಶಿಷ್ಯನನ್ನು ಕರೆದುಕೊಂಡು 'ಮಾಲ್ಯ' ಎಂಬ ಹೆಸ

ರಿನ ಒಂದು ಕಾಡಿನಲ್ಲಿ ಹೋಗಿ ಅಲ್ಲಿಯ ಒಂದು ಮರದ ಹೊದ ರನ್ನು ಆಶ್ರಯಿಸಿ ಅದರೊಳಗೆ ವಾಸಮಾಡಹತ್ತಿದನು. ಅಲ್ಲಿಯೇ ಅವನು ಇದ್ದುಕೊಂಡು ತನ್ನ ಶಿವಲಿಂಗವನ್ನು ಅರ್ಚಿಸುತ್ತ ಶಿವಧ್ಯಾನದಲ್ಲಿ ರುವನು. ಪಾವನದೇವನು ಅವನ ಸೇವೆಯನ್ನು ಮಾಡುತ್ತ ಅವನ ಹತ್ತಿರವೇ ಯಾವಾಗಲೂ ಇರುವನು. ಅವನು ಸುತ್ತಲಿನ ಗ್ರಾಮು ಗಳಲ್ಲಿ ಹೋಗಿ ಭಿಕ್ಷೆಯನ್ನು ಬೇಡಿ ಅದನ್ನು ತನ್ನ ಗುರುವಿಗೆ ಕೊಡಲು ಶಿವದೇವನು ಅದನ್ನು ಲಿಂಗಾರ್ಪಿತ ಮಾಡಿ ಭುಂಜಿಸುವನು. ಹೀಗೆ ಕೆಲವು ವರ್ಷಗಳ ವರೆಗೆ ಉಭಯತರು ಏಕಾಂತವಾಸಿಗಳಾಗಿ ಆ ಕಾಡಿನಲ್ಲಿದ್ದರು.

ಹೀಗಿರುವಲ್ಲಿ ಈ ಪ್ರಾಂತದಲ್ಲಿ ಒಂದು ವರುಷ ಮಳೆತಡೆದು ಬರಗಾಲವು ಉಂಟಾಯಿತು. ಕಾಳುಕಡಿಗಳು ಎಲ್ಲಿಯೂ ದೊರಕದೆ ಹೋದವು. ಜನರು ಹೊಟ್ಟೆಗಿಲ್ಲದೆ ಸಾಯಹತ್ತಿದರು. ಇಂಥ ದುರ್ಭಿಕ್ಷ ಕಾಲದಲ್ಲಿ ಪಾವನದೇವನು ಸುತ್ತಿಲಿನ ಏಳೂರು ತಿರುಗಿ ಬಂದರೂ ಒಬ್ಬನ ಅನನಕ್ಕೆ ಸಾಲುವಷ್ಟು ಸಹ ಅವನಿಗೆ ಆಹಾರ ದೊರಕುತ್ತಿದ್ದಿಲ್ಲ. ಆದ್ದ ರಿಂದ ಅವನು ತನಗೆ ದೊರಕಿದ್ದನ್ನೆಲ್ಲ ತನ್ನ ಗುರುವಿಗೆ ತಾನು ಕೊಟ್ಟ ಭಿಕ್ಷವನ್ನು ತಂದ ಪಾತ್ರೆಯನ್ನೂ ಜೋಳಿಗೆಯನ್ನೂ ತೊಳೆದು ಅದಂ ನೀರನ್ನು ಕುಡಿದು ಅಂಥ ನೀರಿನ ಮೇಲೆ ಇರಹತ್ತಿದನು.

ಪಾವನದೇವನು ಇಂಥ ನೀರನ್ನು ಕುಡಿದು ಎಷ್ಟು ದಿವಸ ಬದುಕ ಬಹುದು? ಅವನು ಹೊಟ್ಟೆಗಿಲ್ಲದೆ ಬರಬರುತ್ತ ಕೃಶನಾಗಹತ್ತಿದನು. ಶಿವದೇವನು ಅದನ್ನು ಕಂಡು— ನೀನು ಹೀಗೇಕೆ ಬಡವಾಗುತ್ತ ಬಂದೆ ಎಂದು ಕೇಳಲು ಅವನು— ದೇಶದಲ್ಲೆಲ್ಲ ದುರ್ಭಿಕ್ಷವಾಗಿದೆ, ನನಗೆ ಸಿಕ್ಕಷ್ಟ ಭಿಕ್ಷೆಯನ್ನು ನಿಮಗೆ ಕೊಟ್ಟು ಪಾತ್ರೆಯನ್ನು ತೊಳೆದು ಅದರ ನೀರನ್ನು ನಾನು ಸಲಿಸುತ್ತ ಬಂದಿದ್ದೇನೆ ಎಂದು ಎನ್ನಲು, ಶಿವದೇ ವನು— ಹರಹರಾ! ಇದು ಎಂಥ ಗುರುಭಕ್ತಿಯು! ಇಂಥ ಗುರು ಭಕ್ತಿ ಇದ್ದ ಈ ನಾಡಿನಲ್ಲಿ ಶಿವನು ಮಳೆಯನ್ನು ಕರುಣಿಸಬೇಡವೇ? ಶಿವನು ಹೀಗೆ ನಿರ್ದಯನಾದರೆ, ಪ್ರಮಥರಿರಾ, ನೀವಾದರೂ ಕರುಣಿ ಸಬೇಡವೇ? ಎಂದು ಗಣಂಗಳಲ್ಲಿಯೂ ಶಿವನಲ್ಲಿಯೂ ಮುನಿಸು ತಾಳಿ ಇನ್ನುಮೇಲೆ ನಾನೂ ಕೂಡ ಪ್ರಸಾದವನ್ನು ಸ್ವೀಕರಿಸುವದಿಲ್ಲ ಎಂದು ನಿರ್ಧರಿಸಿ ಅರ್ಚನ ಅರ್ಪಣಾದಿ ಕ್ರಿಯೆಗಳನ್ನು ಬಿಟ್ಟುಕೊಟ್ಟು ತಾನೂ ಉಪವಾಸ ಮಾಡುತ್ತ ಕೇವಲ ಶಿವಧ್ಯಾನದಲ್ಲಿರಹತ್ತಿದನು.

ಹೀಗೆ ಕೆಲವು ದಿವಸಗಳು ಸಂದಿಹೋಗುವಷ್ಟರಲ್ಲಿ ಗುರುಶಿಷ್ಯರುಭಯತರು ಮರಣೋನ್ಮುಖರಾದರು. ಆಗ ಶಿವನು ಅವರ ನಿಷ್ಠೆಗೆ ಮೆಚ್ಚಿ ಪ್ರಸನ್ನನಾಗಿ— ನಿಮಗೇನುಬೇಕು ಬೇಡು ಎಂದೆನಲು ಶಿವದೇವನು — ಜಗಹಿತಾರ್ಥವಾಗಿ ದೇಶದಲ್ಲಿ ನೀನು ಮಳೆಯನ್ನು ಕರೆಯಬೇಕು. ಅಸಂಖ್ಯ ಜನರು ಮರಣಹೊಂದಹತ್ತಿದ್ದಾರೆ. ಪಾವನದೇವನಂಥವರು ಇದ್ದ ಈ ನಾಡಿನಲ್ಲಿ ಹೀಗಾಗಬಾರದು. ಜನರು ಬೆಳೆಗಳನ್ನು ಬೆಳೆದು ಅವರುಂಬುವನ್ನು ಕಳುಹು. ಇದನ್ನಷ್ಟೇ ನಾನು ಬೇಡಿಕೊಳ್ಳುತ್ತೇನೆ ಎಂದೆನ್ನಲು, ಶಿವನು ಹಾಗೆಯೇ ಆಗಲೆಂದು ನುಡಿದನು. ಇಷ್ಟಾದ ಬಳಿಕ ನಾಡಿನಲ್ಲಿ ಮಳೆಗರೆಯಿತು. ಹದಿನೆಂಟು ತೆರದ ಧಾನ್ಯಗಳು ಬೆಳೆದವು. ದೇಶದಲ್ಲಿ ಸುಭಿಕ್ಷವಾಯಿತು. ಇದು ಶಿವದೇವನ ಮತ್ತು ಪಾವನದೇವನ ಮಹಿಮೆ ಎಂದು ಜನರು ಅವರನ್ನು ಕೊಂಡಾಡಹತ್ತಿದರು. ಉಭಯತರು ಶ್ರೇಷ್ಠ ಶಿವಶರಣರೆಂದು ಅವರನ್ನು ಅತ್ಯಂತವಾಗಿ ಮನ್ನಿಸಹತ್ತಿದರು.

ಮುಂದೆ ಪಾವನದೇವನು ಎಂದಿನಂತೆ ಗ್ರಾಮಗಳಲ್ಲಿ ಭಿಕ್ಷವನ್ನು ಎತ್ತಿ ಗುರುವಿಗೆ ತಂದುಕೊಡಹತ್ತಿದನು. ಹೀಗೆ ಉಭಯತರು ಶಿವಾನುಭವಿಗಳಾಗಿ ಸ್ವಯಲಿಂಗದಲ್ಲಿ ಅಡಗಿದರು. ಉಭಯತರು ತಮ್ಮ ಉಚ್ಚ ಆಚರಣೆಯಿಂದ ಮಾದರೀ ಗುರುಶಿಷ್ಯರೆಂದು ಲೋಕದಲ್ಲಿ ಪ್ರಸಿದ್ಧರಾದರು.

ತಾಳೀಕೋಟೆ ಗ್ರಾಮಕ್ಕೆ ಸಮೀಪವಾಗಿ ಸೋಗಲಿ ಎಂಬ ನದಿಯು ಮತ್ತು ಡೋಣಿ ಎಂಬ ನದಿಗಳು ಇರುತ್ತವೆ. ಶಿವದೇವನು ವಾಸಮಾಡಿದ ಸ್ಥಳವು ಸೋಗಲಿ ನದಿಯ ಬದಿಯಲ್ಲಾಗಲಿ ಇಲ್ಲವೆ ಅವೆರಡೂ ನದಿಗಳು ಕೂಡಿದ ಸ್ಥಳದಿಂದ ಮುಂದೆ ೮-೧೦ ಮೈಲುಗಳ ಮೇಲಿರುವ ಗುಡ್ಡಗಾಡು ಪ್ರದೇಶದಲ್ಲಾಗಲಿ ಇರಬಹುದೆಂದು ತೋರುತ್ತದೆ.

ಶಿವದೇವನ ಹೆಸರು ಗಣಸಹಸ್ರದಲ್ಲಿ ಬಂದಿದೆ. ಅವನು ಅಮರಗಣಂಗಳಲ್ಲಿ ಒಬ್ಬನಾಗಿದ್ದಾನೆ. 'ಕೊಟ್ಟಿಯ ಶಿವದೇವಯ್ಯ' ಅಥವಾ 'ತಾಳೀಕೋಟೆಯ ಶಿವದೇವಯ್ಯ' ಎಂದು ಅವನ ಉಲ್ಲೇಖಗಳು ಅನೇಕ ಗ್ರಂಥಗಳಲ್ಲಿ ಬಂದಿರುತ್ತವೆ.

ಶಿವಾನುಭವ

ವರ್ಷ ೨೦ | ಮೇ ೧೯೪೬. | ಸಂಚಿಕೆ ೯

ಸೊನ್ನಲಿಗೆಯ ಸಿದ್ಧರಾಮನು ಶೈವನೆ?

(ಲೇಖಕಃ— ಶ್ರೀಯುತ ಆರ್ ಸಿ. ಹಿರೇಮಠ ಪ್ರೊಫೇಸರ ಬಸವೇಶ್ವರ ಕಾಲೇಜ ಬಾಗಲಕೋಟ.)

ವೀರಶೈವ ಸಾಹಿತ್ಯದ ಅಭ್ಯಾಸವು ವಿಶೇಷವಾಗಿ ನಡೆದಂತೆ ವಿಮರ್ಶಕರಿಗೆ ವಿವಿಧ ಸಮಸ್ಯೆಗಳು ಮುಂದೆಬಂದು ನಿಲ್ಲಹತ್ತಿವೆ. ವಚನವಾಙ್ಮಯದ ಉದಯಕಾಲವು ೧೨ ನೆಯ ಶತಮಾನವಾಗಿರದೆ ಹದಿನೈದನೆಯ ಶತಮಾನವೆಂದು ಹಲವರು ತರ್ಕಿಸಿದರು.[೧] ಗಿರಿಜಾ ಕಲ್ಯಾಣದ ಹರಿಹರದೇವನು ಶೈವನಾಗಿದ್ದನೆಂದು ಕೆಲವು ಪಂಡಿತರು ಅಭಿಪ್ರಾಯ ವಿತ್ತರು.[೨] ವೀರಶೈವ ಧರ್ಮಕ್ಕೆ ಜೀವಕಳೆಯನ್ನಿತ್ತ ಪ್ರಭುದೇವ, ಬಸವಣ್ಣ, ಮಹಾದೇವಿಯಕ್ಕ, ಚನ್ನಬಸವಣ್ಣನವರೇ ಮೊದಲಾದ ಪ್ರಮುಖ ಶಿವಶರಣರೊಡನೆ ಸ್ಥಾನಮಾನಗಳನ್ನು ಪಡೆದು[೩] ವೀರಶೈವರಿಗೆ ಪಂಚಪ್ರಾಣದಂತಿದ್ದ ಸೊನ್ನಲಿಗೆಯ ಸಿದ್ಧರಾಮನು ವೀರಶೈವನಾಗಿರದೆ ಶೈವನಾಗಿರಬೇಕೆಂಬ ಸಂಶಯವು ಮತ್ತೆ ಕೆಲವು ಪಂಡಿತರಿಗೆ ಬರತೊಡಗಿದೆ. ಮೇಲೆ ನಿರ್ದೇಶಿಸಿದ ಹಲವಾರು ಸಮಸ್ಯೆಗಳಲ್ಲಿ ಒಂದಾದ ಈ ವಿಷಯವನ್ನೇ ಇಲ್ಲಿ ವಿವೇಚಿಸಬೇಕಾಗಿದೆ.

---

(೧) ಡಾಕ್ಟರ ತಿಲಕರವರ ನಾರಾಯಣರಾಯರ ಲೇಖನ ವ್ಯ. ಕ.

(೨) ಹರಿಹರದೇವ ಎಂಬ ಗ್ರಂಥ ಪು. (೬೮-೭೪) ನೋಡು.

(೩) 'Other leading associates of Basava were Madival Machaya, Prabhudeva and Siddharam–E. P. R.

ಮಹಾಕವಿ ರಾಘವಾಂಕನ 'ಸಿದ್ಧರಾಮ ಚರಿತ್ರ'ವನ್ನು ಸಂಪಾದಿಸಿ ಗ್ರಂಥಕ್ಕೆ ಮುನ್ನುಡಿಯನ್ನು ಬರೆವಲ್ಲಿ ಮಾನ್ಯರಾದ ಡಿ. ಎಲ್. ನರಸಿಂಹಾಚಾರ, ಎಮ್. ಎ. ಅವರು ಸಿದ್ಧರಾಮನ ವೀರಶೈವತ್ವದ ಬಗೆಗೆ ಸಂಶಯವನ್ನೆತ್ತಿ ಹೀಗೆ ಅಭಿಪ್ರಾಯವಿತ್ತಿರುವರು 'ಸಿದ್ಧರಾಮ ಚಾರಿತ್ರದ ಸಿದ್ಧರಾಮನು ವೀರಶೈವನೆಂಬುವದಕ್ಕಿಂತ ಶೈವನೆಂದು ಹೇಳುವದು ಹೆಚ್ಚು ಸಂಗತವಾಗಿದೆ. [೪] 'ಭವಿಯಾಗಿದ್ದ ಸಿದ್ಧರಾಮನನ್ನು ಇಷ್ಟಲಿಂಗಧಾರಣೆ ಷಟ್‌ಸ್ಥಲೋಪದೇಶಗಳಿಂದ ವೀರಶೈವನನ್ನಾಗಿ ಮಾಡುವುದರಲ್ಲಿ 'ಶೂನ್ಯ ಸಂಪಾದನೆ' ಕೃತಕೃತ್ಯವಾಗಿದೆ ಇದಕ್ಕಾಗಿ ಕೆಲವು ಹೊಸ ವಚನಗಳು ಸ್ಪಷ್ಟವಾಗಿ ಅಲ್ಲಮ ಸಿದ್ಧರಾಮರೇ ಮುಂತಾದ ಶೂನ್ಯ ಸಂಪಾದನೆಯ ಶರಣರಿಗೆ ಆರೋಪಿತವಾಗಿರಬಹುದು.' [೫] 'ಸಿದ್ಧರಾಮನು ಶೈವನೆಂಬ ನಂಬಿಕೆ ಚಾಮರಸನ ಕಾಲದ ವರೆಗೂ ಇದ್ದು ಅಮೇಲೆ ಅವನಿಗೆ ವೀರಶೈವತ್ವ ಸಂಪ್ರಾಪ್ತವಾಯಿತೆಂದು ಈಗಿನ ಮಟ್ಟಿಗೆ ಮಾಡಬೇಕಾದ ತೀರ್ಮಾನ [೬] ಸಿದ್ಧರಾಮನ ವೀರಶೈವತ್ವದ ಬಗೆಗಿದ್ದ ಈ ಸಂಶಯದ ನಿರಸನವಾಗಬೇಕಾದರೆ ಆತನ ಸಂದರ್ಭ ಬರುವ ವೀರಶೈವ ಸಾಹಿತ್ಯ ದೊಳಗಣ ಗ್ರಂಥಗಳನ್ನು ಕೂಲಂಕಷವಾಗಿ ವಿವೇಚಿಸಬೇಕಾಗುವದು. ರಾಘವಾಂಕನು ಚಿತ್ರಿಸಿರುವ ಸಿದ್ಧರಾಮನ ಬಗೆಗೆ ಈ ಸಮಸ್ಯೆ ಮೊದಲು ಒಡಮೂಡಿರುವುದರಿಂದ 'ಸಿದ್ಧರಾಮ ಚಾರಿತ್ರ'ವನ್ನೇ ಪ್ರಾರಂಭದಲ್ಲಿ ವಿಚಾರಿಸುವುದು ಅಪ್ರಸ್ತುತವಾಗಲಾರದು.

'ಸಿದ್ಧರಾಮನು' ಶೈವನೆಂಬುದಕ್ಕೆ ಮುನ್ನುಡಿಕಾರರು ಕೊಡುವ ಕಾರಣಗಳನ್ನು ವಿಮರ್ಶಿಸುವುದು ವಿಹಿತವಾಗಿದೆ. 'ಸಿದ್ಧರಾಮನಾಥಂ ಶೈವ ಸಾಮ್ರಾಜ್ಯ ಸುಖದೊಳಿರಲು, [೭] 'ಸಿದ್ಧಪತಿ ಶೈವ ಸಾಮ್ರಾಜ್ಯ ಸುಖದೊಳಿರಲು' [೮] ಎಂದು ಕವಿ ನುಡಿದಿರುವ ಮಾತುಗಳು ಸಿದ್ಧರಾಮನು ಶೈವನೆಂಬುದನ್ನು ಸೂಚಿಸುತ್ತವೆ ಎಂದು ಅವರ ಅಭಿಪ್ರಾಯ. ಶೈವಸಾಮ್ರಾಜ್ಯ ಎಂಬ ಪದವನ್ನು ವೀರಶೈವ ಕಾವ್ಯಗಳಲ್ಲಿ

(೪) ಸಿದ್ಧರಾಮ ಚಾರಿತ್ರ ಪುಟ iii ನೋಡು.
(೫) ,, ,, ,, v ,,
(೬) ,, ,, ,, vi ,,
(೭) ಸಿ. ಪು. ಸಂ. ೭ ಪು. ೪೫
(೮) ,, ,, ೫೫

ಅನೇಕ ಸಲ ವಾಚ್ಯಾರ್ಥದಲ್ಲಿ ಉಪಯೋಗಿಸದೆ ಲಕ್ಷಣಾರ್ಥದಿಂದ ವೀರಶೈವ ಎಂಬ ಅರ್ಥವನ್ನು ಕೊಡುವಂತೆ ಬಳಸಲಾಗಿದೆ 'ಸಂಗನ ಬಸವಂ ಬಸನಿದೇವಂ ಸದ್ಗುರೂಪದೇಶ ಲಭ್ಯೈವಾನ ಕರಕಮುಳಸ್ಥಿತ ಶಿವಲಿಂಗೋತ್ಪನ್ನ ಹರುಷ ಪುಳಕ ಶರೀರ ಸುಖಜಳ ಬಂದು ಸಂದಪ್ಪನಯುನ ಪುಷ್ಪ ಸಂಯುತ ಶೈವ ಸಾಮ್ರಾಜ್ಯನಾಗಿ' 'ಸಂಗನ ಬಸವಂ ಶೈವಾನುರಾಗ ಸಂಪತ್‌ಸುಖ ತರಂಗಿಣೀನಿಮಗ್ನ ಚಿತ್ತಂ' [೯] 'ತನತನಗೆ ಶಿವಕಾರುಣ್ಯ ಶೈವ ಸಾಮ್ರಾಜ್ಯ ಸಂಪದಂ ಶೈ ಸಾರ್ದುದೆಂಬುತ್ಸವಮುಂ ಕೇಳ್ದು ದೇಶದೇಶದ ಪತ್ತೆಂಟು ಗಾವುದದ ಮಾಹೇಶ್ವರರ್ ಕರುಣಿಸಿಬಂದು ನೆರಿದಿರೆ' ೧೦ ಬಸವರಾಜನು ಅವರ ಪಾದ ತೊಳೆದು ಉದಕವ ಸ್ವೀಕರಿಸುವನು. ಇಲ್ಲಿ ಶೈವ ಸಾಮ್ರಾಜ್ಯ ಎಂಬ ಪದದ ಅರ್ಥದಿಂದ ಕೇವಲ ಶೈವ ಸಾಮ್ರಾಜ್ಯ ಎಂಬ ಅರ್ಥವಾದರೆ ಬಸವಣ್ಣನವರು ಶೈವರಾಗಿ ಹೋಗುತ್ತಾರೆ. ಅಂತೆ ಹಾಗೆ ಅರ್ಥ ಮಾಡದೆ ಅದನ್ನು ಲಕ್ಷಣಾರ್ಥದಿಂದ ವೀರಶೈವ ಎಂದು ತಿಳಿದುಕೊಳ್ಳಬೇಕಾಗುವದು.

ಹಾವಿನಹಾಳ ಕಲ್ಲಯ್ಯನ ರಗಳೆಯಲ್ಲಿಯೂ ಒಂದೆರಡು ಕಡೆಗೆ ಶೈವಸಾಮ್ರಾಜ್ಯದ ಅರ್ಥವನ್ನು ಹೀಗೆ ವಿಸ್ತರಿಸಬೇಕಾಗುವದು

'ಇಂತು ಗುರುರುದ್ರಮುನಿದೇವ ಬಿಜಯಂಗೆಯ್ಯೆ
ಪಿಂತೆ ಕಲ್ಲಯ್ಯನಾ ಶೈವರಾಜ್ಯಂಗೆಯ್ಯೆ, [೧೧]

ರುದ್ರಮುನಿಗಳಿಂದ ವೀರಶೈವ ದೀಕ್ಷೆಪಡೆದ ಕಲ್ಲಯ್ಯನು ವೀರಶೈವ ರಾಜ್ಯಂಗೆಯ್ಯುವುದು ಸ್ವಾಭಾವಿಕವಾಗಿದೆ. ಆ ಶಬ್ದವನ್ನು ಬಳಸದೆ 'ಶೈವಸಾಮ್ರಾಜ್ಯಂಗೆಯ್ಯೆ' ಎಂಬುದನ್ನೇ ವಿಶಿಷ್ಟ ಅರ್ಥದಲ್ಲಿ ಉಪಯೋಗ ಮಾಡಲಾಗಿದೆ. ಇದೇ ರೀತಿಯಲ್ಲಿ ಸಿದ್ಧರಾಮ ಪುರಾಣದಲ್ಲಿ ಬರುವ 'ಸಿದ್ಧರಾಮನಾಥಂ ಶೈವ ಸಾಮ್ರಾಜ್ಯ ಸುಖದಲ್ಲಿದ್ದನೆಂದು ಕವಿ ನುಡಿದ ಮಾತುಗಳಿಂದ ಆತನು ಶೈವನೇ ಆಗಿರಬೇಕೆಂಬ ಸಿದ್ಧಾಂತಕ್ಕೆ ಬಾರದೆ ವೀರಶೈವನಾಗಿದ್ದರೂ ಆಗಿರಬಹುದೆಂದು ತರ್ಕಿಸಬಹುದು.

(೯) ಒಸವರಾಜ ದೇವರ ರಗಳೆ ಪು. ೨೪.
(೧೦) ,, ಪು. ೪೫
(೧೧) ಹರಿಹರನ ರಗಳೆಗಳು ಭಾಗ ೬, ಪುಟ ೭೭.

ಹುಟ್ಟಿದೊಡನೆ ಸಿದ್ಧನಿಗೆ ಅಷ್ಟಾವರಣವಾಯಿತೆಂದಾಗಲಿ, ಲಿಂಗಧಾರಣೆ ನಡೆಯಿತೆಂದಾಗಲಿ ಇರದೆ 'ಜಾತಕರ್ಮಾದಿಗಳು ನಡೆದವೆಂದು ಕವಿಯು ಹೇಳುತ್ತಾನೆ. ಹುಟ್ಟಿದ ಶಿಶುವಿಗೆ ಜಾತಕರ್ಮಾದಿಗಳು ನಡೆದ ಮಾತ್ರಕ್ಕೆ ಅತನು ಶೈವನಾಗಲಾರನು. ಪ್ರಭುದೇವರು ಹುಟ್ಟಿದೊಡನೆ ಜಾತಕರ್ಮಗಳಾದುವೆಂದು ಹರಿಹರನು ಹೇಳುತ್ತಾನೆ. ೧೨ ಹೋಮ ಮಾಡುವ, ಸ್ಥಾವರಲಿಂಗ ಪ್ರತಿಷ್ಠೆ ಮಾಡಿ ಪೂಜಿಸುವ ದೇವಾಲಯಗಳನ್ನು ಕಟ್ಟಿಸುವ ಉಲ್ಲೇಖವು ಸಿದ್ಧರಾಮ ಪುರಾಣದಲ್ಲಿ ಅನೇಕ ಕಡೆಗೆ ಬರುತ್ತದೆ. ಇವುಗಳನ್ನು ಉದ್ಧರಿಸಿ ಶ್ರೀಯುತ ಡಿ. ಎಲ್. ನರಸಿಂಹಾಚಾರ್ಯರು ರಾಘವಾಂಕನ ಸಿದ್ಧರಾಮನು ಶೈವನಾಗಿರಬೇಕೆಂದು ನಿರ್ಣಯಿಸಿರುವರು. ವೀರಶೈವ ಧರ್ಮವು ಒಬ್ಬ ಮತಸ್ಥಾಪಕನಿಂದ ಆವುದೋ ಒಂದುದಿನ ಅಸ್ತಿತ್ವಕ್ಕೆ ಬಂದುದಲ್ಲ. ಅದು ಬಹು ಪುರಾತನವಾದುದೆಂದು ಅನೇಕ ಪಂಡಿತರು ಅಭಿಪ್ರಾಯವಿತ್ತಿರುವರು. ೧೩ ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಪ್ರಮಥರು ಈ ಪುರಾತನ ವೀರಶೈವ ಧರ್ಮವನ್ನು ಪುನರುಜ್ಜೀವನಗೊಳಿಸಿರುವರು. ವೀರಶೈವ ಧರ್ಮಕ್ಕೆ ಆಧಾರ ಗ್ರಂಥಗಳಾದ ಶಿವಾಗಮಗಳಲ್ಲಿ ಆ ಧರ್ಮದ ಬಹು ಮಹತ್ವದ ತತ್ತ್ವಗಳಿರುವುದು ಕಂಡುಬರುತ್ತದೆ. ಶಿವನನ್ನು ಲಿಂಗರೂಪದಲ್ಲಿ ಇಲ್ಲವೆ ದೇವಾಲಯದ ಮೂರ್ತಿಯ ರೂಪದಲ್ಲಿ ಪೂಜಿಸಬಹುದೆಂದು ಈ ಗ್ರಂಥಗಳಲ್ಲಿ ಹೇಳಲಾಗಿದೆ. ಹನ್ನೆರಡನೆಯ ಶತಮಾನದ ಪೂರ್ವದ ವೀರಶೈವ ಧರ್ಮದ ರೂಪರೇಷೆಗಳನ್ನೆಳೆಯುವುದು. ಈಗ ದೊರೆತ ಸಾಧನ ಸಾಮಗ್ರಿಯಿಂದ ಅಸಾಧ್ಯವಾದರೂ ಅದರ ಅಸ್ತಿತ್ವದ ಬಗೆಗೆ ಆವ ಸಂಶಯವನ್ನೂ ಎತ್ತುವಂತಿಲ್ಲ. ಅಗ್ನಿಪೂಜೆ, ಪಂಚಸೂತಕ, ಜಾತಿಭೇದ ಇವೆಲ್ಲವುಗಳ ಸುಳವು ವೀರಶೈವ ಧರ್ಮದಲ್ಲಿ ಇಲ್ಲವೆಂಬುದೇ ಆ ಧರ್ಮದ ಅತ್ಯಂತ ಪ್ರಾಚೀನತೆಯನ್ನು

(೧೨) ಪ್ರಭುದೇವರ ರಗಳೆ ಪುಟ ೩– 'ಅಭವರೂಪಂಗೆಸವ ಜಾತಕರ್ಮಂ ಮಾಡೆ'

(13) A critical examination of the theology and Metaphysies of the sect suggests that if (Veerashaiva religion) is very ancient. —Hand Book of Veerashaivism by Dr. S. C. Nandimath. P. 3

ಸೂಚಿಸುತ್ತದೆ. ೧೪ ಈ ಪ್ರಾಚೀನ ವೀರಶೈವ ಧರ್ಮವು ೧೧–೧೨ನೆಯ ಶತಮಾನದಲ್ಲಿ ವರ್ಣಾಶ್ರಮ ಧರ್ಮದ ಪ್ರಭಾವಕ್ಕೆ ಪಕ್ಕಾಗಿ ತನ್ನ ವೈಶಿಷ್ಟ್ಯವನ್ನೇ ಮರೆತು ಬಿಡುವುದರಲ್ಲಿತ್ತು. ೧೫ ಆ ಕಾಲದಲ್ಲಿ ಜಾತಕರ್ಮ ಮಾಡುವುದು, ಹೋಮ ನಡೆಸುವುದು, ಅಗ್ನಿಪೂಜೆ, ಲಿಂಗ ಪ್ರತಿಷ್ಠೆ ಮಾಡುವುದು, ದೇವಾಲಯಗಳನ್ನು ಕಟ್ಟಿಸುವುದು ಇವು ವೀರಶೈವ ಧರ್ಮದಲ್ಲಿ ಸಾವಧಾನವಾಗಿ ನುಸುಳುತ್ತಿದ್ದುವು. ಹೋಮ ಮಾಡುವುದು ಸ್ಥಾವರಲಿಂಗಪೂಜೆ ಮಾಡುವುದು ಇವೇ ಮೊದಲಾದ ಹಲವಾರು ಕ್ರಿಯೆಗಳು ವೀರಶೈವರಲ್ಲಿ ಇಂದಿಗೂ ಕಂಡುಬರುತ್ತವೆ. ೧೧–೧೨ನೆಯ ಶತಮಾನದ ವೀರಶೈವ ಧರ್ಮವು ಇಂತಹ ಅವಸ್ಥೆಯಲ್ಲಿದ್ದುದರಿಂದ ಆ ಕಾಲದಲ್ಲಿ ಬಾಳಿದವರ ಜೀವನಕ್ರಮದಲ್ಲಿ ವೀರಶೈವರಿಗೆ ಸಲ್ಲದ ಜಾತಕರ್ಮ, ನಿತ್ಯಹೋಮ, ಅಗ್ನಿಪೂಜೆ, ಸ್ಥಾವರಲಿಂಗ ಪ್ರತಿಷ್ಠೆ, ಪೂಜಾದಿಗಳು ಕಂಡುಬಂದರೆ ಅದಕ್ಕೆ ನಾವು ಆಶ್ಚರ್ಯಪಡುವ ಕಾರಣವಿಲ್ಲ. ಅವರ ವೀರಶೈವತ್ವದ ಬಗೆಗೆ ಸಂಶಯಪಡುವ ಕಾರಣವೂ ಇಲ್ಲ. ಸಿದ್ಧರಾಮನ ಸ್ಥಿತಿ ಇಂತಿರುವುದರಿಂದ ಮಾನ್ಯರಾದ ಡಿ. ಎಲ್. ನರಸಿಂಹಾಚಾರ್ಯರು ಹೇಳುವ ಜಾತಕರ್ಮ, ಹೋಮ, ಸ್ಥಾವರಲಿಂಗಪೂಜೆ ಮೊದಲಾದವು ಸಿದ್ಧರಾಮನು ಶೈವನೆಂಬುದಕ್ಕೆ ಪ್ರಬಲವಾದ ಪ್ರಮಾಣಗಳಾಗಿ ನಿಲ್ಲುವು.

'ಸಿದ್ಧರಾಮನು ವೀರಶೈವನೆಂದು ರಾಘವಾಂಕನೇ ಈ ಕಾವ್ಯದಲ್ಲಿ ಕಂಠೋಕ್ತವಾಗಿ ಹೇಳಿದ್ದರೆ ಈ ಸಮಸ್ಯೆಗೆ ಕಾರಣವೇ ಇರುತ್ತಿರಲಿಲ್ಲ' ಎಂಬ ಮಾತು ನಿಜ. ಕವಿಯು ಕಂಠೋಕ್ತವಾಗಿ ಸಾರದಿದ್ದರೂ ಧ್ವನಿ

(೧೪) Hand book of Veerashaivism P. 5 & Vaishnavism and Shaivism and minor religious systems. P. 199.

(೧೫) Perhaps in the 11th, 12th cenhiries some good rules of religion and social duties being overshadowed by the rules of Varnashram Dharma were falling in to desuetude the old form of Veerashaivism.

—Hand book Veerashaivism. P. 5

(೧೬) ಸಿ. ಪು. ಪುಟ /i ನೋಡು

ಯಿಂದ ಈ ವಿಷಯವನ್ನು ಕಾವ್ಯದುದ್ದಕ್ಕೂ ಸೂಚಿಸಿರುವನು. 'ಎನಿತು ಸಿರಿ ಸಾರ್ವಡಂ ಮಾಣ್ಬೆಡಂ ನಿತ್ಯತ್ವ—ವನುವಪ್ಪಡರಿ ಸಾವಡಂ ಮತ್ತೆ ಹಂಪಯರ । ಸನ ಪೊಗಳ್ವ ನಾಲಗೆಯೊಳನ್ಯ ದೈವವ ಭವಿಗಳಂ ಕೀರ್ತಿಸಿದೆನಾದಡೆ ಮನಸಿ ಜಾರಿಯ ಭಕ್ತನಲ್ಲ' [೧೬] ಎಂದು ಕಾವ್ಯ ಬರೆದ ರಾಘವಾಂಕನು ವೀರಶೈವರಲ್ಲದವರನ್ನು ತನ್ನ ಕಾವ್ಯದ ಕಥಾನಾಯಕರನ್ನಾಗಿ ಆಯ್ದುಕೊಂಡಿರಬಹುದೆ ಎಂಬ ಸಂಶಯ ಬರುತ್ತಿದೆ. ಹರಿಶ್ಚಂದ್ರ ಕಾವ್ಯದ ಕಥಾನಾಯಕನಾದ ಹರಿಶ್ಚಂದ್ರನು ವೀರಶೈವನಾಗಿರದಿದ್ದರೂ ಆತನು ರಾಘವಾಂಕನ ಕಣ್ಣಲ್ಲಿ ಹರನೇ ಆಗಿರುವನು. 'ಹರನೆಂಬುದೇ ಸತ್ಯ ಸತ್ಯವೆಂಬುದೇ ಹರನು' [೧೮] ಎಂಬ ಮಾತಿನಲ್ಲಿ ಈ ಅರ್ಥವೇ ಧ್ವನಿತವಾಗುತ್ತಿದೆ. ಆದುದರಿಂದ ರಾಘವಾಂಕನ ಸಿದ್ಧರಾಮನು ಭವಿಯಾಗಿರದೆ ವೀರಶೈವನಾಗಿರಬೇಕು ಇಲ್ಲವೆ ಸಾಕ್ಷಾತ್ ಶಿವನ ಸ್ವರೂಪವೇ ಆಗಿರಬೇಕು. 'ಶಿವನಂತದೀಯ ಶರಣ ವ್ರಜಮುಂ ಪಡೆದು ಮುದವೊದವೆ ಬಲ್ಲಂದದೆನುತಿಪ' ಫಲವನ್ನು ವೀರಶೈವ ಕವಿಗಳು ಕೊನೆಯ ವರೆಗೂ ಸಾಧಿಸಿದ್ದಾರೆ.

ವೀರಶೈವರಲ್ಲಿ ಎಂಟು ತಿಂಗಳ ಗರ್ಭವತಿಗೆ ಗುರುವಿನಿಂದ ಲಿಂಗ ಧಾರಣೆ ಮಾಡಿಸುವುದೊಂದು ವಿಶಿಷ್ಟ ಪದ್ಧತಿಯಿದೆ. ಇಂತಹ ಕಾರ್ಯವೇ ನೇರವಾಗಿ ನಡೆಯದಿದ್ದರೂ ಅದನ್ನು ಹೋಲುವುದೊಂದು ಕ್ರಿಯೆ ಸಿದ್ಧರಾಮನು ಜನಿಸುವ ಮುನ್ನ ನಡೆದು ಹೋಗಿದೆ. 'ಆಪ್ರತಿ ಮಗುರು ರೇವಣಾಚಾರ್ಯ ನಾವೂರ ಸೀಮೆಯೊಳು ದಂಡಿಗೆಯ ನೊಲಿದಿಳಿದು.....ಹಾವುಗೆಗಳಂ ಕಳೆದು ನಡೆನಡೆದು.....ಸುಗ್ಗವ್ವೆಯುದರಮಂ ಮುಟ್ಟಿ..... ಎಱಗಿ.....ಅಪ್ರತಿಮ ಶಿವಯೋಗಯುತ ನಿಮಗೆ ಪುತ್ರನಾದಪನೆಂದನು.' [೧೯]

ಈ ರೇವಣಾಚಾರ್ಯನು ವೀರಶೈವರಿಗೆಲ್ಲ ಬಹು ಪೂಜ್ಯನಾಗಿ ಗುರುಸ್ಥಾನದಲ್ಲಿರುವನು. ಆತನನ್ನೇ ರೇವಣಸಿದ್ಧ, ರೇಣುಕಾಚಾರ್ಯ

(೧೬) ಹ. ಕಾ. ಸ. ೪೧ ಸ ೮

(೧೮) ,,

(೧೯) ಸಿ. ಪು. ಸಂ. ೧ ಪ. ೩೫. ೩೬. ೩೯.

ಎಂಬ ಬೇರೆ ಬೇರೆ ಹೆಸರುಗಳಿಂದ ವೀರಶೈವರು ಕರೆಯುವರು. [೨೦] ವೀರಶೈವ ಆಚಾರ್ಯನಿಂದ ಇನಿತು ಮನ್ನಣೆ ಪಡೆದ ಸಿದ್ಧರಾಮನು ವೀರಶೈವನಾಗಿರಬೇಕಲ್ಲದೆ ಶೈವನಾಗಿರಲಾರನು.

'ಮಹೇಶ್ವರ' ಶರಣ, ಜಂಗಮ, ಕಾಯಕ, ಭವಿ, ಮುಂತಾದ ಕೆಲವು ವೀರಶೈವ ಪರಿಭಾಷೆಗಳು ಸಿದ್ಧನ ವೀರಶೈವತ್ವವನ್ನು ಸೂಚಿಸದೆ ಕವಿಯು ವೀರಶೈವನೆಂಬುದಕ್ಕೆ ಆಧಾರಗಳಾಗಬಲ್ಲವು. [೨೧] ಎಂದು ಮಾನ್ಯ ಸಂಪಾದಕರು ಅಭಿಪ್ರಾಯವಿತ್ತಿರುವರು. ಸಿದ್ಧರಾಮನು ಜನ್ಮ ಪೆತ್ತಿದೊಡನೆ 'ಸಿಂಸರಸ್ವತಿ ವೆಂಸಿ ಗಿರಿಜೆ ಬಿಜಯಂಗ್ಯೆದು 'ದುಷ್ಕರ್ಮ ಬಾಧಕನೆ ಬಾ ಲೀಲಾವತಾರ ಬಾ ಜಂಗಮಜ್ಯೋತಿ ಬಾ ಎಂದು ಗುಣವ ಪ್ರಕಟಿಸುತ್ತೆತ್ತಿ.....ಜೋಗುಳಂ ಪಾಡಿಸಿದಳು. [೨೨] 'ಜಂಗಮ ಜ್ಯೋತಿ ಬಾ' ಎಂಬ ಗಿರಿಜೆಯ ಸಂಭೋಧನೆಯು ಕವಿಯು ವೀರಶೈವತ್ವವನ್ನು ಸೂಚಿಸದೆ ಸಿದ್ಧರಾಮನು ವೀರಶೈವನೆಂಬುದನ್ನೇ ಸಾರುವಂತಿದೆ. ಜಂಗಮವು ವೀರಶೈವರ ಅಷ್ಟಾವರಣಗಳಲ್ಲೊಂದು. [೨೩]

(೨೦) Revanaradhyla Revanasiddlha is believed to be identical with Renukacharya, the great mythical saint of the Veerashaivas He lived for a long time preaching Veerashaivism.

—Hand book of Veerashaivism P. 14

(೨೦) ಸಿ. ಪು. ಪು. /ii

(೨೨) ಸಿ. ಪು. ಅ. ಸಂ. ೦ ಪ ೫೮

(೨೩) ಅಷ್ಟಾವರಣಗಳು:— ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ.

It (Jangama) is generally applied in Veerashaivism to a person of religious order who is travelling from place to place preaching religion and morality to the Veerashaivas and others who like to hear him.

—Hand book of Veerashaivism.

ಸಿದ್ಧರಾಮನು ಸ್ವತಃ ಜಂಗಮನಾಗಿ ಜಂಗಮರ ಮಧ್ಯದಲ್ಲಿಯೇ ಇದ್ದ ನೆಂಬುದಕ್ಕೆ ಅನೇಕ ಆಧಾರಗಳಿವೆ. 'ನವಣೆಯ ಕೆಯ್ಯ ಬಳಯೊಳ್ ನಂದದಿಂದಿರ್ಪ ಸಿದ್ಧೇಂದ್ರನಂ ಮೆರೆಯಲು ಆಗಜಾರಮಣನು ತನ್ನ ವೇಷವನು ಜಂಗಮ ರೂಪಿನೊಳಡಗಿ ನಡೆತಂದನಂತೆ ೨೪ 'ಮದುವೆ ಬೇಕಾದವರು ಕನ್ನಿಕೆಯ ಗೋತ್ರಜರು ಸಹಿತಾಗಿಬಹುದು ಎಂದು ಸಾರಿಸಲು.....ಅಂಗ, ವಂಗ, ಕಳಿಂಗ.....' ಮೊದಲಾದ ದೇಶಗಳಿಂದ 'ಜಂಗಮುಂ' ಬಂದುದು ಎಂದು ಕವಿಯ ಹೇಳಿಕೆ. ೨೫ ಹೀಗೆ 'ಸಿದ್ಧರಾಮ ಚಾರಿತ್ರ'ದಲ್ಲಿ ಮೇಲಿಂದ ಮೇಲೆ ಬರುತ್ತಿರುವ 'ಜಂಗಮ' ಶಬ್ದವು ಕೇವಲ ಕವಿಯ ವೀರಶೈವತ್ವವನ್ನಷ್ಟೇ ಸೂಚಿಸದೆ ಜಂಗಮರ ಗುಂಪು ಆ ಕಾಲದಲ್ಲಿ ಎಲ್ಲೆಲ್ಲಿಯೂ ಕಂಡುಬರುತ್ತಿತ್ತೆಂಬುದನ್ನು ವ್ಯಕ್ತಪಡಿಸುತ್ತದೆ. ವೀರಶೈವರ ಅಷ್ಟಾವರಣಗಳಲ್ಲಿ 'ಜಂಗಮ'ದ ಪ್ರವೇಶವಾಗಲು ಬಹುತರವಾಗಿ ಈ ಗುಂಪು ಕಾರಣವಾಗಿರಬಹುದು.

ದೀಕ್ಷಾವಿಧಾನವು ವೀರಶೈವರನ್ನೊಳಗೊಂಡು ಎಲ್ಲ ಶೈವರಿಗೂ ಬಹು ಮಹತ್ವವಾದುದು. ೨೬ ವೀರಶೈವರನ್ನುಳಿದು ಎಲ್ಲ ಶೈವರೂ ಈ ವಿಧಾನವನ್ನು ಅಗ್ನಿಯ ಸಮ್ಮುಖದಲ್ಲಿ ಮಾಡುವರು. ೨೭ ವೀರಶೈವರು ಮಾತ್ರ ಅಗ್ನಿಗೆ ಪ್ರತಿಯಾಗಿ ಪಂಚಕಲಶ ಸ್ಥಾಪನೆ ಮಾಡಿ ದೀಕ್ಷೆ ಪಡೆಯುವರು.

---

(೨೪) ಶಿ. ಪು. ಸಂ ೨. ಪ, ೨೩-೨೪.

(೨೫) ಪು. ಸಂ ೮. ಪು. ೫೭-೫೮.

(೨೬) Dixa is very important Ceremony in all schools of Shivism.

—Hend book of Veerashaivism. P. 66

(೨೭) The most important feature in the ceremonies of Virashaivism is the absence of fire. The five plays an important and essential as part in the rites of 'twiceborn'. It appears that the place of the five is taken by the linga in the ceremonies of Veerashaivas.

—Hand book of Veerashaivism. P. 64

ಸಿದ್ಧರಾಮೇಶನಿಗೆ ಗಿರಿಜಾಧೀಶನು ತಾನೇ ಗುರುವಾಗಿ ನಿಂತು ೨೮

"ಕಂಗೆಸೆವ ನಾಲ್ಕು ಬಾಗಿಲ ಶಿವಾಲಯದ ಕಳ
ಸಂಗಳೇ ಕಳಸವಗಜಾತ ನಂದೀಶ್ವರಂ
ಭೃಂಗಿಯುಂ ವೀರೇಶರೆಸೆವ ಕಳಸಾಚಾರ್ಯರಾಮುಲ್ಲನಾಥನೆಡೆಯ
ಲಿಂಗಾಲಯದ ಕಳಸ ಗುರು ಕಳಸವಾಜಿತಾ

ನಂಗನೇ ಗುರುವಾಗಿ ಭರದೊಳಪ್ರತಿಮ ಸಿದ್ಧಂಗನುಗ್ರಹವಿತ್ತನು.೨೯ ಇಲ್ಲಿ ಉಳಿದ ಶೈವರ ದೀಕ್ಷಾವಿಧಾನದಲ್ಲಿ ಅಗ್ರಸ್ಥಾನವನ್ನು ಪಡೆದ ಅಗ್ನಿಯ ಸುಳಿವಿಲ್ಲ. ಮೇಲಾಗಿ ಪಂಚಕಳಸಗಳೂ ಕಳಸಾಚಾರ್ಯರೂ ಅಪ್ರತ್ಯಕ್ಷರೀತಿಯಿಂದ ಅಲ್ಲಿ ಕಂಡು ಬಂದುದನ್ನು ಕವಿಯು ಸ್ಪಷ್ಟವಾಗಿ ಉಲ್ಲೇಖಿಸಿರುವನು. ವೀರಶೈವ ದೀಕ್ಷೆಯಲ್ಲಿ ಗುರುವಿನಿಂದ ಲಿಂಗಧಾರಣೆಯಾಗುವುದು ಇಂದಿಗೂ ಪ್ರಚಲಿತವಿರುವಂತೆ ಮಗುವಿಗೆ ಲಿಂಗಧಾರಣೆ ಹುಟ್ಟಿದೊಡನೆ ಆಗುವದು. ನಿಜವಾಗಿಯೂ ವೀರಶೈವ ಧರ್ಮವಂತೆ ಇದೊಂದೇ ದೀಕ್ಷೆ ನ್ಯಾಯವಾದುದು. ಆದರೂ ಉಳಿದ ಶೈವ ಪಂಗಡಗಳ ಪ್ರಭಾವದ ಮೂಲಕ ಎರಡನೆಯ ದೀಕ್ಷೆ ರೂಢಿಯಲ್ಲಿ ಬಂದಿದೆ. ೩೦ ಅಂತೂ ಒಂದು ಸಲವಾಗಲಿ ಎರಡು ಸಲವಾಗಲಿ ದೀಕ್ಷೆಯೊಡನೆ ವೀರಶೈವನಿಗೆ ಲಿಂಗಧಾರಣೆ, ೩೧ ಮಂತ್ರೋಪದೇಶ

---

(೨೮) ಶಿ. ಪು. ಸಂ. ೩ ಪ ೧೨

(೨೯) ಶಿ. ಪು. ಸಂ. ೩ ಪ ೧೩

(೩೦) In Veerashaivism, the Dixa is to be performed probably only once in the life of a follower and at the very beginning of his carear. Therfore, it is enjoined that it should take place immediately after the birth of all individual.

(೩೧) But probably on account of the infulence of the surrounding systems..... There are at least two Dixshas to bo performed.

—Hand book Veerashaivism. P. 67

ವಾಗಲೇಬೇಕು. ಸಿದ್ಧರಾಮನಿಗೆ ಜನ್ಮದಾರಭ್ಯದಿಂದಲೇ ಉತ್ತಮಾಂಗ ದಲ್ಲಿ ಲಿಂಗ ಮೂಡಲಾಗಿತ್ತು. [೩] ಆದುದರಿಂದ ಗುರುವಾಗಿ ನಿಂತ ಗಿರಿಜಾಧೀಶನು ಬೇರೆ ಲಿಂಗವನ್ನು ಕಟ್ಟದೆ 'ಉದಯ ವಪ್ಪಂದು ಕೂಡುತ್ತಮಾಂಗದಲಿ ಮೂಡಿದ ಗೂಢಲಿಂಗವನ್ನು ತೋರಿಸುವನು. ಪಂಡಾಕ್ಷರಿಯ ಹೃದಯವುಂ ತಿಳಿಸಿ ನಿಜಭಕ್ತಿಯಂ ಗುರುಪೂಜೆಯಾಗಿ ಕೈಕೊಳ್ಳುವನು. 'ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗವನ್ನು ಪೂಜಿಸ ಲಾಗನೆಂಬ ನಿಷ್ಠೆಯನ್ನು ಈ ಉತ್ತಮಾಂಗದ ಲಿಂಗದಲ್ಲಿ ಸಿದ್ಧರಾಮನು ಇಟ್ಟಿಲ್ಲವೆಂಬುದೂ ಆತನು ಸ್ಥಾವರಲಿಂಗವನ್ನು ಪೂಜಿಸುತ್ತಿದ್ದನೆಂಬುದೂ ನಿಜ. ಇಂಥ ನಿಷ್ಠೆ ವೀರಶೈವರಲ್ಲಿ ಹನ್ನೆರಡನೆಯ ಶತಮಾನದನಂತರ ರೂಢವಾಗಿರಬೇಕು. ಸ್ಥಾವರಲಿಂಗದ ಮೇಲಿನ ಮಮತೆಯಿಂದಲೇ ಬಸವಣ್ಣನವರೇ ಮೊದಲಾದ ಶಿವಶರಣರು ತಮ್ಮ ಇಷ್ಟಲಿಂಗವನ್ನು 'ಕೂಡಲಸಂಗಮದೇವ' ಇವೇ ಮೊದಲಾದ ಸ್ಥಾವರಲಿಂಗದ ಹೆಸರಿ ನಿಂದ ಕರೆದುಕೊಂಡು ಆ ಅಂಕಿತಗಳಿಂದಲೇ ತಮ್ಮ ವಚನಗಳನ್ನು ಬರೆ ದಿರುವರು. ಇಂದಿಗೂ ವೀರಶೈವರು ತಮ್ಮ ಮನೆದೇವರ ವಿಷಯ ವನ್ನು ಮಾತಾಡುವದುಂಟು. ಈ ಸ್ಥಾವರಲಿಂಗದ ಮೇಲಿನ ನಿಷ್ಠೆ ಇನ್ನೂ ಮಾಯವಾಗದಿದ್ದುದರಿಂದ ಸಿದ್ಧರಾಮನು ಅದನ್ನು ಪೂಜಿಸಿ ದುದುಂಟು. ಸಿದ್ಧರಾಮನ ಉತ್ತಮಾಂಗದ ಲಿಂಗವು ಸಹಜ ಸಿದ್ಧ ವಾಗಿದ್ದು ಗುರುದತ್ತವಾದ ಇಷ್ಟಲಿಂಗಕ್ಕೆ ಪ್ರತಿಯಾಗಿ ಅದನ್ನು ಹೋಲು ತ್ತಿರುವುದು. ಹಾಗಿರದಿದ್ದರೆ ದೀಕ್ಷೆಯ ಕಾಲದಲ್ಲಿ ಗಿರಿಜಾಧೀಶನು ಆ ಲಿಂಗವನ್ನು ಮುಟ್ಟ ತೋರಿಸುವ ಆವಶ್ಯಕತೆ ಏನು? ಮುಂದೆ ಪ್ರಭುದೇವರು ಸಿದ್ಧರಾಮನನ್ನು ಕಲ್ಯಾಣಕ್ಕೆ ಕರೆದೊಯ್ದು ಚೆನ್ನಬಸ ವಣ್ಣನವರಿಂದ ಇಷ್ಟಲಿಂಗಧಾರಣೆ ಮಾಡಿಸಿದರೆಂಬ [೪] ಐತಿಹಾಸಿಕ ಸಂಗತಿಯನ್ನು ರಾಘವಾಂಕನು ಬಿಟ್ಟುದರ ಕಾರಣವಾದರೂ ಇದೇ ಇರಬಹುದು. ಗಿರಿಜಾಧೀಶನೇ ಲಿಂಗದಾನ ಮಾಡಿದ ಮೇಲೆ ಮತ್ತೆ ಚೆನ್ನಬಸವಣ್ಣನವರಿಂದ ಲಿಂಗಧಾರಣೆ ಮಾಡಿಸುವುದು ಅನಾವಶ್ಯಕ

(೩) 'ಶಿವಲಿಂಗವುಂ ಮುಸುಕಿ ಬೆಳೆದುತ್ತಮಾಂಗವನು
ಸಿ. ಪು. ಸ. ೨. ಪ ೪.

(೪) ಸಿದ್ಧರಾಮನ ವಚನ ಪ್ರಭು ಚೆನ್ನಬಸವಣ್ಣನವರ ವಚನ ಶೂನ್ಯ ಸಂಪಾದನೆ ಪ್ರಭುಲಿಂಗಲೀಲೆ ಮೊದಲಾದ ಗ್ರಂಥಗಳನ್ನು ನೋಡಬೇಕು.

ವೆಂದು ಆತನ ಕಲ್ಪನೆಯಾಗಿರಬಹುದು. ಒಟ್ಟಿನಲ್ಲಿ ರಾಘವಾಂಕನಿಗೆ ಐತಿಹಾಸಿಕ ಸಿದ್ಧರಾಮನ ಚಾರಿತ್ರ ಮಹತ್ವವಲ್ಲ. ಸಿದ್ಧರಾಮನಿಗೆ ಭವ್ಯ ದಿವ್ಯ ವ್ಯಕ್ತಿತ್ವವನ್ನು ಕೊಟ್ಟು ಪುರಾಣ ಪುರುಷನನ್ನಾಗಿ ಮಾಡಿ ವೀರಶೈವ ಪುರಾಣಕ್ಕೊಂದು ಮಾದರಿಯನ್ನಿಡಬೇಕೆಂಬುದು ಆತನ ಹಂಬಲ. [೫] ಅಂತೆ ಕ್ರಾಂತಿಕಾರಕ ರಾಘವಾಂಕನು ಇತಿಹಾಸದಲ್ಲಿಯೂ ಕ್ರಾಂತಿಯ ನ್ನುಂಟು ಮಾಡಿ ಪುರಾಣವನ್ನು ರಚಿಸಿದನು. ಸಿದ್ಧರಾಮನ ಸುತ್ತು ಅನೇಕ ಪವಾಡಗಳನ್ನು ಹೆಣದಿರುವನೆಂಬುದು ಆ ಪುರಾಣವನ್ನೋದಿ ದವರಿಗೆಲ್ಲ ತಿಳಿದುಬರುವದು. ಸುಮಾರು ಒಂದುನೂರು ವರ್ಷದಷ್ಟು ಸಹ ಹಿಂದಿನವನಲ್ಲದ ಸಿದ್ಧರಾಮನು ಇಂತಹ ಪವಾಡಗಳನ್ನೆಲ್ಲ ಮಾಡಲು ಅರ್ಹನಾಗಿದ್ದನೆಂಬುದನ್ನು ಪಂಡಿತ ರಾಘವಾಂಕನ ಕ್ರಾಂತಿ ಕಾರಕ ಮನಸ್ಸು ಒಪ್ಪಿರಲಾರದು. ಆದರೂ ಒಂದು ಆದರ್ಶ ವೀರ ಶೈವ ಪುರಾಣವನ್ನು ಬರೆಯಬೇಕೆಂದು ಅವನ್ನೆಲ್ಲ ಆತನು ಒಪ್ಪಲೇ ಬೇಕಾಯಿತು. ಇತಿಹಾಸವನ್ನೇ ಒಪ್ಪಿ ಪ್ರಭು ಚೆನ್ನಬಸವಣ್ಣನವರ ಉಪದೇಶದಿಂದಲೇ ಆತನಿಗೆ ಲಿಂಗಧಾರಣೆ ಮಾಡಿಸಿದ್ದರೆ ಅವರ ಮುಂದೆ ಈತನ ವ್ಯಕ್ತಿತ್ವ ಮಿನುಗದೆಂಬ ಭಯವೂ ಆತನಿಗೆ ಬಂದಿರಬಹುದು. ಅಂತೆ ಇತಿಹಾಸದ ಸಿದ್ಧರಾಮನು ಏರಿಳಿತಗಳ ಹೊಯ್ದಾಟಕ್ಕೆ ಸಿಲುಕಿ ಮೊದಮೊದಲು ಸಹಜ ಮಾನವನಾಗಿ ಮುಂದೆ ಪ್ರಭು, ಚೆನ್ನಬಸವ ಣ್ಣನವರ ಉಪದೇಶಕ್ಕೆ ಪಕ್ವಾಗಿ ಮೋಕ್ಷದ ಪಥವನ್ನು ಕಂಡರೆ ಪುರಾ ಣದ ಸಿದ್ಧರಾಮನು ಜಗಕೆ 'ಅರಿವುರುಳಂತೆ' ಕಂಡುಬಂದರೂ ಜನ್ಮ ದಾರಭ್ಯ ಸಿದ್ಧಪುರುಷನಾಗಿ ಜಗದ ಗುರುವಾಗಿರುವನು. [೬] ಲೋಕ ಸಂಗ್ರಹಕ್ಕಾಗಿ 'ಸಾಕಾರದೊಳ್ ನಿಷ್ಠೆ ಭೂತಂಗಳೊಳಗನು ಕಂಪೆ' ಯನ್ನು ತೋರಿಸುತ್ತಿರುವನು 'ಜಸಮಿಗಲು ದೇವತಿರ್ಯಙ್ಮನುಷ್ಯಾದಿ ಗಳಿಗಸಮಗುರು' ಸಿದ್ಧರಾಮನಾದರೂ 'ಜನಂ ಮೆಚ್ಚಲೆಂದು' [೭] ಆತ

(೫) ಶ್ರೀಮತ್ ಸಿದ್ಧರಾಮ ಪುರಾಣದೊಳು ನವಮಃ ಸಂಧಿ ಪೂರ್ಣಂ
ಸಿ. ಪು. ಪಂ ೯ ಪು. ೧೬೮.

(೬) ಸಿ. ಪು. ಜಗದ ಗುರುಸಿದ್ಧರಾಮನಾಥಂ ಮನುಜನಲ್ಲ.
ಸಿ. ಪು. ಸಂ. ೧ ಪ. ೭–೨೬–೪೨–೪೦
ಸಂ. ೪. ಪ. ೧೫. ಸಂ. ೭. ಪ. ೧—೨೫
ಸಂ. ೨ ಪ. ೧೦—೧೨—೨೦—೨೦—೨೨

(೭)

ನಿಗೆ ತಾನೇ ಗುರುವಾಗಿ ಗಿರಿಜಾಧೀಶನು ದೀಕ್ಷೆಯನ್ನು ಕೊಟ್ಟಿರುವನು. ಉತ್ತಮಾಂಗದಲ್ಲಿ ಲಿಂಗವಿದ್ದರೂ 'ಲಿಂಗಪ್ರಾಣಿ' ೩೭ ಯಾಗಿದ್ದರೂ ಬಾಹ್ಯ ಪೂಜೆಗೊಂದು ಲಿಂಗದ ಅವಶ್ಯಕತೆಯಿದ್ದಿತು. ಈ ಬಾಹ್ಯ ಪೂಜೆಯನ್ನು ಆತನು ತನಗಾಗಿ ಮಾಡದಿದ್ದರೂ ತನ್ನಂತೆ ನಡೆಯುವ ಲೋಕದ ಜನರಿಗೊಂದು ಮಾರ್ಗವನ್ನು ತೋರುವುದಕ್ಕಾಗಿ ಮಾಡಲೇಬೇಕಾಗಿದ್ದಿತು.

'ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ
ಸಯತ್ ಪ್ರಮಾಣಂ ಕುರುತೆ ಲೋಕಸ್ತದನುವರ್ತತೆ

ಎಂಬ ಗೀತೆಯು ಮಾತು ಎಲ್ಲ ಮಹಾನುಭಾವರಿಗೂ ಅನ್ವಯಿಸುತ್ತದೆ. ಅದಕ್ಕಾಗಿ 'ಬಳಸಿಪರುಷದ ಕರಂಡಿಗೆಯೊಳಣಿವಾದಿ ಗುಣವಿಳಿತ ಸೆಜ್ಜೆಯೊಳಮಲ ಲಿಂಗವಿಳಿದಾಸಿದ್ಧ ಕುಲತಿಲಕನಿರ್ವ ಭೂಮಿಯೋಳು ವೈದೋರಿತು. ೩೮ ಆ ಲಿಂಗವನ್ನು ಮನೆಯೊಳಾರಾಧಿಸುತ್ತಿರಲು ಮುಂದೆ ಮನೆಮಾರನ್ನು ಬಿಟ್ಟು ಹೊರಡುವ ಸಮಯಬಂದಾಗ ಆ 'ಲಿಂಗಮುಂ ಧರಿಸಿ ಪಿಡಿದು ೩೯ ಹೋದನಂತೆ. ಹೀಗೆ ಹಲವು ಕಡೆಗೆ ಲಿಂಗ ಮತ್ತು ಅದನ್ನಿಡುವ ಸೆಜ್ಜೆಯ ಉಲ್ಲೇಖ ಬಂದಿವೆ. ಇಷ್ಟಲಿಂಗವನ್ನೇ ಇವು ಸೂಚಿಸದಿದ್ದರೂ, ಇಷ್ಟಲಿಂಗವು ಪೂರ್ತಿಯಾಗಿ ರೂಢಿಯಲ್ಲಿ ಬಾರದಮುನ್ನ ಅಂತಹದೊಂದು ಲಿಂಗವನ್ನು ವೀರಶೈವರು ತಾವು ಹೋದಲ್ಲೆಲ್ಲ ಒಯ್ಯುತ್ತಿರಬಹುದೆಂಬುದನ್ನು ಸೂಚಿಸುವಂತಿದೆ. ಈ ರೂಢಿಯೇ ಮುಂದೆ ಅನುಭವಮಂಟಪದ ಶರಣರ ಆಧ್ಯಾತ್ಮಿಕ ಕಾರ್ಯಲಯದಲ್ಲಿ ಇಷ್ಟಲಿಂಗವಾಗಿರಬಹುದು. ಒಟ್ಟಿನಲ್ಲಿ ಸಿದ್ಧರಾಮನಿಗೆ ಇಷ್ಟಲಿಂಗಧಾರಣೆಯು ಇಂದಿನ ವೀರಶೈವ ಸಂಪ್ರದಾಯದಂತೆ ಆಗಿದೆಯೆಂಬುದಕ್ಕೆ ಸಿದ್ಧರಾಮ ಪುರಾಣದಲ್ಲಿ ಖಚಿತವಾದ ಆಧಾರ ದೊರೆಯದಿದ್ದರೂ ವೀರಶೈವರು ಸ್ಥಾವರಲಿಂಗ ಪೂಜೆಯನ್ನು ಬಿಟ್ಟು ಇಷ್ಟಲಿಂಗಾರಾಧನೆಯನ್ನು ಸ್ವೀಕರಿಸುವ ಸಂಧಿಕಾಲದಲ್ಲಿ ಹೇಗಿದ್ದರೆಂಬುದನ್ನು ರಾಘವಾಂಕನ ಸಿದ್ಧರಾಮನಿಂದ ಕಂಡುಕೊಳ್ಳಬಹುದಾಗಿದೆ.

(೩೬) ಸಿ. ಪು. ಸಂ. ೩. ಪ. ೧೨
(೩೭) ,, ಸಂ. ೨ ಪ. ೧೦
(೩೮) ,, ಸಂ. ೩—೩೩
(೩೯) ,, ಸ ೩ ಪ ೩೬

ವೀರಶೈವರು ಇಷ್ಟಲಿಂಗದಲ್ಲಿ ತೋರುವ ನಿಷ್ಠೆಯನ್ನೇ ಸಿದ್ಧರಾಮನು 'ಏಕನದ್ವಿತಿಯನೆನಿಸುವ ಲಿಂಗ'ಳಂವನ್ನು ನಂಬುವುದರಲ್ಲಿ ತೋರಿಸುವನು. ಆ ಲಿಂಗವನ್ನು ನಂಬದ ಕಾರಣ 'ನಾಗಾರ್ಜುನ' ವ್ಯಾಳಿ, ಘೋರಾಂಟಕರು ಕೆಟ್ಟರೆಂದು ೪೧ ಆತನ ನಂಬುಗೆ. ಭಾವಪ್ರಾಣಗಳು ಲಿಂಗಮಯವಾದಂತೆ ದೇಹವೂ ಲಿಂಗಮಯವಾಗಿದೆಯೆಂಬುದನ್ನು ಸೂಚಿಸುವುದು ಇಷ್ಟಲಿಂಗದ ಕುರುಹು. ಇಷ್ಟಲಿಂಗಾರಾಧನೆಯ ಕೊನೆಯ ಗುರಿ ಸಿದ್ಧ ಇಲ್ಲವೆ ಐಕ್ಯಾವಸ್ಥೆಯನ್ನು ಪಡೆಯುವುದು. ರಾಘವಾಂಕನ ಸಿದ್ಧರಾಮನು ಜನ್ಮದಾರಭ್ಯ ಇಲ್ಲವೆ ಮಲ್ಲಿಕಾರ್ಜುನನ ದರ್ಶನವಾದಂದಿನಿಂದಲೇ ಸಿದ್ಧಾವಸ್ಥೆಯಲ್ಲಿರುವನು. ೪೨ ದೇಹವು ಲಿಂಗಮಯವಾಗಿದೆಯೆಂಬುದು ಆತನ ಉತ್ತಮಾಂಗದಲ್ಲಿದ್ದ ಲಿಂಗದಿಂದ ಸೂಚಿತವಾಗುವಂತಿದೆ. ಅಂತೆ ಈತನಿಗೆ ಇಷ್ಟಲಿಂಗದ ಅವಶ್ಯಕತೆಯಿಲ್ಲವೆಂದೂ ಉತ್ತಮಾಂಗದ ಲಿಂಗವನ್ನೇ ಗಿರಿಜಾಧೀಶನು ಗುರುವಾಗಿ ನಿಂತು ತನ್ನ ಹಸ್ತದಿಂದ ಮುಟ್ಟಿ ಆಶೀರ್ವದಿಸಿರುವನೆಂದೂ ಪ್ರಭುವು ಆತನಿಗೆ ಬೇರೆ ಲಿಂಗ ಕಟ್ಟಲಿಲ್ಲ. ವೀರಶೈವರಿಗೆ ಅವಶ್ಯವಾದ ಭಕ್ತಿ, ಜ್ಞಾನ, ವೈರಾಗ್ಯಗಳೆಲ್ಲವನ್ನೂ ಸಿದ್ಧನು ಅಳವಡಿಸಿಕೊಂಡಿರುವನು.೪೩ ಆತನು ' ಈ ಯುಗದ ಜೀವರ ಪುಣ್ಯದೊದವಂಗೆ ಕೈಕೊಂಡ ಮೂರ್ತಿ'. ೪೪ ದೀಕ್ಷೆಯ ಕಾಲದಲ್ಲಿ ಗಿರಿಜಾಧೀಶನು ಆತನಿಗೆ 'ಭೂತದಯಾ ವಿಚಾರನುಂ ನೇಮಮುಂ' ಕೊಟ್ಟಿರುವನು. ಮಾನವರ ಉದ್ಧಾರಕ್ಕಾಗಿಯೇ ಮಾನವರ ನಡುವಿದ್ದು ಅವರು ಸಹಜವಾಗಿ ಸುಲಭವಾಗಿ ಅನುಸರಿಸಬಹುದಾದ ಮಾರ್ಗವನ್ನು ಕಂಡುಹಿಡಿದು 'ಸಾಕಾರದೊಳ್ ನಿಷ್ಠೆ ಭೂತಂಗಳೊಳಗನು ಕಂಪೆ' ಇವುಗಳನ್ನು ತನ್ನ ಜೀವನದ ಗುರಿಯನ್ನಾಗಿಟ್ಟುಕೊಂಡನು. ಕೆರೆ ಬಾವಿ ಗುಡಿಗುಂಡಾರಗಳನ್ನು ಕಟ್ಟಿಸಿದನು. ಶಾಪಗ್ರಸ್ತರಾದ ಅನೇಕ ಜೀವಿಗಳನ್ನು ಉದ್ಧರಿಸಿದನು. ಆದುದರಿಂದ ಅಲ್ಲಮಪ್ರಭುವು 'ನಿನ್ನ ಈ ಸೃಷ್ಟಿಯೇ ಬೇರೆ ಅದಕೆ

(೪೦) ಸಿ. ಪು. ಸ. ೯ ಪ. ೪೩.
(೪೧) ,, ,,
(೪೨) ಅಡಿಟಿಪ್ಪಣಿ ೩೫ ನ್ನು ನೋಡಬೇಕು.
(೪೩) ಸಿ. ಪು. ಸಂ. ೨ ಪ ೭೨
(೪೪) ಸಿ. ಪು. ಸಂ. ೯ ಪ ೪೫

ಮೆಚ್ಚಿದೆನು ' ೪೫ ಎಂದು ನುಡಿಯುವನು. ಪ್ರಭುವಿನ ದೃಷ್ಟಿಯಲ್ಲಿ ಸಿದ್ಧರಾಮನು ವೀರಶೈವನಾಗಿರದೆ ಭವಿಯಾಗಿದ್ದಿದೆ, ಕೇವಲ ಶೈವನಾಗಿದ್ದರೆ ಅತನನ್ನು ಕಡುತರವಾಗಿ ಟೀಕಿಸಿ, ಬಸವಣ್ಣ ಗೋರಕ್ಷಾದಿಗಳಿಗೆ ಉಪದೇಶಿಸಿದಂತೆ ಅತನಿಗೂ ಉಪದೇಶಮಾಡಿ ಅತನನ್ನೂ ತನ್ನ ಮಾರ್ಗದತ್ತ ಒಯ್ಯುತ್ತಿದ್ದನು. ಕಾರಣ ಪ್ರಭು ಮೆಚ್ಚಿದ ಸಿದ್ಧರಾಮನು ಶೈವನಾಗಿರದೆ ವೀರಶೈವನಾಗಿರಬೇಕು.

ಕ್ಷೇತ್ರ ಪೂಜೆ ಮಾಡುವಾಗ ಮದುವೆ ಬೇಕಾದವರು ಕನ್ನಿಕೆಯ ಗೋತ್ರಜರು ಸಹಿತ ಬರಬೇಕೆಂದು ಸಾರಲು ಅನೇಕ ಜನ ಬರುವರು. ಅವರ ಮಂಗಳ ವಿವಾಹವನ್ನು 'ಒಕ್ಕುದ ನಿಕ್ಕಿ' ಜಂಗಮವ ತಣಿಸಿ, 'ಲಿಂಗದ ಸಮುಕ್ಷದೊಳು' - 'ಗುರುವಿಂ' ಮಾಡಿಸುವನು. ಅಗ್ನಿಯ ಸಮ್ಮುಖದಲ್ಲಿ ವಿವಾಹವನ್ನು ಜರುಗಿಸುವುದು ವೈದಿಕ ಬ್ರಾಹ್ಮಣರಲ್ಲಿಯೂ ಶೈವಸಿದ್ಧಾಂತವನ್ನು ಅನುಸರಿಸುವವರಲ್ಲಿಯೂ ಇಂದಿಗೂ ರೂಢಿಯಾಗಿದೆ. [೭೬] ಸಿದ್ಧರಾಮನು ವೀರಶೈವನಾಗಿರದೆ ಶೈವನಾಗಿದ್ದರೆ ಅಗ್ನಿಯನ್ನು ಬಿಟ್ಟು 'ಲಿಂಗದ ಸಮುಕ್ಷದಲ್ಲಿ' ಮಂಗಳ ವಿವಾಹವನ್ನು ಮಾಡಿಸುತ್ತಿದ್ದನೆ.!

ಒಮ್ಮೆ ಚೈತ್ರವಾಸದಲ್ಲಿ ಸುತ್ತಲಿನ ಪ್ರಕೃತಿ ಎಂದಿನಂತಲ್ಲದೆ ಕಣ್ಣಿಗೆ ಮಂಗಳಂ-ಜೆತ್ತುಂ ಪರಮ ಮಂಗಳವಾಗಿ ಏಕಾಂತತರ ಮನೋಹರವಾಗಿ ಮೆರೆಯುತಿರೆ ಕಂಡು ಇದರೊಳಾನೆನ್ನ ಪುರುಷನೊಳು ಕೂಡಿ ಸುಖ ಪಡೆವೆನೆಂದು ಒಸೆದು ಹೃತ್‌ಕಮಲದಲರ್ವಸೆಯ ಮೇಲೆ ಉರುತರ ಜ್ಞಾನ ಪ್ರಭಾದೀಪ್ತಿವೆಳಗಿನೊಳು ನೆರೆವ ತವಕದ ಕಳಾ ಸುಖಮುಖದ ಪರವಶದಲ್ಲಿ [೭೭] ಸಿದ್ಧನಿರುವನು. ಆಗ ಅಂಗಭವನು ಮೂಜಗದ ಸತಿಯರ ಶಿರೋರತ್ನವೆಂಬ ಪೆಣ್ಣನ್ನು ತಂದು ಅಪ್ರತಿಮ ಶಿವಸಿದ್ಧಪತಿಯ ಮುಂದಿರಿಸಿ 'ಈ ಕಾಂತೆಗೇ ಕಾಂತಮಂ ಕೊಡು' ಎಂದು ದೇಡಿಕೊಳ್ಳುವನು. ಸಿದ್ಧರಾಮನು 'ಸತಿಗೆ ಸತಿ ಸೋಲ್ತು

(೭೫) ಸಿ. ಪು. ಸ. ೯ ಪ. ೪೫

(೭೬) —Hand book of Veerashaivism. P. 77
೨೭ನೆಯ ಆಡಿಟಿಪ್ಪಣಿಯನ್ನೂ ನೋಡಬೇಕು.

(೭೭) ಸಿ. ಪು. ಸಂ. ೪. ಪ ೬೯.

ಕೂಡಿದ ಕಾಲವುಂಟೆ ವಸುಮತಿಯೊಳು' ೭೮ ಎಂದು ಉತ್ತರಿಸುವನು. 'ಆ ನೆನ್ನ ಪುರುಷನೊಳು ಕೂಡಿ ಸುಖ ಪಡೆವೆನು.' ಸತಿಗೆ ಸತಿ ಸೋಲ್ತು ಕೂಡಿದ ಕಾಲವುಂಟೆ' ಎಂಬ ಮಾತುಗಳಲ್ಲಿ 'ಶರಣಸತಿ, ಲಿಂಗಪತಿ' ಎಂಬ ಭಾವನೆಯು ವ್ಯಕ್ತವಾಗುತ್ತದೆ. 'ಶರಣಸತಿ ಲಿಂಗಪತಿ' ಎಂಬ ಭಾವನೆಯು ವೀರಶೈವರಿಗೇ ವಿಶಿಷ್ಟವಾದುದು. ಸಿದ್ಧರಾಮನು ವೀರಶೈವನಾಗಿರದೆ ಶೈವನಾಗಿದ್ದರೆ ಹೀಗೆ ನುಡಿಯುತ್ತಿದ್ದನೆ?

ಮೊರಬದ ವಿಪ್ರ 'ಸಂಕ್ಕುಳವು ಸಿದ್ಧರಾಮೇಶನನ್ನು ಶೂದ್ರನೆಂದು ಹಳಿಯಲು ಅವರು ಕಾಗೆಗಳ ಬಾಧೆಗೊಳಗಾಗುವರು. ಅದರ ನಿವಾರಣೆಗಾಗಿ ಅವರು ಸಿದ್ಧರಾಮನಲ್ಲಿಗೆ ಬರಲು "ನಾವೇನು ಶೂದ್ರರು." ಎಂದು ಸಿದ್ಧರಾಮೇಶನು ನುಡಿಯುವನು. ಈ ವಿಪ್ರರ ಅಭಿಪ್ರಾಯದಂತೆ ಅತನು ಶೂದ್ರನೇ ಆಗಿದ್ದರೆ ಲಿಂಗಪೂಜೆ, ವಿವಾಹ ಮೊದಲಾದ ವಿಧಿಗಳನ್ನು ಸಿದ್ಧರಾಮನು ತಾನೇ ಮಾಡುತ್ತಿರಲಿಲ್ಲ.

ಸಿದ್ಧರಾಮೇಶನು ಸ್ವತಃ ತಾನೇ ತನ್ನ ಅಣ್ಣ ಬೊಮ್ಮಯ್ಯಂಗೆ ಕರುಣದಿಂ ದೀಕ್ಷೆ [೭೯] ಕೊಡುವನು. ಲಿಂಗ ಪ್ರತಿಷ್ಠೆ ಮಾಡುವಾಗ 'ಪುಣ್ಯಾಕಾರ ಲಿಂಗಕ್ಕೆ ನಾನಾ ವಿಶೇಷ ಪೂಜೆಯನ್ನು' ತಾನೆ ಒದಗಿಸುವನು. ಮದುವೆಯ ಸಂದರ್ಭದಲ್ಲಿ ವಧೂವರರಿಗೆ ತಾನೇ ಗುರುವಾಗಿ ನಿಂತು ಪ್ರಣವವನ್ನು ಉಚ್ಚರಿಸಿ ಲಗ್ನ ಮಾಡುವನು. ಇತರ ಶೈವ ಪಂಗಡಗಳಲ್ಲಿ ಮದುವೆ, ಹೋಮದೀಕ್ಷೆ, ಲಿಂಗ ಈ ಕಾರ್ಯಗಳನ್ನು ಋತ್ವಿಜರು ನಡಿಸುವರು, ವೀರಶೈವರಲ್ಲಿ ಮಾತ್ರ ಈ ಅಧಿಕಾರ ಗುರುಸ್ಥಲದ ಜಂಗಮಂಗಿದೆ. ಸಿದ್ಧರಾಮನು ಈ ಕಾರ್ಯಗಳನ್ನು ತಾನೇ ಮಾಡಿರುವುದರಿಂದ ಅತನು ವೀರಶೈವ ಜಂಗಮನಾಗಿರಬೇಕು. ಅಂತೆ ಗುರುವಾಗಿ ನಿಂತು ವಿವಾಹ ಜರುಗಿಸಿರುವನು. ಮೇಘಚೂಡನು ಶಾಪವಿಮುಕ್ತನಾಗಿ ಕೈಮುಗಿದು 'ಸಕಲ ದೀಕ್ಷಾವತಾರಾ, ಗುರವೆ.' ೮೦ ಎಂದು ಮುಂತಾಗಿ ಸಿದ್ಧರಾಮನನ್ನು ಬಣ್ಣಿಸುವನು.

(೭೮) ಸಿ ಪು- ಸಂ ೪ ಪ ೭೫

(೭೯) ,, ಸ ೩ ಪ ೩೭

(೮೦) ,, ಸ ೪ ಪ ೩೦

ಯೋಗಕ್ಕೂ [೫೧] ವೀರಶೈವ ಧರ್ಮಕ್ಕೂ ನಿಕಟವಾದ ಸಂಬಂಧ ಏದೆ. ಇಷ್ಟಲಿಂಗಾರಾಧನೆಯಲ್ಲಿ ಚಿತ್ತವೃತ್ತಿ ನಿರೋಧದ ತತ್ತ್ವ ಅಡಕವಾಗಿದೆ. ಪಾತಂಜಲಿ ಯೋಗವನ್ನು ಹೀಗೆ ಇಷ್ಟಲಿಂಗಾರಾಧನೆಯಲ್ಲಿ ಅಳವಡಿಸಿಕೊಂಡು ವೀರಶೈವರು ಈ ಯೋಗವನ್ನು ಶಿವಯೋಗವೆಂದು ಕರೆದರು, ಅದನ್ನು ಸಾಧಿಸಿದವರಿಗೆ ಶಿವಯೋಗಿಗಳೆಂದರು. ಸಿದ್ಧರಾಮನು ಶಿವಯೋಗಿಗಳಲ್ಲಿ ಶ್ರೇಷ್ಠನೆಂಬುದಕ್ಕೆ ಅನೇಕ ಆಧಾರಗಳು ದೊರೆಯುತ್ತವೆ.

'ಯೋಗಿಯಾದರೆ ನನ್ನಂತಾಗಬೇಕು.' 'ಯೋಗದ ಸಿದ್ಧಿ ಸಿದ್ಧರಾಮಂಗಾಯಿತ್ತು' [೫೨] ಎಂದು ಆತನ ವಚನ ಸಾರುತ್ತವೆ. ಆತನು ಯೋಗಾರೂಢನಾದ ವರ್ಣನೆ ಸಿದ್ಧರಾಮ ಪುರಾಣದಲ್ಲಿ ಬರುತ್ತದೆ. [೫೩] ಸಿದ್ಧರಾಮನು ಸಾಧಿಸುತ್ತಿದ್ದ ಈ ಯೋಗ ಶಿವಯೋಗವೆಂದು ಆತನ ಮಾತುಗಳಿಂದಲೇ ಸ್ಪಷ್ಟವಾಗುತ್ತದೆ. ಆತನು ಕೆರೆ ಬಾವಿಗಳನ್ನು ಆಯಾಸದಿಂದ ಅಗಿಸುವಾಗ ಗಂಗೆ, ತುಂಗಭದ್ರೆ ಮಲಪ್ರಹಾರಿಣಿಯರೆಲ್ಲ ಬಂದು 'ಈ ಸರಿಯ ನೀ ಬಿಸಿಲೊಳಯ್ಯ ನೀನೊದೆದೆಗೆದು । ಸೂಸು ವಾಯಾಸವುಂಬಿಡು ಸಾಕು ನಾವೀ ಪ್ರ । ದೇಶದೊಳು ಕೆಱೆಯಾಗಿ ತೊಱೆಯಾಗಿ ಡೊಣೆಯಾಗಿ ವಾಪಿಕೂಪಂಗಳಾಗಿ ॥ ಈಶನಭಿಷವದಗ್ರ ಜಲಕೆ ಸಂದಿಪ್ಪೆಂದು' ಅಡಲು.

'ಶಿವಯೋಗಿಯ ಶರೀರಂ ವೃಥಾ ಸವೆಯಲಾಗದನು ಗೊಂಬನಿತು ಕಾಯಕಂ ನಡೆಯುರಬೇಕು' ಎಂದನು. ತಾನು ಶಿವಯೋಗವನ್ನು ಸಾಧಿಸಿ ವೀರಶೈವನಾಗಿರದಿದ್ದರೆ ಸಿದ್ಧರಾಮನು ತನ್ನನ್ನು ತಾನು ಶಿವಯೋಗಿಯೆಂದು ಕರೆದುಕೊಳ್ಳುತ್ತಿರಲಿಲ್ಲ. ಅಲ್ಲದೆ ಆ ಮಾತಿನಲ್ಲಿ ಬರುವ 'ಕಾಯಕ' ಎಂಬ ವೀರಶೈವ ಪರಿಭಾಷೆ ಸಿದ್ಧರಾಮನು ವೀರಶೈವನೆಂಬುದಕ್ಕೆ ಮತ್ತಿಷ್ಟು ಬಲಕೊಡುತ್ತಿದೆ. 'ಕಾಯಕವೇ ಕೈಲಾಸ' ವೆಂದರಿತ ವೀರಶೈವನ ಬಾಯಿಂದಲೇ ಈ ನುಡಿಗಳು ಬಂದಿರಬೇಕು. ಕಾಯಕ ಶಬ್ದವು ಕವಿಯ ವೀರಶೈವತ್ವವನ್ನು ಸೂಚಿಸುತ್ತಿದೆ ಎಂಬ

(೫೦) ಯೋಗಶ್ಚಿತ್ತವೃತ್ತಿ ನಿರೋಧಃ
—ಪಾತಂಜಲಯೋಗ.

(೫೧) ಸಿದ್ಧರಾಮೇಶ್ವರನ ವಚನಗಳು ಪು. ೧೪—೧೫

(೫೨) ಸಿ. ಪು. ಸಂ ೪ ಪ ೨೭

ಸಂಪಾದಕರ ಅಭಿಪ್ರಾಯಕ್ಕೆ ಇಲ್ಲಿ ಬಲದೊರೆಯುವಂತಿಲ್ಲ. 'ಶಿವಯೋಗಿ' 'ಕಾಯಕ' ಈ ಎರಡೂ ವೀರಶೈವ ಪರಿಭಾಷೆಗಳು ಪೂರಕ. ಪರಿಪೂರಕಗಳಾಗಿ ಸಿದ್ಧರಾಮನು ವೀರಶೈವನೆಂಬುದನ್ನು ಸಾರುತ್ತವೆ. ರಾಘವಾಂಕನು ಜೋಗಿವಡೆಯೊಡೆಯನ ಮುಖದಿಂದ 'ಶರಣಸಂಕುಳ ಸುರದ್ರುಮ ಸಿದ್ಧರಾಮಯ್ಯ' [೫೪] ಎಂದು ಬಣ್ಣಿಸಿ ಮಾಡಿಸಿದುದರ ಮುಖ್ಯತಾರ್ಥವಾದರೂ ಇದೇ ಎಂದು ಹೇಳಬಹುದು. ಶರಣ ಎಂಬುದೂ ವೀರಶೈವರ ಪರಿಭಾಷೆಯ ಅರ್ಥದಲ್ಲಿಯೇ ಉಪಯೋಗವಾಗಿದೆ. 'ಸಿದ್ಧರ ಬಲ್ಲಹಂ ನವಸುಧಾ ಪಾದೋದಕವನು ಗುಡ್ಡರ್ಗೆಱೆ' [೫೫] ಯುತ್ತಾನೆ. ಗುಡ್ಡರಿಗೆ ಅದು 'ಮರಣಮುಂ ತೊಡೆವ ಪ್ರಸಾದಾಮೃತ'ವಾಗುತ್ತದೆ. ಪಾದೋದಕ ಪ್ರಸಾದಗಳೆರಡೂ ವೀರಶೈವರ ಅಷ್ಟಾವರಣಗಳಲ್ಲಿ ಬಹು ಮಹತ್ವವಾದವು. ಸಿದ್ಧರಾಮೇಶನು ವೀರಶೈವನಾಗಿರದಿದ್ದರೆ ಪಾದೋದಕವನ್ನು ಭಕ್ತರಿಗೆ ಕೊಡುತ್ತಿದ್ದನೆ? ಪಾದೋದಕದಿಂದ ತನುಮನಗಳೆರಡೂ ಪವಿತ್ರವಾಗುವವೆಂದು ವೀರಶೈವರ ನಂಬುಗೆ. ವೀರಶೈವರಲ್ಲದವರು ಪ್ರಸಾದವನ್ನು ಭುಕ್ತಶೇಷ, ಎಂಜಲ ಎಂದು ಕರೆಯುವರು. [೫೬] ವೀರಶೈವರ ನಂಬುಗೆ ಹಾಗಿಲ್ಲ. ಜಾತಿ ಮತ ಪಂಥಗಳ ವೈಷಮ್ಯವನ್ನು ಹೊಡೆದೋಡಿಸುವುದಕ್ಕಾಗಿ ಸಮತೆಯ ಬೀಜವನ್ನು ಬಿತ್ತುವದಕ್ಕಾಗಿ ವೀರಶೈವ ಧರ್ಮದಲ್ಲಿ ಪ್ರಸಾದವನ್ನು ಸೇರಿಸಿರಬಹುದು. [೫೭] ಹೀಗೆ ಪಾದೋದಕ ಪ್ರಸಾದಗಳಿಗೆ ವೀರಶೈವ ಮತದಲ್ಲಿ ಅತಿ ಮಹತ್ವದ ಸ್ಥಾನವಿರುವುದರಿಂದ ಅವುಗಳನ್ನು ಅಷ್ಟಾ

(೫೪) ಸಿ. ಪು. ಸಂ. ೪ ಪ. ೨೩

(೫೫) ,, ,, ೬ ಪ ೫೩

(೫೬) ,, ,, ೬ ಪ. ೫೫

(೫೭) E. P. Rice History of Kannada literature P. 51

(೫೭) Their (Padodak & Prasad) social aim was to remove all kinds of distinctions such as caste, rank and sex and to introduce equality and common brother-hood in religion as well as in society. To achieve this, probably the Prasada was introduced.
—Hand book of Veerashaivism.

ವರಣಗಳಲ್ಲಿ ಸೇರಿಸಲಾಗಿದೆ. ಇತರ ಶೈವರಲ್ಲಿ ಪಾದೋದಕ ಪ್ರಸಾದಗಳಿಗೆ ಇಷ್ಟು ಮಹತ್ವದ ಸ್ಥಾನವಿದ್ದಂತೆ ಕಂಡುಬರುವುದಿಲ್ಲ. ಪಾದೋದಕವನ್ನು ಕೊಟ್ಟ ಸಿದ್ಧರಾಮನು ವೀರಶೈವ ಗುರು ಇಲ್ಲವೆ ಜಂಗಮನಾಗಿರಬೇಕು.

ಬಿಲ್ಲೇಶ ಬೊಮ್ಮಯ್ಯನೆಂಬವನು ಸಾಲ ಹೆಚ್ಚಿ ದಾಯಾದರ ಒಡನೆಗಳನ್ನು ಇರಿಕಿಕೊಂಡು ಸೊನ್ನಲಗೆಗೆ ಓಡಿಬಂದು ವೇಷ ಬದಲಾಯಿಸಿ ಸಿದ್ಧರಾಮನ ಶಿಷ್ಯಮಂಡಲ ಸೇರುವನು. [೫೯] ಇದನ್ನರಿತು ಸಾಲ ಕೊಟ್ಟವರು ಬಂದು ಹಣ ಕೇಳಲು

'ಭವಿಗಳಿಂದೆಕ್ಕ ವಿಂಡಿಂಗುರುವ ಗುಡ್ಡನಹ
ಶಿವಭಕ್ತನಹ ಸದಾಚಾರಿಯಪ್ಪೆನ್ನ ಮೇ
ಲ ವಿಚಾರದಿಂ ಕಳವನಿಟ್ಟರಿಂದಾಕ್ರೋಶದಿಂಜಜಿಸಿದು
ಜಂಕಿಸಿದನು [೬೦]

ಶಿವಸಿದ್ಧಪದ್ಧತಿಯಂ ಕಂಡು ಕರುಣವಂ ಪಡೆದು ಎಕ್ಕ ವಿಂಡಿಂಗೆ ಸಲುವ ವೇಷನಾಂತಃ ಗುಡ್ಡನಾಗಿರುತಿರ್ಪ ಬೊಮ್ಮಯ್ಯನು

ನಿಜವಾದ ಶಿಷ್ಯನಾಗಿರದಿದ್ದರೂ ಶಿಷ್ಯರಿಗೆ ಸಲುವ ವೇಷವನ್ನು ಧರಿಸಿ ನಟನೆಯೊಳಗಾದರೂ ಸಿದ್ಧರಾಮನ ಶಿಷ್ಯನಾಗಿರುವನು. ಆತನು ಸಿದ್ಧರಾಮನ ಶಿಷ್ಯರಲ್ಲಿ ಒಬ್ಬನೆಂಬುದು ಸತ್ಯವಾದುದು. ಇಂತಹ ಈ ಶಿಷ್ಯನು ಭವಿಗಳಿಗಿಂತ ಶ್ರೇಷ್ಠನು, ಶಿವಭಕ್ತನು, ಸದಾಚಾರಿ ಎಂದು ಹೇಳಿಕೊಳ್ಳುವನು. ಆತನ ಮಟ್ಟಿಗೆ ಈ ಮಾತು ಸತ್ಯವಾಗಿರದಿದ್ದರೂ ಸಿದ್ಧರಾಮನ ಶಿಷ್ಯರಲ್ಲೊಬ್ಬನಾಗಿ ಹೀಗೆ ನುಡಿಯುವುದರಿಂದ ಅದು (ಅವರಿಗೆ) ಸಿದ್ಧರಾಮನ ಉಳಿದ ಶಿಷ್ಯರಿಗೆ ತಪ್ಪದೆ ಅನ್ವಯಿಸುತ್ತಿದೆ. ಅಂದರೆ ಸಿದ್ಧರಾಮನ ಶಿಷ್ಯರು ಭವಿಗಳಿಗಿಂತಲೂ ಶ್ರೇಷ್ಠರು. ಶಿವಭಕ್ತರು ಸದಾಚಾರಿಗಳು ಎಂದಂತಾಯಿತು. ಭವಿ ಎಂಬುದು ವೀರಶೈವರ ಪರಿಭಾಷೆ. ಲಿಂಗವಿರಹಿತರನ್ನು ವೀರಶೈವರು ಭವಿಗಳೆಂದು ಕರೆಯುತ್ತಾರೆ. ಭವಿಗಳಿಗಿಂತ ತನ್ನ ಶ್ರೇಷ್ಠತೆಯನ್ನು ಹೇಳಿಕೊಳ್ಳುವ ಬಿಲ್ಲೇಶ ಬೊಮ್ಮಯ್ಯನು ಸತ್ಪದಲ್ಲಿಲ್ಲದಿದ್ದರೂ ವೇಷದಲ್ಲಿ ವೀರಶೈವ

(೫೯) ಸಿ. ಪು. ಸ. ಲ ಪ. ೧
(೬೦) ,, ,, ೩

ನಾಗಿರಬೇಕು. ಇತರ ಶಿಷ್ಯರನ್ನು ಹೋಲುವಂತೆ ಆತನು ವೇಷಧರಿಸಿರುವುದರಿಂದ ಅವರು ನಿಜವಾಗಿಯೂ ವೀರಶೈವರಾಗಿರಬೇಕು. ವೀರಶೈವರಿಗೆ ಗುರುವಾಗಿದ್ದ ಸಿದ್ಧರಾಮನು ವೀರಶೈವನಾಗಿದ್ದನೆಂದು ತಿಳಿದರೆ ತಪ್ಪಾಗುವದೆ?

ಸೊಡ್ಡಳ ಬಾಚರಸ, ಹಾವಿನಹಾಳ ಕಲ್ಲಯ್ಯ ಎಂಬೀ ವೀರಶೈವರು ಸಿದ್ಧರಾಮನನ್ನು ಕಂಡು ಬಲ್ಲವರಾಗಿ ಆತನಿಗೆ ಗೌರವವನ್ನಿತ್ತಿರುವುದರಿಂದ ಸಿದ್ಧರಾಮನೂ ವೀರಶೈವನೇ ಆಗಿರಬೇಕೆಂದು ವಾದಿಸುವುದು ತಪ್ಪೆಂದು ಸಂಪಾದಕರು ಅಭಿಪ್ರಾಯವಿತ್ತಿರುವರು. ಇಲ್ಲಿ ಬಾಚರಸ, ಕಲ್ಲಯ್ಯ ಇವರಿರ್ವರೂ ಸಿದ್ಧರಾಮನಿಗೆ ಇತ್ತ ಗೌರವವನ್ನು ಸ್ವಲ್ಪ ಸೂಕ್ಷ್ಮದೃಷ್ಟಿಯಿಂದ ನೋಡಬೇಕಾಗುವುದು. ಸಿದ್ಧರಾಮನನ್ನು ಕರೆದುತರಬೇಕೆಂದು ಭೂಪ ಬಿಜ್ಜಳನ ತಮ್ಮ ಕರ್ಣದೇವನು ಬಾಚರಸನನ್ನು ಕೇಳಿಕೊಳ್ಳುವನು. ವಾರಣಾಸಿಯ ಬಟ್ಟಿವೋದರೆಂಬುವೆನಗಾಯ್ತೆಂದು ಹರ್ಷದಿಂದ ಆತನು ಸೊನ್ನಲಿಗೆಗೈತರುವನು. ಅತ್ಯಾನಂದದಿಂದ ಶ್ರೀವಿಭೂತಿಯ ಕಾಣ್ಕೆಯಿತ್ತು ಎರಗಿ ಅರಸನ ಅಭೀಷ್ಟವನ್ನು ತಿಳಿಸುವನು. ಸಿದ್ಧರಾಮನು ಆತನಿಗೆ ಯೋಗಮಜ್ಜನದನ್ನು ತೋರಿಸುವನು. 'ಬೇರೊಂದು ನಿರ್ಜನಕ್ಕೊಯ್ದು ಅನುಭವ ಸುಖವ ಹೇರಿ ಅದರೈಹಿಕಕ್ಕಾರೆನೆನೆ ಸೊಡ್ಡಳಗೆ ಬೇರಾಗದಂತೆ ಸಲುವಂದಮಂ' ಹೇಳುವನು. ಬರುವುದು ಬಿಡುವುದು ಎನ್ನಳವಲ್ಲ. ಮಲ್ಲಯ್ಯನ ಇಚ್ಛೆ ಎಂದು ನುಡಿಯುವನು. ಆ ಉಪದೇಶ ಪಡೆದು ಸೊಡ್ಡಳ ಬಾಚರಸನು ಲಿಂಗೈಕ್ಯನಾಗುವನು. ವೀರಶೈವನಾದ ಬಾಚರಸನು ವೀರಶೈವನಲ್ಲದ ಸಿದ್ಧನಿಗೆ ಇನಿತೊಂದು ಗೌರವವನ್ನು ತೋರಿ ಆತನಿಂದ ಉಪದೇಶಪಡೆಯುತ್ತಿದ್ದನೆ? ಬಾಚರಸನಂತಹ ವೀರಶೈವನಿಗೆ ಉಪದೇಶವಿತ್ತ ಸಿದ್ಧರಾಮನೂ ವೀರಶೈವನೇ ಆಗಿರಬೇಕು. ವೀರಶೈವ ಶರಣಂಗೆ ವೀರಶೈವರಲ್ಲದವರ ಉಪದೇಶ ಹೊಲ್ಲದು.

ಹಾವಿನಹಾಳ ಕಲ್ಲಯ್ಯನು ವೀರಶೈವನೆಂಬುದನ್ನು ಎಲ್ಲರೂ ಒಪ್ಪುವರು. ಆತನಿಗೆ ವೀರಶೈವ ದೀಕ್ಷೆಯನ್ನಿತ್ತವರು ರೇಣುಕಾಚಾರ್ಯರಿಂದೊಗೆದ ರುದ್ರಮುನಿದೇವರು. [೬೧] ಕಲ್ಲಯ್ಯನು ಸಿದ್ಧರಾಮನಲ್ಲಿಗೆ ಬರುವುದು ಈ ದೀಕ್ಷೆಯಾದನಂತರ. ಆತನಿಗೆ ಶಿವಜ್ಞಾನ ಉಂಟೆಂಬು

(೬೧) ಹರಿಹರನ ರಗಳೆಗಳು ಭಾಗ ೬. ಪು. ೭೭

ದನ್ನು ಸಿದ್ಧರಾಮನೂ ಬಲ್ಲ.[೬೨] ಅಂತೆ ಅವರಿರ್ವರಲ್ಲಿ ಮಿತ್ರತ್ವವುಂಟಾಗಿತ್ತು.[೬೩] ಶಿವಜ್ಞಾನಿಯೂ ವೀರಶೈವನೂ ಆದ ಕಲ್ಲಯ್ಯನು ಹೊತ್ತು ಹೋಗದೆ ಕುಳಿತ ಮಂಠಯದ ಮುಂದಿಯೊಳು ಕೆಲವರು ಸೊನ್ನಲಿಗೆ ಕಾಶಿ, ಗಯೆ ಮೊದಲಾವ ಕ್ಷೇತ್ರಗಳಿಗೆ ಎಣೆಯಾಗದೆಂದು ತಿಳಿಸ್ಮರಿಸಲು ಆ ಮಾತು ಕೇಳಿ 'ಮನನೊಂದು ವೇಗದಿಂ ಹರಿದು ಗುರುವಿನೆಡೆಗೆ ಬಂದುವಂದಿಸಿ ನಡೆದ ಸಂಗತಿಯನ್ನು ವಿಜ್ಞಾಪಿಸುವನು.[೬೪] ಆ ದಿವ್ಯಕ್ಷೇತ್ರ ವಿಗಿಲೆನಿಸುವಂತಹದೊಂದು ಪವಾಡವನ್ನು 'ಕರುಣಿಪುದೆಂದು ಕಾಲ್ವಡಿದನು.[೬೫] ಕೊನೆಗೆ ಗೊಪೆಯುನ್ನು ಸೇರುವ ಬಗೆಗೆ ಆತನ ಸಲಹೆ ಕೇಳಿದಾಗ ಕಲ್ಲಯ್ಯನು ಸಿದ್ಧರಾಮನನ್ನು ಮುಕ್ತಕಂಠದಿಂದ ಹೊಗಳುವನು.[೬೬] ಶಿವಜ್ಞಾನಿಯಾದ ಕಲ್ಲಯ್ಯನು ತಾನು ವೀರಶೈವನಾಗಿ ಸಿದ್ಧರಾಮನು ವೀರಶೈವನಾಗಿರದೆ ಶೈವನಾಗಿದ್ದರೆ ಆತನಿಗೆ ಇಷ್ಟೊಂದು ಗೌರವವನ್ನು ತೋರಿಸುತ್ತಿರಲಿಲ್ಲ. ಇಬ್ಬರಲ್ಲಿಯೂ ಒಂದು ಬಗೆಯ 'ಮಿತ್ರತ್ವ'ವುಂಟಾಗಿರುವುದರಿಂದ ಇಬ್ಬರೂ ಸಮಾನ ಧರ್ಮರಾಗಿರಬೇಕು. ವೀರಶೈವನಾಗಿದ್ದ ಕಲ್ಲಯ್ಯನು ರುದ್ರಮುನಿಗಳಿಂದ ದೀಕ್ಷೆಪಡೆದು ವೀರಶೈವನಾಗಿ ಮತ್ತೆ ಸಿದ್ಧರಾಮನ ಸಾನ್ನಿಧ್ಯದಿಂದ ಶೈವನಾಗಿರಬಹುದೆಂದು ತರ್ಕಿಸುವುದಕ್ಕಿಂತ ಸಿದ್ಧರಾಮನೂ ವೀರಶೈವನಾಗಿದ್ದನೆಂಬ ನಿರ್ಣಯಕ್ಕೆ ಬರುವುದು ಹೆಚ್ಚು ಸಮಂಜಸವಾಗಿದೆ.

ಕಲ್ಲಯ್ಯನು ವೀರಶೈವನೆಂಬ ಸಿದ್ಧಾಂತವನ್ನು ನಂಬಿ ಮೇಲಿನ ಮಾತನ್ನು ವಿವೇಚಿಸಿದುದಾಯಿತು. ಆತನು ವೀರಶೈವನೆಂಬುದನು ಮಾನ್ಯರಾದ ಡಿ. ಎಲ್. ನರಸಿಂಹಾಚಾರ್ಯರೂ ಒಪ್ಪಿರುವರು.[೬೭] ಕಲ್ಲಯ್ಯನಿಗೆ ವೀರಶೈವ ದೀಕ್ಷೆಯಾದ ಪ್ರಸಂಗವನ್ನು ಸ್ವಲ್ಪ ವಿವೇಚಿಸೋಣ.

---

(೬೨) ಸಿ. ಪು. ಆ. ೯ ಪ ೫೦

(೬೩) ಹರಿಹರನ ರಗಳೆಗಳು ಭಾಗ ೬ ಪು ೮೦ ಸಾಲು ೮

(೬೪) ಸಿ. ಪು ಸಂ ೬ ಪ ೪-೫

(೬೫) ,, ,,

(೬೬) ,, ಸಂ ೯ ಪ ೫೧-೫೨

(೬೭) ಸಿ. ಪು. ಪುಟಿ / ii

'ರಂಗ ಮಂಟಪದೊಳಗೆ ಶಿವಕಲಶ ಮುಮನಿರಿಸಿ
ಪಿಂಗ ದೊಲವಿಂ ಪಂಚ ಶುದ್ಧಿಯಂ ಸಂಗಡಿಸಿ
ಸುರುಚಿರ ವಿಭೂತಿಯಂ ಶಿವಪಟ್ಟವಮಂ ಕಟ್ಟಿ
ಶರಣ ಸಂತತಿಯೊಲ್ದು ಸಂತೋಷಮಂ ಮುಟ್ಟಿ
ಗುರುಕಲಶದೊಡನೆ ಶಿವಕಲಶಂಗಳಂ ಪಿಡಿದು
ಪರಮಾನುರಾಗದಿಂ ಕಲಶೋದಕವ ನೆರೆದು
ಇಂತು ಗುರು ರುದ್ರಮುನಿದೇವ ಬಿಜಯಂಗೆಯ್ಯೆ
ಪಿಂತೆ ಕಲ್ಲಯ್ಯನಾ ಶೈವ ರಾಜ್ಯಂಗೆಯ್ಯೆ
ಗುರು ಹಸ್ತದಿಂ ಪಿಡಿಯೆ ಲಘುವಳಿದು ಗುರುವಾಗಿ
ಉರುತರ ಜ್ಞಾನಮಯನಾಗಿ ಸುಖತರವಾಗಿ
ಸಂತ ಸುಖದಿಂದವಿರ್ದಂ[೬೮]

ಈ ಗುರು ರುದ್ರಮುನಿಯು ರೇಣುಕಾಚಾರ್ಯ ಸಂಭೂತನೆಂದು ಮೇಲೆ ಹೇಳಲಾಗಿದೆ. ಆತನು ಕಲಶ ಹೂಡಿ ಕಲಶೋದಕವನ್ನೆರೆಯುತ್ತಾನೆ. ಕಲ್ಲಯ್ಯನಿಗೆ ಇಷ್ಟಲಿಂಗ ಧಾರಣೆಯನ್ನಾಗಲಿ ಷಟ್‌ಸ್ಥಲೋಪದೇಶವನ್ನಾಗಲೀ ರುದ್ರಮುನಿದೇವರು ಮಾಡಿದುದರ ವರ್ಣನೆ ಇಲ್ಲಿ ಬಂದಿಲ್ಲ. ಆದರೂ ಕಲ್ಲಯ್ಯನ ವೀರಶೈವತ್ವದ ಬಗೆಗೆ ಯಾವ ಸಂಶಯವೂ ಇಲ್ಲ. 'ಶಿವ ತಂದೆ ನೀ ನಿರಲು ಭವಿತಂದೆ ಬಡಿವನೆ?' ಎನ್ನುವನು ಕಲ್ಲಯ್ಯ. ಹೀಗೆ ಹಂಪರದೇವನು ಬರೆದ ಶಿವಗಣದ ರಗಳೆಗಳನ್ನು ಪರಿಕಿಸಿದರೆ ಹನ್ನೆರಡನೆಯ ಶತಮಾನದ ಅನೇಕ ಶಿವಶರಣರಿಗೆ ಇಷ್ಟಲಿಂಗಧಾರಣೆಯಾದುದನ್ನಾಗಲಿ ಷಟ್‌ಸ್ಥಲೋಪದೇಶದೊರೆತುದನ್ನಾಗಲಿ ಆತನು ಹೇಳುವದಿಲ್ಲ.[೬೯] ಕಲ್ಲಯ್ಯನವರನ್ನೊಳಗೊಂಡು ಈ ಎಲ್ಲ ಶಿವಶರಣರು ವೀರಶೈವರೆಂಬುದನ್ನು ಎಲ್ಲರೂ ಒಪ್ಪುವರು. ಆದುದರಿಂದ ರಾಘವಾಂಕನ ಸಿದ್ಧರಾಮನಿಗೆ ವೀರಶೈವ ಸಂಪ್ರದಾಯದಂತೆ ಇಷ್ಟಲಿಂಗಧಾರಣೆ ಷಟ್‌ಸ್ಥಲೋಪದೇಶಗಳಾಗಿಲ್ಲವೆಂಬ ಕಾರಣದಿಂದ ಆತನ ವೀರಶೈವತ್ವವನ್ನು ಶಂಕಿಸುವುದು ಸಮಂಜಸವಾಗದು. ಕಲ್ಲಯ್ಯನೂ ಸಿದ್ಧರಾಮನಂತೆ ದೀಕ್ಷೆಯಾದ ಮೇಲೆ ಸ್ಥಾವರಲಿಂಗವಾದ ಕಲ್ಲಿನಾಥನ ಪೂಜೆಯಲ್ಲಿ ನಿರತನಾಗುವನು. ಸಿದ್ಧರಾಮನು

---

(೬೮) ಹರಿಹರನ ರಗಳೆಗಳು ಭಾಗ ೬ ಪು ೭೭

(೬೯) ಏಕಾಂತದ ರಾಮಿತಂದೆಗಳ ರಗಳೆ, ರೇವಣಸಿದ್ಧೇಶ್ವರನ ರಗಳೆಗಳನ್ನು ನೋಡಬೇಕು.

ಸ್ಥಾವರಲಿಂಗ ಪೂಜೆಯಲ್ಲಿ ನಿರತನಾಗಿದ್ದನೆಂಬುದರ ನಿಮಿತ್ತ ಆತನು ವೀರಶೈವನಾಗಿರದೆ ಶೈವನಾಗಿದ್ದನೆಂದು ಹೇಳುವುದು ಸರಿ ಎನಿಸದು.

ಸಿದ್ಧರಾಮನಿಗೆ 'ಇರ್ಮ ವಿಲ್ಲೆಂಬ ಬಯ್ಗುಲಿನ ಭ್ರಮೆಯ ಬಿಡಿಸಿ ಬಿಸುಡಡೆಂದು' ಪ್ರಭುವು ಹೇಳಲು ಆತನು ಸಮಾಧಿಯನ್ನು ನಿರ್ಮಿಸುವನು. [೭೦] ಈ ಸಂದರ್ಭದಲ್ಲಿ ಬರುವ ಸಮಾಧಿಯು ರಚನೆ, ಸಿದ್ಧರಾಮೇಶನು ಸಮಾಧಿಸ್ಥನಾಗುವ ವಿಧಾನ ಇವೆಲ್ಲ ಆತನ ವೀರಶೈವತ್ವವನ್ನು ಸೂಚಿಸುತ್ತವೆ. ಸಮಾಧಿಯೆಂಬುದೂ ವೀರಶೈವರ ಪರಿಭಾಷೆ.

ಹೀಗೆ ಸಿದ್ಧರಾಮು ಪುರಾಣವನ್ನು ಪರಿಕಿಸಿ ನೋಡಿದರೆ ರಾಘವಾಂಕನ ಸಿದ್ಧರಾಮನು ಶೈವನಾಗಿರದೆ ವೀರಶೈವನಾಗಿದ್ದನೆಂದು ಹೇಳುವುದೇ ಸಮಂಜಸವೆಂದು ತೋರುತ್ತದೆ.

ಮನಕೆ ಬೋಧೆ.

(ಲೇಃ— ಶ್ರೀ. ಸದಾಶಿವ ಶಿವಾಚಾರ್ಯ ಸ್ವಾಮಿಗಳು, ಮು. ಸಖರಾಯಪಟ್ಟಣ.)

ಸಂಗನಬಕುತರ ಸಂಗಾತಿಯಾಗಬೇಕೆಲೆ ಮನವೆ ।
ಹಿಂಗಿದುರ್ವಿಷಯ ಸಂಗವ ಬೇಗ ಸುಖಿಯಪ್ಪೆ ಎಲೆ ಮನವೆಲೆಮನವೆ ॥
ಮಂಗ ಗುಣದಿ ಲೋಕವಾನ್ಯತೆ ದೊರಕದು ಎಲೆ ಮನವೆಲೆಮನವೆ ।
ಕಂಗಳ ಕೊನೆಯ ಕಾಮುವ ನೀಗಿ ನಿಲ್ಲಬೇಕೆಲೆಮನವೆಲೆಮನವೆ ॥ ೧ ॥

ಜಂಗುಳಿ ಕೀಳ ದೈವಕೆ ಹರಿದಾಡಬೇಡೆಲೆ ಮನವೆಲೆಮನವೆ ।
ಮಂಗಲ ಗುರು ಶಂಭುಲಿಂಗವ ಬಿಡಬೇಡವೆಲೆ ಮನವೆಲೆಮನವೆ ॥
ಕಂಗಳ ಲಿಂಗದೊಳಿಟ್ಟ ನಿಜದೃಷ್ಟಿಯ ಪಡೆಯಬೇಕೆಲೆ ಮನವೆಲೆಮನವೆ ।
ಮಂಗಲ ದೃಷ್ಟಿಯಿಂದಂಗನೆಯರ ಕಾಣೆ ಭಂಗಿಲ್ಲ ಜಗದಂಬೆ ರೂಪರೆಲೆ ಮನವೆಲೆಮನವೆ ॥ ೨ ॥

ಅಂತಿಂತು ವಿಷಯಗಳಳಿಯಾಸೆ ಮಾಡದಿರೆಲೆಮನವೆಲೆಮನವೆ ।
ಭ್ರಾಂತಿಗೀಂತಿಯ ದೂಡಿ ನಿಶ್ಚಿಂತನಾಗಬೇಕೆಲೆ ಮನವೆಲೆಮನವೆ ॥
ಕಂತುಮರ್ದನ ಲಿಂಗದಡಿಯ ಚಿಂತಿಸಬೇಕು ಎಲೆ ಮನವೆಲೆಮನವೆ ।
ಶಾಂತಿ ನಿಜಾನಂದದೊಳಗಾಡಿ ಮೆರೆಯಬೇಕೆಲೆ ಮನವೆಲೆಮನವೆ ॥ ೩ ॥

---

(೭೦) ಸಿ. ಪು. ಸಂ ೯ ಪ ೫೫

ಬ್ರಹ್ಮ ವಿದ್ಯೆಯೇ ಉಪನಿಷತ್ತು.

(ಲೇಃ— ಪ್ರೊ. ಹ. ತು. ಸಾಸನೂರ, ಎಮ್. ಏ. ಪ್ರೊಫೆಸರ ವಿಜಯ ಕಾಲೇಜ ವಿಜಾಪುರ)

ಉಪನಿಷತ್ತೆಂದರೆ ಬ್ರಹ್ಮ ವಿದ್ಯೆ ಮತ್ತು ಅದನ್ನೇ ಪ್ರತಿಪಾದಿಸುವ ಗ್ರಂಥವೆಂದಾಗುವದು. ಆ ಬ್ರಹ್ಮ ವಿದ್ಯೆಯಂದರೇನು? ಬ್ರಹ್ಮದ ಸ್ವರೂಪವೇನು? ಪರಮಾತ್ಮ ಜೀವ, ಮತ್ತು ಜಗತ್ತಿನ ಸ್ವರೂಪವೇನು? ಜೀವ ಮತ್ತು ಜಗತ್ತುಗಳೊಡನೆ ಅದರ ಸಂಬಂಧವೇನು? ಹಾಗು ಅದನ್ನು ಹೊಂದುವ ಉಪಾಯವೇನು? ಇದರ ಅಧಿಕಾರಿ ಯಾರು? ಇತ್ಯಾದಿ ವಿಷಯ ವಿವೇಚನೆಯು ಉಪನಿಷತ್ತುಗಳಲ್ಲಿ ಮಾಡಲ್ಪಟ್ಟಿರುತ್ತದೆ.

ಅಜ್ಞಾನಾಂಧಕಾರವು ಕಳಚಿ ಹೋಗಿ ಜ್ಞಾನದ ಪೂರ್ಣಾಲೋಕವು ಪ್ರಕಾಶಿತವಾಗುವದನ್ನು ಉಪನಿಷತ್ತು ಕಲಿಸುತ್ತದೆ. ಬಹು ಯುಗ ಯುಗಾಂತರಗಳಿಂದ ಸಂಚಿತ ಘನೀಭೂತ ಅಂಧಕಾರವು ಅನ್ಯ ಯಾವ ರೀತಿಯಿಂದಲೂ ಪರಿಹರಿಸಲಶಕ್ಯ. ಅದನ್ನು ದೂರ ಮಾಡಬೇಕಾದರೆ ಸಾಮಾನ್ಯ ಒಂದು ಅಗ್ನಿ ಜ್ವಲಿಸಬೇಕಾಗುವದು. ಅದರಂತೆಯೇ ಮಾನವ ಮಂಡಲಿಯ ಹೃದಯ ಕಂದರದಲ್ಲಿ ಚಿರಸಂಚಿತವಾದ ಅಂಧಕಾರವು ಮತ್ತೆ ಯಾವದರಿಂದಲೂ ಹೋಗುವದಿಲ್ಲ. ಆ ಸಂಚಿತ ಅಜ್ಞಾನಾಂಧಕಾರ ದೂರ ಮಾಡಬೇಕಾದರೆ ಹೃದಯದಲ್ಲಿ ವಿವೇಕಾಗ್ನಿ ಜ್ವಲಿಸಬೇಕಾಗುವದು. ವಿವೇಕಾಗ್ನಿ ಜ್ವಲಿಸಿದ ಮುಹೂರ್ತದಲ್ಲಿಯೇ ಸಮಸ್ತ ಅಂಧಕಾರ ಪುಂಜೀಕೃತ ಅಜ್ಞಾನರಾಶಿ ದೂರವಾಗಿ ಹೋಗುತ್ತದೆ. ಆ ಬ್ರಹ್ಮ ವಿದ್ಯಾ ಲಾಭ ಮಾಡಬೇಕಾದರೆ ಅದೇ ವಿವೇಕ ಇಲ್ಲದೆ ಜ್ಞಾನದ ವಿನಾ ಅನ್ಯ ಉಪಾಯವಿಲ್ಲ. "ನಾನ್ಯಃ ಪಂಥಾ ವಿದ್ಯತೇ ಅಯನಾಯ" (ತೈತ್ತಿರೀಯ). ನೀವು ಭವಸಾಗರದ ಆಚೆಗೆ ಹೋಗಲಿಕ್ಕೆ ಇಚ್ಛಿಸಿದರೆ ಮತ್ತೊಂದು ಪಥವಿಲ್ಲ. ಏಕ ಮಾತ್ರ ಉಪಾಯ-ವಿವೇಕ-ಜ್ಞಾನ ಆರ್ಥಾತ್ ಅದನ್ನೇ ತಿಳಿಯುವದು. ಅದನ್ನು ತಿಳಿಯುದ ಹೊರತು ಮತ್ತೆ ಎರಡನೆಯ ಉಪಾಯವಿಲ್ಲ. ಅದಕ್ಕೆ ತಿಳಿಯುವದು ಶಕ್ಯವು. ಇದು ಬೇರೊಬ್ಬ ಇಂಜಿನಿಯರನ ಕೆಲಸವಲ್ಲ. ಇಲ್ಲಿ

ತಾನೇ ಇಂಜಿನಿಯರನು ಆಗಬೇಕಾಗುವದು. ಪಾರಾಗಬೇಕಾವದಿ ತಾನೇ ಸೇತುವೆ; ತಾನೇ ದಾಟುವ ಹಾದಿ; ತಾನೇ ಒಯ್ಯುವವ. ಆ ಪಥದಲ್ಲಿ ತಾನೇ ತಕ್ಕೊಂಡು ಹೋಗುವ ಪ್ರಯತ್ನ ಮಾಡಲಿಕ್ಕೆ ಬೇಕಾಗುವದು. ಬ್ರಹ್ಮ ವಿದ್ಯಾ ಪ್ರಕಟಿತವಾದ ಮುಹೂರ್ತದಲ್ಲಿಯೇ ಸಮಸ್ತ ಅಜ್ಞಾನ, ಸಮಸ್ತ ಭೇದ ಬುದ್ಧಿ ದೂರವಾಗಿ ಹೋಗುತ್ತದೆ. ನಾವು ಹೇಗೆ ಸಂಸಾರದಲ್ಲಿ ಭೇದ ಬುದ್ಧಿ ತಕ್ಕೊಂಡು ನಡೆದು ತಿರುಗುತ್ತೇವೆ, ಯಾರಿಗೆ ಬ್ರಹ್ಮ ವಿದ್ಯಾ ಪ್ರಾಪ್ತವಾಗಿರುತ್ತದೆ, ಅವರು ಅಂತಹ ಭೇದ ಜ್ಞಾನ ತಕ್ಕೊಂಡು ನಡೆಯುವದಿಲ್ಲ. ನೂಲಿಗೆ ಬೆಂಕಿ ಹಚ್ಚಿ ನೋಡಿರಿ. ಅದು ತಾನೇ ಸುಟ್ಟರೂ ಪೂರ್ವ ಆಕಾರ ಹಿಡಿದಿರುತ್ತದೆ. ಆಗ ಅದರ ಬಾಹ್ಯ ಆಕಾರ ಮಾತ್ರ ಇರುತ್ತದೆ. ಆದರೆ ಒಳಗೆ ಅಸಾರವಾಗಿರುತ್ತದೆ. ಮುಟ್ಟಿದೊಡನೆಯೇ ಪುಡಿಯಾಗಿ ಹೋಗುವದು. ಹಾಗೆಯೇ ಯಾರ ಹೃದಯದಲ್ಲಿ ಬ್ರಹ್ಮ ವಿದ್ಯಾ ಪ್ರಕಾಶ ಹೊಂದುತ್ತದೆ, ಅವನ ದೇಹ ಆಗ ಸುಟ್ಟ ನೂಲಿನಂತೆ ಇರುತ್ತದೆ. ಅರ್ಥಾತ್ ಕರ್ಮಫಲ ಭೋಗ ಪರ್ಯಂತ ಇರುವದು ಮಾತ್ರ. 'ನಾನು' 'ನನ್ನದು' ಭೇದ ಉಳಿಯುವದಿಲ್ಲ. ಇದೇ ವಿಚಿತ್ರ ಅಥವಾ ಮಹಾ ಮಾಯೆಯ ಪ್ರಭಾವವು. ಯಾರಿಗೆ ಜ್ಞಾನವಾಗಿರುತ್ತದೆ, ಅವನೇ ತಿಳಿಯಲಿಕ್ಕೆ ಶಕ್ತನು.

ಆ ವಿದ್ಯಾ ಅನುಶೀಲನ ಮಾಡಲು 'ನಾನು' 'ನನ್ನದು' ಎಂಬ ಬುದ್ಧಿಯು ವಿನಷ್ಟವಾಗಿ ಹೋಗುತ್ತದೆ; ಅವಿದ್ಯೆಯ ಸಮಸ್ತ ಕಾರ್ಯವು ದೂರವಾಗಿ ಹೋಗುತ್ತದೆ. ಯಾವ ವಿದ್ಯೆ ನೌಕೆಯಂತೆಯಾಗಿ ಭವ ಸಾಗರವನ್ನು ದಾಟಿಸಿ ಬ್ರಹ್ಮ ಸದನದಲ್ಲಿ ತಕ್ಕೊಂಡು ಹೋಗುತ್ತದೆ, ಅದೇ ಉಪನಿಷತ್ತು ಅಥವಾ ಬ್ರಹ್ಮ ವಿದ್ಯೆ. ಅದೇ ಬ್ರಹ್ಮ ವಿದ್ಯೆಯೇ ಮಾನವನಿಗೆ ಅವಿದ್ಯೆಯ ಕೈಯಿಂದ ಬಿಡುಗಡೆ ಮಾಡುವದು. ಯಾರ ಹೃದಯದಲ್ಲಿ ಈ ಬ್ರಹ್ಮ ವಿದ್ಯೆಯು ಪ್ರಕಾಶಿತವಾಗಿರುತ್ತದೆ, ಅವನಿಗೆ ಮತ್ತೆ ಅಜ್ಞಾನದಿಂದ ಬಂಧಿಸಲು ಶಕ್ಯವಿಲ್ಲ. ಯಾವ ಅವಿದ್ಯೆ ಎಲ್ಲ ಜನರನ್ನು ಅಂಕೆಯಲ್ಲಿಡುತ್ತದೆ, ಅದು ಅವನಿಗೆ ತಾನೇ ದಾಸಿಯಂತೆ ಇರುತ್ತದೆ. ಸಂಸಾರದ ರಮಣೀಯತೆಯಲ್ಲಿ ಅವನಿಗೆ ಮತ್ತೆ ರೂಪ ಗೊಳಿಸಿ ಇಡಲಿಕ್ಕೆ ಶಕ್ಯವಿಲ್ಲ.

ಬೀಜವನ್ನು ಬಿತ್ತಲು ಅಂಕುರವಾಗುವದು, ಅವರೆ ಸುಟ್ಟ ಬೀಜ (ಯಾವದು ಬೆಂಕಿ ಸುಟ್ಟು ಹೋಗಿದೆ.) ಉತ್ತಮ ಕ್ಷೇತ್ರದಲ್ಲಿ ಬಿತ್ತಿದರೂ ಅಂಕುರಿತವಾಗುವದಿಲ್ಲ. ಅದೆ ಧಾನ್ಯವಿರುತ್ತದೆ. ಅದೇ ಭೂವಿ ಯಿರುತ್ತದೆ. ಕೇವಲ ಬೀಜದಲ್ಲಿ ಜೀವನ ಶಕ್ತಿಯಿಲ್ಲ. ಹಾಗೆಯೇ ಜ್ಞಾನಾಗ್ನಿ ಯಾರಲ್ಲಿ ಜ್ವಲಿಸಿರುತ್ತದೆ ಅವರ ಈ ಸಮಸ್ತ ಸಂಸಾರ ವಿಷ್ಯವಾನವಿದ್ದರೂ ಜನ್ಮ ಜನ್ಮದ ಕರ್ಮ ಮತ್ತು ಜನ್ಮ ಮರಣ ಪ್ರವಾಹ ಶಕ್ತಿ ನಷ್ಟ ಮಾಡಿಕೊಡುತ್ತದೆ. ಆಗ ಅವರ ಎಲ್ಲವು ಇದ್ದರೂ ಇಲ್ಲ. ಹುರಿದ ಬೀಜ ಹೇಗೆ ಇದ್ದರೂ ಇಲ್ಲ. ಅದರಂತೆಯೆ ಯಾರಿಗೆ ಬ್ರಹ್ಮ ವಿದ್ಯೆ ಲಾಭವಾಗಿರುತ್ತದೆ ಅವರ ಮತ್ತು ಕರ್ಮಫಲ ರಾತಿ ಅಥವಾ ಅವಿದ್ಯಾ ಇತ್ಯಾದಿ ಸ್ಥಲ್ಪಾ ಇಲ್ಲ. "ನ ತಸ್ಯ ಪ್ರಾಣಾ ಉತ್ ಕ್ರಮನ್ತಿ ಅತ್ರೈವ ಸಮವತಾಲೀಯನ್ತೇ"—ಬ್ರಹ್ಮಜ್ಞಾನ ಪ್ರಾಣ ಅವನ ಶರೀರದಿಂದ ಹೊರಗೆ ಆಗಿ ಉತ್ಕ್ರಾಂತವಾಗುವದಿಲ್ಲ. (ಅರ್ಥಾತ್ ಅನ್ಯ ದೇಹದಲ್ಲಿ ಹೋಗುವದಿಲ್ಲ.) ಇದೇ ದೇಹದಲ್ಲಿ ವಿಲೀನವಾಗುವದು.) "ವಿಮುಕ್ತಶ್ಚ ವಿಮುಚ್ಯತೆ" ಕಠೋಪನಿಷತ್ ೫/೧೦—"ಅವಿದ್ಯಾ ಕೃತ ಕರ್ಮ ಬಂಧನದಿಂದ ವಿಮುಕ್ತವಾಗಿ ಮುಕ್ತಿ ಲಾಭ ಮಾಡುತ್ತಾನೆ." ಆಗ ಅವನ ಸಮಸ್ತವೂ ಪರಮಾತ್ಮನಲ್ಲಿ ಕೂಡಿ ಹೋಗುತ್ತದೆ. ಜೀವ ಸ್ವತಃ ವಿಮುಕ್ತನು; ದೇಹವು ಆವರಣ ಮಾತ್ರ. ಯಾವನು ಬ್ರಹ್ಮ ವಿದ್ಯಾ ಲಾಭ ಮಾಡಿದ್ದಾನೆ, ಅವನು ಅದೇ ಮುಕ್ತ ಅವಸ್ಥೆಯಲ್ಲಿ ವಿರಾಜಿಸುತ್ತಾನೆ. ಆ ವಿಷಯದಲ್ಲಿ ಸಂದೇಹವಿಲ್ಲ. ಪ್ರಾರಬ್ಧ ಕರ್ಮ ಫಲದಿಂದ ಅವನ ದೇಹ ಮಾತ್ರ ನಿಲ್ಲುತ್ತದೆ. ಕುಂಬಾರ ಸಾಲೆಯ ಕುಂಬಾರನ ಗಾಲಿಯು ಅದರ ಉದಾಹರಣ. ಕುಂಬಾರನ ಚಕ್ರದಿಂದ ಪರಿನೆ, ಕೊಡ ಮುಂತಾದವು ಹುಟ್ಟುತ್ತವೆ. ಆದರೆ ಮಣ್ಣು ತೀರಿ ಹೋದರೂ ಪೂರ್ವ ಸಂಸ್ಕಾರ ಬಲದಿಂದ ಗಾಲಿಯು ಕೆಲಕಾಲ ಹೇಗೆ ತಿರುಗುತ್ತದೆ, ಹಾಗೆಯೇ ಅದೇ ಜೀವನ್ಮುಕ್ತ ಪುರುಷನ ದೇಹವೂ ಕೆಲಕಾಲವಿರುತ್ತದೆ. ಆಗ ಜೀವನ ಧಾರಣದ ಇಚ್ಛಾ ಮತ್ತು ಪ್ರಯೋಜನ ಲೋಪವಾಗಿ ಹೋಗುತ್ತವೆ. ವಿಷಯಾದಿ ಭೋಗದ ಪ್ರವೃತ್ತಿಯು ಇರುವದಿಲ್ಲ. ಕುಂಬಾರನು ಹೊರಟು ಹೋದರೂ ಗಾಲಿಯು ಹೇಗೆ ತಿರುಗುತ್ತಿರುತ್ತದೆ, ಹಾಗೆಯೇ ಮುಕ್ತ ಪುರುಷನ ಪ್ರಯೋಜನವು ಪೂರ್ಣವಾಗಿ ಹೋದರೂ ದೇಹವು ಸಂಸಾರದಲ್ಲಿ ಚಕ್ರ ತಿರುಗಿದಂತೆ

ಕೆಲಸ ಮಾಡುತ್ತಿರುತ್ತದೆ. ಪ್ರಾರಬ್ಧ ಕರ್ಮ ನಷ್ಟವಾದೊಡನೆಯೇ ಮುಕ್ತಿಯು.

ಬ್ರಹ್ಮ ವಿದ್ಯಾ ಸಂಬಂಧದಿಂದ ಹೇಳುವದನ್ನು ಹೇಳಿತು. ಈಗ ನಾವು ಈ ಉಪನಿಷತ್ ಅಥವಾ ಬ್ರಹ್ಮ ವಿದ್ಯೆಯ ಪ್ರತಿಪಾದ್ಯ ಬ್ರಹ್ಮದ ಮಾತು ಆಲೋಚನ ಮಾಡುವಾ. ಉಪನಿಷತ್ತಿನಲ್ಲಿ ಬ್ರಹ್ಮ ವಿದ್ಯಾ ನಿರೂಪಿಸಲ್ಪಟ್ಟಿದೆ. ಉಪನಿಷತ್ತಿನ ಮತ್ತೊಂದು ಅರ್ಥ– ರಹಸ್ಯಗೋಪ್ಯ ನೀಯ ನಾವು ಬೇಕು ಬೇಕಾದಲ್ಲಿ ಇದನ್ನು ಹೇಳುವದಲ್ಲ.

ಬ್ರಹ್ಮಸತ್ಯ:— ಉಪನಿಷತ್ತು ಒಂದು ರಹಸ್ಯ ನಾಮ; ಯಥಾ "ತಸ್ಯೋಪ ನಿಷತ್" ಅದರ ಉಪನಿಷತ್ ಅರ್ಥಾತ್ ರಹಸ್ಯ ಅಥವಾ ಗುಹ್ಯನಾಮವೇನು? ಬ್ರಹ್ಮದ ಗುಹ್ಯನಾಮವಿರುತ್ತದೆ. "ಸತ್ಯಸ್ಯ ಸತ್ಯಂ" (ಛಾಂದೋಗ್ಯೋಪನಿಷತ್) ಅದರ ಸತ್ತಾ ತಕ್ಕೊಂಡು ಚಂದ್ರ, ಸೂರ್ಯ, ಜಗತ್ತಿನಲ್ಲಿ ಸತ್ಯವಾಗಿರುತ್ತವೆ. ಹೇಗೆ ಕೆಂಪು ಅರಿವೆಯ ಮೇಲೆ ಬಿಳೇ ಕೆಲಸ, ಜಗತ್ತು ಇದರಂತೆ ಸತ್ಯವು. ಅದು ಸತ್ತಾ ಕೊಟ್ಟಿರುತ್ತದೆ. ಅಂತೇ ಅವುಗಳು ಸತ್ಯ. ಸತ್ಯ ಸ್ವರೂಪ ಬ್ರಹ್ಮ ಅವುಗಳಿಗೆ ಸತ್ಯ ಮಾಡಿರುತ್ತದೆ. ಅದೇ ಅಖಂಡ ಸಚ್ಚಿದಾನಂದ. ಬ್ರಹ್ಮವೇ ಸತ್ ಚಿತ್ ಮತ್ತು ಆನಂದ ಸ್ವರೂಪ. ದೊಡ್ಡ ದೊಡ್ಡ ಸಾಗರ ಅತ್ಯುಚ್ಚ ಪರ್ವತರಾಶಿ ಹಲವು ದಿನಗಳಿಂದ ಇರುತ್ತವೆಂದು ಹಾಗೂ ಅವುಗಳ ಬೃಹದಾಕಾರ ನೋಡಿ ಅವು ಸತ್ಯವೆಂದು ಮನದಲ್ಲಿಯಾಗುವದು. ಆದರೆ ಅವುಗಳ ಸತ್ತೆಯ ಮೂಲವು ಎಲ್ಲಿ? ಅವುಗಳೂ ಕಾಲದಿಂದ ಪರಿವರ್ತನಶೀಲ ಮತ್ತು ಅಸ್ಥಾಯಿ. ಅದೇ ಸತ್ಯಸ್ವರೂಪದೊಡನೆ ತುಲನೆಯಲ್ಲಿ ಅವುಗಳೂ ಜಲಬಿಂಬದಂತೆ ಕ್ಷಣಿಕ ಮತ್ತು ಅನಿತ್ಯ. ನಮ್ಮ ಕಣ್ಣೆದುರಿಗೆ ಇರತಕ್ಕವುಗಳು ಮತ್ತು ಬಹುದಿನಗಳಿಂದ ನಮ್ಮ ತಂದೆ ಪಿತಾಮಹ ಎಲ್ಲರೂ ನೋಡುತ್ತ ಬಂದಿರುತ್ತಾರೆ. ಇದಕ್ಕೋಸುಗ ಅವುಗಳಿಗೆ ಸತ್ಯವೆಂದು ನಾವು ಮನದಲ್ಲಿ ಮಾಡುತ್ತೀವೆ. ಆದರೆ ಅವುಗಳ ಸತ್ತಾ ಅದೇ ಸತ್ಯಸ್ವರೂಪದ ಸತ್ತೆಯಲ್ಲಿ ಬಿಂದು ಮಾತ್ರ. ಚಂದ್ರ, ಸೂರ್ಯ, ನಕ್ಷತ್ರ ಪ್ರಭೃತಿ ಜ್ಯೋತಿರ್ಮಂಡಲ ಎಲ್ಲಿಂದ ತೇಜವನ್ನು ಪಡೆಯಿತು? ಅವುಗಳು ಯಾರ ಪ್ರಕಾಶ ತಕ್ಕೊಂಡು ಜಗತ್ತನ್ನು ಬೆಳಗಿಸುತ್ತವೆ? ಅದೇ ಅವುಗಳ ಪ್ರಾಣದ ಪ್ರಾಣ, ಜೀವ

ನದ ಜೀವನವಾಗಿ ಇರುತ್ತದೆಂದೇ ಅವುಗಳ ಜ್ಯೋತಿ ಮತ್ತು ಶಕ್ತಿ ಇರದಿದ್ದರೆ ಅವುಗಳ ಶಕ್ತಿಯು ಎಲ್ಲಿ?

ಬ್ರಹ್ಮ ಚಿತ್ ಪ್ರಕಾಶ ಸ್ವರೂಪ।
ನ ತತ್ರ ಸೂರ್ಯೋ ಭಾತಿ ನ ಚಂದ್ರ ತಾರಕಾಂ।
ನೇಮಾ ವಿದ್ಯುತೋ ಭಾತಿ ಕುತೋಽಯಮಗ್ನಿಃ ॥
ತಮೇವ ಭಾನ್ತ ಮನು ಭಾತಿ ಸರ್ವಂ।
ತಸ್ಯ ಭಾಸಾ ಸರ್ವಮಿದಂ ವಿಭಾತಿ ॥

(ಕಠೋಪನಿಷತ್ ೨—೨—೧೫)

"ಅಲ್ಲಿ ಸೂರ್ಯನು ಕಿರಣಗಳನ್ನು ಹರಡುವದಿಲ್ಲ,
ಚಂದ್ರ ತಾರಕಗಳೂ ಕಿರಣವನ್ನು ಹರಡುವದಿಲ್ಲ,
ವಿದ್ಯುತ್ತುಗಳೂ ದೀಪ್ತಿ ಪ್ರಕಾಶವನ್ನು ಮಾಡುವದಿಲ್ಲ,
ಪಾರ್ಥಿವ ಅಗ್ನಿಯ ಮಾತಂತೂ ಇಲ್ಲೆ ಇಲ್ಲ. ಎಲ್ಲ ವಸ್ತುಗಳೂ ಅದೇ ದೀಪ್ತಿ ಮಾನದ ಪ್ರಕಾಶದಲ್ಲಿ ಅನು ಪ್ರಕಾಶಿತ— ಅದರ ದೀಪ್ತಿಯಲ್ಲಿಯೇ ಎಲ್ಲ ಎಲ್ಲ ದೀಪ್ತಿಯನ್ನು ಹೊಂದುತ್ತವೆ."

ಐಹಿಕ ಸುಖವು ತುಲನಾತ್ಮಕ, ಅತ್ಯುನ್ನತ ಗಿರಿಗಳ ಆಳವಾದ ಕಂದರಗಳು, ಸುಂದರವಾದ ಬನ, ಘೋರ ಅರಣ್ಯ, ಭೋರ್ಗರೆಯುವ ಹೊಳೆ, ಹೃದಯವನ್ನೇ ಕುಸಿದಾಡಿಸುವ ಸರೋವರ ಇವೆಲ್ಲವುಗಳನ್ನು ನಿರ್ಮಾಣ ಮಾಡಿದವರಾರು? ಇವು ಉಪನಿಷತ್ತಿನಲ್ಲಿ ನಿರೂಪಿತವಾಗಿವೆ. ಉಪನಿಷತ್ ಈ ಸತ್ಯದ ಸ್ವರೂಪ ವಿಷಯ ಶಿಕ್ಷಣ ಕೊಡುತ್ತದೆ. ಉಪನಿಷತ್ತಿನ ಶಿಕ್ಷಣ "ಸತ್ಯಸ್ಯ ಸತ್ಯಂ"

ಬ್ರಹ್ಮ ಆನಂದ ಸ್ವರೂಪಃ— ಆನಂದ ಲಾಭವೇ ನಮ್ಮ ಉದ್ದೇಶ. ಜಗತ್ತಿನ ಆನಂದ ಸ್ವಲ್ಪಾದರೂ ಇಲ್ಲ. ಹಣ್ಣು ಹೂಗಳಲ್ಲಿ ಆನಂದವಿಲ್ಲ. ದುಡ್ಡು ದುಗ್ಗಾಣಿಗಳಲ್ಲಿ ಆನಂದವಿಲ್ಲ. ಆ ಎಲ್ಲ ಆನಂದ ದುಃಖಾನ್ವಿತ ಮತ್ತು ಕ್ಷಣಿಕ. ಆ ಸಚ್ಚಿದಾನಂದ ಬ್ರಹ್ಮವೇ ಆನಂದ ಸ್ವರೂಪ. ಅದೇ ಯಥಾರ್ಥ ಆನಂದವು. ಬೇರೆ ಎಲ್ಲವೂ ಅದರದೇ. ಆನಂದ ಬಿಂದು ಹೊಂದಿ ತಮಗೆ ಕೃತಾರ್ಥ ಎಂದು ಮನದಲ್ಲಿ ಮಾಡಿರುತ್ತವೆ. ಶ್ರುತಿ ಹೇಳುತ್ತದೆ:– "ಏತಸ್ಯೈವಾನಂದಸ್ಯ ಅನ್ಯಾನಿ ಭೂತಾನಿ ಮಾತ್ರಾ ಮುಪಜೀವನ್ತಿ." (ತೈತ್ತರೀಯ) ಬೇರೆ ಪ್ರಾಣಿ

ಗಳು ಈ ಆನಂದದ ಅಂಶವನ್ನೇ ಉಪಭೋಗ ಮಾಡುತ್ತವೆ. ಬ್ರಹ್ಮ ಸತ್ - ಜಗತ್ ಅದರದೇ ಸತ್ತೆಯಲ್ಲಿ ಸತ್. ಅದೇ ಬ್ರಹ್ಮದ ಸತ್ ಇರುತ್ತದೆಂದೇ ಬ್ರಹ್ಮಾನಂದವೂ ಜಗತ್ತಿನಲ್ಲಿ ಆರೋಪಿತವಾಗಿರುತ್ತದೆ. ಬಿಕ್ಷಾಲಬ್ಧ ವಸ್ತುವೇ ಆನಂದಮಯವಾಗಿರುತ್ತದೆ. "ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ"— ಈಶೋಪನಿಷತ್ - ೧೫. "ಜ್ಯೋತಿರ್ಮಯ ಪಾತ್ರದಿಂದ ಸತ್ಯದ ಅರ್ಥಾತ್ ಸೂರ್ಯಮಂಡಲ ಸ್ಥಿತ. ಬ್ರಹ್ಮನ ಮುಖ ಆಚ್ಛಾದಿತ ಇರುತ್ತದೆ." ಆದರೆ ಅದೇ ನಿತ್ಯ ಸತ್ಯ ಭೂಮಾನಂದ ನಮ್ಮ ಅಜ್ಞಾನದಿಂದ ಆಚ್ಛಾದಿತವಿರುತ್ತದೆ. ಅದೇ ನಾವು ಸಕಲ ಆನಂದದಲ್ಲಿ ಉಪಭೋಗ ಮಾಡಿರುತ್ತೇವೆ. ಪುತ್ರನಲ್ಲಿ ಆನಂದ, ಪತ್ನಿಯಲ್ಲಿ ಆನಂದ ಹೇಗೆ? ಯಾವ ಕಾರಣದಿಂದ ಬ್ರಹ್ಮಾನಂದ ಅದರಲ್ಲಿ ಆರೋಪವಾಗಿರುತ್ತದೆ? ಒಂದು ವೇಳೆ ಅದರಲ್ಲಿ ಬ್ರಹ್ಮಾನಂದವಿರಲಿಲ್ಲವೆಂದರೆ ಸ್ತ್ರೀ-ಪುತ್ರ ಎಂದೂ ಆನಂದದಾಯಕವಾಗುತ್ತಿದ್ದಿಲ್ಲ. ಇವರು ಕೊಡುವ ಆನಂದ ಎರವಲಾಗಿ ತಂದ ಆನಂದ. ಇಂತಹ ಎರವಲಾಗಿ ತಂದ ಆನಂದವೇ ಇಷ್ಟು ರೀತಿಯಾಗಿ ಸುಖ ಕೊಡುತ್ತಿದ್ದರೆ, ಮೂಲ ಆನಂದವೆಷ್ಟು ಕೊಡಬಹುದು? ಇದರ ರಹಸ್ಯವನ್ನೇ ಉಪನಿಷತ್ತು ಕಲಿಸುತ್ತದೆ.

ಇದಕ್ಕೋಸುಗವೇ ಮಹಾತ್ಮರು ಚಿರಕಾಲ ಪ್ರಾರ್ಥನೆ ಮಾಡಿ ಇರುವದೇನಂದರೆ,

"ಯಾ ಮತಿರ ವಿವೇಕಾನಾಂ ವಿಷಯೇಷ್ವನಪಾಯಿನೀ ।
ತ್ವಾಮನುಸ್ಮರತಃ ಕೃಷ್ಣ ಹೃದಯಾನ್ಮಾಪಸರ್ಪತು॥

—ಭಾಗವತ.

ಹೇ ಭಗವಾನ್, ಅವಿವೇಕೀ ಜನರಿಗೆ ವಿಷಯದೊಡನೆ ಯಾವ ಪ್ರಗಾಢ ಪ್ರೇಮ ಅಥವಾ ಅನುರಾಗವು, ನಮಗೆ ಅದೇ ಪ್ರೇಮ ಅದೇ ಅನುರಾಗ ನಿಮ್ಮ ಮೇಲೆ ಬರುವದು; ಹಾಗು ಇದು ನಮ್ಮ ಹೃದಯದಿಂದ ದೂರು ಆಗುವದಿಲ್ಲ. ನಮ್ಮ ಹೃದಯದಲ್ಲಿ ಇದು ಅಂತರ್ಯಾಮಿ ರೂಪದಿಂದ ಬ್ರಹ್ಮ ಹೇಳುತ್ತಿರುವದೇನಂದರೆ, "ನೀನು ನಮ್ಮಲ್ಲಿ ಗ್ರಹಣ ಮಾಡು. ಆದರೆ ಅವುಗಳಿಗೆ ಗ್ರಹಣ ಮಾಡಲಿಕ್ಕೆ ಶಕ್ಯವಾಗುವದಿಲ್ಲ. ಅವಕ್ಕೆ ಹೊಂದಬೇಕಾದರೆ ಸಾಧುಸಂಘವನ್ನು

ಇಚ್ಛಿಸುವೆವು. ಸಾಧು ಸಂಘ ಮತ್ತು ಸತ್ ಚಿಂತಾಮೊಡನೆ ಯಾರು ಸಾಧನೆ ಮಾಡಿ ಈ ಉಪನಿಷತ್ (ಬ್ರಹ್ಮವಿದ್ಯಾ) ಲಾಭ ಮಾಡಿರುತ್ತಾರೆ. ಅವುಗಳ ಸಂಘ ಮಾಡುವದು ಆವಶ್ಯಕ.

ಉಪನಿಷತ್ತಿನ ವೀಮಾಂಸೆ:— ಸಾರಸಿದ್ಧಾಂತ, ಅದ್ವೈತವಾದ ಇನ್ನು, ಪ್ರಬಲ ಸಾಂಪ್ರದಾಯಿಕ ವಿದ್ವೇಷಬುದ್ಧಿ ವಿದೂರಿತವಾಗುವದಿಲ್ಲ. ಶಾಕ್ತ, ವೈಷ್ಣವರ ವಿವಾದ ಚಿರಕಾಲವೂ ಇದ್ದು ಹೋಗುವದು. ಆದರೆ ಅದ್ವೈತವಾದದಲ್ಲಿ ಸಮಸ್ತ ಭೇದವೂ ಅದೇ ಏಕತ್ವದಲ್ಲಿ ಪರಿಣತವಾಗಿ ಹೋಗುತ್ತದೆ. ಅಲ್ಲಿ ಒಂದರ ಹೊರ್ತು ಎರಡು ಇಲ್ಲ. ದ್ವೈತ ಭಾವ ಅಥವಾ ದ್ವಿಧಾ ಬುದ್ಧಿಯೂ ಅಲ್ಲಿ ಇರಲಿಕ್ಕೆ ಶಕ್ಯವಿಲ್ಲ. ಪುಷ್ಪದಂತ ಸ್ತೋತ್ರದಲ್ಲಿ ಇರುತ್ತದೆ.

ತ್ರಯೀ ಸಾಂಖ್ಯಂ ಯೋಗಃ ಪಶುಪತಿ ಮತಂ ವೈಷ್ಣವ ಮಿತಿ
ಪ್ರಭಿನ್ನೇ ಪ್ರಸ್ಥಾನೇ ಪರ ಮಿದ ಮದಃ ಪಥ್ಯ ಮಿತಿ ಚ ।
ರುಜೀನಾಂ ವೈಚಿತ್ರ್ಯಾದೃಜು-ಕುಟಿಲ ನಾನಾ ಪಥಜುಷಾಂ
ನೃಣಾ ಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ ॥

—ಮಹಿಮ್ನ ಸ್ತೋತ್ರ.

ಅರ್ಥಾತ್ ತ್ರಯಿ (ಮೂರು ವೇದ), ಸಾಂಖ್ಯ, ಯೋಗ, ಪಾಶುಪತ, (ಶೈವ), ಮತ್ತು ವೈಷ್ಣವ ಮತ-ಈ ಎಲ್ಲ ಭಿನ್ನ ಭಿನ್ನ ಮತ ಸಂಬಂಧದಿಂದ ಯಾವನು ಒಂದಕ್ಕೆ ಶ್ರೇಷ್ಠ, ಮತ್ತೊಂದಕ್ಕೆ ಹಿತಕರ ಅನ್ನುತ್ತಾನೆ. ಆದರೆ ಸಮುದ್ರವು ಹೇಗೆ ನದಿಗಳ ಏಕ ಮಾತ್ರ ಗಮ್ಯಸ್ಥಾನ, ಅದರಂತೆ ರುಚಿ ಭೇದದಿಂದ ಸರಲ, ಕುಟಿಲ ನಾನಾ ಪಥಗಾಮೀ ಜನರಿಂಗೂ-ನೀನೇ ತದ್ರೂಪ ಏಕ ಮಾತ್ರ ಗಮ್ಯ. ಯಾವ ಪಥದಲ್ಲಿಯೇ ಇರಲಿ ಎಂತಹ ಸಂಪ್ರದಾಯದ್ದೇ ಅನುಸರಣ ಮಾಡಿರಿ ಎಲ್ಲರೂ ಅದೇ ಒಂದೇ ಸ್ಥಲದಲ್ಲಿ ಹೋಗುವದು. "All roads lead to Rome." ಎಂಬ ಆಂಗ್ಲ ನುಡಿ ಸತ್ಯವಾಗಿದೆ. ತ್ರಯೀ ಅರ್ಥಾತ್ ವೇದ-ಕರ್ಮಕಾಂಡ, ಪ್ರಧಾನತಃ ಯಾಗ ಯಜ್ಞಗಳದೇ ಮಾತನ್ನು ಹೇಳುತ್ತದೆ. ಕರ್ಮ ಕಾಂಡದಲ್ಲಿ ಕರ್ಮವೇ ಶ್ರೇಷ್ಠ. ಕಪಿಲನ ಸಾಂಖ್ಯ ಹೇಳುತ್ತದೆ:— ಆತ್ಮ ಮತ್ತು ಅನಾತ್ಮಗಳ ವಿವೇಕ ವಿಶ್ಲೇಷಣ ಮಾಡು. ನಾವು ಜಡ ಮತ್ತು ಆತ್ಮನಿಗೆ ಮಿಶ್ರಿತ

ಮಾಡಿ ಒಯ್ಯುತ್ತೇವೆ. ಸಾಂಖ್ಯಕಾರಕ ಮತದಲ್ಲಿ ಆತ್ಮ ಮತ್ತು ಅನಾತ್ಮಗಳ ವಿಶ್ಲೇಷಣದಲ್ಲಿ ಆತ್ಮನ ಯಥಾರ್ಥ ಸ್ವರೂಪ ಅನುಭೂತಿಯೇ ಆತ್ಯಂತಿಕ ದುಃಖ ನಿವೃತ್ತಿಯ ಉಪಾಯ. ಯೋಗ ಶಾಸ್ತ್ರಕಾರ ಪತಂಜಲಿ ಹೇಳುತ್ತಾನೆ. – ಸಮಾಧಿ ಮಾಡು, ಮನವನ್ನು ನಿರುದ್ಧ ಮಾಡು, ಅಂದರೆ ವ್ಯಕ್ತಿಯನ್ನು ಹೊಂದುವೆ. ಶೈವಹೇಳುತ್ತಾನೆ,– ಶಿವನ ಆರಾಧನೆಯಲ್ಲಿ ಜೀವದ ಮುಕ್ತಿ, ಮತ್ತೆ ಯಾವದರಲ್ಲಿಯೂ ಮುಕ್ತಿ ಯಾಗುವದಿಲ್ಲ. ವೈಷ್ಣವ ಹೇಳುತ್ತಾನೆ, ವಿಷ್ಣುಪರಾಯಣನಾಗು, ಅವನ ಉಪಾಸನೆಯಲ್ಲಿಯೇ ಜೀವದ ಚರಮ ಶಾಂತಿ ಲಾಭವಾಗುತ್ತದೆ. ಹೀಗೆ ರುಚಿಯ ವೈಚಿತ್ರ್ಯ ಅನುಸಾರವಾಗಿ ಭಿನ್ನ ಭಿನ್ನ ಜನರು ಭಿನ್ನ ಭಿನ್ನ ಪಥಗಳ ಅನುಸರಣ ಮಾಡುತ್ತಾರೆ. ಹಾಗು ತಮ್ಮ ಪಂಥಕ್ಕೇ ಸರ್ವ ಶ್ರೇಷ್ಠವೆಂದು ಕರೆದಿರುತ್ತಾರೆ. ಅನಂತ ಜನರು ಅನಂತ ಪಥ. ಹೇಗೆ ಕಲಕತ್ತೆಯಲ್ಲಿ ಎಲ್ಲರೂ ಅದನ್ನು .ಮುಟ್ಟುವರೋ ಹೇಗೆ ನದಿಗಳು ನಾನಾ ಭಾವದಿಂದ ನಾನಾ ಪಥದಲ್ಲಿ ನಡೆದರೂ ಕಡೆಯಲ್ಲಿ ಒಂದು ಸಮುದ್ರದಲ್ಲಿ ಹೋಗಿ ಕೂಡುತ್ತವೋ ಹಾಗೇ ಜಗತ್ತಿನ ಜನರು ಭಿನ್ನ ಭಿನ್ನ ಮತಾವಲಂಬಿಗಳಾದರೂ ಭಗವಾನನಿಗೆ ಹೊಂದದೆ ವಿಶ್ರಾಂತಿ ಹೊಂದುವದಿಲ್ಲ.

"ಭಗವಾನನು ಗೀತೆಯಲ್ಲಿ ಹೇಳುತ್ತಾನೆ, ತ್ರಿಲೋಕದಲ್ಲಿ ನನ್ನ ಕರ್ತವ್ಯಕರ್ಮ ಸ್ವಲ್ಪವಾದರೂ ಇಲ್ಲ. ಕಾರಣ ಯಾವದೂ ಸ್ವಲ್ಪವೂ ನನಗೆ ಅಪ್ರಾಪ್ತವಿಲ್ಲ. ಆದರೂ ನಾನು ಕರ್ಮ ಮಾಡುತ್ತೇನೆ. ಆಲಸ್ಯ ಪರವಶನಾಗಿ ನಾನು ಒಂದು ವೇಳೆ ಕರ್ಮದಲ್ಲಿ ಪ್ರವೃತ್ತವಾಗದಿದ್ದರೆ ಎಲ್ಲರೂ ನನ್ನ ಮತಾವಲಂಬನ ಮಾಡುವರು. ಹೇ ಭಾರತ, ಅಜ್ಞ ಜನರು ಹೀಗೆ ಆಸಕ್ತರಾಗಿ ಕರ್ಮ ಮಾಡುತ್ತಾರೆ. ಎಲ್ಲ ಜನರ ಸ್ಪರ್ಧಕರ್ಮದಲ್ಲಿ, ಪ್ರವೃತ್ತಿ ಹಚ್ಚಿಸುವ ಸಲುವಾಗಿ ಜ್ಞಾನವಾನ್ ಪುರುಷನು ಅನಾಸಕ್ತ ಚಿತ್ರದಿಂದ ಅದೇ ರೀತಿಯಿಂದಲೇ ಕರ್ಮಾನುಷ್ಠಾನ ಮಾಡುತ್ತಾನೆ."

ಒಮ್ಮೆ ಕರ್ಮ ಬಿಡಲಿಕ್ಕೆ ಹೇಳಲು ಆ ಮಾತಿನಲ್ಲಿ ಅವರ ರುಚಿ ಹುಟ್ಟುವದಿಲ್ಲ. ಸರಾಯಿ ಯಾವನು ಕುಡಿಯುತ್ತಾನೆ, ಅವನು ಅಯೋಗ್ಯ ಎಂದು ತಿಳಿಯತಕ್ಕದ್ದಲ್ಲ. ಒಬ್ಬನು ತನ್ನ ಪುತ್ರನಿಗೆ ಸರಾಯಿ ಬಿಡಲಿಕ್ಕೆ ಹೇಳಿದನು. ಆದರಲ್ಲಿ ಪುತ್ರನು ಪಿತನಿಗೆ ಪ್ರಾರ್ಥನೆ ಮಾಡಿದನು ಏನಂದರೆ, ಅಪ್ಪಾ ನೀನು ಒಂದು ವೇಳೆ ಮೂರು ದಿವಸದ ಸರಾಯಿ

ಕುಡಿ, ಹಾಗಾದರೆ ನಾನು ಸರಾಯಿ ಬಿಡುವೆನು. ಮೂರು ದಿನದ ತರುವಾಯ ಇಬ್ಬರು ಕೂಡಿಯೇ ಸರಾಯಿ ಬಿಡತಕ್ಕದ್ದು. ಪುತ್ರನ ಮಾತಿನಿಂದ ಪಿತನೂ ಸರಾಯಿ ಕುಡಿಯ ಹತ್ತಿದನು, ಮೂರು ದಿನ ಕುಡಿದ ತರುವಾಯ ತಂದೆಯು ಅಂದನು,—"ಬಿಡಬೇಕಾದರೆ ನೀನು ಬಿಡು, ನಾನು ಬಿಡುವದಿಲ್ಲ" ಆವನಿಗೆ ತಿಳಿಸಲಿಕ್ಕೆ ಹೋಗಲು ಸರಾಯಿ ಏನು ಕೆಟ್ಟ, ಕೇವಲ ಅದನ್ನು ತಿಳಿಸಿದರೆ ನಡೆಯುವದಿಲ್ಲ. ಅಹಿತವಾದ ಕಾರ್ಯದಿಂದ ದೂರುಮಾಡಬೇಕಾದರೆ ಹಿತವಾದದ್ದನ್ನು ಸ್ಪಷ್ಟವಾಗಿ ತೋರಿಸತಕ್ಕದ್ದು. 'ಬೇಡ, ಬೇಡ' ಎನ್ನುವ ತತ್ವ ಸಾರ್ಥಕವಾಗದು. ಯಾವುದು ಬೇಕು ಅದನ್ನು ಮಾತ್ರ ತೋರಿಸಬೇಕು. ಅಂದರೆ ಮಾತ್ರ ಅಹಿತದಲ್ಲಿ ಜುಗುಪ್ಸೆ ಹುಟ್ಟುತ್ತದೆ.

ಉಪನಿಷತ್ತಿನಲ್ಲಿ ಪರಾ ವಿದ್ಯಾ ಮತ್ತು ಅಪರಾ ವಿದ್ಯಾ ನಿರ್ದೇಶ ಮಾಡಿ ಬ್ರಹ್ಮ ವಿದ್ಯೆಗೆ ಆತ್ಮನ ಜ್ಞಾನಕ್ಕೇ ಸತ್ಯವೆಂದು ಶ್ರೇಷ್ಠತ್ವ ಕೊಟ್ಟಿರುತ್ತದೆ. ಕರ್ಮ ಅರ್ಥದಲ್ಲಿ ಪೂರ್ವದಲ್ಲಿಯೇ ಹೇಳಿದ್ದೇವೆ. ಸತ್‌ಕರ್ಮ ಇದರ ಫಲ ಎಷ್ಟೇ ದೀರ್ಘಕಾಲ ಸ್ಥಾಯಿ ಆಗಲೊಲ್ಲದೇಕೆ.? ಆದಕ್ಕೆ ಅಂತವು ಇದ್ದೇ ಇರುವದು. ಯಾವದರಲ್ಲಿ ಕರ್ಮ ದೊಡನೆ ಉಪಾಸನೆಯು ಮಾಡಲ್ಪಡುತ್ತದೆ, ಹಾಗೆ ಮಾಡು. ಯಜ್ಞ ಮಾಡುವದನ್ನು ಮಾಡು. ಯಜ್ಞದೊಡನೆ ಉಪಾಸನೆಯನ್ನು ಮಾಡು. ಉಪನಿಷತ್ತಿನಲ್ಲಿ ಇರುತ್ತದೆ. ನೀನು ಅಶ್ವಮೇಧ ಮಾಡು. ಉಷಾಕಾಲಕ್ಕೆ ಯಜ್ಞೀಯ ಅಶ್ವದ ಶಿರೋರೂಪದಿಂದ ಚಿಂತೆ ಮಾಡು. ದ್ಯುಲೋಕ ಸ್ವರ್ಗಕ್ಕೆ ಕುದುರೆಯ ಬೆನ್ನು, ಪೃಥ್ವಿ, ಪರ್ವತ, ಪ್ರಭೃತಿ, ಪಾಜರಾಸ್ಥಿ, ಮತ್ತು ನದಿಗಳು, ರಕ್ತವಾಹಿನೀ ನಾಡಿ ಇತ್ಯಾದಿ ರೂಪದಿಂದ ಚಿಂತೆ ಮಾಡು. ರಾಜನು ಆಗುವನು, ಸ್ವರ್ಗದಲ್ಲಿ ಹೋಗುವದು ಇದನ್ನು ಭಾವಿಸಿ ಉಪಾಸನೆ ಮಾಡಿದರೂ ಕ್ರಮಶಃ ಮಾಡುತ್ತ ಮಾಡುತ್ತ ಉಪಾಸನೆಯೇ ಅತ್ಯಂತ ಮಧುರವಾಗಿ ತೋರುವದು. ಹಾಗೂ ಇದೇ ಪರಿಣಾಮದಲ್ಲಿ ವೀರ್ಯವಾನ್ ಮತ್ತು ಫಲವಾನ್ ಆಗುವದು. ಶೌರ್ಯದ ಬಿಕ್ಷುಕ ಭೋಗದ ಬಿಕ್ಷುಕ ಮಾನವನಿಗೆ ಯಜ್ಞ ದೊಡನೆ ಉಪಾಸನಾ ಮಾಡುತ್ತ ಮಾಡುತ್ತ ಅದರಲ್ಲಿ ಒಂದಾಗುವನು. ಆಗ ಅವನು ಅದನ್ನು ಬಿಡಲಿಕ್ಕೆ ಶಕ್ತನಾಗುವದಿಲ್ಲ. ಕ್ರಮದಿಂದ ಭೋಗದ ವಾಸನೆ ಮತ್ತು ಸುಖದ ವಾಸನೆ ಎಲ್ಲಿ ನಡೆದು ಹೋಗು

ವದು, ಆಗ ವಾಸನೆ ಮತ್ತು ಧ್ಯಾನ ಪ್ರಧಾನವೆಂದು ಮನದಲ್ಲಿ ಆಗು ವದು. ಕರ್ಮ ಗೌಣವಾಗಿ ಹೋಗುವದು. ಗಿಡದಲ್ಲಿ ಒಂದು ಫಲ ವಿರುತ್ತದೆ. ಯಾವಾಗ ಅದಕ್ಕೆ ಮತ್ತೆ ಪೃಥ್ವಿಯ ರಸದ ಅವಶ್ಯಕತೆ ಇರುವದಿಲ್ಲ. ಆಗ ಅದು ತಾನೇ ಗಿಡದಿಂದ ಬಿದ್ದು ಹೋಗುತ್ತದೆ. ಬ್ರಹ್ಮರಸ ಸ್ವರೂಪ, ಅದು ರಸಮಯ, ಉಪಾಸನೆಯಿಂದ ಕ್ರಮ ಕ್ರಮ ದಿಂದ ಹೃದಯದಲ್ಲಿ ಅದನ್ನು ತರಲಿಕ್ಕೆ ಬೇಕಾಗುವದು, ಅದರ ರಸ ಆಸ್ವಾದನ ಮಾಡಬೇಕಾಗುವದು. ಒಮ್ಮೆ ಅದೇ ಸಚ್ಚಿದಾನಂದ-ರಸ ಹೃದಯದಲ್ಲಿ ಆಸ್ವಾದನ ಮಾಡಲಿಕ್ಕೆ ಸಮರ್ಥವಾದರೆ ಕರ್ಮ ತಾನೇ ಹೊರಟು ಹೋಗುವದು. ಅಂತೇ ಶ್ರುತಿ ತಾರಸ್ವರದಿಂದ ಹೇಳಿರುವ ದೇನಂದರೆ:—

"ಭಿದ್ಯತೇ ಹೃದಯ-ಗ್ರಂಥಿಶ್ಛಿದ್ಯತೇ ಸರ್ವಸಂಶಯಃ
ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥"

(ಮುಂಡಕೋಪನಿಷತ್ ೨—೨—೮)

ಬ್ರಹ್ಮಸಾಕ್ಷಾತ್ಕಾರದಿಂದ ಮಾನವರ ಎಲ್ಲ ಹೃದಯ ಗ್ರಂಥಿ ಭಿನ್ನವಾಗಿ ಹೋಗುತ್ತದೆ. ಎಲ್ಲ ಸಂಶಯ ಹೊರಟು ಹೋಗುತ್ತದೆ. ಮತ್ತು ಎಲ್ಲ ಕರ್ಮ ಬಂಧನ ಬಿಟ್ಟು ಹೋಗುವವು. ಅದೇ ಚಿರ ಶಾಂತಿ, ಅದ್ವಿತೀಯ ಆನಂದ.

ಕಂಕರೀ ಕಕ್ಕಯ್ಯ.

ಕಲ್ಯಾಣ ಪಟ್ಟಣದಲ್ಲಿ ಕಂಕರೀ ಕಕ್ಕಯ್ಯನೆಂಬ ಶಿವಶರಣನು ವಾಸಮಾಡುತ್ತಿದ್ದನು. ಅವನು ದಿನಾಲು ಭಕ್ತರ ಮನೆಗಳಿಗೆ ಹೋಗಿ ಕಂಕರಿಯನ್ನು ನುಡಿಸುತ್ತ ದೇವರ ಭಜನೆ ಮಾಡುತ್ತ ಭಕ್ತರು ಕೊಟ್ಟು ದನ್ನು ತೆಗೆದುಕೊಂಡು ತನ್ನ ಉಪಜೀವನವನ್ನು ಸಾಗಿಸುತ್ತಿದ್ದನು. ಅದರಲ್ಲಿ ತನಗೆ ಉಳಿದುದನ್ನು ದಾಸೋಹ ಕಾರ್ಯಗಳಿಗೆ ಉಪಯೋಗಿಸುವನು. ಹೀಗೆ ಕಂಕರಿಯನ್ನು ನುಡಿಸುತ್ತ ಜೀವಿಸಿರುವದೇ ಅವನಿಗೆ ಶಿವನ ಸೇವೆಯಾಗಿತ್ತು. ಹೀಗೆ ಅವನು ಕಲ್ಯಾಣ ಪಟ್ಟಣದಲ್ಲಿ ತನ್ನ ಕಾಯಕವನ್ನು ಮಾಡುತ್ತ ಅನೇಕ ವರ್ಷಗಳ ವರೆಗೆ ಇದ್ದನು.

ಆದರೆ ಜನರು ಅವನೊಬ್ಬ ಶ್ರೇಷ್ಠ ಶಿವಶರಣನೆಂಬುದನ್ನು ತಿಳಿಯದೆ ಅವನಿಗೋಸ್ಕರ ಉಪೇಕ್ಷಾಭಾವವನ್ನು ತಾಳಿದವರಾಗಿದ್ದರು. ಆದರೆ ಕಕ್ಕಯ್ಯನು ಅದನ್ನು ಲಕ್ಷಿಸದೆ ತನ್ನ ಕಾಯಕದಲ್ಲಿ ನಿರತನಾಗಿದ್ದನು. ಅವನ ಈ ಭಕ್ತಿಭಾವವು ಕಡೆಗೆ ಶಿವನ ಮನಸ್ಸಿಗೆ ತಾಕಿತು. ಆಗ ಶಿವನು ಅವನ ಪರಿಚಯವೂ ಅವನ ಮಹತ್ವವೂ ಪಟ್ಟಣದಲ್ಲಿ ಎಲ್ಲರಿಗೂ ತಿಳಿಯಬೇಕೆಂಬ ಕಾಂಕ್ಷೆಯನ್ನು ತಾಳಿ ಒಬ್ಬ ಜಂಗಮನ ವೇಷವನ್ನು ಧಾರಣ ಮಾಡಿ ಕಕ್ಕಯ್ಯನು ಯಾವಲ್ಲಿ ತನ್ನ ಕಂಕರಿಯನ್ನು ನುಡಿಸುತ್ತ ಇದ್ದನೋ ಅಲ್ಲಿಗೆ ಬಂದು ಅವನನ್ನು ಕಾಣುವವನಾದನು.

ಕಕ್ಕಯ್ಯನು ತನ್ನನ್ನು ಹೀಗೆ ಕಂಡವನು ಪರಮಾತ್ಮನೆಂಬುದನ್ನು ಏನೂ ತಿಳಿದಿರಲಿಲ್ಲ. ಆದ್ದರಿಂದ ಅವನನ್ನು ಕಂಡರೂ ಕೂಡ ಅವನು ತನ್ನ ಕಂಕರಿಯನ್ನು ನುಡಿಸುತ್ತ ಅದರಲ್ಲಿಯೇ ಮಗ್ನನಾಗಿದ್ದನು. ಅವನು ನುಡಿಸಿದಂತೆ ಪರಮಾತ್ಮನೂ ಸಹ ಅದರ ಜೊತೆಯಲ್ಲಿ ಕುಣಿಯಲಿಕ್ಕೆ ಪ್ರಾರಂಭಮಾಡಿದನು. ಪರಮಾತ್ಮನು ಗಾಯನ ಮತ್ತು ನೃತ್ಯ ಪ್ರಿಯನೆಂಬುದು ಪ್ರಸಿದ್ಧವು. ಗಾಯನದ ಮೂಲಕ ಮಾಡಿದ ಅವನ ಭಜನೆಯು ಅವನಿಗೆ ತೀವ್ರ ಗೋಚರವಾಗುತ್ತದೆ. ಆದ್ದರಿಂದ ಅಸಂಖ್ಯ ಶಿವಶರಣರು ಗಾಯನ ಮತ್ತು ನೃತ್ಯಗಳ ಮೂಲಕ ಪರಮಾತ್ಮನನ್ನು ಒಲಿಸಿಕೊಂಡಿರುತ್ತಾರೆ.

ಕಂಕರೀ ಕಕ್ಕಯ್ಯನು ತನ್ನ ಕಂಕರಿಯನ್ನು ಹೀಗೆ ನುಡಿಸುತ್ತಿರು
ವಾಗ್ಗೆ ಅದರ ಜೊತೆಯಲ್ಲಿ ಬೇರೊಬ್ಬನು ಕುಣಿಯುತ್ತಿರುವದನ್ನು ನೋಡಿ
ಅವನಲ್ಲಿ ಭಕ್ತಿಯ ಭರವು ಮತ್ತಿಷ್ಟು ಹೆಚ್ಚಿತು. ಮತ್ತು ಅದು ಹೆಚ್ಚಿದ
ಹಾಗೆ ಅವನು ನಾನಾವಿಧವಾಗಿ ಕಂಕರಿಯನ್ನು ನುಡಿಸಹತ್ತಿದನು.
ಅದರಲ್ಲಿಯೇ ಅವನು ಮಗ್ನನಾಗಿ ಹೋದನು. ಹೊರಗಿನ ಅರಿವು
ಅವನಿಗೆ ಏನೂ ಉಳಿಯಲಿಲ್ಲ. ಅವನಿಗೆ ಬಾರಿಸುವ ಶ್ರಮವೂ ಸಹ
ಅನಿಸುತ್ತಿರಲಿಲ್ಲ. ಇದೇ ಸ್ಥಿತಿಯು ಪರಮಾತ್ಮನಿಗೂ ಕೂಡ ಉಂಟಾ
ಯಿತು. ಅವನೂ ಕೂಡ ಕಂಕರಿಯ ದನಿಗೆ ಅನುಗುಣವಾಗಿ ಕುಣಿ
ಯಹತ್ತಿದನು. ಹೀಗೆ ಇಡೀ ದಿವಸ ಅವರ ಬಾರಿಸುವಿಕೆಯೂ ಕುಣಿ
ತವೂ ನಡೆದವು. ಪಟ್ಟಣದಲ್ಲಿಯ ಜನರು ಕುತೂಹಲವುಳ್ಳವರಾಗಿ
ಬಹು ಸಂಖ್ಯೆಯಿಂದ ನೆರೆದು ಅವರನ್ನು ನೋಡುತ್ತ ನಿಂತರು. ಆದರೆ
ಉಭಯತರಲ್ಲಿ ಯಾರು ಮೊದಲು ದಣಿಯುವರೋ ಎಂಬುದರ
ಮೌಜನ್ನು ನೋಡುವದೇ ಅವರ ಉದ್ದೇಶವಾಗಿತ್ತು. ಆದರೆ ಬಹಿರಂಗದ
ಅರಿವು ಇವರಿಬ್ಬರಿಗೂ ಇರಲಿಲ್ಲ. ಅಂದ ಬಳಿಕ ಅವರಿಗೆ ದಣಿವು
ಆಗುವದು ಹೇಗೆ? ಜನರೇ ಬೇಸತ್ತು ಹೊರಟು ಹೋಗುತ್ತಿದ್ದರು.

ಕಂಕರಿಯ ರವವೂ ನೃತ್ಯವೂ ಆ ದಿನ ಹಗಲು ಮಾತ್ರವಲ್ಲ,
ಇಡೀ ರಾತ್ರಿ ಸಹ ನಡೆಯಿತು. ಅದನ್ನು ಜನರು ನೋಡಿ ಆಶ್ಚರ್ಯ
ಪಟ್ಟರು. ಉಭಯತರೂ ಹೆಚ್ಚಿನ ತರಗತಿಯ ಶಿವಭಕ್ತರೆಂದು ಅವ
ರನ್ನು ಹೊಗಳಹತ್ತಿದರು. ಹೀಗೆ ಉಭಯತರು ಮೂರು ದಿನಗಳ
ವರೆಗೆ ತಮ್ಮ ಬಾರಿಸುವಿಕೆಯನ್ನೂ ಕುಣಿತವನ್ನೂ ನಡಿಸಿದರು! ಕಂಕರೀ
ಕಕ್ಕಯ್ಯನ ಈ ಅಗಾಧವಾದ ಭಕ್ತಿಯನ್ನು ಪರಮಾತ್ಮನು ಕಂಡು ಅವನು
ಸಹ ದೆರಗಾದನು. ಆಗ ಅವನು ವಿಚಾರಮಾಡಿದ್ದು — ಕಕ್ಕಯ್ಯನ
ಮಹಿಮೆಯನ್ನು ಜನರ ಲಕ್ಷಕ್ಕೆ ತಂದಂತಾಯಿತು. ಇನ್ನು ಮೇಲೆ
ಅವನ ಬಾರಿಸುವಿಕೆಯನ್ನು ಸಾಕು ಮಾಡಬೇಕು ಎಂಬ ಅಪೇಕ್ಷೆ
ಯನ್ನು ತಾಳಿ ತಾನು ಸೋತವನಂತೆ ಧರೆಗೊರಗಿದನು. ಕಕ್ಕಯ್ಯನು
ಇದನ್ನು ನೋಡಿದರೂ ಕೂಡ ಅವನನ್ನು ಬಿಡದೆ ಅವನ ಸೆರಗು
ಹಿಡಿದು ಎಳೆಯಲು ಶಿವನು ಅವನಿಗೆ ಪ್ರತ್ಯಕ್ಷನಾದನು ಮತ್ತು ನಿನಗೆ
ಏನು ಬೇಕು ಬೇಡೆಂದು ಅವನಿಗೆ ಕೇಳಿದನು. ಅದಕ್ಕೆ ಕಕ್ಕಯ್ಯನು —
ನಿನ್ನ ಮೆಚ್ಚು ನಿನ್ನಲ್ಲಿರಲಿ. ಅದು ನನಗೆ ಬೇಡ. ಆದರೆ ಈ ಮೂರ

ದಿನ ನಾನು ಎಡೆಬಿಡದೆ ಕಂಕರೀ ನುಡಿಸಿದ್ದರ ಕಾಯಕವನ್ನು ನೀನು
ನನಗೆ ಕೊಡತಕ್ಕದ್ದು. ನಿನಗೆ ಬೇಡುವದು ಇದೇ ಎಂದು ಹೇಳಿದನು.

ಅದಕ್ಕೆ ಶಿವನು ಅವನಿಗೆ— ನಿನ್ನೊಡನೆ ನಾನು ಕುಣಿದಿದ್ದೇನೆ.
ಅದು ವ್ಯರ್ಥವೇ ಹೇಗೆ? ನಾನು ನಿನ್ನ ಕೂಡ ಕುಣಿದದ್ದರ ಕಾಯಕ
ವನ್ನು ನೀನು ನನಗೆ ಕೊಡಬೇಕಲ್ಲವೇ ಎಂದು ಕೇಳಿದನು.

ಅದಕ್ಕೆ ಕಂಕರೀ ಕಕ್ಕಯ್ಯನು—ನಿನಗೆ ನಾನು ಕಾಯಕವನು
ಕೊಡುವದು ಸಲ್ಲದು. ನೀನು ಊರೊಳಗೊಂದು ಮನೆಯನ್ನು ಕಟ್ಟು.
ಆಗ ನಾನು ನಿನ್ನ ಮನೆಗೆ ಕಾಯಕಕ್ಕೆ ಬರುತ್ತೇನೆ. ಆಗ ನೀನು
ನನ್ನೊಡನೆ ಕುಣಿದೆಯಾದರೆ, ನಿನಗೆ ಕಾಯಕ ಕೊಡುತ್ತೇನೆ. ಹೀಗೆ
ಹೇಳಲು ಕಕ್ಕಯ್ಯನು ನುಡಿದದ್ದು ಯಥಾರ್ಥವೆಂದು ಶಿವನು ಒಪ್ಪಿ
ಕೊಂಡು ಅವನಿಗೆ ತಾನು ಕೊಡತಕ್ಕ ಕಾಯಕವನ್ನು ಕೊಟ್ಟನು.

ಆಮೇಲೆ ಶಿವನು ಕಕ್ಕಯ್ಯನಿಗೆ—ನೀನು ಇನ್ನುಮೇಲೆ ಈ ಲೋಕ
ದಲ್ಲಿರಬೇಡ. ನನ್ನಕೂಡ ಕೈಲಾಸಕ್ಕೆ ಬರಬೇಕು ಎಂದು ಕರೆಯಲು,
ಕಕ್ಕಯ್ಯನು ಈ ಮರ್ತ್ಯಲೋಕವೇ ನನಗೆ ಘನತರವಾದದ್ದು. ನಿನ್ನ
ಗಣಪದವಿಯು ನನಗೆ ಬೇಡ. ನಿನಗೆ ಬೇಕಾದರೆ, ನೀನೇ ನಿನ್ನ ಒಕ್ಕಲು
ಸಹವಾಗಿ ಭಕ್ತರಿದ್ದಂಥ ಈ ಮರ್ತ್ಯಲೋಕಕ್ಕೆ ಬಾ. ಇಲ್ಲಿ ಮಹಿಮರಿ
ದ್ದಾರೆ. ಅವರನ್ನು ನೀನು ಇಲ್ಲಿ ಕಾಣುವಿ. ನನಗೆ ಕೈಲಾಸವು ಬೇಡ ಎಂದೆ
ನ್ನಲು ಶಿವನು ಮೆಚ್ಚಿ ಅವನಿಗೆ— ಭಕ್ತಿ ಎಂಬ ಐಶ್ವರ್ಯವನ್ನು ಉಪ
ಭೋಗಿಸಲು ಭಕ್ತರೇ ಸಮರ್ಥರು, ಅವರೇ ಶ್ರೇಷ್ಠರು, ಎಂದು ನುಡಿ
ಯುತ್ತ ಕೈಲಾಸಕ್ಕೆ ಹೊರಟು ಹೋದನು.

ಇತ್ತ ಕಕ್ಕಯ್ಯನು ಬಸವಾದಿ ಪ್ರಮಥರೊಡಗೂಡಿ ಕಲ್ಯಾಣ
ಪಟ್ಟಣದಲ್ಲಿ ತನ್ನ ಕಂಕರೀ ಕಾಯಕವನ್ನು ಮಾಡುತ್ತ ತನ್ನ ಇಷ್ಟ
ಲಿಂಗದಲ್ಲಿ ನಿರ್ವಯಲಾದನು.

ಕಾಯಕವು ಕೇವಲ ಜೀವನೋಪಾಯವಲ್ಲ. ಇದರಲ್ಲಿ ಕೆಲವು
ತಾತ್ವಿಕಾರ್ಥಗಳಿವೆ. ಯಾರು ಶ್ರಮಜೀವಿಗಳೋ ಅವರಿಗಾಗಿ ಮಾತ್ರ
ಕಾಯಕ ಮಾಡತಕ್ಕದ್ದೆಂಬ ಭಾವವು ಈ ಚಿಕ್ಕ ಕಥೆಯಲ್ಲಿದೆ. ಯಾರು

ದುಡಿಯುವದಿಲ್ಲವೋ ಅವರಿಗಾಗಿ ಯಾರೂ ಕಾಯಕ ಮಾಡತಕ್ಕದ್ದಲ್ಲ, ಮತ್ತು ಅವರ ಸೇವೆಯನ್ನು ಮಾಡಕೂಡದು. ಪರಮಾತ್ಮನು ಶ್ರವ ಜೀವಿಯಲ್ಲವೆಂದು ತಿಳಿದು ಕಕ್ಕಯ್ಯನು ಕಾಯಕವನ್ನು ಅವನಿಗೆ ಕೊಡುವದನ್ನು ನಿರಾಕರಿಸಿದನು. ಶಿವಾನುಭವಿಯು ಇಂಥ ಸೋಮಾರಿಗಳು ಕೊಟ್ಟದ್ದನ್ನು ಸಹ ತೆಗೆದುಕೊಳ್ಳಬಾರದು. "ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ" ಎಂದು ಶಿವಶರಣರು ನುಡಿದಿದ್ದಾರೆ. ಈ ತ್ರೇಷ್ಮ ತತ್ವವು ಈ ಕಥೆಯಲ್ಲಿದೆ. ಆದ್ದರಿಂದ ಸೋಮಾರಿಗಳೂ ದುಷ್ಟನಡತೆಯವರೂ ಆದ ಸಿರಿವಂತರು ಹಣ ಕೊಡಲಿಕ್ಕೆ ಬಂದರೂ ಅದನ್ನು ಸತ್ಕಾರ್ಯಕ್ಕೆ ತೆಗೆದುಕೊಳ್ಳಬಾರದು ಮತ್ತು ಅವರ ಸೇವೆಯನ್ನು ಸಹ ಕೈಕೊಳ್ಳಬಾರದು ಎಂಬ ಸಾಮಾಜಿಕ ಉಚ್ಚ ತತ್ವಗಳು ಕಂಕರೀ ಕಕ್ಕಯ್ಯನ ಆಚರಣೆಯಲ್ಲಿರುವದು ಕಂಡುಬರುತ್ತದೆ.

ಇಳಿಹಾಳಿ ಬೊಮ್ಮಯ್ಯ.

ವಿಜಾಪುರ ಜಿಲ್ಲೆ ಬಾಗಲಕೋಟೆ ಗ್ರಾಮದಿಂದ ಉತ್ತರಕ್ಕೆ ೧೦ ಮೈಲುಗಳ ಮೇಲೆ ಇಳಿಹಾಳ ಎಂಬ ಗ್ರಾಮವಿರುತ್ತದೆ. ಅದರ ಈಗಿನ ಹೆಸರು ಇಲ್ಲಾಳವೆಂದಿದೆ. ಇಲ್ಲಿ ಬೊಮ್ಮಯ್ಯನೆಂಬ ಒಕ್ಕಲಿಗನು ವಾಸಮಾಡುತ್ತಿದ್ದನು. ಅವನ ಕಾಲದಲ್ಲಿ ಪೇರ್ಮಡಿರಾಯನು ಕಲ್ಯಾಣ ಪಟ್ಟಣದಲ್ಲಿ ರಾಜ್ಯವಾಳುತ್ತಿದ್ದನು. ಬೊಮ್ಮಯ್ಯನು ಅರಸನ ಕಡೆಯಿಂದ ೩೫ ಹೊಲಗಳನ್ನು ಲಾವಣಿಗೆ ತೆಗೆದುಕೊಂಡು ಘನತರವಾದ ರೀತಿಯಿಂದ ಬೇಸಾಯವನ್ನು ನಡಿಸುತ್ತ ಬಂದನು. ಅವನು ತಾನು ಹಿಡಿದ ಹೊಲಗಳನ್ನು ಮಾಡುವಲ್ಲಿ ಗ್ರಾಮದ ಗೌಡರನ್ನೂ ಸಹ ಹುದುವಿನಿಂದ ಕೂಡಿಸಿಕೊಂಡು ತನ್ನ ಒಕ್ಕಲುತನವನ್ನು ಸಾಗಿಸುವನು. ಅವನು ಇದ್ದ ಇಳಿಹಾಳ ಗ್ರಾಮವು ಘಟಪ್ರಭಾ ನದಿಯ ದಂಡೆಯ ಮೇಲಿದೆ. ಅಲ್ಲಿಯ ಹೊಲಗಳು ಅತ್ಯಂತ ಫಲದ್ರೂಪವಾದವುಗಳು. ಬ್ರಹ್ಮಯ್ಯನು ತಾನು ಬೆಳೆದದ್ದರಲ್ಲಿ ಅರಸನಿಗೆ ಕೊಡತಕ್ಕ ಕಂದಾಯವನ್ನು ಕೊಟ್ಟು ತನ್ನೊಡನೆ ಪಾಲು ಕೂಡಿದ್ದ ಗೌಡರುಗಳಿಗೆ ಅವರ ಕೋರನ್ನು ಕೊಟ್ಟು ಉಳಿದದ್ದನ್ನು ತಾನು ತೆಗೆದುಕೊಂಡು ಅದನ್ನು ದಾನಧರ್ಮ ಮಾಡಿ

ಬಿಡುವನು. ಅವನು ಅತ್ಯಂತ ಉದಾರಿಯು. ಈ ಪ್ರಕಾರ ಅವನು ವರ್ತಿಸುತ್ತ ಬಂದದ್ದರಿಂದ ಜನರಲ್ಲಿ ಅವನು ಬಹಳ ಪ್ರಿಯನಾಗಿದ್ದನು.

ಬೊಮ್ಮಯ್ಯನು ಹೇಗೆ ಉದಾರಿಯೋ ಹಾಗೆಯೇ ಶಿವಾನುಭವಿಯೂ ಆಗಿದ್ದನು. ಅವನು ಭಕ್ತ ಜಂಗಮರಿಗೋಸ್ಕರ ಅತ್ಯಂತ ಭಕ್ತಿಭಾವನ್ನು ತಾಳಿದವನಾಗಿದ್ದನು. ಅವರಿಗೆ ದಾಸೋಹಭಾವದಿಂದ ತಾನು ಗಳಿಸಿದ್ದನ್ನು ಅರ್ಪಿಸಿ ಉಪಭೋಗಿಸುವವನಾಗಿದ್ದನು. ಈ ಪ್ರಕಾರ ಷಟ್‌ಸ್ಥಲದಲ್ಲಿ ಅವನು ಪ್ರಸಾದಿಸ್ಥಲದವನಾಗಿ ಬಹು ಪ್ರಸಿದ್ಧನಾಗಿದ್ದನು.

ಹೀಗಿರಲು ಕೆಲವೊಂದು ವರುಷ ಈ ಸೀಮೆಯಲ್ಲಿ ಬರಗಾಲವು ಬಿದ್ದು ಬಿತ್ತಲಿಕ್ಕೆ ಬೀಜಗಳು ದೊರೆಯದಂತಾದವು. ಆಗ ಬ್ರಹ್ಮಯ್ಯನು ಅಲ್ಲಲ್ಲಿ ಬೀಜಗಳನ್ನು ಹುಡುಕುತ್ತ ಹೋಗಿ ಐಗಳದಷ್ಟು ಕಡಲೆಯನ್ನು ತಂದು ಅವುಗಳನ್ನು ಬಿತ್ತಬೇಕೆಂಬುವಷ್ಟರಲ್ಲಿ ಬಿತ್ತುವ ಹದವು ಹೋಗಿಬಿಟ್ಟಿತ್ತು. ಆದ್ದರಿಂದ ಅವನು ತಾನು ತಂದ ಕಡಲೆಯನ್ನು ರಾತ್ರೆಯಲ್ಲಿ ನೆನೆಹಾಕಿ ಬೆಳಗಾದ ಬಳಿಕ ಅವುಗಳನ್ನು ಹೆಡಿಗೆಯಲಿ ತುಂಬಿಕೊಂಡು ಹೊಲದಲ್ಲಿ ಬಿತ್ತಬೇಕೆಂದು ಹೊರಟನು.

ಅವನು ಹೊಲಕ್ಕೆ ಹೋಗುವ ಕಾಲದಲ್ಲಿ ಶ್ರೀಶೈಲಕ್ಕೆ ಹೋಗುವ ಒಂದು ಪರಿಸೆಯು ಅವನ ಸಮೀಪದಲ್ಲಿಯೇ ಹಾಯ್ದು ಹೋಗುತ್ತಿತ್ತು. ಅದರಲ್ಲಿ ಅನೇಕ ಭಕ್ತರೂ ಜಂಗಮರೂ ಇದ್ದರು. ಅವರು ಆ ಕ್ಷಾಮದ ಕಾಲದಲ್ಲಿ ಬಹಳ ನೀರಡಿಸಿ ಹಸಿದವರಾಗಿದ್ದರು. ಅವರು ಬೊಮ್ಮಯ್ಯನ ಹತ್ತಿರ ಇದ್ದ ಹೆಡಿಗೆಯನ್ನು ನೋಡಿ, ಅದು ಬಿತ್ತಿ ಎಂದು ತಿಳಿದು, ಅವರು ಅವನ ಸಮೀಪಕ್ಕೆ ಬಂದರು. ಅವರನ್ನು ಬೊಮ್ಮಯ್ಯನು ಕಂಡು ಸ್ವಾಮಿ ಏಕೆ ಇಲ್ಲಿಗೆ ಬಂದಿರೆಂದು ಕೇಳಲು ಅವರು-- ನಾವು ಹಸಿದಿದ್ದೇವೆ. ಉಣ್ಣಲಿಕ್ಕೆ ನಮಗೆ ಏನೂ ದೊರೆತಿಲ್ಲ. ನಿಮ್ಮಲ್ಲಿ ಏನಾದರೂ ದೊರೆಯಬಹುದೋ ಎಂದು ಕೇಳಲು ಬೊಮ್ಮಯ್ಯನ ಮನಸ್ಸು ಕರಗಿತು. ಅವನು ಬಿತ್ತಲಿಕ್ಕೆ ಧಾನ್ಯವು ಕಡಿಮೆಯಾಗಬಹುದೆಂಬುದನ್ನು ಏನೂ ಎಣಿಸದೆ ತನ್ನ ಹೆಡಿಗೆಯಲ್ಲಿದ್ದ ಕಡಲೆಗಳನ್ನು ಒಂದೊಂದು ಬೊಗಸೆ ಪರಿಸೆಯಲ್ಲಿದ್ದವರಿಗೆಲ್ಲ ಕೊಟ್ಟುಬಿಟ್ಟನು. ಅವರು ಅದನ್ನು ತಿಂದು ಅವನನ್ನು ಹರಿಸಿ ಮುಂದೆ ಹೊರಟುಹೋದರು.

ಬೊಮ್ಮಯ್ಯನು ಹಿಂದಿನಿಂದ ತನ್ನ ಹೆಡಿಗೆಯಲ್ಲಿ ನೋಡುವಷ್ಟರಲ್ಲಿ ಒಳಗೆ ಬಿತ್ತುವ ಬೀಜಗಳು ಬಹಳ ಸ್ವಲ್ಪ ಉಳಿದಿದ್ದವು. ಅವುಗಳನ್ನಷ್ಟೆ. ಅವನು ತೆಗೆದುಕೊಂಡು, ಅಲ್ಲಲ್ಲಿ ಬಿತ್ತಿ ಮನೆಗೆ ಹೊರಟುಬಂದನು

ಅವನು ಮನೆಗೆ ಬಂದ ಬಳಿಕ ತನ್ನೊಡನೆ ಪಾಲು ಕೂಡಿದ ಗೌಡರುಗಳು ನಡೆದ ಸಂಗತಿಗಳನ್ನು ತಿಳಿದು ಅವನಿಗೆ— ನೀನು ಹದ ತಪ್ಪಿ ಬೀಜ ಬಿತ್ತಿದೆ. ಇದ್ದ ಕಾಳುಗಳನ್ನೆಲ್ಲ ನೀನು ಯಾರಿಗೋ ಕೊಟ್ಟುಬಿಟ್ಟೆ. ನಾವು ಬರಗಾಲ ಗಿರಗಾಲ ಕೇಳುವವರಲ್ಲ. ನೀನು ನಮಗೆ ಹಾನಿ ಮಾಡಿದೆ. ಈ ಹಾನಿಯನ್ನು ನಾವು ಸಹಿಸುವವರಲ್ಲ. ನಮಗೆ ಬರತಕ್ಕ ಧಾನ್ಯವನ್ನು ನಿನ್ನ ಪಾಲಿನಲ್ಲಿ ಹಿಡಿದುಕೊಂಡೇ ಬಿಡುವೆವು ಎಂದು ಅವನಿಗೆ ಛಟ್ಟಿಸಿ ನುಡಿದರು. ಆದರೆ ಬೊಮ್ಮಯ್ಯನು— ಈ ಕಠಿಣಕಾಲದಲ್ಲಿ ನಾವು ದಾನಧರ್ಮಮಾಡಬೇಕು. ನಮ್ಮದೆಲ್ಲ ಶಿವನ ಸೊಮ್ಮು. ಅವನದನ್ನು ಅವನಿಗೆ ಒಪ್ಪಿಸಬೇಕು ಎಂದು ಅವನು ಎಷ್ಟು ಹೇಳಿದರೂ ಅವರು ಕೇಳದೆಹೋಗಲು ಶಿವನೇ ನನ್ನನ್ನು ಕಾಯಲಿ ಎಂದು ಅಂದುಕೊಂಡು ಆ ಗೌಡರುಗಳಿಗೆ ಏನೂ ಅನ್ನದೆ ಸಮಾಧಾನ ಚಿತ್ತದಿಂದ ಇದ್ದನು.

ಆಮೇಲೆ ಬೊಮ್ಮಯ್ಯನು ಎಲ್ಲರಂತೆ ಎಲ್ಲ ಹೊಲಗಳಲ್ಲಿ ಕೃಷಿಯ ಕಾರ್ಯಗಳನ್ನು ಮಾಡುತ್ತ ಬಂದನು. ಕಡೆಗೆ ಆಶ್ಚರ್ಯವಾದದ್ದೇನೆಂದರೆ, ಅವನು ಬಿತ್ತಿದ ಹೊಲಗಳಲ್ಲಿ ಎಷ್ಟು ಮಾತ್ರವೂ ಬರಿದು ಪೈರಳವಿಲ್ಲದೆ ಎಲ್ಲ ಕಡೆಗೂ ಸಸಿಗಳೆದ್ದಿದ್ದವು. ಅವು ಮುಂದೆ ಚನ್ನಾಗಿ ಬೆಳೆದು ಒಂದಕ್ಕೆ ಇಮ್ಮಡಿ ಮುಮ್ಮಡಿಯಾಗಿ, ಆ ವರ್ಷ ಹಿಂದಿನ ಎಲ್ಲ ವರ್ಷಗಳಿಗಿಂತಲೂ ಹೆಚ್ಚಿಗೆ ಕಾಳು ಬಂದವು. ಬ್ರಹ್ಮಯ್ಯನು ಬೆಳೆದ ದವಸದಲ್ಲಿ ರಾಜನಿಗೆ ಕೊಡತಕ್ಕದ್ದನ್ನು ಅವನಿಗೆ ಕೊಟ್ಟು ಉಳಿದುದನ್ನು ಹುಮುಗಾರರಿಗೆ ಪೂರ್ಣವಾಗಿ ಕೊಟ್ಟು ತನಗುಳಿದ ಧಾನ್ಯದಲ್ಲಿ ಆ ವರುಷ ಅವನು ಅನಂತ ದಾಸೋಹ ಕಾರ್ಯಗಳನ್ನು ನಡಿಸಿದನು. ಜನರೆಲ್ಲರು ದಾನವಾಡಿದ್ದುದು ತಪ್ಪಲಾರದೆಂದು ಬೊಮ್ಮಯ್ಯನನ್ನು ಬಹಳ ಸ್ತುತಿಸುವವರಾದರು.

ಈ ಪ್ರಕಾರ ಬೊಮ್ಮಯ್ಯನು ತನ್ನ ಗ್ರಾಮದಲ್ಲಿ ಒಕ್ಕಲುತನ ಕಾಯಕವನ್ನು ಮಾಡುತ್ತ ತನ್ನ ಕಾಯಕದಿಂದ ಬಂದುದನ್ನು ದಾನ

ಧರ್ಮಮಾಡುತ್ತ ತನ್ನ ಲಿಂಗದಲ್ಲಿ ಬಯಲಾದನು. ಜನರು ಅವನಿಗೆ 'ಶಿವಶರಣ ಸೇವಾಚಾರ್ಯ' ಎಂಬ ಹೆಸರನ್ನಿಟ್ಟು ಕರೆಯುಹತ್ತಿದರು. ಈ ಪ್ರಕಾರ ಇಳಿಹಾಳಿ ಬೊಮ್ಮಯ್ಯನು ಶಿವಶರಣರಲ್ಲಿ ಬಹಳ ಪ್ರಸಿದ್ಧನಾಗಿದ್ದಾನೆ. ಅವನ ಹೆಸರು ಗಣಸಹಸ್ರದಲ್ಲಿ ಬಂದಿದೆ.

ಬ್ರಹ್ಮಯ್ಯನ ದೇವಾಲಯವು ಈಗಲೂ ಇಲ್ಲಾಳ ಗ್ರಾಮದಲ್ಲಿರುತ್ತದೆ. ಅಲ್ಲಿಯ ಜನರು ಅದಕ್ಕೋಸ್ಕರ ಬಹಳ ಭಕ್ತಿಭಾವವನ್ನು ತಾಳಿ ನಡೆದುಕೊಳ್ಳುತ್ತಾರೆ.

ಇಳಿಹಾಳಿ ಬ್ರಹ್ಮಯ್ಯ, ಕೊಂಡುಗುಳಿಯ ಕೇಶಿರಾಜ(೧), ಬಾಹೂರು ಬ್ರಹ್ಮಯ್ಯ(೨), ತೆಲುಗು ಜೊಮ್ಮಯ್ಯ, ಇವರೆಲ್ಲರೂ ಪೆರ್ಮಾಡಿ ರಾಜನ ಕಾಲದಲ್ಲಿದ್ದವರು. ಚಾಲುಕ್ಯರಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ವಿಕ್ರಮಾದಿತ್ಯ ರಾಜನು ೧೦೭೬ ರಿಂದ ೧೧೨೬ ರವರೆಗೆ ಆಳಿದನು. ಈ ರಾಜನಿಗೆ 'ಪೆರ್ಮಾಡಿ' ಎಂಬ ಹೆಸರಿದ್ದಿತು. ಆದ್ದರಿಂದ ಇಳಿಹಾಳಿ ಬ್ರಹ್ಮಯ್ಯನು ಬಸವೇಶ್ವರನಕಿಂತಲೂ ಸ್ವಲ್ಪಕಾಲ ಹಿಂದಿನವನಾಗುತ್ತಾನೆ.

ಈ ಕಥೆಯಲ್ಲಿ ವೀರಶೈವನು ಚನ್ನಾಗಿ ದುಡಿಯಬೇಕು, ಅವನು ದಾಸೋಹಭಾವದಿಂದ ಇರಬೇಕು, ತನಗೆ ಬಂದುದನ್ನು ದಾನ ಧರ್ಮ ಮಾಡಬೇಕು, ಹೀಗೆ ಆಚರಿಸಿದಲ್ಲಿ ಅವನು ಪ್ರಸಾದಿ ಸ್ಥಲದವನು, ಶಿವಾನುಭವಿಯು ಈ ರೀತಿ ಆಚರಿಸಬೇಕು ಎಂಬ ವಿಷಯಗಳು ಬಂದಿವೆ.

---

(೧) ಶಿವಶರಣರ ಚರಿತ್ರೆಗಳು ಭಾಗ ೨, ಪುಟ FF. (೨) ಶಿವಶರಣರ ಚರಿತ್ರೆಗಳು ಭಾಗ ೧, ಪುಟ ೧೧.

ವೀರಸಂಗಯ್ಯ.

ಬಿದಿರುಕೊಟ್ಟೆ ಎಂಬ ಗ್ರಾಮವು ಈಗ ನಿಜಾಮನ ರಾಜ್ಯದಲ್ಲಿದೆ. ಅದಕ್ಕೆ ಬೀದರ ಅಥವಾ ಬೇದರ ಎಂತಲೂ ಸಾಮಾನ್ಯ ಜನರು ಅದಕ್ಕೆ ಬಿದರುಕೋಟೆ, ಬಿದಿಂ ಎಂತಲೂ ಕರೆಯುತ್ತಾರೆ. ಅದು ಈಗ ಜಿಲ್ಲೆಯ ಸ್ಥಳವಾಗಿದ್ದು ಕಲ್ಯಾಣ ಪಟ್ಟಣದ ಪೂರ್ವಕ್ಕೆ ೪೦—೪೫ ಮೈಲುಗಳ ಮೇಲೆ ಇರುತ್ತದೆ. ಇದು ಪೂರ್ವಕಾಲದಲ್ಲಿ ಶಿವಭಕ್ತರ ಸ್ಥಾನವಾಗಿತ್ತು. ಇಲ್ಲಿ ಕಾಮಣ್ಣನೆಂಬ ಭಕ್ತನು ಸೋಮಲದೇವಿ ಎಂಬ ತನ್ನ ಹೆಂಡತಿಯೊಡನೆ ಶಿವಾಚಾರ ನಿರತನಾಗಿ ವಾಸಮಾಡುತ್ತಿದ್ದನು. ಅವನಿಗೆ 'ವೀರಸಂಗಯ್ಯ'ನೆಂಬ ಪುತ್ರನು ಜನಿಸಿದನು. ಅವರೆಲ್ಲರೂ ಲಿಂಗಧಾರಿಗಳು, ಗುರುಲಿಂಗ ಜಂಗಮ ನಿಷ್ಠರು. ಇವರಲ್ಲಿ ವೀರಸಂಗಯ್ಯನು ಉಜ್ವಲಭಕ್ತನು, ಶೂರನು, ಭಕ್ತ ನಿಂದೆಯನ್ನು ಎಂದಿಗೂ ತರಹರಿಸನು, ಗಣಾಚಾರಿಯು. ಇದರಿಂದ ಇವನು ಪಟ್ಟಣದಲ್ಲಿ ಪ್ರಸಿದ್ಧಿಯನ್ನು ಹೊಂದಿ ಭಕ್ತಾಗ್ರಗಣ್ಯನೆಂದು ಹೆಸರುವಾಸಿಯಾದನು.

ಹೀಗಿರುವಲ್ಲಿ ಕೋವೂರೆಂಬ ಪಟ್ಟಣವಿದ್ದು ಅಲ್ಲಿ ಭೀಮಯ್ಯನೆಂಬ ಭಕ್ತನು ತನ್ನ ಹೆಂಡತಿ ಕಾಮಲದೇವಿಯೊಡನೆ ಶಿವಭಕ್ತಿಯುಳ್ಳವನಾಗಿ ವಾಸಮಾಡಿಕೊಂಡಿದ್ದನು. ಅವನಿಗೆ ಚಂದ್ರಾಣಿದೇವಿ ಎಂಬ ಮಗಳು ಇದ್ದಳು. ಅವಳು ಕೇವಲ ಶಿವಭಕ್ತೆಯು. ರೂಪು ಲಾವಣ್ಯದಲ್ಲಿ ವಿಗಿಲಾದವಳು, ಅತ್ಯಂತ ಸೌಂದರ್ಯವತಿಯು. ಹೀಗಿರುವಲ್ಲಿ ಭೀಮಯ್ಯನು ಅವಳನ್ನು ನಾಡಿನಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ್ದ ವೀರಸಂಗಯ್ಯನಿಗೆ ಕೊಟ್ಟು ಲಗ್ನ ಮಾಡಬೇಕೆಂದು ಬಯಸಿದನು. ಮತ್ತು ಆ ಪ್ರಕಾರ ಉಭಯತರಲ್ಲಿ ಮಾತುಕಥೆಗಳೂ ನಡೆದವು.

ಈ ಕೋವೂರು ಪಟ್ಟಣದಲ್ಲಿ ಮಾಧವನೆಂಬ ವಿಷ್ಣು ಭಕ್ತನು ಈ ಕಾಲದಲ್ಲಿ ರಾಜ್ಯವಾಳುತ್ತಿದ್ದನು. ಅವನಿಗೆ ಭಾಸ್ಕರನೆಂಬ ಮಗನಿದ್ದನು. ಇವನು ತನ್ನ ಗ್ರಾಮದಲ್ಲಿದ್ದ ಭೀಮಯ್ಯನು ಚಂದ್ರಾಣಿಯನ್ನು ವೀರಸಂಗಯ್ಯನಿಗೆ ಕೊಟ್ಟು ಲಗ್ನ ಮಾಡುವವನಿದ್ದಾನೆಂಬ ವಾರ್ತೆಯನ್ನು ಕೇಳಿ, ಅವನು ತನ್ನ ಒಬ್ಬ ದಾದಿಯನ್ನು ಭೀಮಯ್ಯನ

ಶಿವಾನುಭವ

ಪರ್ವ ೨೦	ಜೂನ ೧೯೪೬	ಸಂಚಿಕೆ ೯

ಸ್ಥಾವರ ಲಿಂಗಗಳು.

(ಲೇಖಕ:— ಶ್ರೀ ಸಿ. ನಾ. ಮಹಾಂತಣ್ಣನವರ ನಿವೃತ್ತ ಅಸಿ। ಡೆಪ್ಯುಟಿ ಎಜ್ಯು- ಇನಸ್ಪೆಕ್ಟರರು ಪುಣೆ.)

ವೀರಶೈವ ಸಮಾಜ ಸಂಘಟನೆಯನ್ನು ಸಮೀಕ್ಷಿಸಲು ಶಿವಯೋಗಿಗಳ—ಶಿವಶರಣರ ಅಂತರಂಗದ ನೋಟಗಳೇ ಬಾಹ್ಯದಲ್ಲಿ ಬಿಂಬ ಪ್ರತಿಬಿಂಬವಾಗಿ ಕಂಗೊಳಿಸುವವು. ಸನಾತನವಾದ ಈ ಧರ್ಮದಲ್ಲಿ ಯುಗಯುಗಾಂತರವಾಗಿ ಯೋಗಗಳಲ್ಲಿ ಪರಮಯೋಗವಾದ ಶಿವಯೋಗವು ಬೀಜವೃಕ್ಷನ್ಯಾಯದಂತೆ ಅಗಮಿಸುತ್ತ ಬಂದಿದೆ. ಅನಾದಿಭಕ್ತನೂ ಅವಿಜಂಗಮವೂ ಇವರೀರ್ವರ ಕುಳಸ್ಥಳಗಳೊಂದಾಗಿ ನಿಂತ ನಿಲುವು ಜ್ಯೋತಿರಾಕಾರವಾಗಿ ಹೊರಹೊಮ್ಮಿದ ಜ್ಯೋತಿರ್ಲಿಂಗವು ಬಾಹ್ಯದಲ್ಲಿ ಇದೀ ಭರತಖಂಡವನ್ನೇ ಬೆಳಗುವ ದ್ವಾದಶಸೂರ್ಯರನ್ನು ಅನುಕರಿಸುವ ದ್ವಾದಶಜ್ಯೋತಿರ್ಲಿಂಗಗಳಾಗಿ ಪ್ರಭಾತ ಕಾಲದಲ್ಲಿ ಶಿವಭಕ್ತರ ಹೃದಯಾಕಾಶದಲ್ಲಿ ಪಥನದ ಮೂಲಕ ಒಡಮೂಡುವವು. ಈ ಜ್ಯೋತಿರ್ಲಿಂಗಗಳಲ್ಲಿ ಕೆಲವು ನವ್ಯಾ ಮತದ ಪೂರ್ವಾಚಾರ್ಯರ ಪಂಚಪೀಠಗಳು. ಅವರ ವ್ಯಷ್ಟಿರೂಪನಾದ ಇಷ್ಟಲಿಂಗಗಳೇ ಸಮಷ್ಟಿರೂಪಾಗಿ ಆಯಾ ಪೀಠಗಳ ಹತ್ತರದ ಶಿವಾಲಯಗಳಲ್ಲಿ ಶಿವಲಿಂಗಗಳಾಗಿ ನಿಂತು ಯಾತ್ರಿಕರ ಭಕ್ತ್ಯಾನುಗುಣವಾಗಿ ಫಲಪದಂಗಳನ್ನೀಯುತ್ತಿರುವವು.

ಸದ್ಭಕ್ತನು ಆಚರಿಸುವ ಪಂಚಾಚಾರಗಳೇ ಮೂರ್ತಿಗೊಂಡ ಪೆಂಬಂತೆ ಸಮಾಜದಲ್ಲಿ ಭೃತ್ಯಾಚಾರವನ್ನನುಸರಿಸುವ ಮಠಪತ್ತಿ

ಗಳೂ ಸದಾಚಾರವನ್ನು ತೋರ್ಪಡಿಸುವ ಮಠದಯ್ಯಗಳೂ ಲಿಂಗಾಚಾರವನ್ನು ಲಿಂಗದೊಳು ನೆಲೆಗೊಳಿಸುವ ಬೃಹನ್ಮಠಾಧೀಶರೂ ಗಣಾಚಾರವನ್ನು ಸಂದರ್ಶಿಸುವ ಗಣಾಚಾರಿಗಳೂ ಶಿವಾಚಾರವನ್ನು ಸದು ಹೃದಯದೊಳು ಒಡಮೂಡಿಸುವ ಶ್ರೀ ಜಂಗಮಮೂರ್ತಿಗಳೂ ಗ್ರಾಮ ಗ್ರಾಮಾಂತರಗಳಲ್ಲಿ ಇರುವರು. ಆದರೆ ಈಚೆಗೆ ಅವರಲ್ಲಿ ತಮ್ಮ ಕರ್ತವ್ಯಜ್ಞಾನವು ಸಾಕಷ್ಟು ಇಲ್ಲದ ಕಾರಣವು ಬೇರೆ.

ಸದ್ಭಕ್ತನು ತನ್ನಲ್ಲಿ ಅಂತರಂಗದ ಅಷ್ಟಾವರಣಗಳನ್ನು ಅರಿದು ಆಚರಿಸುತ್ತಿದ್ದರೂ ಬಹಿರಂಗದ ಅಷ್ಟಾವರಣಗಳನ್ನು ಬಿಡಲು ಬರಲಾರದು. ಅಂತೇ ಬಹಿರಂಗದ ತನುವಿನಲ್ಲಿ ಗುರುವಿಗೆ ಆತನ ಸೇವೆಯು. ಮನದಲ್ಲಿ ಲಿಂಗಸನ್ನಿಹಿತವಾದರೂ ಕರದಲ್ಲಿ ಲಿಂಗಾರ್ಚನೆ ಇರಬೇಕು. ಜ್ಞಾನದಲ್ಲಿ ಜಂಗಮಾಚಾರವಿದ್ದರೂ ಬಾಹ್ಯದಲ್ಲಿ ಜಂಗಮದಾಸೋಹವಿರಬೇಕು. ನಿತ್ಯವಾದ ಪಾದೋದಕವು ಸೂಕ್ಷ್ಮದಲ್ಲಿದ್ದರೂ ಬಹಿಃಕ್ರಿಯಾ ಪಾದೋದಕವು ಬೇಕು. ಅಚ್ಚಪ್ರಸಾದ ನಿಚ್ಚಪ್ರಸಾದಾನುಭವವಿದ್ದರೂ ಆಚಾರದಲ್ಲಿ ನಿಜಪ್ರಸಾದದ ಭಾವವೂ ಮೂಲಮಂತ್ರವೂ ಭಸ್ಮರುದ್ರಾಕ್ಷಿಗಳ ಧಾರಣವೂ ಇರಲೇಬೇಕು. ಮತ್ತು ಶುಭಾಶುಭಕಾರ್ಯಗಳಲ್ಲಿ ಗುರುವು ನಡುಕಟ್ಟು ನಿಂತುಕೊಂಡು ಆಯಾಕಾರ್ಯಗಳನ್ನು ಭಕ್ತನಿಗೋಸ್ಕರ ವಿಧಾನ ಪೂರ್ವಕ ಜರುಗಿಸಬೇಕು. ಮನೆಯ ಮುಖ್ಯಸ್ಥನ ಇಂಥ ಕಾರ್ಯಗಳಲ್ಲಿ ವೀರಶೈವ ಸಮಾಜವು ಅರ್ಥಾತ್ ಊರ ದೈವದವರು ತಮ್ಮ ಸಹಕಾರ ಸಹಾನುಭೂತಿಗಳನ್ನು ತೋರಿಸಬೇಕು.

ಶಿವಯೋಗಿಯು ತನ್ನೊಳಗೆ ಶ್ರೀಗಿರಿಯನ್ನೂ ಶ್ರೀಶೈಲಮಲ್ಲಿಕಾರ್ಜುನನನ್ನೂ ಅಡಕೇಶ್ವರನನ್ನೂ ಪಾತಾಳ ಗಂಗೆಯನ್ನೂ ಕದಳೀಬನವನ್ನೂ ಕಂಡು ಬಾಹ್ಯದಲ್ಲಿ ಕಲಿಯುಗದ ಕೈಲಾಸವೆಂದು ಹೇಳಿಸಿಕೊಳ್ಳುವ ಶ್ರೀಶೈಲಪರ್ವತವನ್ನೂ ಶಿಖರೇಶ್ವರನನ್ನೂ ಅಡಕೇಶ್ವರನನ್ನೂ ಶ್ರೀಮಲ್ಲಿಕಾರ್ಜುನ ಸ್ವಯಂಭು ಜ್ಯೋತಿರ್ಲಿಂಗವನ್ನೂ ನಾವೆಲ್ಲರು ಕಾಣುತ್ತೇವೆ. ಶ್ರೀಶೈಲ ಯಾತ್ರೆಗೆ ಹೋಗಿ ಅಲ್ಲಿ ತೀರ್ಥಸ್ನಾನದಿಂದ ಪಾಪಪರಿಹಾರವನ್ನೂ ಲಿಂಗ ದರ್ಶನದಿಂದ ಶಾಂತಿಸುಖಸಮಾಧಾನಗಳನ್ನೂ ಅಲ್ಲಿರುವ ಜಂಗಮಮೂರ್ತಿಗಳ ಪಾದಪೂಜೆಯಿಂದ ತೀರ್ಥ ಪ್ರಸಾದವನ್ನೂ ಹೊಂದುತ್ತೇವೆ. ಹಿರಿಯರು ಪ್ರತಿಯೊಂದು ಗ್ರಾಮ

ದಲ್ಲಿ ಮಲ್ಲಿಕಾರ್ಜುನ ಗುಡಿಯನ್ನು ಕಟ್ಟಿ ಲಿಂಗಪ್ರತಿಷ್ಠೆಯನ್ನು ಮಾಡಿರುವರು. ಭಕ್ತರು ತಮ್ಮ ತಮ್ಮ ಮನೆಯ ದೇವರೆಂದು ಭಾವಿಸಿ ಜಗುಲಿಯ ಮೇಲೆ ಮಲ್ಲಿಕಾರ್ಜುನ ಲಿಂಗವನ್ನು ಬೆಳ್ಳಿಯಿಂದ ಅಥವಾ ಹಿತ್ತಾಳೆಯಿಂದ ಮಾಡಿಸಿ ಶಿವಕಳೆ ತುಂಬಿಸಿ ಪೂಜೆಗೆಯ್ಯುವರು. ಮನೆ ದೇವರು ಮನದೇವರು ಕುಲದೇವರು ಗ್ರಾಮದೇವರು ಇಡೀ ಸಮಾಜ ದೇವರಾಗಿ ಶ್ರೀ ಮಲ್ಲಿಕಾರ್ಜುನ ಲಿಂಗವು ಪೂಜೆಗೊಳ್ಳುತ್ತಾ ಇದೆ. ಸೊನ್ನಲಾಪುರದ ಶ್ರೀ ಸಿದ್ಧರಾಮನೂ ಮಹಾದೇವಿಯಕ್ಕನೂ ಶ್ರೀಶೈಲವನ್ನು ಕಂಡು ಯಾತ್ರೆಮಾಡಿ ಮುಂದೆ ಶ್ರೀಗುರುಕೃಪೆಯಿಂದ ತಮ್ಮ ಇಷ್ಟಲಿಂಗದಲ್ಲಿ ಮಲ್ಲಿಕಾರ್ಜುನ ಲಿಂಗವನ್ನು ಕಂಡವರಾಗಿದ್ದಾರೆಂಬದು ಪ್ರಸಿದ್ಧವು. ಮತ್ತು ಕೆಳಗಿನ ಅವರ ವಚನಗಳು ಇದೇ ಭಾವವನ್ನು ವ್ಯಕ್ತಮಾಡುತ್ತವೆ.

"ಕಣ್ಗೆ ಸತ್ಪರಜತವುವೆಂಬ ತಿಮಿರವ ಕವಿದವರು ಗುರುವನೇ ಉಪಧಾವಿಸಿ ಕಣ್ಗೆ ಔಷಧಿಯ ಬೇಡುವರಯ್ಯಾ ॥ಶ್ಲೋಕ॥ ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ । ಚಕ್ಷೂರುನ್ಮೀಲಿತಂ ಏನ ತಸ್ಮೈ ಶ್ರೀಗುರವೇ ನಮಃ ॥ ಎಂದುದಾಗಿ ಶಿವಜ್ಞಾನವೆಂಬ ಅಂಜನವ ನಚ್ಚಿ ತೋರುವೆ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವು."

"ಶ್ರೀಹರನೆ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಸಿದ್ದೆ ನೋಡಾ. ಹಸೆಯ ಮೇಲಣ ಮಾತು ಬೆಸಗೊಳಲಟ್ಟಿದರೆ ಶಶಿಧರನ ಹತ್ತಿರಕ್ಕೆ ಕಳುಹಿದರೆಮ್ಮವರು. ವಿಭೂತಿಯನೇ ಹೂಸಿ ಕಂಕಣವನೇ ಕಟ್ಟಿದರು ಶ್ರೀಮಲ್ಲಿಕಾರ್ಜುನನು ತನಗೆ ನಾನಾಗಬೇಕೆಂದು."

ಬಸವಾದಿಪ್ರಮಥರೂ ಪೂರ್ವ ಪುರಾತನರೂ ಲಿಂಗಾಂಗಸಾಮರಸ್ಯದಲ್ಲಿ "ಋತಂ ಸತ್ಯಂ ಪರಬ್ರಹ್ಮ ಪುರುಷಂ ಕೃಷ್ಣಪಿಂಗಲಂ। ಊರ್ಧ್ವರೇತುಂ ವಿರೂಪಾಕ್ಷಂ ವಿಶ್ವರೂಪಾಯವೈ ನಮಃ" ಎಂಬ ಮಂತ್ರ ಪೂರ್ವಕವಾಗಿ ಒಕ್ಕು ಮಿಕ್ಕುಪ್ರಸಾದವನ್ನು ಗ್ರಹಿಸುವರು. ಆ ಮಿಕ್ಕು ಪ್ರಸಾದರೂಪವಾದ ವಿರೂಪಾಕ್ಷಲಿಂಗವು ಬಹಿರಂಗವಾಗಿ ಪಂಪಾಕ್ಷೇತ್ರದಲ್ಲಿ ಇಂಪಾಗಿ ಸೊಂಪಾಗಿ ಪೂಜೆಗೊಳ್ಳುವದು. ಹಂಪೆಯ ಹರಿಹರದೇವ ಕವಿಯು ವಿರೂಪಾಕ್ಷಲಿಂಗನ ನೆನಹಿನಿಂದ ಪುರಾತನರ ಪ್ರಖ್ಯಾತರಗಳೆಗಳನ್ನೂ ರಚಿಸಿರುವನು. ಶ್ರೀ ವಿರೂಪಾಕ್ಷಲಿಂಗನ ಭಕ್ತರು ತಮ್ಮ

ತಮ್ಮ ಗ್ರಾಮದ ಶಿವಾಲಯಗಳಲ್ಲಿಯೂ ಮನೆಯ ಜಗುಲಿಗಳಲ್ಲಿಯೂ ಮನದಲ್ಲಿಯೂ ಮೂರ್ತಿಗೊಳಿಸಿ ಪೂಜಾಸ್ತೋತ್ರಗಳನ್ನು ಮಾಡುವದನ್ನು ಕಣ್ಣಾರೆ ನೋಡುತ್ತೇವೆ.

ಬಸವಣ್ಣನಾದರೂ ಬಾಗವಾಡಿಯಿಂದ ಕಪ್ಪಡಿಸಂಗಮಕ್ಕೆ ಬಂದು ಕೆಲವು ದಿವಸ ಸ್ಥಾವರಲಿಂಗವಾದ ಶ್ರೀ ಸಂಗಮೇಶನ ಪೂಜಾದಿಗಳನ್ನು ಭಕ್ತಿಯಿಂದ ಮಾಡಿದನು. ಆ ಸಂಗಮನೇ ಜಂಗಮವಾಗಿ ಬಂದು ಬಸವನಿಗೆ ವೀರಶೈವ ದೀಕ್ಷೆಯನ್ನಿತ್ತಿರುವನು. ಬಸವಣ್ಣನು ತನ್ನ ಕ್ರಿಯಾಚರಣೆಯಲ್ಲಿ ಕಾಣುತ್ತಿದ್ದ ಸಂಗಮನ ಸಾಕಾರವೇ ಅನಾದಿಯಿಂದ ಕೂಡಲಸಂಗಮದೇವನಾಗಿ ಸಂಗಮಕ್ಷೇತ್ರದಲ್ಲಿ ಸ್ವಯಂಭು ಲಿಂಗವಾಗಿ ಕೃಷ್ಣಾ ಮಲಪ್ರಭಾ ನದಿಗಳ ಸಂಗಮವಾದಾಗಿನಿಂದ ಕಂಗೊಳಿಸುತ್ತಿರುವನು. ಅದೇ ಸಂಗಮೇಶ್ವರನು ಪ್ರತಿಗ್ರಾಮದ ಶಿವಾಲಯಗಳಲ್ಲಿಯೂ ಭಕ್ತರ ದೇವರ ಮನೆಗಳಲ್ಲಿಯೂ ಒಡಮೂಡಿ ಪೂಜಾದಿಗಳನ್ನು ಸ್ವೀಕರಿಸುವನು.

ಇದಲ್ಲದೆ ಬಸವಣ್ಣನ ಗುಡಿಗಳು ಎಷ್ಟೋ ಕಡೆಗೆ ಇವೆ. ಅಲ್ಲಿ ಭಕ್ತರು ಬಸವಣ್ಣ ಮೂರ್ತಿಗೆ ನಡಕೊಳ್ಳುವದನ್ನು ನೋಡುತ್ತೇವೆ.

ಪೂರ್ವ ಪುರಾತನರ ನೂತನ ಪುರಾತನರ ಶಿವಗಣಂಗಳ ಸಚ್ಚರಿತೆಗಳನ್ನು ಸುವಿಚಾರಿಸಲು ಜನನ ಮರಣಂಗಳ ನೀಗಿ ಶಿವೈಕ್ಯರಾಗಲು ಶಿವನ ಕೃಪೆಯಿಲ್ಲದೆ ಎಂದೂ ಆಗದು. ಆ ಶಿವಕೃಪೆಯನ್ನು ಪಡೆಯಲು ಪಿಪೀಲಿಕಾ ಮಾರ್ಗವೂ ವಿಹಂಗಮಮಾರ್ಗವೂ ಎಂಬ ದ್ವಿಮಾರ್ಗಗಳು. ಪಿಪೀಲಿಕಾ ಮಾರ್ಗವೇ ನೂರೊಂದು ಸ್ಥಲಗಳಿಂದ ಕೂಡಿದ ಷಟ್‌ಸ್ಥಲ ಮಾರ್ಗವು. ವಿಹಂಗಮ ಮಾರ್ಗವೇ ವೀರ ವ್ರತಿಗಳ ಮಾರ್ಗವು. ಎಷ್ಟೋ ಶರಣರು ಕುಚದಲ್ಲಿ ಬಳ್ಳದಲ್ಲಿ ಕುರಿಯ ಹಿಕ್ಕೆಯಲ್ಲಿ ತಮ್ಮ ತಮ್ಮ ಭಾವದಂತೆ ಶಿವನ ಒಲಿಸಿದವರುಂಟು. ಅವೆಲ್ಲ ವೀರಶೈವ ಸಮಾಜಕ್ಕೆ ಅಪವಾದವು. ಆದರೆ ಜಗದಾರಾಧ್ಯವಾದ ಜಗತ್‌ವಂದ್ಯವಾದ ಜಗತ್ಪೂಜ್ಯವಾದ ಜಗನ್ಮಾನ್ಯವಾದ ಲಿಂಗಾಂಗ ಸಾಮರಸ್ಯಜ್ಞಾನವನ್ನು ಬೋಧಿಸುವ ಎರಡೆಂಭತ್ತುಕೋಟ ವಚನಗಳಿಂದ ಅಜ್ಞಾನಾಂಧಕಾರವನ್ನು ಹೊಡೆದೋಡಿಸುವ ಶಿವಶರಣಾನುಭ

ವವನ್ನು ಶ್ರೀ ವೀರಶೈವ ಷಟ್‌ಸ್ಥಲ ಮಾರ್ಗವೇ ವೀರಶೈವ ಮತದಲ್ಲಿ ಪಿಪೀಲಿಕಾ ಮಾರ್ಗವು.

ವೀರಶೈವ ಸಮಾಜದವರು ಶಿವನ ಅಷ್ಟಲೀಲೆಗಳನ್ನು ತೋರ್ಪಡಿಸಲು ಅಲ್ಲಲ್ಲಿ ಸ್ಥಾಪಿಸಿದ ಆಯಾ ಹೆಸರಿನ ಶಿವಾಲಯಗಳೂ ಹುತ್ತಿನೊಳು ಹುದುಗಿರ್ದ ನೆತ್ತಿಯನ್ನೆತ್ತಿ ಸದ್ಭಕ್ತರ ಗೋವಿನಿಂದ ಹಾಲು ಕರೆಯಿಸಿಕೊಂಡು ಮಹತ್ತಾದ ಗುಡಿಗಳಲ್ಲಿ ಮಹತ್ವವನ್ನು ತೋರಿಸಿದ ಸ್ವಯಂಭುಲಿಂಗಗಳೂ ರಾಮಾಯಣ ಭಾರತಕಾಲದ ಭಕ್ತಿಯನ್ನು ವ್ಯಕ್ತಪಡಿಸಲು ರಚಿಸಿದ ದೇವಾಲಯಗಳೂ ವೇದಾಗಮ ಶಾಸ್ತ್ರಪುರಾಣ ಪ್ರಸಿದ್ಧವಾದ ಶಿವಾಧಿಕ್ಯದ ಲಿಂಗಗಳೂ ಶಿವಶರಣರ ಪವಾಡಗಳ ಪ್ರಸಿದ್ಧತೆಯನ್ನು ಪ್ರಜ್ಞೋಧಿಸುವ ಗುಡಿಗಳೂ ಅಸಂಖ್ಯವಾಗಿ ನಮ್ಮಲ್ಲರ ಅವಗಾಹನೆಯಲ್ಲಿ ಅಲೆದಾಡುತ್ತವೆ. ಇದಲ್ಲದೆ "ಧಿಗ್‌ಭಸ್ಮರಹಿತಂ ಪಾಲಂ ಧಿಗ್ರಾಮನ ಶಿವಾಲಯಂ" ಎಂದು ಶ್ಲೋಕಾರ್ಥದಂತೆ ಪ್ರತಿಗ್ರಾಮದ ದೈವದವರು ತಮ್ಮ ತಮ್ಮ ಊರಲ್ಲಿ ಶಿವಾಲಯವನ್ನು ಕಟ್ಟಿಸಿಟ್ಟಿರುವರು. ಗ್ರಾಮ ಸಮಾಜವೇ ಇಂಥ ಕಾರ್ಯ ಕೈಕೊಂಡದ್ದರಿಂದ ಶಿವಭಕ್ತಿ ಶಿವಾಚಾರಗಳನ್ನನುಸರಿಸಿದ ಅರಸರೂ ಅರಸರ ಕೈಕೆಳಗಿನ ಇನಾಮದಾರರೂ ಸುಪ್ರಸಿದ್ಧ ದೇವಾಲಯಗಳನ್ನು ಕಟ್ಟಿಸಿ ತಮ್ಮ ಹೆಸರು ಅಜರಾಮರವಾಗಿ ಉಳಿಯುವಂತೆ ಮಾಡಿದ್ದಾರೆ. ಇಷ್ಟೇ ಅಲ್ಲ ಗರ್ಭಗುಡಿ ಸಭಾಮಂಟಪಗಳ ಒಳಗೂ ಹೊರಗೂ ಶಿವಲೀಲೆ ಶಿವಪುರಾಣದ ಪ್ರತಿಮೆಗಳನ್ನು ಅಲ್ಲಲ್ಲಿ ರೂಪಿಸಿಬಿಟ್ಟಿದ್ದಾರೆ. ಇಂಥ ಗುಡಿಗಳಿಗೆ ಆಗಮಿಸಿದ ಭಕ್ತರ ಹೃದಯದಲ್ಲಿ ಪುರಾತನಕಾಲದ ಇತಿಹಾಸದ, ಶೂರಪುರುಷರ ಪರಾಕ್ರಮದ, ಅಭಿಮಾನವು ತುಂಬಿತುಳುಕುವಂತೆ ಸ್ಥಿರ ನೋಟ (ಸಿನೇಮಾ) ವನ್ನು ರಚಿಸಿಟ್ಟಿದ್ದಾರೆ. ಶಿವಯೋಗಿಗಳ ಶಿವಶರಣರ ಸಮಾಜ ಹಿತೈಷಿಗಳ ಸಮಾಧಿಗಳ ಮೇಲಿನ ಲಿಂಗಗಳೂ ತೋರಲಿಂಗಗಳೂ ಅನೇಕವಿವೆ. ಈ ಮಹಾನುಭಾವರ ಶಿವಾಲಯಕ್ಕೆ ಆಗಮಿಸಿದ ಆಯಾ ಭಕ್ತರಿಗೆ ಅವುಗಳನ್ನು ನಿಷೇಧ ಮಾಡುವದು ಅರಿಂದಾದೀತು?

ನೂರೊಂದು ಸ್ಥಲಗಳಲ್ಲಿಯ ಷಟ್‌ಸ್ಥಲಾಂತರ್ಗತವಾದ ಅಂಗಸ್ಥಲದೊಳಗಿನ ಮಾಹೇಶ್ವರ ಸ್ಥಲದಲ್ಲಿ ಮಾತ್ರ ಸರ್ವಗತನಿರಸನ, ಶಿವಜಗನ್ಮಯ ಸ್ಥಲಗಳ ಭೇದವನ್ನೂ ವಾಗದ್ವೈತ ನಿರಸನ, ಪೂರ್ವಾಶ್ರಯ

ನಿರಸನ, ಆಹ್ವಾನ ವಿಸರ್ಜನ ನಿರಸನ, ಅಷ್ಟಮೂರ್ತಿ ನಿರಸನ ಸ್ಥಲಗಳ ವಿವರಣೆಯನ್ನೂ ವಿಶದೀಕರಿಸಿದೆ. ಇದರ ಮೇಲಿಂದ ಹಿಂದಿನ ಭಕ್ತಸ್ಥಲಾಂತರ್ಗತ ೧೫ ಸ್ಥಲಾಚಾರಸ್ಥಂಗೆ ಈ ಮೇಲಿನ ನಿರಸನಗಳು ನಿರಸನವೆಂಬಂತೆ ಧ್ವನಿತವಾಗುತ್ತದೆ.

ಹುಟ್ಟುಲಿಂಗದ ತೊಟ್ಟಿಲಲ್ಲಿದ್ದಾಗ ಅಥವಾ ಗರ್ಭಕ್ಕೆ ಕಟ್ಟಿದರೂ ಅಭಿಮನ್ಯು, ನೇಪೋಲಿಯನ್, ಶಿವಾಜಿಗಳಂತೆ ಎಲ್ಲರೂ ಆಗಲಿಕ್ಕೆ ಶಕ್ಯವಿಲ್ಲ. ದೀಕ್ಷಾ ಕಾಲಕ್ಕೆ ತಾಯಿಯ, ದೀಕ್ಷಾ ಮಾಡುವವನ ಸದ್ಭಾವಗಳು ಏಕವಾಗಿ ಕೂಸಿನ ಭಾವ ಷಟ್‌ಸ್ಥಲದಲ್ಲಿ ಮೂಡಿದ್ದಾದರೆ ಶಿವಲಿಂಗ ದೀಕ್ಷೆಯಿಂದ ಉಪಯೋಗವು. ಹಾಗೆ ಆಗದ್ದರಿಂದ ವೀರಶೈವ ಮತಶಾಸ್ತ್ರಾನುಗುಣವಾಗಿ, ಮುಂದೆ ಮೂರು ದೀಕ್ಷೆಗಳು ಕಲ್ಪಿಸಲ್ಪಟ್ಟವೆ. ಈ ಪ್ರಕಾರ ಅಂಗಲಿಂಗಾಚಾರಗಳು ಸಾಧನಗಳಿಂದ ಒಲಿತು ಕ್ರಮೇಣ ಷಟ್‌ಸ್ಥಲಾನುಭವವು ಅಳವಡುತ್ತ ಹೋಗುವದು. ಇಂಥ ಸಾಧನವನ್ನು ಸರಿಯಾಗಿ ಮಾಡಿ ಶಿವನನ್ನು ಕಂಡ ಶಿವಶರಣರು ಸ್ಥಾವರ ಲಿಂಗದ ಸುದ್ದಿಯನ್ನು ಯಾಕೆ ತೆಗೆದಾರು? ಅವರಿಗೇನು ಕೊರತೆ? ಆದರೆ ಇಷ್ಟರಿಂದ ಸ್ಥಾವರಲಿಂಗಗಳು ತ್ಯಾಜ್ಯವೆಂದು ಹೇಗೆ ತಿಳಿಯಬೇಕು?

"ಅದು ಬೇಕು, ಇದು ಬೇಕು, ಎಂಬ ಎದೆಗುಂಡಿಗೆತನ ಬೇಡ. ಸದ್ಭಾವನಾಗಿರ್ದೊಡೆ ಸಾಕು. ಪಡಿಪದಾರ್ಥಂಗಳು ತಾನಿದ್ದೆಡೆಗೆ ಬಾಹವಯ್ಯಾ, ನಿಧಿ ನಿಕ್ಷೇಪಂಗಳು ತಾನಿದ್ದೆಡೆಗೆ ಬಾಹವಯ್ಯಾ, ಸದುಹೃದಯ ಶುದ್ಧನಾಗಿ ಸಕಳೇಶ್ವರ ದೇವಂಗೆ ಶರಣೆಂದೊಡೆ ನಿಜಪದವಿಯ ನೀವನು." ಈ ಅನುಭವವಿದ್ದ ಆಚಾರಸ್ಥರೂ ಸ್ಥಾವರಲಿಂಗಕ್ಕೆ ಏಕೆ ಹೋದಾರು? ತಮ್ಮ ತನುಮನಧನಗಳನ್ನು ಏಕೆ ಸವಿಸಿಯಾರು? ಸ್ಥಾವರ ಲಿಂಗವು ಅಸ್ಥಿರವಾದ ಫಲಪದಂಗಳನ್ನೀಯುವದೆಂದು ಈ ಮೊದಲೇ ಹೇಳಿದ್ದಾಗಿದೆ. ಅದೀಕ್ಷಿತರಾದರೂ " ಗತಿಯ ಬಯಸುವದಕೆ ಸಗುಣ ದೈವವಿಡಿಯುದಿಹುದೆ ಸಾಕ್ಷಿ" ಎಂಬ ವಚನದಂತೆ ಶಿವಶರಣರ ಕೃತ್ಯಗಳ ಕುರುಹುಗಳ ಸ್ಮಾರಕಗಳಾಗಿ ಸ್ಥಾವರಲಿಂಗಗಳಿಗೆ ನಿಜಭಕ್ತಿಯಿಂದ ನಡಕೊಂಡಿದ್ದಾದರೆ ತಾವು ನಿಜಶರಣರ ಮಾರ್ಗವಾದ ಷಟ್‌ಸ್ಥಲಕ್ಕೆ ಹೊರತಾಗಲಾರರು.

ಒಟ್ಟಿನಲ್ಲಿ ಸ್ಥಾವರಲಿಂಗಗಳು ವೀರಶೈವ ಸಮಾಜದ ಮಹತ್ವವನ್ನೂ ಐತಿಹ್ಯವನ್ನೂ ಮನೋಭಿಷ್ಟವನ್ನೂ ಪಾವಿತ್ರ್ಯತೆಯನ್ನೂ ತೋ

ರಿಸುತ್ತವೆ. ಆದರೆ ಕಡೆಯ ನಿಜಲಿಂಗಾನುಭವವು ವೀರಶೈವ ದೀಕ್ಷೆತನಿಗೆ ತ್ರಿಲಿಂಗಗಳಿಂದಲೇ ಸಾಧ್ಯವು. ಹೀಗೆ ಸ್ಥಾವರಲಿಂಗಗಳು ಮತ್ತು ತ್ರಿಲಿಂಗಗಳು ಇವುಗಳಲ್ಲಿ ತಾರತಮ್ಯವಿರುತ್ತದೆ. ನಿಜಲಿಂಗಾನುಭವಿಗಳಿಗೆ ಮಾತ್ರ ತ್ರಿಲಿಂಗಗಳೇ ಗ್ರಾಹ್ಯವೆಂದು ಹೇಳಲು ಅಡ್ಡಿ ಇಲ್ಲ.

ಭಕ್ತ ಗುರು ಲಿಂಗ ಜಂಗಮಗಳು.

(ಲೇಖಕಃ— ಶ್ರೀ. ಬ. ಚ. ಪಟ್ಟೇದ-ಹುಕ್ಕೇರಿ.)

ಷಟ್‌ಸ್ಥಲಗಳಲ್ಲಿ ಭಕ್ತ ಗುರು ಲಿಂಗ ಜಂಗಮಗಳಲ್ಲಿ ಇರುವ ಪರಸ್ಪರ ಸಂಬಂಧವನ್ನು ಅರಿತುಕೊಳ್ಳುವದು ಅತ್ಯಾವಶ್ಯವಿರುತ್ತದೆ. ಈಗಿನವರು ಕೇವಲ ಅವುಗಳ ಬಹಿರಂಗ ಸ್ವರೂಪಕ್ಕೆ ಮಹತ್ವ ಕೊಡುವದರಿಂದ ಅವುಗಳ ಅಂತರಂಗದ ಪರಿಣಾಮಗಳು ಅವರ ನಿದರ್ಶನಕ್ಕೆ ಬರುವದಿಲ್ಲ. ಇವುಗಳಲ್ಲಿ ಕೆಲವು ವೈಶಿಷ್ಟ್ಯಗಳಿರುತ್ತವೆ. ಅವುಗಳನ್ನು ನಾವು ಈ ಲೇಖದಲ್ಲಿ ವಿವರಿಸುತ್ತೇವೆ.

(೧) ಭಕ್ತನು ಅಂದರೆ ಲಿಂಗಾಂಗಿಯು ಅದಾವ ಸ್ಥಳದಲ್ಲಿ ನಿಂತಿದ್ದರೂ ಅಲ್ಲಿಯ ಆಚರಣೆಗಳನ್ನು ನಡಿಸುವಲ್ಲಿಯೇ ಉಳಿದ ಸ್ಥಳಗಳನ್ನು ಸಹ ಸಾಧಿಸಬೇಕು.

(೨) ಗುರು ಲಿಂಗ ಜಂಗಮಗಳಲ್ಲಿ ಜ್ಞಾನ, ಸುಜ್ಞಾನ, ಮಹಾಜ್ಞಾನಗಳು ಸಾಹಿತ್ಯವಾಗಿರುತ್ತವೆ. ಆದುದರಿಂದ ಮೂರೂ ಒಂದೇ. ಪರವಸ್ತುವೆಂಬ ಮೂಲಕ್ಕೆ ಈ ಮೂರು ರೆಂಬೆಗಳು.

(೩) ಗುರು ಲಿಂಗ ಜಂಗಮದಲ್ಲಿ ಚಾರಿತ್ರ್ಯ, ಲಕ್ಷಣ, ಜಾತಿಗಳನೆಣಿಸಲಾಗದು.

(೪) ಗುರು ಶಿಷ್ಯಸಂಬಂಧವನೇನೆಂದು ಉಪಮಿಸುವೆನಯ್ಯ! ಜ್ಯೋತಿಯಿಂದೊದಗಿದ ಜ್ಯೋತಿಯಂತೆ ಇರಬೇಕು. ಮರೀಚಿಕಾ ಜಲವಂತಿರಬೇಕು.

(೫) ಗುರು ನರನೆಂದರೆ ಆಗದು. ಭಕ್ತಿಗೆ ಪರಮಾಶ್ರಯವಾದುದೇ ಗುರು. ಗುರುವಿನಲ್ಲಿಯೇ ಮೊದಲು ಭಕ್ತಿಯ ಬೀಜಾರೋಪಣ. ಆಮೇಲೆ ಉಳಿದವುಗಳ ಮೇಲೆ ಹಬ್ಬಬಹುದು.

(೬) ಗುರು ಲಿಂಗ ಜಂಗಮವೇ ಕುಲದೈವ, ಮನೆದೈವ. ಅವರಲ್ಲಿ ಅಪಾರ ವಿಶ್ವಾಸವುಳ್ಳವರಾಗಬೇಕು.

(೭) ತ್ರಿವಿಧ ವಂಚನೆಯಾದರೆ ಭಕ್ತಿ ಸಲ್ಲದು. ಜಂಗಮಕ್ಕೆ ವಿವಾಹವಾಗಲಿ, ಅವಿವಾಹವಾಗಲಿ ಗುಣವೇ ಕಾರಣವು.

(೮) ಹುಸಿ, ಕಳವು, ಪರದಾರ, ಅನ್ಯದೈವ ಭಜನೆ, ಭವಿಬಳಕೆ ಬಿಡದನ್ನಕ್ಕರ ಭಕ್ತನೆಂದಾಗಬಾರದು. ಅಂಥವ ಕೆಟ್ಟ ಭವಿ.

(೯) ಭಕ್ತರಲ್ಲಿ ದುರಹಂಕಾರಕ್ಕೆ ಎಡೆಯಿಲ್ಲ. ಇವನ್ನು ಕ್ರಮವಾಗಿ ವಿವರಿಸುವಾ.

(೧೦) ಭಕ್ತನು (ಲಿಂಗಾಂಗಿಯು) ಆದಾವ ಸ್ಥಳದಲ್ಲಿ ನಿಂತಿದ್ದರೂ ಅಲ್ಲಿಯೇ ಉಳಿದೆಲ್ಲ ಸ್ಥಳಗಳನ್ನು ಸಾಧಿಸಬೇಕು. ಅಯ್ಯಗಳು (ಗುರು ಜಂಗಮರು ಸಹಿತ) ಮತ್ತು ಮಿಕ್ಕ ಲಿಂಗವಂತರು ಎಲ್ಲರೂ ಲಿಂಗ ಭಕ್ತರೇ, ಶಿವಭಕ್ತರೇ ಇದ್ದಾರೆ. ಅವರೆಲ್ಲರಿಗೂ ಷಟ್‌ಸ್ಥಲಗಳನ್ನೆಲ್ಲ ಒಂದೂ ಬಿಡದಂತೆ ಆಚರಿಸುವುದು. ಅಂದರೆ ಪ್ರತಿಯೊಬ್ಬನು ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯಗಳೆಂಬ ಆರೂ ಸ್ಥಲಗಳಿಗೆ ಪಾತ್ರನಾಗಿ ವರ್ತಿಸಿ ಜೀವಿಸಬೇಕಾಗುವುದು ಅತ್ಯವಶ್ಯವಾಗಿದೆ. ಹಾಗಿಲ್ಲದೆ ಹೋದರೆ ಅವನ ಉದ್ಧಾರವೇ ಇಲ್ಲ. ಅಂದಮೇಲೆ ಇಲ್ಲಿ ಭಕ್ತರು ಕಡಿಮೆ, ಮಹೇಶ್ವರರು ಹೆಚ್ಚು ಎಂಬ ಮಾತಿಗೆ ಎಲ್ಲಿ ಆಸ್ಪದವದೆ? ಹಾಗೆ ಅನ್ನುವದು ಷಟ್‌ಸ್ಥಲ ಮಾರ್ಗವಲ್ಲ.

೨ ಗುರು ಲಿಂಗ ಜಂಗಮಗಳಲ್ಲಿ, ಜ್ಞಾನ ಸುಜ್ಞಾನ ಮಹಾಜ್ಞಾನಗಳು ಸಾಹಿತ್ಯವಾಗಿರುತ್ತವೆ. ಆದ್ದರಿಂದ ಅವರು ಮೂರೂ ಒಂದೇ. ಪರವಸ್ತುವೆಂಬ ಮೂಲಕ್ಕೆ ಈ ಮೂರು ರೆಂಬೆಗಳು. ಇದರಿಂದ ಗುರು ಜಂಗಮತ್ವವು ಕೇವಲ ಜ್ಞಾನ ಪ್ರಧಾನವೇ ಹೊರತು, ಅದರ ಲಾಂಛನವು ಹೆಸರಿಗೆ ಮಾತ್ರ. ಬಹುಶಃ ಈ ಹೊರವಿಂಚಿನಲ್ಲಿಯೇ ತೃಪ್ತರಾಗಿ ಜ್ಞಾನ ಮಹಾಜ್ಞಾನಗಳ ಸಂಪರ್ಕವಿಲ್ಲದೆ, ಅಜ್ಞ ಸಮಾಜದ

ಮನವನ್ನು ಆಕರ್ಷಿಸುವ ಬಹು ಸಂಖ್ಯಾಕರಾದ ಅಯ್ಯ ಗುರು ಜಂಗಮರು ಕಣ್ಣೆರೆಯಬೇಕೆಂದು ಈ ವಚನವು ಎಚ್ಚರಿಸುತ್ತದೆ.

(೩) ಗುರು ಲಿಂಗ ಜಂಗಮರಲ್ಲಿ ಜಾತ್ಯ ಲಕ್ಷಣ ಜಾತಿಗಳನ್ನೆಣಿಸಲಾಗದು. ಅವರಂತಹರಿಂತಹರೆನಲಾಗದು. ಗುರು ಜಂಗಮರು ತಾವು ಶಿವಜ್ಞಾನ ಮಹಾ ಜ್ಞಾನಗಳಿಂದಲಂಕೃತರೂ, ಆಚಾರವಂತರೂ ಆಗಿ, ಸಮಾಜೋದ್ಧಾರವೇ ತಮ್ಮ ಜೀವಿತ ಕರ್ತವ್ಯವೆಂದಿಟ್ಟುಕೊಂಡರೆ, ಪಾಗು ಅಲಿಪ್ತ ರೀತಿಯಿಂದ ಸಂಸಾರವನ್ನೂ ವ್ಯವಹಾರವನ್ನೂ ಸಾಗಿಸುವವರಾದರೆ ಅವರ ಚಾರಿತ್ರ್ಯದಲ್ಲಿ ದೋಷಗಳೇನೂ ಸಂಭವಿಸಲಾರವೆಂಬುದು ಸ್ಪಷ್ಟವೇ ಆದೆ. ಅವರು ನುಡಿದುದೇ ವೇದವಾಕ್ಯ, ನಡೆದುದೇ ಶಿವಮಾರ್ಗ, ಪಿಡಿದುದೇ ಪಾವನ, ನೋಡಿದುದೇ ಪರುಷ ಇಂತೆಂಬಲ್ಲಿ ಅವರ ಚಾರಿತ್ರ್ಯವನೆಣಿಸುವುದೂ ಅವರಂತಹರಿಂತರೆಂಬುದೂ ಸಂಭವಿಸುವುದು ಅಶಕ್ಯ

ಹಾಲು ಕಂದಲು ತುಪ್ಪದಮಡಿಕೆ ಬೋಡು ಮುಕ್ಕೆನಲಾಗದು. ಹಾಲು ಪಿಹಿ, ತುಪ್ಪ ಲಿಂಗಾರ್ಪಿತವಪ್ಪದು. ಅದರಂತೆ ಶಿವಶರಣರನ್ನು ಜ್ಞಾನ ಶಿಸ್ಪಾದುದರಿಂದ ಅವರಲ್ಲಿ ಲಕ್ಷಣವನ್ನು ಮೂಗುಹರಕ, ಕೈ ಜೊಂಚ, ಕುಂಟ ಇತ್ಯಾದಿಗಳನ್ನು ಎಣಿಸಕೂಡದೆಂದು ವಚನ ಶಾಸ್ತ್ರದ ಅಭಿಪ್ರಾಯವದೆ. ಅವರಂತಹರಿಂತಹರೆಂದು ಗುಣವಿಶಿಷ್ಟರಾದ ಗುರು ಜಂಗಮಾದಿಗಳನ್ನು ಅಸಡ್ಡೆ ಮಾಡಕೂಡದು.

"ಗಂಗೆಗೆ ಹೊಲೆಯಲ್ಲಿ ಜಂಗನುಕ್ಕೆ ಕುಲವಿಲ್ಲ" ಎಂಬ ನಾಣ್ನುಡಿ. ಜ್ಞಾನಿಗಳಲ್ಲಿ ಎಂದೆಂದೂ ಜಾತಿಯನೆಣಿಸಬಾರದು. ಜ್ಞಾನವು ಇಂತಹದೊಂದು ಜಾತಿಗೇನೇ ಮೀಸಲಾಗಿಲ್ಲ. ಅದು ಬೇಕಾದವರಲ್ಲಿ ಒಡಮೂಡಬಹುದು. ಭಕ್ತರಂತೂ ಲಿಂಗ (ಜ್ಞಾನ) ಧಾರಿಗಳೆ. ಅವರಲ್ಲಿ ಗುರು ಲಿಂಗ ಜಂಗಮ ಸ್ಥಾನಗಳಲ್ಲಿರುವವರನಕ ಮಹಾಜ್ಞಾನಿಗಳಾಗಿರಬೇಕೆಂಬುದು ಸ್ವಾಭಾವಿಕವಾದ ಮಾತು. ಆ ಕಾರಣ ಭಕ್ತರಲ್ಲಿ ಅಯ್ಯಗಳು, ಬಣಜಿಗರು, ನೇಕಾರರು, ಕುಂಬಾರರು, ಹಡಪದವರು, ಗಾಣಿಗರು, ಮುಂತಾದ ಯಾವ ಕಾಯಕದವರಿದ್ದರೂ ಅದನ್ನು ನೋಡದೆ ಭಕ್ತಿ, ಜ್ಞಾನ, ಆಚಾರಗಳನ್ನೇ ನೋಡಬೇಕೆಂಬುದು ಇಲ್ಲಿ ಉಕ್ತವಾಗಿದೆ. ಈಗಣ ಗುರು ಜಂಗಮರು ಮೇಲಿನಂತೆ ಕಂಗೊಳಿ

ಸುವವರಾದರೆ, ಅವರನ್ನು ಕಡೆಗಾಣಿಸಿ ನಡೆಯುವವರಾರಾದರೂ ಆಗ ಬಹುದೇ? ಎಂದೂ ಶಕ್ಯವಿಲ್ಲ!

(ಳ) "ಗುರು ಶಿಷ್ಯ ಸಂಬಂಧವನೇನೆಂದು ಉಪಮಿಸುವೆನಯ್ಯಾ? ಜ್ಯೋತಿಯಿಂದೊದಗಿದ ಜ್ಯೋತಿಯಂತಿರಬೇಕ. ಮುರಿಚಿಕಾಜಲದಂತಿರಬೇಕು" ಅಹಹ! ಇದೆಂತಹ ಸೊಗಸಾದ ಹಾಗು ಅಮೂಲ್ಯವಾದಂಥ ನುಡಿಯೋ?ಒಂದು ದೀಪದಿಂದ ಬೇರೊಂದು ಬತ್ತಿಗೆ ದೀಪವನ್ನು ಕೊಟ್ಟಿಸಿಕೊಂಡಂತೆ, ಗುರು ತಾನು ಸುಜ್ಞಾನ ಮಹಾ ಜ್ಞಾನಗಳಿಂದ ವೈದೀಪ್ಯನಾಗಿ, ತನ್ನನ್ನು ಮರೆಹೊಕ್ಕ ಶಿಷ್ಯನನ್ನು ಅನುಗ್ರಹಿಸಿ, ಅವನ ಅಂತರಂಗವಲ್ಲಿ ಜ್ಞಾನ ಜ್ಯೋತಿಯನ್ನು ಉರಿಸುವ ಸಾಮರ್ಥ್ಯವುಳ್ಳವನಾಗಿದ್ದರೆ, ಅವನ ಮಹಿಮೆಯನ್ನು ವರ್ಣಿಸಲವರಾರು? ಮೃಗಜಲವು ಹೊರಗೆ ಕಣ್ಣಿಗೆ ತೋರಿದರೂ, ನಿಜವಾಗಿ ಅದರಲ್ಲಿ ನೀರು ಅಂದರೆ ದ್ರವ್ಯ ವಸ್ತುವು ಇರುವುದೇ ಇಲ್ಲ. ಅದರಂತೆ ಗುರು ಶಿಷ್ಯ ಸಂಬಂಧವು ಹೊರಗೆ ವ್ಯವಹಾರ ಮೂಲಕ ಎಣಿಸಲ್ಪಟ್ಟರೂ, ಅವರ ಅಂತಃಕರಣದಲ್ಲಿ ಅದಾವ ಭೇದಭಾವವೂ ವಾಸಿಸದೆ, ಗುರುವಿನೊಳು ಶಿಷ್ಯ, ಶಿಷ್ಯನೊಳು ಗುರುವು ಬೆರೆದು ಸಮರಸವಾಗಿನಿಂತರೆ, ಅದನೆಂತು ಉಪಮಿಸಬೇಕು? ಈಗಿನ ಗುರು ಜಂಗಮರಾದರೂ ಹಾಗೆಯೇ ಆಗಲೆಂದು ಸಮಾಜವು ಹಾತೊರೆದು ಬಾಯ್ಬಿಡುವುದಲ್ಲವೇ? ಇತ್ತ ಸೋಗಿನ ಹಾಗು ಅಡ್ಡ ಹೆಸರಿನ ಡಾಂಭಿಕ ಗುರು ಜಂಗಮರು ಲಕ್ಷಿಸುವರೇ.

(ಜ) ಗುರು ನರನೆಂದರೆ ಆಗದು. ಭಕ್ತಿಗೆ ಪರಮಾಶ್ರಯವಾದುದೇ ಗುರು. ಗುರುವಿನಲ್ಲಿಯೇ ಮೊದಲು ಭಕ್ತಿಯ ಬೀಜಾರೋಪಣ. ಆ ಮೇಲೆ ಉಳಿದವುಗಳ ಮೇಲೆ ಹಬ್ಬಬಹುದು:—"ಅರಿವೇ ಗುರು ಆಚಾರವೇ ಗುರು" ಎಂದು ವಚನ ಶಾಸ್ತ್ರದ ಘೋಷಣೆ. ಗುರುವಿನಲ್ಲಿ ಸುಜ್ಞಾನಾಚಾರಗಳ ಸಾಹಿತ್ಯವಿರುವುದರಿಂದಲೇ ಆ ಜ್ಞಾನಾಚಾರಿಗಳಿಗೇ ಮಹತ್ವವಲ್ಲದೆ ಆತನ ಸಪ್ತಧಾತುಮಯ ದೇಹಕ್ಕಲ್ಲ. ಅದು ಎಲ್ಲರಲ್ಲಿಯು ಉಂಟು. ಜ್ಞಾನಾಚಾರಗಳ ಅಭಾವದಲ್ಲಿ ಅವರ ದೇಹವಷ್ಟೇ ಭಕ್ತ ದೃಷ್ಟಿಗೆ ಕಾಂಬುವುದಿಲ್ಲ. ಆಗ ಅವನು ಕೇವಲ ನರನೆಂದೇ ಎಣಿಸಲ್ಪಡುವನು. ಅವನು ಭವಿ ಸಮಾನನು. "ಆಚಾರವಿಲ್ಲದ ಗುರು ನರ. ಆಚಾರವಲ್ಲದ ಜಂಗಮ ಭೂತ ಪ್ರಾಣಿ" ಎಂದು

ವಚನ ಶಾಸ್ತ್ರವೇ ಸಾರಿ ಬಿಟ್ಟಿದೆ. ಜ್ಞಾನಾಚಾರಯುಕ್ತನಾಗಿದ್ದಾಗ ಗುರುವನ್ನು, ಪಂಚವಕ್ತ್ರ ದಶಭುಜ ತ್ರಿನೇತ್ರ ಮೊದಲಾದವನ್ನುಡಗಿಸಿಕೊಂಡ ಪ್ರತ್ಯಕ್ಷ ಶಿವನೆಂದೇ ಭಾವಿಸುವುದು ಸಹಜವದೆ. ಇಂತಹ ಗುರುವೇ ಭಕ್ತಿಗೆ ಪರಮಾಶ್ರಯನು. ಅವನಲ್ಲಿಯೇ ಮೊದಲು ಭಕ್ತಿಯ ಬೀಜಾರೋಪಣ. ಉಳಿದ ಅಷ್ಟಾವರಣಗಳಲ್ಲಿ ಅದು ತದನಂತರ ಕ್ರಮಿಸಬಹುದು. ಇದು ವಾಸ್ತವಿಕ ಮಾತು. ಆದರೆ ಈಗ ಗುರುವೆಂದು ಹೇಳಿಕೊಳ್ಳುವ ಪಡದಪ್ಪ ಚರಮೂರ್ತಿಗಳೆಲ್ಲರೂ ಅಂತಹರೇ ಇರುವರೇ? ಇಲ್ಲದಿದ್ದರೆ, ಅವರು ನರರೂ ಸ್ವಾರ್ಥಿಗಳೂ ಡಾಂಭಿಕರೂ ಎನಿಸಿಕೊಳ್ಳುವುದು ಅಪರಿಹಾರ್ಯ! ತಾವು ಸಮಾಜದಲ್ಲಿ ನರರೆಂದೆನ್ನಿಸಿಕೊಳ್ಳದಂತೆ ಅವರು ಏರ್ಪಾಡು ಕೊಂಡುವುದು ಅತ್ಯಾವಶ್ಯಕವು. ಅದು ಎಲ್ಲರಿಗೂ ಭೂಷಣವೆಂದು ಇಲ್ಲಿ ಧ್ವನಿತವಾಗಿದೆ.

(ಟ) ಗುರು ಲಿಂಗ ಜಂಗಮವೇ ಕುಲದೈವ, ಮನೆದೈವ-ಹೆಂಡತಿ ಗಂಡನಲ್ಲಿ ಹೇಗೋ ಹಾಗೆ ಅವರಲ್ಲಿ ಭಕ್ತರು ಅಪಾರ ವಿಶ್ವಾಸವುಳ್ಳವರಾಗಬೇಕು. ಲಿಂಗಾಂಗಿಗಳು ಮೂರ್ತಿಪೂಜಕರಲ್ಲ. ಅವರು ಭವಿಗಳಂತೆ ಮನೆದೈವ ಕುಲದೈವವೆಂದು ಮೂರ್ತಿಗಳಿಗೆ ಹೇಳಿಕೊಳ್ಳಲಿಕ್ಕೆ ಆಸ್ಪದವೇ ಇಲ್ಲ. ಅವರ ಇಷ್ಟ ಲಿಂಗವು ಕೇವಲ ಜ್ಞಾನದ ಕುರುಹು. ಸುಜ್ಞಾನ ಸ್ವರೂಪವಾದುದು. ಅವರು ಬರೀ ಜ್ಞಾನಾಚಾರಗಳ ಆರಾಧಕರು. ಇವುಗಳ ಆಕಾರವಾಗಿರುವ-ಭಕ್ತ ಶಿವಾವು ಜಗಳೆನಿಸುವ ಗುರು ಜಂಗಮರನ್ನೂ ಇಷ್ಟಲಿಂಗವನ್ನೂ ಅನನ್ಯ ಭಕ್ತಿ ವಿಶ್ವಾಸಗಳಿಂದ ನಂಬಿ ನಡೆಯುವದು ಅವರ ಹೊಣೆಗಾರಿಕೆ. ಅದೇ ಅವರ ಪವಿತ್ರ ಕರ್ತವ್ಯ. ಈಗಣ ಗುರು ಜಂಗಮರಲ್ಲಿ ಬಹು ಸಂಖ್ಯಾಕರು ಎಂದರೂ ಅಡ್ಡಿ ಇಲ್ಲ. ಅಂತಹರಿಲ್ಲದಿರುವುದರಿಂದಲೇ, ನಿಜವಾದ ಭಕ್ತರಿಗೆ ಬಹು ತೊಂದರೆಯಾಗಿದೆ. ಯಾರನ್ನು ಮನೆದೈವ ಕುಲದೈವವೆಂದು ಆರಾಧಿಸಬೇಕೆಂಬುದೇ ತಿಳಿಯದೇ ದಿಙ್ಮೂಢರಾಗಿದ್ದಾರೆ. ಮನೆ ಗುರುಗಳೆಂದು ಹೇಳುತ್ತಾ ಬರುವ ಮಹಿವರಂತೂ "ಗುರುವೋಬಹವಃಸಂತಿ ಶಿಷ್ಯವಿತ್ತಾಪಹಾರಕಾಃ" ಎಂಬಂತಿರುವರೆಂದು ಹೇಳಲಿಕ್ಕೆ ಬಹು ಕಷ್ಟವಾಗುತ್ತದೆ. ಆದರೂ ಉಪಾಯವಿಲ್ಲ. ಇನ್ನು ಮುಂದೆ ಬೇಗನೆ ಅಂತಹ ಗುರು ಜಂಗಮರು ಎಲ್ಲೆಡೆಗಳಲ್ಲಿಯೂ

ವೈದೋರಿ ಈ ಕೊರತೆಯನ್ನು ಹೋಗಲಾಡಿಸಬೇಕೆಂದು ಸದ್ಯಕ್ಕಪ ಶಿಲ್ಲರೂ ಮನಃಪೂರ್ವಕವಾಗಿ ಬಯಸುತ್ತಿರುವರು.

(೭) ತ್ರಿವಿಧ ದಾಸೋಹ ವಂಚನೆಯೆಂದರೆ ಭಕ್ತಿಗೆ ಸಲ್ಲದು. ಜಂಗಮವೇ ಭೋಗಗಳನ್ನು ಅರ್ಪಿಸಲು ಸಮರ್ಥ. ಜಂಗಮಕ್ಕೆ ವಿವಾಹವಾಗಲಿ ಅವಿವಾಹವಾಗಲಿ ಕಾರಣವಲ್ಲ; ಗುಣವೇ ಕಾರಣ. ಗುರುಲಿಂಗಜಂಗಮಕ್ಕೆ ಕ್ರಮವಾಗಿ ತನು ಮನ ಧನಗಳನ್ನು ನಿರ್ವಂಚನೆಯಿಂದ ಅರ್ಪಿಸಬೇಕೆಂದು ಉಚಿತವಾದ ಯಥಾರ್ಥ ಮಾತು. ಹಾಗೆ ವರ್ತಿಸುವುದೇ ಭಕ್ತರ ಪರವ ಕರ್ತವ್ಯ. "ಕಾಯ ಗುರು, ಸುಜ್ಞಾನ ಲಿಂಗ. ಅನುಭಾವ ಮಹಾಜ್ಞಾನ। ಜಂಗಮ" ಈ ವಚನವನ್ನು ಎಷ್ಟು ಮಾತ್ರವೂ ಮರೆಯತಕ್ಕದ್ದಲ್ಲ. ಕಾಯದ ಕರ್ಮೇಂದ್ರಿಯಗಳಿಂದ ಅನಾಚಾರವು ಎಷ್ಟು ಮಾತ್ರವೂ ಘಟಿಸದಂತೆಯೂ ಯಾವಾಗಲೂ ಸದಾಚಾರವೇ ಒದಗುವಂತೆಯೂ ವರ್ತಿಸಿದರೆ ಮಾತ್ರ, ತನುವನ್ನು ಗುರುವಿಗೆ (ಅರಿವಿಗೆ) ಸಮರ್ಪಿಸಿದಂತಾಗುವುದು. ಇದೇ ಮೇರೆಗೆ ಮನವ ವಿಷಯದತ್ತಣ ಹರಿದವೂ ದುರಾಲೋಚನೆಗಳೂ ದೂರಾಗಿ, ಅದು ಸುಜ್ಞಾನ (ಲಿಂಗ) ದಲ್ಲಿಯೇ ಉಳಿದರೆ ಆಗ ಮಾತ್ರ ಲಿಂಗಕ್ಕೆ ಅರ್ಪಿತವಾಗುವುದು. ಧನವೆಂದರೆ ಪ್ರಪಂಚದಲ್ಲಿ ನಾವು ಅನುಭೋಗಿಸುವ ಸರ್ವ ವಿಷಯಗಳು (ಪದಾರ್ಥಗಳು). ಅವನ್ನೆಲ್ಲ ಜಂಗಮಕ್ಕೆ ನಿಜ ಭಕ್ತನು ಅರ್ಪಿಸುವುದೆಂದರೆ, ಅವುಗಳ ನಾಮರೂಪಗಳನ್ನಳಿದು ಉಳಿವ ಉಳಿವೆಯೇ (ಅಂದರೆ ಲಿಂಗರೂಪವೇ) ಅವು ಎಂದು ಅನುಭಾವ (ಮಹಾಜ್ಞಾನ) ಯುಕ್ತನಾಗಿ ಹಾಗೆ ವರ್ತಿಸುವುದೇ ಆಗಿರುವುದು. "ಲಿಂಗರೂಪಂ ಜಗತ್ ಸರ್ವಂ" ಎಂಬ ಸ್ಥಿತಿಯನ್ನಳವಡಿಸಿಕೊಳ್ಳದಿದ್ದರೆ, ಧನವನ್ನು ಜಂಗಮಕ್ಕೆ ಅರ್ಪಿಸಿದಂತಾಗುವದಿಲ್ಲ. ಈ ವಿವರವು ಶುದ್ಧ ತಾತ್ವಿಕ ಸ್ವರೂಪದ್ದಾದರೂ, ಬಹಿರಂಗದಲ್ಲಿ ಭಕ್ತನು ತಾನು ಅನುಭೋಗಿಸುವ ಪ್ರತಿಯೊಂದು ಒಡವೆಯನ್ನು ಜಂಗಮಕ್ಕಿತ್ತುಕೊಳ್ಳಬೇಕೆಂಬುದು ಸಮುಚಿತವಾಗಿದೆ. ಆದರೆ ಹಾಗೆ ಭಕ್ತಿ ವಿಶ್ವಾಸಗಳು ನೆಲೆಗೊಳ್ಳುವಂತೆ ಗುರು ಜಂಗಮರು ಮೊದಲು ತಾವು ಜೊಕ್ಕ ಚಿನ್ನದಂತೆ ಪರಿಶುದ್ಧರಾಗುವುದು ಅವಶ್ಯ. ಇಲ್ಲದಿದ್ದರೆ ಭೋಗಿಸುವ ಕಾಲದಲ್ಲಿ ಅವರ ಸ್ಮರಣವೇ ಆಗಲಾರದು. ಈ ಮಾತು ಎಲ್ಲರ ಅನುಭವದ್ದೇ ಆದೆ. ಈ ತರದ ಜಂಗಮ ಮೂರ್ತಿಗಳು ತೀರ ಅಪರೂಪವಾದುದರಿಂದಲೇ ಬರಿಯ ಲಿಂಗಾರ್ಪಿತದ ಮೇಲೆಯೇ ಅವಲಂಬಿಸಿ ನಿಲ್ಲುವ ಪ್ರಸಂಗಬಂದಿದೆ. ಭೂತ ಪ್ರಾಣಿಗಳಾಗಿರುವ ಸ್ಥಾವರ ಜಂಗಮರಲ್ಲಿಯೂ ಸಾಮಾನ್ಯರಾದ ನರರಲ್ಲಿಯೂ ಅಂತಹವೇ ಉಳಿಯುವುದರಿಂದ. ಮುಂದೆ ಬಂದು ನಿಲ್ಲುವ ಅನಾಥ ಜನರನ್ನೇ ಜಂಗಮ ಸ್ವರೂಪವೆಂದು ಭಾವಿಸಿ ತಮ್ಮ ಶಕ್ತ್ಯಾನುಸಾರ, ಆ ದಾರಿದ್ರ್ಯ ಪೀಡಿತಂಗೆ ಧನವನ್ನರ್ಪಿಸುವ ಪರಿಪಾಠ ನಿರೂಢವಾಗಹತ್ತಿದೆ. ಈ ಪ್ರವೃತ್ತಿಯನ್ನು ನಿಲ್ಲಿಸುವ ಸಲುವಾಗಿ ನಮ್ಮ ಗುರು ಜಂಗಮ ವರ್ಗವು ಪ್ರಯತ್ನಿಸಬೇಕು.

(೮) ಹುಸಿ, ಕಳವು, ಪರದಾರ, ಪರದೈವ ಭಜನೆ, ಭವಿಬಳಕೆ ಬಿಡದನ್ನಕ್ಕರ ಭಕ್ತನೆಂದಾಗಬಾರದು. ಅವ ಕೆಟ್ಟ ಭವಿ. ಈ ಪಂಚ ದುರ್ಗುಣಗಳ ಲಿಂಗಧಾರಕರಿಗೆ ಅತ್ಯಂತ ತ್ಯಾಜ್ಯವೆಂಬುದರಲ್ಲೇನೂ ಸಂದೇಹವಿಲ್ಲ. ಆದರೆ ಇವು ಉಳಿದ ಭಕ್ತರಲ್ಲಿ ತೋರುವಂತೆಯೇ ಸಮಾಜ ನೇತಾರರಾದ ಅಯ್ಯ ಗುರು ಜಂಗಮರಲ್ಲಿ ಒಳಿತಾಗಿ ವಾಸಿಸುತ್ತಿರುವುದು ಮಾತ್ರ ಬಹು ವಿಷಾದದ ವಿಷಯವು. ಇದಕ್ಕೆ ಅಪವಾದವಾಗಿ ಅಲ್ಲೊಂದು ಇಲ್ಲೊಂದು ಉದಾಹರಣೆಗಳು ತೋರಬಹುದು. ಆದರೆ ಒಟ್ಟನಲ್ಲಿ ಅವು ಅಡಗುವುವು. ತೀರ್ಥಕ್ಷೇತ್ರಗಳಿಗೆ ಎಡತಾಕುವುದು ಪಡ್ರಿಪುಗಳಿಗೆ ಬಲಿ ಬೀಳುವುದು ಇವಂತೂ ಸಾರ್ವತ್ರಿಕವೇ ಸರಿ. ಸಮಾಜ ಮುಂದಾಳುಗಳೂ ಗುರು ಜಂಗಮರೂ ಮೊದಲು ತಾವು ಜಾಗ್ರತರಾಗಿ ಈ ಭವಿತ್ವವನ್ನು ನಾಶಗೊಳಿಸಿಕೊಂಡು ಉಳಿದವರನ್ನು ಹಾಗೆ ಮಾಡಲಿಕ್ಕೆ ಯತ್ನಿಸಿದರೆ ಮಾತ್ರ ಅದು ಸಾಧ್ಯವಾದೀತಲ್ಲದೆ, ಬರಿಯ ಉಪದೇಶಗಳಿಂದ ಏನೂ ಫಲವಾಗುವುದಿಲ್ಲೆಂಬುದು ಅನುಭವದ ಸಂಗತಿಯಾಗಿದೆ.

(೯) ಭಕ್ತರಲ್ಲಿ ದುರಹಂಕಾರಕ್ಕೆ ಎಡೆಯಿಲ್ಲ. ಅಹಂಕಾರ ಆಶೆಗಳೇ ಜಗತ್ತನ್ನೆಲ್ಲ ತಿಕ್ಕಿಮುಕ್ಕುತ್ತಿರುವಾಗ, ದುರಹಂಕಾರ ದುರಾಶೆಗಳಿಗೆ ಎಡೆಗೊಟ್ಟರಂತೂ ತೀರೇಹೋಯಿತು. "ನಾನು ಬಲ್ಲಿದನು, ನನ್ನ ನಡೆನುಡಿ, ಆಚಾರ ವಿಚಾರಗಳು ಆದರ್ಶವಾದವುಗಳು." ಎಂದು ಭಾವಿಸಿಕೊಂಡು, ತನ್ನಲ್ಲಿ ಗುಣಾದಿಗಳ ಕಡೆಗೆ ಇಣಿಕಿಟ್ಟು ನೋಡದೆ, ಯಾವಾಗಲೂ ಅನ್ಯರ ಛಿದ್ರಗಳನ್ನೇ ಎಣಿಸಿ ನಿಂದಿಸುವ ದುರ್ಗುಣವೇ

ಮುಖ್ಯವಾಗಿ ದುರಹಂಕಾರವೆನಿಸುತ್ತದೆ. ತನ್ನ ಡೊಂಕನ್ನು ತಿದ್ದಿಕೊಳ್ಳದೆ ಪರರ ಡೊಂಕನ್ನು ತಿದ್ದಲಿಕ್ಕೆ ಓಡಾಡುವವರನ್ನು ಶ್ರೀ ಬಸವಣ್ಣನವರೂ ಅಲ್ಲಗಳೆದಿದ್ದಾರೆ.

ಒಟ್ಟಿಗೆ ಮೇಲೆ ಕಾಣಿಸಿದಂತೆ ಪದ್ಯಕ್ಕೆ ನಮ್ಮ ಸಮಾಜದ ಅಧೋಗತಿಯ ಸ್ವರೂಪವಿದೆ. ಅದು ತಿದ್ದಲ್ಪಟ್ಟು ಬಲವಾದ ಸಂಘಟನೆಯಾಗದೆ ಹೋದರೆ, ನಮ್ಮ ಸಮಾಜಕ್ಕೆ ಉಳಿಗಾಲವಿಲ್ಲೆಂದು ಎಲ್ಲರೂ ಒಳಿತಾಗಿ ನೆನಿಸಬೇಕು.

ಗುರುಮುಲ್ಲೇಶ್ವರ ಭಜನೆಯ ಪದ್ಯಗಳು.

(ಲೇಖಕರು:—ಬಿ. ಪುಟ್ಟಮಲ್ಲಪ್ಪ ಮಾಸ್ಟರ್ ಗುರುಮುಲ್ಲೇಶ್ವರ ಶಿವಾನುಭವ ಸಂಘ, ಕೊಳ್ಳೇಗಾಲ.)

ರಾಗ ಆದಿ

ಗುರುಮುಲ್ಲೇಶನ ಭಜಿಸು ಹೇ ಮನುಜ । ಪರಶಿವಮೋಕ್ಷವು ಸಿಗುವುದು ಸಹಜ । ಉರದೊಳಗಿರುತಿಹ ಪರತರಮೂರ್ತಿಯು । ಕರದೊಳು ಕಾಣುವ ಪರಿಯೈದವನ ॥ ಅನು ಪ ॥

ಮೃತ್ಯು ಹರಿಸಿ ನಿತ್ಯ ಮುಕ್ತರ ಮಾಡಿ ಧರ್ಮ । ಕೃತ್ಯವ ತೋರಿದ ಪ್ರಭುವರನ । ಅತ್ಯುತ್ಸಾಹದಿ ಭಕ್ತಿಯಂಗವ ತೋರಿ । ಸ್ತುತ್ಯನಾದ ನಿರಂಜನನಾ ॥ ೧ ॥

ಈ ಕ್ಷಿತಿಯೊಳು ಬಲು ದಕ್ಷತೆಯಿಂದಲಿ । ಈಕ್ಷಿಸಿ ಭಕ್ತರ ಪೊರೆದವನಾ। ತ್ರಿಶಿಷ್ಟ ಪದಾರ್ಜಕ ಪಕ್ಷವಾಶ್ರಿತ । ಸಕ್ಷವುರಕ್ಷೋದ್ಧಾರಕನಾ॥೨॥

ಶಿವಮಯಕಾಯವಿಮಾಯಸಮಾಗಮ । ತನಕುಶೇಶಯ ಹಂಸನ । ಭವ ಬಾಡಬತತ ವಿಭ್ರಮ ಚಿನ್ಮಯ । ಕುವಲಯ ದೇವನ ಪುರಕ ಧೀಶನ ॥ ೩ ॥

೨ ಪತಿ ದಾನವ ಕೊಡುರಾಜ (ಎಂಬಂತೆ)

ಗುರುಮುಲ್ಲದೇಶಿಕ ಭೂಪ । ದುರಿತಾಬ್ಧಿ ಬಾಡಬದೀಪ ॥ಪ॥

ಬ್ರಹ್ಮಾಂಡ ಮಂಡಿತಾಚಾರ್ಯ । ಪಿಂಡಾಂಡ ಶೋಧಿತ ಕಾರ್ಯ । ಅಖಂಡ ಭಕ್ತ ಕೃಪಾರ್ಯ । ಪಾಖಂಡ ಖಂಡನ ಧೈರ್ಯ ॥೧॥

ಅಷ್ಟಾವರಣ ವಿಚಾರ । ಇಷ್ಟಾಂಗಸೌರ ಶರೀರ । ಸೃಷ್ಟೀಗಧೀಶ ಮುದಾರ । ಸೃಷ್ಟೀ ಸ್ವರೂಪನುದಾರ ॥೨॥

ಸಾಂದ್ರ ಪ್ರಮಥಮುನೀಂದ್ರ । ಆನಂದ ಚಿದ್ರಸಸಾಂದ್ರ । ಕೇಂದ್ರ ಫಣಿಗಣೇಂದ್ರ । ಮಹಿಮೇಂದ್ರ ಶರನಿಧಿ ಚಂದ್ರ ॥೩॥

೩ ಮಾಯಾತೀತನೆ ದೇವ (ಎಂಬಂತೆ)

ಶ್ರೀ ಗುರುಮುಲ್ಲೇಶ । ಯೋಗಿ ಹೃತ್ಕಮಲೇಶ । ಭೋಗಿಶ ಪೂಜ್ಯೇಶ । ಓಂ ಓಂ ಓಂ ತ್ರಾಹಿತ್ರಾಹಿ ಫಾಲೇಕ್ಷಣ । ಹರಯೋಗ ನಿದ್ರಣ । ಪರಶಿವಸ್ಮರಣದುರಿತ ವಿದ್ರಾವಣ । ಓಂ ಓಂ ಓಂ ॥೧॥

ಶಾಶ್ವತೋನ್ನತ ಸುಹೃತ । ವಿಶ್ವ ದಯಾನ್ವಿತ । ಈಶ್ವರಸಮ್ಮತ । ವಿಶ್ರುತೋನ್ವಿತ । ಓಂ ಓಂ ಓಂ ॥೨॥

ಮಂಗಳಾಂಗ ಮನೋಂಬುಜ । ಜಂಗಮಪದವ್ರಜ । ಲಿಂಗ ಸುಸರಸಿಜ । ಸಂಗಮಾನಸಿಜ । ಓಂ ಓಂ ಓಂ ॥೩॥

ವೀರಕುಲಕಧಿನಾಯಕ । ಗುರುತ್ವದಾಯಕ ದುರಿತನಿದಾರಕ । ಶರಣಜನೋತ್ಸುಕ । ಓಂ ಓಂ ಓಂ ॥೪॥

ದೇವಪುರಕಧೀಶ್ವರ । ದೇವೇಶಶಂಕರ । ದೇವಾಂಶ ಸುಂದರ । ಪಾವನ ಶ್ರೀಕಾರ ಓಂ ಓಂ ಓಂ ॥೫॥

೪ ನಿಟಿಲಾಕ್ಷನ ಭಜಿಸು (ಎಂಬಂತೆ)

ಪಾಲಿಸು ನಿರುತದಿ ಗುರುಮುಲ್ಲೇಶ್ವರ । ಪಾಲಿಸು ಭಕ್ತೋದ್ಧಾರ । ಕೃಪಾವರ । ಪಾಲಿಸು ಪಾವನ ದಿವ್ಯ ಶರೀರ । ಪಾಲಿಸು ಶಿವಕೃಪ । ಸಮುಯೋದ್ಧಾರ ॥ ಪ ॥

ಶ್ರುತಿತತಿ ನುತ ಘನ ಜತ ರತಿ ಯತಿಪತಿ । ಸುರತತಿ ಸಂಸ್ತುತ ವಿರತಿರತೇ । ಮತಿಗತಿ ಹಿತಪತಿ ವಿತತ ಯಶೋನ್ನತ । ಯತಿ ವರಕೃತ ನುತಿ ಗತಿ ಪ್ರೀತಾ ॥ ೧ ॥

ಅಮಿತಗುಣಾಮಯ ಶಮಿತನತಾಮಯ । ಪ್ರಮಥ ಪುಂಗವ ನಾಥಜಯ । ಶಮದಮ ಗುಣಯುತ ಯಮಿಜನ ಸಂಸ್ತುತ । ಸುಮನಸ ಭಕ್ತೋದ್ಧಾರ ಹಿತ ॥ ೨ ॥

ಕಲಿಕಾಲುಷ ಹರ ಮಲತ್ರಯ ದೂರ । ಅಲಘತರೋಜ್ವಲ ಸುಖಕರ । ವಲಸಿತ ಮನೋಹರ ದಿವ್ಯಶರೀರ । ಸುಲಲಿತ ಕಂಧರಶಂಕರ ॥೩॥

೫ ರೇಣುಕ ಗುರುನಾಥ ಜಯ (ಎಂಬಂತೆ)

ಪೊರೆಗುರು ಮುಲ್ಲೇಶ ಜಯ। ಚರವೃಂದ ವಂದ್ಯಾಯ । ಪರಿಪೂ
ತದೇಹಾಯ। ಪ್ರಮಥೇಶ ವಿಭೋ ॥೧॥

ಭಕ್ತಮೂಲ ಭಂಗಾಯ। ಶಿವಲಿಂಗ ಸಂಗಾಯ। ಕವಿತುಂಗಸೇ
ವ್ಯಾಯ। ಅವಿರಳ ಮಯಭೋ ॥೨॥

ಭೂಪನಿವಹೋಪನತ। ಚಾಪುಲ ಮಯೋಪಯುತ। ಕೋಪ
ಹೃತ ಭಾಪುಸುತ। ರೂಪಮಯಂಭೊ ॥೩॥

೬ ರಕ್ಷಿಸು ಗುರುಮುಲ್ಲೇಶಾ (ಎಂಬಂತೆ)

ಪಾಲಿಸು ಗುರುಮುಲ್ಲೇಶಾ ಸುಶೀಲಯತಿ ಜನಕೋಶಾ। ಫಾಲ
ಗುಪ್ತ ಪ್ರಕಾಶ। ಭವ। ಮೂಲಬಾಡಬಧೀಶಾ ॥೪॥

ದುರಿತಾಂಬು ನಿಧಿ ನಿರ್ವ್ಯಂಶ। ಸತ್ಯರಣಜನೋತ್ಸುಕ ಹಂಸಸ್ಮರ
ಮದನಾಶಕ ಕಂಸ। ಗುರು। ಚರಕುಲರೇಣುಕ ಅಂಶ ॥೧॥

ಮದಮೋಹಮತ್ಸರ ರಹಿತ। ವಿಧಿ ಮುಖ್ಯ ಸುರಕುಲನವಿತ।
ಬುಧವೃಂದ ಕೀರ್ತಿಸು ಚರಿತ। ಹೃದಯಾಂಗ ಲಿಂಗೋಚ್ಚರಿತ ॥೨॥

ಧೃತವೇದ ಪೂಜಿತ ಲಿಂಗ। ಕೃತಭಕ್ತ ದುರಿತತತಿ ಭಂಗ। ಧೃತ
ಮೂರ್ತಿ ಕೀರ್ತಿ ಪ್ರಸಂಗಾ। ವೃತಜಂಗಮ ರತ್ನ ಸುಸಂಘಾ ॥೩॥

೭ ಬಸವಾ ಎನಗೊಲಿಯೋ (ಎಂಬಂತೆ)

ಗುರುವೇ ಎನಗೊಲಿಯೋ। ಗುರುಮುಲ್ಲೇಶನೆ ಎನಗೊಲಿಯೋ॥ಪ॥

ಗುರುವೆ ಎನಲು ಪರತರವೋಕ್ಷವು ತಾ। ದೊರಕುವುದೆನ್ನುತೆ।
ಶ್ರುತಿ ಸಾರುವುದೈ ॥೧॥

ಅತುಳಿತ ಘನಲಿಂಗ ಸಂಗ। ಶ್ರುತಿಭರಿತ ಕೃಪಾಂಗ। ಜಿತಯತಿ
ಮದಮಾತಂಗವೃಗಾಧಿಪ। ನತಮುಂದಾರ ತ್ರಿಕೂಟನಿಜಾಂಗ ॥೨॥

ಧಾರುಣಿ ಮಾರುಚಿರಯಮಾಂಗ। ಪೂರಣ ಮಾತ್ಮಸುಖ।
ಧೀರಣ ಸತಪದ। ವಾರುಣ ಮುಖಸ್ತುತ। ಕಾರುಣವಂಬುದುರೀಷ
ನಿವಾರಣ ॥೩॥

ಶಂಬರಾರಿವಿಲಯ। ದೇವನ। ಸಂಭ್ರಮ ಪುರನಿಲಯ।
ನಂಬಿ ಭಜಿಪರಂ ಭುಜ ವಿಶ್ವಂಭರ। ಕುಂಭಿನೀಂದ್ರ ಚಿದಾಲಂಬಯ
ತಿವರ ॥೪॥

ಕಡೆಗೆ ಕಳುಹಿಸಿ ಅವನಿಗೆ-- ನಿನ್ನ ಮಗಳನ್ನು ನನಗೆ ಕೊಟ್ಟು ಲಗ್ನ
ಮಾಡಬೇಕೆಂದು ತಿಳಿಸಿದನು. ಇದಕ್ಕೆ ಭೀಮಯ್ಯನು ಒಪ್ಪಿಕೊಳ್ಳಲಿಲ್ಲ.
ಅವನು ತಾನು ಶಿವಭಕ್ತನಾಗಿದ್ದು ತನ್ನ ಮಗಳನ್ನು ಭಕ್ತ ಶಿರೋಮಣಿ
ಯಾದ ವೀರ ಸಂಗಯ್ಯನಿಗೆ ಕೊಡಬೇಕೆಂದು ನಿಶ್ಚಯ ಮಾಡಿದ್ದೇನೆ,
ನನ್ನ ಮಗಳನ್ನು ನಿನಗೆ ಕೊಡುವದಿಲ್ಲೆಂದು ಹೇಳಿಕಳುಹಿಸಿದನು.
ಅದನ್ನು ಭಾಸ್ಕರನು ಕೇಳಿ ಖತಿಗೊಂಡು ಲಗ್ನವನ್ನು ಹೇಗಾದರೂ
ಮಾಡಿ ತಡೆಯಬೇಕೆಂದು ನಿಶ್ಚಯಿಸಿದನು.

ಲಗ್ನದ ದಿವಸವನ್ನು ಗೊತ್ತುಮಾಡಿದ ಬಳಿಕ ವೀರಸಂಗಯ್ಯನು
ತನ್ನ ಭಕ್ತ ಸಮೂಹದೊಡನೆ ಲಗ್ನಕ್ಕಾಗಿ ಕೋವೂರು ಪಟ್ಟಣಕ್ಕೆ
ಬಂದನು. ಅಲ್ಲಿ ಲಗ್ನಸಮಾರಂಭವೂ ಜರಿಗಿತು. ಅರಸನ ಕುಮಾ
ರನು ಲಗ್ನವಾಗಬಾರದೆಂದು ಎಷ್ಟು ಪ್ರಯತ್ನಿಸಿದರೂ ಅದು ಸಫಲವಾ
ಗಲಿಲ್ಲ. ಇದರಿಂದ ಭಾಸ್ಕರನು ಮತ್ತಿಷ್ಟು ಕೆರಳಿದವನಾಗಿ ವೀರಸಂಗ
ಯ್ಯನು ತನ್ನ ಹೆಂಡತಿಯನ್ನು ಕರೆದುಕೊಂಡು ಹೋಗುವ ಕಾಲದಲ್ಲಿ
ಮಾರ್ಗದಲ್ಲಿ ಅವನ ಮೇಲೆ ಬಿದ್ದು ಬಲಾತ್ಕಾರದಿಂದ ಅವಳನ್ನು ಅಪ
ಹರಿಸಿಕೊಂಡು ಹೋಗಬೇಕೆಂದು ನಿಶ್ಚಯಿಸಿದನು. ಬಿದಿರಕೊಟ್ಟೆಯ
ಶಿವಭಕ್ತರು ಲಗ್ನ ತೀರಿಸಿಕೊಂಡು ತಮ್ಮ ಗ್ರಾಮಕ್ಕೆ ತಿರುಗಿ ಹೋಗು
ತ್ತಿರುವಾಗ ಭಾಸ್ಕರನು ತನ್ನ ಸೈನ್ಯದೊಂದಿಗೆ ಬಂದು ಅವರ ಮೇಲೆ
ಮಾರ್ಗದಲ್ಲಿ ಬಂದೆರಗಿದನು. ಆಗ ಉಭಯ ತಂಡಗಳಲ್ಲಿ ತುಮುಲ
ಯುದ್ಧವೆಸಗಿತು. ವೀರಸಂಗಯ್ಯನೂ ವೀರ ಶಿವಭಕ್ತರೂ ಅತ್ಯಂತ
ಶೂರತನದಿಂದ ಕಾದಾಡಿ ಭಾಸ್ಕರನ ಸೈನ್ಯವನ್ನು ಸೋಲಿಸಿ ಹಿಂದಕ್ಕ
ಟ್ಟಿದರು. ಭಾಸ್ಕರನು ರಣಭೂಮಿಯಿಂದ ಓಡಿ ಹೋದನು. ಶಿವಭ
ಕ್ತರು ಅವನನ್ನು ಬೆನ್ನಟ್ಟಿ ಬರಲು ಅವನು ಅಲ್ಲಿಯೇ ಅರಣ್ಯದಲ್ಲಿ ಒಂದು
ಕಡೆಗೆ ಅಡಗಿಕೊಂಡು ನಿಂತನು.

ವೀರಸಂಗಯ್ಯನು ಈ ಪ್ರಕಾರ ಕೋವೂರು ದಂಡಾಳುಗಳನ್ನು
ಜಯಿಸಿದ ಬಳಿಕ ಅವನು ರಣಭೂಮಿಯನ್ನು ನೋಡಬೇಕೆಂದು ಹೊರ
ಟನು. ಅಲ್ಲಿ ಭಕ್ತರ ಹೊಡೆತದಿಂದ ಸತ್ತು ಹೋಗಿದ್ದ ಹೆಣವ ರಾಶಿ
ಗಳು ಬಿದ್ದಿದ್ದವು. ಅವುಗಳನ್ನು ಅವನು ನೋಡುತ್ತ ಹೋಗುವಷ್ಟರಲ್ಲಿ
ಅಲ್ಲಿ ಒಂದು ಮೃತದೇಹವು ಅವನ ದೃಷ್ಟಿಗೆ ಬಿದ್ದಿತು. ಅದರ ಹಣೆಯ

ಮೇಲೆ ಭಸಿತ, ಅಂಗದಲ್ಲಿ ಲಿಂಗವಿದ್ದದ್ದನ್ನು ಕಂಡನು. ಹೀಗೆ ಯುದ್ಧ ಕಾಲದಲ್ಲಿ ತನ್ನಮೂಲಕ ಒಬ್ಬ ಶಿವಭಕ್ತನ ಮಡಿದು ಹೋದನೆಂಬುದನ್ನು ನೋಡಿ ಅವನಿಗೆ ಬಹಳ ಪಶ್ಚಾತ್ತಾಪವಾಯಿತು. ಈ ಶಿವಭಕ್ತನ ಪ್ರಾಣವನ್ನು ಮರಳಿ ಪಡೆಯಬೇಕೆಂಬ ಇಚ್ಛೆಯು ಅವನಲ್ಲಿ ಉತ್ಪನ್ನವಾಯಿತು. ಆಗ ಅವನು ಪರಮಾತ್ಮನನ್ನು ಸ್ಮರಿಸುತ್ತ, ಆ ಭಕ್ತನಿಗೆ ಪ್ರಾಣದಾನ ಮಾಡಬೇಕೆಂದು ಬೇಡಿಕೊಳ್ಳಲು ಆ ಮೃತದೇಹದಲ್ಲಿ ಪ್ರಾಣವು ಬಂದಿತು ಮತ್ತು ಸತ್ತು ಹೋಗಿದ್ದ ಆ ಭಕ್ತನು ಎದ್ದು ಕುಳಿತನು. ಆಗ ವೀರಸಂಗಯ್ಯನು ಅವನನ್ನು ನಮಸ್ಕರಿಸಿ ಸನ್ಮಾನಿಸಿದನು.

ಈ ಎಲ್ಲ ಸಂಗತಿಗಳನ್ನು ಭಾಸ್ಕರನು ಸಮೀಪದಲ್ಲಿಯೇ ಮರೆಯಲ್ಲಿ ನಿಂತುಕೊಂಡು ನೋಡುತ್ತಾ ಇದ್ದನು. ಅವನು ಅದನ್ನುನೋಡಿ, ಒಂದು ಕಪಟೋಪಾಯವನ್ನು ನೆನೆದು ಒಬ್ಬ ಜಂಗಮನ ವೇಷವನ್ನು ಧಾರಣ ಮಾಡಿಕೊಂಡು, ವೀರಸಂಗಯ್ಯನ ಇದಿರಿಗೆ ಬರಲಾಗಿ ಅವನಾರೆಂಬುದನ್ನು ತಿಳಿಯದೆ ವೀರಸಂಗಯ್ಯನು ಅವನನ್ನು ನಮಸ್ಕರಿಸಿದನು. ಆಗ ಭಾಸ್ಕರನು ತನ್ನ ಕೈಯಲ್ಲಿದ್ದ ಕತ್ತಾರಿಯಿಂದ ವೀರಸಂಗಯ್ಯನನ್ನ ಬೆನ್ನ ಮೇಲೆ ತಿವಿದು ಗಾಯಗೊಳಿಸಿದನು. ಆದರೆ ವೀರಸಂಗಯ್ಯನು ಇದಕ್ಕೊಸ್ಕರ ಎಷ್ಟುಮಾತ್ರವೂ ಅವನಮೇಲೆ ಕೋಪಗೊಳ್ಳಲಿಲ್ಲ. ಇಷ್ಟೇಅಲ್ಲ, ಅವನ ಜಂಗಮ ರೂಪನ್ನು ನೋಡಿ ತನ್ನ ಕೈಯ್ಯಲ್ಲಿದ್ದ ಶಸ್ತ್ರವನ್ನು ಚಲ್ಲಿಕೊಟ್ಟು ಅವನಿಗೆ—ನೀನು ನನ್ನ ಭವರೋಗ ವೈದ್ಯನು, ನನ್ನನ್ನು ರಕ್ಷಿಸು ಎಂದು ಅವನ ಪಾದಕ್ಕೆರಗಿದನು. ವೀರಸಂಗಯ್ಯನ ಈ ಅತುಲವಾದ ಭಕ್ತಿಯನ್ನು ನೋಡಿ ಶಿವನು ಮೆಚ್ಚಿ ಅವನಿಗೆ ಜಂಗಮ ರೂಪಿನಿಂದ ಪ್ರತ್ಯಕ್ಷನಾಗಿ ಅವನಿಗೆ— ನೀನು ನಿನ್ನ ವೀರಭಕ್ತಿಯನ್ನು ಜಗತ್ತಿನಲ್ಲಿ ಚನ್ನಾಗಿ ಮೆರೆಯಿಸಿದೆ. ನಿನಗೇನು ಬೇಕು ಬೇಡು ಎನಲು, ಅವನು—ಈ ಭಾಸ್ಕರನ ತಪ್ಪನ್ನು ಮೊದಲು ಕ್ಷಮಿಸಬೇಕು ಎಂದು ಬೇಡಿಕೊಂಡನು. ಭಾಸ್ಕರನು ಈ ವರೆಗೆ ತನ್ನ ಸಮ್ಮುಖದಲ್ಲಿ ನಡೆದ ಸಂಗತಿಗಳನ್ನು ನೋಡಿ ಪಶ್ಚಾತ್ತಾಪವನ್ನು ಹೊಂದಿ ತನ್ನ ತಪ್ಪನ್ನು ಕ್ಷಮಿಸಬೇಕೆಂದು ಆ ಜಂಗಮನಿಗೆ ಬೇಡಿಕೊಂಡನು. ಆಗ ಆ ಜಂಗಮನು ಅವನಿಗೂ ಅವನ ಮಿತ್ರ ಕಳತ್ರ, ಸೇವಕರೆಲ್ಲರಿಗೂ ಶಿವದೀಕ್ಷೆಯನ್ನು ಕೊಟ್ಟು ಅಂತರ್ಧಾನನಾದನು. ಆ ಮೇಲೆ ವೀರಸಂಗಯ್ಯನು ತನ್ನ ಹೆಂಡತಿಯಾದ ಚಂದ್ರುಣಿದೇವಿಯನ್ನು ಕರೆದುಕೊಂಡು ತನ್ನ ಬಿದಿರುಕೊಟ್ಟಿ ಪಟ್ಟಣಕ್ಕೆ ಹೋಗಿ

ಶಿವಾನುಭವದಲ್ಲಿ ಸುಖವಾಗಿದ್ದನು. ಇತ್ತ ಕೋವೂರಲ್ಲಿ ಭಾಸ್ಕರನೂ ಅವನ ಮಿತ್ರರೂ, ಬಂಧುಬಳಗದವರೂ ಶಿವದೀಕ್ಷಾ ಸಂಪನ್ನರಾಗಿ ಶಿವನಲ್ಲಿ ಭಕ್ತಿಭಾವವುಳ್ಳವರಾಗಿ ವಾಸಿಸುವವರಾದರು. ಈ ಪ್ರಕಾರ ವೀರಸಂಗಯ್ಯನು ತನ್ನ ವೀರಭಕ್ತಿಯಿಂದ ಶಿವಶರಣರಲ್ಲಿ ಪ್ರಖ್ಯಾತನಾದ್ದಾನೆ.

ನಾವು ಹಿಂದೆ ಕೋವೂರು ಬ್ರಹ್ಮಯ್ಯನ ಚರಿತ್ರೆಯಲ್ಲಿ ಉಲ್ಲೇಖಿಸಿದ ಕೋವೂರೇ ಮಾಧವ ಭಾಸ್ಕರರ ಗ್ರಾಮವಾಗಿರಬಹುದೆಂದು ತೋರುತ್ತದೆ. ಇದು ಚಾಲುಕ್ಯರ ವಂಶವು. ಈ ಕಥೆಯಲ್ಲಿ ಹೇಳಿದಂತೆ ಅವರು ವಿಷ್ಣುಭಕ್ತರಾಗಿರಬಹುದು. ಚಾಲುಕ್ಯರು ಕೆಲವು ಕಾಲ ವಿಷ್ಣುಭಕ್ತರು, ಕೆಲವು ಕಾಲ ಜೈನರು, ಇದ್ದ ಹಾಗೆ ಇತಿಹಾಸದಿಂದ ತಿಳಿದು ಬರುತ್ತದೆ. ಆದರೆ ಮಾಧವ ಭಾಸ್ಕರ ಈ ಶಬ್ದಗಳ ಮೇಲಿಂದ ಈ ಕಾಲದಲ್ಲಿ ಅವರು ವಿಷ್ಣು ಭಕ್ತರಿರಬಹುದು. ಅನಂರು ಹೇಗೆ ವೀರಸಂಗಯ್ಯನು ಶಿವಭಕ್ತರಾದರೆಂಬುದು ಈಗಿನ ಕಥೆಯಲ್ಲಿ ಹೇಳಲ್ಪಟ್ಟಿದೆ. ಈ ಪೇರೆಗೆ ವೀರಶೈವರಾಗುವಾಗ್ಗೆ ಅವನ ಆಪ್ತರಿಷ್ಟರಲ್ಲಿ ಬಂಧುಬಳಗದವರಲ್ಲಿ ಹಿಂದೆ ಕೋವೂರು ಬ್ರಹ್ಮಯ್ಯನ ಕಥೆಯಲ್ಲಿ ಹೇಳಿದಂತೆ ಸುಮಾರು ೩೦೦ ಮನೆತನಗಳ ಜನರು ಅವರೊಡನೆ ವೀರಶೈವ ದೀಕ್ಷೆಯನ್ನು ಹೊಂದಿರಬಹುದು. ಇವರ ವಂಶದಲ್ಲಿ ಮುಂದೆ ಬ್ರಹ್ಮಯ್ಯನು ಉತ್ಪನ್ನನಾಗಿ ವೀರಶೈವ ಧರ್ಮದಂತೆ ನಡೆಯುತ್ತಿರಲು ಅವನು ಕೋವೂರಲ್ಲಿಯ ಜೈನರಿಂದ ಹೇಗೆ ಹಿಂಸಿಸಲ್ಪಟ್ಟನೆಂಬುದು ಅವನ ಚರಿತ್ರೆಯಲ್ಲಿ ಹೇಳಲ್ಪಟ್ಟಿದೆ.

ಕೋವೂರು ಈ ಹೆಸರಿನ ಗ್ರಾಮವು ಬೀದರದ ಸಮೀಪದಲ್ಲಿ ಇದ್ದದ್ದು ನಮಗೆ ಈವರೆಗೂ ಕಂಡುಬಂದಿಲ್ಲ. ಆದ್ದರಿಂದ ಮುಂಗಳವಾಡ ಅಥವಾ ತದ್ದೇವಾಡಿ ನಾಡಿನಲ್ಲಿದ್ದ ಈಗಿನ ಕೋಹಳ್ಳಿಯೇ ಈ ಕೋವೂರಾಗಿರಬೇಕು. ಮುಂಗಳವಾಡ ನಾಡೂ ಕಲ್ಯಾಣದ ಸೀಮೆಯೂ ಸಮೀಪವಾಗಿರುತ್ತವೆ. ಆದ್ದರಿಂದ ಈ ಚರಿತ್ರೆಯಲ್ಲಿ ಹೇಳಿದಂತೆ ಕೋವೂರು ಮತ್ತು ಬೀದರ ಇಲ್ಲಿಯ ಮುಖ್ಯ ಮನೆತನಗಳಲ್ಲಿ ಶರೀರ ಸಂಬಂಧಗಳು ಹಿಂದಿನ ಕಾಲದಲ್ಲಿ ಆಗುತ್ತಿರಬಹುದು.

ವೀರಶೈವರು ಈಗ್ಗೆಯೂ ತಮ್ಮ ಮಕ್ಕಳಿಗೆ ವೀರಸಂಗಯ್ಯನೆಂದು ಹೆಸರಿಡುವದು ಬಹಳ ಪ್ರಚಾರದಲ್ಲಿದೆ. ಇದರಿಂದ ವೀರಸಂಗಯ್ಯನು

ಬಹು ಪ್ರಸಿದ್ಧ ಶಿವಶರಣನಿದ್ದ ಹಾಗೆ ತೋರುತ್ತದೆ. ಆದರೆ ಅತನ ಚರಿತ್ರೆಯು ಈಗ ಬಹುತರ ಯಾರಿಗೂ ಗೊತ್ತಿರುವದಿಲ್ಲ. ಮಾಧವ ಭಾಸ್ಕರರು ಚಾಲುಕ್ಯರ ಒಂದು ಮನೆತನದವರಿದ್ದು ಇಂಥವರನ್ನು ವೀರಸಂಗಯ್ಯನು ವೀರಶೈವ ಮತಾವಲಂಬಿಗಳನ್ನಾಗಿ ಮಾಡಿದ್ದರಿಂದ ಅವನು ಇಷ್ಟು ಖ್ಯಾತಿಯನ್ನು ಪಡೆದಿರಬಹುದು. ಅವನು ಭಾಸ್ಕರನನ್ನು ಕಾಳಗದಲ್ಲಿ ಸೋಲಿಸಿ ಅವನನ್ನು ವೀರಶೈವನನ್ನು ಮಾಡಿದ್ದು ಆಗಿನ ಜನರಿಗೆ ಬಹಳ ಮಹತ್ವದ್ದೆಂದು ತೋರಬಹುದು.

ವೀರಸಂಗಯ್ಯನ ಚರಿತ್ರೆಯನ್ನು ವಿವರಿಸುವ ಚೌಪದಗಳೂ ಸಾಂಗತ್ಯಗಳೂ ವೀರಶೈವ ವಾಙ್ಮಯದಲ್ಲಿ ಅನೇಕ ಇರುತ್ತವೆ. ಬೀದರ, ಬೇದರ, ಬಿದರೂರು, ಬಿದಿರಿ, ಬಿದುರುಕೋಟಿ, ಬಿದುರಕೊಪ್ಪೆ ಇವೆಲ್ಲವೂ ಪರ್ಯಾಯ ಶಬ್ದಗಳಿರುತ್ತವೆ.

ವೀರಸಂಗಯ್ಯನು ಕೋವೂರು ಬ್ರಹ್ಮಯ್ಯನಕಿಂತಲು ಸ್ವಲ್ಪಕಾಲ ಹಿಂದಲಿನವನಾಗಿರಬೇಕು. ಆದರೆ ಬಸವೇಶ್ವರನಕಿಂತಲೂ ಈಚಿನವನೆಂದು ಅವನ ಚರಿತ್ರೆಯಿಂದ ತೋರುತ್ತದೆ. ಅವನ ಹೆಸರು ಗಣಸಹಸ್ರದಲ್ಲಿ ಬಂದಿದೆ.

ಮುಸುಡಿಯ ಚೌಡಯ್ಯ.

ಉತ್ತರ ಕರ್ನಾಟಕದಲ್ಲಿ 'ಮುಸುಡಿ' ಎಂಬ ಗ್ರಾಮವಿರುತ್ತದೆ. ಅಲ್ಲಿ ಚೌಡಯ್ಯನೆಂಬ ಶಿವಶರಣನು ವಾಸಮಾಡುತ್ತಿದ್ದನು. ಅವನು ಸ್ಥಿರ ಬುದ್ಧಿಯುಳ್ಳವನು, ಗ್ರಾಮದ ಅಧಿಪತಿಯು, ಗಣಾಚಾರವುಳ್ಳವನು. ಅವನು ಶಿವಾನುಭವದ ನಿತ್ಯನೇಮಗಳನ್ನು ತಪ್ಪದೆ ಪಾಲಿಸುವನು. ಅವುಗಳಲ್ಲಿ ಅವನು 'ಶಿವಶರಣು' 'ಶರಣುಶರಣಾರ್ಥಿ' ಎಂಬ ನುಡಿಗಳನ್ನು ನುಡಿಯುತ್ತ ಜನರನ್ನು ವಂದಿಸುವದನ್ನೇ ತನ್ನ ಮುಖ್ಯ ನೇಮವನ್ನಾಗಿಟ್ಟುಕೊಂಡಿದ್ದನು. ಇದೇ ಅವನ ಶಿವಾನುಭವದ ನಡೆಯಾಗಿತ್ತು.

ಮಹಾಕವಿಯಾದ ಹರಿಹರದೇವನು ಅವನ ಈ ಆಚರಣೆಯನ್ನು ವರ್ಣಿಸಿರುವದು ಹೇಗೆಂದರೆ:— ಚೌಡಯ್ಯನು ಕನಸಿನಲ್ಲಿ ಮನಸಿನಲ್ಲಿ

ಯಾವಾಗಲೂ ಶರಣಾರ್ಥಿ ಎಂದೆನ್ನುವನು. ನೆನಹಿನಲ್ಲಿ ನಿಷ್ಠೆಯಲ್ಲಿ ಶರಣಾರ್ಥಿ, ನಡೆಯಲ್ಲಿ ನುಡಿವಲ್ಲಿ ಶರಣಾರ್ಥಿ, ಕೊಡುವಲ್ಲಿ ಕೊಂಬಲ್ಲಿ ಶರಣಾರ್ಥಿ, ಕಂಡರೆ ಶರಣು, ಕಾಣದಿದ್ದರೆ ಶರಣು, ಸುಖವೆನಿಸಿದರೆ ಶರಣು, ದುಃಖವೆನಿಸಿದರೆ ಶರಣು, ಹೀಗೆ ಶರಣು ಶರಣಾರ್ಥಿ ಎಂದೆನ್ನುವನು. ಹೀಗೆ ಅವನು ಜನರಿಗೋಸ್ಕರ ಪ್ರೇಮಭಾವ, ಕೃತಜ್ಞತಾಭಾವವನ್ನು ವಹಿಸಿ ಎಲ್ಲರೊಡನೆ ಕಿಂಕರತ್ವದಿಂದ ನಡೆಯುವನು.

ಹೀಗೆ ಶರಣುಭಾವದಿಂದ ಎಲ್ಲರೊಡನೆ ವರ್ತಿಸುವದು ಹಗುರಾದುದಲ್ಲ. ಅದು ಶಿವಶರಣರ ಉಚ್ಚನಡೆಯಾಗಿರುತ್ತದೆ. ಇದು ಶ್ರೇಷ್ಠ ಶಿವಾನುಭವಿಗೆ ಸಾಧ್ಯವು. ಯಾವನು ಪೂರ್ಣವಾಗಿ ಅಹಂಕಾರವನ್ನು ಅಳಿದಿರುವನೋ ಅವನು ಮಾತ್ರ ಶರಣುಭಾವದಿಂದ ಶರಣೆಂದೆನ್ನುವನು. ಅವನು ಎಲ್ಲರನ್ನು ತನ್ನಂತೆ ಭಾವಿಸುತ್ತಾನೆ. ದಯಾಧರ್ಮವುಳ್ಳವನಾಗಿರುತ್ತಾನೆ. ಪ್ರಾಣಿಗಳೆಲ್ಲವನ್ನು ತನ್ನಂತೆ ನೋಡುತ್ತಾನೆ. ಶುದ್ಧ ಮನಸ್ಸುಳ್ಳವನು ಅವನು ಯಾರನ್ನೂ ದ್ವೇಷಿಸನು. ಎಲ್ಲರ ಕೂಡ ಕಿಂಕರತ್ವದಿಂದ ನಡೆದು, ಯಾವಾಗಲೂ 'ಶರಣು' 'ಶರಣು' ಎಂದು ನಮಸ್ಕರಿಸುತ್ತಾನೆ. ಈ ಬಗೆಯ ಗುಣವುಳ್ಳವನೇ ನಿಜವಾದ ಶರಣನು. ಇವನಲ್ಲಿ ಅಲೌಕಿಕ ಶಕ್ತಿಯು ತಲೆದೋರುತ್ತದೆ. ಇಂಥ ಶಕ್ತಿಯು ಚೌಡಯ್ಯನಲ್ಲಿ ಉತ್ಪನ್ನವಾಗಿತ್ತು.

ಮುಸುಡಿಯ ಚೌಡಯ್ಯನು ನಡೆದ ಈ ಆಚರಣೆಯು ಬಸವೇಶ್ವರನದಾಗಿದೆ. ಬಸವನು ಅಹಂಕಾರವನ್ನು ನೀಗಿದವನು. ಎಲ್ಲರೊಡನೆ ಸೇವಕನಾಗಿ ಆಚರಿಸುವವನು. ಆದ್ದರಿಂದ ಪಂಚಪರುಷಗಳು ಅವನಿಗೆ ದೊರೆಕೊಂಡಿದ್ದವು. ಹಾಗೆಯೇ ಚೌಡಯ್ಯನಿಗೂ ಅವು ದೊರೆಕೊಂಡಿದ್ದವು.

ಹೀಗೆ ಆಚರಿಸುವವನು ಉಚ್ಚರಿಸುವ ಪಂಚಾಕ್ಷರೀ ಮಂತ್ರದಲ್ಲಿ ಒಂದು ಅದ್ಭುತಶಕ್ತಿಯು ನೆಲೆಗೊಂಡಿರುತ್ತದೆ. ಈ ಶಕ್ತಿಯು ಅವನ ಕರ್ಮೇಂದ್ರಿಯ ಜ್ಞಾನೇಂದ್ರಿಯಗಳಲ್ಲಿಯೂ ಮನೋವಾಕ್ಕಾಯ ಕರ್ಮಗಳಲ್ಲಿಯೂ ತುಂಬಿಕೊಂಡಿರುತ್ತದೆ. ಆದ್ದರಿಂದ ಅವನು ಮಂತ್ರಶರೀರಿಯಾಗಿರುತ್ತಾನೆ. ಆದರೆ ನಡೆ ಇಲ್ಲದೆ ಉಚ್ಚರಿಸಿದ ಮಂತ್ರದಲ್ಲಿ ಯಾವ ಶಕ್ತಿಯೂ ಇರಲಾರದು. ಅದು ಕೇವಲ ಶಬ್ದ ಮಾತ್ರ. ಅದು 'ಅರಳೆಯ ಮರದ ಉಲುಹು' ಎಂದು ಶಿವಶರಣರು ನುಡಿದಿದ್ದಾರೆ.

ಅನೇಕರು ಯೋಗಾಭ್ಯಾಸದಿಂದ ಪ್ರಬಲಸಾಮರ್ಥ್ಯವು ಪೊರೆ ಕೊಳ್ಳುವದೆಂದು ಭಾವಿಸುತ್ತಾರೆ. ಇದು ನಿಜವಿರಬಹುದು. ಆದರೆ ಶಿವಾನುಭವದ ಪ್ರಕಾರ ಇಂಥ ಸಾಮರ್ಥ್ಯವನ್ನು ಷಟ್‌ಸ್ಥಲಾಚರಣೆ ಮತ್ತು ಅಷ್ಟಾವರಣಗಳ ಮೂಲಕ ಭಕ್ತನು ತನ್ನಲ್ಲಿ ಉಂಟುಮಾಡಿ ಕೊಳ್ಳಬಹುದು.

ಹೀಗೆ ಚೌಡಯ್ಯನು ತನ್ನ ಗ್ರಾಮದಲ್ಲಿರುವಾಗ ಕಲ್ಯಾಣಪಟ್ಟಣದಲ್ಲಿ ಬಸವೇಶ್ವರ ಮೊದಲಾದ ಪ್ರಮಥರು ಬಂದಿದ್ದಾರೆಂಬುವನ್ನು ಕೇಳಿ ಅವರನ್ನು ಕಾಣಬೇಕೆಂದು ಕೆಲವು ಜತೆಗಾರರನ್ನು ಕೂಡಿ ಕೊಂಡು ಅಲ್ಲಿಗೆ ಹೊರಟನು. ಅವರು ಮಾರ್ಗಕ್ರಮಣ ಮಾಡುತ್ತಿರುವಲ್ಲಿ, ಅವರಲ್ಲೊಬ್ಬನು ದಾರಿಯಲ್ಲಿ ಒಂದು ಇಟ್ಟಯ ಗಿಡದಲ್ಲಿ ಸುಂದರವಾದ ಹಣ್ಣುಗಳಿರುವದನ್ನು ಕಂಡು ಅವುಗಳನ್ನು ತಿನ್ನಬೇಕೆಂದು ಬಯಸಿದನು. ಆ ಹಣ್ಣುಗಳು ಅತ್ಯಂತ ಕಹಿಯಾದವುಗಳು. ವಿಷವಾಗಿಯೂ ಅವು ಪರಿಣಮಿಸುತ್ತವೆ. ಆದರೆ ಜನರನ್ನು ಸಂತೋಷಪಡಿಸುವದೇ ಬ್ರಹ್ಮಯ್ಯನ ನಡೆಯಾಗಿತ್ತು. ಆದ್ದರಿಂದ ಅವನು ಶಿವ ಭಾವದಿಂದ ಆ ಹಣ್ಣುಗಳನ್ನು ನೋಡಲು, ಅವು ಮಧುರ ಫಲಗಳಾದವು. ಅವುಗಳನ್ನು ಎಲ್ಲರೂ ತಿಂದು ರುಚಿಸಿ ಆನಂದಪಟ್ಟು ಮುಂದೆ ತೆರಳಿದರು.

ಅವರು ಕಲ್ಯಾಣಕ್ಕೆ ಹೋದ ಬಳಿಕ ಚೌಡಯ್ಯನು ಬಸವೇಶ್ವರನನ್ನು ಕಾಣುವವನಾದನು. ಬಸವೇಶ್ವರನು ಈ ಮೊದಲೆ ಅತನ ಕೀರ್ತಿ ವಾರ್ತೆಯನ್ನು ಕೇಳಿದವನಾಗಿದ್ದನು. ಆದ್ದರಿಂದ ಅವನು ಅವನನ್ನು ಬಹಳ ಆದರಿಸುವವನಾದನು-

ಮುಸುಡಿಯ ಚೌಡಯ್ಯನು ಕಲ್ಯಾಣ ಪಟ್ಟಣದಲ್ಲಿರುವಾಗ ದಿನಾಲು ಸರೋವರಕ್ಕೆ ಹೋಗಿ ಅಲ್ಲಿ ತನ್ನ ಇಷ್ಟಲಿಂಗದ ಪೂಜಾದಿಕಾರ್ಯಗಳನ್ನು ನೆರವೇರಿಸಿ ತನ್ನ ಮನೆಗೆ ಬಂದು ಎಲ್ಲರಲ್ಲಿ ಶಿವಭಾವವನ್ನು ತಳೆದವನಾಗಿ ಎಲ್ಲರಿಗೂ 'ಶರಣು' 'ಶರಣು' ಎಂದೆನ್ನುತ್ತ ಶರಣರ ಸೇವೆಯೇ ತನ್ನ ಕಾಯಕವನ್ನಾಗಿಟ್ಟುಕೊಂಡು ಕಾಲಕಳೆಯುತ್ತಿದನು.

ಹೀಗಿರುವಲ್ಲಿ ಒಂದು ದಿವಸ ಚೌಡಯ್ಯನು ಸರೋವರದಲ್ಲಿ ಸ್ನಾನವನ್ನು ಮಾಡಿ ಅಗ್ಗವಣಿಯನ್ನೂ ಹೂವಿನ ಕರಂಡಿಗೆಯನ್ನೂ

ಕೈಯಲ್ಲಿ ತೆಗೆದುಕೊಂಡು ಪಟ್ಟಣದ ಬೀದಿಯಿಂದ ಬರುತ್ತ ಇರುವಲ್ಲಿ ತನ್ನ ಇದಿರಿಗೆ ಭಕ್ತರು ಒಂದು ಮೃತದೇಹವನ್ನು ವಿಮಾನದಲ್ಲಿರಿಸಿ ಕೊಂಡು ರುದ್ರಭೂಮಿಗೆ ಹೊರಟಿರುವದನ್ನು ಕಂಡನು. ಆ ಮೃತದೇಹದ ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ, ಲಿಂಗದ ಕರಡಿಗೆ ಇರುವದನ್ನು ಕಂಡು, ಇವನೊಬ್ಬ ಶ್ರೇಷ್ಠಭಕ್ತನು, ಇವನನ್ನು ಭಕ್ತ ಜನರು ಅಟ್ಟಹಾಸದಿಂದ ಎಲ್ಲಿಯೋ ಕರೆದುಕೊಂಡು ಹೋಗುತ್ತಿದ್ದಾರೆ, ಎಂದು ಮುಗ್ಧಭಾವದಿಂದ ತಿಳಿದುಕೊಂಡು ಆ ದೇಹಕ್ಕೋಸ್ಕರ ಭಕ್ತಿಭಾವವು ಭವನಾಗಿ ಅದಕ್ಕೆ ಕೈಮುಗಿದು— ಶರಣಾರ್ಥಿ ಶರಣಾರ್ಥಿ, ದೇವ ಶರಣು ಶರಣು, ಗಿರಿಜಾವರನೇ ಶರಣು ಶರಣು, ನನಗೆ ಕರುಣಿಸು, ಎಂದು ಅತಿ ವಿನಮ್ರಭಾವದಿಂದ ಹೇಳಿಕೊಳ್ಳುತ್ತಿದನು. ನೆರೆದ ಭಕ್ತರು ಅವನಿಗೆ—ನೀನು ಇಲ್ಲಿರಬೇಡ, ನಿನ್ನ ಪೂಜಾಕಾರ್ಯಕ್ಕೆ ಹೋಗಿಬಿಡು, ಎಂದು ಎಷ್ಟು ಹೇಳಿದರೂ ಅವನು ಕೇಳದೆ—ಈ ಶಿವಭಕ್ತನು ವಿಮಾನದಿಂದ ಕೆಳಗಿಳಿಯಲಿ, ಅವನಿಗೆ ನನ್ನ ನಮಸ್ಕಾರವನ್ನು ಮಾಡುತ್ತೇನೆ, ಅವನಿಗೆ ನಮಸ್ಕರಿಸದ ಹೊರ್ತು ನಾನು ಇಲ್ಲಿಂದ ಅಲುಗಾಡುವದಿಲ್ಲ, ಎಂದು ನುಡಿದು ವಿಮಾನದ ಇದಿರಿಗೆ ನಿಂತುಬಿಟ್ಟನು. ಅದನ್ನು ಆಲಿಸಿದ ಭಕ್ತರು ನೋಡಿ ಬೆರಗಾದರು. ಭಕ್ತರಿಗೋಸ್ಕರ ಅವನಲ್ಲಿ ನೆಲೆಗೊಂಡಿದ್ದ ಇಂಥ ಭಕ್ತಿಯನ್ನು ನೋಡಿ ವಿಸ್ಮಿತರಾದರು. ಆಗ ಅವನ ದೃಢ ಭಾವವನ್ನು ಪರಮಾತ್ಮನು ತಿಳಿದವನಾದ್ದರಿಂದ ಅವನ ಇಚ್ಛೆಯನ್ನು ನಾನು ಪೂರೈಸಬೇಕು, ಇಲ್ಲದಿದ್ದರೆ ಅನಾಹುತವಾಗಬಹುದು, ಎಂದು ತಿಳಿದು ಆ ಮೃತದೇಹದಲ್ಲಿ ಜೀವಕಳೆಯನ್ನು ಅವನು ತುಂಬಿದನು. ಆಗ ಆ ದೇಹದಲ್ಲಿ ಪ್ರಾಣವು ಬಂದು ಆ ದೇಹವು ಕೆಳಗಿಳಿಯಲು ಚೌಡಯ್ಯನು ಅದರ ಪಾದಕ್ಕೆರಗಿದನು. ಆಗ ಜನರು ಚೌಡಯ್ಯನ ನೇಮವೇ ಜಗತ್ತಿನಲ್ಲಿ ನಿಜವಾದುದು, ಅದು ಶ್ರೇಷ್ಠವಾದುದು ಎಂದು ಅವನನ್ನು ಹೊಗಳಹತ್ತಿದರು. ಆ ಮೇಲೆ ಚೌಡಯ್ಯನು ಮುಂದೆ ಹೊರಟುಹೋಗಲು ಆ ಮೃತದೇಹವು ಮೊದಲಿನಂತಾಗಲು ಭಕ್ತಜನರು ಮೆರವಣಿಗೆಯೊಂದಿಗೆ ಮುಂದಕ್ಕೆ ಹೋಗುವವರಾದರು.

ಮತ್ತೊಂದು ದಿನ ಚೌಡಯ್ಯನು ಅಗ್ಗವಣಿಯನ್ನು ಮತ್ತು ಹೊಗಳನ್ನು ತೆಗೆದುಕೊಂಡು ಮಾರ್ಗದಲ್ಲಿ ಬರುತ್ತಿರಲು ಇದಿರಿಗೆ ಒಂದು ವೃಷಭವು ಸತ್ತು ಬಿದ್ದಿದ್ದನ್ನು ಕಂಡನು. ಆಗ ಇದು ಬಸವನೆಂಬ

ಭಾವನೆಯು ಅವನಲ್ಲಿ ಉಂಟಾಗಿ ಅತ್ಯಂತ ಭಕ್ತಿಯಿಂದ ಅದಕ್ಕೆ-ಬಸ
ವನ ಶರೀರಕ್ಕೆ ಎಂದಾದರೂ ನೋವುಂಟೇ, ಏಳೇಳೆಂದು ನುಡಿಯಲು
ಆ ವೃಷಭವು ಎದ್ದು ನಿಂತಿತು. ಶರಣುಭಾವವುಳ್ಳವನು ದಯಾರ್ದ್ರ
ಹೃದಯನು. ಇಂಥವನಲ್ಲಿ ಒಂದು ಅಲೌಕಿಕ ಶಕ್ತಿಯು ತಾನಾಗಿಯೇ
ಉಂಟಾಗುತ್ತ ಜನರು ಅವನನ್ನು ಹೊಗಳಹತ್ತಿದರು.

ಹೀಗೆ ಚೌಡಯ್ಯನು ಕೆಲವು ದಿನ ಕಲ್ಯಾಣದಲ್ಲಿರುತ್ತಿರಲು, ಅವನ
ಆರಾಧ್ಯ ಸಂತತಿಯವರು ಪಾರಗಾವಿ ಎಂಬ ಪುರದಲ್ಲಿದ್ದು, ಅವರು
ತಮ್ಮಲನ್ನಕ್ಕೆ ಚೌಡಯ್ಯನನ್ನು ಕರೆಯಲಿಕ್ಕೆ ಕಲ್ಯಾಣಕ್ಕೆ ಬಂದರು.
ಆಗ ಚೌಡಯ್ಯನು ಬಸವೇಶ್ವರನ ಅಪ್ಪಣೆಯನ್ನು ಪಡೆದ-ಕೊಂಡು ಅವ
ರೊಡನೆ ಆ ಊರಿಗೆ ಹೊರಟನು ದಾರಿಯಲ್ಲಿ ಭೀಮರಥಿ (ಭೀಮಾ)
ನದಿಯು ಹತ್ತಿತು. ಆಗ ಅದು ಉಕ್ಕಿ ಹರಿಯುತ್ತಿತ್ತು. ಆದರೆ ಅಲ್ಲಿಯೇ
ತಡೆದು ನಿಂತರೆ ಲಗ್ನದ ವೇಳೆಯು ತಪ್ಪುವದೆಂದು ಚೌಡಯ್ಯನಿಗೆ
ತೋರಿಬರಲು, ಅವನು ಹಿಂದಿನ ಶಿವಶರಣರನ್ನು ನೆನೆಯುತ್ತ ಭೀಮೆಗೆ-
ನೀನು ಗಜೇಶ ಮುಸಣಯ್ಯ ಮೊದಲಾದವರಿಗೆ ದಾರಿಯನ್ನು ಕೊಟ್ಟೆ.
ನನಗೂ ಈಗ ದಾರಿಯನ್ನು ಕೊಡು, ಎಂದು ನುಡಿಯುತ್ತ ನದಿಯನ್ನು
ಪ್ರವೇಶಿಸಿದನು. ಆಗ ಅದು ಇಬ್ಭಾಗವಾಗಿ ಅವನಿಗೆ ದಾರಿಯನ್ನು
ಕೊಟ್ಟಿತು. ಆ ಮೇಲೆ ಅವನು ಪಾರಗಾವಿಗೆ ಹೋಗಿ ತನ್ನ ಆಪ್ತರಾದ
ಆರಾಧ್ಯರಲ್ಲಿ ಮದುವೆಯನ್ನು ತೀರಿಸಿಕೊಂಡು, ಮರಳಿ ಕಲ್ಯಾಣಕ್ಕೆ
ಬಂದು ಅಲ್ಲೆಯೇ ಇರಹತ್ತಿದನು.

ಹೀಗಿರಲು ಕೆಲವೊಂದು ದಿನ ಒಬ್ಬ ಶೂದ್ರನ ಮಗಳು ಚೌಡಯ್ಯನ
ಕೀರ್ತಿಯನ್ನು ಕೇಳಿ ಅವನನ್ನು ಕಂಡು ಅವನಿಂದ ಹರಿಕೆಯನ್ನು ಇಸಿದು
ಕೊಂಡು ಮನೆಯಲ್ಲಿರಲು ಮರುದಿನವೇ ಅವಳು ಆವುದೋ ಒಂದು
ಕಾರಣದಿಂದ ಮೃತಪಟ್ಟಳು. ಆಗ ಅವಳ ತಾಯಿತಂದೆಗಳು ಅವಳ
ಮೃತದೇಹವನ್ನು ಚೌಡಯ್ಯನಲ್ಲಿಗೆ ತಂದು ಅತ್ಯಂತ ದುಃಖದಿಂದ
ಅವನಲ್ಲಿ ಮೊರೆಯಿಟ್ಟರು. ಅವರನ್ನು ನೋಡಿ ಅವನಲ್ಲಿ ದಯಾಭಾವವು
ಉಂಟಾಗಿ ಅವಳನ್ನು ದಿಟ್ಟಿಸಿ ತ್ತ—ಮಗಳೇ ಏಳೇಳೆಂದು ನುಡಿಯಲು,
ಅವಳು ಎದ್ದು ಕುಳಿತಳು. ಆಗ ಅವಳು ತನಗೆ ವೀರಶೈವ ದೀಕ್ಷೆಯನ್ನು
ಕೊಡಲು ಅವನಿಗೆ ಕೇಳಿಕೊಳ್ಳಲು, ಚೌಡಯ್ಯನು ಅವಳಿಗೆ ಲಿಂಗಧಾರ
ಣವನ್ನು ಮಾಡಿದನು.

ಚೌಡಯ್ಯನು ತನ್ನಲ್ಲಿ ಉಂಟಾದ ಈ ಶರಣುಭಾವದ ಆಚರ
ಣೆಯ ಮೂಲಕ ಅವನಿಂದ ಅಗಾಧವಾದ ಮಹತ್ವಗಳು ಆಗಿಂದಾಗ್ಗೆ
ಆಗಹತ್ತಿದವು. ಇದರಿಂದ ಕಲ್ಯಾಣ ಪಟ್ಟಣದಲ್ಲಿ ಅವನ ಕೀರ್ತಿಯು
ಜನರಲ್ಲೆಲ್ಲ ಬಹಳ ಹಬ್ಬಿತು. ಇದನ್ನು ಪರವಾದಿಗಳು ಕೇಳಿ ಸೈರಿಸ
ಲಾರದಾದರು. ಅವರು ಅವನ ವಿಷಯವಾಗಿ ಮತ್ಸರ ಬುದ್ಧಿಯನ್ನು
ತಾಳಿ ಒಂದು ಕುಹಕವನ್ನು ನೆನೆದು ಗೋಣಿಯಲ್ಲಿ ಪುರುಷರೂಪದ
ಒಂದು ಕೃತ್ರಿಮ ಪ್ರತಿಮೆಯನ್ನು ಸಿದ್ಧಪಡಿಸಿ, ಮಿನುಗುವ ರುದ್ರಾಕ್ಷಿ
ವಿಭೂತಿಗಳನ್ನು ಅದರ ಹಸ್ತಕಂಠ ಮೊದಲಾದ ಸ್ಥಾನಗಳಲ್ಲಿಟ್ಟು, ಅದಕ್ಕೆ
ಲಿಂಗವನ್ನೊಂದು ಅಳವಡಿಸಿ ಆ ಗೋಣಿಯನ್ನ ಮನುಷ್ಯನಂತೆ ಹೊಲಿದು,
ಊರ ಹೊರಗೆ ಇದ್ದ ಒಂದು ಹಾಳು ದೇಗುಲದಲ್ಲಿ ಇಟ್ಟರು. ಆಮೇಲೆ
ಅವರು ಚೌಡಯ್ಯನಿದ್ದ ಕೇರಿಯಲ್ಲಿ ಬಂದು—ಅವನೋ ಒಬ್ಬ ಭಕ್ತನು
ಊರ ಹೊರಗೆ ಸತ್ತುಬಿದ್ದಿದ್ದಾನೆ. ಅವನ ಹೆಣವು ಕೊಳೆತು ನಾರು
ತ್ತಿದೆ. ಶರೀರದ ಗುರುತು ಸಹ ಸಿಕ್ಕದಂತಾಗಿದೆ. ಅದನ್ನು ಎತ್ತಿ
ಕೊಂಡು ಸಮಾಧಿಯಲ್ಲಿರಿಸಿರಿ ಎಂದು ಕೂಗುತ್ತ ಬರಲು ಚೌಡಯ್ಯ
ರಾಯನು ಅದನ್ನು ಕೇಳಿ ದೇವಾಲಯಕ್ಕೆ ಹೋಗಿ ನೋಡಲು ಅಲ್ಲಿ
ಒಂದು ವಿದ್ರೂಪವಾದ ಶರೀರವು ಬಿದ್ದುದನ್ನು ಕಂಡನು. ಆಗ ಅದ
ಕ್ಕೋಸ್ಕರ ಅವನು ಕನಿಕರ ಪಟ್ಟು ಶಿವಭಾವದಿಂದ ಶಿವನ ಹೆಸರನ್ನು
ತೆಗೆದುಕೊಂಡು ಅದಕ್ಕೆ ಏಳೇಳೆಂದು ಕರೆಯಲು ಒಳಗಿದ್ದ ಪುರುಷಾ
ಕಾರದಲ್ಲಿ ಪ್ರಾಣವು ತುಂಬಿ ಬಂದು ಅದು ಜಂಗಮರೂಪದಿಂದ
ಎದ್ದು ನಿಂತಿತು. ಪರವಾದಿಗಳು ಅದನ್ನು ನೋಡಿ ಅಂಜಿ ಓಡಿಹೋ
ಗಹತ್ತಿದರು. ಆದರೆ ಚೌಡಯ್ಯನು ಅವರಿಗೆ ಅಭಯವನ್ನಿತ್ತು ಅವ
ರನ್ನು ಸಮಾಧಾನಪಡಿಸಿದನು.

ಹೀಗೆ ಮುಸುಡಿಯ ಚೌಡಯ್ಯನು ತನ್ನ 'ಶರಣು ಶರಣಾರ್ಥಿ'
ಎಂಬ ನಡೆಯಿಂದ ಅದ್ಭುತ ಸಾಮರ್ಥ್ಯವನ್ನು ಹೊಂದಿದವನಾಗಿ ಬಸ
ವಾದಿ ಪ್ರಮಥರ ನೆರೆಯಲ್ಲಿ ಕಲ್ಯಾಣದಲ್ಲಿ ವಾಸಿಸುತ್ತ ಅಲ್ಲಿಯೇ ಸಮಾ
ಧಿಯನ್ನು ಹೊಂದಿದನು.

ಮುಸುಡಿಯ ಚೌಡಯ್ಯನು ಬಸವೇಶ್ವರನ ಸಮಕಾಲೀನನಾಗಿ
ದ್ದಾನೆ. ಅವನ ಹೆಸರು ಗಣಸಹಸ್ರದಲ್ಲಿ ಬಂದಿದೆ. ಅವನು ಆರಾಧ್ಯ

ಕುಲದವನೆಂಬುದು ಅವನ ಚರಿತ್ರೆಯಿಂದ ತಿಳಿದುಬರುತ್ತದೆ. ಆದರೆ ಅವನು ಇದ್ದ ಮುಸುಡಿ ಗ್ರಾಮವು ಎಲ್ಲಿದೆ ಎಂಬುದು ನಮಗೆ ಗೊತ್ತಾಗುವದಿಲ್ಲ. ಹರಿಹರ ಕವಿಯು ಅವನು ಉತ್ತರ ದೇಶದವನೆಂದು ಹೇಳಿದ್ದಾನೆ. ಅವನು ಕಲ್ಯಾಣದಲ್ಲಿ ಬಸವೇಶ್ವರನ ಸನ್ನಿಧಿಯಲ್ಲಿದ್ದು ಲಗ್ನ ಕಾರ್ಯಕ್ಕೋಸ್ಕರ ಭೀಮಾನದಿಯನ್ನು ದಾಟಿ ಹೋದದ್ದರಿಂದ ಅವನೂ ಅವನ ಆಪ್ತರೂ ಭೀಮಾ ಕೃಷ್ಣಾ ನದಿಗಳ ಮಧ್ಯ ಪ್ರದೇಶದಲ್ಲಿಯ ಒಂದು ಗ್ರಾಮದವರಾಗಿರಬಹುದು. ಇದರ ಪಶ್ಚಿಮ ಭಾಗವು ಮಂಗಳವಾಡ ಅಥವಾ ತರ್ದವಾಡಿ ನಾಡು ಮತ್ತು ಪೂರ್ವ ಭಾಗವು ಈಗಿನ ಸುರಪುರವಿದ್ದ ಪ್ರದೇಶವು. ಇಲ್ಲಿ ಪಾರಗಾವಿ ಮತ್ತು ಮುಸುಡಿ ಎಂಬ ಹೆಸರಿನ ಗ್ರಾಮಗಳು ಕಂಡುಬರುವದಿಲ್ಲ. ಆದರೆ ಮಸೂತಿ ಎಂಬ ಹೆಸರಿನ ಗ್ರಾಮವು ಬಾಗೇವಾಡಿಯಿಂದ ಪಶ್ಚಿಮಕ್ಕೆ ೧೬ ಮೈಲುಗಳ ಮೇಲೆ ಮತ್ತು ಇದೇ ಹೆಸರಿನ ಇನ್ನೊಂದು ಗ್ರಾಮವು ಮುದ್ದೇಬಿಹಾಳದಿಂದ ನೈಋತ್ಯಕ್ಕೆ ೧೨ ಮೈಲುಗಳ ಮೇಲೆ ಇವೆ. ಇವುಗಳಲ್ಲಿ ಮುದ್ದೇಬಿಹಾಳ ತಾಲೂಕಿನಲ್ಲಿಯ ಗ್ರಾಮದಲ್ಲಿ ಪುರಾತನ ಅವಶೇಷಗಳಿವೆ. ಆದರೆ ಇವು ಮುಸುಡಿ ಗ್ರಾಮವೋ ಹೇಗೆಂಬುದು ಇನ್ನೂ ಸಂಶೋಧಿಸತಕ್ಕ ವಿಷಯವಾಗಿದೆ.

ಈ ಚರಿತ್ರೆಯಲ್ಲಿ ಚೌಡಯ್ಯನ ಅಗಾಧವಾದ ಮಹಿಮೆಗಳು ವರ್ಣಿಸಲ್ಪಟ್ಟಿದ್ದರೂ ಅದನ್ನು ಉಂಟುಮಾಡಲಿಕ್ಕೆ ಕಾರಣವಾದ ಅವನ ವೃತ್ತಿಯು ನಿಸ್ಸಂಶಯವಾಗಿ ಶ್ರೇಷ್ಠತರದ್ದಾಗಿದೆ. ವೀರಶೈವರು ಪತ್ರಗಳನ್ನು ಬರೆಯುವಲ್ಲಿ ಮತ್ತು ಅವರು ಪರಸ್ಪರ ಭೆಟ್ಟಿಯಾದಲ್ಲಿ 'ಶರಣು ಶರಣಾರ್ಥಿ' ಎಂಬ ಶಬ್ದಗಳನ್ನು ಉಚ್ಚರಿಸುವದುಂಟು. ಇದು ಅವರಲ್ಲಿ ಬಹಳ ವಾಡಿಕೆಯಾದದ್ದು. ಅದರ ಅರ್ಥವಾವುದು ಮತ್ತು ಅದರ ಮಹತ್ವವೆಷ್ಟಿದೆ ಎಂಬುದು ಮುಸುಡಿಯ ಚೌಡಯ್ಯನ ಚರಿತ್ರೆಯಿಂದ ತಿಳಿದುಬರುತ್ತದೆ. ವೀರಶೈವರು ಪುರಾತನ ಶಿವಶರಣರ ಈ ರೂಢಿಯನ್ನು ತಪ್ಪಿಸದೆ ಅವರು ಅದನ್ನು ಅನುಸರಿಸುವದಲ್ಲದೆ ಚೌಡಯ್ಯನ ಮನೋವೃತ್ತಿಯುಳ್ಳವರಾದಲ್ಲಿ ಅದು ಶಿವಾನುಭವದ ಶ್ರೇಷ್ಠ ನಡೆ ಎಂಬುದರಲ್ಲಿ ಏನೂ ಸಂದೇಹವಿರಲಾರದು.

ಬಿಬ್ಬಿ ಬಾಚಯ್ಯ.

ವಿಜಾಪುರ ಜಿಲ್ಲೆಯ ಸಿಂದಿಗಿ ತಾಲೂಕಿನ ಮೇರಿಯಿಂದ ಪೂರ್ವಕ್ಕೆ ೧೮ ಮೈಲುಗಳ ಮೇಲೆ ಗೊಬ್ಬೂರೆಂಬ ಗ್ರಾಮವಿರುತ್ತದೆ. ಅದು ಈಗ ಕಲಬುರ್ಗಿ ಜಿಲ್ಲೆಯಲ್ಲಿರುತ್ತದೆ. ಮೊದಲಿನ ಕಾಲದಲ್ಲಿ ಇದು ಬ್ರಾಹ್ಮಣರ ಒಂದು ಪ್ರಸಿದ್ಧ ಅಗ್ರಹಾರವಾಗಿತ್ತು. ಅಲ್ಲಿ ಅನೇಕ ವೇದಶಾಸ್ತ್ರ ಸಂಪನ್ನರೂ ವಿದ್ವಾಂಸರೂ ಆದ ಬ್ರಾಹ್ಮಣರು ವಾಸಮಾಡುತ್ತಿದ್ದರು. ಅವರಲ್ಲಿ ಆದಿತ್ಯದೇವನೆಂಬ ಭೂಸುರನು ಅಗ್ರಗಣ್ಯನಾಗಿದ್ದನು. ಹಾಗೆಯೇ ಅಲ್ಲಿ ಬಹುಜನ ಶಿವಾನುಭವಿಗಳೂ ವಾಸವಾಗಿದ್ದರು. ಅವರಲ್ಲಿ ಯಾವಾಗಲೂ ಶಿವಾನುಭವ ಗೋಷ್ಠಿಗಳು ನಡೆಯುತ್ತಿದ್ದವು. ಇದರಿಂದ ಪರಸ್ಥಳಗಳಿಂದ ಬರುವ ಜನಸ್ತೋಮವು ಅಲ್ಲಿ ಹೆಚ್ಚಾಗಿರುತ್ತಿತ್ತು.

ಆದಿತ್ಯದೇವನಿಗೆ ಬಿಬ್ಬಿಬಾಚಯ್ಯನೆಂಬ ಮಗನು ಹುಟ್ಟಿದನು. ಅವನು ಹುಟ್ಟಿದ ಬಳಿಕ ಅವನ ತಂದೆಯು ಅವನಿಗೆ ಬ್ರಾಹ್ಮಣ ಧರ್ಮದ ಪ್ರಕಾರ ಜಾತಕರ್ಮಗಳನ್ನು ಮಾಡಿಸಿದನು. ಸಕಾಲದಲ್ಲಿ ಯಜ್ಞೋಪವೀತವನ್ನು ಧಾರಣಮಾಡಿಸಿ ವಿಪ್ರರಿಗೆ ಉಚಿತವಾದ ವೇದ ಶಾಸ್ತ್ರ ಪುರಾಣೋಪನಿಷತ್ತುಗಳ ಜ್ಞಾನವನ್ನು ಅವನಿಗೆ ಮಾಡಿಕೊಟ್ಟನು.

ಬಿಬ್ಬಿಬಾಚಯ್ಯನು ಕುಶಾಗ್ರಬುದ್ಧಿಯುಳ್ಳವನು. ಅವನ ಅಧ್ಯಯನವು ನಡಿದ ಕಾಲದಲ್ಲಿ ಅವನು ಅನೇಕ ಶಿವಾನುಭವ ಶಾಸ್ತ್ರಗಳನ್ನು ಸಹ ಅವಲೋಕಿಸಿದನು. ಶಿವಪುರಾಣ ಶಿವಾಗಮಗಳನ್ನು ಅಭ್ಯಾಸ ಮಾಡಿದನು. ಆಗ ಅವನಿಗೆ ವಿಪ್ರಾಚಾರಕ್ಕಿಂತಲೂ ಶಿವಾಚಾರವೇ ಉತ್ತಮವಾದ ನಡೆ ಎಂದು ತೋರಿಬಂದಿತು. ಆಗ ಅವನು ಶಿವಭಕ್ತಿ ಸಾಧಕರ ಮೊರೆಹೊಕ್ಕು ಒಬ್ಬ ದೇಶಿಕನ ಕಯ್ಯಿಂದ ವೀರಶೈವೋಪದೇಶವನ್ನು ಹೊಂದಿದನು. ಈ ದೇಶಿಕನು ಅವನಿಗೆ ಲಿಂಗಾಂಗೋಪದೇಶವನ್ನೂ ಕರ್ಣಮಂತ್ರವನ್ನೂ ಹೇಳಿ ಅವನಿಗೆ ಇಷ್ಟಲಿಂಗವನ್ನು ಅಳವಡಿಸಿದನು.

ಶಿವಾನುಭವದಲ್ಲಿ ಅನೇಕ ಬಗೆಯ ಆಚಾರಗಳುಂಟು ಮತ್ತು ರೀತಿಗಳುಂಟು. ಸ್ಥಲಗಳು, ಸ್ಥಲಗಳಿಗನುಸರಿಸಿ ನೆಲೆಕಲೆಗಳು, ಕಾರ್ಯಕ್ರಮಗಳು, ದಾಸೋಹಗಳು, ಸಕೀಲಗಳು, ಶಿವಯೋಗ ಸಾಧನೆಗಳು

ಹೀಗೆ ಅದರಲ್ಲಿ ಅನೇಕ ವಿಧವಾಗಿವೆ. ಹಿಂದಿನ ಕಾಲದಲ್ಲಿ ಶಿವಶರ ಣರು ಇವುಗಳಲ್ಲಿ ಕೆಲವೊಂದನ್ನು ಕೈಕೊಂಡು, ನಿಷ್ಠಾಪೂರ್ಣರಾಗಿ ಅದನ್ನು ನಡಿಸುತ್ತ ಕೃತಾರ್ಥರಾದರು. ಇಷ್ಟೇ ಅಲ್ಲ, ಅವರು ಇತರರಿಗೂ ತಮ್ಮ ನೀತಿಯನ್ನು ಬೋಧಿಸಿ ಅವರನ್ನು ಸಹ ಶಿವಾನುಭವಿಗಳನ್ನಾಗಿ ಮಾಡಿದ್ದಾರೆ. ಆದ್ದರಿಂದ ಬಸವೇಶ್ವರನ ಕಾಲದಲ್ಲಿ ಎಲ್ಲಕಡೆಗೂ ವೀರಶೈವ ಧರ್ಮವು ಪ್ರಸಾರವಾಯಿತು.

ಶಿವಾನುಭವದ ಈ ಆಚಾರಗಳಲ್ಲಿ ಅರ್ಪಣ ಮತ್ತು ಪ್ರಸಾದ ಇವು ಗಳು ಬಿಬ್ಬಿ ಬಾಚಯ್ಯನ ಮನವನ್ನು ಬಹಳ ಆಕರ್ಷಿಸಿದವು. ಅವನು ಬ್ರಾಹ್ಮಣರ ಮಾರ್ಗವನ್ನು ಬಿಡಲಿಕ್ಕೆ ಇವುಗಳೇ ಅವನಿಗೆ ಕಾರಣವಾ ದವು. ಅವನಿಗೆ ಶಿವಶರಣರ ಪ್ರಸಾದ ಸೇವನೆಯೇ ಮಹತ್ವದ್ದೆಂದು ತೋರಿತು. ಆದ್ದರಿಂದ ಅವನು ಇದರ ಆಚರಣೆಯನ್ನು ತನ್ನ ಕಾಯಕ ವನ್ನಾಗಿ ಇಟ್ಟುಕೊಂಡನು.

ಈ ಕಾಯಕಕ್ಕೋಸ್ಕರ ಅವನು ಒಂದು ಬಂಡಿಯನ್ನು ಸಿದ್ಧಪಡಿಸಿ ಅದನ್ನು ಚನ್ನಾಗಿ ಶೃಂಗರಿಸಿ ಎರಡು ಬಲವಾದ ಎತ್ತುಗಳನ್ನು ಅಡಿ ಮಾಡಿ, ಅವುಗಳ ಕೊಂಬಿಗೆ ಚಾರಗಳನ್ನು ಕಟ್ಟಿ, ವೃಷಭಧ್ವಜವನ್ನು ಎತ್ತಿ ಹಿಡಿದು ತನ್ನ ಮತ್ತು ತನ್ನ ಸುತ್ತಲಿನ ಗ್ರಾಮಗಳಲ್ಲಿದ್ದ ಶಿವಶರ ಣರ ಮನೆಗಳಿಗೆ ಹೋಗಿ, ಅವರು ಕೊಟ್ಟ ಅರ್ಪಿತವನ್ನು ಬಂಡಿಯಲಿ ತುಂಬಿಕೊಂಡು ತನ್ನ ಮನೆಗೆ ಬರುವನು. ತಿರುಗಿ ಬಂದ ಬಳಿಕ ಗುರುಸೇವೆ, ಜಂಗಮಾರ್ಚನೆಗಳನ್ನು ಮಾಡುತ್ತ ತಾನು ತಂದಿದ್ದರಲ್ಲಿ ಪ್ರಸಾದದ ರೀತಿಯಿಂದ ಸೇವನೆಮಾಡಿ ಉಳಿದದ್ದನ್ನು ದಾಸೋಹ ಕಾರ್ಯಕ್ಕರ್ಪಿಸುವನು. ಹೀಗೆ ಮಾಡುವದನ್ನೇ ಅವನು ತನ್ನ ಕಾಯಕ ವನ್ನಾಗಿ ಇಟ್ಟುಕೊಂಡಿದ್ದನು.

ಈಗಿನ ಕಾಲದಲ್ಲಿ ವೀರಶೈವರಲ್ಲಿ ಇಲ್ಲಿ ಹೇಳಿದ ಅರ್ಪಣ, ಪ್ರಸಾದ, ಕಾಯಕ, ದಾಸೋಹ ಇವುಗಳಿಗೆ ವಿಪರೀತಾರ್ಥಗಳುಂಟಾ ಗಿರುತ್ತವೆ. ಶಿವಶರಣರ ಕಾಲದಲ್ಲಿ ಇವುಗಳಿಗೆ ವಿಶೇಷಾರ್ಥಗಳಿದ್ದವು. ಆದರೆ ಆ ವಿಚಾರಗಳು ಈಗ ತಪ್ಪಿ ಹೋಗಿವೆ.

ಶಿವಾನುಭವದ ಪ್ರಕಾರ ಗುರು ಅಥವಾ ಜಂಗಮನ ಕಾಲು ತೊ ಳೆದ ನೀರು, ಇಷ್ಟು ಮಾತ್ರಕ್ಕೆ ಪಾದೋದಕವಾಗಲಾರದು. ಅಷ್ಟ ಅಡಿ ಗೆಯನ್ನ ದೇವರ ಮುಂದಿಟ್ಟು ಅದನ್ನು ದೇವರಿಗೆ ತೋರಿಸಿದ ಮಾತ್ರಕ್ಕೆ ಅದು ಪ್ರಸಾದವಾಗಲಾರದು. ವೀರಶೈವರಲ್ಲಿ ಪಾದೋದಕ ಮತ್ತು ಪ್ರಸಾದ ಇವುಗಳ ವಿಚಾರಗಳು ಬಹಳ ಭಿನ್ನವಾಗಿರುತ್ತವೆ.

ಪ್ರಸಾದವನ್ನು ಹೊಂದುವವನು ಮೊದಲು ತನ್ನ ಇಷ್ಟಲಿಂಗವನ್ನು ಪೂಜಿಸಿ ತನ್ನಲ್ಲಿ ಲಿಂಗಚೈತನ್ಯವನ್ನು ಉಂಟು ಮಾಡಿಕೊಳ್ಳಬೇಕು. ಇಷ್ಟಲಿಂಗ ಪ್ರಾಣಲಿಂಗ ಮತ್ತು ಭಾವಲಿಂಗಗಳೆಂದು ತ್ರಿವಿಧಲಿಂಗಗ ಳಿದ್ದು ಅವುಗಳನ್ನು ಅನುಕ್ರಮವಾಗಿ ತನ್ನ ಸ್ಥೂಲ, ಸೂಕ್ಷ್ಮ, ಕಾರಣ ಶರೀ ರಗಳಲ್ಲಿ ಈ ಲಿಂಗಪೂಜೆಯ ದ್ವಾರಾ ಅವನು ಸಂಬಂಧಿಸಿಕೊಳ್ಳಬೇಕು.

ಈ ತ್ರಿಲಿಂಗಗಳು ಅವನಲ್ಲಿ ಸಂಬಂಧಿಸಿದ ಬಳಿಕ ಅವು ಅಲ್ಲಿ ಸ್ಥಿರವಾಗಿ ಉಳಿಯಬೇಕು. ಇದು ಗುರು ಲಿಂಗ ಜಂಗಮಗಳಿಂದ ಸಾಧ್ಯವು. ವೀರಶೈವರು ಜಂಗಮನನ್ನು ಆರಾಧಿಸಿ, ಪಡೆದುಕೊಳ್ಳುವದರ ಉದ್ದೇ ಶವು ಇದೇ ಇರುತ್ತದೆ. ಹೀಗೆ ಪಡೆದುಕೊಂಡಲ್ಲಿ ಗುರು ಲಿಂಗ ಜಂಗಮ ಗಳು ಉಂಟಾಗಿ ಅವನಿಗೆ ಸಾಮರಸ್ಯ ಸ್ಥಿತಿಯು ಪ್ರಾಪ್ತವಾಗುತ್ತದೆ.

ಈ ಎಲ್ಲ ಸಂಬಂಧಗಳು ಓಂಕಾರಯುಕ್ತ ಪಂಚಾಕ್ಷರೀ ಮಂತ್ರದ ಧ್ಯಾನದ ಮೂಲಕವೇ ಆಗುತ್ತವೆ.

ಜಂಗಮನನ್ನು ಈ ಪ್ರಕಾರ ಅರ್ಚಿಸಿ ಇಷ್ಟ ಪ್ರಾಣ ಭಾವಲಿಂಗಗ ಳನ್ನು ಹೀಗೆ ತನ್ನಲ್ಲಿ ಅಳವಡಿಸಿಕೊಂಡು ಲಿಂಗದಲ್ಲಿ ಬೆರೆಯಬೇಕು. ಇದು ಮಂತ್ರಯುಕ್ತ ಪಾದೋದಕದ ಮೂಲಕವೇ ಆಗುತ್ತದೆ.

ಇಂಥ ಪಾದೋದಕದ ಸೇವನೆಯಿಂದ ಶರೀರವು ಮಂತ್ರಮಯ ವಾಗುತ್ತದೆ.

ಹೀಗೆ ಪಾದೋದಕದಿಂದ ತನ್ನಲ್ಲಿ ತ್ರಿಲಿಂಗಗಳನ್ನು ಒಳಕೊಂಡು ಪ್ರಸಾದ ಗ್ರಹಣಮಾಡಬೇಕು. ಪ್ರಸಾದದ ಉದ್ದೇಶವು ತ್ರಿಲಿಂ ಗಗಳನ್ನು ತನ್ನಲ್ಲಿ ಮತ್ತಿಷ್ಟು ಬಲಪಡಿಸಿಕೊಳ್ಳುವದು ಇರುತ್ತದೆ.

ಪ್ರಸಾದದಲ್ಲಿ ಮಂತ್ರ ಮೂಲಕ ಆಹಾರ ಪದಾರ್ಥಗಳನ್ನು ತನ್ನ ಲ್ಲಿರುವ ಲಿಂಗಗಳಿಗೆ ಸಮರ್ಪಿಸಿ ಅವುಗಳನ್ನು ಗ್ರಹಿಸುವದು ಇರುತ್ತದೆ.

ಹೀಗೆ ಸಮರ್ಪಿಸಲ್ಪಟ್ಟ ಆಹಾರ ಪದಾರ್ಥಗಳು ಶರೀರದಲಿ ಹೋದ ಬಳಿಕ ಅವನಲ್ಲಿ ಅವು ರಸರೂಪವಾಗಿ ಶರೀರವನ್ನು ವ್ಯಾಪಿಸಲ್ಪ ಪಾದೋದಕದ ಮೂಲಕ ಆ ಮೊದಲು ಶರೀರದಲ್ಲಿದ್ದ ಮಂತ್ರ ಶಕ್ತಿಯು ಮತ್ತಿಷ್ಟು ದೃಢಪಡುತ್ತದೆ.

ಆದುದರಿಂದ ಪ್ರಸಾದವು ಪಾದೋದಕವಕಿಂತಲೂ ಸೂಕ್ಷ್ಮವಾದುದು ಮತ್ತು ಪರಿಣಾಮಕಾರಿಯು ಎಂದು ತಿಳಿಯಲ್ಪಟ್ಟಿದೆ.

ಈ ಕಾರಣಗಳಿಂದ ಪ್ರಸಾದದಲ್ಲಿ ಉಚ್ಛಿಷ್ಟ ಅಥವಾ ಎಂಜಲೆಂಬುದು ಇಲ್ಲ. ಅದು ಪವಿತ್ರವಾದುದು, ಶುದ್ಧವಾದುದು, ಅದು ತ್ರಿಲಿಂಗಗಳಿಗೆ ಅರ್ಪಿತವಾದುದು ಮತ್ತು ಮಂತ್ರಮಯವಾದುದು ಎಂಬ ವಿಚಾರಗಳು ಇದರಲ್ಲಿವೆ.

ಇಂಥ ಪ್ರಸಾದವನ್ನು ಸ್ವೀಕರಿಸುವಲ್ಲಿ ಜಾತಿಭೇದವಿರಲಾರದು. ಯಾವ ಜಾತಿಯವನಿದ್ದರೂ ಕೂಡ ಸಮಾನ ಭಾವದಿಂದ ಅವನೊಡನೆ ಇಂಥ ಪ್ರಸಾದವನ್ನು ಎಲ್ಲರೂ ಸ್ವೀಕರಿಸಬೇಕು. ಇಂಥ ಪ್ರಸಾದವನ್ನು ಸ್ವೀಕರಿಸುವಲ್ಲಿ ಉಚ್ಚ ನೀಚವೆಂಬ ಭಾವವಿಲ್ಲ. ಅದನ್ನು ತಳೆದಿದ್ದಾದರೆ ಅದು ಶ್ರೇಷ್ಠ ವಸ್ತುವಾದ ಮಂತ್ರದ ಅವಹೇಲನೆಯು. ಇಂಥ ವರ್ತನೆಯು ಮಂತ್ರ ಶರೀರಿಯಾದ ಲಿಂಗಾಂಗಿಯ ಆಚರಣೆಗೆ ಬಾಧಕವಾದದ್ದು.

ಪ್ರಸಾದದ ಈ ವಿಚಾರಗಳು ಬಿಬ್ಬಿ ಬಾಚಯ್ಯನನ್ನು ಪ್ರಸಾದಿಯ ಆಚರಣೆಗಳನ್ನು ಕೈಕೊಳ್ಳಲು ಪ್ರೇರೇಪಿಸಿದವು. ಅದರಂತೆ ಅವನು ತನ್ನ ಗ್ರಾಮದಲ್ಲಿ ಆಚರಿಸುತ್ತ ಬಂದನು.

ಹೀಗೆ ಕೆಲವು ದಿನಗಳಾದ ಬಳಿಕ ನೆರೆಯೂರಲ್ಲಿದ್ದ ಒಬ್ಬ ಹಿರಿಯ ಕುಲದ ಭಕ್ತನು (ಎಂದರೆ ಒಬ್ಬ ಹೊಲೆಯನು) ತನ್ನ ಮನೆಯಲ್ಲಿ ಒಂದು ಮಹತ್ತಾದ ಪರ್ವವನ್ನು ಮಾಡಿಸಿದನು. ಇದನ್ನು ಬಾಚಯ್ಯನು ಕೇಳಿ ಕೆಲವು ಜನ ಭಕ್ತ ಮಾಹೇಶ್ವರರನ್ನು ಕೂಡಿಕೊಂಡು ಆ ಗ್ರಾಮಕ್ಕೆ ಬಹು ಸಂಭ್ರಮದಿಂದ ಹೋದನು. ಅಲ್ಲಿಯ ಆ ಹೊಲೆಯ ಭಕ್ತನು ಅತ್ಯಂತ ಪ್ರಸಿದ್ಧನಾದ ಬಾಚಯ್ಯನು ತನ್ನ ಮನೆಗೆ ಬರುತ್ತಿರುವನೆಂಬುದನ್ನು ಕೇಳಿ ಆನಂದದಿಂದ ಅವನನ್ನು ಇದಿರ್ಗೊಂಡು ವೈಭವದಿಂದ ತನ್ನ ಮನೆಗೆ ಕರೆದುಕೊಂಡು ಬಂದನು. ಅಲ್ಲಿ ಗಣ ಪರ್ವವು ಬಹು ವಿಜೃಂಭಣೆಯಿಂದ ನಡೆದಿತ್ತು. ಅಲ್ಲಿ ಎಲ್ಲರೊಡನೆ

ಪಾದೋದಕ ಪ್ರಸಾದಗಳಾದವು. ನೆರೆದ ಭಕ್ತರೆಲ್ಲರೂ ಆ ಹಿರಿಯ ಭಕ್ತನೊಡನೆ ಪ್ರಸಾದವನ್ನು ಸ್ವೀಕರಿಸಿದರು. ಬಿಬ್ಬಿ ಬಾಚಯ್ಯನು ಈ ಗಣಪರ್ವವನ್ನು ತೀರಿಸಿದ ಬಳಿಕ ಆ ಹಿರಿಯ ಭಕ್ತನು ಕೊಟ್ಟ ಪ್ರಸಾದ ದಡಿಗೆಗಳನ್ನು ಹೆಡಿಗೆಗಳಲ್ಲಿ ತುಂಬಿಕೊಂಡು ತನ್ನ ಬಂಡಿಯ ಮೇಲೆ ಹೇರಿಕೊಂಡು ಅತ್ಯುತ್ಸವದಿಂದ ಅದನ್ನು ಗೊಬ್ಬೂರಕ್ಕೆ ತರುವವನಾದನು.

ಗ್ರಾಮದಲ್ಲಿದ್ದ ವಿಪ್ರರು ಬಾಚಯ್ಯನು ಹೀಗೆ ಒಬ್ಬ ಹೊಲೆಯನ ಮನೆಗೆ ಹೋಗಿ ಅಲ್ಲಿ ತಿಂದು ಅವನು ಮಾಡಿದ ಆಹಾರ ಪದಾರ್ಥಗಳನ್ನು ತರುತ್ತಿರುವನೆಂಬುದನ್ನು ಕೇಳಿ ಅವರೆಲ್ಲರೂ ಆಗುಸೆಯಲ್ಲಿ ಅವನನ್ನು ತರುಬಬೇಕೆಂದು ನೆರೆದರು. ಅಷ್ಟರಲ್ಲಿ ಬಿಬ್ಬಿ ಬಾಚಯ್ಯನು ಬಂಡಿ ಸಹಿತ ಅಲ್ಲಿಗೆಯೇ ಬಂದನು. ಆಗ ಬ್ರಾಹ್ಮಣರು ಅವನಿಗೆ—ನೀನು ಪಾಪಿಷ್ಠನು, ಕುಲಹೀನನು, ಹೊಲೆಯರ ಎಂಜಲವನ್ನು ತಿಂದಿರುವಿ. ನೀನು ನಮ್ಮ ಅಗ್ರಹಾರದಲ್ಲಿರಬೇಡ. ನೀನು ಪುರ ಪ್ರವೇಶ ಮಾಡದೆ ಇಲ್ಲಿಂದಲೇ ಹೊರಟುಹೋಗು ಎಂದು ನುಡಿದರು. ಅದಕ್ಕೆ ಬಾಚಯ್ಯನು—ಪ್ರಸಾದವು ಎಂಪಾದರೂ ಎಂಜಲೇ? ಪ್ರಸಾದದ ಮಹಿಮೆ ನಿಮಗೆ ಗೊತ್ತಿಲ್ಲ ಎಂದು ಅನ್ನಲು ಬ್ರಾಹ್ಮಣರು ಕೆರಳಿದವರಾಗಿ—ನಾವು ನಿನ್ನನ್ನು ಊರೊಳಗೆ ಬಿಡುವದಿಲ್ಲ ಎಂದು ಅಂದು ಪ್ರಸಾದವಿದ್ದ ಆ ಬಂಡಿಯನ್ನು ಮುತ್ತಿದರು. ಬಂಡಿಗೆ ಹೂಡಿದ್ದ ಎತ್ತುಗಳನ್ನು ಉಚ್ಚಿದರು. ಮತ್ತು ಅದರಲ್ಲಿದ್ದ ಪಾತ್ರೆಗಳ ಮೇಲಿನ ಮುಚ್ಚಳುಗಳನ್ನೆಲ್ಲ ಬಿಸಾಡಿ ಒಳಗಿದ್ದ ಆಹಾರ ಪದಾರ್ಥಗಳನ್ನೆಲ್ಲ ನೆಲಕ್ಕೆ ಚಲ್ಲಿಬಿಟ್ಟರು.

ಆದರೆ ಅವರು ಚಲ್ಲಿಕೊಟ್ಟ ಈ ಪ್ರಸಾದವು ಮಂತ್ರಪೂರಿತವಾದದ್ದು. ಅದು ಧಗದ್ಧಗನೆ ಉರಿಯಹತ್ತಿತು. ಆ ಉರಿಯು ಬಂಡಿಯನ್ನು ಸುತ್ತುವರಿಯಿತು. ಅದರಿಂದ ಆ ವಿಪ್ರರು ಅಲ್ಲಿಂದ ಕಾಲ್ಬೆಗೆದರು. ಇಷ್ಟೇ ಅಲ್ಲ ಅವರ ದೇಹದಲ್ಲೆಲ್ಲ ಉರುಪು ಹುಟ್ಟಿತು. ಆಗ ಅವರು 'ಅಯ್ಯೋ' 'ಅಯ್ಯೋ' ಎಂದು ಒರಲುತ್ತ ತಮ್ಮ ಮನೆಗಳ ಕಡೆಗೆ ಓಡಿ ಹೋದರು. ಆದರೆ ಅಲ್ಲಿ ಹೋಗಿ ನೋಡುತ್ತಾರೆಯೇ, ಆ ಮನೆಗಳೆಲ್ಲವೂ ಜ್ವಾಲೆಯಿಂದ ಉರಿಯಹತ್ತಿದ್ದವು. ಈ ಸ್ಥಿತಿಯಾದುದನ್ನು ನೋಡಿ ಬ್ರಾಹ್ಮಣರೆಲ್ಲರೂ ಅಂಜಿದರು. ಆಗ ಅವರು ತಿರುಗಿ ಬಿಬ್ಬಿ ಬಾಚಯ್ಯನಲ್ಲಿಗೆ ಬಂದು ಅವನಿಗೆ- ನಮ್ಮದು ಬಹಳ ತಪ್ಪಾಯಿತು. ಪ್ರಸಾದವು ಈ ರೀತಿಯುದೆಂದು ನಮಗೆ ತಿಳಿಯಲಿಲ್ಲ. ನಮ್ಮನ್ನು ಕಾಯಿ ಕಾಯಿ,

ಎಂದು ಸಾಷ್ಟಾಂಗವೆರಗಿದರು. ಆಗ ಬಾಚಯ್ಯನು ಅವರಿಗೆ ಅಭಯವನ್ನಿತ್ತು, ಶಿವಾನುಭವವನ್ನು ಬೋಧಿಸಿ ಪ್ರಸಾದದಲ್ಲಿ ಹೀಗೆ ಮಂತ್ರ ಶಕ್ತಿ ಇರುತ್ತದೆಂಬುದನ್ನು ತಿಳಿಸಿ ಹೇಳಿ ಅವರಿಗೆ ಲಿಂಗದೀಕ್ಷೆಯನ್ನು ಮಾಡಿದನು. ಹೀಗಾದ ಬಳಿಕ ಅವರ ದೇಹಕ್ಕೆ ಶಾಂತಿಯುಂಟಾಯಿತು.

ಆಗ ಆ ಬ್ರಾಹ್ಮಣರೂ ಈ ಬಿಬ್ಬಿ ಬಾಚಯ್ಯನನ್ನು ನಾವು ವಿರೋಧಿಸಿದ್ದು ಬಹಳ ತಪ್ಪಾಯಿತು. ಪ್ರಸಾದವೇನೆಂಬುದನ್ನು ನಾವು ಈಗ ತಿಳಿದೆವು. ಅದನ್ನು ಹೀಯಾಳಿಸಿ ನುಡಿಯುಬಾರದಾಗಿತ್ತು. ಜಾತಿಯಿಂದ ಹೊಲೆಯನಾದರೇನಾಯಿತು ? ಶಿವನನ್ನು ಅರ್ಚಿಸಿದಲ್ಲಿ ಅವನು ಸಹ ಶ್ರೇಷ್ಠ ಕುಲದವನಾಗುವನು. ಚನ್ನಯ್ಯ. ಮಾದಾರ ಧೂಳಯ್ಯ, ಇಂಥವರು ಶಿವನನ್ನು ಭಕ್ತಿಯಿಂದ ಪೂಜಿಸಿ ಕುಲಜರಾದರು, ಎಂಬುದನ್ನು ತಿಳಿದು ಅವರನ್ನು ಹೊಗಳುತ್ತ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಅವರು ತಮ್ಮ ಮನೆಗಳಿಗೆ ಹೋಗಿ ನೋಡುತ್ತಾರೆಯೇ, ಅವು ಮೊದಲಿನಂತೆಯೇ ಆಗಿದ್ದವು. ಹೀಗಾದುದು ಬಿಬ್ಬಿ ಬಾಚಯ್ಯನ ಮಹಿಮೆ ಎಂದು ಅವನನ್ನು ಹೊಗಳುವವರಾದರು.

ಇತ್ತ ಬಾಚಯ್ಯನು ಗೊಬ್ಬೂರಲ್ಲಿ ಪ್ರಸಾದದ ಮಹಿಮೆಯಲ್ಲಿ ಕಾಲ ಕಳೆಯುತ್ತ ನಿಜಭಕ್ತಿಪೂರಿತ ಪ್ರಸಾದವನ್ನು ಸೇವಿಸುತ್ತ, ಅದರ ಮೂಲಕ ದಾಸೋಹ ಕಾರ್ಯಗಳನ್ನು ನಡಿಸುತ್ತ ತನ್ನ ಲಿಂಗದಲ್ಲಿ ನಿರ್ಮಯಲಾದನು.

ಶಿವಶರಣರು ತಮ್ಮ ಕಾಯಕದಿಂದ ದೊರಕಿದ್ದನ್ನು ದಾಸೋಹಕ್ಕೆ ಉಪಯೋಗಿಸುತ್ತಿದ್ದರೆಂದು ಅವರ ಚರಿತ್ರೆಗಳಲ್ಲಿ ಯಾವಾಗಲೂ ಉಲ್ಲೇಖಗಳು ಬರುತ್ತವೆ. ಸಾಂಪ್ರತ ಕಾಲದಲ್ಲಿ ದಾಸೋಹದ ಮಠಗಳೆಂದು ಕರೆಯಲ್ಪಡುವ ಅನೇಕ ಮಠಗಳು ಅಲ್ಲಲ್ಲಿ ಇವೆ. ಅಲ್ಲಿ ಮಠಾಧಿಕಾರಿಗಳು ಭಿಕ್ಷೆಯಿಂದ ಧಾನ್ಯಾದಿಗಳನ್ನು ಎತ್ತಿ ಮಠಕ್ಕೆ ಬಂದವರಿಗೆಲ್ಲ ಅನ್ನವನ್ನು ಪುಕ್ಕಟೆಯಾಗಿ ಹಾಕುತ್ತಾರೆ. ಇಂಥ ಮಠಗಳಿಗೆ ಭಕ್ತರು ಭಕ್ತಿಯನ್ನು ವಹಿಸಿ ಯಾವಾಗಲೂ ಧಾನ್ಯವನ್ನಾಗಲಿ ಇಲ್ಲವೆ ಸಿದ್ಧಪಡಿಸಿದ ಆಹಾರದ ಜೀನಸುಗಳನ್ನಾಗಲಿ ಭಕ್ತಿಯಿಂದ ಕಳಿಸುವದುಂಟು. ಬಸವೇಶ್ವರನ ಕಾಲದಲ್ಲಿ ಸಹ ಈ ಪದ್ಧತಿಯು ಇದ್ದಿತೆಂದು ತೋರುತ್ತದೆ. ಆದರೆ ಆಗಿನ ಮಠಗಳ ಉದ್ದೇಶವು ಬೇರೆಯಾಗಿದ್ದಿತು.

ಆಗಿನ ಮಠಾಧಿಕಾರಿಗಳೂ ಭಕ್ತಮಾಹೇಶ್ವರರೂ ಬಹು ಭರದಿಂದ ಎಲ್ಲೆಡೆಗೂ ಧರ್ಮಪ್ರಸಾರ ಕಾರ್ಯವನ್ನು ಮಾಡುತ್ತಿದ್ದ ಹಾಗೆ ತೋರಿಬರುತ್ತದೆ. ಆದ್ದರಿಂದ ಮಠಾಧಿಪತಿಗಳು ತಮ್ಮ ಮಠಗಳಿಗೆ ಬಂದವರಿಗೆ ಶಿವಾನುಭವವನ್ನು ಬೋಧಿಸುವ ಕಾರ್ಯವನ್ನಲ್ಲದೆ ತಮ್ಮ ಶಿಷ್ಯರ ಮೂಲಕವಾಗಲಿ ಇಲ್ಲವೆ ತಾವಾಗಲಿ ಗ್ರಾಮಗಳಲ್ಲಿ ಸಂಚರಿಸಿ ವೀರಶೈವ ಧರ್ಮದ ಉಪದೇಶ ಮಾಡುತ್ತಾ ಇದ್ದರು.

ಇಂಥ ಮಠಾಧಿಕಾರಿಗಳಿಗೆ ಈ ಕಾರ್ಯದಲ್ಲಿ ಬೇಕಾಗುವ ಖರ್ಚು ವೆಚ್ಚಕ್ಕೋಸ್ಕರ ಮತ್ತು ಅವರಲ್ಲಿ ಶಿವಾನುಭವವನ್ನು ತಿಳಿಯಲು ಬಂದಂಥ ಭಕ್ತರ ಮತ್ತು ಶಿಷ್ಯರ ಉಪಜೀವನಕ್ಕೋಸ್ಕರ ಗ್ರಾಮಗಳಲ್ಲಿರುವ ಭಕ್ತಾದಿಗಳು ತಮ್ಮಲ್ಲಿ ಸಿದ್ಧವಾದ ಆಹಾರಪದಾರ್ಥಗಳನ್ನು ಈ ಮಠಾಧಿಕಾರಿಗಳಿಗೆ ದಿನಾಲು ಕಳಿಸಿಕೊಡುವ ರೂಢಿ ಇದ್ದಿತು. ಇಲ್ಲವೇ ಮಠಾಧಿಕಾರಿಗಳು ತಾವೇ ಗ್ರಾಮದಲ್ಲಿ 'ಧರ್ಮ ಕೋರಾನ್ನ'ದ ಭಿಕ್ಷೆ ಮಾಡುವರು. ಅಂದರೆ ' ಧರ್ಮಕಾರ್ಯಕ್ಕಾಗಿ ಕೋರಲ್ಪಟ್ಟ ಅನ್ನ ' ಎಂಬ ಭಾವವು ಈ 'ಧರ್ಮ ಕೋರಾನ್ನ' ಎಂಬ ಶಬ್ದದಲ್ಲಿದೆ. ಇದಕ್ಕೆ 'ದಾಸೋಹದ ಅನ್ನ ' ಅಥವಾ ಜನರಾಡುವ ಭಾಷೆಯಲ್ಲಿ 'ದಾಸೋಗದ ಅನ್ನ ' ಎಂಬ ಹೆಸರು ಇದೆ. ಹಿಂದಿನ ಕಾಲದಲ್ಲಿ ಶಿವಶರಣರು ಯಾರಿದ್ದರೂ ಕೂಡ ಅವರು ತಮ್ಮ ತಮ್ಮ ಕಾಯಕಗಳನ್ನು ಮಾಡುತ್ತ ಅದರಲ್ಲಿ ತಮಗೆ ಉಳಿದುದನ್ನು ದಾಸೋಹಕ್ಕೆ ಅರ್ಪಿಸುತ್ತಿದ್ದರೆಂದು ಅವರ ಚರಿತ್ರೆಗಳಲ್ಲಿ ಯಾವಾಗಲೂ ಹೇಳಲ್ಪಡುವದುಂಟು. ಹೀಗೆ ಅವರು ಅರ್ಪಿಸುತ್ತಿದ್ದುದು ಮೇಲೆ ವಿವರಿಸಿದಂತೆ ಧರ್ಮಪ್ರಸಾರ ಕಾರ್ಯಕ್ಕೋಸ್ಕರವೇ ಆಗ ಉಪಯೋಗವಾಗುತ್ತಿದ್ದುದು ಸ್ಪಷ್ಟವಿದೆ.

ಬಿಬ್ಬಿ ಬಾಚಯ್ಯನು ಸುತ್ತಲಿನ ಗ್ರಾಮಗಳಿಗೆ ಹೋಗಿ ಭಕ್ತರು ಕೊಟ್ಟ ಪ್ರಸಾದ ಅಥವಾ ಆಹಾರಪದಾರ್ಥಗಳನ್ನು ಸಂಗ್ರಹಿಸುತ್ತ ದಾಸೋಹ ಕಾರ್ಯಗಳನ್ನು ನಡಿಸುತ್ತಿದ್ದುದು ಅವನ ಚರಿತ್ರೆಯಲ್ಲಿ ಹೇಳಿದೆ. ಆವನು ಹೀಗೆ ಕೂಡಿಸುತ್ತಿದ್ದ ಅನ್ನವು ಕೇವಲ ತನ್ನ ಉಪಜೀವನಕ್ಕೋಸ್ಕರವಾಗಿರದೆ, ಅದು ದಾಸೋಹ ಕಾರ್ಯಕ್ಕೆ ಅಂದರೆ ಧರ್ಮಾಭಿವೃದ್ಧಿಯ ಕಾರ್ಯಕ್ಕೆಂದು ನಾವು ತಿಳಿಯಬೇಕು. ಹೀಗೆ ಅನ್ನವನ್ನು ಕೂಡಿಸುವದನ್ನೇ ತನ್ನ ಕಾಯಕವನ್ನಾಗಿ ಅವನು ಇಟ್ಟುಕೊಂಡನು.

ಸಿದ್ಧವಾದ ಅನ್ನವನ್ನು ಲಿಂಗ ಮತ್ತು ಜಂಗಮರಿಗೆ ಅರ್ಪಿಸಿ ಅದು ಪ್ರಸಾದರೂಪವಾದ ಬಳಿಕ ಅದರಲ್ಲಿ ಒಂದಗಳು ಸಹ ಬಿಡದೆ ಗ್ರಹಿಸಬೇಕೆಂಬ ನಿಯಮವಿದೆ. ಅದನ್ನು ಯಾರೂ ಹೊರಗೆ ಚಲ್ಲಬಾರದು ಅಥವಾ ಭಿಕ್ಷೆಯಾಗಿ ಅದನ್ನು ಯಾರಿಗೂ ಕೊಡಲು ಸಹ ಬರಲಾರದು. ಬಿಬ್ಬಿಬಾಚಯ್ಯನು ಸಂಗ್ರಹಿಸುತ್ತಿದ್ದ ಅನ್ನವು ಪ್ರಸಾದವೆನಿಸಿಕೊಳ್ಳುವ ಇಂಥ ಆಹಾರ ಪದಾರ್ಥವಿರಲಾರದು. ಆದರೆ ವೀರಶೈವರ ಗೃಹದಲ್ಲಿ ಅನ್ನವು ಸಿದ್ಧವಾದ ಬಳಿಕ ಅನ್ನದ ಪಾತ್ರೆಗೆ 'ವಿಭೂತಿ ಪಟ್ಟ' ವನ್ನು ಬರೆಯುವ ಪದ್ಧತಿ ಇದೆ. ಇಂಥ ಆಹಾರವನ್ನು ಮಾತ್ರ ಬಿಬಿಬಾಚಯ್ಯನು ಕೂಡಿಸುವ ಕಟ್ಟನ್ನು ಮಾಡಿಕೊಂಡಿದ್ದನೆಂದು ತೋರುತ್ತದೆ. ಇಂಥ ಆಹಾರವು ವೀರಶೈವರಿಗೆ ಭಿಕ್ಷೆಗಾಗಿ ಸಲ್ಲುತ್ತಿದೆ. ಆದರೆ ಇದು ವಿಧಿವಿಧಾನಗಳಿಂದ ಪ್ರಸಾದವಾದ ಬಳಿಕ ಅದನ್ನು ಪ್ರಸಾದ ಮಾಡಿಕೊಂಡವನೇ ಭುಂಜಿಸತಕ್ಕದ್ದು. ಅದನ್ನು ಇತರರಿಗೆ ಕೊಡಲಿಕ್ಕೆ ಬರಲಾರದು. ಇಂಥದನ್ನು ಬಾಚಯ್ಯನು ಬಂಡಿಯಲ್ಲಿ ಸಂಗ್ರಹಿಸಿಕೊಂಡು ಬೇರೆ ಕಡೆಗೆ ಒಯ್ಯುವದು ಶಕ್ಯವಲ್ಲ.

ಈ ಕಾಲದಲ್ಲಿ ಗೊಬ್ಬೂರು ಬ್ರಾಹ್ಮಣರಿಗೆ ಹೇಗೆ ಮುಖ್ಯ ಸ್ಥಾನವಾಗಿತ್ತೋ ಹಾಗೆಯೇ ವೀರಶೈವರಿಗೂ ಮುಖ್ಯ ಸ್ಥಾನವಾಗಿತ್ತು. ಅಲ್ಲಿ ಶಿವಾನುಭವ ಗೋಷ್ಠಿಗಳು ವಿಶೇಷವಾಗಿ ಯಾವಾಗಲೂ ನಡಿಯುತ್ತಿದ್ದದರಿಂದ ಅಲ್ಲಿ ನೆರೆಯುತ್ತಿದ್ದ ಭಕ್ತಮಾಹೇಶ್ವರರ ಸಲುವಾಗಿ ಬಿಬ್ಬಿಬಾಚಯ್ಯನು ಆಹಾರ ದ್ರವ್ಯ ಅಥವಾ ರೂಢಿಯ ಶಬ್ದದಲ್ಲಿ ಪ್ರಸಾದವನ್ನು ಸಂಗ್ರಹಿಸುವ ಕಾರ್ಯವನ್ನು ಕೈಕೊಂಡಿರಬೇಕು. ಇದು ಅವನ ಹೆಚ್ಚಿನ ತರದ ಉಪಯುಕ್ತ ಕಾಯಕವೆಂದು ನಾವು ತಿಳಿಯಬೇಕು. ಅವನು ಮುಸುರಿಯನ್ನು ಸಂಗ್ರಹಿಸುತ್ತಿದ್ದನೆಂದು ಅವನನ್ನು ಅವಹೇಲನೆ ಮಾಡುವದು ಸರಿಯಾಗಲಾರದು.

ಕಲ್ಯಾಣ ಪಟ್ಟಣದಲ್ಲಿಯೂ ಯಾವಾಗಲೂ ಶಿವಾನುಭವ ಗೋಷ್ಠಿಗಳು ನಡಿಯುತ್ತಿದ್ದವು. ಆದ್ದರಿಂದ ಅಲ್ಲಿ ಸ್ವಾಭಾವಿಕವಾಗಿ ಬಹು ಜನ ಶರಣರು ನೆರೆಯುತ್ತಿದ್ದರು. ಅವರಿಗೋಸ್ಕರ ಅನೇಕ ಶಿವಶರಣರು ಇದೇ ತರದ ಕಾಯಕವನ್ನು ಅಲ್ಲಿ ಕೈಕೊಂಡಿದ್ದು ಕಂಡುಬರುತ್ತಿದೆ.

ಹೀಗೆ ಕೂಡಿಸಲ್ಪಟ್ಟ ಆಹಾರವು ಉಚ್ಛಿಷ್ಟ ಅಥವಾ ಮುಸುರೆ ಎಂದು ತಿಳಿಯಲಿಕ್ಕೆ ಬರಲಾರದು. ಈ ಆಹಾರದ ಉಪಯೋಗವು ಧರ್ಮ ಪ್ರಸಾರದ ಶ್ರೇಷ್ಠ ಕಾರ್ಯಕ್ಕೆ ಆಗ ಉಪಯೋಗವಾಗುತ್ತಿತ್ತು.

ಬಿಬ್ಬಿಬಾಚಯ್ಯನ ಹೆಸರು ಗಣಸಹಸ್ರದಲ್ಲಿ ಬಂದಿದೆ. ಅವನು ಹಿಂದಿನ ಕಾಲದವನು. ಆದರೆ ಬಸವೇಶ್ವರನಕಿಂತಲೂ ಸ್ವಲ್ಪ ಈಚಿನವನಾಗಿರಬೇಕು. ಅವನು ಇದ್ದ ಗೊಬ್ಬೂರಲ್ಲಿ ಈಗಲೂ ಅನೇಕ ಪುರಾತನ ದೇವಾಲಯಗಳೂ ಶಿಲಾಶಾಸನಗಳೂ ಇರುತ್ತವೆ.

ಬಿಬ್ಬಿಬಾಚಯ್ಯನು ದೊಡ್ಡ ವಿದ್ವಾಂಸನು. ಅವನು ವಚನಕಾರನಿದ್ದಾನೆ. 'ಏಣಾಂಕಧರ ಸೋಮೇಶ್ವರಾ' ಎಂಬುದು ಅವನ ಮುದ್ರಿಕೆಯಾಗಿದೆ. ಅವನ ೪೦ ವಚನಗಳು ಮಾತ್ರ ನಮ್ಮಲ್ಲಿ ಉಪಲಬ್ಧವಿವೆ. ಅವುಗಳಲ್ಲಿ ಬಹು ಸುಳವಾದ ವಿಚಾರಗಳಿರುತ್ತವೆ. ಅವುಗಳಲ್ಲಿ ಕೆಲವು ವಚನನ್ನು ಮಾತ್ರ ನಾವು ಮಾದರಿಗಾಗಿ ಇಲ್ಲಿ ಉದಹರಿಸುತ್ತೇವೆ.

ವಚನಗಳು.

ಕೆಳಗಿನ ವಚನಗಳಲ್ಲಿ ಪ್ರಸಾದದ ಸ್ವರೂಪನ್ನು ಬಿಬ್ಬಿ ಬಾಚಯ್ಯನು ಬಹು ಸರಸಾಗಿ ವಿವರಿಸಿದ್ದಾನೆ. ಅವನು ಹೇಳುವದೇನಂದರೆ—

(೧) ಹೊಲಬು ಹೊಲಬನೇ ಕಂಡು, ಶಿಲೆ ಕುಲವಳಿದು, ಉದಕ ಗುಣ ಮುಜ್ಜನದಲ್ಲಿಂಗಿ, ಅನ್ನಗುಣ ಅರ್ಪಿತದಲ್ಲಿ ಹೊಯಿತ್ತಯ್ಯ ನಿತ್ಯ ಪ್ರಸಾದವೆನಗಾಯಿತ್ತು. ಆ ಪ್ರಸಾದದಲ್ಲಿ ಎನಗೆ ಏಕವಾಯಿತ್ತಯ್ಯಾ ಏಣಾಂಕಧರ ಸೋಮೇಶ್ವರಾ.

ಭಾವಃ – ಪರಮಾತ್ಮನಿಗೆ ಆಹಾರವು ಅರ್ಪಿತವಾದ ಕೂಡಲೆ, ಆಹಾರದ ಗುಣವು ಹೋಗಿಬಿಡುತ್ತದೆ. ಅದು ಪವಿತ್ರವಾಗುತ್ತದೆಂಬ ಭಾವವು ಇದರಲ್ಲಿದೆ. ಉದಾಹರಣಾರ್ಥವಾಗಿ ಅದು ಹೊಲೆಯರ ಮನೆಯಲ್ಲಿ ಸಿದ್ಧವಾಗಿದ್ದರೂ ಕೂಡ ಅದು ಅರ್ಪಿತವಾದ ಬಳಿಕ ಅದರ ಹೊಲೆತನವು ಹೋಗಿ ಅದು ಶುದ್ಧವಾಗುತ್ತದೆ. ಆದ್ದರಿಂದ ಅದನ್ನು ಸ್ವೀಕರಿಸಲಿಕ್ಕೆ ಯೋಗ್ಯವಾದುದು. ಇದರ ಬಗ್ಗೆ ಅವನು ಕೆಲವು ಉದಾ

ಹರಣೆಗಳನ್ನು ಕೊಟ್ಟಿದ್ದಾನೆ. ಸಿಲೆಯ ಗುಣವು ಹೋಗಿ ಅದು ಲಿಂಗವಾಗುತ್ತದೆ. ನೀರಿನ ಗುಣವು ಹೋಗಿ ಅದು ತೀರ್ಥವಾಗುತ್ತದೆ. ಲಿಂಗವೂ ತೀರ್ಥವೂ ಹೇಗೆ ಪವಿತ್ರವಾದವುಗಳೋ ಹಾಗೆಯೇ ಪ್ರಸಾದವೂ ಪವಿತ್ರವಾದುದು. ಅಂಥ ಪ್ರಸಾದವನ್ನು ನಾನು ಸ್ವೀಕರಿಸಿ ನಾನೂ ಪವಿತ್ರನಾಗಿ ಅದರಲ್ಲಿ ನಾನು ಸಾಮರಸ್ಯವನ್ನು ಹೊಂದುತ್ತೇನೆಂದು ಬಹು ಸ್ವಾರಸ್ಯವಾಗಿ ಇಲ್ಲಿ ಹೇಳಿದ್ದಾನೆ.

(೨) ಲಿಂಗವೆಂದು ಹಿಂಗಿ ಭಾವಿಸುವಾಗ ಅರಿವು ಲಿಂಗಕ್ಕೆ ಹೊರಗೇ? ಆ ಲಿಂಗ ಚಿತ್ತದ ಕೈಯ್ಯಲ್ಲಿ ಪ್ರಮಾಣಿಸಿಕೊಂಬಾಗ, ಆಣೋರಣೀಯಾನ್, ಮಹತೋ ಮಹೀಯಾನ್ ಎಂದು ಪ್ರಮಾಣಿಸಿಕೊಂಬುದು ಪುಸಿಯೇ? ತೊರೆಯುದಕ ಮಳಲು ಮರೆಯಲ್ಲಿ ಬಂದು ಸಂದೇಹ ಬಿಡಿಸುವಂತೆ ಎಲ್ಲಿಯೂ ನೀನೇ ಏಣಾಂಕಧರ ಸೋಮೇಶ್ವರ ಲಿಂಗವೇ.

(೩) ಅಗ್ನಿ ಲೋಹದಂತೆ, ಫಲ ರಸದಂತೆ, ಕಾಯ ಜೀವದ ಪರಿಯಂತೆ, ಅಂಗ ನೆಳಲಿನಂತೆ, ಅಂಗಲಿಂಗ ಸಂಬಂಧವಾಗಬೇಕು ಏಣಾಂಕಧರ ಸೋಮೇಶ್ವರ ಲಿಂಗದಲ್ಲಿ.

(೪) ಫಲ ತರುವಿನಂತೆ, ತಿಲ ಸಾರದಂತೆ, ಮಧುರ ದಂಡದಂತೆ ಶರಧಿಯಲ್ಲಿರುವಲಘುವಿನಂತೆ ಭಿನ್ನ ಭಾವವಿಲ್ಲದಿರಬೇಕು. ಅಂಗಲಿಂಗ ಸಂಬಂಧ ಏಣಾಂಕಧರ ಸೋಮೇಶ್ವರ ಲಿಂಗದಲ್ಲಿ.

(೫) ಹುತ್ತದೊಳಗಣ ಹಾವ, ಮಡುವಿನೊಳಗಣ ಮತ್ಸ್ಯವ, ಮಹಾಕಾನನದ ವಾನರವ ಹಿಡಿವ ಪರಿ ಇನ್ನೆಂತೋ? ಹುತ್ತವನಗಿದು, ಮಡುವ ಹೂಳಿ, ಕಾನನವ ತರಿದು ಇಂತಿವ ಹಿಡಿಯಬೇಕು. ಸಕಲೇಂದ್ರಿಯದೊಳಗಿರ್ದ ವಸ್ತುವನರಿದೆನೆಂಬ ವಿಟ್ಟೆಯ ಭಂಡರನೊಪ್ಪ ಏಣಾಂಕಧರ ಸೋಮೇಶ್ವರ ಲಿಂಗವು.

(೬) ವಾಯು ಬಯಲೆಂದರೆ ತರುಗಿರಿಗಳೊದರುವ ಪರಿ ಇನ್ನೆಂತು? ನಾದ ಬಯಲೆಂದರೆ ಶಬ್ದಂಗಳು ತೋರುವ ಪರಿ ಇನ್ನೆಂತು? ತನ್ಮಯವೆಲ್ಲವು ರೂಪು, ಏಣಾಂಕಧರ ಸೋಮೇಶ್ವರ ಲಿಂಗವು ಸ್ವರೂಪನಾಗಿ ಜಗದಲ್ಲಿಹನ್ನಬರ.

ಮೇಲೆ ೨ನೇ ವಚನದಲ್ಲಿ ಪರಮಾತ್ಮನು ಜಗತ್ತಿನಲ್ಲಿ ಹೇಗೆ ವಾಸಿಸುತ್ತಾನೆಂಬುದನ್ನೂ ೫ನೇ ವಚನದಲ್ಲಿ ಲಿಂಗವನ್ನು ಸಾಧಿಸುವದು ಎಷ್ಟು ಕಷ್ಟವಿರುತ್ತದೆಂಬದನ್ನೂ ೬ನೇ ವಚನದಲ್ಲಿ ಪರಮಾತ್ಮನು ತನ್ನಲ್ಲಿ ಹೇಗೆ ಉದಯಿಸುತ್ತಾನೆ ಎಂಬುದನ್ನೂ ವಿವರಿಸಿದ್ದಾನೆ. ಅವೆಲ್ಲವೂ ಅರ್ಥಪೂರ್ಣವಾಗಿದೆ. ಈತನವು ಅನೇಕ ಒಡಪಿನ ವಚನಗಳಿವೆ. ಅವೆಲ್ಲವೂ ಹೀಗೆಯೇ ಇರುತ್ತವೆ.

ಸಗರದ ಬ್ರಹ್ಮಯ್ಯ.

ವಿಜಾಪುರ ಜಿಲ್ಲಾ ಸಿಂದಿಗಿ ತಾಲೂಕಿನ ಮೇರೆಯಿಂದ ಪೂರ್ವಕ್ಕೆ ೫ ಮೈಲುಗಳ ಮೇಲೆ ಸಗರವೆಂಬ ಗ್ರಾಮವಿದೆ. ಇದು ಸುರಪುರದ ಉತ್ತರಕ್ಕೆ ೧೨ ಮೈಲುಗಳ ಮೇಲಿದೆ. ಇದು ಈಗ ಕಲಬುರ್ಗಿ ಜಿಲ್ಲೆಯು. ಈ ಗ್ರಾಮದಲ್ಲಿ ಬ್ರಹ್ಮಯ್ಯನೆಂಬ ಶಿವಶರಣನು ವಾಸಮಾಡುತ್ತಿದ್ದನು. ಅವನ ಹೆಂಡತಿಯ ಹೆಸರು ಶಿವದೇವಿಯು. ಉಭಯತರು ಶಿವಾಚಾರದಲ್ಲಿ ನಿರತರು, ಶಿವಾನುಭವಿಗಳು. ಅಷ್ಟಾವರಣ ಪಂಚಾಚಾರಗಳ ರೀತಿಯನ್ನು ಚನ್ನಾಗಿ ತಿಳಿದವರು. ಬ್ರಹ್ಮಯ್ಯನು ಪಂಚಾಕ್ಷರೀ ಮಂತ್ರವನ್ನು ಚನ್ನಾಗಿ ಬಲ್ಲವನಾಗಿ ಪಾದೋದಕ ಪ್ರಸಾದ ಜೀವಿಯಾಗಿರುತ್ತಿದ್ದನು. ಅವನು ತನಗಾಗಿ ಇಟ್ಟುಕೊಂಡ ಆಚಾರಗಳಾವವೆಂದರೆ– ಲೌಕಿಕಾಚಾರದಂತೆ ನಡಿಯುವದಿಲ್ಲ ಮತ್ತು ನುಡಿಯುವದಿಲ್ಲ. ಪಂಚಾಕ್ಷರೀ ಮಂತ್ರವೇ ನನಗೆ ಆಧಾರವು. ಅದರ ಸಾಮರ್ಥ್ಯದಿಂದ ನಾನು ಅಷ್ಟೋತ್ತರ ಶತವ್ಯಾಧಿಗಳನ್ನು ದೂರಮಾಡುತ್ತೇನೆ. ಒಂದು ವೇಳೆ ವ್ಯಾಧಿಗಳು ಬಂದರೆ ನನಗೆ ಪಾದೋದಕ ಪ್ರಸಾದವೇ ವೈದ್ಯ. ನನಗೆ ಶಿವನೊಬ್ಬನೇ ದೈವವು. ಅವನೊಬ್ಬನನ್ನೇ ನಂಬುವೆನು. ಹೀಗೆ ನೇಮಗಳನ್ನು ಇಟ್ಟುಕೊಂಡು ಅವುಗಳಂತೆ ಆಚರಿಸುತ್ತಾ ಇದರ ಗುರುತಿಗಾಗಿ ಒಂದು ಬಿರುದನ್ನು ಕಟ್ಟಿಕೊಂಡಿದ್ದನು.

ಬ್ರಹ್ಮಯ್ಯನಿದ್ದ ಈ ಗ್ರಾಮದಲ್ಲಿ ಅನೇಕ ಜೈನರು ವಾಸಮಾಡಿಕೊಂಡಿದ್ದರು. ಅವರು ಜಿನನೇ ದೈವವೆಂದು ವಾದಿಸುವರು. ಅದಕ್ಕೆ ಬ್ರಹ್ಮಯ್ಯನು ಜಿನನೆಂಬುದು ಸುಳ್ಳು. ಭರ್ಗನೇ ದೈವ. ಏಕೋ ದೇವನು.

ಶಿವನೇ ದೇವನೆಂದು ಪ್ರತಿಷ್ಠಿಸಿ ನುಡಿಯುವನು. ಒಂದು ದಿನ ಇವಕ್ಕೆ ಜೈನರು ಅವಸಿಗೆ–ನೀನೆನ್ನುವದಕ್ಕೆ ಒಂದು ದೃಷ್ಟಾಂತವನ್ನು ತೋರಿಸಿದಲ್ಲಿ ನಾವು ನೀನನ್ನುವದನ್ನು ಒಪ್ಪಿಕೊಳ್ಳುತ್ತೇವೆ ಎಂದೆನ್ನಲು ಬ್ರಹ್ಮಯ್ಯನು ಹಾಗೇ ಆಗಲೆಂದು ಹೇಳಿ ಒಂದು ಉಕ್ಕಿನ ಗಟ್ಟಿಯನ್ನು ಕೆಂಪಗೆ ಕಾಸಿ ಕೊಪ್ಪರಿಗೆಯಲ್ಲಿ ಎಣ್ಣೆ ಕುದಿಯುತ್ತಿರಲು ಅದನ್ನು ಅದರಲ್ಲಿ ಎದ್ದಿ ಕರದಿಂದ ಅದನ್ನು ಹಿಡಿದು ಜೈನರ ಮುಂದೆ ತೆಗೆದಿಟ್ಟನು. ಹೀಗೆ ಮಾಡಿದರೂ ಅವನ ಕಯ್ಯಿಗೆ ಏನೂ ಅಪಾಯವಾಗಿರಲಿಲ್ಲ. ಆಗ ಅವನು ಜೈನರಿಗೆ— ಈ ರೀತಿ ನೀವು ಮಾಡಿ ತೋರಿಸಿದರೆ ನಿಮ್ಮ ಜಿನನೇ ನಿಜವು ಎಂದು ಒಪ್ಪುತ್ತೇನೆ, ಎಂದು ಅನ್ನಲು ಅವರು ಬೆದರಿ ಓಡಿಹೋದರು. ಬಳಿಕ ಬ್ರಹ್ಮಯ್ಯನು ಶಿವನಲ್ಲದೆ ಬೇರೆ ದೈವವಿಲ್ಲೆಂದು ಧ್ವಜವನ್ನೆತ್ತಿ ಪಟ್ಟಣದ ಬೀದಿಗಳಲ್ಲಿ ಮೆರಿಸುತ್ತ ಡಂಗುರವ ಸಾರಲು, ಜೈನರು ಅದನ್ನು ತರಹರಿಸಿದೆ ಗುಂಪುಗಟ್ಟಿ ಭಕ್ತರ ಮೇಲೇರಿ ಬಂದರು. ಆಗ ಉಭಯ ಪಕ್ಷಗಳಲ್ಲಿ ಕಾದಾಟಗಳಾದವು. ಅವುಗಳಲ್ಲಿ ಜೈನರು ಸೋತು ಓಡಿಹೋದರು ಮತ್ತು ಅವರಲ್ಲನೇಕರು ಹತರಾದರು.

ಹೀಗಾಗಲು ಮತ್ತೊಂದು ದಿವಸ ಬ್ರಹ್ಮಯ್ಯನಿಗೆ ತಲೆನೋವಾಯಿತು. ಅದರಿಂದ ಅವನು ಬಹಳ ಬಳಲಿ ಅದನ್ನು ದೂರವಾಡುವದಕ್ಕೋಸ್ಕರ ಒಂದು ಚಿಮ್ಮಟಿಗೆಯಲ್ಲಿ ಕೆಂಡವನ್ನು ಹಿಡಿದು ಅದರಿಂದ ಅವನು ತನ್ನ ಶಿರವನ್ನು ಕಾಯಿಸಿಕೊಳ್ಳಹತ್ತಿದನು. ಅದನ್ನು ಅವನ ಹೆಂಡತಿಯಾದ ಶಿವದೇವಿಯು ನೋಡಿ ಅವನಿಗೆ—ನಿಮ್ಮ ಬಿರುದು ಈಗ ಎಲ್ಲಿ ಹೋಯಿತು? ಬೇನೆ ಬಂದರೆ ಪ್ರಸಾದವೇ ಮದ್ದೆಂದು ನೀವು ಭಾವಿಸಿದ್ದೇನಾಯಿತು? ನಿಮಗೆ ಈ ಕಿಚ್ಚೇ ವೈದ್ಯನಾಗಲಿಲ್ಲವೇ? ಎಂದು ವಿಡಂಬಿಸಿ ನುಡಿದಳು. ಅದನ್ನು ಬ್ರಹ್ಮಯ್ಯನು ಕೇಳಿ—ಅಹಾ, ನೀನು ಹೇಳಿದ್ದು ಒಳಿತಾಯಿತು. ನಿಜವಾಗಿ ನನ್ನ ಭಾಷೆಗೆ ತಪ್ಪಿದೆನು. ನನ್ನ ಆಚರಣೆ ಈಗ ಹಿಂಗಿತ್ತು ಎಂದು ನುಡಿದು ನನ್ನ ತಲೆ ನೋವಾದುದಕ್ಕೆ ನನ್ನ ಪಂಚಾಕ್ಷರೀ ಮಂತ್ರ ಜಪದಲ್ಲಿ ಏನೋ ಒಂದು ಕುಂದುಂಟಾಗಿರಬೇಕು, ನನ್ನ ಅರ್ಪಿತವೂ ಪ್ರಸಾದವೂ ತಪ್ಪಿರಬೇಕು, ಎಂದು ನುಡಿದು ತನ್ನ ಮಂತ್ರ ಜಪವನ್ನು ಸರಿಪಡಿಸಿಕೊಂಡು ತನ್ನ ತಲೆನೋವನ್ನು ಹೋಗಲಾಡಿಸಿಕೊಂಡನು.

ಈ ಪ್ರಕಾರ ಸಗರದ ಬ್ರಹ್ಮಯ್ಯನು ತನ್ನ ಭಕ್ತಿ ಕ್ರಿಯೆಗಳಿಂದ ಆಚರಿಸುತ್ತ ತನ್ನ ಇಷ್ಟಲಿಂಗದಲ್ಲಿ ಬಯಲಾದನು. ಅವನು ಶಿವಶರಣರಲ್ಲಿ ಬಹು ಪ್ರಸಿದ್ಧನಾಗಿದ್ದಾನೆ. ಅವನ ಹೆಸರು ಗಣಸಹಸ್ರದಲ್ಲಿದೆ.

ಸಗರದ ಬ್ರಹ್ಮಯ್ಯನು ವಚನಕಾರನಿದ್ದಾನೆ. ಅವನ ಮುದ್ರಿಕೆಯು 'ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ' ಎಂದಿದೆ. ಅವನ ೫೨ ವಚನಗಳು ಮಾತ್ರ ನಮಗೆ ಉಪಲಬ್ಧವಿವೆ. ವಚನಕಾರರು ತಮ್ಮ ವಚನಗಳನ್ನು ಬಹುವಿಧವಾಗಿ ರಚಿಸಿದ್ದಾರೆ. ಕೆಲವರ ವಚನಗಳು ವೈದು, ಕೆಲವರವು ಗೂಢ ವಿಚಾರವುಳ್ಳವು, ಕೆಲವರವು ಕಠೋರವಾದವುಗಳು, ಹೀಗೆ ಅನೇಕ ರೀತಿಯಾಗಿ ವಚನಕಾರರು ಬೋಧಿಸಿದ್ದಾರೆ. ಸಗರದ ಬೊಮ್ಮನ ಭಾಷೆಯು ಬಹು ಲಲಿತವಾದುದು, ಮಧುರವಾದುದು. ಆದರೂ ಅವು ಬಹು ಆಳವಾದ ವಿಚಾರಗಳುಳ್ಳವು. ಅವುಗಳಲ್ಲಿ ಕೆಲವುಗಳನ್ನು ಮಾತ್ರ ನಾವು ಮಾದರಿಗಾಗಿ ಇಲ್ಲಿ ಉದಹರಿಸಿದ್ದೇವೆ.

ವಚನಗಳು.

(೧) ಕಂಗಳ ಸೂತಕ ಹೋಯಿತ್ತು ನಿಮ್ಮ ದರ್ಶನದಿಂದ. ಎನ್ನ ಮನದ ಸೂತಕ ಹೋಯಿತ್ತು ನಿಮ್ಮ ನೆನಹು ವೇಧಿಸಿ. ಸಕಲ ಸೋಂಕಿನ ಭ್ರಾಂತುಸೂತಕವಳಿಯಿತ್ತು ನಿಮ್ಮ ಹಿಂಗದೆ ಅರಿಕೆಯಲ್ಲಿ. ಇಂತೀ ನಾನಾ ವಿಧದ ಭೇದೋಪಭೇದಂಗಳೆಲ್ಲವು ನಿಮ್ಮ ಕಾರುಣ್ಯ ಪ್ರಸಾದದಿಂದ ಲಯವಾದವಯ್ಯ, ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ.

(೨) ಕಣ್ಣಿನ ಬಾವಿಯಲ್ಲಿ ಕಾಣದ ಕಣ್ಣಿಜು ಬಿಟ್ಟು, ಮಹೀತಳವ ನೆಮ್ಮಿ ಪಾತಾಳಕ್ಕೆ ಬಿಡಲು ಅಚಾರದುದಕ ಬಂದು ತುಂಬಿತ್ತು. ಸಗರದ ಬೊಮ್ಮನೊಡೆಯ ತನು ಮನ ಸಂಗದಲ್ಲಿ ಎನ್ನ ಪ್ರಾಣಲಿಂಗಕ್ಕೆ ಮಜ್ಜನವಾಯಿತ್ತು.

ಭಾವಃ—ಇಲ್ಲಿ ವಚನಕಾರನು ಇಷ್ಟಲಿಂಗದಿಂದ ಪ್ರಾಣಲಿಂಗವನ್ನು ಹೇಗೆ ಕಾಣಬೇಕೆಂಬುದನ್ನು ಸ್ವಾರಸ್ಯ ಪೂರ್ಣವಾಗಿ ವಿವರಿಸಿದ್ದಾನೆ.

(೩) ಕಾಯಗುಣದಲ್ಲಿದ್ದು ಕರಣಂಗಳಂತಾಡದಿರ್ದರೆ ಕಾಯದ ಸಂಗವೇ ಲೇಸು. ಇಂದ್ರಿಯಂಗಳ ಸಂಸರ್ಗದಲ್ಲಿರ್ದು ಮುಟ್ಟುವ

ಸಂಗವ ಬಲ್ಲಡೆ ಆ ಗುಣದಲ್ಲಿದ್ದು ಅರಿವುದೇ ಲೇಸು. ತನ್ನ ಸಾವನರಿದಡೆ ಸಾವೇ ಲೇಸು. ಸಗರದ ಬೊವ್ಮನೊಡೆಯ ತನು ಮನ ಸಂಗಮೇಶ್ವರ ಲಿಂಗವು ಕೂಡಿ ಕೂಟವಾದ ಮೇಲೆ.

(೪) ತನುವಿನೊಳಗಣ ತನುವಿನಲ್ಲಿ ಕೂಡಿದವನಾರೋ? ಮನದೊಳಗಣ ನೆನಹಿನಲ್ಲಿ ನೆನಹಿಸಿಕೊಂಡವನಾರೋ? ಬಾಯೊಳಗಣ ಬಾಯಲ್ಲಿ ಉಂಬುವನಾರೋ? ಕಣ್ಣಿನೊಳಗಣ ಕಣ್ಣಿನಲ್ಲಿ ನೋಡುವನಾರೋ? ನಾನೆಂಬುದೇನು ಹೇಳಾ ಸಗರದ ಬೊವ್ಮನೊಡೆಯ ತನು ಮನ ಸಂಗಮೇಶ್ವರಾ?

(೫) ಮನೆ ಬೇಕಾದರೆ ಮನೆ ಸುಡು. ಮಣ್ಣು ಬೇಕಾದರೆ ಒಲ್ಲದಿರು. ಹೊನ್ನು ಬೇಕಾದರೆ ಒಡಿಯದಿರು. ಹೆಣ್ಣು ಬೇಕಾದರೆ ಕೂಡದಿರು. ಹಸಿವೆ ಇಲ್ಲದಿರೆ ಉಣ್ಣು. ಈ ಹುಸಿಯ ದಿಟ ಮಾಡು ನಗರದ ಬೊವ್ಮನೊಡೆಯ ತನುಮನ ಸಂಗಮೇಶ್ವರ ಲಿಂಗವನರಿಯಬಲ್ಲಡೆ.

(೬) ಸಕಲಾಗಮಂಗಳ ಕಲಿತು ಸರ್ವರಿಗೆ ಹೇಳಿ ತಾನೇ ಕರುಡೆಯಾಗಿ ತ್ರಿವಿಧ ಮಲಕ್ಕೆ ಹೊರಗಾಗೆಂದು ತಾನೊಳಗಾಗಿ ಬರಿಮಾತಿನ ಭಟನಂತೆ ಆದೇತರ ಅರಿಕೆ ಸಗರದ ಬೊವ್ಮನೊಡೆಯ ತನುಮನ ಸಂಗಮೇಶ್ವರ?

ವೈದ್ಯ ಸಂಗಣ್ಣ.

ಶಿವಶರಣರಲ್ಲಿ ಅನೇಕ ಉದ್ಯೋಗ ಮಾಡುವವರಿದ್ದಾರೆ. ಬಸವೇಶ್ವರನ ಕಾಲದಲ್ಲಿ ನಾಡಿನಲ್ಲಿ ಎಷ್ಟು ಉದ್ಯೋಗಗಳನ್ನು ಮಾಡುವವರು ಇದ್ದರೋ ಅವರಲ್ಲೆಲ್ಲ ಶಿವಶರಣರು ಆಗಿ ಹೋಗಿದ್ದು ಕಂಡು ಬರುತ್ತದೆ. ಅವರಲ್ಲಿ ವೈದ್ಯ ಸಂಗಣ್ಣನೆಂಬುವನಿದ್ದು ಅವನು ವೈದ್ಯಕೀ ಉದ್ಯೋಗವನ್ನು ಮಾಡುತ್ತಿದ್ದನು. ಅವನು ವಚನಕಾರನಿದ್ದಾನೆ. ಅವನು ರಚಿಸಿದ ವಚನಗಳಿಂದ ಅವನು ವೈದ್ಯ ಶಾಸ್ತ್ರ, ಶರೀರ ಶಾಸ್ತ್ರ ಇವುಗಳನ್ನು ಚನ್ನಾಗಿ ಬಲ್ಲವನಿದ್ದಂತೆ ತೋರುತ್ತದೆ. ಅವನು ರೋಗ ಚಿಕಿತ್ಸೆಯನ್ನು ಮಾಡಬಲ್ಲನು. ಅವನು ತನ್ನ ವಚನಗಳಲ್ಲಿ ವೈದ್ಯಶಾಸ್ತ್ರವನ್ನು ಹೇಳುವದಲ್ಲದೆ ಅದರಮೂಲಕ ಶಿವಯೋಗವನ್ನೂ ಷಟ್‌ಸ್ಥಲದ ಮರ್ಮಗಳನ್ನೂ ಹೇಳುತ್ತಾನೆ. ಇದು ಅವನ ವೈಶಿಷ್ಟ್ಯವಾಗಿದೆ.

ಶಿವಾನುಭವ

ವರ್ಷ ೨೦	ಜುಲೈ ೧೯೪೬	ಸಂಚಿಕೆ ೧೦

ವ್ಯವಹಾರಿಕ ವೀರಶೈವ ಮತದ ಉದ್ದೇಶ ಮತ್ತು ತತ್ವಗಳು.

(ಲೇಖಕರು:— ಶ್ರೀ ಬಸಪ್ಪಾ ಮಲ್ಲಪ್ಪಾ ಕಂಕಣವಾಡಿ ಸಂಸ್ಥಾಪಕ ಕರ್ನಾಟಕ ಆಯುರ್ವೇದ ವಿದ್ಯಾಪೀಠ ಬೆಳಗಾವ)

ವೀರಶೈವ ಇದರಲ್ಲಿ ವೀರ ಮತ್ತು ಶೈವ ಎಂಬ ಎರಡು ಶಬ್ದಗಳಿದ್ದು, ಅವುಗಳಲ್ಲಿ ವೀರನೆಂದರೆ ಪ್ರಪಂಚ ಹೋರಾಟದಲ್ಲಿ ಸಾತ್ವಿಕ ಧೈರ್ಯದಿಂದ ಎದುರಾಳಿಗಳನ್ನು ಸೋಲಿಸುವವನು ಮತ್ತು ಶೈವನೆಂದರೆ ಶಿವೋಪಾಸಕನು, ಎಂಬ ಅರ್ಥವಾಗುತ್ತದೆ.

ವೀರಶೈವ ಮತದ ಉದ್ದೇಶ:- ಪರಮಾತ್ಮನ (ಶಿವನ) ಲೀಲೆಯಿಂದ ಅಸ್ತಿತ್ವ ಹೊಂದಿದ ಸೃಷ್ಟಿಯಲ್ಲಿ ಆತ್ಮ ತತ್ವದಿಂದ ಹುಟ್ಟಿದ ಮೂಲತತ್ತಾರು ತತ್ವಗಳ ಮಿಶ್ರಣದಿಂದಾದ ಮನುಷ್ಯ ಪ್ರಾಣಿಯೇ ವೀರಶೈವನು. ಆತ್ಮನಲ್ಲಿಯ ಜೀವಾತ್ಮನು ಪರಮಾತ್ಮನಲ್ಲಿ ಬೆರೆಯುವದೇ ಶಿವಜೀವೈಕ್ಯವು. ಇದನ್ನು ಸಾಧಿಸುವದು ವೀರಶೈವ ಮತದ ಮುಖ್ಯ ಉದ್ದೇಶವಾಗಿದೆ.

ಮನುಷ್ಯ ಶರೀರದಲ್ಲಿ ಬಾಹ್ಯ ಕಾರ್ಯಗಳನ್ನು ನಡಿಸುವದೇ ಸ್ಥೂಲ ಶರೀರವು. ಮನಸ್ಸಿನ ಅಧೀನತೆಯಲ್ಲಿದ್ದು ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳ ಕಾರ್ಯಗಳನ್ನು ನಡಿಸುವದೇ ಸೂಕ್ಷ್ಮ ಶರೀರವಿರುತ್ತದೆ. ಮತ್ತು ಈ ಎರಡೂ ಶರೀರಗಳಿಗೂ ಚೈತನ್ಯವನ್ನು

ಪೂರೈಸುವದೇ ಕಾರಣ ಶರೀರವಾಗಿದೆ. ಹೀಗೆ ಮೂರು ಭಾಗಗಳನ್ನು ಕಲ್ಪಿಸಿದ್ದು ಇವೆಲ್ಲವು ಸ್ವಗತ ಭೇದವಳಿದು ಅಂದರೆ ಕಾಯಾ ವಾಚಾ ಮನಸ್ಸಿನಿಂದ ಆಗುವ ಪಾಪಕರ್ಮಗಳನ್ನು ಬಿಟ್ಟು ಪುಣ್ಯಕರ್ಮಗಳನ್ನೇ ಮಾಡುವದಲ್ಲದೆ ಸ್ವಜಾತಿ ಪರಜಾತಿ ಎನ್ನದೆ ಇಡೀ ಮಾನವ ಸಮಾಜ ಮತ್ತು ಇತರ ಪ್ರಾಣಿಗಳನ್ನು ತನ್ನಂತೆ ಒಗೆದು ಭೇದ ಬುದ್ಧಿಯನ್ನು ಅಳಿಯಬೇಕು. ಅದರಿಂದ ಉಂಟಾಗುವ ಏಕಾಗ್ರತೆಯೇ ಶಿವಜೀವೈಕ್ಯವೆಂದು ಹೇಳಬಹುದು. ಈ ಮೂರು ಶರೀರಗಳ ಆರಾಧ್ಯ ದೈವತಗಳು ಇಷ್ಟ ಪ್ರಾಣ ಮತ್ತು ಭಾವಲಿಂಗಗಳಾಗಿವೆ.

ಈ ಉದ್ದೇಶವನ್ನು ಸಾಧಿಸಲು ವೀರಶೈವ ಧರ್ಮದಲ್ಲಿ ಅಷ್ಟಾವರಣ, ಪಟ್‌ಸ್ಥಲ, ಪಂಚಾಚಾರವೆಂಬವು ಸಾಧನಗಳಾಗಿ ಕಲ್ಪಿಸಲ್ಪಟ್ಟಿವೆ.

ಅಷ್ಟಾವರಣಗಳು.

೧. **ಗುರು**:—ವೀರಶೈವನಿಗೆ ಇಷ್ಟಲಿಂಗದ ಪೂಜೆ, ಕಾಯಕದ ಜ್ಞಾನ, ಇವುಗಳನ್ನು ಕಲಿಸುವ ಶಿಕ್ಷಕನು.

೨. **ಲಿಂಗ**:-- ಸೃಷ್ಟಿಯ ನಿಯಮಕ್ಕೆ ಕಾರಣಗಳಾದ ಸತ್ವ, ರಜ, ತಮವೆಂಬ ತತ್ವಗಳ ರೂಪವನ್ನು ನೆನಪು ಕೊಡಲು ಕಲ್ಪಿಸಿದ ಒಂದು ವಿಧದ ತ್ರಿಕೋನ. ಅದರ ಮುಖ್ಯ ವಿಭಾಗಗಳುಯಾವವೆಂದರೆ:-

(ಅ) ಇಷ್ಟಲಿಂಗದ ಗದ್ದಿಗೆ.

(ಬ) ಆತ್ಮರೂಪದ ಸತ್-ಚಿತ್ ಆನಂದವೆಂಬ ತತ್ವಗಳೆಂದು ಮಾನಿಸಲು ಕಲ್ಪಿಸಿದ ತ್ರಿಕೋನ. ಇದು ಇಷ್ಟಲಿಂಗದ ಗದ್ದಿಗೆಯ ಮೇಲಿನ ಭಾಗ.

(ಕ) ಜಲಹರಿ – ಪೂಜಕನು.

(ಡ) ಪಿಂಡ—ಶಿವತತ್ವದ ಗುರ್ತು.

(ಇ) ಕರಿಕಾಂತಿ—ಮೇಲಿನ ನಾಲ್ಕು ವಿಭಾಗಗಳನ್ನು ಕೂಡಿಸಿ ಏಕತ್ರವಾಗಿ ರೂಪುಗೊಂಡ ಮೂರ್ತಿ. ಅಂದರೆ ನಿರಾಕಾರವಾದ ಭಾವ ಲಿಂಗದ ಕಲ್ಪನಾರೂಪವಾದ ಸಾಕಾರ ಮೂರ್ತಿಯೇ ಏಳು ಬಣ್ಣಗಳನ್ನು ಒಳಕೊಂಡ ಮತ್ತು ದೃಷ್ಟಿಯನ್ನು ಸಹಜವಾಗಿ ಆಕರ್ಷಿಸುವ ಕರಿ ಬಣ್ಣದ ಕಾಂತಿ.

೩. **ಜಂಗಮ**:-- ಸಾಧಕನು ಇಷ್ಟಲಿಂಗ ಪೂಜೆಯ ಸಾಧನದಿಂದ ಸಾಧಿಸಲಿಚ್ಛಿಸುವ ಸಾಧ್ಯವೆಂದರೆ ಜೀವಾತ್ಮನು. ಇವನು ಜೀವಾತ್ಮನು ಪರಮಾತ್ಮನಲ್ಲಿ ಬೆರೆಯಲು ಮಾಡಬೇಕಾದ ಕ್ರಿಯೆಯ ಜ್ಞಾನವನ್ನು ಉಪದೇಶಿಸುವ ಜ್ಞಾನಿಯು.

೪. **ಭಸ್ಮ**:-- ಅಸ್ಥಿರ ಸೃಷ್ಟಿಯಲ್ಲಿ ತರತರದ ರಂಗರೂಪನ್ನು ಕಳೆದು ಬಿಳಿಬಣ್ಣವಾಗಿ ಸ್ಥಿರರೂಪಗೊಂಡುದು ಭಸ್ಮ.

೫. **ರುದ್ರಾಕ್ಷಿ**:-- ಪರಮಾತ್ಮನ ಕಣ್ಣು ಎಂದು ಧಾರ್ಮಿಕ ದೃಷ್ಟಿಯಿಂದ ಮಾನಿಸುವ ಮತ್ತು ವೈದ್ಯಕೀ ದೃಷ್ಟಿಯಿಂದ ರಕ್ತಶುದ್ಧಿಗೆ ಉಪಯೋಗಿಸುವ ಮಣಿ.

೬. **ಮಂತ್ರ**:-- ಜೀವಾತ್ಮನು ಪರಮಾತ್ಮನಲ್ಲಿ ಬೆರೆಯುವ ಉದ್ದೇಶದಿಂದ ಭಕ್ತಾದಿ ಶರಣಾಂತ್ಯದ ವರೆಗೆ ಎಲ್ಲರೂ ನಡಿಸಿರುವ ಪ್ರಯತ್ನಗಳಲ್ಲಿ ಅವರವರ ಮನಸ್ಸು ಏಕಾಗ್ರವಾಗುವದು ಅವಶ್ಯ. ಆದರೂ ಹತ್ತು ಇಂದ್ರಿಯಗಳ ಅಧಿಪತಿಯಾಗಿರುವ ಮನಸ್ಸು ಸದಾ ಭೂತ ಸ್ಮರಣೆ ಇಲ್ಲವೆ ಭವಿಷ್ಯ ಚಿಂತನೆಯಲ್ಲಿ ತೊಡಿಕಿ ವ್ಯಗ್ರವಾಗಿರುವದು ಸಹಜ. ಕಾರಣ ಈ ವ್ಯಗ್ರತೆಯನ್ನು ಬಿಡಿಸಿ ಏಕಾಗ್ರತೆಯನ್ನು ಸಾಧಿಸಲು ಬೇಕಾದ ಸಾಧನವೇ ಮಂತ್ರವಾಗಿದೆ. ಅದೇ ಪರಮಾತ್ಮನ ನಿರ್ಗುಣ ಮತ್ತು ಸಗುಣ ರೂಪಗಳನ್ನು ನೆನೆಯಲು ಕಲ್ಪಿಸಿದ ಷಡಕ್ಷರ ಮತ್ತು ಪಂಚಾಕ್ಷರ ಮಂತ್ರಗಳು. ಯೋಗಶಾಸ್ತ್ರವೆತ್ತರು ಮನುಷ್ಯ ಶರೀರದ ಆರೋಗ್ಯತೆ ಮನಸ್ಸಿನ ಶಾಂತತೆ ಮತ್ತು ಆಯುಷ್ಯ ಬೆಳವಣಿಗೆ ಇವುಗಳಿಗೆ ಮಂತ್ರ ಉಪಯೋಗವಾದುದು ಎಂದು ಮನಗಂಡು ಬೇರೆ ಬೇರೆ ವ್ಯಾಯಾಮಗಳಲ್ಲಿ ಪುಪ್ಪುಸಗಳ ವ್ಯಾಯಾಮವು ಅತಿ ಉಪಯೋಗವಾದುದೆಂದು ಅದಕ್ಕಾಗಿ ಜಪದ ಸಾಧನೆಯನ್ನು ಬಳಕೆಯಲ್ಲಿ ತಂದಿರುವರು.

೭. ಪಾದೋದಕ (ತೀರ್ಥ) } ಉಚ್ಚ ನೀಚ ಭಾವವಳಿದು
೮. ಪ್ರಸಾದ } ಭಕ್ತಾದಿ ಶರಣಾಂತ್ಯದ ವರೆಗೆ

ಶರೀರ ಪೋಷಣೆಗೆ ಬೇಕಾಗುವ ಯೋಗ್ಯ ಸಂಸ್ಕಾರ ಹೊಂದಿದ ಜಲ ಮತ್ತು ಆಹಾರ.

ಪಂಚಾಚಾರಗಳು.

೧. **ಲಿಂಗಾಚಾರ:**--ವೀರಶೈವನು ಇಷ್ಟಲಿಂಗದಲ್ಲಿ ನಿಷ್ಠೆ ಇಟ್ಟು ದೀಕ್ಷೆ ಹೊಂದಿದ ಶಿವಭಕ್ತರಲ್ಲಿ ಜಾತಿ ಕುಲ ಭೇದವೆಣಿಸದೆ ಶಿವಪ್ರಸಾದವನ್ನು ಸ್ವೀಕರಿಸುವದು.

೨. **ಶಿವಾಚಾರ:**-- ಯಾವದೇ ಕಾಯಕ ಮಾಡುತ್ತಿದ್ದರೂ, ವೀರಶೈವನು ಸದಾಶಿವನ ಸೇವೆಯ ಬಗ್ಗೆ ಎಚ್ಚರದಿಂದಿರುವದು.

೩. **ಭೃತ್ಯಾಚಾರ:**— ವೀರಶೈವನು ಎಲ್ಲರ ಕೂಡ ವಿನಯ, ಪ್ರೇಮ, ಆದರದಿಂದ ನಡಿಯುವದು.

೪. **ಸದಾಚಾರ:**— ವೀರಶೈವನು ತಾನು ಶುದ್ಧಕಾಯಕದಿಂದ ಹುಟ್ಟಿಸಿದ್ದರಲ್ಲಿ ಗುರು ಜಂಗಮರಿಗೆ ಸಹಾಯ ಮಾಡುವದು. ಜಂಗಮರೆಂದರೆ ಕಾವಿ ಅರಿವೆಯ ಸೋಗು ಹಾಕಿ ಕಂಡವರ ಕಡೆಯಿಂದ ಕಾಲು ಬೀಳಿಸಿಕೊಂಡು, ಪರರ ದ್ರವ್ಯದಿಂದ ತನ್ನ ಸ್ವೇಚ್ಛಾಚಾರವನ್ನು ನಿರಾತಂಕವಾಗಿ ಸಾಗಿಸಿ ಆಲಸ್ಯತನಕ್ಕೆ ತವರುಮನೆಯಾಗಿ ಪಂಚಪಾತಕಗಳ ಪೋಷಕರಾಗಿರುವ ಸಮಾಜಕಂಟಕರಲ್ಲ. ಆದರೆ ತಾವು ಸ್ವತಃ ತನುಮನದಿಂದ ಸಮಾಜ ಸೇವೆಯಲ್ಲಿ ನಿಃಸ್ವಾರ್ಥಬುದ್ಧಿಯಿಂದ ಸದಾ ತೊಡಕಿ, ಸದ್ಭಕ್ತ್ಯಾದಿ ಶರಣಾಂತ್ಯದ ವರೆಗೆ, ವ್ಯಂಗ ಶರೀರದ ಮೂಲಕ ಕಾಯಕ ಮಾಡಲಾರದವರಿಗೆ ಮತ್ತೂ ವಿದ್ಯಾರ್ಥಿ ಮುಂತಾದ ಅಸಹಾಯರಿಗೆ ನೀಡಿ ಸದ್ಭಕ್ತಿಯಿಂದ ನಡೆಯುವವರು.

೫. **ಗಣಾಚಾರ:**— ಭೃತ್ಯಾಚಾರದಲ್ಲಿ ನಿಮಗ್ನನಾದವನಂತೆ ನಡೆಯುವದಲ್ಲದೆ ಯಾರಾದರೂ ಶಿವ-ಗುರು-ಜಂಗಮ-ಪ್ರಮಥ ಭಕ್ತ ಮುಂತಾದ ಯಾವದೇ ನಿರಪರಾಧಿಗೆ ಯಾವದೇ ತರದ ಅನ್ಯಾಯ ಮಾಡುವದು ಕಂಡುಬಂದರೆ ತಪ್ಪುಗಾರರನ್ನು ಶಿಕ್ಷಿಸಲಿಕ್ಕೆ ತನ್ನಿಂದ ಶಕ್ಯವಾದ ಉಪಾಯಗಳನ್ನು ಕೃತಿಯಲ್ಲಿ ತರುವದು.

ಷಟ್‌ಸ್ಥಲಗಳು.

೧. **ಭಕ್ತಸ್ಥಲ:**—ಅಂಗಸ್ಥಲ ೧೫ ಲಿಂಗಸ್ಥಲ ೯ ಅಂತು ೨೪. ಇಲ್ಲಿ ಆಚಾರಲಿಂಗ. ವೀರಶೈವನು ಶರೀರದ ಅಂದರೆ ಮೂವತ್ತಾರು (೩೬) ತತ್ವಗಳ ವಿಶ್ರಣದಲ್ಲಿ ಒಂದಾದ ಅಹಂಕಾರ ತತ್ವದ ಪರಿಣಾಮವಾಗಿ, ನಾನು ನನ್ನದು ಅಂದರೆ ಅಹಂಕಾರ ಮಮಕಾರವೆಂಬ ಮಾಯೆಯ

ಪ್ರಪಂಚದಲ್ಲಿ ಒದ್ದಾಡುವ ಸಂಕಟದೊಳಗಿಂದ ಪಾರಾಗಿ ಜೀವಾತ್ಮನು ಪರಮಾತ್ಮನಲ್ಲಿ ಬೆರೆಯುವ ಸಾಧ್ಯವನ್ನು ಸಾಧಿಸಲು ಸಾಧನವಾದ ಆರು ಕಾಲಿನ ನಿಚ್ಚಣಿಕೆಯನ್ನು ಅಂದರೆ ಷಟ್‌ಸ್ಥಲಗಳನ್ನು ಆಚರಿಸುವ ಪ್ರಯತ್ನದಲ್ಲಿ ಇರುವ ಸಾಧಕನು. ಇವನು ಉಪೇದುವಾರನೆಂದು ಹೇಳಬಹುದು.

ಈ ಉಪೇದವಾರನು ಸದ್ಗುರುವು ದಯಪಾಲಿಸಿದ್ದ ಇಷ್ಟಲಿಂಗವನ್ನು ಅವ್ಯಭಿಚಾರಿಣಿ ಭಕ್ತಿಯಿಂದ ಪೂಜಿಸಿ ಸದಾ ಸರ್ವದಾ ಅದನ್ನು ಶರೀರದ ಮೇಲೆ ಧರಿಸಿ ಪಂಚಪಾತಕಗಳು ಸೋಂಕದಂತೆ ಆಚರಿಸಿ, ಕಾಯಕವೇ ಕೈಲಾಸ, ಭವವೆಂಬುವದು ಕೆಳಗಿಲ್ಲ, ಕೈವಲ್ಯವೆಂಬುವದು ಮೇಲೆ ಇಲ್ಲ, ಕಾಯಕದಲ್ಲಿ ಉಚ್ಚ ನೀಚ ಭಾವವಿಲ್ಲೆಂದು ನೆರಿನಂಬಿ, ಇರಿವೆಯಂತೆ ದುಡಿದು ಶಿಕ್ಕದ್ದರಲ್ಲಿ ಸದ್ಗುರು ಜಂಗಮಕ್ಕೆ ಅಂದರೆ ಸಮಾಜ ಕಾರ್ಯಕ್ಕೆ ಯೋಗ್ಯ ಪ್ರಮಾಣದಿಂದ ಒಪ್ಪಿಸಿ ಉಳಿದದ್ದನ್ನು ಲಿಂಗಾರ್ಪಿತ ಭಾವದಿಂದ ಸ್ವೀಕರಿಸಿ ಶಾಂತಚಿತ್ತದಿಂದ ಪ್ರಪಂಚ ಸಾಗಿಸುವವನೇ ಭಕ್ತನು.

೨. **ಮಹೇಶಸ್ಥಲ:**— ಅಂಗಸ್ಥಲ ೯ ಲಿಂಗಸ್ಥಲ ೯ ಅಂತೂ ೧೮. ಇಲ್ಲಿ ಗುರುಲಿಂಗ. ಮೇಲಿನಂತೆ ವಿಶಿಷ್ಟ ಆಚರಣೆ ಯುಕ್ತನಾದ ಭಕ್ತನು ಸದ್ಗುರುವಿನಿಂದ ದೀಕ್ಷೆಯನ್ನು ಪಡೆದು ಶಿವ, ಗುರು, ಜಂಗಮ, ಭಕ್ತ ಮುಂತಾದ ಯಾವದೇ ನಿರಪರಾಧಿಗೆ ಯಾರಾದರೂ ಅನ್ಯಾಯ ಮಾಡಿದರೆ ತಪ್ಪುಗಾರನನ್ನು ಶಿಕ್ಷಿಸಲು ತನ್ನಿಂದಾದಷ್ಟು ಪ್ರಯತ್ನಿಸಿ, ವ್ಯರ್ಥ ಅರಿದುಂಬುವದನ್ನು ಧಿಕ್ಕರಿಸಿ ಬಿಟ್ಟು, ವಿರಕ್ತಿ ಪ್ರಾಧಾನ್ಯ ಗುಣಗಳನ್ನು ಹೊಂದಿ ಶಾಲಾ, ಶಿಕ್ಷಣ, ಪುರಾಣ, ಕೀರ್ತನ, ಪ್ರವಚನ, ಉಪನ್ಯಾಸ, ವ್ಯಾಖ್ಯಾನ, ಭಾಷಣ, ಉಪದೇಶ, ಮುಂತಾದ ದ್ವಾರಗಳಿಂದ ಸಮಾಜ ಸೇವೆಯನ್ನು ಮಾಡಿ, ಸಮಾಜವು ಗೊತ್ತುಪಡಿಸಿದ್ದ ಕೋರನ್ನ-ಸ್ವಯಂಪಾಕ, ಕಾಡೆ, ಫಸಕಿ, ದೀಪಾರಾಧನೆ, (ದಾನವಲ್ಲ) ದಕ್ಷಿಣ, ಹಕ್ಕು ಬಾಬು, ಮುಂತಾದ ರೂಪದಿಂದ ಚರಿತಾರ್ಥನಾಗಿಸಿ ತೃಪ್ತಮನಸ್ಕನಾಗಿ ವಿಹಂಗಮ (ತೊಗಲಬಾವಲಿ) ನಂತೆ ಏಕನಿಷ್ಠೆಯಿಂದ ತನ್ನ ಇಷ್ಟಲಿಂಗವನ್ನು ಪೂಜಿಸುವವರಲ್ಲಿ ಶಾಂತಚಿತ್ತನಾಗಿರುವವನು. ಇಂಥವನೇ ಮಹೇಶನು ಹೊರ್ತು ಆತನ ಸಂತತಿ ಮಾತ್ರದಿಂದ ಮಹೇಶನಲ್ಲ. ಸದ್ಗುರುವಿನಿಂದ ದೀಕ್ಷೆ ಹೊಂದುವಾಗ್ಗೆ ಗುರುವು ದಯಪಾಲಿ

ಸುವ ಜೋಳಿಗೆ ಎಂದರೆ ಸಮಾಜ ಸೇವೆಯನ್ನು ಕುರಿತು ದೊರಕಿಸುವ ಸಹಾಯ ಹೊರ್ತು ಧನ, ಧಾನ್ಯ, ಅನ್ನ, ವಸ್ತ್ರ, ರೊಕ್ಕ ರೂಪಾಯಿ, ಹೊಲಮನೆ, ಕುದುರೆ ಆನೆ, ಪಾಲಕಿ ಮೇಣಿ, ಚೌರಿ ಚಾಮರ, ಮುಂತಾದ್ದನ್ನು ದೊರಕಿಸಿ ಉಂಡುಟ್ಟು ಸಮಾಜ ಕಂಟಕನಾಗುವದು ಅಲ್ಲ. ಆದರೆ ಅದೇ ಮಹೇಶನು 'ಸ್ವಯ' (ಒಬ್ಬೊಬ್ಬ ಭಕ್ತರ ಸಲುವಾಗಿ) 'ಚರ' ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿಯಂತೆ ಸಂಚರಿಸಿ ಅಥವಾ 'ಪರ' ಅಂದರೆ (ಮೇಲಿನ ಇಬ್ಬರ ಮೇಲೆ ಮೇಲ್ವಿಚಾರಿಯಂತೆ) ಮೇಲೆ ಹೇಳಿದ ಸಾಧನದಿಂದ ಸಮಾಜ ಸೇವೆಯನ್ನು ಮಾಡುತ್ತಿದ್ದರೆ ಆತನಿಗೆ ತಿರಿದುಂಬುವದು ಕ್ಷಮ್ಯವು. ಇದರ ಹೊರ್ತು ಭಿಕ್ಷಾಧೀಶನು ಲಕ್ಷಾಧೀಶನಾಗುವದು ಸಮಾಜದ ಅಹಿತವೇ ಸರಿ.

೩. **ಪ್ರಸಾದಿಸ್ಥಲ:**--ಅಂಗ ೭ ಲಿಂಗ ೯ ಅಂತೂ ಹದಿನಾರು ಸ್ಥಲಗಳು. ಇಲ್ಲಿ ಶಿವಲಿಂಗ. ಮೇಲಿನಂತೆ ನಿರ್ಮಲ ಮನಸ್ಸಿನ ಮಹೇಶನು ಕೋಳಿಯಂತೆ ಅವಧಾನ ಭಕ್ತಿಯಿಂದ ಜಗತ್ತು ಶಿವನ ಪ್ರಸಾವೆಂದು ನೆರೆನಂಬಿ ಸಿಕ್ಕುಪ್ಪು ಪ್ರಸಾದವನ್ನು ಆನಂದದಿಂದ ಮತ್ತು ಪ್ರೀತಿಯಿಂದ ಸ್ವೀಕರಿಸಿ ದುಃಖಗಳು ಒದಗಿದರೆ ಅವನ್ನೇ ಸುಖವೆಂದು ಭಾವಿಸಿ, ಉಂಡು ಉಪವಾಸಿ, ಬಳಿಸಿ ಬ್ರಹ್ಮಚಾರಿಯಂತೆ ನಡೆಯುವವನು ಪ್ರಸಾದಿಯು.

೪. **ಪ್ರಾಣಲಿಂಗಿ:**-- ಅಂಗ ೫, ಲಿಂಗ ೧೨ ಅಂತೂ ೧೭ ಸ್ಥಲಗಳು. ಇಲ್ಲಿ ಚರಲಿಂಗ. ಜ್ಞಾನಯೋಗದಿಂದ ಯುಕ್ತವಾದ ಪ್ರಸಾದಿಯು ಪ್ರಾಣವೇ ಲಿಂಗ, ಲಿಂಗವೇ ಪ್ರಾಣವೆಂದು ಭಾವಿಸಿ, ತನ್ನ ಜೀವದ ಮೇಲಿನ ಮೋಹವನ್ನು ಬಿಟ್ಟು ಸಕಲ ಪ್ರಾಣಿಗಳನ್ನು ತನ್ನಂತೆಯೆ ಭಾವಿಸಿ ಪರೋಪಕಾರ ಮತ್ತು ಭೂತದಯೆ ಇವು ಮುಖ್ಯ ಸ್ವಭಾವವಾಗಿ ಸಮಾಜ ಸೇವೆಗೆ ಆತ್ಮಾರ್ಪಣವಾಡಿ ನಿಸ್ವಾರ್ಥಬುದ್ಧಿಯಿಂದ ಶಿವನ ಸೇವೆಯನ್ನು ಮಂಗನಂತೆ ಅನುಭವ ಭಕ್ತಿಯಿಂದ ಮಾಡುವವನು ಪ್ರಾಣಲಿಂಗಿಯು.

೫. **ಶರಣಸ್ಥಲ:**-- ಅಂಗ ೪ ಲಿಂಗ ೯ ಅಂತೂ ೧೩. ಪ್ರಸಾದಿ ಲಿಂಗ. ಬಾಹ್ಯ ವ್ಯಾಪಾರವನ್ನು ಮರೆತಿರುವ ಪ್ರಾಣಲಿಂಗಿಯು ನಾಯಿಯಂತೆ ಆನಂದದಿಂದ ವಿಶ್ವಾಸ, ವಿಶ್ವಾಸದಿಂದ ಸಮಾಜ ಸೇವೆಯಲ್ಲಿ ನಿಮಗ್ನನಾಗಿದ್ದು ಶರಣನ ನಡೆ ನುಡಿಯೇ ಸಾರ್ವಜನಿಕರು ಅನುಸರಿ

ಸುವ ದಾರಿ ಎಂದು ಎಚ್ಚರದಿಂದ ನುಡಿದಂತೆ ನಡೆದು, ನಾನು ಯಾರು, ಎಲ್ಲಿಂದ ಬಂದೆ, ಎಲ್ಲಿ ಹೋಗುವದು, ಅಂದರೆ ಆತ್ಮಾನಾತ್ಮ ತತ್ವಗಳ ಜ್ಞಾನ ಹೊಂದಿ, ಶರಣ ಸತಿ ಲಿಂಗಪತಿ ಎಂಬ ಭಾವನೆಯಿಂದ ಆತ್ಮವೇ ಲಿಂಗವೆಂದು ನಂಬಿ, ಸುಖದುಃಖ ಸೀತೋಷ್ಣ ಸ್ತುತಿ ನಿಂದೆ ಎಂಬ ಭೇದವೆಣಿಸದೆ, ಎಲ್ಲವೂ ಸಮವೆಂದು ಭಾವಿಸಿ, ಪರಮಾತ್ಮನೇ ತಾನೆಂದು ನಂಬಿಗೆಯಿಂದ ನಡೆಯುವವನು ಶರಣನು.

೬. **ಐಕ್ಯಸ್ಥಲ:**— ಅಂಗ ೪ ಲಿಂಗ ೯ ಅಂತೂ ೧೩. ಇಲಿ ಮಹಾಲಿಂಗ. ಶಿವಜೀವರಲ್ಲಿ ಭಿನ್ನ ಭಾವವನ್ನು ಅಳಿದಿರುವ ಶರಣನು ಆನೆಯಂತೆ ಸಮರಸ ಭಕ್ತಿಯಿಂದ ಅಂಗಲಿಂಗ, ನಾನು ನೀನು, ಎಂಬ ಭೇದವಿಲ್ಲದೆ ಜಾಗ್ರತ್ ಸ್ವಪ್ನ-ಸುಷುಪ್ತಿಯಲ್ಲಿಯೂ ಅಂಗವಾಸನೆಯು ಉಳಿಯದೆ ಲಿಂಗರೂಪದಲ್ಲಿಯೇ ಉಳಿಯುವ ಮೂಲಭಕ್ತನೇ ಐಕ್ಯನು.

ಸ್ವಾನುಭಾವದಲೆ.

ಲೇಖಕಃ— ಶ್ರೀ. ಸದಾಶಿವ ಶಿವಾಚಾರ್ಯ ಸ್ವಾಮಿಗಳು,
ಸಖರಾಯಪಟ್ಟಣ.

(ವಚನ)

ನೊಣವು ಹಾರಿ ಒಂದು ಕ್ಷಣ ಶಿವಲಿಂಗದ ಮುಂಡೆ, ಶಿವನಿರ್ಮಾಲ್ಯ, ಶಿವನೈವೇದ್ಯ ಮೊದಲಾದುತ್ತಮ ಸ್ತುತ್ಯ ವಿಷಯಗಳ ಮೇಲೆ ಕೂತು, ಮತ್ತೊಂದು ಕ್ಷಣದಲ್ಲಿ ಹಾರಿ ಸ್ಮರಿಸಲು ಬಾರದ ಅಸಹ್ಯ ಅಮೇಧ್ಯ ಹುಣ್ಣು ಮುಂತಾದ ಹೀನ ವಿಷಯಗಳಲ್ಲೆರಕಗೊಂಡು ಕುಳಿತುಕೊಳ್ಳುವಂತೆ, ಎನ್ನೀ ಮನವು ಶಿವಲಿಂಗ ನಿರೀಕ್ಷಣೆ, ಚಿಂತನೆ, ಶಿವಾನುಭವ ಗೋಷ್ಠಿ, ಶಿವಪ್ರಸಾದ ಸೇವನಾದಿ ಸದ್ವಿಷಯದಲ್ಲಿ ಕ್ಷಣಮಾತ್ರ ಪರಿದಾಡುತ್ತಿದ್ದರೆ ಅರಕ್ಷಣದಲ್ಲಿ ಧನಕನಕ ಕಾಂತಾದಿ ಪ್ರಾಪಂಚಿಕ ವಿಷಯ ವ್ಯಾಮೋಹದಲ್ಲೆರಕವುಳ್ಳುದಾಗಿ ಹರಿದಾಡುವುದು ನೋಡಾ-ಮನ್ಮದೀ ಕ್ಷುದ್ರಮಕ್ಷಿಕ ಸ್ವಭಾವವ ನಾಣಿಸಿ, ಸದಾ ಪುಷ್ಪಕ್ಕೆರಗಿ ಮಧುರಸವನ್ನೀಂಟುವ ಮರಿಜೇಂದುಂಬಿಯ ಸ್ವಭಾವವನ್ನೇ ಅನುಗ್ರಹಿಸಿ, ನಿರಂತರ ನಿಮ್ಮ ಪಾದಾರವಿಂದ ಮಕರಂದವನ್ನೇ ಸ್ವೀಕರಿಸುತಣಿವಂತೆ ಮಾಡಯ್ಯಾ ನಿಮ್ಮ ಧರ್ಮ, ಎನ್ನಾರಾಧ್ಯ ಚಿಲ್ಲಿಂಗ ಮೂರ್ತಿಯೇ.

ಶರಣರ ತೋಟ.

ಲೇಖಕಃ— ಶ್ರೀ. ಮಹಾಂತದೇವ ಶಿವಮಂದಿರ
ಚಿತ್ರಗಿ ಇಲಕಲ್ಲ.

ಹಿಂದಿನ ಶರಣರು
ತನುವಂ ತೋಂಟವ
ಮನವಂ ಗುದ್ದಲಿ ಮಾಡಿದರು ॥೧॥

ಅಗಿದರು ಕಳೆವರು
ಭ್ರಾಂತಿಯ ಬೇರನು
ಒಡೆದರು ಸಂಸಾರದ ಹೆಂಟಿ? ॥೨॥

ಬಗೆದರು ಬಿತ್ತಿದ
ರೀಪರಿ ತೋಟದಿ
ಬ್ರಹ್ಮವೆಂಬೀ ಬೀಜವನು ॥೩॥

ಅಖಂಡ ಮಂಡಲ
ವೆಂಬೀ ಬಾವಿಗೆ
ಹೋದರು ತಂದರು ಜಲವನ್ನು ॥೪॥

ಸಲುಹಿದರೀ ಪರಿ
ಹಾಕುತ ಶಶಿಗಳ
ಸಮತೆಯ ಬೇಲಿಯನಿಕ್ಕುತಲಿ ॥೫॥

ಈಶ್ವರ ವಚನಗಳು.

(ಲೇಖಕಃ— ಶ್ರೀ. ಕೆ. ಈಶ್ವರನ್.)

೧. ಗಾಳಿ ಬೀಸಿದೊಡೆ ಏನು ದೇವರಿ ಬಂದಿರಾ ಎಂಬರಯ್ಯ ನನ್ನವರು. ಗಿಡದ ಎಲೆ ಚಲಿಸಿದೊಡೆ ಆರ ಮನೆ ಸೇರಿದಿರಿ ದೇವ ಎಂಬರಯ್ಯ ನನ್ನವರು. ನೆಲನ ಹೊದಿಸಿದ ಹುಲ್ಲು ಬಳುಕಿದೊಡೆ ಏಕೆ ದಣಿದಿರಾ ದೇವ ಎಂಬರಯ್ಯ ನನ್ನವರು. ಅವರ ಉಪಚಾರಕ್ಕೆ ನಿನ್ನ ವತ್ತಾನವೆ ಪ್ರಸಾದವೆಂಬೆನಯ್ಯ ಕಪ್ಪಡಿ ಸಂಗಮದೇವ.

೨. ಲೋಕದ ತಂದೆ ತಾಯಿವ್ವರಾ, ನಾನು ಬೇಡಿದುವ ತಂದು ಕೊಡಬಲ್ಲಿರಾ ನಿಮ್ಮ ಹೆಮ್ಮಗನಂತೆ ಸೇವೆಗೆಯ್ಯುವೆ. ಪ್ರಪಂಚದ ಖಗ ಕುಲನೆ, ವನಶ್ರೇಣಿಗಳೆ, ನಾನು ಬಯಸಿದುದ ತೋರುವಿರಾ ತಂಗಾಳಿ ಹೊಂಬಿಸಿಲಿನಂತೆ ನಿಮ್ಮನೋಲೈಸುವೆ. ಎನ್ನಯ್ಯ ಕಪ್ಪಡಿ ಸಂಗಮ ನಿರವ ತೋರಿ ನಿಮ್ಮ ಪರಿಚಾರಕನಾಗಿ ಮಾಡಿಕೊಂಬುದು.

೩. ನಿಮ್ಮ ಸೃಷ್ಟಿ ಲೀಲೆಯ ನೋಡಿ ನೋಡಿ ದಣಿಯೆನಯ್ಯ. ಹೊಗಳಿ ಹೊಗಳಿ ಅಲಿಸೆನಯ್ಯ. ನೀವದನು ಸೈರಣೆದೋರಿ ಮನ್ನಿಸುವುದಾದರೆ ಎನ್ನ ಕುಲಕೋಟಿ ಉದ್ಧಾರವಾಗುವುದೆಂಬೆನಯ್ಯ ಕಪ್ಪಡಿ ಸಂಗಮದೇವ.

೪. ನೀನು ಕಾಣುವ ಕನಸನು ಎನ್ನ ಮುಂದೆ ಬಿಚ್ಚಿ ಹೇಳಾ ಪ್ರಕೃತಿ ಮಾತೆ. ನಿನ್ನ ಮೊಲೆವಾಲ ಕುಡಿದು ಬಳೆದ ಶಿಶು ನಾನು. ನಿನ್ನ ತುಟಿ ಜೇನ ಸವಿದು ಬಳೆದ ಕಂದ ನಾನು. ಹಾ! ಮಗನ ಉದಯದ ಚಿಂತೆಯೊಂದಲ್ಲದೆ ತಾಯಿಗಿನ್ನೇತರ ಭಾಗ್ಯ, ಬಯಕೆ! ನುಡಿ. ಬೇಗ ನುಡಿಯದಿರ್ದೊಡೆ ಕಪ್ಪಡಿ ಸಂಗಮನಾಣೆ.

೫. ಕೆರಳಿದ ಚಿತ್ತ, ಕೆದರಿದ ಸೋರ್ಮುಡಿಯೊಂದಿಗೆ ಭೈರವಿಯಂತೆ ಅಂಡಲೆಯುವ ತಾಯಿ ನೀನಾರು ಹೇಳವ್ವ! ಪ್ರಕೃತಿಮಾತೆಯೇನು? ಅಂಗಕ್ಕೆ ವಂಚಿಸುವರು; ಪ್ರಾಣಕ್ಕೆ ಪಾತಾಳದೋರುವ

ರೆಂಬೆಯೇ ಅಬ್ಬೆ? ಬಾಳ ಕಡಲಲ್ಲಿ ಲಂಗರವನೂರಿ ನೆಲೆ ನೋಡ ಬಯಸಿರುವನಪ್ಪ ನವ್ಮ ಕಪ್ಪಡಿ ಸಂಗಮದೇವ. ಒವ್ಮೆ ಧರ್ಮ ಪತಾಕೆಯನೆತ್ತ ಬಯಸುವ. ಇನ್ನೊವ್ಮೆ ಕಿತ್ತೊಗೆಯ ಬಯಸುವ.

೬. ಹುಲ್ಲು ನಗುತಿದೆ. ನೋಡಿ ನಿನ್ನ ಮನದ ಮಾಲಿನ್ಯವ ನೀಗಿಕೊಳ್ಳೈ ಮಾನವ. ಹಕ್ಕಿ ಹಾಡುತಿದೆ. ಕೇಳಿ ನಿನ್ನ ಜಡತನವ ಕಳೆದುಕೊಳ್ಳೈ ಮಾನವ. ಮಾನವನೆಂದು ಕೂಗಿಸಿಕೊಂಡು ಮೌಢ್ಯ ತನವ ತೋರದಿರು. ನೋಡಲ್ಲಿ ಸೃಷ್ಟಿ ಲೀಲೆಯ. ಸಮರಸವಾಗು. ಸಮರತಿಯಾಗು. ಸವೈಕ್ಯ ಹೊಂದು. ಕಪ್ಪಡಿ ಸಂಗಮದೇವನೂ ಮಾನವನೆಂದು ಕರಿವನು ಕಂಡಯ್ಯ.

೭. ಬೆಳಗ ಮೂಡಿ ಬರುವ ಮುನ್ನ ಹಕ್ಕಿಗಳ ಕಲಕಲಾಟ ಕೇಳ ಬಂದಿತು. ಅಯ್ಯಾ, ಗೂಡನಗಲಿ ಬಂದು ಕಿವಿಗೊಟ್ಟು ನಿಂತೆ. 'ಸೋಽಹಂ' 'ಸೋಽಹಂ' ಎಂಬ ಸಾನುರಾಗ ಸೃಷ್ಟಿಯ ಅಣು ರೇಣು ವಿನಲ್ಲಿ ತುಂಬಿ ತುಳುಕುವುದ ಕಂಡೆ. ಕಪ್ಪಡಿ ಸಂಗಮದೇವರೆ, ಕಣ್ಣು ತುಳುಕಿತು. ಹೃದಯ ತುಂಬಿತು. ಆನೂ ಹಕ್ಕಿಯ ಕೊರ ಲಾಗಲೆಳಸಿದೆ. ನಿಮಗಿಷ್ಟವಾದರೆ ಎನ್ನ ಮಣ್ಣು ಮಾಡಿ ತಿದ್ದಿ ತೀಡು ವುದಯ್ಯ. ತಂದೆ.

ಸಂಗೀತವಚನ.

ಸಂಗೀತ ನಿರ್ದೇಶಕಃ— ಗಾಯನಕಲಾ ಕೋವಿದ.
ಶ್ರೀ. ಜಿ. ಎಸ್. ಜ್ಯೋತ್ಕಿಮಠ.

ರಾಗ--ಯಮುನ.

ತಾಳ—ತ್ರಿತಾಲ. ಮಾತ್ರಾ—೧೬.

ಈ ರಾಗವು, ಕಲ್ಯಾಣ ಥಾಟನೊಳಗಿಂದ ಹುಟ್ಟಿದೆ. ಎಲ್ಲ ಸ್ವರಗಳು ತೀವ್ರ ಇರುತ್ತವೆ.

ಜಾತಿ (ವರ್ಗ) ಸಂಪೂರ್ಣ
ವಾದಿ ಗಂಧಾರ. ಸಂವಾದಿ ನಿಷಾಧ.
ಸಮಯ—ರಾತ್ರಿ ಮೊದಲನೆಯ ಪ್ರಹರ.
ರಾಗದ ಮುಖ್ಯ ಅಂಗ— ಪ. ರಿ ಗ ರಿ ಸ
ಆರೋಹಣ— ಸ ರಿ ಗ ಮ ಪ ಧ ನಿ ಸ.
ಅವರೋಹಣ— ಸ ನಿ ಧ ಪ ಮ ಗ ರಿ ಸ॥

೦	೧	೨	೩
ನಿ ೀ ನೊಲಿ	ದರೆಕೊರ	ಡುಕೊನರು	ವದಯ್ಯ
ಪ— ಪ ಪ	ಧಪಮಗ	ರಿನಿರಿಗ	ಗಪರಿಸ
ನೀ ನೊಲಿ	ದರೆಬರ	ಡುಹಯನ	ವಹುದಯ್ಯ॥ಪ॥

ಅಂತರ.

ಪ ಗ ಪ ಪ	ಪ ಪ ಧ ಪ	ಸ'— ಸ'	ಸ ರಿ ಸ ಸ
ನೀ ನೊಲಿ	ದರಿಬಿಪ	ಅನಪ್ಪೈತ	ವಹುದಯ್ಯ
ನಿ— ನಿ ನಿ	ಮುಪನಿಸ	ನಿದಪಗರಿಗ	ಪರಿರಿಸ
ನೀ ನೊಲಿ	ದೞರಿಸಳ	ಲಪಡಿಪ	ದಾಥ್ಗಳು
ನಿ ನಿ ರಿ—	ಗ— ಪ ಪ	ನಿ— ಧ ಪ	ರ— ಸ ಸ
ಐ ದಿ ರ ನ	ಲಿನಪ್ಪುದು	ಕೂಡಲ	ಸಂಗಯ್ಯ॥

ಇಷ್ಟಲಿಂಗವು ಕಪ್ಪುವರ್ಣವೇಕೆ?

(ಲೇಖಕಃ— ಮಧುಕರ.)

ಶಿವಶರಣರು ಹಿಂದುಸ್ತಾನದಲ್ಲಿ ಆಗಿಹೋದ ಸಾಧಕರಲ್ಲಿ ಮಹತ್ವದ ಸ್ಥಾನವನ್ನು ಹೊಂದಿದ್ದಾರೆ. ಅವರು ಬಾಹ್ಯ ವಸ್ತುಗಳನ್ನು ತಮ್ಮ ಅಂತರಂಗಕ್ಕೆ ಸಂಬಂಧಿಸಿ, ಅಂತರಂಗದ ಶಕ್ತಿಯನ್ನು ಬೆಳಿಸಿಕೊಂಡಿದ್ದಾರೆ. ಅವರು ಅಂತರಂಗ ಬಹಿರಂಗ ಎಂದು ವಿಂಗಡಿಸುವದಿಲ್ಲ. ಬಹಿರಂಗದಿಂದ ಅಂತರಂಗದ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳವದೇ ಅವರ ಧ್ಯೇಯವಾಗಿದೆ. ಲಿಂಗ ಪೂಜಾಕ್ರಮದಲ್ಲಿ ಅವರ ಈ ತತ್ವವು ಸ್ಪಷ್ಟವಾಗುತ್ತದೆ.

ಇಷ್ಟಲಿಂಗವು ಬಾಹ್ಯ ಚಿನ್ಹವೇನೋ ನಿಜವು. ಆದರೆ ಶಿವಶರಣರು ಇದರ ಮೂಲಕ ಪ್ರಾಣಲಿಂಗವನ್ನು ಪ್ರಕಟ ಮಾಡಿಕೊಂಡಿದ್ದಾರೆ. ಇಷ್ಟಲಿಂಗದ ಮೇಲೆ ಅವರು ದೃಷ್ಟಿಯನ್ನಿಟ್ಟು ತಮ್ಮ ಮನಸ್ಸಿನ ಏಕಾಗ್ರತೆಯನ್ನು ಹೆಚ್ಚಿಸಿಕೊಂಡು ಈ ಸ್ಥಿತಿಯನ್ನು ಉಂಟುಮಾಡಿಕೊಂಡಿದ್ದಾರೆ. ಮನಸ್ಸಿನಲ್ಲಿ ಮಹತ್ತಾದ ಶಕ್ತಿಯು ಹುದುಗಿರುತ್ತದೆ. ಆದರೆ ಮನಸ್ಸು ಚಂಚಲವಿರುವದರಿಂದ ಅದರ ಶಕ್ತಿಯು ಪ್ರಕಟವಾಗುವದಿಲ್ಲ. ಆದರೆ ಮನಸ್ಸು ಸ್ಥಿರವಾದ ಕೂಡಲೆ ಅದರಲ್ಲಿ ಶಕ್ತಿಯು ತಲೆದೋರಹತ್ತುತ್ತದೆ. ಈ ಶಕ್ತಿಯ ಮೂಲಕವೇ ಮನುಷ್ಯನಿಂದ ಮಹತ್ತಾದ ಕಾರ್ಯಗಳಾಗುತ್ತವೆ. ಆಗ ಬಹಿಃಸೃಷ್ಟಿಯಲ್ಲಿ ಅವನು ರಾಷ್ಟ್ರನಿರ್ಮಾಣಕನೂ ಜನರ ನಾಯಕನೂ ಆಗುತ್ತಾನೆ. ಆದರೆ ಈ ಶಕ್ತಿಯು ಪ್ರಾಣವನ್ನು ಪ್ರವೇಶಿಸಿದ ಕೂಡಲೆ ಅವನು ಪೊವಾಡ ಪುರುಷನಾಗುತ್ತಾನೆ. ಅವನಿಂದ ಸಿದ್ಧಿಗಳೂ ಆಗಹತ್ತುತ್ತವೆ. ಹಿಂದಿನ ಕಾಲದಲ್ಲಿ ಶಿವಶರಣರು ಈ ಸ್ಥಿತಿಯನ್ನು ಹೊಂದಿದವರಿರುತ್ತಾರೆ.

ಆದ್ದರಿಂದ ಮನಸ್ಸನ್ನು ಸ್ಥಿರಪಡಿಸಿಕೊಳ್ಳುವ ಕಾರ್ಯಕ್ಕೆ ಷಟ್‌ಸ್ಥಲಶಾಸ್ತ್ರವು ಮಹತ್ವದ ಸ್ಥಾನವನ್ನು ಕೊಟ್ಟಿದೆ. ವೀರಶೈವನು ಈ ಸಾಧನೆಗೋಸ್ಕರ ತನ್ನ ಇಷ್ಟಲಿಂಗದಲ್ಲಿ ಏಕಾಗ್ರಚಿತ್ತವನ್ನು ಇಟ್ಟುಕೊಳ್ಳುವ ಅಭ್ಯಾಸವನ್ನು ಮಾಡಬೇಕಾಗುತ್ತದೆ. ಇಷ್ಟಲಿಂಗದ ಮೇಲಿರುವ ಕಪ್ಪು ಕಂಫೆಯು ಇದರಲ್ಲಿ ಅವನಿಗೆ ಸಹಾಯಕವಾಗುತ್ತದೆ.

ಶಿವ, ಶಕ್ತಿ, ಪೀಠ ಇವುಗಳು ಇಷ್ಟಲಿಂಗದಲ್ಲಿದ್ದರೂ ಅಂಥ ಲಿಂಗ (ಹುಟ್ಟುಲಿಂಗ) ವನ್ನು ವೀರಶೈವ ಧರ್ಮಜ್ಞರು ಆರಾಧಿಸಲು ಇಟ್ಟುಕೊಳ್ಳದೆ ಅದರ ಸುತ್ತಲೂ ಕಪ್ಪು ಕಂಫೆಯನ್ನು ಹತ್ತಿಸಿ ಅದನ್ನು ಗೋಲಾಕೃತಿಯನ್ನು ಮಾಡುತ್ತಾರೆ. ಇಂಥ ಆಕೃತಿಯು ಮನಸ್ಸಿನಲ್ಲಿ ಏಕಾಗ್ರತೆಯನ್ನುಂಟು ಮಾಡಲು ಬಹಳ ಸಹಾಯಕಾರಿಯಾಗುತ್ತದೆ. ಅದರ ಕಪ್ಪು ವರ್ಣವೂ ಅದಕ್ಕಿರುವ ಒಂದುಬಗೆಯ ಹೊಳಪೂ ಗೋಲಾಕಾರವೂ ಶಿವಯೋಗಸಾಧನೆಗೆ ಅನುಕೂಲವಾಗಿರುತ್ತವೆ. ಹಿಂದಿನ ಶಿವಶರಣರು ತಮಗುಂಟಾದ ಅನುಭವದಿಂದ ಇಷ್ಟಲಿಂಗಕ್ಕೆ ಇಂಥ ಸ್ವರೂಪನ್ನು ಕೊಟ್ಟಿರಬಹುದೆಂದು ತೋರುತ್ತದೆ.

ಮಂತ್ರವಿದರು ಕಪ್ಪುಬಣ್ಣಕ್ಕೆ ಹೆಚ್ಚಿಗೆ ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆ. ಬಿಳೀಬಣ್ಣಕ್ಕೆ ಅವರು ಮಹತ್ವಕೊಡುವದಿಲ್ಲ. ಕಪ್ಪುಬಣ್ಣದ ನೆರೆಯಲ್ಲಿ ಉಳಿದ ಬಣ್ಣಗಳು ಮುಖ್ಯವಾಗಿ ಬಿಳೀಬಣ್ಣವು ಇದ್ದರೆ ಇಂಥ ಬಣ್ಣಗಳು ನಿಚ್ಚಳವಾಗಿ ತೋರುತ್ತವೆ. ಆದ್ದರಿಂದ ಕೆಲವೊಂದು ಬಣ್ಣದ ಹಿಂದೆ ಕಪ್ಪು ವರ್ಣವು ಇರುವದು ಅವಶ್ಯವು. ಅಂದರೆ ಆ ಪದಾರ್ಥವು ಹೆಚ್ಚು ಸ್ಪಷ್ಟವಾಗಿ ತೋರಹತ್ತುತ್ತದೆ. ಅದಕ್ಕೆ ಲಕ್ಷವು ತೀವ್ರವಾಗಿ ಹತ್ತುತ್ತದೆ. ಆದ್ದರಿಂದ ಇಷ್ಟಲಿಂಗಕ್ಕೆ ಶಿವಶರಣರು ಕಪ್ಪು ಆಕೃತಿಯನ್ನು ಕೊಟ್ಟಿರಬಹುದು.

ಸೃಷ್ಟಿಯಲ್ಲಿಯ ಪದಾರ್ಥಗಳು ಹಗಲು ನಿಚ್ಚಳವಾದ ಬೆಳಕಿನಲ್ಲಿ ಇರುವಾಗ, ಅವುಗಳ ಸ್ವರೂಪ, ಮತ್ತು ಕಾರ್ಯಗಳು ನಮ್ಮ ಬಾಹ್ಯ ಇಂದ್ರಿಯಗಳ ಮೇಲೆ ಪರಿಣಾಮಮಾಡುತ್ತವೆ. ಆದರೆ ರಾತ್ರಿಯಲ್ಲಿ ಎಲ್ಲೆಲ್ಲಿಯೂ ಕಗ್ಗತ್ತಲೆಯು ಬೀರಲಾಗಿ ಮನಸ್ಸಿನ ಮೇಲೆ ಆಗುವ ಪರಿಣಾಮಗಳು ಬೇರೆ ವಿಧವಾಗಿರುತ್ತವೆ. ಆಗ ಅವನಿಗೆ ಬಾಹ್ಯ ಸೃಷ್ಟಿಯ ಅರಿವಿನ ಬದಲು ಅಂತರಿಂದ್ರಿಯಗಳು ಬಲಪಡುತ್ತವೆ. ಆ ಕಾಲದಲ್ಲಿ ಮನಸ್ಸಿನ ಓಘವು ಒಂದೆಡೆಗೆ ಕೇಂದ್ರೀಕೃತವಾಗಿ ಅಂತರಂಗದ ವ್ಯಾಪಾರಗಳು ಪ್ರಜ್ವಲಿತವಾಗುತ್ತವೆ. ಇದು ಕಗ್ಗತ್ತಲೆಯ ಕಪ್ಪುವರ್ಣದ ಪರಿಣಾಮವಾಗಿರುತ್ತದೆ.

ಇದಕ್ಕನುಸರಿಸಿ ಶಿವಶರಣರು ತಮ್ಮ ಪೂಜಾದಿ ಕಾರ್ಯಗಳನ್ನು ನಸುಗತ್ತಲುಳ್ಳ ಮಂದಿರದಲ್ಲಿ ಕುಳಿತು ಕಪ್ಪುವರ್ಣವುಳ್ಳ ಇಷ್ಟಲಿಂಗದ

ಕಾಂತಿಯನ್ನು ದೃಷ್ಟಿಸಿ ನೋಡುತ್ತ ಬಾಹ್ಯ ವಸ್ತುಗಳನ್ನು ಮರೆತು ಬಿಡುತ್ತಾರೆ. ಇದರಿಂದ ಅಂತಃಶಕ್ತಿಗಳು ಬಲಪಡಹತ್ತುತ್ತವೆ. ಪ್ರಾಣ ಲಿಂಗವು ಅರಳುತ್ತದೆ. ಅವನಲ್ಲಿಯ ಕಳೆಗಳು ಅಂತರಿಂದ್ರಿಯಗಳನ್ನು ವ್ಯಾಪಿಸಹತ್ತುತ್ತವೆ. ಈ ಇಂದ್ರಿಯಗಳು ಮನುಷ್ಯರಲ್ಲಿರುವ ಷಟ್ ಚಕ್ರಗಳಿಗೆ ಸಂಬಂಧಪಡುವದರಿಂದ ಅವು ಸ್ಫುರಣಹೊಂದುತ್ತವೆ. ಈ ಸ್ಫುರಣಗಳು ಷಡ್‌ಲಿಂಗಗಳನ್ನು ಆವರಿಸಲು ಅವುಗಳಲ್ಲಿ ಶಕ್ತಿಗಳು ಉದ್ಭವಿಸುತ್ತವೆ. ಅವು ಅವನ ನಡೆನುಡಿಗಳಲ್ಲಿ ಒಂದು ವಿಲಕ್ಷಣ ಸಾಮರ್ಥ್ಯವನ್ನು ಉಂಟು ಮಾಡುತ್ತವೆ. ಇಂಥ ಸಾಮರ್ಥ್ಯವನ್ನು ಶಿವಶರಣರು ಹೊಂದಿ ಅವರು ಪೊವಾಡ ಪುರುಷರಾಗಿದ್ದಾರೆ.

ಸ್ಫುಟ ವಿಷಯಗಳು.

ಶ್ರೀ ಜಗದ್ಗುರು ಕರಿಬಸವರಾಜೇಂದ್ರ ಮಹಾಸ್ವಾಮಿಗಳು ಉರವಕೊಂಡೆ ಮಹಾಸಂಸ್ಥಾನ ಜಿ. ಅನಂತಪುರ:— ವೀರಶೈವ ಸಮಾಜದಲ್ಲಿರುವ ಮಹತ್ವದ ಜಗದ್ಗುರು ಸಂಸ್ಥಾನ ಮಠಗಳಲ್ಲಿ ಉರುವಕೊಂಡೆ ಮಠವು ಇತಿಹಾಸಪ್ರಸಿದ್ಧವೂ ಮಹತ್ವದ್ದೂ ಆಗಿದೆ. ಇದಕ್ಕೆ ಕೊಡಗಿನ ವೀರರಾಜೇಂದ್ರ ಸ್ವಾಮಿಗಳು ನೇಮಕವಾದದ್ದಕ್ಕೋಸ್ಕರ ನಾವು ಅವರನ್ನು ಬಹಳ ಅಭಿನಂದಿಸುತ್ತೇವೆ. ಶ್ರೀ ಸ್ವಾಮಿಗಳವರು ಇಷ್ಟರಲ್ಲಿಯೇ ಉತ್ಸಾಹದಿಂದ ಅನೇಕ ತರದ ಸಾರ್ವಜನಿಕ ಕಾರ್ಯಗಳನ್ನು ಕೈಕೊಂಡು ಅವುಗಳನ್ನು ನಿರ್ವಹಿಸುವದರಲ್ಲಿ ತಮ್ಮ ಯೋಗ್ಯತೆಯನ್ನು ಚನ್ನಾಗಿ ಹೊರಗೆಡವಿದ್ದಾರೆ. ಅವರು ಕೊಡಗಿನಲ್ಲಿದ್ದಾಗ ಅನೇಕ ಕಡೆಗೆ ಶಿವಾನುಭವ ಸಂಘಗಳನ್ನು ಸ್ಥಾಪಿಸಿ ಶಿವಶರಣರ ತತ್ವಗಳ ಪ್ರಚಾರ ಮಾಡಿದ್ದಾರೆ. ನರಗುಂದದಲ್ಲಿ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದ್ದಾರೆ. ಕರ್ನಾಟಕ ಏಕೀಕರಣಕ್ಕೋಸ್ಕರ ಅನೇಕ ಕಡೆಗೆ ಸಂಚರಿಸಿ ಪ್ರಸಾರ ಕಾರ್ಯ ಮಾಡಿದ್ದಾರೆ. ವೀರಶೈವರ ಸೈನಿಕ

ಯೋಜನೆಯ ಸಿದ್ಧಿಗೋಸ್ಕರ ವಿಶೇಷ ಪ್ರಯತ್ನ ಮಾಡಿದ್ದಾರೆ. ಅಲ್ಲದೆ ಉತ್ತಮರೀತಿಯಿಂದ ಭಾಷಣ ಮಾಡುವ ಯೋಗ್ಯತೆಯೂ ಅವರಲ್ಲಿದೆ. ಇಂಥವರು ಇಂಥ ಮಹತ್ವದ ಪೀಠಾಧಿಕಾರಿಗಳಾದಲ್ಲಿ ಸಮಾಜಸುಧಾರಣೆಯು ಶೀಘ್ರವಾಗಿ ಜರಗುವದರಲ್ಲಿ ಸಂದೇಹವಿರಲಾರದು. ಆದರೆ ಪೀಠವನ್ನು ವಹಿಸಿದ ಬಳಿಕ ಅದಕ್ಕೆ ಸಂಬಂಧಿಸಿದ ಆಂತರಂಗಿಕ ತೊಡಕುಗಳು ಯಾವಾಗಲೂ ಇರುವದುಂಟು. ಅವುಗಳನ್ನು ಸರಿಪಡಿಸುವದರಲ್ಲಿ ಪೀಠಾಧಿಪತಿಗಳವರಿಗೆ ಅನಿವಾರ್ಯವಾಗಿ ಕಾಲಹರಣವಾಗುವದುಂಟು. ಈ ಸ್ಥಿತಿಯು ಈ ಪೀಠದಲ್ಲಿರಲಿಕ್ಕಿಲ್ಲೆಂದು ನಾವು ಭಾವಿಸಿದ್ದೇವೆ. ಆದರೆ ಸಮಾಜದ ವಿಷಯವಾಗಿ ಉಚ್ಚ ಭಾವನೆಯನ್ನು ತಳೆದು ಒಂದು ಉಪಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿ ಅದರ ನಿರ್ವಹಣದಲ್ಲಿ ತೊಡಗಿದ್ದಾದರೆ ಜನಮತದ ಬೆಂಬಲವು ತಾನಾಗಿಯೇ ಮೊರಕೆ ಸಮಾಜ ಸುಧಾರಣೆಗೆ ತೀವ್ರ ಗತಿಯು ಉಂಟಾಗುವದರಲ್ಲಿ ಏನೂ ಸಂದೇಹವಿರಲಾರದು. ಶ್ರೀ ಮಹಾಸ್ವಾಮಿಗಳವರ ಕಡೆಯಿಂದ ಸಮಾಜಕ್ಕೋಸ್ಕರ ವಿಶೇಷ ಕಾರ್ಯಗಳು ಜರಗುವವೆಂದು ನಾವು ಭಾವಿಸಿದ್ದೇವೆ.

ನಿಡುಮಾವಿಡಿ ಇಮ್ಮಡಿ ಕರಿಬಸವೇಂದ್ರರ ಒಸಗೆ:— ವೀರಶೈವ ಸಮಾಜದಲ್ಲಿ ಶ್ರೀಜಗದ್ಗುರು ನಿಡುಮಾವಿಡಿ ಶ್ರೀಶೈಲ ಸಂಸ್ಥಾನದ ಈಗಿನ ಪೀಠಾಧಿಪತಿಗಳಾದ ಶ್ರೀ. ಜ. ಪ. ಚನ್ನಬಸವರಾಜ ದೇಶಿಕೇಂದ್ರರು ಬಾಲಕರಿಗೋಸ್ಕರ ರಚಿಸಿದ ಒಂದು ಚಿಕ್ಕ ಗ್ರಂಥವು ಇದಾಗಿದೆ. ಕರಿಬಸವೇಂದ್ರರು ಪೆನುಗೊಂಡೆಯಲ್ಲಿ ಅಚ್ಯುತರಾಯರಿದ್ದ ಕಾಲದಲ್ಲಿ ಪೊವಾಡಪುರುಷರಾಗಿ ಉನ್ನತಸ್ಥಾನವನ್ನು ಹೊಂದಿದರು. ಅವರ ಚರಿತ್ರೆಯು ಇದರಲ್ಲಿದೆ. ಮಹಾರಾಜರ ಸನ್ನಿಧಿಯಲ್ಲಿ ಒಣಗಿನಿಂತ ಮಾವುರವು ಚಿಗಿತು ಫಲಿಸುವಂತೆ ಮಹಾಸ್ವಾಮಿಗಳು ಪೊವಾಡ ಮಾಡಿದರು. ಅದರಿಂದ ಅಚ್ಯುತರಾಜನು ಶ್ರೀಸ್ವಾಮಿಗಳವರಿಗೆ ಪೆನುಗೊಂಡೆಯಲ್ಲಿ ಘನಗಿರಿ ಸಿಂಹಾಸನ ಎಂಬ ಹೆಸರಿನಿಂದ ಒಂದು ಮಠವನ್ನು ನಿರ್ಮಿಸಿದನು. ಮತ್ತು ಐದು ಗ್ರಾಮಗಳನ್ನು ಜಹಗೀರಾಗಿ ಅರ್ಪಿಸಿದ್ದಾನೆ. ವೀರಶೈವ ಸಮಾಜದಲ್ಲಿ ಆದ ಸತ್‌ಪುರುಷರ ತಿಳಿವಳಿಕೆಯು ನಮ್ಮ ಬಾಲಕ ವರ್ಗಕ್ಕೆ ಆಗುವದು ಅವಶ್ಯಕ. ಆದ್ದ

ರಿಂದ ಇಂಥ ಗ್ರಂಥಗಳ ಸಂಖ್ಯೆಯು ಇನ್ನೂ ಹೆಚ್ಚಬೇಕಾಗಿದೆ. ಶ್ರೀ ಸ್ವಾಮಿಗಳವರು ಶಿವಾನುಭವ ಪತ್ರಿಕೆಯ ವಾಚಕರಿಗೆ ಚನ್ನಾಗಿ ಪರಿಚಿತರಾಗಿದ್ದಾರೆ. ಅವರ ವಿದ್ವತ್ ಪ್ರಚುರವಾದ ಅನೇಕ ಲೇಖನಗಳನ್ನು ವಾಚಕರು ನೋಡಿದ್ದಾರೆ. ಅವರ ಸೊಗಸಾದ ಭಾಷೆ, ಉಚ್ಚ ವಿಚಾರಗಳು ಎಲ್ಲರ ಮನ್ನಣೆಗೆ ಪಾತ್ರವಾಗಿವೆ. ಇಷ್ಟರಲ್ಲಿಯೇ ೭ ಗ್ರಂಥಗಳನ್ನು ಅವರು ಹೊರಪಡಿಸಿದ್ದಾರೆ. ಈ ಕಾರ್ಯವನ್ನು ಅವರು ಮುಂದುವರಿಸಿ ವೀರಶೈವ ಸಂಸ್ಕೃತಿಯನ್ನು ಹೆಚ್ಚಿಸುವರೆಂದು ನಮ್ಮ ಪೂರ್ಣ ವಿಶ್ವಾಸವಿದೆ. ಗ್ರಂಥದ ಬೆಲೆ ೧ವರೆ ಆಣೆ.

ವಿಷನಿಮಿಷಗಳು:— ಶ್ರೀಯುತ ಹಿರೇಮಲ್ಲೂರು ಈಶ್ವರನ್ ಇವರು ರಚಿಸಿದ ಗ್ರಂಥವು ಇದಾಗಿದೆ. ಇದರಲ್ಲಿ ೩೦ ಚಿತ್ರಗಳು ಅಡಕವಾಗಿವೆ. ಬೇರೆ ಬೇರೆ ಕಾಲಗಳಲ್ಲಿ ಮನಸ್ಸಿನಲ್ಲಿ ಹೊಳೆದ ವಿಚಾರತರಂಗಗಳ ಚಿತ್ರಗಳು ಇದರಲ್ಲಿವೆ. ನಾಡಿನ ಸಾಮಾಜಿಕ ದಿನದ ಕಾರ್ಯಕಲಾಪಗಳ ರೀತಿಗಳನ್ನು ಅರುಹುವ ಉದ್ದಿಶ್ಯವಾಗಿ ಈ ಸೊಗಸಾದ ಗ್ರಂಥವಾಗಿದೆ. ಇದರ ಭಾಷೆ ಸರಳವಾದುದು, ಹೃದಯಸ್ಪರ್ಶಿಯಾಗಿರುತ್ತದೆ. ಗೆಳೆಯರ ಕೂಟ ಬ್ಯಾಡಗಿ ಇವರ ಆಶ್ರಯದಲ್ಲಿ ಈ ಗ್ರಂಥವು ಹೊರಪಟ್ಟಿರುತ್ತದೆ. ಪುಟ ಸಂಖ್ಯೆ ೧೪೨, ಬೆಲೆ ೧-೮-೦. ಮಾರಾಟಗಾರರು ಮನೋಹರ ಗ್ರಂಥಭಾಂಡಾರ ಧಾರವಾಡ ಮತ್ತು ಕನ್ನಡ ಪುಸ್ತಕಾಲಯ ಬೆಳಗಾವ.

ಅವನು ಬಾಹ್ಯ ಶರೀರದ ಚಿಕಿತ್ಸೆಯೊಡನೆ ಅಂತಃ ಶರೀರದ ಚಿಕಿತ್ಸೆಯನ್ನೂ ಮಾಡಬೇಕೆಂಬ ಅಭಿಪ್ರಾಯವುಳ್ಳವನಿದ್ದಾನೆಂಬುದು ಅವನ ವಚನಗಳಿಂದ ಕಂಡುಬರುತ್ತದೆ. ರೋಗನಿವಾರಣೆಯ ಅವನ ಈ ತತ್ವವು ಈಗಿನ ನವ್ಯ ವೈದ್ಯರಿಂದ ಮತ್ತು ಡಾಕ್ಟರರಿಂದ ಅನುಕರಣೀಯವಾಗಿದೆ. ಇವರು ಅಂತಃ ಶರೀರ ಮತ್ತು ಬಾಹ್ಯ ಶರೀರ ಇವುಗಳಲ್ಲಿರುವ ನಿಕಟ ಸಂಬಂಧವನ್ನು ಲಕ್ಷಿಸುವದಿಲ್ಲ.

ಆದರೆ ವೈದ್ಯ ಸಂಗಣ್ಣನು ವೈದ್ಯ ಶಾಸ್ತ್ರಕ್ಕೆ ಷಟ್‌ಸ್ಥಲದ ತತ್ವಗಳನ್ನು ಸಂಬಂಧಿಸಿ ಅಂತಃಶರೀರ ಮತ್ತು ಬಾಹ್ಯಶರೀರ ಈ ಎರಡೂ ಶರೀರಗಳನ್ನು ಹೇಗೆ ರೋಗರಹಿತ ಮಾಡಬೇಕೆಂಬುದನ್ನು ನಿರೂಪಿಸಿದ್ದಾನೆ. ನಾವು ಈ ವಚನಗಳನ್ನು ಈ ಚರಿತ್ರೆಯ ಅಂತ್ಯದಲ್ಲಿ ಕೊಟ್ಟಿದ್ದೇವೆ.

ಷಟ್‌ಸ್ಥಲಶಾಸ್ತ್ರವು ಭಕ್ತನು ನಿರೋಗಿಯಾಗಿರಬೇಕು ಮತ್ತು ಇಂದ್ರಿಯಗಳನ್ನು ಕ್ಲೇಶಪಡಿಸಬಾರದೆಂದು ಹೇಳುತ್ತದೆ. ಬಸವೇಶ್ವರನು ತನ್ನ ಒಂದು ವಚನದಲ್ಲಿ— 'ಇಂದ್ರಿಯ ನಿಗ್ರಹ ಮಾಡಿದರೆ ಹೊಂದುವವು ದೋಷಂಗಳು. ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು' ಎಂದು ಹೇಳುತ್ತಾನೆ. ಸಿದ್ಧರಾಮೇಶ್ವರನು— 'ಚಿರಂಜೀವಿ ಎಂದರೆ ನಿರೋಗಿ, ಚಿರಂಜೀವಿ ಎಂದರೆ ಸಶಕ್ತನು, ಚಿರಂಜೀವಿ ಎಂದರೆ ಪ್ರಳಯವ ಮೀರುವವನಲ್ಲ. ದೇಹ ಚಿರಂಜೀವಿಯಾದಡೆ ಕಪಿಲಸಿದ್ಧ ಮಲ್ಲಿಕಾರ್ಜುನ ಬ್ರಹ್ಮವೆಂಬ ಶಬ್ದ ಬೇರುಂಟೇ?' ಎಂದು ಬಹು ಸ್ಪಷ್ಟಶಬ್ದಗಳಿಂದ ಶರೀರದ ಮಹತ್ವವನ್ನು ವರ್ಣಿಸಿದ್ದಾನೆ. ಮನುಷ್ಯನು ನಿರೋಗಿಯಾಗಿರಬೇಕು ಮತ್ತು ಸಶಕ್ತನಾಗಿರಬೇಕು. ಅಂದರೆ ಅವನಿಂದ ಶಿವಾಚಾರಗಳು ಸರಿಯಾಗಿ ಜರಗುತ್ತವೆಂಬ ಭಾವವು ಈ ವಚನಗಳಲ್ಲಿ ಇರುತ್ತಿದೆ.

ಬಾಹ್ಯಶರೀರದ ಸುಸ್ಥಿತಿಯು ಅಂತಃ ಶರೀರವನ್ನು ಸರಿಯಾಗಿ ಇಟ್ಟುಕೊಳ್ಳುವದರ ಮೇಲೆ ಬಹಳ ಅವಲಂಬಿಸಿರುತ್ತದೆ. ಯಾಕಂದರೆ ಅಂತಃಶರೀರವು ಮತ್ತು ಬಾಹ್ಯಶರೀರವು ಪರಸ್ಪರಾವಲಂಬಿಗಳಾಗಿವೆ. ಒಂದರ ಮೇಲಿನ ಪರಿಣಾಮಗಳು ಮತ್ತೊಂದರ ಮೇಲೆ ಆಗುತ್ತವೆ.

ಈ ತತ್ವವನ್ನನುಸರಿಸಿ ವೈದ್ಯ ಸಂಗಣ್ಣನು ತನ್ನ ವಚನಗಳಲ್ಲಿ ವೈದ್ಯ ಶಾಸ್ತ್ರದ ಮತ್ತು ಷಟ್‌ಸ್ಥಲಗಳ ನಿರೂಪಣೆ ಮಾಡಿದ್ದಾನೆ. ಇದು ಅತನ ವೈಶಿಷ್ಟ್ಯವಾಗಿದೆ.

ಶಿವಶರಣನಾದ ನಗರದ ಬೊಮ್ಮಯ್ಯನ ಆಚರಣೆಯಲ್ಲಿ ಸಹ ಇದೇ ಸಂಗತಿಯು ಕಂಡುಬರುತ್ತದೆ. (ಹಿಂದೆ ೨೯೭ನೇ ಪುಟ ನೋಡಿರಿ) ಅವನಿಗೆ ತಲೆ ನೋವಾಗಿತ್ತು. ಅವನು ಪಂಚಾಕ್ಷರಿಯ ಜಪದ ಆಚರಣೆಯನ್ನು ಸರಿಯಾಗಿ ಮಾಡದೇ ಇದ್ದದ್ದೇ ಇದಕ್ಕೆ ಕಾರಣವೆಂದು ಅವನಿಗೆ ಕಂಡುಬಂದು ಅವನು ಅದನ್ನು ಆ ರೀತಿ ಸರಿಪಡಿಸಿಕೊಂಡನು.

ಅನೇಕರು ಆಚರಣೆಯ ಕೆಲವು ಕಟ್ಟುಗಳನ್ನು ಮಾಡಿಕೊಂಡು ಅವುಗಳನ್ನು ಪಾಲಿಸುತ್ತಾರೆ. ಉದಾಹರಣಾರ್ಥವಾಗಿ ಸ್ನಾನಮಾಡದೆ ತಾವು ಭೋಜನ ಮಾಡುವದಿಲ್ಲೆಂತಲೂ ನೀರು ಕುಡಿಯುವದಿಲ್ಲೆಂತಲೂ ಅಥವಾ ಲಿಂಗಪೂಜೆಯನ್ನು ಮಾಡದೆ ತಾವು ಊಟ ಮಾಡುವದಿಲ್ಲೆಂತಲೂ ಇತ್ಯಾದಿ ಕಟ್ಟುಗಳನ್ನು ಮಾಡಿಕೊಂಡಿರುತ್ತಾರೆ. ಆದರೆ ಕೆಲವು ತರದ ಬೇನೆಗಳು ಬಂದಾಗ ಹೀಗೆ ಆಚರಿಸಿದಲ್ಲಿ ಅವರ ಪ್ರಾಣಕ್ಕೆ ಭಯವಿರುತ್ತದೆ. ಉದಾಃ— ಜ್ವರ ಬಂದಕಾಲದಲ್ಲಿ ಸ್ನಾನ ಮಾಡುವದು ಅಥವಾ ಆಗ ಸ್ನಾನಮಾಡದೆ ಆಹಾರ ತೆಗೆದುಕೊಳ್ಳುವದಿಲ್ಲೆಂದು ಆಹಾರವನ್ನು ಪೂರ್ಣವಾಗಿ ಬಿಟ್ಟುಬಿಡುವದು ಇತ್ಯಾದಿ ಇರುತ್ತವೆ. ಇದರಿಂದ ಪ್ರಾಣಕ್ಕೆ ಅಪಾಯವಾಗಿ ಅನೇಕರು ಮರಣಹೊಂದಿದ್ದುಂಟು. ಹೀಗೆ ಅಪಾಯಮಾಡಿಕೊಳ್ಳುವದು ತಪ್ಪೆಂದು ವೈದ್ಯ ಸಂಗಣ್ಣನ ವಚನಗಳಿಂದ ಕಂಡುಬರುತ್ತದೆ.

ಹಾಗೆಯೇ ಆಧುನಿಕ ವೈದ್ಯಶಾಸ್ತ್ರಜ್ಞರು ಬಾಹ್ಯಶರೀರದ ಚಿಕಿತ್ಸೆಗೆ ಮಾತ್ರ ಮಹತ್ವಕೊಟ್ಟು ಅಂತಃಶರೀರದ ಸುಸ್ಥಿತಿಯನ್ನು ಲಕ್ಷಿಸುವದಿಲ್ಲ. ಇದರಿಂದ ಪೂರ್ಣವಾಗಿ ರೋಗನಿವಾರಣೆಯಾಗಲಾರದು. ಆದರೆ ಷಟ್‌ಸ್ಥಲವು ಉಭಯ ಶರೀರಗಳನ್ನು ಲಕ್ಷಿಸುತ್ತದೆ.

ವೈದ್ಯ ಸಂಗಣ್ಣನ ಮುದ್ರಿಕೆಯು 'ಮರುಳುಶಂಕರಪ್ರಿಯ ಸಿದ್ಧರಾಮೇಶ್ವರ ಲಿಂಗ' ಎಂದಿದೆ. ಅವನ ೨೪ ವಚನಗಳು ಮಾತ್ರ ನಮಗೆ ಉಪಲಬ್ಧವಾಗಿವೆ. ಅವುಗಳಲ್ಲಿ ಕೆಲವುಗಳನ್ನು ಮಾತ್ರ ನಾವು ಮಾದೀ

ಗಾಗಿ ಕೆಳಗೆ ಕೊಟ್ಟಿದ್ದೇವೆ. ಅವು ಬಹು ಅಶುದ್ಧವಾಗಿವೆ. ಕೆಲವು ಕಡೆ ಅರ್ಥವೇ ಆಗುವದಿಲ್ಲ. ಆದರೂ ವಾಚಕರು ತಮಗೆ ಶಕ್ಯವಿದ್ದಷ್ಟು ಅವುಗಳನ್ನು ತಿದ್ದಿಕೊಂಡು ಅವುಗಳ ಮುಖ್ಯ ಭಾವವನ್ನು ತಿಳಿಯಲು ಪ್ರಯತ್ನಿಸಬೇಕೆಂದು ಅವರಿಗೆ ನಮ್ಮ ಸವಿನಯ ಸೂಚನೆ ಇದೆ.

ವೈದ್ಯ ಸಂಗಣ್ಣನ ಮುದ್ರಿಕೆಯ ಮೇಲಿಂದ ಅವನು ಮರುಳು ಶಂಕರದೇವನ ಕೂಡ ಇದ್ದು ಅವನಿಗೆ ಪ್ರಿಯನಾಗಿದ್ದನೆಂದು ತಿಳಿದು ಬರುತ್ತದೆ. ಆದ್ದರಿಂದ ಅವನು ಬಸವೇಶ್ವರನ ಸಮಕಾಲೀನನಾಗಿದ್ದಾನೆ.

ವಚನಗಳು.

(೧) ಅಷ್ಟೋತ್ತರ ಶತವ್ಯಾಧಿಗಳ ಧಂಸಿಕೊಂಡಿಪ್ಪುದು ಆತ್ಮನೋ, ಘಟವೋ? ಆತ್ಮನೆಂದಡೆ ಅದು ಸಾವಿಲ್ಲದ ಚಿತ್ತು. ಘಟನೆಂದಡೆ ಅದು ಆತ್ಮನಿಲ್ಲದೆ ಅರಿಯದು. ಅದು ದೇಹ. ಇಂತೀ ಒಂದು ಕಳೆದು ಒಂದಕ್ಕೆ ಔಷಧಿಯ ಕೊಟ್ಟಿಹೆನೆಂದಡೆ, ರುಜೆ ಪ್ರಮಾಣು. ಇಂತೀ ಶರೀರ, ಆತ್ಮ ಇವು ಆದಿಯಾಗಿ ಬಂದ ವ್ಯಾಧಿಗೆ ನಾನೊಂದು ಔಷಧಿಯ ಭೇದವ ಹೇಳಿಹೆ. ಆಧಾರದಲ್ಲಿ ಮೂಲಿಕೆಯ ಬೇರನಂದು, ಐದಿಂದ್ರಿಯವ ಕೂಡಿಕೊಂಡು ಮಲಮೂರು ಮುಟ್ಟದ ತಟ್ಟೆಯಲ್ಲಿ ಅದನು ಕೊಳ್ಳಿ. ಆ ಮದ್ದು ವಾಂತಿಗೆ ಸಲ್ಲ. ವಿರೋಚನವಿಲ್ಲ. ಇದು ಸಿದ್ಧಾಂತ. ಇದನು ಸಾಧಿಸಿಕೊಳ್ಳಿ. ಎಂದೆಂದಿಗೂ ರುಜೆ ಇಲ್ಲ. ಸಂದುಸಂಶಯವಿಲ್ಲ ಮರುಳುಶಂಕರ ಪ್ರಿಯ ಸಿದ್ಧರಾಮೇಶ್ವರ ಲಿಂಗದಲ್ಲಿ.

ಭಾವಃ— ಇದರಲ್ಲಿ ವಚನಕಾರನು ಬೇನೆಗಳು ಉತ್ಪನ್ನವಾಗುವದು ಆತ್ಮನಲ್ಲಿಯೋ ಅಥವಾ ಘಟದಲ್ಲಿಯೋ ಎಂಬ ಪ್ರಶ್ನೆಯನ್ನು ಮುಂದು ಮಾಡುತ್ತ ಆತ್ಮನಿಗೆ ಸಾವಿಲ್ಲ ಮತ್ತು ಘಟವು ಆತ್ಮನನ್ನು ಆವಲಂಬಿಸಿದೆ ಎಂದು ಹೇಳಿ ಒಂದನ್ನು ಬಿಟ್ಟು ಮತ್ತೊಂದಕ್ಕೆ ಔಷಧಿಯನ್ನು ಕೊಟ್ಟರೆ ಬೇನೆಯು ಹೋಗಲಾರದೆಂದು ಹೇಳಿದ್ದಾನೆ. ಇದರಲ್ಲಿ ಮಾಡತಕ್ಕ ಉಪಚಾರವನ್ನು ವಚನಕಾರನು ಇಲ್ಲಿ ಹೇಳಿದ್ದಾನೆ. ಆವನು ಆಧಾರ ಚಕ್ರದಲ್ಲಿ ಔಷಧಿಯ ದ್ರವ್ಯಗಳನ್ನು ಮೊದಲು ಸಂಬಂಧಿಸಬೇಕೆಂದು ಹೇಳುತ್ತಾನೆ. ಆಮೇಲೆ ಐದಿಂದ್ರಿಯಗಳನ್ನು ಅದರಲ್ಲಿ ಸೇರಿಸಿ ಆಚರಿಸಿದಲ್ಲಿ ಆ ಮೂಲಿಕೆಯ ಗುಣಗಳು ಶರೀರವನ್ನು ವ್ಯಾಪಿಸುತ್ತವೆ.

ಆದರೆ ಇಷ್ಟರಿಂದ ವ್ಯಾಧಿಯು ಹೋಗಲಾರದು. ಯಾಕಂದರೆ ಮನುಷ್ಯನಿಗೆ ಆಣವಮಲ ಮಾಯಾಮಲ ಕಾರ್ಮಿಕಮಲಗಳೆಂಬುವು ಇದ್ದು, ಅವುಗಳನ್ನು ದೂರವಾಡಿ ಆಚರಿಸಬೇಕೆಂದು ಅವನು ಹೇಳುತ್ತಾನೆ. ಹೀಗೆ ಶುದ್ಧವಾದ ಶರೀರದಲ್ಲಿ ಔಷಧವನ್ನು ತೆಗೆದುಕೊಂಡರೆ, ಆ ಔಷಧವು ವಾಂತಿಯಿಂದಾಗಲಿ ಇಲ್ಲವೆ ಭೇದಿಯಿಂದಾಗಲಿ ಹೊರಗೆ ಹೋಗುವದಿಲ್ಲ. ಅಂದರೆ ಅದು ಶರೀರದಲ್ಲಿ ಸಮರಸವಾಗುವದು. ಹೀಗೆ ಆದಲ್ಲಿ ನಿವಾರಣೆ ಸಿದ್ಧಾಂತ ಎಂದು ವಚನಕಾರನು ಹೇಳಿ ಮುಂದೆ ಅವನು ಅನ್ನುವದೇನೆಂದರೆ ಹೀಗೆ ಔಷಧ ಸೇವಿಸಿದರೆ ವ್ಯಾಧಿಯು ಯಾವಾಗಲೂ ಬರುವದಿಲ್ಲ. ಇದು ನಿಃಸಂಶಯವೆಂದು ಹೇಳುತ್ತಾನೆ.

(೨) ತ್ರಿದೋಷದ ಗುಣದಿಂದ ನಾನಾ ಬಹು ತಾಪತ್ರಯದ ವ್ಯಾಧಿಯ ಚಿಕಿತ್ಸೆಯನಾರೂ ಅರಿಯರಲ್ಲಾ! ತನುವಿಂಗೆ ವಾತ, ಪಿತ್ತ, ಶ್ಲೇಷ್ಮ. ಆತ್ಮಂಗೆ ಆಣವ, ಮಾಯೆ, ಕಾರ್ಮಿಕ. ಇಂತೀ ತ್ರಿವಿಧ ಮಲತ್ರಯ ರೋಗರುಜೆಯುಡಿಸಿ ಬಂಧನದಲ್ಲಿ ಸಾಯುತ್ತಿದೆ ಅಂಗ. ಈ ರೋಗ ನಿರೋಗವಹುದಕ್ಕೆ ನಾ ಮೂರು ಬೇರ ತಂದೆ. ಒಂದಂಗದಲ್ಲಿ ಮರ್ದಿಸಿ, ಒಂದು ಆತ್ಮನಲ್ಲಿ ಮಥನಿಸಿ, ಒಂದರವಿನಲ್ಲಿ ಪಾಕವ ಮಾಡಿ ಈ ರೋಗ ಹರಿವುದು. ಇದಕ್ಕನುಪಾನ ಇದಿರೆಡೆಯಿಲ್ಲ. ಮರುಳು ಶಂಕರಪ್ರಿಯ ಸಿದ್ಧರಾಮೇಶ್ವರಲಿಂಗಸಂಗಿ.

ಭಾವಃ— ಹಿಂದಿನ ವಚನದ ಭಾವವೇ ಇದರಲ್ಲಿ ಬಂದಿದೆ. ಶರೀರ ಮತ್ತು ಆತ್ಮ ಇವೆರಡರಲ್ಲಿಯ ರೋಗವನ್ನು ಕಳೆಯಬೇಕೆಂದು ವಚನಕಾರನು ಹೇಳುತ್ತಾನೆ. ವಾತ, ಪಿತ್ತ, ಕಫಗಳಿಂದ ಶರೀರದಲ್ಲಿ ರೋಗಗಳು ಹೇಗೆ ಆಗುತ್ತವೆಯೋ ಹಾಗೆ ಆತ್ಮನಲ್ಲಿ ಮೂರು ಮಲಗಳು ಉಂಟಾದಲ್ಲಿ ಅದಕ್ಕೆ ರೋಗವು ಆಗುತ್ತದೆ. ಈ ರೋಗವನ್ನು ಇಷ್ಟ ಲಿಂಗ ಪ್ರಾಣಲಿಂಗ ಭಾವಲಿಂಗಗಳನ್ನು ತನ್ನಲ್ಲಿ ಅಳವಡಿಸಿಕೊಂಡು ದೂರವಾಡಬೇಕೆಂಬ ಭಾವವು ಇದರಲ್ಲಿ ಇದೆ.

(೩) ನಾನಾ ರೋಗಂಗಳು ಬಂದು ದೇಹವ ಹಿಡಿದಲ್ಲಿ ಶಿವಾರ್ಚನೆಯ ಬೇರ ಕೊಳ್ಳಿ. ಸಕಲ ಪುಷ್ಪಂಗಳಿಂದ ಪೂಜೆಯ ಮಾಡಿ ಕೊಳ್ಳಿ. ಪಂಚಾಕ್ಷರಿಯ ಪ್ರಣವವ ತಪ್ಪದೆ ತ್ರಿಸಂಧಿಯಲ್ಲಿ ನೆನಹುಗೊಳ್ಳಿ. ಇದರಿಂದ ರುಜೆ ದರ್ಪಂಗೆಡುಗು, ಮರುಳುಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ ಸಾಕ್ಷಿಯಾಗಿ.

ಭಾವಃ— ಬೇನೆಯು ಬಂದ ಕಾಲದಲ್ಲಿ ನೆರಳುತ್ತಲಿರದೆ ಪರವಸ್ತುವಿನಲ್ಲಿ ನಿಮ್ಮ ನೆನಹನ್ನು ಇರಿಸಿ ಅವನನ್ನು ಪೂಜಿಸಿರಿ, ಎಂದು ವಚನಕಾರನು ಈ ವಚನದಲ್ಲಿ ಬಹು ಸರಸಾಗಿ ಹೇಳಿದ್ದಾನೆ. ಇದರಿಂದ ಬೇನೆಯು ತೀವ್ರ ದೂರಾಗುವದೆಂದು ಅವನ ಅಭಿಪ್ರಾಯ.

(೪) ಮಯೂರನಾಡಿ, ಮಂಡುಕನಾಡಿ, ಭಲ್ಲುಕನಾಡಿ. ಅಹಿಗತಿನಾಡಿ, ಮಂಡಲಕನಾಡಿ, ಷುಂಡೆಕ (?) ಪಥನಾಡಿ, ದೀರ್ಘನಾಡಿ, ಅಧಮನಾಡಿ, ಉತ್ತರನಾಡಿ, ಪೂರ್ವನಾಡಿ. ಪಶ್ಚಿಮನಾಡಿ, ಗಜಗಮನನಾಡಿ, ಅಜ್ಯೊತ್ತುನಾಡಿ, ವಿಕ್ರಮನಾಡಿ, ಸೂತ್ರನಾಡಿ, ಸಂಜುನಾಡಿ, ಸಂಚಲನಾಡಿ, ಶೈತ್ಯನಾಡಿ, ಉಷ್ಣನಾಡಿ, ವಿಹಂಗನಾಡಿ, ಕೂರ್ಮನಾಡಿ, ಮರ್ಕಟನಾಡಿ, ಪಿಪೀಲಿಕನಾಡಿ, ದಂಷ್ಟ್ರನಾಡಿ, ಮಕರನಾಡಿ, ಕರ್ಕೋಟಕನಾಡಿ, ಸಮರನಾಡಿ, ಸಂತೋಷನಾಡಿ, ಇಂತೀ ನಾಡಿಗಳೊಳಗಾದ ಶರೀರದಲ್ಲಿ ತೋರುವ ನಾಡಿ ಜೀರ್ಣ ಪರ್ಣದಂತೆ ರೋಮಭಿದ್ರದಲ್ಲಿ ಸೂಸುವ ವಾಯುವನೊಡಗೂಡಿ ವ್ಯಾಧಿಕ್ರಮವನರಿತಿಹೆನೆಂದೊಡೆ ಅದಾರಿಗೂ ಅಸಾಧ್ಯ. ಅಯ್ಯ ನಾನು ಮೂರು ನಾಡಿಯ ಬಲ್ಲೆ. ಉತ್ಪತ್ತಿ ಒಂದು, ಸ್ಥಿತಿ ಒಂದು, ಲಯ ಒಂದು. ಭಕ್ತಿ ಎಂಬ ಕಯ್ಯ ಹಿಡಿದು ನೋಡಲಾಗಿ ಗುರುನಾಡಿ. ಉಭಯವ ಕೊಂಡು ಆಡಿಯಾಡುತ್ತಿದೆ. ಲಿಂಗನಾಡಿ ಸಂದಿಯೊಳಗೆ ಸೂಸುತಿದೆ. ಜಂಗಮನಾಡಿ ಮೂರರ ಹಂಗಬಿಟ್ಟು ಮುಹದಲ್ಲಿ ಸಂದಿರುತ್ತದೆ ಕೋ. ಇದು ಲಿಂಗಾಂಗಿಗಳ ವೈದ್ಯ. ಸಂಗನಬಸವಣ್ಣ ಬಾಹಾಗ ತನ್ನವರಕ್ಕೆ ವೈದ್ಯನೆಂದು ಎನ್ನ ಕೊಂಡು ಬಂದ. ಈ ವೈದ್ಯದ ವಚನದ ಜೀಲವ ಹೊತ್ತು ಗಸಣಿಗೊಳ್ಳುತ್ತಿದೇನೆ. ಈ ಕಾಯಕದ ದೇಸಿಯೊಡಗೂಡಿ ಕರುಣಪ್ರಸಾದವ ಕೊಟ್ಟು ಮರುಳು ಶಂಕರ ಪ್ರಿಯ ಸಿದ್ಧರಾಮೇಶ್ವರ ಲಿಂಗಾ ನಿಮ್ಮಡಿಯೊಳಗೆನ್ನನಿಂಬಿಡಯ್ಯ.

ಭಾವಃ— ಈ ವಚನದಲ್ಲಿ ವಚನಕಾರನು ತನ್ನ ಆತ್ಮವೃತ್ತವನ್ನು ಹೇಳಿಕೊಳ್ಳುತ್ತಿದ್ದಾನೆ. ಇದರಿಂದ ನಾಡಿಯ ಗತಿಯ ಮೂಲಕ ರೋಗ ಪರೀಕ್ಷೆ ಮಾಡುವದು ಅವನಿಗೆ ಚನ್ನಾಗಿ ಗೊತ್ತಿದ್ದಂತೆ ಈ ವಚನದ ಆರಂಭದಲ್ಲಿ ಹೇಳಿದ ವಿವರಣೆಗಳಿಂದ ಕಂಡುಬರುತ್ತದೆ. ಆದರೆ ಇಷ್ಟರಿಂದಲೇ ರೋಗ ನಿವಾರಣೆ ಮಾಡುವದು ಅಸಾಧ್ಯವೆಂದು ಹೇಳುತ್ತ ಲಿಂಗಾಂಗಿಗಳು ತ್ರಿಲಿಂಗಗಳ ರೀತಿಯನ್ನು ತಿಳಿದಲ್ಲಿ ಅವರಿಗೆ ಬೇನೆ ಬರ

ಲಾರದೆಂದು ಅವನು ಇಲ್ಲಿ ಹೇಳಿದ್ದಾನೆ. ಅವನು ಬಸವೇಶ್ವರನಲ್ಲಿ ತಾನು ಯಾವಾಗಲೂ ಇದ್ದುಕೊಂಡು ಅವನ ಸನ್ನಿಧಿಯಲ್ಲಿ ಕರುಣ ಪ್ರಸಾದವನ್ನು ಹೊಂದುವಂತೆ ಕರುಣಿಸಬೇಕೆಂದು ಮರುಳು ಶಂಕರ ಪ್ರಿಯ ಸಿದ್ಧರಾಮೇಶ್ವರ ಲಿಂಗವೆಂಬ ತನ್ನ ಇಷ್ಟಲಿಂಗವನ್ನು ಕುರಿತು ಇದರಲ್ಲಿ ಬೇಡಿಕೊಂಡಿದ್ದಾನೆ.

(೫) ಐದು ತತ್ವಂಗಳಿಂದಾದ ದೇಹಕ್ಕೆ ರೋಗರುಜೆಯಹುದೇ ಕಾರ್ಯ. ತತ್ವಂಗಳ ನೊತ್ತಿನಲ್ಲಿ ನಿಂದು ಅವರವರ ಚಿಕಿತ್ಸೆಯಲಿ ಹೊತ್ತು ನಿತ್ತರಿಸುವುದೇ ಕ್ರಮ. ಅದೆಂತೆಂದೊಡೆ, ಭಕ್ತಿನಿಷ್ಠೆ, ವಿಶ್ವಾಸನಿಷ್ಠೆ, ಜ್ಞಾನನಿಷ್ಠೆ ಇಂತೀ ಸದ್ಭಾವ ನೆಲೆಗೊಳ್ಳದ ಕಾರಣ ತನು ವಿಂಗನುಪಾನವ ಮಾಡಬೇಕು. ಇದರ ಮೇಲೆ ಅರಿಡಡೆ, ಮನವು ಮಹದಲ್ಲಿ ನಿಲಬೇಕು. ಇದು ಮರುಳು ಶಂಕರ ಪ್ರಿಯ ಸಿದ್ಧರಾಮೇಶ್ವರ ಲಿಂಗವನೊಡಗೂಡುವ ಪರಿ.

ಭಾವಃ—ಶರೀರವು ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಈ ತತ್ವಗಳಿಂದ ಆಗಿರುತ್ತದೆ. ಆದ್ದರಿಂದ ಇಂಥ ಶರೀರಕ್ಕೆ ರೋಗ ಭಯವಿರುವುದು ಸ್ವಾಭಾವಿಕವು. ಹೀಗೆ ರೋಗವಾದಲ್ಲಿ ಈ ತತ್ವಗಳಿಗನುಸರಿಸಿ ಶರೀರಕ್ಕೆ ಚಿಕಿತ್ಸೆ ಮಾಡುವದು ಯೋಗ್ಯಕ್ರಮವೆಂದು ವಚನಕಾರನು ಹೇಳುತ್ತಾನೆ. ಆದರೆ ಮನುಷ್ಯನಲ್ಲಿ ಭಕ್ತಿ, ವಿಶ್ವಾಸ ಜ್ಞಾನಗಳು ಯಾವ ವರೆಗೆ ಇಲ್ಲವೋ ಆ ವರೆಗೆ ಅವನಿಗೆ ದೇಹಚಿಕಿತ್ಸೆ ಮಾಡಬೇಕು. ಆದರೆ ಜ್ಞಾನವು ಅವನಲ್ಲಿ ಉಂಟಾಗಿ ಅವನು ಮಹದಲ್ಲಿ ಇದ್ದರೆ ಅವನಿಗೆ ಯಾವ ರೋಗಗಳು ಬರಲಾರವು. ಅವನು ಪರಮಾತ್ಮನಲ್ಲಿ ಲಯವಾಗುತ್ತಾನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

(೬) ಪಿಂಡ, ಪ್ರಾಣ, ಆರೋಗ್ಯಗಳ ಚಿಕಿತ್ಸೆಯನರಿದು ವೈದ್ಯವ ಮಾಡಬಲ್ಲಡೆ ಪಂಡಿತನಪ್ಪ. ಘಟತ್ರಯದ ಭೇದವನರಿದು ಮಾಡುವ ಕ್ರಮವೆಂತುಟೆಂದಡೆ, ಕಟಿ ಮೊದಲಾದ ಕೀಳು ದೆಸೆಯಲ್ಲಿ ಸಂದಿನ ಭೇದ. ಅಂಗುಲಿಸಂದು ಇಪ್ಪತ್ತು. ಮಡಸಂದು ಎರಡು. ಪಚ್ಚಳಸಂದು ಎರಡು. ಇಂತೀ ಅಧಮನಾಳು. ಈ ನಾಡಿಗಳ ಸಾಧಿಸಿಕೊಂಡು ಊರ್ಧ್ವದಂಡದಲ್ಲಿ ಉಭಯ ಪಕ್ಷದಲ್ಲಿ ಕೆಲವಂದ ಸಂದು. ಅರಿವ ಸಂದು ಆರು. ಅಂತು ಕೀಳು ಮೊದಲಾದ ಸಂದು ನೂರು ಎಪ್ಪತ್ತು ನಾಲ್ಕು. ಅದರಿಂದ

ಮೊದಲಾದ ಉಭಯ ಕರದ ಸಂದು, ಅಂಗುಲಿಯ ಸಂದು ಇಪ್ಪತ್ತೆಂಟು. ಇಂತೀ ಕರದೊಳಗಾದ ಮೂವತ್ತು ನಾಲ್ಕು ಸಂದಿನ ನವನಾಳ ನಾಡಿಗಳನರಿತು ಅದರಿಂದ ಮೇಲೆ ಸಂಪುಟವೆರಡು. ಜಿಹ್ವೆ ಮೊದಲಾದ ಏಳು ದ್ವಾರಂಗಳ ಶೋಧಿಸಿಕೊಂಡು, ಕಪಾಲದ ತ್ರಿವಿಧದ ಹೊಲಿಗೆಯ ಕಂಡು ಊರ್ಧ್ವ ನಾಳದಲ್ಲಿ ಏರಿಳಿವ ಜೀವನ ತವಕವ ವಿಚಾರಿಸಿ ಕಂಡು, ಅಂಗುಷ್ಠ ತೊಟ್ಟು ವಾಲಾಗ್ರ ಪರಿಯಂತರದಲ್ಲಿ ಸ್ಥಾನವ ಮುಟ್ಟಿ ನೋಡಿ ರವಿ ಶಶಿ ಪನನ ಪಾವಕ ಮುಟ್ಟಿಯಾಡುವ ಲಕ್ಷಣವ ಕಂಡು ಅವಕ್ಕೆ ಚಿಕಿತ್ಸೆಯುಪ್ಪ ಅನ್ನ ಔಷಧಿ ಪಯ ಪಾನ ಉದಕ ನುಂಬಾದ ತೆರನನರಿತಡೆ ಆತ ಇರವನನಂದವ. ಇಂತು ಕಾಯಕದ ವೈದ್ಯವ ಮಾಡಬಲ್ಲವ ಮೇಲನರಿದು ಕೀಳು ಮರೆಯಬಲ್ಲಡೆ ಆತ ವೈದ್ಯ ಪಂಡಿತನೆಂಬೆ, ಮರುಳು ಶಂಕರಪ್ರಿಯ ಸಿದ್ಧರಾಮೇಶ್ವರ ಲಿಂಗವ ಬಲ್ಲಾತ.

ಭಾವಃ—ಇದರಲ್ಲಿ ಶರೀರ ರಚನೆಯ ವಿವರಣೆ ಇದೆ. ಅದಕ್ಕೂ ಅಂತರಂಗ ಶರೀರಕ್ಕೂ ಇರುವ ಸಂಬಂಧವನ್ನು ಹೇಳುತ್ತ ಪಂಡಿತನೆನಿಸಿಕೊಳ್ಳುವ ವೈದ್ಯನ ಲಕ್ಷಣವನ್ನು ವಚನಕಾರನು ಈ ವಚನದಲ್ಲಿ ಹೇಳಿದ್ದಾನೆ.

ಮೇಲೆ ನಾಲ್ಕನೇ ವಚನದ ಮೇಲಿಂದ ಈ ಶಿವಶರಣನು ವೈದ್ಯ ಶಾಸ್ತ್ರವನ್ನು ಜನ್ಮಾಗಿ ಬಲ್ಲವನಾಗಿದ್ದು ಬಸವೇಶ್ವರನಿಗೆ ಪ್ರಿಯನಾಗಿದ್ದನೆಂತಲೂ ಅವನು ಅವನಿಗೆ ಸಮಕಾಲೀನನಾಗಿ ಅವನ ಕೂಡ ಕಲ್ಯಾಣದಲ್ಲಿದ್ದನೆಂತಲೂ ತಿಳಿದುಬರುತ್ತದೆ.

ಅನುಮಿಷ.

ವಿಜಾಪುರ ಜಿಲ್ಲಾ ಬದಾಮಿ ತಾಲೂಕಿನಲ್ಲಿರುವ ಬದಾಮಿ ಗ್ರಾಮದಿಂದ ಐಹೊಳೆ ಗ್ರಾಮದ ವರೆಗೆ ಸುಮಾರು ೧೮ ಮೈಲು ದಕ್ಷಿಣೋತ್ತರ ಒಂದು ಗುಡ್ಡಗಳ ಸಾಲು ಹಬ್ಬಿರುತ್ತದೆ. ಈ ಸಾಲು ಪೂರ್ವ ಪಶ್ಚಿಮವಾಗಿ ಸುಮಾರು ೧೫ ಮೈಲುಗಳ ವರೆಗೆ ಇದೆ. ಪುರಾತನ ಕಾಲದಲ್ಲಿ ಈ ಭೂಭಾಗವು ನಿಬಿಡವಾದ ವೃಕ್ಷಗಳಿಂದ ತುಂಬಿಕೊಂಡು ದುರ್ಗಮ ಪ್ರದೇಶವಾಗಿತ್ತೆಂದು ತೋರುತ್ತದೆ. ಇಲ್ಲಿಯೇ

ಆರಂಭದ ಚಾಲುಕ್ಯರ ರಾಜಧಾನಿಯಾದ ಬದಾಮಿಯು ಇರುತ್ತದೆ. ಕಾಡುಗಳಿಂದ ತುಂಬಿದ ಈ ಪ್ರದೇಶ ಮಧ್ಯದೊಳಗಿಂದ ಮಲಾಪಹಾರೀ ಅಥವಾ ಮಲಪ್ರಭಾ ನದಿಯು ಹರಿಯುತ್ತಿದೆ. ಸುತ್ತಲಿನ ಗುಡ್ಡಗಳಲ್ಲಿ ಈಗಲೂ ಅಸಂಖ್ಯ ಗುಹೆಗಳಿದ್ದು ಅವುಗಳಲ್ಲಿ ಪೂರ್ವ ಕಾಲದಲ್ಲಿ ಯೋಗಿಗಳು ತಮ್ಮ ಯೋಗಸಾಧನೆಗಳಲ್ಲಿ ತೊಡಗುತ್ತಿರ ಬಹುದೆಂದು ತೋರುತ್ತದೆ. ಅಲ್ಲಲ್ಲಿ ಪುರಾತನ ಕಾಲದ ದೇವಾಲಯ ಗಳೂ ಅವುಗಳ ಅವಶೇಷಗಳೂ ಈ ಪ್ರದೇಶದಲ್ಲಿ ಕಣ್ಣಿಗೆ ಬೀಳುತ್ತವೆ. ಇವುಗಳಲ್ಲೆಲ್ಲ ಮಹಾಕೂಟ ದೇವಾಲಯವು ಅತ್ಯಂತ ಮಹತ್ವಪೂರ್ಣವಾದದ್ದು. ಹಿಂದಿನ ರಾಜರು ಎನೇ ೯ನೇ ಶತಮಾನಗಳಲ್ಲಿ ಇದಕ್ಕೆ ದಾನ ಕೊಟ್ಟಿದ್ದರ ಉಲ್ಲೇಖಗಳಿದ್ದ ಶಿಲಾಶಾಸನಗಳು ಅಲ್ಲಿ ಅನೇಕವಿರುತ್ತವೆ. ಈ ಸ್ಥಳದಲ್ಲಿಯೇ ಪೂರ್ವಕಾಲದಲ್ಲಿ ಅಗಸ್ತ್ಯಾಶ್ರಮವಿದ್ದುದು ಪುರಾಣ ಪ್ರಖ್ಯಾತವಾಗಿದೆ.

ಈ ಭೂಭಾಗದ ಮಧ್ಯಪ್ರದೇಶದಲ್ಲಿ ಹರಿಯುವ ಮಲಾಪಹಾರೀ ನದಿಯ ದಂಡೆಯ ಮೇಲೆ ಪಟ್ಟದಕಲ್ಲು ಎಂಬ ಗ್ರಾಮವಿರುತ್ತದೆ. ಈ ಗ್ರಾಮದಲ್ಲಿ ಶಿಲ್ಪಿಗರನ್ನು ಬೆರಗುಗೊಳಿಸುವಂತಹ ಅತ್ಯಂತ ಸುಂದರವಾದ ಪುರಾತನ ದೇವಾಲಯಗಳು ಈಗಲೂ ಉಂಟು. ಕರ್ನಾಟಕದ ಪುರಾತನ ಶಿಲ್ಪಕಲೆಯು ಎಷ್ಟು ಮುಂದುವರಿದಿತ್ತೆಂಬದನ್ನು ತಿಳಿಯಲು ಅವು ಮಹತ್ವದ ಸಾಧನಗಳಾಗಿರುತ್ತವೆ. ಈ ಗ್ರಾಮದಲ್ಲಿ ಅನೇಕ ರಾಜವಂಶಗಳು ಆಳಿದವು. ಈ ಗ್ರಾಮಕ್ಕೆ ಹವಿಮ್ಮೂರಪುರವೆಂತಲೂ ಬೇರೊಂದು ಹೆಸರಿದೆ.

ಈ ಗ್ರಾಮದಲ್ಲಿ ನಂದರು, ಗುಪ್ತರು, ಮೌರ್ಯರು ರಾಜ್ಯವಾಳಿದ ಬಳಿಕ ಚಾಳುಕ್ಯರು ೮ಲ ತಲೆಗಳ ವರೆಗೆ ಬಹು ವೈಭವದಿಂದ ರಾಜ್ಯವಾಳಿದರೆಂಬ ಆಖ್ಯಾಯಿಕೆ ಇದೆ. ಈ ಚಾಲುಕ್ಯರಲ್ಲಿ ತ್ರೈಲೋಕ್ಯ ಚೂಡಾಮಣಿ ಎಂಬ ರಾಜನು ಆಗಿಹೋದನು. ಅವನ ಹೆಂಡತಿಯ ಹೆಸರು ಮಹಾಲೋಕಿ. ಉಭಯ ದಂಪತಿಗಳು ಶಿವಜ್ಞಾನಿಗಳು, ಶಿವನಲ್ಲಿ ನಿಷ್ಠೆಯುಳ್ಳವರು. ಅವರಿಗೆ ವಸುಧೀಶನೆಂಬ ಮಗನು ಹುಟ್ಟಿದನು.

ಈ ವಸುಧೀಶನಿಗೆ ರಾಜನು ರಾಜರಿಗೆ ಉಚಿತವಾಗಿರುವ ವಿದ್ಯೆ ಮತ್ತು ರಾಜ್ಯನೀತಿ ಇವುಗಳ ಶಿಕ್ಷಣವನ್ನು ಕೊಟ್ಟು ಅವನಿಗೆ ಶಿವಜ್ಞಾನವನ್ನೂ

ಪೋಷ್ಪವನ್ನೂ ಕೊಡುವ ಶಿವದೀಕ್ಷಾ ಸಂಸ್ಕಾರಗಳನ್ನು ಮಾಡಿಸಿದನು. ಆಮೇಲೆ ಕೆಲವು ದಿವಸಗಳಾದ ಮೇಲೆ ಅರಸನಾದ ತ್ರೈಲೋಕ್ಯಚೂಡಾಮಣಿಯು ತನ್ನಿಂದ ರಾಜ್ಯಭಾರವನ್ನು ವಹಿಸುವದು ಆಗದೆಂದು ತಿಳಿದು ರಾಜ್ಯಪರಿತ್ಯಾಗ ಮಾಡಿ ತಾನು ಏಕಾಂತವಾಸದಲ್ಲಿರಬೇಕೆಂದು ಬಯಸಿ ತನ್ನ ಮಗನಿಗೆ ಒಂದು ಶುಭ ದಿನದಲ್ಲಿ ಪಟ್ಟವನ್ನು ಕಟ್ಟಿ ಅವನಿಗೆ ರಾಜ್ಯಭಾರವನ್ನೆಲ್ಲ ಒಪ್ಪಿಸಿದನು.

ಆ ಮೇಲೆ ವಸುಧೀಶನು ರಾಜ್ಯವನ್ನು ಪರಿಪಾಲಿಸಿ ಮಾಡಹತ್ತಿದನು. ಆದರೆ ಅವನ ಮನಸ್ಸು ಯಾವಾಗಲೂ ಶಿವಧ್ಯಾನದಲ್ಲಿರುವದು. ಅವನು ಇತರ ವಿಷಯಗಳಲ್ಲಿ ಉದಾಸೀನ ಭಾವವನ್ನು ತಾಳಿದವನಾಗಿ ಶಿವನ ಪ್ರಸಾದವಿಲ್ಲದೆ ಭೋಜನ ಮಾಡೆನೆಂಬ ಕಟ್ಟನ್ನು ಇಟ್ಟುಕೊಂಡಿದ್ದನು. ಹೀಗೆ ಅವನು ಅತ್ಯಂತ ಧರ್ಮಿಷ್ಠನಾಗಿ ರಾಜ್ಯ ಪರಿಪಾಲನೆಯನ್ನು ಮಾಡಹತ್ತಿದರೂ ಆತನು ಯೋಗಸಾಧನೆಗಳಲ್ಲಿ ಉತ್ಕಟವಾದ ಮನಸ್ಸನ್ನು ಹಾಕಿ ಅವುಗಳಲ್ಲಿ ಯಾವಾಗಲೂ ಕಾಲಕಳೆಯುತ್ತಿದ್ದನು. ಅವುಗಳ ಮೂಲಕ ಅವನು ಸಿದ್ಧಿಗಳನ್ನು ಸಹ ಸಂಪಾದಿಸಿದವನಾದನು.

ಹೀಗಿರುವಲ್ಲಿ ಅವನು ಒಂದು ದಿವಸ ಕೃತುಜನ್ನವೆಂಬ ಹೆಸರಿನ ತನ್ನ ಒಂದು ಪ್ರೀತಿಯ ಅಶ್ವವನ್ನು ತೆಗೆದುಕೊಂಡು ಮಿತವಾದ ಪರಿವಾರದೊಂದಿಗೆ ಕಾಡಿನಲ್ಲಿ ಬೇಟೆಯಾಡಲು ಹೊರಟನು. ಹೀಗೆ ಬೇಟೆಯಾಡುತ್ತ ಹೋಗುವಾಗ, ಆ ಅಶ್ವವು ಏನೋ ಒಂದು ಕಾರಣದಿಂದ ಬೆದರಿ ಅರಸನ ಅಂಕಿತದಲ್ಲಿ ಉಳಿಯದೆ ಗಿಡ ಗುಡ್ಡಗಳಿನ್ನಿದೆ. ಹಳ್ಳಕೊಳ್ಳಗಳಿನ್ನಿದೆ ಓಡುತ್ತಾ ಓಡುತ್ತಾ ಮೂಕದ್ರೋಣ ಪರ್ವತ ಎಂಬಲ್ಲಿಗೆ ಬಂದಿತು. ಮತ್ತು ಅಲ್ಲಿಯೇ ಅದು ನಿಂತುಕೊಂಡು ಬಿಟ್ಟಿತು.

ಆಗ ಅರಸನು ಹೀಗೆ ಅಶ್ವವು ತಾನಾಗಿಯೇ ನಿಂತದ್ದಕ್ಕೆ ಸಂತೋಷಪಟ್ಟು ಮಾರ್ಗಾಯಾಸದಿಂದ ಬಹಳ ದಣಿದವನಾಗಿ ಅಲ್ಲಿಯೇ ನಿದ್ರೆಹೋದನು. ಅವನು ಎಚ್ಚತ್ತು ನೋಡುತ್ತಾನೆಯೇ, ಅಷ್ಟರಲ್ಲಿ ಅವನ ಆ ಕುದುರೆಯು ಮಾಯವಾಗಿತ್ತು. ಅದನ್ನು ಎಲ್ಲಿ ಹುಡುಕಿದರೂ ಅದು ಅವನಿಗೆ ಸಿಕ್ಕಲಿಲ್ಲ. ಆದ್ದರಿಂದ ಅವನು ಅದರ ಹಂಬಲ

ಗಾವಿ ಪ್ರಾಂತದಲ್ಲಿ ಅನೇಕ ಶಿವಶರಣರು ಉದ್ಭವಿಸಿದ್ದರಿಂದ ಅವನು ಅಲ್ಲಿಗೆ ಹೋಗಲು ನಿಶ್ಚಯಿಸಿದನು.

ಆಗ ಅವನೊಡನೆ ಅವನ ಪ್ರಭಾನಿಗಳೂ ಸೇವಕರೂ ಹೊರಟು ಬಳ್ಳಿಗಾವಿಯ ಸಮೀಪದಲ್ಲಿ ಶಿವಯೋಗಕ್ಕೆ ಸಾಧನೀಭೂತವಾದ ಒಂದು ಉತ್ತಮ ಸ್ಥಳವನ್ನು ಆಯ್ದರು. ಅನುವಿಷನು ಅಲ್ಲಿಗೆ ಬಂದು ಅಲ್ಲಿ ತನ್ನ ಲಿಂಗದಲ್ಲಿ ಮನಸ್ಸನ್ನು ಇಟ್ಟು ಲಿಂಗಧ್ಯಾನ ಪರಾಯಣನಾದನು. ಅವನಿಗೆ ಬಾಹ್ಯ ಸೃಷ್ಟಿಯ ಅರಿವು ಏನೂ ಉಳಿಯಲಿಲ್ಲ. ಈ ಸ್ಥಿತಿಯುಂಟಾಗಲು ಅವನ ಮಂತ್ರಿಪ್ರಧಾನರು ಅನುವಿಷಯ್ಯನ ಮೇಲೆ ಒಂದು ಶಿಲಾಗುಡಿಯನ್ನು ಕಟ್ಟಿಸಿ ಅದಕ್ಕೆ ಸುವರ್ಣ ಕಲಶವನ್ನಿಟ್ಟು ಅವನ್ನು ನೆಲಗುಡಿಯನ್ನಾಗಿ ಮಾಡಿ ಸ್ವರ್ಗಾಮಕ್ಕೆ ತೆರಳಿದರು.

ಅನುವಿಷಯ್ಯನು ಹೀಗೆ ತನ್ನ ಲಿಂಗದಲ್ಲಿ ಮಗ್ನನಾಗಿ ಆಹಾರ ನಿದ್ರೆಗಳನ್ನು ತೊರೆದು ತನ್ನ ಇಷ್ಟಲಿಂಗಧ್ಯಾನದಲ್ಲಿ ತೊಡಗಲು, ಅವನ ದೇಹದಲ್ಲಿ ಪ್ರಾಣ ಮಾತ್ರ ಉಳಿಯಿತು. ಚರ್ಮ ಮತ್ತು ಅಸ್ಥಿಗಳು ಅವನಲ್ಲಿ ನಿಮಿತ್ತ ಮಾತ್ರಕ್ಕೆ ಉಳಿದವು. ಆಗ ಅವನಿಗೆ ಇಷ್ಟಲಿಂಗದ ನೋಟವೇ ಪ್ರಾಣವಾಯಿತು. ಅವನಿಗೆ ಹೊರಗಿನ ತಿಳಿವಳಿಕೆ ಏನೂ ಉಳಿಯಲಿಲ್ಲ.

ಹೀಗಿರಲು ಅವನು ವಾಸಮಾಡಿದ ದೇವಾಲಯದ ಸುತ್ತಲು ಗೊಗ್ಗಯ್ಯನೆಂಬ ತೋಟಿಗನು ಅದರ ಒಳಗೆ ಯಾರು ಇದ್ದಾರೆ, ಅವರು ಏನು ಮಾಡುತ್ತಾರೆ, ಎಂಬುದನ್ನು ತಿಳಿಯದೆ ಅದರ ಸುತ್ತಲೂ ಗಿಡಗಳನ್ನು ಬೆಳೆಯಿಸಿ ತೋಟವನ್ನು ಮಾಡಹತ್ತಿದನು. ಆದರೆ ಅವರ ಅರಿವು ಒಳಗಿದ್ದ ಅನುವಿಷನಿಗೇನೂ ಇರಲಿಲ್ಲ.

ಹೀಗಿರುವಲ್ಲಿ ಒಂದು ದಿನ ಅಲ್ಲಮಪ್ರಭುವು ಬನವಾಸಿಯಲ್ಲಿದ್ದಾಗ ಅವನು ಪ್ರಪಂಚದ ಸಲುವಾಗಿ ಹೇಯಭಾವವನ್ನು ತಾಳಿ ಪಟ್ಟಣವನ್ನು ತೊರೆದು, ಹೊರಹೊರಟು ಬರುತ್ತಿರುವಾಗ ದಾರಿಯಲ್ಲಿ ಗೊಗ್ಗಯ್ಯನು ತೋಟ ಮಾಡುವದನ್ನು ಕಂಡನು. ಅಲ್ಲಮಪ್ರಭುವು ಅವನನ್ನು ಕಂಡು ಹೀಗೆ ಐಹಿಕ ವ್ಯಾಪಾರಗಳಲ್ಲಿ ಮಗ್ನನಾಗಿರದೆ ಪಾರಮಾರ್ಥದಲ್ಲಿ ಇರಬೇಕೆಂದು ಅವನಿಗೆ ಉಪದೇಶಿಸುತ್ತಿರಲು, ಗೊಗ್ಗಯ್ಯನಿಗೆ ಲಿಂಗಮಾರ್ಗದ ಮಹತ್ವವನ್ನು ಪ್ರತ್ಯಕ್ಷ ಅವನ ನಿದರ್ಶನಕ್ಕೆ

ತಂದುಕೊಡುವದು ಅವಶ್ಯವೆಂದು ತೋರಿತು. ಅಷ್ಟರಲ್ಲಿ ಅವನ ಕಣ್ಣಿಗೆ ಆ ತೋಟದಲ್ಲಿ ಹೊರಗೆ ಸಣ್ಣಗಿ ಮಿನುಕ್ಕುತಿರುವ ಒಂದು ಶಿಖರವು ನೆಲದಲ್ಲಿದ್ದುದು ಕಂಡು ಬಂದಿತು. ಆಗ ಅದರ ಸುತ್ತಲೂ ಇದ್ದ ಮಣ್ಣನ್ನು ಪ್ರಭುವು ಕೆದರಲು ಅಲ್ಲಿ ಒಂದು ದೇವಾಲಯ ವಿದ್ದುದು ದೃಷ್ಟಿಗೋಚರವಾಯಿತು. ಅದರಲ್ಲಿ ಬಿದ್ದಿದ್ದ ಮಣ್ಣನ್ನೆಲ್ಲ ಸರಿಸಿ ದೇವಾಲಯದ ಹೆಬ್ಬಾಗಿಲಿನಿಂದ ಗೊಗ್ಗಯ್ಯನೊಡನೆ ಒಳಗೆ ಪ್ರವೇಶಿಸಿ ನೋಡಲು ಅಲ್ಲಿ ಅನುವಿಷನು ತನ್ನ ಕೈಯ್ಯಲ್ಲಿ ಲಿಂಗವನ್ನಿಟ್ಟುಕೊಂಡು ಅದರಲ್ಲಿ ದೃಷ್ಟಿಯನ್ನಿಟ್ಟು ಧ್ಯಾನಮಗ್ನನಾಗಿದ್ದುದನ್ನು ಕಂಡನು.

ಆಮೇಲೆ ಅಲ್ಲಮಪ್ರಭುವು ಅನುವಿಷಯ್ಯನಿಗೆ ಸಾಷ್ಟಾಂಗವೆರಗಿ ಅವನ ಕರದಲ್ಲಿದ್ದ ಲಿಂಗವನ್ನು ತನ್ನ ಕರಸ್ಥಲದ ಲಿಂಗದಲ್ಲಿ ಸ್ವಾಯತ ಮಾಡಿಕೊಳ್ಳಬೇಕೆಂದು ಮುಂದುವರಿಯಲು, ಆ ಅನುವಿಷಯ್ಯನ ಲಿಂಗದ ಕಳೆಗಳು ಅದರಲ್ಲಿ ಬೆರೆದುಹೋದವು. ಹೀಗಾದ ಕೂಡಲೆ ಅನುವಿಷಯ್ಯನ ಅಸ್ಥಿಗಳು ತಾವಾಗಿಯೇ ನೆಲಕ್ಕೆ ಉದುರಿಬಿದ್ದವು. ಹೀಗೆ ಪ್ರಭುವು ಅನುವಿಷಯ್ಯನ ಶಿಷ್ಯತ್ವವನ್ನು ಸ್ವೀಕರಿಸಿ ಅವನ ಶಕ್ತಿಯನ್ನು ತನ್ನಲ್ಲಿ ಅಳವಡಿಸಿಕೊಂಡು ಉಭಯತರು ಏಕಾಕಾರವಾದರು. ಹೀಗೆ ಗೊಗ್ಗಯ್ಯನಿಗೆ ಲಿಂಗದ ಮರ್ಮ, ಗುರುಶಿಷ್ಯ ಸಂಬಂಧ, ಇವುಗಳ ರೀತಿಯನ್ನು ತನ್ನ ಆಚರಣೆಯಲ್ಲಿ ತೋರಿಸಿ ಮುಂದೆ ಅವನು ವೀರಶೈವ ಮಾರ್ಗವನ್ನು ಉಪದೇಶಿಸುತ್ತ ಅನೇಕ ದೇಶಗಳನ್ನು ಸಂಚರಿಸುತ್ತ ಕಲ್ಯಾಣಕ್ಕೆ ಬರುವವನಾದನು.

ಈ ಪ್ರಕಾರ ನಂದಿಕೇಶ್ವರನು ಅನುವಿಷನಿಗೆ ಗುರುವಾಗಿಯೂ ಅನುವಿಷಯ್ಯನು ಅಲ್ಲಮ ಪ್ರಭುವಿಗೆ ಗುರುವಾಗಿಯೂ ಅಲ್ಲಮ ಪ್ರಭುವು ಬಸವಾದಿ ಸಕಲ ಪ್ರಮಥರಿಗೆ ಮಹಾಜ್ಞಾನ ಗುರುವಾಗಿಯೂ ಆಚರಿಸುತ್ತ ಈ ಯಾವತ್ತರೂ ವೀರಶೈವ ಧರ್ಮವನ್ನು ಉದ್ಧರಿಸಿದ್ದಾರೆ.

ಇವರಲ್ಲಿ ಅನುವಿಷನು ಪ್ರಾಣಲಿಂಗಿ ಸ್ಥಲದವನಲ್ಲಿದ್ದು ಶಿವಯೋಗಾಚರಣೆಯಲ್ಲಿ ನಿರತನಾಗಿದ್ದನು. ಆದರೆ ಇವನು ಆರಂಭದಲ್ಲಿ ಸಿದ್ಧರ ಮಾರ್ಗದಲ್ಲಿದ್ದು ಸಿದ್ಧಿಗಳನ್ನು ಮಾಡುವವನಾಗಿದ್ದನು. ಆದರೆ ನಂದಿಕೇಶ್ವರನ ಮೂಲಕ ಅವನು ಈ ಮಾರ್ಗವನ್ನು ಬಿಟ್ಟು ವೀರಶೈವಾ

ಜಾರವನ್ನು ಗ್ರಹಿಸಿದನು. ನಂದಿಕೇಶ್ವರನಿದ್ದ ಸ್ಥಳವು ಬದಾಮಿ, ಪಟ್ಟದಕಲ್ಲು, ಐಹೊಳೆ ಪ್ರದೇಶದಲ್ಲಿರಬೇಕೆಂದು ನಾವು ಊಹಿಸುತ್ತೇವೆ. ಈ ಭೂಭಾಗವು ಬಹು ಪವಿತ್ರವಾದುದು. ನಂದಿಕೇಶ್ವರ ಎಂಬ ಹೆಸರಿನ ಗ್ರಾಮವೂ ಅಲ್ಲಿ ಈಗಲೂ ಉಂಟು. ಪಟ್ಟದಕಲ್ಲಿನಿಂದ ಅದು ೫-೬ ಮೈಲುಗಳು ಮತ್ತು ಮಹಾಕೂಟ ಕ್ಷೇತ್ರದಿಂದ ಒಂದೆರಡು ಮೈಲುಗಳ ಮೇಲೆ ಇದೆ. ಇದಕ್ಕೆ ಸಮೀಪವಾಗಿ ಅನೇಕ ಪುರಾತನ ಕಾಲದ ಅವಶೇಷಗಳು ಇವೆ. ಇಲ್ಲಿ ಅಥವಾ ಇದರ ಸಮೀಪದಲ್ಲಿ ನಂದಿಕೇಶ್ವರನು ತಪಸ್ಸು ಮಾಡುತ್ತಿದ್ದ ಅವನಿಂದ ಅನುವಿಷನು ಅಲ್ಲಿಯೇ ಲಿಂಗಧಾರಣವನ್ನು ಹೊಂದಿರಬಹುದು. ಈತನು ನಂದಿಯೇ ಎಂದು ಪುರಾಣಗಳಲ್ಲಿ ಹೇಳಲ್ಪಟ್ಟಿವೆ. ಆದರೆ ಈ ನಂದೀಕೇಶ್ವಂನು ಮತ್ತು ರಾಜನಾದ ಅನುವಿಷನು ಇವರು ಪುರಾತನಕಾಲದಲ್ಲಿ ಬಹು ಪ್ರಸಿದ್ಧ ಶಿವಶರಣರೆಂಬುದು ಸ್ಪಷ್ಟವಿದೆ. ನಂದಿಕೇಶ್ವರನು ತಪಸ್ಸುಮಾಡುತ್ತಿದ್ದ ವಾಸಸ್ಥಳಕ್ಕೆ ಸಮೀಪವಿದ್ದ ಗ್ರಾಮಕ್ಕೆ ನಂದಿಕೇಶ್ವರ ಎಂಬ ಹೆಸರು ಬಂದಿರಬಹುದು. ಇಲ್ಲಿಯೇ ಅನುವಿಷ ಅಂದರೆ ವಸುಧೀಶರಾಜನ ಕುಮಾರಿಯು ವಾಯುವಾಗಿರಬಹುದು. ಅನುವಿಷನ ರಾಜಧಾನಿಯು ಪಟ್ಟದಕಲ್ಲು. ಅವನು ಅಲ್ಲಿ ಇರಹತ್ತಿದ ಬಳಿಕ ಅವನು ತನ್ನ ಗುರುವಾದ ನಂದಿಕೇಶ್ವರನ ಗುರುತಿಗಾಗಿ ಒಂದು ನಂದಿಯ ವಿಗ್ರಹವನ್ನು ಮಾಡಿಸಿ ಈ ಗ್ರಾಮದಲ್ಲಿ ಸ್ಥಾಪಿಸಿದಂತೆ ತೋರುತ್ತದೆ. ಯಾಕಂದರೆ 'ಪಟ್ಟದಕಲ್ಲಿನ ಬಸವಣ್ಣ'ನ ಮಹತ್ವವು ಈ ಪ್ರದೇಶದಲ್ಲಿ ಈಗಲೂ ಬಹಳ ಇದ್ದು ಅದರ ಹೆಸರಿನಿಂದ ಈ ಗ್ರಾಮದಲ್ಲಿ ಬಹು ದೊಡ್ಡ ಜಾತ್ರೆಯಾಗುತ್ತದೆ. ಇದು ಬಹು ಉನ್ನತವಾದ ಮತ್ತು ಬಹು ಸುಂದರವಾದ ವಿಗ್ರಹವು. ಇದು ಅತ್ಯಂತ ಮಹತ್ವದ ಮತ್ತು ಪ್ರಸಿದ್ಧವಾದ ವಿರೂಪಾಕ್ಷ ದೇವಾಲಯದಲ್ಲಿ ಇದ್ದರೂ ವಿರೂಪಾಕ್ಷಲಿಂಗನ ಜಾತ್ರೆಯಾಗದೆ ಅದರ ಇದಿರಿಗೆ ಇರುವ ಈ ನಂದಿಯ ಜಾತ್ರೆಯಾಗುತ್ತದೆ. ಮುಖ್ಯ ದೇವತೆಯಾದ ಶಿವಲಿಂಗವನ್ನು ಬಿಟ್ಟು ಹೀಗೆ ನಂದಿಯ ಜಾತ್ರೆ ಮಾಡುವ ರೂಢಿಯು ಎಲ್ಲಿಯೂ ಇರುವದಿಲ್ಲ. ಇದರಿಂದ ಈ ನಂದಿಯ ಮಹತ್ವವು ಜನರಲ್ಲಿ ಎಷ್ಟಿರುತ್ತದೆಂಬುದು ಗೊತ್ತಾಗುತ್ತದೆ. ಈ ನಂದಿಯು ಅನುವಿಷನ ಗುರುವಾದ ನಂದಿಕೇಶ್ವರನ ಸ್ಮರಣಾರ್ಥವಾಗಿ ನಿರ್ಮಿಸಲ್ಪಟ್ಟಿರುವದರಿಂದ ಇದಕ್ಕೆ ಜನರು ಇಷ್ಟು ಮಹತ್ವವನ್ನು ಕೊಟ್ಟಿರಬಹುದು.

ಗೋರಕ್ಷನು ಅನುವಿಷನಂತೆಯೇ ಸಿದ್ಧಪುರುಷನು. ಅವನ ಗ್ರಾಮವಾದರೂ ಪಟ್ಟದಕಲ್ಲು (ಶಿವಶರಣರ ಜಂತ್ರಿಗಳು ಭಾಗ ೧ ಪುಟ ೬೮ ನೋಡಿರಿ). ಅವನೂ ಅನುವಿಷನೂ ಸಮಕಾಲೀನರು ಮತ್ತು ಒಂದೇ ಗ್ರಾಮದವರು. ಆದರೆ ಗೋರಕ್ಷನು ಈ ಕಾಲದಲ್ಲಿ ವೀರಶೈವ ಧರ್ಮವನ್ನು ಸ್ವೀಕರಿಸದೆ, ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕೆಂದು ಕೊಲ್ಲಾಪುರಕ್ಕೆ ಬಂದನು. ಅಲ್ಲಿ ರೇವಣಸಿದ್ಧೇಶ್ವರನಿಂದ ಭಂಗಿತನಾಗಿ ಮುಂದೆ ಶ್ರೀಶೈಲಕ್ಕೆ ಹೋಗಿ ತಪಸ್ಸು ಮಾಡುವವನಾದನು. ಅಲ್ಲಿ ಅವನು ಅಲ್ಲಮಪ್ರಭುವನ್ನು ಕಾಣಲು, ಪ್ರಭುವು ಸಿದ್ಧಿಗಳ ಸಾಧನೆಗಿಂತಲೂ ತ್ರಿಲಿಂಗಗಳ ಸಾಧನೆಯೇ ಹೆಚ್ಚಿನದೆಂದು ಅವನ ನಿದರ್ಶನಕ್ಕೆ ತಂದುಕೊಟ್ಟನು. ಆಗ ಗೋರಕ್ಷನು ಅಲ್ಲಮಪ್ರಭುವಿನಿಂದ ಲಿಂಗದೀಕ್ಷೆಯನ್ನು ಹೊಂದಿ ವೀರಶೈವ ಧರ್ಮವನ್ನು ಪಾಲಿಸುವವನಾದನು. ಮುಂದೆ ವಚನಕಾರನೂ ಆದನು.

ಆದರೆ ಅನುವಿಷನು ನಂದಿಕೇಶ್ವರನಿಂದ ಅನುಗ್ರಹಿಸಲ್ಪಟ್ಟ ಬಳಿಕ ಅವನು ಸಿದ್ಧರ ಮಾರ್ಗವನ್ನು ಬಿಟ್ಟು ಕೇವಲ ಶಿವಾನುಭವ ಮಾರ್ಗದಲ್ಲಿ ಉಳಿದನು. ಅವನು ತನ್ನ ರಾಜ್ಯವನ್ನು ಬಿಟ್ಟು ಕೊಟ್ಟು ಬಳ್ಳಿಗಾವಿಗೆ ಬಂದು ತನ್ನ ಲಿಂಗಾನುಸಂಧಾನದಲ್ಲಿ ಇರಹತ್ತಿದನು. ಬಳ್ಳಿಗಾವಿಯಿಂದ ಎರಡು ಮೈಲುಗಳ ಮೇಲೆ 'ಅನಿಮಿಷಾರ್ಯ ಕ್ಷೇತ್ರ' ಅಥವಾ 'ಅನಿಮಿಷ ಕೊಪ್ಪಲು' ಎಂದು ಅತನು ಇದ್ದ ಸ್ಥಳವು ಈಗಲೂ ಪ್ರಸಿದ್ಧವಾಗಿರುತ್ತದೆ. ಅಲ್ಲಿ ಅವನ ಗುಡಿಯೂ ಇದೆ. ಪ್ರತಿವರ್ಷ ಅಲ್ಲಿ ಜಾತ್ರೆಯೂ ಆಗುತ್ತಿದೆ. ಆದ್ದರಿಂದ ಅನುವಿಷನು ವೀರಶೈವ ದೀಕ್ಷೆಯನ್ನು ಹೊಂದಿದ ಬಳಿಕ ಅವನು ಪಟ್ಟದಕಲ್ಲಿನಿಂದ ಈ ಪುಣ್ಯಸ್ಥಳಕ್ಕೆ ಬಂದಿರಬಹುದೆಂದು ನಾವು ತರ್ಕಿಸುತ್ತೇವೆ.

ಗೋರಕ್ಷನು ನವನಾಥರಲ್ಲಿ ಬಹು ಪ್ರಸಿದ್ಧನಾಗಿದ್ದಾನೆ. ಅವನ ಗುರುವಿನ ಹೆಸರು ಮತ್ಸ್ಯೇಂದ್ರನಾಥನೆಂದು ಸಿದ್ಧರ ಚರಿತ್ರೆಗಳಿಂದ ಗೊತ್ತಾಗುತ್ತದೆ. ಮತ್ಸ್ಯ ಇದಕ್ಕೆ ಅನಿಮಿಷ ಎಂಬ ಹೆಸರಿರುತ್ತದೆ. ಇದರಿಂದ ಮತ್ಸ್ಯೇಂದ್ರನಾಥನು ಅನಿಮಿಷನಿರಬಹುದೆಂದು ನಾವು ಊಹಿಸಬೇಕಾಗುತ್ತದೆ. ಆದ್ದರಿಂದ ವಸುಧೀಶರಾಜ, ಅತನ ಎರಡನೆಯ ಹೆಸರು ಅನಿಮಿಷ ಮತ್ತು ಗೋರಕ್ಷ ಈ ಉಭಯತರು ಪಟ್ಟದಕಲ್ಲಿನಲ್ಲಿ ಇದ್ದಾಗ್ಗೆ ಗುರುಶಿಷ್ಯರಾಗಿದ್ದರೆಂದು ತೋರುತ್ತದೆ.

ಪಟ್ಟದಕಲ್ಲಿನಿಂದ ಐಹೊಳೆ ಗ್ರಾಮವು ಐದಾರು ಮೈಲುಗಳ ಮೇಲೆ ಇವೆ. ಈ ಐಹೊಳೆ ಗ್ರಾಮದಲ್ಲಿ ಶಿವಯೋಗಿ ಮಲ್ಲರಸನು ಬ್ರಾಹ್ಮಣರಲ್ಲಿ ಉದ್ಭವಿಸಿ ಆ ಪಟ್ಟಣದ ಒಡೆಯನಾಗಿದ್ದನು. ಇವನೂ ಮೊದಲು ಸಿದ್ಧನು. ಆದರೆ ಅವನು ವೀರಶೈವೋಪದೇಶವನ್ನು ಹೊಂದಿದ ಬಳಿಕ ಶ್ರೀಶೈಲಕ್ಕೆ ಹೋಗಿ ಅಲ್ಲಿ ವಾಸಮಾಡುವವನಾದನು (ಶಿವ ಶರಣರ ಚರಿತ್ರೆಗಳು ಭಾಗ ೧ ಪುಟ ೩೫ ನೋಡಿರಿ). ಅಲ್ಲಿ ಅವನು ಸಕಲೇಶ ಮಾದರಸನನ್ನು ಕಂಡು ಅವನಿಗೆ--- ನೀನು ಕಠಿಣವಾದ ತಪಸ್ಸನ್ನು ಮಾಡದೆ ಬಸವಾದಿಪ್ರಮಥರಿಂದ ತ್ರಿಲಿಂಗದ ಮಾರ್ಗವನ್ನು ಅನುಸರಿಸು ಎಂದು ಬೋಧಿಸಿ, ಅವನನ್ನು ಕಲ್ಯಾಣಕ್ಕೆ ಕಳಿಸುವವನಾದನು. ಹಾಗೆಯೇ ಸಕಲೇಶಮಾದರಸನು ಕಲ್ಯಾಣದಲ್ಲಿ ಬಂದು ನಿಂತುಕೊಂಡು ಅಲ್ಲಿ ಅನೇಕ ವಚನಗಳನ್ನು ರಚಿಸಿದ್ದಾನೆ.

ಈ ಎಲ್ಲ ಸಂಗತಿಗಳ ಮೇಲಿಂದ ನಂದಿಕೇಶ್ವರ, ಅನುವಿಷ, ಗೋರಕ್ಷ, ಇವರು ಬಸವೇಶ್ವರನಕಿಂತಲೂ ಕೆಲವು ಕಾಲ ಹಿಂದಿನವರಾಗುತ್ತಾರೆ. ಅನುವಿಷ ಮತ್ತು ಗೋರಕ್ಷ ಇವರು ಆರಂಭದಲ್ಲಿ ವೀರಶೈವರಿರದಿದ್ದರೂ ಹಿಂದುಗಡೆ ಲಿಂಗಧಾರಣೆಯನ್ನು ಹೊಂದಿ ವೀರಶೈವ ಸಂಸ್ಕೃತಿಯನ್ನ ಮುಂದುವರಿಸಿದ್ದಾರೆ.

ಕೆಲವರು ಅನುವಿಷನಿಗೆ ಕಲ್ಯಾಣದ ಬಸವೇಶ್ವರನೇ ಲಿಂಗ ಧಾರಣೆ ಮಾಡಿದ್ದಾನೆಂದು ತಿಳಿದಿದ್ದಾರೆ. ಹಾಗೆ ಕೆಲವು ಗ್ರಂಥಗಳಲ್ಲಿ ಉಲ್ಲೇಖಗಳೂ ಇವೆ. ಆದರೆ ಅವನಿಗೆ ಲಿಂಗಧಾರಣೆ ಮಾಡಿದವನು ನಂದಿಕೇಶ್ವರನಿದ್ದಾನೆ. ಈ ನಂದಿಕೇಶ್ವರು ಶಿವನ ಸಮ್ಮುಖದಲ್ಲಿ ಕೈಲಾಸದಲ್ಲಿದ್ದಾಗ ಶಿವನು ಪೃಥ್ವಿಯಲ್ಲಿ ಧರ್ಮೋದ್ಧಾರ ಮಾಡಲು ಅವನಿಗೆ ಅಪ್ಪಣೆಯನ್ನಿತ್ತಿದ್ದರಿಂದ ಅವನು ಬಸವನಾಮದಿಂದ ಮುಂದೆ ಮಾದಲಾಂಬೆಯ ಗರ್ಭದಲ್ಲಿ ಜನಿಸಿದನೆಂದು ಪುರಾಣೋಕ್ತ ಕಥೆ ಇದೆ. ಆದರೆ ಅನುವಿಷ,ನಂದಿಕೇಶ್ವರ, ಗೋರಕ್ಷ, ಇವರು ಕಾಲ್ಪನಿಕ ಮನುಷರಾಗಿರುವದಿಲ್ಲ. ಅವರು ಬಸವೇಶ್ವರನಕಿಂತಲೂ ಕೆಲವು ಕಾಲ ಮೊದಲು ಜನಿಸಿದವರಾಗಿ ಲಿಂಗಾನುಸಂಧಾನದಲ್ಲಿ ನಿರತರಾಗಿ ಪ್ರಾಣಲಿಂಗಿ ಸ್ಥಳದವರಾಗಿರುತ್ತಾರೆ. ಷಟ್‌ಸ್ಥಲದಲ್ಲಿ ಅನೇಕ ಸ್ಥಲಗಳಿರುತ್ತವೆ. ಲಿಂಗಾಂಗಿಗಳಾದವರು ಆ ಸ್ಥಲಗಳಲ್ಲಿ ತಮಗೆ ಸಾಧ್ಯವಾದ ಕೆಲವೊಂದು ಸ್ಥಲ

ವನ್ನಿದ್ದುಕೊಂಡು ಆ ಸ್ಥಲದ ಆಚರಣೆಗಳನ್ನು ಆಚರಿಸುತ್ತ ತಮ್ಮ ಉನ್ನತಿಯನ್ನು ಮಾಡಿಕೊಳ್ಳಲು ಸ್ವತಂತ್ರರಿದ್ದಾರೆ. ಷಟ್‌ಸ್ಥಲ ಮಾರ್ಗವು ಹೀಗೆ ಆಚರಿಸಲಿಕ್ಕೆ ಎಲ್ಲರಿಗೂ ಅವಕಾಶ ಕೊಟ್ಟಿರುತ್ತದೆ. ಆ ಪ್ರಕಾರ ಅನುವಿಷನು ಲಿಂಗಧಾರಿಯಾದ ಬಳಿಕ ಕೆಲವು ಕಾಲ ಮಾತ್ರ ಪಟ್ಟದ ಕಲ್ಲಿನಲ್ಲಿ ವಾಸ ಮಾಡಿ ಮುಂದೆ ಅವನು ತನ್ನ ರಾಜ್ಯವನ್ನು ಬಿಟ್ಟು ಕೊಟ್ಟು ಬಳ್ಳಿಗಾವಿಗೆ ಬಂದು ಅಲ್ಲಮ ಪ್ರಭುವಿಗೆ ಅನುಗ್ರಹಿಸಿ ಶಿವಶರಣರಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದಾನೆ.

ಶಿವಲೆಂಕ ಮಂಚಣ್ಣ.

ವೀರಶೈವ ಗ್ರಂಥಕಾರರಲ್ಲಿ ಮೂವರು ಜನರು ಬಹು ಪ್ರಸಿದ್ಧರಾಗಿದ್ದಾರೆ. ಅವರು ಶಿವಲೆಂಕ ಮಂಚಣ್ಣ, ಶ್ರೀಪತಿ ಪಂಡಿತ, ಮತ್ತು ಮಲ್ಲಿಕಾರ್ಜುನ ಪಂಡಿತ ಇವರಿದ್ದಾರೆ. ಇವರು ಪಂಡಿತತ್ರಯರೆಂದು ಹೆಸರಾಗಿದ್ದಾರೆ. ಇವರಲ್ಲಿ ಶ್ರೀಪತಿ ಪಂಡಿತ ಮತ್ತು ಮಲ್ಲಿಕಾರ್ಜುನ ಪಂಡಿತ ಇವರು ಆಂಧ್ರ ಅಂದರೆ ತೆಲುಗು ದೇಶದವರು. ಶಿವಲೆಂಕ ಮಂಚಣ್ಣನು ಕಾಶೀಕ್ಷೇತ್ರದವನು. ಇವರೆಲ್ಲರೂ ವೀರಶೈವ ಸಿದ್ಧಾಂತವನ್ನು ನೆಲೆಗೊಳಿಸಿದ್ದಾರೆ. ಇವರು ವೀರಶೈವಧರ್ಮತತ್ವಗಳ ಮಹತ್ವವನ್ನು ವೇದಾಗಮೋಪನಿಷತ್ತುಗಳಲ್ಲಿಯ ಆಧಾರಗಳನ್ನು ತೆಗೆದುಕೊಂದು ಪ್ರತಿಷ್ಠಾಪಿಸಿದ್ದಾರೆ.

ಶಿವಲೆಂಕ ಮಂಚಣ್ಣನು ಬ್ರಾಹ್ಮಣನು. ಅವನ ಅಜ್ಜನ ಹೆಸರು ಸೋಮಶಂಭು ದೇಶಿಕನು. ಇವನು ಬಹು ವಿದ್ವಾಂಸನು. ಅವನ ಮಗನು ಶಂಭುಭಟ್ಟನು. ಇವನು ಕಾಮಿಕಾದಿ ಆಗಮಗಳಿಗೆ ವೃತ್ತಿ ಮತ್ತು ದೀಪಿಕೆಗಳನ್ನು ರಚಿಸಿ ಅವುಗಳ ತತ್ವಗಳನ್ನು ನಿರೂಪಿಸಿದ್ದಾನೆ. ಅವನು ಶಿವ ಸಮಯವನ್ನು ಕಾಶಿಯಲ್ಲಿ ಸ್ಥಿರಪಡಿಸಿದನು. ಇವನ ಮಗನೇ ಶಿವಲೆಂಕ ಮಂಚಣ್ಣನು.

ಶಿವಲೆಂಕ ಮಂಚಣ್ಣನು ಶಿವಜ್ಞಾನಿಯು ಮತ್ತು ವೀರಶೈವ ಸಿದ್ಧಾಂತವನ್ನು ಚೆನ್ನಾಗಿ ಬಲ್ಲವನು. ಅವನು 'ಸಕಲಾಗಮಾಚಾರ್ಯ'ನೆಂದು ಪ್ರಸಿದ್ಧನಾಗಿದ್ದಾನೆ. ಕಾಶಿಯಲ್ಲಿ ಯಾವಾಗಲೂ ಅನೇಕ

ವಿಧ ಮತಾನುಯಾಯಿಗಳು ವಾಸವಾಡುತ್ತಿದ್ದು ಅವರೊಡನೆ ಅವನ ವಾದಗಳು ಆಗಿಂದಾಗ್ಗೆ ಆಗುತ್ತಿದ್ದು ಅವುಗಳಲ್ಲಿ ಅವನು ಇದಿರಾಳಿಗಳನ್ನು ಯಾವಾಗಲೂ ಸೋಲಿಸುವನು. ಶಿವನೇ ಸರ್ವೋತ್ತಮನೆಂದು ಅವರೊಡನೆ ಅವನು ಪ್ರತಿಪಾದಿಸುವನು. ಇದರಲ್ಲಿ ಅವನು ಬಹುಜನ ಪಂಡಿತರನ್ನು ಗೆದ್ದು 'ಶಿವನಧಿಕವಲ್ಲವೆಂದು ನುಡಿಯುವ ಸಮಯವಾದಿಗಳ ಮೂಗನರಿವ ಶಸ್ತ್ರ' ಎಂಬ ಬಿರುದಿನ ಧ್ವಜವನ್ನು ತನ್ನ ಮನೆಯ ಮೇಲೆ ಕಟ್ಟಿಸಿದನು.

ಇವನ್ನು ಪರವಾದಿಗಳು ನೋಡಿ ಅವರೆಲ್ಲರೂ ಕಾಶಿಯಲ್ಲಿ ಒಂದು ವಿಷ್ಣುವಿನ ದೇವಾಲಯದಲ್ಲಿ ನೆರೆದು, ಮಂಜಣ್ಣನು ಕಟ್ಟಿದ ಧ್ವಜದಲ್ಲಿದ್ದ ಬರಹದ ಬಗ್ಗೆ ಮಾತನ್ನೆತ್ತಿ ಅವರು ಮಂಜಣ್ಣನ ಕೂಡ ವಾದಿಸಿ ಅವನನ್ನು ಸೋಲಿಸಬೇಕೆಂದು ನಿರ್ಧರಿಸಿದರು. ಆ ಮೇಲೆ ಅವರು ಮಂಜಣ್ಣನನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಅವನ ಕೂಡ ವಾದವನ್ನು ಪ್ರಾರಂಭಿಸಿದರು. ಅದರಲ್ಲಿ ಮಂಜಣ್ಣನು ಶಿವನೇ ದೈವವೆಂದು ಪುರಾಣ, ಆಗಮು ಮೊದಲಾದ ಗ್ರಂಥಗಳ ಆಧಾರಗಳನ್ನಿಟ್ಟುಕೊಂಡು ವಾದಿಸಿದನು. ಆಗ ವೈಷ್ಣವರು—ನೀನು ಶಿವನೇ ದೈವವೆಂದು ಅನೇಕ ಆಧಾರಗಳನ್ನು ತೋರಿಸಿಕೊಟ್ಟ ನಮ್ಮ ಮತವನ್ನು ನೀನು ಖಂಡಿಸಿದ್ದೇನೋ ನಿಜ. ಆದರೆ ಇದಕ್ಕೆ ನೀನು ಒಂದು ದೃಷ್ಟಾಂತವನ್ನು ತೋರಿಸಿದಲ್ಲಿ ನಾವು ನಿನ್ನ ಸಿದ್ಧಾಂತವನ್ನು ಒಪ್ಪಿಕೊಳ್ಳುತ್ತೇವೆ ಎಂದೆನ್ನಲು, ಮಂಜಣ್ಣನು—ಹಾಗೆಯೇ ಆಗಲಿ. ಇಲ್ಲಿಯೇ ನಿಮ್ಮ ವಿಷ್ಣುವಿನ ಮೂರುತಿ ಇದೆ. ಆ ವಿಷ್ಣುವು ವಿಶ್ವೇಶ್ವರನನ್ನು ನಮಸ್ಕರಿಸುವಂತೆ ಮಾಡುವೆನು ಎಂದು ಹೇಳಿದನು. ಹಾಗೆಯೇ ಆಗಲೆಂದು ವೈಷ್ಣವರು ಅದಕ್ಕೆ ಒಪ್ಪಿಕೊಂಡರು.

ಆ ಮೇಲೆ ಮಂಜಣ್ಣನು ಮಗ್ಗುಲಲ್ಲಿದ್ದ ಬಿಂದುಮಾಧವ ಮೂರ್ತಿಯನ್ನುದ್ದೇಶಿಸಿ, ಗ್ರಂಥಗಳಲ್ಲಿ—'ನನ್ನ ಕರ್ತನು ಮಹೇಶ್ವರನು' ಎಂದು ನಿನ್ನ ನುಡಿಗಳಿವೆ. ಇವು ನಿಜವಿದ್ದ ಪಕ್ಷದಲ್ಲಿ ನೀನು ವಿಶ್ವನಾಥನಿದ್ದಲ್ಲಿಗೆ ಹೋಗಿ ಅವನಿಗೆ ನಮಸ್ಕರಿಸು ಎಂದೆನ್ನಲು, ಆ ಬಿಂದು ಮಾಧವ ಮೂರ್ತಿಯು ಥಟ್ಟನೆ ಎದ್ದು ವಿಶ್ವನಾಥ ದೇವಾಲಯಕ್ಕೆ ನಡೆದು ಬಂದು ದೇವರಿಗೆ ಕರವನ್ನು ನುಗಿದು ಪೊಡಮಟ್ಟಿತು. ಅದನ್ನು ಕಾಶೀ ಪಟ್ಟಣದ ಜನರು ನೋಡಿ ಆತ್ಯಾಶ್ಚರ್ಯಪಟ್ಟರು.

ಆ ನಾರಾಯಣ ವಿಗ್ರಹವು ವಿಶ್ವೇಶ್ವರನ ದೇವಾಲಯದ ಬಾಗಿಲಲ್ಲಿ ಈಗಲೂ ಇದೆ.

ಮಂಜಣ್ಣನು ಹೀಗೆಯೇ ಮುಂದೆ ವಿಶ್ವೇಶ್ವರನ ವಿಷಯವಾಗಿ ಅತ್ಯಂತ ಭಕ್ತಿಯನ್ನು ತಾಳಿ ಅವನನ್ನು ದಿನಾಲು ಪೂಜಿಸದೆ ಇರಲಿಲ್ಲ. ಅವನಲ್ಲಿದ್ದ ಭಕ್ತಿಯ ಮೂಲಕ ಕಾಶೀ ಪಟ್ಟಣದಲ್ಲಿ ಅವನಿಂದ ಅನೇಕ ಸೊವಾಡಗಳಾಗಹತ್ತಿದವು. ಅವನು ತನ್ನಂಗದ ವಸ್ತುವನ್ನು ಲಿಂಗಕ್ಕರ್ಪಿಸುವೆನೆಂದು ದಿನಾಲು ತನ್ನ ಕುರುಳು ಕೊಯ್ದು ಲಿಂಗಕ್ಕೆ ಚಾರಪ ಬೀಸುವನು ಮತ್ತು ತನ್ನ ಹತ್ತು ಬೆರಳುಗಳನ್ನು ಕಡಿದು ಅವುಗಳಿಂದ ಬೆರಲಿನಾರತಿಯನೆತ್ತುವನು. ಹೀಗೆ ಪರಮಾತ್ಮನನ್ನು ಅವನು ಭಜಿಸಿದ ಬಳಿಕ ಅವುಗಳನ್ನೆಲ್ಲ ಅವನಿಂದ ಪುನಃ ಪಡೆದು ತನ್ನ ಗೃಹಕ್ಕೆ ತಿರುಗಿಬರುವನು. ಇದು ಅವನ ನಿತ್ಯದ ಶಿವಪೂಜೆಯಾಗಿತ್ತು. ಇದರಿಂದ ಜನರು ಅವನನ್ನು 'ಶಿವಲಿಂಕ ಮಂಜಣ್ಣ' ಎಂದರೆ 'ಶಿವನ ಸೇವಕ' ಎಂದು ಕರೆಯುಹತ್ತಿದರು. ಮುಂದೆ ಇದೇ ಹೆಸರಿನಿಂದ ಅವನು ಪ್ರಸಿದ್ಧನಾದನು.

ಈ ಪ್ರಕಾರ ಮಂಜಣ್ಣನು ಕಾಶೀ ಪಟ್ಟಣದಲ್ಲಿರುವಾಗ ಕಲ್ಯಾಣ ಪಟ್ಟಣದಲ್ಲಿ ಬಸವೇಶ್ವರ ಮೊದಲಾದ ಪ್ರಮಥರು ಬಂದು ಶಿವಾನುಭವವನ್ನು ವಿಸ್ತರಿಸುತ್ತಿರುವರೆಂಬುದನ್ನು ಕೇಳಿ ಅವರನ್ನು ಸಂದರ್ಶಿಸಬೇಕೆಂದು ಕಾಶೀ ಪಟ್ಟಣದಿಂದ ಹೊರಟು ಅಲ್ಲಿಗೆ ಬಂದನು. ಶಿವಲೆಂಕ ಮಂಜಣ್ಣನು ಕಾಶಿಯಲ್ಲಿ ಒಬ್ಬ ಶ್ರೇಷ್ಠ ಪಂಡಿತನೆಂದು ಇಷ್ಟರಲ್ಲಿಯೇ ದೇಶದಲ್ಲಿ ಪ್ರಸಿದ್ಧನಾಗಿದ್ದರಿಂದ, ಬಸವೇಶ್ವರನು ಅವನನ್ನು ಕಂಡ ಕೂಡಲೆ, ಅವನಿದಿರಿಗೆ ಹೋಗಿ ಅವನಿಗೆ ಸಾಷ್ಟಾಂಗವೆರಗಿ ಅವನನ್ನು ಅತ್ಯಂತ ಸನ್ಮಾನಿಸಿದನು. ಅಂದಿನಿಂದ ಶಿವಲೆಂಕ ಮಂಜಣ್ಣನು ಶಿವಾನುಭವ ಮಂಟಪದಲ್ಲಿದ್ದುಕೊಂಡು ಒಬ್ಬ ಶ್ರೇಷ್ಠ ಶಿವಾನುಭವಿ ಎಂದೆನಿಸಿಕೊಂಡನು. ಅವನು ಕಡೆಯ ವರೆಗೂ ಕಲ್ಯಾಣ ಪಟ್ಟಣದಲ್ಲಿಯೇ ಉಳಿದು ಅಲ್ಲಿಯೇ ಸಮಾಧಿಸ್ಥನಾದನು.

ಶಿವಲೆಂಕಮಂಜಣ್ಣನು ಒಬ್ಬ ಶ್ರೇಷ್ಠತರಗತಿಯ ಪಂಡಿತನು ಮತ್ತು ಜ್ಞಾನಿಯು. ಅವನು ವಚನಕಾರನಿದ್ದಾನೆ. ಅವನ ೫೩ ವಚನಗಳನ್ನು ನಾವು ಶಿವಾನುಭವ ಗ್ರಂಥಮಾಲೆಯಲ್ಲಿ ಪ್ರಸಿದ್ಧಿಸಿದ್ದೇವೆ.

'ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ' ಎಂಬುದೇ ಅವನ ಮುದ್ರಿಕೆಯಾಗಿದೆ. ಅವನ ವಚನಗಳು ಅತ್ಯಂತ ಗಂಭೀರವಾದವುಗಳು. ಅವು ಬಹುತರ ಎಲ್ಲ ವಚನ ಸಂಗ್ರಹಗಳಲ್ಲಿ ಉದಹರಿಸಲ್ಪಟ್ಟಿವೆ.

ಅವನು ಬಸವೇಶ್ವರನ ಸಮಕಾಲೀನನು. ಅವನ ಹೆಸರು ಗಣ ಸಹಸ್ರದಲ್ಲಿ ಬಂದಿರುತ್ತದೆ. ಅವನ ಕೆಲವು ವಚನಗಳನ್ನು ಮಾತ್ರ ನಾವು ಮಾದಿರಿಗಾಗಿ ಇಲ್ಲಿ ಉದಹರಿಸಿದ್ದೇವೆ.

ವಚನಗಳು.

ನಮಗೆ ದೊರೆದ ಅವನ ವಚನಗಳಲ್ಲಿ ಶಿವ ವಿಷ್ಣು ಇವರ ನಡುವಿನ ಕಲಹಗಳ ಉಲ್ಲೇಖಗಳು ಏನೂ ಇರುವದಿಲ್ಲ. ಆದರೆ ಲಿಂಗದ ಉಚ್ಚ ವಿಚಾರಗಳು ಅವುಗಳಲ್ಲಿ ಇವೆ. ವಾಚಕರು ಕೆಳಗಿನ ವಚನಗಳನ್ನು ನೋಡಬೇಕು.

(೧) ಆದಿಶಕ್ತಿರೂಪಾಗಿ ಅನಾದಿಶಕ್ತಿ ಪ್ರಾಣವಾಗಿ ಚಿದಾತ್ಮನ ಬೆಳಗು ಅರಿವಾಗಿ ಎನ್ನ ಹೃತ್ಕಮಲ ಮಧ್ಯದಲ್ಲಿ ತೊಳಗಿ ಬೆಳಗಿದಿರಯ್ಯ ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವೇ.

(೨) ಎನ್ನ ಕಾಯವೇ ದೇಗುಲವಾಗಿ ಕುರುಹಿಟ್ಟು ಕೊಟ್ಟ ಕುರುಹೇ ಪ್ರಾಣಲಿಂಗವಾಗಿ, ನೋಡುವ ಕಣ್ಣೇ ಪೂಜಿಸುವ ಪುಷ್ಪವಾಗಿ, ಆನಂದಾಶ್ರುಗಳೇ ಸಕಲ ಭೋಗವಾಗಿ, ಅಷ್ಟವಿಧಾರ್ಚನೆ ಷೋಡಶೋಪಚಾರವರತುದೇ ಅಡ್ಡವಣಿಗೆ ಪಂಯಾಣವಾಗಿ, ಪರಿಣಾಮವೇ ನೈವೇದ್ಯವಾಗಿ, ಅಖಂಡ ಭಕ್ತಿರತಿಯೇ ತಾಂಬೂಲವಾಗಿ, ಪೂಜಿಸುತ್ತಿರ್ದೆನಯ್ಯ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೇ ಎನ್ನ ಪ್ರಾಣ ಪೂಜೆ ನಿಮಗೆ.

ಅರ್ಪಣ ಮತ್ತು ಪ್ರಸಾದ ಇವುಗಳ ವಿಷಯವಾಗಿಯೂ ಅವನ ವಚನಗಳಿವೆ. ವಚನಕಾರರ ವಚನಗಳಲ್ಲಿ ಕಾಣಬರುವ ಉಚ್ಚ ತತ್ವಗಳೇ ಅವುಗಳಲ್ಲಿ ಇವೆ.

(೩) ರಸವನರಿವುದಕ್ಕೆ ಜಿಹ್ವೆಯಾಗಿ ಬಂದು ಗಂಧವನರಿವುದಕ್ಕೆ ನಾಸಿಕವಾಗಿ ಬಂದು ರೂಪನರಿವುದಕ್ಕೆ ನೇತ್ರವಾಗಿ ಬಂದು ಶಬ್ದವನರಿವುದಕ್ಕೆ ಶ್ರೋತ್ರವಾಗಿ ಬಂದು ಸ್ಪರ್ಶನವನರಿವುದಕ್ಕೆ ತ್ವಕ್ಕಾಗಿ ಬಂದು

ಇಂತೆನ್ನ ಘಟದ ಮಧ್ಯದಲ್ಲಿ ನಿಂದು ಪಂಚವರ್ತ್ರನಾದೆಯಲ್ಲಾ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೇ.

(೪) ಕಂಗಳ ಮುಂದೆ ಕಂಡುದೆಲ್ಲವೂ ಲಿಂಗಾರ್ಪಿತವೇ? ಫಲಾದಿಗಳಲ್ಲಿ ಪಾಕವಾದ ಕಡ್ಡಿ ತೊಟ್ಟು ಬಿತ್ತು ತುಷ ಪಾಷಾಣ ಬೋನದೊಳಗಾದ ಸಮೂಹವೆಲ್ಲವೂ ಲಿಂಗ ನೈವೇದ್ಯ ಸಮರ್ಪಣವೇ? ಸಾರೋಪ ದ್ರವ್ಯಂಗಳಲ್ಲಿ ಆರೋಚಕವ ಕಳೆದು ಮನದಲ್ಲಿ ನೇಮಿಸಿ ಇಟ್ಟ ಲಿಂಗದಿಷ್ಟ ಪದಾರ್ಥವ ಕೊಡುವಲ್ಲಿ ಪ್ರಾಣಲಿಂಗಕ್ಕೆ ನಾನಾ ರಸಂಗಳ ಸಾಗಿಸುವಲ್ಲಿ ಅರ್ಪಿತ ಅನರ್ಪಿತವೆಂಬುಭಯದ ಗೊತ್ತು ಮುಟ್ಟು ಅರ್ಪಿಸಬಲ್ಲಡೆ ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ಆರ್ಪಿತವಾಯಿತ್ತು.

ಶಿವಲಿಂಕ ಮುಂಚಣ್ಣನಿಗೆ ಶಿವಲಿಂಕ ಅಂದರೆ 'ಶಿವನ ಸೇವಕ' ಎಂಬ ಹೆಸರು ನಿಜವಾಗಿ ಇದ್ದದ್ದು ಕೆಳಗಿನ ವಚನದಿಂದ ಕಂಡು ಬರುತ್ತದೆ.

(೫) ಹೀರಕವನೊಪ್ಪಿಸಿದವಂಗೆ ಸುಂಕವ ಬೇಡಲೇತಕ್ಕೆ? ಮೊದಲು ತ್ರಿವಿಧವ ನಿನಗೆಂದು ಕೊಟ್ಟ ಮತ್ತೆ ನೀ ಬೇಡಿದ ಮೇಲೆಡೆ ನೀನೆನಗಿತ್ತ ಮೇಲೆ ಎನ್ನ ನೋಡುವ ಬಿಡು ಮುಡಿಯಾವುದು ನಿನಗೆ? ಶಿವಲೆಂಕ ಹಾಕಿದ ಮುಂಡಿಗೆಯ ನೀವೆತ್ತಲಮ್ಮದೆ ಎನ್ನ ಕಯ್ಯೊಳಗಾದೆಯಲ್ಲ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೇ.

ಕಾಯಕದ ವಿಷಯವಾಗಿ ಅವನು ಹೇಳುವದೇನೆಂದರೆ—

(೬) ಕಾಯಕವೆಂದು ಕಾಯವ ಬಳಲಿಸದೆ ತನು ಕರಗದೆ ಮನ ನೋಯದೆ ಬೇಡಿ ಕಾಡಿ ಮಾಡುವುದು ದಾಸೋಹವೇ? ಅವ ಕಾಯಕವಾದಡೂ ಪ್ರಾಣವೇ ಕಡೆಯಾಗಿ ದ್ರವ್ಯ ಕಡೆಗಾಗಿ ಚಿತ್ತಶುದ್ಧದಲ್ಲಿ ಬಂದುದಕ್ಕೆ ಸಧಿ ಗಂಡು ದೇಹಿಗಳಿಗೆ ಒಂದೇ ಪ್ರಮಾಣದಲ್ಲಿ ಸರಿ ಗಂಡುದು ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ತೃಪ್ತಿ.

ಈತನ ವಚನಗಳಲ್ಲಿ ಶಿವಾನುಭವದ ಉಚ್ಚ ತತ್ವಗಳು ತುಂಬಿ ಕೊಂಡಿರುತ್ತವೆ. ಈತನು ಉತ್ತರ ಹಿಂದುಸ್ತಾನದ ಒಬ್ಬ ಶ್ರೇಷ್ಠತರ ಗತಿಯ ಪಂಡಿತನೆಂಬುದನ್ನು ನಾವು ಇಲ್ಲಿ ಲಕ್ಷಿಸುವದು ಅವಶ್ಯವಿದೆ.

ಕದಿರಿ ರೆಮ್ಮಯ್ಯ.

ಮದ್ರಾಸ ಇಲಾಖೆಯಲ್ಲಿರುವ ಹಿಂದೂಪುರ ಗ್ರಾಮದಿಂದ ಈಶಾನ್ಯಕ್ಕೆ ಸುಮಾರು ೩೦—೪೦ ಮೈಲುಗಳ ಮೇಲೆ ಕದಿರಿ ಎಂಬ ಗ್ರಾಮವಿದೆ. ಇದು ಈಗ ಕಡಪಾ ಜಿಲ್ಲೆಯಲ್ಲಿ ಒಂದು ತಾಲೂಕು ಸ್ಥಳವಾಗಿದೆ. ಇಲ್ಲಿ ರೆಮ್ಮಯ್ಯನೆಂಬ ಶಿವಶರಣನು ಪೂರ್ವ ಕಾಲದಲ್ಲಿ ವಾಸಮಾಡುತ್ತಿದ್ದನು. ಅವನು ಜಂಗಮ ಭಕ್ತನು ಮತ್ತು ಕೇವಲ ಲಿಂಗಾನುಭವಿಯು. ಅವನು ಪಾಲ್ಕುರಿಕೆಯಲ್ಲಿ ಪ್ರಸಿದ್ಧನಾಗಿದ್ದ ಏಮಯ್ಯನ ಶಿಷ್ಯತ್ವವನ್ನು ವಹಿಸಿ ಉಜ್ವಲವಾದ ವರ್ತನೆಯುಳ್ಳವನಾಗಿ 'ಕದಿರ ರೆಮ್ಮಯ್ಯ'ನೆಂದು ನಾಡಿನಲ್ಲಿ ಪ್ರಸಿದ್ಧನಾಗಿದ್ದನು.

ಹೀಗಿರಲು ರೆಮ್ಮಯ್ಯನು ತನ್ನ ಗುರುವು ತನ್ನ ಗೃಹಕ್ಕೆ ಬಹಳ ದಿವಸಗಳಿಂದಲೂ ಬಾರದೆ ಇರಲು ಅವನನ್ನು ಕಾಣಬೇಕೆಂದು ತಾನೇ ಅವನ ಗ್ರಾಮಕ್ಕೆ ಹೊರಟನು. ದಾರಿಯಿಂದ ಹೋಗುವಾಗ ಶಿವಾರ್ಚನೆಗೆ ವೇಳೆಯಾಗಲು, ತನ್ನ ನಿತ್ಯದ ಕ್ರಿಯೆಗಳು ತಪ್ಪಬಾರದೆಂದು ಸಮೀಪದ ಒಂದು ಗ್ರಾಮಕ್ಕೆ ಬಂದು ಅಲ್ಲಿ ಒಬ್ಬ ಭಕ್ತನ ಮನೆಯಲ್ಲಿ ನಿಂತುಕೊಂಡನು. ಆ ಭಕ್ತನ ಹೆಸರು, ಸೋಮಯ್ಯ ಅಥವಾ ಸೋಮನಾಥನು. ಅವನ ಹೆಂಡತಿಯ ಹೆಸರು ಅಣ್ಣಲದೇವಿಯು. ಅವರಿಗೆ ಮಲ್ಲಿನಾಥನೆಂಬ ಮಗನಿದ್ದನು. ಈ ಮೂವರು ಕೇವಲ ಜಂಗಮ ಭಕ್ತರು, ಮತ್ತು ಶಿವಭಕ್ತಿಯುಳ್ಳವರು. ಅವರು ನಾಡಿನಲ್ಲಿ ಅತ್ಯಂತ ಪ್ರಸಿದ್ಧನಾದ ಕದಿರಿ ರೆಮ್ಮಯ್ಯನು ತಮ್ಮ ಗೃಹಕ್ಕೆ ಬಂದನೆಂದು ಅತ್ಯಂತ ಸಂತೋಷವನ್ನು ತಾಳಿದವರಾಗಿ ಅವರು ಅವನನ್ನು ಬಹಳ ಸತ್ಕರಿಸಿದರು. ರೆಮ್ಮಯ್ಯನು ತನ್ನ ಪೂಜಾವಿಧಿಗಳನ್ನು ಅವರಲ್ಲಿ ತೀರಿಸಿಕೊಂಡು ತನ್ನ ಗುರುವಿನ ಗ್ರಾಮಕ್ಕೆ ಹೊರಟು ಹೋದನು.

ಅವನು ಹೋದ ದಿವಸ ಸೋಮಯ್ಯನ ಹೆಂಡತಿ ಅಣ್ಣಲದೇವಿಯು ಮಗನನ್ನು ಕರೆದುಕೊಂಡು ಬೆರಣಿ (ಕೊಳ್ಳು) ಯನ್ನು ಆಯಬೇಕೆಂದು ಅಡವಿಗೆ ಹೋದಳು. ಅಡವಿಯಲ್ಲಿ ಅವರು ತಿರುಗಾಡುತ್ತಿರುವಾಗ್ಗೆ ಒಂದು ಘಟಸರ್ಪವು ಅಕಸ್ಮಾತ್ತಾಗಿ ಅವಳ ಮಗನನ್ನು ಕಚ್ಚಿತು. ಬಾಲಕನಿಗೆ ವಿಷವೇರಿ ಅವನು ಅಲ್ಲಿಯೇ ಸತ್ತು ಬಿದ್ದನು.

ಆಗ ತಾಯಿಯು ಮಗನಿಗೆ ಶಿವನ ನಿರೋಪವಾಯಿತೆಂದು ಭಾವಿಸಿ ಸಂತೋಷಿಸಿದಳು. ಅವಳು ಎಷ್ಟು ಮಾತ್ರವೂ ದುಃಖಿಸಲಿಲ್ಲ. ಬಾಯಿ ಬಿಡಲಿಲ್ಲ. ಅಳಲಿಲ್ಲ. ಆಕಟಕಟಾ! ಜನ್ಮಿಗನು ಮಡಿದನೆಂದು ಗೋಳಿಡಲಿಲ್ಲ. ಅವಳು ತಾನು ಆರಿಸಿಕೊಂಡಿದ್ದ ಬೆರಣಿಯನ್ನು ತಲೆಯ ಮೇಲೆ ಹೊತ್ತುಕೊಂಡು ಸತ್ತ ಮಗನನ್ನು ಎತ್ತಿಕೊಂಡು ಮನೆಗೆ ಬಂದಳು. ಅವಳ ಪತಿಯಾದರೂ ಶಿವಾನುಭವಿಯು. ಅವನಾದರೂ ದುಃಖಿಸಲಿಲ್ಲ. ಆಗ ಉಭಯತರು ಕೆಲಬಲದ ಜನರನ್ನು ಕರೆಯಿಸಲಿಲ್ಲ. ರೋದಿಸಲಿಲ್ಲ. ಎಷ್ಟು ಮಾತ್ರವೂ ಕಳವಳಿಸಿ ಕಂಗೆಡಲಿಲ್ಲ. ಕಂಬನಿಗಳನ್ನ ಸಹ ಇಡಲಿಲ್ಲ. ಅವರು ತಮ್ಮ ಮಗನು ಮಹಾನುಭಾವರಾದ ಪ್ರಮಥರ ಪಾದಕ್ಕೆ ಸಲ್ಲಿದನೆಂದು ಆನಂದಿಸಿದರು. ಆಗ ಅವರು ಮನೆಯಲ್ಲಿದ್ದ ಒಂದು ಉನ್ನತವಾದ ವೇದಿಕೆಯನ್ನು ಅಗಿದು, ಸತ್ತ ಮಗನಿಗೆ ವಿಭೂತಿಯನ್ನು ಹೂಸಿ ಬಿಲ್ವಪತ್ರಿಗಳನ್ನು ಅವನ ದೇಹದ ಮೇಲೆ ಎರಚಿ ಅಲ್ಲಿಯೇ ಈ ಹೂಳಿ ಸಮಾಧಿಯನ್ನು ಮಾಡಿ ನಿಶ್ಚಿಂತೆಯಲ್ಲಿದ್ದರು.

ಇತ್ತ ಕದಿರಿರೆಮ್ಮಯ್ಯನು ತನ್ನ ಗುರುವಿನ ಮನೆಗೆ ಹೋಗಿ ಅವನ ದರ್ಶನಾಶೀರ್ವಾದಗಳನ್ನು ಪಡೆದು ಏಳು ದಿನಗಳ ಮೇಲೆ ತಿರುಗಿ ತನ್ನ ಗ್ರಾಮಕ್ಕೆ ಬರುವಾಗ ಅಣ್ಣಲದೇವಿಯ ಗ್ರಾಮಕ್ಕೆಯೇ ಬಂದು ಅವಳ ಮನೆಯಲ್ಲಿ ಉಳಿದನು. ಸತಿಪತಿಗಳೀರ್ವರು ಎಂದಿನಂತೆಯೇ ಅವನನ್ನು ಸತ್ಕರಿಸಿದರು. ಅವನು ಲಿಂಗಪೂಜಾಕಾರ್ಯಗಳನ್ನು ಮುಗಿಸುತ್ತಿರುವಾಗ ರೆಮ್ಮಯ್ಯನು ಮನೆಯಲ್ಲಿ ಬಾಲಕನನ್ನು ಎಲ್ಲಿಯೂ ಕಾಣದೆ ತಾಯಿತಂದೆಗಳಿಗೆ — ನಿಮ್ಮ ಮಗನು ಇಲ್ಲಿ ಕಾಣುವದಿಲ್ಲ. ಅವನೆಲ್ಲಿ? ಅವನನ್ನು ಇಲ್ಲಿಗೇಕೆ ಕರೆಯದೆ ಇದ್ದೀರಿ? ಎಂದು ಕೇಳಿದನು. ಆದರೆ ಅವರು ಸುಮ್ಮನೆ ಇರಲು ರೆಮ್ಮಯ್ಯನಿಗೆ ಸಂಶಯ ಬಂದು ಪುನಃ ಪುನಃ ಅವರನ್ನು ಕೇಳಹತ್ತಿದನು. ಆಗ ಅಣ್ಣಲದೇವಿಯು— ತನಯನನ್ನು ಕರೆಯಲಿಕ್ಕೆ ನಾನು ಜಂಗಳೆದೇವಿಯೇ? ತನಯನನ್ನು ಕರೆಯನೆ ಇದ್ದ ಸಜ್ಜನೆಯಾದ ನಿಂಬಿಯಕ್ಕನು ನಾನಾಗಿದ್ದೇನೆ. ನಾನು ಅವನನ್ನು ಕರೆಯುವದಿಲ್ಲ. ಅವನು ನಿಮ್ಮ ಪಾದದ ಸಮೀಪದಲ್ಲಿಯೇ ಇದ್ದಾನೆ, ಎಂದೆನ್ನಲು ಕದಿರ ರೆಮ್ಮಯ್ಯನು ಬಾಲಕನಿಗೆ ಏನೋ ಒಂದು ಉತ್ಪಾತವಾಗಿದೆ, ಅವನು ತಿರಿಕೊಂಡಿದ್ದರಿಂದ

ಅವನನ್ನು ಇಲ್ಲಿಯೇ ಹೂಳಿದ್ದಾರೆ, ಎಂಬ ತಿಳಿವಳಿಕೆಯು ಅವನಿ ಗಾಯಿತು.

ಆಗ ಅಲ್ಲಿದ್ದ ವೇದಿಕೆಯನ್ನು ಅಗಿಸಲು ಒಳಗೆ ಸುತನ ದೇಹ ವಿದ್ದು ಅದರ ಮೇಲೆ ಛಿನ್ನ ಬಿಲ್ವಪತ್ರೆಗಳು ಹರಿವಿದ್ದವು. ಅವುಗ ಳನ್ನು ಓರೆ ಮಾಡಿ ನೋಡಲು ಬಾಲಕನ ದೇಹವು ಏಳು ದಿವಸಗ ಳಾದರೂ ಕೂಡ ಅಚ್ಚಳಿಯದೆ ಹಾಗೆಯೇ ಇತ್ತು. ಇದು ಮಾತಾ ಪಿತರ ಮತ್ತು ಬಾಲಕನ ಶಿವಾನುಭವದ ಮಹಿಮೆ ಎಂದು ತಿಳಿದು ಶಿವಶರಣನಾದ ರೆವ್ಮಯ್ಯನು ಬಾಲಕನಿಗೆ— ಏಳೇಳೆಂದು ಕರೆಯಲು ಅವನಿಗೆ ಎಚ್ಚರಾಯಿತು. ಅವನು ಸಮಾಧಿಯ ಹೊತಗೆ ಬಂದನು. ಆಗ ತಾಯಿತಂದೆಗಳೂ ಬಾಲಕನೂ ರೆವ್ಮಯ್ಯನಿಗೆ ಶರಣಾರ್ಥ ಎಂದು ಸಾಷ್ಟಾಂಗವೆರಗಿದರು.

ಗ್ರಾಮದಲ್ಲಿಯ ಜನರು ಅಲ್ಲಿ ನೆರೆದು . ಈ ಘಟನೆಯು ಅಗಾಧ ವಾದುದೆಂದು ಕದಿರಿಯ ರೆವ್ಮಯ್ಯನನ್ನೂ ಸೋಮನಾಥ ಅಣ್ಣಲದೇವಿ ಯರನ್ನೂ ಅತ್ಯಂತವಾಗಿ ಸ್ತುತಿಸುವವರಾದರು. ಈ ಮೂವರೂ ಶಿವಶರ ಣರ ಮಾಲಿಕೆಯಲ್ಲಿ ಗಣಿಸಲ್ಪಟ್ಟಿದ್ದಾರೆ. ಶಿವಾನುಭವಿಗಳು ಮರಣ ಬಂದಿತೆಂದು ಅದಕ್ಕೆ ಅಂಜಬಾರದು. ಅವರಿಗೆ ಮರಣವೆಂಬುದಿಲ್ಲ. ಅವರು ಇಹಲೋಕದಲ್ಲಿ ಲಿಂಗದ ನಡೆನುಡಿಯಂತೆ ನಡೆಯುವವರು. ಲಿಂಗಾನು ಭವಿಗಳಾಗಿ ಲಿಂಗದಲ್ಲಿ ಲಯವಾಗಿ ಹೋಗುತ್ತಾರೆ. ಆದ್ದರಿಂದ ಅವ ರನ್ನು ಹೂಳಿದ ಸ್ಥಳವು ಪವಿತ್ರವಾದುದು. ಅಂಥವರಿಗೋಸ್ಕರ ಯಾರೂ ದುಃಖಿಸಕೂಡದು. ಹೀಗೆ ಶಿವಾನುಭವದ ನಡೆ ಇದ್ದು ಅದರಂತೆ ಈ ಮೂವರೂ ಶಿವಶರಣರು ನಡೆದು ಪ್ರಸಿದ್ಧಿಯನ್ನು ಹೊಂದಿದ್ದಾರೆ.

ಕದಿರಿ ರೆವ್ಮಯ್ಯನ ಹೆಸರು ಗಣಸಹಸ್ರದಲ್ಲಿ ಬಂದಿರುತ್ತದೆ. ಈತನು ವೇಮಯ್ಯನ ಶಿಷ್ಯನಾದ್ದರಿಂದ ಅವನು ಬಸವನಕಿಂತಲೂ ಸ್ವಲ್ಪ ಕಾಲ ಈಚಿನವನಾಗುತ್ತಾನೆ.

ಇವನು ಇದ್ದ ಕದಿರಿ ಗ್ರಾಮವು ಈಗ ಆಂಧ್ರ ದೇಶದಲ್ಲಿರು ವದರಿಂದ ಶಿವಶರಣರ ಪ್ರಭಾವವು ಕರ್ನಾಟಕದಿಂದ ಪ್ರವಹಿಸುತ್ತ ಸುತ್ತಲಿನ ಆಂಧ್ರ ಮತ್ತು ದ್ರಾವಿಡ ದೇಶಗಳಲ್ಲಿ ಹರಡುತ್ತ ಹೋದದ್ದು ತಿಳಿದುಬರುತ್ತದೆ.

ಶಿವಾನುಭವ

ವರ್ಷ ೨೦ | ಅಗಷ್ಟ ೧೯೪೬ | ಸಂಚಿಕೆ ೧೦

ವೀರಶೈವರ ಶಿವಯೋಗ.

ಹಿಂದೂ ಧರ್ಮದಲ್ಲಿ ಅನೇಕ ಮತಗಳು ಉತ್ಪನ್ನವಾಗಿರುತ್ತವೆ. ಅವುಗಳಲ್ಲಿ ಅನೇಕ ಧರ್ಮಗ್ರಂಥಗಳೂ ಸಿದ್ಧಾಂತಗಳೂ ತತ್ವಾರ್ಥಗಳೂ ಉಂಟಾಗಿವೆ. ಈ ಸ್ಥಿತಿಯುಂಟಾಗಿರುವದರಿಂದ ಅನೇಕ ಸಮಾಜಗಳೂ ಪಂಥಗಳೂ ಪಂಗಡಗಳೂ ಅದರಲ್ಲಿ ಉತ್ಪನ್ನವಾಗಿ ಅವು ಅನೇಕ ಬಗೆಯಾಗಿ ಹೋರಾಡುತ್ತಿರುವದನ್ನೂ ನಾವು ನೋಡುತ್ತೇವೆ. ಇವುಗಳಲ್ಲಿರುವ ಈ ವ್ಯತ್ಯಾಸಗಳನ್ನು ಸರಿಪಡಿಸುವ ಬಗ್ಗೆ ವ್ಯವಸ್ಥಿತ ಪ್ರಯತ್ನಗಳು ಯಾವ ಸಮಾಜದಲ್ಲಿಯೂ ಯಾವಾಗಲೂ ಆಗಿರುವದಿಲ್ಲ. ಆದರೆ ವೀರಶೈವ ಧರ್ಮವು ಮಾತ್ರ ಇದಕ್ಕೆ ಅಪವಾದವಾಗಿದೆಂದು ಹೇಳಬಹುದು. ಅದು ಈ ಎಲ್ಲ ಧರ್ಮಗಳಲ್ಲಿರುವ ಅತ್ಯುಚ್ಚ ತತ್ವಗಳನ್ನು ಒತ್ತಟ್ಟಿಗೆ ಸಂಗ್ರಹಿಸಿ ಅವುಗಳನ್ನು ತನ್ನ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯಲ್ಲಿ ಹೆಣೆದಿರುವದು. ಅದರ ಷಟ್‌ಸ್ಥಲಶಾಸ್ತ್ರ, ಅಷ್ಟಾವರಣ ಪಂಚಾಚಾರಗಳು, ಸಪ್ತಾಚಾರಗಳು, ಏಕೋತ್ತರಗಳು, ಅದರಂತೆ ಶಿವಯೋಗದ ಆಚರಣೆಗಳು, ಇವುಗಳಲ್ಲೆಲ್ಲ ಈ ಸಂಗತಿಯು ಕಂಡು ಬರುತ್ತದೆ. ಇವುಗಳಲ್ಲಿ ಆಯಾ ಧರ್ಮಗಳಲ್ಲಿರುವ ಉಚ್ಚ ತತ್ವಗಳನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಆದ್ದರಿಂದ ವೀರಶೈವವು ಶಿವಮತದ ಸಾರವೆಂದು ಅದರಲ್ಲಿಯೂ ಅನೇಕ ಗ್ರಂಥಕಾರರು ಹೇಳುತ್ತ ಬಂದಿದ್ದು ಯಥಾರ್ಥವಾಗಿದೆ. ಪ್ರಸ್ತುತ ಲೇಖದಲ್ಲಿ ಈ ಎಲ್ಲ ಸಂಗತಿಯನ್ನು ನಾವು ವಿಸ್ತೃತವಾಗಿ ವಿವೇಚಿಸದೆ ಹಿಂದೂಧರ್ಮ

ದಲ್ಲಿರುವ ಯೋಗದ ಮುಖ್ಯ ತತ್ವಗಳು ವೀರಶೈವರ ಶಿವಯೋಗದಲ್ಲಿ ಹೇಗೆ ಹೆಣೆದಿರಲ್ಪಟ್ಟಿರುತ್ತವೆಂಬುದನ್ನು ಮಾತ್ರ ಇಲ್ಲಿ ದಿಗ್ದರ್ಶನಿಸಿ ಮಾಡುತ್ತೇವೆ.

ಯೋಗವು ಮಂತ್ರಯೋಗ, ಲಯಯೋಗ, ಹಠಯೋಗ ಮತ್ತು ರಾಜಯೋಗ ಹೀಗೆ ನಾಲ್ಕು ವಿಧವಾದುದೆಂದು ಸಾಮಾನ್ಯವಾಗಿ ಹೇಳಲ್ಪಡುವದುಂಟು. ಇವುಗಳಲ್ಲಿ ಮಂತ್ರಯೋಗದ ವಿಚಾರಗಳು ಅಷ್ಟಾವರಣಗಳಲ್ಲಿ ಒಂದು ಆವರಣವಾದ 'ಮಂತ್ರ' ಇದರಲ್ಲಿ ಬಹು ವಿಸ್ತೃತವಾಗಿ ಹೇಳಲ್ಪಟ್ಟಿರುತ್ತವೆ. ಮಂತ್ರವನ್ನು ಕುರಿತು ವೀರಶೈವರು ಬಹು ಆಳವಾದ ವಿಚಾರಗಳನ್ನು ಮಾಡಿದ್ದಾರೆ. ಇದು ಅವರ ಪಂಚಾಕ್ಷರೀ 'ಮಂತ್ರ'ದ ವಿವೇಚನೆಯಲ್ಲಿ ಕಂಡುಬರುತ್ತದೆ. ಲಯಯೋಗವು ವೀರಶೈವರು ದಿನಾಲು ಆಚರಿಸುವ ಶಿವಪೂಜಾಕ್ರಮದಲ್ಲಿ ಸೇರಿಸಲ್ಪಟ್ಟಿರುತ್ತದೆ. ಈ ಆಚರಣೆಯು ಪ್ರಕಾರ ಲಿಂಗಪೂಜೆ ಮಾಡುವವನು ಲಿಂಗದ ಧ್ಯಾನದಲ್ಲಿ ಮಗ್ನನಾಗಿ ಇಷ್ಟ ಪ್ರಾಣ ಭಾವಗಳಲ್ಲಿ ಲೀನನಾಗಿರುವದೇ ಅವನ ಕಾರ್ಯವಾಗಿರುತ್ತದೆ. ಇದು ಷಟ್‌ಸ್ಥಲದಲ್ಲಿ ವಿಸ್ತಾರವಾಗಿ ವಿವೇಚಿಸಲ್ಪಟ್ಟಿದೆ. ಹಠಯೋಗದ ತತ್ವಗಳೂ ಕೂಡ ಈ ಲಿಂಗಧ್ಯಾನದಲ್ಲಿ ಬರುತ್ತವೆ. ಅನೇಕ ತಂದ ಆಸನಗಳನ್ನು ಹಾಕಿ ಲಿಂಗವನ್ನು ಧ್ಯಾನಿಸುತ್ತ ಷಟ್‌ಚಕ್ರಗಳನ್ನು ಪ್ರೇರೇಪಿಸುವದು ಹಠಯೋಗದ ಮುಖ್ಯ ಉದ್ದೇಶವಾಗಿದೆ. ಇದೇ ಕಾರ್ಯವನ್ನು ವೀರಶೈವರು ತಮ್ಮ ಲಿಂಗಪೂಜೆಯ ಕಾರ್ಯಗಳಲ್ಲಿ ಮಾಡುತ್ತಾರೆ. ಆದರೆ ಈ ಕಾರ್ಯಗಳನ್ನು ಅವರು ಮಾಡುವಲ್ಲಿ ಅವರು ತಮ್ಮ ಶಕ್ತಿಗಳನ್ನು ಲಿಂಗಮುಖ ಮಾಡಬೇಕೆಂಬುದೊಂದು ಮಹತ್ವದ ತತ್ವವನ್ನು ಇಟ್ಟುಕೊಂಡಿದ್ದಾರೆ. ಇದು ಇತರ ಯೋಗಗಳಲ್ಲಿ ಇರುವದಿಲ್ಲ. ರಾಜಯೋಗದ ತತ್ವಗಳು ಶಿವಯೋಗದ ತತ್ವಗಳಿಂದ ಭಿನ್ನವಾಗಿರುವದಿಲ್ಲ. ಆದರೆ ರಾಜಯೋಗದಲ್ಲಿ ಲಿಂಗಸಂಬಂಧದ ಆಚರಣೆಗಳಿರುವದಿಲ್ಲ. ಹೀಗೆ ಹಿಂದೂ ಜನರ ಯೋಗಾಭ್ಯಾಸದ ತತ್ವಗಳನ್ನು ವೀರಶೈವ ಷಟ್‌ಸ್ಥಲವಿದರು ಅಷ್ಟಾವರಣ ಏಕೋತ್ತರ ಮೊದಲಾದವುಗಳಲ್ಲಿರುವ ವಿಶಿಷ್ಟ ಆಚರಣೆಗಳಲ್ಲಿ ಸೇರಿಸಿದ್ದಾರೆ.

ಯೋಗಕ್ಕೆ ಎಂಟು ಅಂಗಗಳಿದ್ದು ಅವು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬಿವು

ಇರುತ್ತವೆ. ಇವೇ ಯೋಗಕ್ಕೆ ತಳಹದಿಯಾಗಿರುತ್ತವೆ. ಆದ್ದರಿಂದ ಹಿಂದೂ ಧರ್ಮಶಾಸ್ತ್ರಜ್ಞರು ಯೋಗಕ್ಕೆ ಅಷ್ಟಾಂಗಯೋಗ ಎಂಬ ಹೆಸರನ್ನು ಕೊಟ್ಟಿದ್ದಾರೆ. ಯೋಗಾಭ್ಯಾಸ ಮಾಡುವವರೆಲ್ಲರೂ ಇವುಗಳನ್ನು ಪಾಲಿಸಬೇಕೆಂಬ ನಿರ್ಬಂಧವಿದೆ. ಆದರೆ ವೀರಶೈವ ತತ್ವಜ್ಞಾನಿಗಳು ಇವೆಲ್ಲವುಗಳನ್ನು ತಮ್ಮ ಷಟ್‌ಸ್ಥಲದಲ್ಲಿ ಸೇರ್ಪಡೆಮಾಡಿದ್ದಾರೆ. ಷಟ್‌ಸ್ಥಲದಲ್ಲಿ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂದು ಆರು ವಿಭಾಗಗಳಿವೆ. ಈ ಪ್ರತಿಯೊಂದು ಸ್ಥಲಕ್ಕೆ ಕೆಲವು ವಿಶಿಷ್ಟ ಆಚರಣೆಗಳಿರುತ್ತವೆ. ಈ ಆಚರಣೆಗಳಲ್ಲಿ ಮೇಲಿನ ಕಾಣಿಸಿದ ಯೋಗದ ಎಂಟೂ ಅಂಗಗಳು ಸಮಾವೇಶವಾಗಿರುವದು ಕಂಡುಬರುತ್ತದೆ. ಆದ್ದರಿಂದ ಷಟ್‌ಸ್ಥಲಾಚರಣೆಯುಳ್ಳವನು ಒಬ್ಬ ಯೋಗಿಯು ಅಥವಾ ಶಿವಯೋಗಿಯು ಎಂದು ವೀರಶೈವ ಗ್ರಂಥಗಳಲ್ಲಿ ಕರೆಯಲ್ಪಟ್ಟಿದ್ದು ಕಂಡುಬರುತ್ತದೆ.

ಷಟ್‌ಸ್ಥಲಗಳಲ್ಲಿ ಭಕ್ತ ಮತ್ತು ಮಾಹೇಶ್ವರಸ್ಥಲಗಳಲ್ಲಿ ನೈತಿಕ ವಿಷಯಗಳು ಮುಖ್ಯವಾಗಿ ಸೇರ್ಪಡೆಯಾಗಿರುತ್ತವೆ. ನೈತಿಕಾಚಾರವು ಷಟ್‌ಸ್ಥಲಕ್ಕೆ ತಳಹದಿಯಾಗಿದೆ. ಆದ್ದರಿಂದ ಭಕ್ತ ಮಾಹೇಶ್ವರಸ್ಥಲಗಳಲ್ಲಿ ನೈತಿಕ ವಿಷಯಗಳು ಯಾವಾಗಲೂ ವಿಸ್ತಾರವಾಗಿ ವಿವೇಚಿಸಲ್ಪಡುತ್ತವೆ. ಯೋಗದ ಎಂಟು ಅಂಗಗಳಲ್ಲಿ ಮೊದಲಿನ ಎರಡು ಅಂಗಗಳು ಯಮ ನಿಯಮ ಎಂಬಿವು ಇದ್ದು ಇವು ನೈತಿಕ ವರ್ತನೆಗೆ ಸಂಬಂಧಿಸಿರುತ್ತವೆ. ಸರಿಯಾದ ವರ್ತನೆಯೇ 'ಯಮ' ಎಂದು ಹೇಳಲ್ಪಡುತ್ತಿದೆ. ಈ ವರ್ತನೆಯು ದೃಢವಾಗಿ ಉಳಿದಲ್ಲಿ ಇದು 'ನಿಯಮ'ವೆಂದು ಕರೆಯಲ್ಪಡುತ್ತಿದೆ. ಷಟ್‌ಸ್ಥಲಗಳಲ್ಲಿ ನೈತಿಕ ವರ್ತನೆಯು ಭಕ್ತನಿಗೆ ಮುಖ್ಯವಾದುದು. ಈ ವರ್ತನೆಯು ಅವನಲ್ಲಿ ದೃಢವಾಗಿ ಉಳಿದರೆ ಅದು ಮಾಹೇಶ್ವರಸ್ಥಲದ ಆಚರಣೆಯಾಗುತ್ತದೆ. ಇವೆರಡೂ ಸ್ಥೂಲ ಶರೀರಕ್ಕೆ ಸಂಬಂಧಿಸಿರುತ್ತವೆ.

ಪ್ರಸಾದಿ ಪ್ರಾಣಲಿಂಗಿ ಸ್ಥಲಗಳು ಸೂಕ್ಷ್ಮ ಶರೀರಕ್ಕೆ ಸಂಬಂಧಿಸಿರುತ್ತವೆ. ಈ ಸ್ಥಲಗಳಲ್ಲಿ ಅಂತರಂಗ ಶರೀರವೂ ಅದಕ್ಕೆ ಸಂಬಂಧಿಸಿದ ಅನೇಕ ಇಂದ್ರಿಯಗಳೂ ಅವುಗಳ ವ್ಯಾಪಾರಗಳೂ ಉಚ್ಚತಮ ಸ್ಥಿತಿಯನ್ನು ಹೊಂದುತ್ತವೆ. ಈ ಸ್ಥಿತಿಗೆ ಮನಸ್ಸಿನ ಏಕಾಗ್ರತೆಯು

ಅತ್ಯಾವಶ್ಯಕವು. ಇದರಲ್ಲಿ ಮನಸ್ಸು ತನ್ನ ಚಾಂಚಲ್ಯವನ್ನು ಹೋಗ ಲಾಡಿಸಬೇಕಾಗುತ್ತದೆ. ಯೋಗ ಶಾಸ್ತ್ರಜ್ಞರು ಈ ಸ್ಥಿತಿಯನ್ನು ಉಂಟು ಮಾಡಲು ಆಸನ, ಪ್ರಾಣಾಯಾಮ ಪ್ರತ್ಯಾಹಾರಗಳನ್ನು ಯೋಜಿಸಿ ದ್ದಾರೆ. ಯೋಗಿಯು ಇವುಗಳಂತೆ ಆಚರಿಸಿದಲ್ಲಿ ಅವನ ಮಾನಸಿಕ ಬಲವು ಬೆಳೆಯುತ್ತ ಹೋಗುತ್ತದೆ.' ಇದು ಬೆಳೆದ ಹಾಗೆ ಅವನಲ್ಲಿ ರುವ ಷಟ್‌ಚಕ್ರಗಳಲ್ಲಿ ಒಂದು ಮಹತ್ತಾದ ಶಕ್ತಿಯು ಉಂಟಾಗ ಹತ್ತುತ್ತದೆ. ಇದರಿಂದ ಅವನು ಸಿದ್ಧಿಗಳನ್ನು ಸಹ ಮಾಡಲು ಶಕ್ತನಾಗುತ್ತಾನೆ.

ಷಟ್‌ಸ್ಥಲಗಳಲ್ಲಿ ಈ ಪರಿಣಾಮಗಳು ಪ್ರಸಾದಿ ಮತ್ತು ಪ್ರಾಣ ಲಿಂಗಿ ಈ ಸ್ಥಲಗಳಲ್ಲಿ ಉಂಟಾಗುತ್ತವೆ. ಆಗ ಅವನು ಲಿಂಗಧ್ಯಾನ ದಲ್ಲಿದ್ದುಕೊಂಡು ತನ್ನ ಮನಸ್ಸಿನ ಮೇಲೆ ತನ್ನ ಸ್ವಾಮಿತ್ವವನ್ನು ಸ್ಥಾಪಿಸಿಕೊಂಡಿರುತ್ತಾನೆ. ಯೋಗಾಭ್ಯಾಸಿಗಳು ಲಲ ಆಸನಗಳನ್ನು ಕಲ್ಪಿಸಿಕೊಂಡಿದ್ದಾರೆ. ಆದರೆ ಶಿವಯೋಗಿಗಳು ಅವುಗಳಲ್ಲಿ ಕಠಿಣ ವಾದ ಆಸನಗಳನ್ನು ಬಿಟ್ಟುಕೊಟ್ಟು ಸಿದ್ಧಾಸನ, ಪದ್ಮಾಸನ. ಸ್ವಸ್ತಿ ಕಾಸನ, ಅರ್ಧಜಂಘಾಸನ, ಪರ್ಯಂಕಾಸನ ಎಂಬ ಐದು ಆಸನಗಳನ್ನ ಮಾತ್ರ ಅನುಸರಿಸಬೇಕೆಂದು ಬೋಧಿಸಿದ್ದಾರೆ. ಅವರು ಪ್ರಾಣಾಯಾ ಮದ ವ್ಯಾಖ್ಯೆಯನ್ನು ಮಾಡಿರುವದು ಹೇಗೆಂದರೆ— "ರೇಚಕಪೂರಕ ದಿಂದ ಮಾರುತ ಸೂಸುತ್ತಿರಲು ಸಮಸ್ತ ಪ್ರಾಣಿಗಳ ಆಯುಷ್ಯವು ದಿನದಿನಕ್ಕೆ ಕುಂದುತ್ತಿಹುದು. ಹೀಗೆ ಈಡಾಪಿಂಗಳದಲ್ಲಿ ಚರಿಸುವ ರೇಚಕ ಪೂರಕಂಗಳ ಭೇದವನರಿದು ಮನಪವನಂಗಳ ಮೇಲೆ ಲಿಂಗ ಸಂಬಂಧಿಸಿ ಮನ ಪವನ ಪ್ರಾಣಂಗಳು ಲಿಂಗದೊಡನೆ ಕೂಡಿ ಲಿಂಗ ಸ್ವರೂಪವ ಮಾಡಿ ವಾಯು ಪ್ರಾಣತ್ವವ ಕಳೆದು ಲಿಂಗಪ್ರಾಣಿಯನು ಮಾಡಿ ಹೃದಯ ಕಮಲದ ಮಧ್ಯದಲ್ಲಿ ಪ್ರಣವುವನುಚ್ಚರಿಸುತ್ತ ಪರ ಶಿವನ ಧ್ಯಾನದಲ್ಲಿ ತರಹರವಾಗಿರ್ಪುದೀಗ ಪ್ರಾಣಾಯಾಮ" ಹೀಗೆ ಅವರು ಪ್ರಾಣಾಯಾಮದ ತತ್ವಗಳನ್ನು ನಿರೂಪಿಸಿದ್ದಾರೆ.

ಪ್ರತ್ಯಾಹಾರದ ಬಗ್ಗೆ ವೀರಶೈವ ಷಟ್‌ಸ್ಥಲವಿದರು ನಿರೂಪಿಸಿದ್ದು ಹೇಗೆಂದರೆ:—"ಆಹಾರದಿಂ ನಿದ್ರೆ, ನಿದ್ರೆಯಿಂದ ಇಂದ್ರಿಯಗಳು, ಇಂದ್ರಿ ಯಗಳಿಂದ ವಿಷಯುಂಗಳು ಘನವಾಗುತ್ತಿಹವು ನೋಡಾ. ಆ ವಿಷಯ ದಿಂದ ದುಷ್ಕರ್ಮಂಗಳು ವಿಗೆ ಮಾಡಿ ಜೀವಂಗೆ ಭವಬಂಧನ ಒಡ

ಗೂಡಿ ಆಯಾಸಂಬಿಡುತಿರ್ಪರಜ್ಞಾನಕರ್ಮಿಗಳು. ಈ ಅವಸ್ಥೆಯು ಹೋಗ ದಿಹರು ಸುಜ್ಞಾನಿ ಧರ್ಮಿಗಳು. ಆದರಿಂದ ಆಹಾರಮುಂ ಕ್ರಮ ಕ್ರಮ ದಿಂದ ಸರ್ವೇಂದ್ರಿಯಂಗಳನು ಲಿಂಗಮುಖದಿಂದ ಸಾವಧಾನವ ಮಾಡಿ ಕೊಂಡಿಪ್ಪುದೀಗ ಪ್ರತ್ಯಾಹಾರಯೋಗ" ಎಂದು ವ್ಯಾಖ್ಯೆಯನ್ನು ಮಾಡಿ ದ್ದಾರೆ. ಅವರ ಅಭಿಪ್ರಾಯದ ಪ್ರಕಾರ ಬಹಿರಂಗದ ಒಲವುಗಳಿಗೆ ಇಂದ್ರಿಯಂಗಳನ್ನು ಗುರಿಮಾಡದೆ ಅವುಗಳನ್ನು ತನ್ನ ಅಂಕಿತದಲ್ಲಿಟ್ಟು ಕೊಂಡು ವರ್ತಿಸುವದು ಪ್ರತ್ಯಾಹಾರದ ಗುರಿಯಾಗಿದೆ. ಇದನ್ನಾದರೂ ಷಟ್‌ಸ್ಥಲ ಶಾಸ್ತ್ರಜ್ಞರು ಪ್ರಸಾದಿ ಪ್ರಾಣಲಿಂಗಿ ಈ ಸ್ಥಲಗಳಲ್ಲಿ ಸಮಾ ವೇಶ ಮಾಡಿದ್ದಾರೆ.

ಧ್ಯಾನಧಾರಣ ಇವುಗಳು ಶರಣಸ್ಥಲದ ಲಕ್ಷಣಗಳಾಗಿರುತ್ತವೆ. ಶರಣನು ತನ್ನ ಕರಸ್ಥಲದಲ್ಲಿರುವ ಶಿವಲಿಂಗಮೂರ್ತಿಯನ್ನು ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ, ಬ್ರಹ್ಮ ರಂಧ್ರ ಈ ಸ್ಥಾನಗಳಲ್ಲಿ ಧ್ಯಾನಿಸಿ ಅಲ್ಲಿ ಷಟ್‌ಲಿಂಗಗಳನ್ನು ನೆಲೆಗೊ ಳಿಸುತ್ತಾನೆ. ಇದು ಧ್ಯಾನದ ಪರಿಣಾಮವಾಗಿದೆ. ಹೀಗೆ ಅವುಗಳನ್ನು ನೆಲೆಗೊಳಿಸಿ ಅವು ತನ್ನ ಭಾವ, ಕರಣ, ಮನ ಮುಖ್ಯವಾದ ಸರ್ವಾಂ ಗದಲ್ಲಿ ಪಸರಿಸುವಂತೆ ಮಾಡುತ್ತಾನೆ. ಇದು ಧಾರಣವು. ಆಗ ಅವನು ಸರ್ವಾಂಗಲಿಂಗಿ ಎಂದೆನಿಸಿಕೊಳ್ಳುತ್ತಾನೆ. ಇದು ಶಿವಯೋಗಿಯು ಧ್ಯಾನಿ ಸುವ ಕ್ರಮವಾಗಿದೆ. ಆದರೆ ಇತರ ಯೋಗಿಗಳು ಹೀಗೆ ಲಿಂಗ ಮುಂತಾಗಿ ಆಚರಿಸುವದಿಲ್ಲ. ಅವರು ತಮ್ಮ ದೇಹಶಕ್ತಿಯನ್ನು ಬೆಳಿಸಿಕೊಂಡು ಒಂದು ಅಲೌಕಿಕ ಸಾಮರ್ಥ್ಯವನ್ನು ಪಡೆಯಲು ಹವಣಿಸುವರುಂಟು. ಅವರು ವೀರಶೈವರಂತೆ ಲಿಂಗವೆಂಬುದನ್ನು ಲಕ್ಷಿಸದೆ, ತ್ರಿಕೂಟಮಧ್ಯ, ಅಥವಾ ಇತರ ಆವುದೋ ಒಂದು ಪದಾರ್ಥ, ಅಥವಾ ಕೆಲವೊಂದು ಇಷ್ಟದೇವತೆ ಯನ್ನು ಇದಿರಿನಲ್ಲಿ ಇಟ್ಟುಕೊಂಡು ಧ್ಯಾನಿಸುತ್ತಾರೆ. ಇವರು ಹಠ ಯೋಗಿಗಳಾಗಬಹುದು. ಆದರೆ ಅವರು ಲಿಂಗವಿರಹಿತವಾಗಿ ಧ್ಯಾನಿ ಸುವದರಿಂದ ಶಿವಯೋಗಿಗಳೆಂದು ಕರೆಯಲ್ಪಡಲಾರರು.

ಹೀಗೆ ಶಿವಯೋಗವನ್ನು ಸಾಧಿಸಿವ ವೀರಶೈವರು ತಮ್ಮ ನಿತ್ಯದ ಕಾಯಕಗಳನ್ನು ಹಗುರಾಗಿ ಮಾಡಬಲ್ಲರು. ಅವರಲ್ಲಿ ಮನಸ್ಸಿನ ಏಕಾಗ್ರತೆಯ ಶಕ್ತಿಯು ಬಹು ಹೆಚ್ಚಾಗಿರುವದರಿಂದ ತಮ್ಮೆದುರಿಗೆ

ಬಂದ ಸಮಸ್ಯೆಗಳನ್ನು ಕೂಡಲೆ ಗ್ರಹಿಸಿ ಅವುಗಳನ್ನು ಸಿದ್ಧಿಗೆ ಒಯ್ದು ಬಿಡುತ್ತಾರೆ. ಅವರಲ್ಲಿ ಲಿಂಗಚೈತನ್ಯವಿರುವದರಿಂದ ಅವರು ಹೀಗೆ ಮಾಡುವುದೆಲ್ಲ ಅವರನ್ನು ಅಂತಿಮಸ್ಥಿತಿಗೆ ಬಹು ತೀವ್ರವಾಗಿ ತಂದು ಮುಟ್ಟಿಸಿಬಿಡುತ್ತದೆ. ಅವರು ಬಾಹ್ಯದಲ್ಲಿ ಜಗತ್ತಿನ ವ್ಯಾಪಾರಗಳಲ್ಲಿ ರುವುದಾಗಿ ಕಂಡುಬಂದರೂ ಅವುಗಳಿಂದ ಅವರು ಅಲಿಪ್ತರಾಗಿದ್ದು ಅವುಗಳಲ್ಲಿ ಇದ್ದೂ ಇಲ್ಲದಂತೆ ತಮ್ಮ ಕರ್ತವ್ಯ ಕರ್ಮಗಳನ್ನು ನಿರ್ವಹಿಸು ತ್ತಾರೆ.

ಸಮಾಧಿ ಇದು ಅಷ್ಟಾಂಗಗಳಲ್ಲಿ ಕಡೆಯುದಾಗಿದೆ. ಅದು ಮನು ಷ್ಯನ ಅಂತಿಮಸ್ಥಿತಿಯು. ಅದು ಮನುಷ್ಯನಲ್ಲಿರುವ ಶಕ್ತಿಗಳ ಪರ ಮಾವಧಿ ಸ್ಥಿತಿಯಾಗಿರುತ್ತದೆ. ಶಿವಾನುಭವ ಶಾಸ್ತ್ರದಲ್ಲಿ ಈ ಸ್ಥಿತಿಯ ವಿವರಣೆ ಇರುವದು ಹೇಗೆಂದರೆ— "ಸತ್ಕ್ರಿಯಾಜ್ಞಾನ ಯೋಗದಿಂದ ಇಷ್ಟಪ್ರಾಣಂಗೆ ಶಿವಕಳೆಯ ಸಂಬಂಧಿಸಿ ಇಷ್ಟ ಪ್ರಾಣಭಾವವೆಂಬ ಲಿಂಗ ತ್ರಯವನು ಏಕಾಕಾರ ಮಾಡಿ ಅಖಂಡ ಪರಿಪೂರ್ಣ ಕೇವಲ ಪರಂ ಜ್ಯೋತಿ ಸ್ವರೂಪವಪ್ಪ ಮಹಾಲಿಂಗದೊಳಗೆ ಸಂಯೋಗವಾಗಿ ಭಿನ್ನ ವಿಲ್ಲದೆ ಏಕಾರ್ಥವಾಗಿಹುದು ಸಮಾಧಿಯೋಗ." ಇಂಥ ಸಮಾಧಿಯಲ್ಲಿ ಶಿವಯೋಗಿಯು ಬಾಹ್ಯಕ್ರಿಯೆಗಳನ್ನು ಮಾಡುವದು ಕಂಡುಬಂದರೂ ಅದು ನಿಮಿತ್ತ ಮಾತ್ರಕ್ಕೆ. ಅವನಲ್ಲಿ ಕ್ರಿಯೆ, ಜ್ಞಾನ ಅವುಗಳ ಬಗ್ಗೆ ಭೇದಭಾವವಿರುವದಿಲ್ಲ. ಅವೆರಡೂ ಅವನಲ್ಲಿ ಸಮರಸವಾಗಿ ಸರಳವಾಗಿ ಪ್ರವಹಿಸುತ್ತವೆ. ಇದು ವೀರಶೈವನ ಅಂತಿಮಸ್ಥಿತಿಯಾಗಿ ರುತ್ತದೆ.

ಈ ಪ್ರಕಾರ ಯೋಗಶಾಸ್ತ್ರದ ತತ್ವಗಳನ್ನು ವೀರಶೈವ ತತ್ವವೇ ತ್ತಿಗಳು ತಮ್ಮ ಷಟ್‌ಸ್ಥಲಗಳಲ್ಲಿ ಸಮಾವೇಶ ಮಾಡಿ ಅದರಂತೆ ಆಚರಿ ಸುವವರಾಗಿದ್ದಾರೆ.

ಈ ಪ್ರಕಾರ ಅವರು ಆಯಾ ಮತಗಳಲ್ಲಿರುವ ಉತ್ಕೃಷ್ಟವಾದ ತತ್ವಗಳನ್ನು ಆಯ್ದು ಅವುಗಳನ್ನು ತಮ್ಮ ಷಟ್‌ಸ್ಥಲಾಚರಣೆಯ ಪ್ರತಿ ಯೊಂದು ಭಾಗದಲ್ಲಿ ಸಂಬಂಧಿಸಿರುವದು ಕಂಡುಬರುತ್ತದೆ. ಇದರಿಂದ ಬಸವೇಶ್ವರನ ಕಾಲದಲ್ಲಿ ವೀರಶೈವ ಮತವು ಬೇರೆ ಅನೇಕ ಮತದ ಪರನ್ನು ತನ್ನಲ್ಲಿ ಬರಮಾಡಿಕೊಳ್ಳಲು ಅದಕ್ಕೆ ಸಾಧ್ಯವಾಗಿರುತ್ತದೆ.

ಅಂತಃಕರಣ ಚತುಷ್ಟಯಗಳು.

ಮನ ಬುದ್ಧಿ ಚಿತ್ತ ಅಹಂಕಾರ ಇವು ಅಂತಃಕರಣ ಚತುಷ್ಟ ಯಗಳು. ಇವುಗಳೊಡನೆ ಮೂಲಾತ್ಮನೆಂಬುದನ್ನೂ ವಚನಕಾರರು ಸೇರಿಸಿರುವದುಂಟು. ಇವುಗಳಲ್ಲಿ ಮನ, ಬುದ್ಧಿ ಇವು ಸೂಕ್ಷ್ಮ ಶರೀ ರಕ್ಕೆ ಸಂಬಂಧಿಸಿದವು. ಅಹಂಕಾರ, ಚಿತ್ತ, ಮೂಲಾತ್ಮ ಇವು ಕಾರಣ ಶರೀರಕ್ಕೆ ಸಂಬಂಧಿಸಿದವಿರುತ್ತವೆ.

ಒಮ್ಮೊಮ್ಮೆ ಮೂಲಾತ್ಮ ಇದರ ಸ್ಥಳದಲ್ಲಿ ಜ್ಞಾನ ಎಂತಲೂ ಹೇಳುವದುಂಟು. ಮೂಲಾತ್ಮ ಮತ್ತು ಜ್ಞಾನ ಕೆಲಕೆಲವು ಸಂದ ರ್ಭಗಳಲ್ಲಿ ಪರ್ಯಾಯ ಶಬ್ದಗಳಾಗಿ ಉಪಯೋಗಿಸಲ್ಪಡುವದುಂಟು. ಆದರೆ ಮೂಲಾತ್ಮ ಎಂಬುದರ ಉಪಯೋಗದಿಂದ ಮನುಷ್ಯನ ಕಾರ್ಯ ಗಳ ರೀತಿಯನ್ನು ಹೆಚ್ಚಿಗೆ ಸ್ಪಷ್ಟವಾಗಿ ತಿಳಿಯಲು ಶಕ್ಯವಾಗುತ್ತದೆ.

ಮನುಷ್ಯನಲ್ಲಿ ಸ್ಥೂಲ, ಸೂಕ್ಷ್ಮ, ಕಾರಣ ಎಂಬ ಮೂರು ಶರೀರಗಳಿದ್ದು ಇವುಗಳ ಮೂಲಕ ಮನುಷ್ಯನ ವ್ಯಾಪಾರಗಳು ನಡಿ ಯುತ್ತವೆ. ಇವುಗಳ ಸಹಾಯದಿಂದಲೇ ಮನುಷ್ಯನು ಜೀವಿಸುತ್ತಾನೆ, ವಿಚಾರ ಮಾಡುತ್ತಾನೆ ಮತ್ತು ಕ್ರಿಯೆಗಳನ್ನು ಮಾಡುತ್ತಾನೆ. ಇವು ಗಳು ಸುವ್ಯವಸ್ಥೆಯ ಮೇಲೆ ಮನುಷ್ಯನ ಪ್ರಗತಿಯು ಅವಲಂಬಿಸಿ ರುತ್ತದೆ. ಆದ್ದರಿಂದ ಷಟ್‌ಸ್ಥಲಶಾಸ್ತ್ರಜ್ಞರು ಇವುಗಳ ವಿವೇಚನೆಗೆ ಮಹ ತ್ವದ ಸ್ಥಾನವನ್ನು ಕೊಟ್ಟಿರುತ್ತಾರೆ.

ಸ್ಥೂಲಶರೀರವು ಕಣ್ಣಿಗೆ ಕಾಣುವ ಬಾಹ್ಯಾಂಗವು. ಅದರ ಕಾರ್ಯಗಳು ದೃಷ್ಟಿಗೆ ಗೋಚರವಾಗುತ್ತವೆ. ಸೂಕ್ಷ್ಮ ಶರೀರವು ಅಂತ ರಂಗದಲ್ಲಿದ್ದುಕೊಂಡು ಬಾಹ್ಯ ಶರೀರದ ಮೂಲಕ ಕ್ರಿಯೆಗಳನ್ನು ಮಾಡಿಸುತ್ತದೆ. ಮನುಷ್ಯನ ಶರೀರದಲ್ಲಿ ಹರಿದಾಡುವ ಪಂಚವಾಯು ಗಳು, ಮೂಗು, ಕಣ್ಣು, ಕಿವಿ ಮೊದಲಾದ ಐದು ಜ್ಞಾನೇಂದ್ರಿಯ ಗಳು ಗಂಧ, ರುಚಿ ಮೊದಲಾದ ಪಂಚ ವಿಷಯಗಳು ಮನ ಬುದ್ಧಿ ಹೀಗೆ ಹದಿನೇಳು ಇದ್ದು ಇವೆಲ್ಲವೂ ಸೂಕ್ಷ್ಮ ತನುವಿನಲ್ಲಿ ವ್ಯವಹರಿ ಸುತ್ತವೆ. ಈ ಬಾಹ್ಯ ಮತ್ತು ಅಂತರಂಗ ಶರೀರಗಳನ್ನವಲಂಬಿಸಿ

ಮನುಷ್ಯನಿಂದ ಕ್ರಿಯೆಗಳಾಗುತ್ತವೆ. ಈ ಕ್ರಿಯೆಗಳ ಪರಿಣಾಮಗಳು ಕಾರಣಶರೀರದಲ್ಲಿ ಸಂಗ್ರಹಿಸಲ್ಪಡುತ್ತವೆ. ಈ ಪರಿಣಾಮಗಳು ಜ್ಞಾನ ರೂಪಾಗಿ ಇಲ್ಲಿ ವಾಸಮಾಡುತ್ತವೆ. ಅಲ್ಲಿ ಆತ್ಮನು ಇದ್ದು ಅವನ ಲ್ಲಿಯೇ ಅವು ಸಂಗ್ರಹಿಸಲ್ಪಡುತ್ತವೆಂದು ತಿಳಿಯಲ್ಪಡುತ್ತದೆ.

ಮನ, ಬುದ್ಧಿ, ಚಿತ್ತ, ಅಹಂಕಾರ ಇವುಗಳ ವ್ಯಾಪಾರಗಳ ಮೇಲೆ ಮನುಷ್ಯನ ವೃತ್ತಿಗಳು ಅಥವಾ ಒಲವುಗಳು ಅವಲಂಬಿಸಿರು ತ್ತವೆ. ಇವು ಉಚ್ಚತರಗತಿಯವಾಗಿದ್ದರೆ ಮಾತ್ರ ಮನುಷ್ಯನಲ್ಲಿ ಪ್ರಗತಿ ಯುಂಟಾಗುತ್ತದೆ.

ಇವುಗಳಲ್ಲಿ ಮನಸ್ಸಿಗೆ ತತ್ವಜ್ಞಾನಿಗಳೂ ಯೋಗಿಗಳೂ ಮಹತ್ವದ ಸ್ಥಾನವನ್ನು ಕೊಟ್ಟಿದ್ದಾರೆ. ಈ ಮನಸ್ಸು ಪ್ರಗತಿಯ ತಳಹದಿಯಾ ಗಿದೆ. ಅದರಲ್ಲಿ ಚಾಂಚಲ್ಯತೆಯು ಇರುವದರಿಂದ ಅದನ್ನು ಹೋಗ ಲಾಡಿಸದ ಹೊರ್ತು ಪ್ರಗತಿಯಾಗಲಾರದು. ಯಾಕಂದರೆ ಮನಸ್ಸಿನ ಹೊಯ್ದಾಟದಿಂದ ಮನುಷ್ಯನಲ್ಲಿಯ ಶಕ್ತಿಗಳು ಕ್ಷೀಣವಾಗುತ್ತವೆ. ಈ ಹೊಯ್ದಾಟವು ನಿಂತು ಸ್ಥಿರಸ್ಥಿತಿಯು ಉಂಟಾದಲ್ಲಿ ಮನುಷ್ಯನಲ್ಲಿ ಹುದುಗಿರುವ ಅಪರಿಮಿತ ಶಕ್ತಿಯು ಪ್ರಕಟವಾಗಹತ್ತುತ್ತದೆ. ಮನ ಸ್ಸಿನಲ್ಲಿ ಸಂಕಲ್ಪ ವಿಕಲ್ಪಗಳು ಯಾವಾಗಲೂ ಉಂಟಾಗುತ್ತವೆ. ಹೀಗಾ ಗುವದು ಅದರ ಸ್ವಭಾವವಾಗಿದೆ. ಅಂದರೆ ಮನುಷ್ಯನು ಕಾರ್ಯ ಮಾಡುವಲ್ಲಿ ಸಂದೇಹಪಡುತ್ತಾನೆ, ನಾನಾ ಭೀತಿಗಳಿಗೆ ಒಳಗಾಗು ತ್ತಾನೆ, ಹಿಂಜರಿಯುತ್ತಾನೆ, ಅಧೈರ್ಯಪಡುತ್ತಾನೆ. ಈ ಸ್ಥಿತಿಯು ಮನಸ್ಸಿನ ಮೂಲಕವೇ ಆಗುತ್ತದೆ. ಮನಸ್ಸಿನ ಈ ಸ್ಥಿತಿಯನ್ನು ಹೋಗ ಲಾಡಿಸಿ ಅದನ್ನು ತನ್ನ ಅಧೀನದಲ್ಲಿಡುವದರಿಂದ ಮನುಷ್ಯನಿಂದ ಮಹ ತ್ತಾದ ಕಾರ್ಯಗಳಾಗುತ್ತವೆ.

ಮನಸ್ಸಿನ ತರುವಾಯ ಬುದ್ಧಿಯ ಕಾರ್ಯಗಳು ಮಹತ್ವದವು. ಬುದ್ಧಿಯು ವಿಚಾರ ಮಾಡುತ್ತದೆ. ಅದು ತನ್ನ ಇದಿರಿಗೆ ಬಂದ ಕಾರ್ಯಗಳು ಯೋಗ್ಯವೋ ಅಯೋಗ್ಯವೋ ಎಂಬುದನ್ನು ಅದು ಪರೀ ಕ್ಷಿಸಿ ನೋಡುತ್ತದೆ. ಹೀಗೆ ಅದು ಪರೀಕ್ಷಿಸಿ ಕೆಲವೊಂದು ನಿಶ್ಚಯಕ್ಕೆ ಬರುತ್ತದೆ. ಹೀಗೆ ನಿಶ್ಚಯವಾದ ಹೊರ್ತು ಮನುಷ್ಯನಿಂದ ಕೃತಿಗಳು ಘಟಿಸಲಾರವು.

ಈ ಮನ, ಬುದ್ಧಿ ಇವುಗಳು ಸೂಕ್ಷ್ಮ ಶರೀರಕ್ಕೆ ಸಂಬಂಧಿಸಿ ರುತ್ತವೆ. ಇವೆರಡೂ ಸ್ಥೂಲಶರೀರ ಮತ್ತು ಕಾರಣಶರೀರ ಇವುಗ ಳಲ್ಲಿ ಪರಸ್ಪರತೆಯನ್ನುಂಟು ಮಾಡಲು ಒಂದು ಸೇತುವೆಯಂತಿವೆ. ಇವುಗಳ ಕಾರ್ಯಗಳು ನಿಂತಲ್ಲಿ ಮನುಷ್ಯನ ಪ್ರಗತಿಯು ಕೂಡಲೆ ನಿಂತುಹೋಗುತ್ತದೆ. ಆದ್ದರಿಂದ ಇವುಗಳನ್ನು ಅಂಕಿತದಲ್ಲಿಟ್ಟುಕೊಂಡು ಅವುಗಳ ವ್ಯಾಪಾರಗಳನ್ನು ಬಲಪಡಿಸುವದು ಪ್ರತಿಯೊಬ್ಬನು ಮಾಡ ತಕ್ಕ ಅವಶ್ಯಕ ಕಾರ್ಯವಾಗಿರುತ್ತದೆ.

ಚಿತ್ತ, ಅಹಂಕಾರ ಮತ್ತು ಮೂಲಾತ್ಮ ಇವು ಕಾರಣ ಶರೀ ರಕ್ಕೆ ಸಂಬಂಧಪಟ್ಟಿರುತ್ತವೆ.

ಇವುಗಳಲ್ಲಿ ಚಿತ್ತದ ಮೂಲಕ ಧಾರಣ ಮತ್ತು ಅನುಸಂಧಾನ ಕಾರ್ಯಗಳು ನಡಿಯುತ್ತವೆ. ಸ್ಥೂಲ, ಸೂಕ್ಷ್ಮ ಶರೀರಗಳಲ್ಲಿ ಉಂಟಾ ಗುವ ಕಾರ್ಯಗಳ ಪರಿಣಾಮಗಳು ಚಿತ್ತದ ಮೂಲಕ ಈ ಶರೀರದಲ್ಲಿ ಗಟ್ಟಿಯಾಗಿ ಹಿಡಿಯಲ್ಪಡುವದುಂಟು. ಕಾರಣ ಶರೀರವು ಮನುಷ್ಯ ನಿಗೆ ಒಂದು ದೊಡ್ಡ ಸಂಗ್ರಹಾಲಯದಂತೆ ಇದೆ. ಕೆಳಗಿನ ಶರೀರಗ ಳಲ್ಲಿ ಮನುಷ್ಯನಿಗೆ ಆಗುವ ಅನುಭವಗಳು ಚಿತ್ತಿನ ಕಾರ್ಯದ ಮೂಲಕ ಈ ಕಾರಣ ಶರೀರದಲ್ಲಿ ಸಂಗ್ರಹಿಸಲ್ಪಡುವದುಂಟು. ಈ ಸಂಗ್ರಹವು ಯಾವ ರೀತಿಯದು ಇರುತ್ತದೆಯೋ ಅದರ ಮೇಲೆ ಮನುಷ್ಯನ ವ್ಯಕ್ತಿ ತ್ವವು ಅವಲಂಬಿಸಿರುತ್ತದೆ. ಈ ಸಂಗ್ರಹದಲ್ಲಿ ಉತ್ತಮ ತೆರದ ಅನು ಭವಗಳಿದ್ದರೆ ಅವಿದ್ದ ವ್ಯಕ್ತಿಯು ಲೋಕಕ್ಕೆ ಕಲ್ಯಾಣವನ್ನು ಮಾಡು ವಂಥವನಾಗುತ್ತಾನೆ. ಅವನಿಂದ ಜಗತ್ತಿಗೆ ಹಿತವಾಗುತ್ತದೆ. ಒಂದು ವೇಳೆ ಅದರಲ್ಲಿ ಕೆಡಕು ವಾಸನೆಗಳು ಅಥವಾ ಪ್ರವೃತ್ತಿಗಳು ತುಂಬಿ ಕೊಂಡಿದ್ದರೆ ಅಂಥವನಿಂದ ಅಹಿತವಾಗುತ್ತದೆ. ಈ ವ್ಯಕ್ತಿತ್ವವೇ ಅಹಂ ಕಾರವೆಂದೆನಿಸಿಕೊಳ್ಳುತ್ತದೆ. ಅಹಂಕಾರ ಇದರ ಅರ್ಥವು ಸೊಕ್ಕು ಅಥವಾ ಗರ್ವ ಎಂದಿರದೆ ಮನುಷ್ಯನ ವ್ಯಕ್ತಿತ್ವಕ್ಕೆ ಕಾರಣವಾಗುವಂ ತಹ ಸ್ಥಿತಿಯು ಎಂಬ ಭಾವವು ಅದರಲ್ಲಿ ಇದೆ.

ಈ ಯಾವತ್ತು ಶರೀರಗಳಿಗೆಲ್ಲ ಪ್ರೇರಣೆ ಮಾಡುವಂಥವನು ಮೂಲಾ ತ್ಮನಿದ್ದಾನೆ. ಈ ಮೂಲಾತ್ಮನಿಂದಲೇ ಈ ಎಲ್ಲ ಶರೀರಗಳಲ್ಲಿ ಜೈತ ನ್ಯವು ಉಂಟಾಗುತ್ತದೆ. ಈ ಜೈತನ್ಯದ ಮೂಲಕ ಈ ಶರೀರಗಳಲ್ಲಿ

ಅನೇಕ ರೀತಿಯ ಕಾರ್ಯಗಳು ಯಾವ ರೀತಿಯುವಾಗಿರುತ್ತವೆಯೋ ಅದಕ್ಕನುಗುಣವಾಗಿಯೇ ಪ್ರಗತಿಯು ಉಂಟಾಗುತ್ತದೆ. ಆದ್ದರಿಂದ ಮನುಷ್ಯನು ತನ್ನ ಕರ್ಮೇಂದ್ರಿಯ ಜ್ಞಾನೇಂದ್ರಿಯಗಳನ್ನೂ ಮನಸ್ಸು ಮತ್ತು ಬುದ್ಧಿ ಇವುಗಳನ್ನೂ ಸರಿಪಡಿಸಿಕೊಳ್ಳಬೇಕು. ಇವು ಸರಿಯಾದ ಮಾರ್ಗದಿಂದ ನಡೆದುಬಂದರೆ ಮನುಷ್ಯನ ಪ್ರಗತಿಯು ಬಹು ತೀವ್ರವಾಗಿ ಆಗುತ್ತದೆ.

ಕಂಪನಿ ಸರಕಾರದ ದಂಡಕ.

(ರಾ॥ ಬಿ॥ ಪಿ. ಜಿ. ಹಳಕಟ್ಟಿ ಬಿ. ಏ ಎಲ್. ಎಲ್. ಬಿ. ವಿಜಾಪುರ)

ನಮ್ಮ ಗ್ರಂಥ ಸಂಶೋಧನೆಯ ಕಾಲದಲ್ಲಿ 'ಕಂಪನಿ ಸರಕಾರದ ದಂಡಕ' ಎಂಬ ಹಸ್ತಲಿಖಿತ ಲಾವಣಿಯು ದೊರೆತಿದ್ದು ಅದನ್ನು ನಾವು ಇಲ್ಲಿ ಪ್ರಸಿದ್ಧಿಸಿದ್ದೇವೆ. ಪೇಶ್ವೆಗಳ ರಾಜ್ಯವು ೧೮೧೮ ರಲ್ಲಿ ಮುಗಿತಾಯ ಹೊಂದಿ ಅದೆಲ್ಲವೂ ಬ್ರಿಟಿಶರ ಕೈವಶವಾಯಿತು. ಬ್ರಿಟಿಶರ ರಾಜ್ಯವು ಸ್ಥಾಪಿತವಾದ ಬಳಿಕ ಕೆಲವು ವರ್ಷಗಳಲ್ಲಿಯೇ ಈ ಲಾವಣಿಯನ್ನು ಮಾಡಿದ್ದು ಅದರಲ್ಲಿ ಪೇಶ್ವೆಯವರ ಅವ್ಯವಸ್ಥಿತ ಆಳಿಕೆ ಮತ್ತು ಬ್ರಿಟಿಶರ ಸುವ್ಯವಸ್ಥೆಯ ರಾಜ್ಯಭಾರ ಇವುಗಳು ಬಹು ಚನ್ನಾಗಿ ವರ್ಣಿಸಲ್ಪಟ್ಟಿವೆ.

ಮರಾಠರ ಕೂಡ ಆದ ಅಂತ್ಯ ಯುದ್ಧದಲ್ಲಿ ಬ್ರಿಟಿಶ್ ದಂಡಾಳುಗಳು ಪುಣೆ ಪಟ್ಟಣದ ಮೇಲೇರಿಬರಲು ಅವರ ಮತ್ತು ಮರಾಠರ ನಡುವೆ ಕಾಳಗವು ಸಂಭವಿಸಿತು. ಇದು ಪುಣೆ ಪಟ್ಟಣದಿಂದ ೪ ಮೈಲು ದೂರವಿರುವ ಖಡಕಿ ಎಂಬಲ್ಲಿ ಆದದ್ದರಿಂದ ಇದು ಖಡಕಿ ಕಾಳಗವೆಂದು ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಇದರಲ್ಲಿ ಪೇಶ್ವೆಯ ಸೈನ್ಯವು ಪರಾಜಿತವಾದ್ದರಿಂದ ಬಾಜಿರಾವ ಪೇಶ್ವೆಯು (ಇಲ್ಲಿ ಬಾಜಿರಾವ ರಘುನಾಥ ಎಂದು ಕರೆಯಲ್ಪಟ್ಟಿದ್ದಾನೆ.) ಪುಣೆ ಪಟ್ಟಣದಿಂದ ಓಡಿಹೋದನು. ಮುಂದೆ ಅವನನ್ನು ಬ್ರಿಟಿಶ ದಂಡಾಳುಗಳು ಬೆನ್ನಟ್ಟಲು ಅವನು ಮುಂದೆ ಅವರ ಕೈವಶವಾದನು. ಆಗ ಅವರು ಅವನ ರಾಜ್ಯ

ವನ್ನು ಕಸಿದುಕೊಂಡು ಅವನನ್ನು ಕಾಶೀ ಪಟ್ಟಣಕ್ಕೆ ಸಮೀಪವಿರುವ ಬ್ರಹ್ಮಾವರ್ತದಲ್ಲಿರಲು ಆಜ್ಞೆಮಾಡಿ ಕೊಟ್ಟರು. ಹಾಗೆಯೇ ಅವನು ಅಲ್ಲಿಯೇ ತನ್ನ ಜೀವಾವಧಿ ವರೆಗೆ ವಾಸ ಮಾಡಿದನು.

ಈ ಲಾವಣಿಯಲ್ಲಿ ಬ್ರಿಟಿಶರ ದಂಡಾಳುಗಳು ಪುಣೇ ಪಟ್ಟಣವನ್ನು ಮುತ್ತಿದ್ದೂ, ಬಾಜೀರಾಯನನ್ನು ಹಿಡಿದು ಬ್ರಹ್ಮಾವರ್ತಕ್ಕೆ ಕಳಿಸಿದ್ದೂ ಉಲ್ಲೇಖವಾಗಿವೆ. ಆಗ ಉತ್ತರ ಕರ್ನಾಟಕ ಭಾಗವು ಪೇಶ್ವೆಯವರ ಆಡಳಿತೆಯಲ್ಲಿದ್ದು ಧಾಮುಸ ಮನ್ರೋ ಈತನು ಇದನ್ನು ಕೈವಶ ಮಾಡಿಕೊಂಡು ಧಾರವಾಡವನ್ನು ತನ್ನ ಆಡಳಿತೆಯ ಮುಖ್ಯ ಸ್ಥಾನವನ್ನಾಗಿ ಮಾಡಿದನು. ಈ ಕಾಲದಲ್ಲಿ ಜನರು ಪೇಶ್ವೆಯ ಆಡಳಿತೆಯ ಅವ್ಯವಸ್ಥೆಗೆ ಬಹಳ ಬೇಸರುಪಟ್ಟವರಾದ್ದರಿಂದ ಈ ಭಾಗವನ್ನು ಕೈವಶ ಮಾಡಿಕೊಳ್ಳುವದು ಅವನಿಗೆ ದುಸ್ತರವಾಗಲಿಲ್ಲ. ಜನರೇ ಅವನಿಗೆ ಸಹಾಯಕರಾಗಿ, ಮರಾಠಾ ಸೈನಿಕರನ್ನು ತಮ್ಮಲ್ಲಿಯ ಠಾಣ್ಯಗಳಿಂದ ಓಡಿಸುತ್ತ ಬರುತ್ತಿದ್ದರು. ಲಾವಣಿಕಾರನು ಬ್ರಿಟಿಶ್ ಸೈನ್ಯಗಳು ಹೇಗೆ ವ್ಯವಸ್ಥೆಯಿಂದ ಯುದ್ಧ ಮಾಡುತ್ತಿದ್ದವೆಂಬುದನ್ನು ಬಹು ಚನ್ನಾಗಿ ವಿವರಿಸಿದ್ದಾನೆ.

ಬ್ರಿಟಿಶರ ಸೈನ್ಯದಲ್ಲಿ ಕೆಲವು ದಂಡಿನ ಅಧಿಕಾರಿಗಳ ಹೆಸರುಗಳು ಈ ಲಾವಣಿಯಲ್ಲಿ ಬಂದಿರುತ್ತವೆ. ಅವರು ಚಾಪ್ಲಿನ, ನೆಸ್ಬಿಟ್, ಥ್ಯಾಕರೆ ಮೊದಲಾದವರು ಇದ್ದಾರೆ. ಇವರೆಲ್ಲರೂ ಮುಂದೆ ಧಾರವಾಡದ ಕಲೆಕ್ಟರರಾದರು. ಕಿತ್ತೂರಿನಲ್ಲಿ ಚನ್ನಮ್ಮನು ದಂಗೆಯನ್ನು ಎಬ್ಬಿಸಿದಾಗ ಧಾರವಾಡ ಕಲೆಕ್ಟರನಾಗಿದ್ದ ಥ್ಯಾಕರೆಯು ಇಲ್ಲಿ ಉಲ್ಲೇಖಿಸಲ್ಪಟ್ಟಿದ್ದಾನೆ. ಮೊದಲನೆಯ ಕಲೆಕ್ಟರನಾದ ಧಾಮುಸ ಮನ್ರೋ ಈತನ ಹೆಸರೂ ಇದರಲ್ಲಿ ಬಂದಿದೆ. ಮುಲಕಣ ಎಂದರೆ ಜಾನ ಮಾಲ್ಕಮನು. ಈತನೇ ಬಾಜೀರಾಯನನ್ನು ಬೆನ್ನಟ್ಟಿ ಸೆರೆ ಹಿಡಿದನು.

ಬ್ರಿಟಿಶರು ಉತ್ತರ ಕರ್ನಾಟಕವನ್ನು ಕೈವಶಮಾಡಿಕೊಂಡ ಬಳಿಕ ಅಲ್ಲಿ ಹೇಗೆ ಕಚೇರಿಯ ಕೆಲಸಗಳು ನಡಿಯುತ್ತಿದ್ದವೆಂಬುದನ್ನು ಲಾವಣೀಕಾರನು ಬಹು ಸ್ವಾರಸ್ಯವಾಗಿ ವರ್ಣಿಸಿದ್ದಾನೆ.

ಈ ಲಾವಣಿಯಲ್ಲಿ ಪೇಶ್ವೆ ಮತ್ತು ಬ್ರಿಟಿಶರ ಆಡಳಿತೆಗಳ ವಿಷಯವಾಗಿ ಆಗಿನ ಜನರಲ್ಲಿದ್ದ ಅಭಿಪ್ರಾಯಗಳು ಬಹಳ ಸ್ಪಷ್ಟರೀತಿಯಿಂದ ವ್ಯಕ್ತವಾಡಲ್ಪಟ್ಟಿವೆ. ಈ ಲಾವಣಿಯ ಮಹತ್ವವು ಇದರಲ್ಲಿಯೇ ಇದೆ.

ದಂಡಕ.

ದೊರೆತಾನ ಒಳ್ಳಿತು । ಸರಕಾರ ಕಂಪಣಿಯು ಇರಬೇಕು ಸರಿ। ಇಂಥ ಧರ್ಮದ ದರಬಾರ।

ಕರ್ಮಾಧಿಕಾರಿಗಳ ಗರ್ವವನು ತಾ ಮುರಿದು । ಉರ್ವಿಯೊಳು ವೈಕುಂಠನ ತೆರನಂತೆ ಅದು ತೊರ್ಪುದೆಂದೊರೆಯಲ್ಕೆ ಅಸಾಧ್ಯ !

ಕಿರಿಯರಿಗೆ ಕಿಂಕರನು ಗುರುಗಳಿಗೆರಗಿ । ನಾ ಹಿರಿಯರಿಗೆ ನವಿಸಿ ವಿರಚಿಸಿದೆ ವಿಸ್ತರಿಸಿ । ತಪ್ಪಿದ್ದರೆ ಕ್ಷಮಿಸಿ । ತುಪ್ಪದೊಳಗಿನ ಕಪ್ಪ ಒಪ್ಪದಿಂ ತೆಗೆವಂತೆ ತಪ್ಪನಾರಿಸಿ ತಿದ್ದಿ ।

ದೇಶದೊಳು ಪ್ರಖ್ಯಾತ । ದೋಷವಾಡಿದ ವಿಪರೀತ । ಬಾಜಿರಾಯ ರಘುನಾಥ । ರಾಜ್ಯದಪ್ಪಿದನಾತ । ರಾಜಧಾನಿಯ ಬಿಟ್ಟು । ಪ್ರಜೆಗಳಿಗೆ ಭಯವಿಟ್ಟು । ಪರಸತಿಗೆ ಮನಗೊಟ್ಟು । ಜೆಲುವ ಸತಿಯರನು । ಜುಲುಮೆಯಿಂದ ಹಿಡತರಿಸಿ । ಬಲು ಭಂಗಮುಂ ಬಡಿಸಿ । ಮುರಿಯಾದೆಯು ಶೃಂಗ ಮಾನಿನಿಯರಾಕ್ಷಣದಿ । ಪ್ರಾಣತ್ಯಾಗವ ಮಾಡಲಿನಿತಲ್ಲದವನಿಯೊಳು ಬಲು ದ್ರೋಹಮುಂ ಮಾಡಿ ॥

ಭೂದೇವಿ ಬೇಸತ್ತು ಭುಜಗಶಯನಿಗೆ ಪೇಳಲಜಪಿತನು। ಆ ಕ್ಷಣದಿ ಆಲೋಚನೆಯ ಮಾಡಿ ತ್ಯಜಿಸಬೇಕಿನನಮಲ ಪುಣ್ಯ ತೀರಿತು । ಮುಂದೆ ಉಣ್ಣಾಲಿವ ಕರಕಷ್ಟ । ಹುಣ್ಣಿಮೆಯ ಕಳೆದುಳಿದ ಶಶಿಯಂತೆ ಇರಲಿ । ಎಂದೊಸುಧೆಯೊಳು ವಿಷ್ಣು ತಾನುದಸಿದನೋ । ಬಹು ಧನ್ಯನಾಗಿವರಲ್ಲಿ ಇಂಗ್ರಜರೆಂದೆನಿಸಿ । ಪಾರಜನಕನು ಕ್ಷೀರವಾರುಧಿಯ ತಾ ಬಿಟ್ಟು ॥

ಪುಣೆಯಕ್ಕೆ ಘೇರಿಸಿತು ಮುತ್ತಿಗೆಯು । ನೂರಾರು ಲಕ್ಷ ಸಾವಿರ ಸಂಖ್ಯೆಯಾಗಿ ಒಂದೇ ರೂಪು ಬೇರೆ ಹೆಸರನು ಮತ್ತೆ ಸಾರುವೆನು। ಆ ಜಾನ ಮುಂಡ್ರೋ, ಅಂಡ್ರೆಸ ಚಾಪ್ಲಿನ, ಕ್ಯಾಪೆಟ ಹ್ಯಾರಿಸನ್ನ,

ಕ್ಯಾಪೆಟ ಪಿಲಿಸನ್ನ, ನೆಸಬಿಟ್ಟ, ಮುಲಕಣ, ಯುಲಿಯಾಟ, ಯಂಗ, ಬೆಬ್ಬರ, ಬುರಿನ, ಟಾಕರೀನ ಸಾಹೇಬರಿಂತಾನೇಕ ಸರದಾರರೇಕಾಗಿ ಪುಣೆಯಕ್ಕೆ ಹಾಕಿದರು ಮುತ್ತಿಗೆಯು. ॥

ಹತ್ತಿ ಬತ್ತಲ ಹಯವ । ಎತ್ತಿ ಹಿಡಿದಾಯುಧವ । ಒತ್ತಿ ಬಹ ತೋಪುಗಳ । ಸುತ್ತಲೆ ಚಟಿದಾರ । ಹತ್ತೊಂದು ಮಂದಿಯೊಳು ಮತ್ತೊಬ್ಬ ದಫೇದಾರ । ಬಿತ್ತರದಿ ಲೈನಗಟ್ಟಿ । ಗೊತ್ತಿಲಿ ಬಾರಿಸುವ । ತಂಬೂದ ಲಯದೊಳಗೆ । ಒತ್ತಿ ಊದುವ ಕೊಳಲು ಕಹಳೆ । ಹಂಚಿನ ಹಲಗಿ । ಸ್ವರದಿಂದ ಪಾಡುತ್ತ । ಸರಸರದು ಕೂಡುತ್ತ । ಬುರುಜುಗಳ ಹೂಡುತ್ತ । ಕವಾತಗಳ ಮಾಡಿ । ತೋಪುಗಳ ತಂದ್ಹೂಡಿ । ಮದ್ದಿನಾ ಕೊಲೆಮಾಡಿ । ಬದ್ದ ಅರಿಭಟ ಬಲವ । ಸದ್ದಿಲ್ಲದೋಡಿಸುತ । ಏಣಿಗಳ ಹೂಡಿಸುತ । ಹಲ್ಲಾಯ ಮಾಡಿಸುತ । ಸಲ್ಲಾಯದಿಂದಿಳಿಸಿ । ಕಿಲ್ಲೆಗಳ ತಕ್ಕೊಂಡು । ಬಲ್ಲಿದರೆನಿಸಿ । ಬಯಲ ಭಂಜನೆ ತೋರಿ । ಕೌಲು ಕರಾರು ಮಾಡಿ । ನಡಿಸುವದ ಜನ ನೋಡಿ ॥

ತಮ್ಮೊಳಗೆ ಮಾತಾಡಿ । ಭಡಭಡನೆ ತಾಣೆಗಳ ಗಡಗಡಂಗಳ ಬಿಟ್ಟು । ನಡೆನಡೆದು ತಾವು ಬಂದು । ಕೊಡುವೆವು ಕೌಲೆಂದು । ಕರೆದೊಯ್ಯಲಾಕ್ಷಣದಿ । ಖಾಸಸ್ವಾರಿಯ ಬಿಡಿಸಿ । ನಿಶಾನಿಗಳ ನಿಲಿಸಿ । ಭಾಷೆ ಭರವಸೆ ಕೊಡಿಸಿ । ದೇಶ ದೇಶಗಳೆಲ್ಲ ಕೈವಶವಾದ ಬಳಿಕ ॥

ಬಾಜಿರಾವಜಿಯ ಕರಿಸಿ ಫೌಜುಪಹರೆವ ಕೊಡಿಸಿ । ಧರ್ಮ ಸರಿದುದು ನಿನ್ನ ಕರ್ಮ ಹೆಚ್ಚಿರುವದು । ನಿರ್ಮಳ ಮನಸಿನಲ್ಲಿ ಬ್ರಹ್ಮಾವರ್ತದಿ ಕುಳಿತು । ಬೊಮ್ಮನ ಪಿತ ಹರಿಯ ಸುಮ್ಮನೆ ಧ್ಯಾನಿಸುತ। ಕರ್ಮಜಪವ ಮಾಡೆಂದು । ಕಾಶೀಯಾತ್ರೆಗೆ ಕಳಿಸಿ । ಶಾಸನವ ನೆಲೆಗೊಳಿಸಲೇಸೇಸು ಸುಭೆಗಳನು ಸ್ಥಾಪಿಸಿದರೆಂತೆನಲು ॥

ಸುಭೆಗಧಿಕ ಸುಭೆದಾರ ಸಮನಿಸ ಸಿರಸ್ತಾರ । ತರ್ವಾಯ ಜೇಷ್ಠರ ಬರಿವಂತ ಗುಮಾಸ್ತರು ಬೇರ್ಮತ್ತೆ ಮುನಿತಿ ರಿಪೂಟ ಸಾರಾಫ ಸನುತ್ತಿಂಗೆ ಜಿಲ್ಲೆದಾರ । ಕ್ರಮದಿಂದ ಪೆಸರಿಟ್ಟ ತಾಲೂಕ ಪತ್ತೆಂಟು ಮಾಡಿಯಾಳ್ವ ಸರ್ಕಾಟಿ । ಸಬ್ಬತುಕಡಿಯೊಳಗೊಬ್ಬ ಸರದಾರನೇ ಇಪ್ಪು । ಕಾರ್ಭಾರ ನಿರ್ವಹಿಪ ವಿಸ್ತಾರ ಮಾಡಿ ಪೇಶ್ವೆ ಬಂಗಲೆಯ ಶೃಂಗಾರ ।

ತಂಗಾಳಿ ಬರುವಂತೆ ತೆಗಿದಿದ್ದ ಖಿಡಿಕಿಗಳು । ಬಿಗಿದಿದ್ದ ಮುಡಿಕೆಗಳು । ಕನ್ನಡಿಯ ಬೆಳಕಿನೊಳು ಥಳಥಳನೆ ಹೊಳೆವಂಥ ಅಚ್ಚಗಚ್ಚಿನ ಭಿತ್ತಿ । ಹೊಚ್ಚಿರುವ ಹಂಚಿನ । ಕಚ್ಚೇರಿಯ ಮಧ್ಯದಲಿ। ಅಚ್ಯುತನ ತರನಾಗ ಕುಳಿತಿರುವ ಸಮಯದಲಿ ।

ಬರಲೊಬ್ಬ ವಕೀಲ್ ಪರಾಕು ಹೇಳುವರು । ಸಾಹೇಬ ಮೆಹರ್ಬಾನ ಗರೀಬ ಪರವರ ಸಲ್ಲಾ ... ಸಲ್ಲಾವು । ಇಂತೆಂದು ಹೊತ್ತಿರುವ ಬೆತ್ತದವರಾರ್ಜುವಿಯ ಚಿತ್ತೈಸುವನಿತರೊಳ್

ಭರದಿಂದ ಮುನಿಸಿಗಳು । ಕರದೊಳಗೆ ಕಾಗದವ ಥರಥರದಿ ಹಿಡಕೊಂಡು ಅರ್ಜ ಮಾಡುವರಿಂತು ಖಾವಂದ್ರಿ ಅರ್ಜಿ । ತಾಲೂಕ ವಿರ್ಜಿ । ಕೃಷ್ಣಾ ಬನಾಜಿ । ದೇಶಮುಖ ವೃತ್ತಿ । ವತನ ಹೈ ಸುಜಪ್ತಿ। ಕರ್ನಾ ದರ್ಖಾಸ್ತಿ । ಖತ್ತ ... ಕರ ದೀಯ । ಕೂಚ ದಿಖತ ನೈ। ಆಯೆ ಬಹುತ ರೋಜಸಿ । ಹೋಯ್ ಮುಝೋ ಬಾಪ ಮಾಯೆ । ಐಸಾ ಅರ್ಜ ಪೂಛೈ ಕರ ಅಚ್ಛಾ ಕೆಂ ನೈ ಹೋತೀ । ..... ಹಮೆಖುದ್ವ ಆತಾ ಕಹತ ಕರ ದೇತಿ । ಎಂದ್ಹೇಳಿ ಕಳುಹಲು ॥

ಕಳವು ಖೂನಿಯ ಜನರ ನೇಣ್ಗಳಿಂ ತೊಳ್ಗಟ್ಟಿ ಅಳ್ಳಳು ತರೆ। ನೋಡಿ ಹೇಳ್ ಖರೆಯ ಮಾಡಿದ್ದ । ಖೂಳ್ ಮುಂಡೆ ಮಗನೆನಲು ಗದ್ಗದನೆ ನಡುಗುತ್ತ। ಹೃದಯ ತಲ್ಲಣಿಸುತ್ತ ಹೆದರಿ ಹೌದೆಂದೆನಲು । ಬುಕ್ಕದೊಳಗಿನ ನೀತಿ ವಿಕ್ಕ ಪಂಡಿತ ಶಾಸ್ತ್ರ ತಕ್ಕಷ್ಟು ಪೇಳುವೆನು॥

ಕೊಂದವಗೆ ಗಲ್ಲು ಕಳವ ತಂದವಗೆ ಕಾಲ್‌ಬೇಡಿ । ಎಂದು ಬರೆದಿಹ ನೀತಿಶಾಸ್ತ್ರಗಳನೋದಿಸುತ । ದೋಷರುಜು ಮಾಡಿಸುತ ಬೇಡಿಗಳ ಜೋಡಿಸುತ । ಪೇಟಿಗವನೆಳೆದೊಯ್ದು। ತಿವಟಣೆಯೊಳು ಪೊಗಿಸಿ। ನೀಟು ಸುಣ್ಣವ ಬರೆದು। ಕೊಂಟಿ ಮಹಸೂಲ ಮಾಡಿ। ಪಾಪಿಸರ ಪಾಪವನು ಪರಿಹರಿಸುತ ಲಿತ್ತ

ಈರ್ವರು ದಿವಾನರು ಸಾರ್ವಭೌಮಿಕರಾಗಿ ಸೂರ್ಯ ಚಂದ್ರಮನಂತೆ ತೋರ್ಪರಾ। ಜನದೊಳಗೆ ಧನಿಗೈದು ಮಾತಾಡಿ । ಘನರಭಸವುಂ ಮಾಡಿ। ಕರಣಿಕರ ಕರಿದಾಗ ಬರಿಯುರೈ ಲಿಕ್ಕವನು । ದೊರೆ ಕೋಪ ಹೆಚ್ಚಾಯಿತು । ಬರಲಿ ಇರಸಾಲ್ ಬೇಗ ಸಾಗುವಳಿ ಚಿಂತ್ಯಾ । ಹಾಗು

ಕುಳವಾರ ತಖ್ತೆ + + ಅಜವಾಸಿ ತರವು ಸರತರವು ದೀನನ ಲಿಖ್ಖು। ನೀಟಾಗಿ ಗೆರೆಕೊಯ್ದು ಕಾಸಿಪಟದಂದದಲಿ ಹಾಸಿ। ಸದರಿನ ತಂಬೆಕ ಸುರುವಿ। ಬಿಡದೆ ಬೇರೀಜು ಮಾಡಿದ ಬಳಿಕ। ಬಂದಿರೌ ಜವಾಬಂದಿ ನೆಂದು ಸರ್ವರ ಕರಸಿ ಬರೆಪ ತಾರೀಫವಿದು.

ನಾದಾರ ಕಮ್ಮಿ ನಾಪೀಕ ಕಮ್ಮಿ ದಿನಕಷ್ಟ ಕಮ್ಮಿ ಜನಲಯ ಕಮ್ಮಿ ಪಡಬಾಬ ಕಮ್ಮಿ ಫಸಲ್ ನೋಡಿ ಕಮ್ಮಿ ಕುಳವರ್ಗ ಕಮ್ಮಿ ತರವು ಹೆಚ್ಚು ಕಮ್ಮಿ ತಕರಾರು ಕಮ್ಮಿ ತರತರದಿ ಕಮ್ಮಿಗಳ ಬರೆವುತ್ತ ಸೂಟಿಂದು ಹತ್ತಕೆರಡರ ತೆರಿಗೆ ಸತ್ಯದಿಂದಲಿ ಮಾಡಿ ಒತ್ತಿ ಕೂಗುವರಾಗ ಪಟಗಳ ತಕ್ಕೊಳ್ಳಿ ಸಾಚ್ಛಾ ರೈತರು ನೀವು ಇಷ್ಟು ತೆರಿಗಿಯ ಹೊತುರ್ ಕೊಟ್ಟೇರೊಂದು ದಮ್ಮಡಿಯ

ಪಟ್ಟು ಬಿಟ್ಟಿಗಳಿಲ್ಲ ತಳ್ಳಿತಗಾದಿಲ್ಲ। ಗುಲ್ಲು ಗೂಳಿಗಳಿಲ್ಲ ಬೆಳ್ಳಿ ಬಂಗಾರವೆಲ್ಲ। ಬಯಲಿಗ್ಹರವಿದರೇನೂ + + + ಇಳೆಯೊಳುದ್ದಂಡ। ಪುಂಡ ಪ್ರಚಂಡರು ಬಂಡಾಯಗಳ ಮಾಡೆ। ದಂಡು ಕೂಡಿಸಿ ಬೇಗ ದಂಡಣೆಗಳ ಕೊಂಡು। ಬಂಡಾಯಗಳ ನಿಲಿಸಿ ಮುಂಡಲವ ಪಾಲಿಸುವ ಸರಕಾರ ಛಂದಾ । ವೈಭವದಿ ಇಂದ್ರಾ । ಸತ್ಯಹರಿಶ್ಚಂದ್ರಾ । ನಂತಿರುವರಹುದೆಂದು ಪೃಥ್ವಿಯೊಳು ಕುರ್ತುಕೋಟಿಯ ಕರ್ತು। ಕಲ್ಯೇಶ್ವರನ ಅರ್ಧಿಕುವರನು ಕೃಷ್ಣ ವಿವರಿಸಿದ ದಂಡಕವು ಜಯ ಜಯಾಸ್ತು ಜಯಃ.

ಸಂಗೀತ.

(ಸಂಗೀತ ನಿರ್ದೇಶಕಃ — ಗಾಯನಕಲಾ ಕೋವಿದ ಶ್ರೀ. ಜಿ. ಎಸ್. ಪ್ಯುಕ್ತೆಮಠ.)

—ಃಂಃ—

ಜಗತ್ತಿನಲ್ಲಿ ಪ್ರತಿಯೊಂದು ಪ್ರಾಣಿಗೆ ಆನಂದವು ಬೇಕೇಬೇಕು. ಅನೇಕ ಕಷ್ಟಗಳನ್ನು ಜಯಿಸಿ ಅಪರಿಮಿತ ಆನಂದದಲ್ಲಿ ಮೈಮರೆತು ದುಃಖದ ಅಂಶವೂ ಕೂಡ ಸುಳಿಯದಿರುವ ಸ್ಥಿತಿಯು ಒದಗಬೇಕಾದರೆ ಗಾಯನಹೊರ್ತಾಗಿ ಬೇರೆ ಯಾವದರಿಂದಲೂ ಒದಗುವದಿಲ್ಲ. ಅದಕ್ಕಾಗಿ ಆರ್ಯರು "ಸದ್ಯಃ ಫಲಾನಿ ಗೀತಃ" ಎಂಬಂತೆ ಸಂಗೀತವನ್ನು ಕೇಳಿದ ಮಾತ್ರಕ್ಕೆ ಫಲಪ್ರಾಪ್ತಿಯಾಗುತ್ತದೆಂದು ಹೇಳಿರುವರು. ಸಂಗೀತವೆಂದರೇನು? "ಗೀತಂವಾದ್ಯಂ ನರ್ತನಂ ಚಿತ್ರಂ ಸಂಗೀತಮುಚ್ಯತೆ". ಗೀತ ಎಂದರೆ ಹಾಡುವದು, ವಾದ್ಯ ಅಂದರೆ ವಾದ್ಯಗಳನ್ನು ಬಾರಿಸುವದು, ನರ್ತನವೆಂದರೆ ಕುಣಿಯುವದು, ಇವುಗಳಿಂದ ಕೂಡಿದ ಕಲೆಗೆ ಸಂಗೀತಕಲೆಯೆಂದು ಹೆಸರು. ಇಂಥ ಸಂಗೀತವನ್ನು ಕಲಿಯಬೇಕಾದರೆ ಅದರಲ್ಲಿರತಕ್ಕ ಮುಖ್ಯವಾದ ಸಂಗತಿಗಳನ್ನು ತಿಳಿಯಬೇಕು. ಸಂಗೀತದಲ್ಲಿ 'ಶ್ರುತಿ ಮಾತಾ, ಲಯ ಪಿತಾ' ಸ್ವರವೇ ತಾಯಿಯು. ತಾಳವೇ ತಂದೆಯು. ಕಾರಣ ಇವೇ ಮುಖ್ಯವಾದವುಗಳು. ಇವುಗಳ ಜ್ಞಾನವು ಮೊದಲು ಬೇಕೇ ಬೇಕು. ತಾಳವನ್ನು ಕಲಿಯಬೇಕಾದರೆ ಒಂದೇ ಸಮನಾಗಿ ಪೆಟ್ಟುಗಳನ್ನು ಹಾಕಲಿಕ್ಕೆ ಅದರ ಕೂಡ ಸ. ರಿ. ಗ. ಮ. ಪ. ಧ. ನಿ. ಸ. ಹೀಗೆ ಸ್ವರ ಕೂಡಿಸಿ ಅನ್ನುವದು ಸ್ವಲ್ಪ ಕಠಿಣವಾದ ಪಕ್ಷದಲ್ಲಿ ೧. ೨. ೩. ೪. ೫. ೬. ೭. ೮. ಹೀಗೆ ಲೆಕ್ಕೀಕರಣ ಮಾಡುವ ಕಾಲಕ್ಕೆ ಹೇಗೆ ಅಂಕಿಗಳನ್ನು ಎಣಿಸುವರೋ ಹಾಗೆಯೇ ಎಣಿಸುತ್ತ ೧ ಪೆಟ್ಟಿನಿಂದ ೨ ನೇ ಪೆಟ್ಟಿನ ವರೆಗೆ ಎಷ್ಟು ವೇಳೆಯು ಹತ್ತುವದೋ ಅಷ್ಟೇ ವೇಳೆಯನ್ನು ಮುಂದಿನ ಪೆಟ್ಟಿಗೆ ಉಪಯೋಗಿಸತಕ್ಕದ್ದು.

ಆರೋಹಣ ಅವರೋಹಣವೆಂದರೇನು?

ಆರೋಹಣದ ಮುಖ್ಯ ಅರ್ಥವು ಹತ್ತುವದು. ಅವರೋಹಣವೆಂದರೆ ಇಳಿಯುವದು. ಹಾರ್ಮೋನಿಯುಮ್‌ದಲ್ಲಿ ಎಡದಿಂದ ಬಲಕ್ಕೆ

ಹೋಗುವದು ಆರೋಹ. ಬಲದಿಂದ ಎಡಕ್ಕೆ ಬರುವದು ಅವರೋಹ. ಸಪ್ತಸ್ವರ (ನಾದ) ಗಳಿಂದರೆ ಷಡ್ಜ (ಸ) ಋಷಭ (ರಿ) ಗಂಧಾರ (ಗ) ಮಧ್ಯಮ (ಮ) ಪಂಚಮ (ಪ) ಧೈವತ (ಧ) ನಿಷಾಧ (ನಿ) ಹೀಗೆ ಏಳು ಸ್ವರಗಳಿವೆ. ಅನುಕ್ರಮವಾಗಿ ಸರಿಗಮಪಧನಿ ಎಂದು ಸಂಜ್ಞೆಯುಂಟು.

ಇವುಗಳಲ್ಲಿ ಚಲಸ್ವರ ಅಚಲ ಸ್ವರಗಳುಂಟು. ಚಲಸ್ವರವೆಂದರೆ ಚಲಿಸುವದು. ಭೇದವನ್ನು ಹೊಂದುವದು ಅರ್ಥಾತ್ ಕೋಮಲ ತೀವ್ರವನ್ನು ಅನ್ವಯಿಸುವ ಸ್ವರಕ್ಕೆ ಚಲಸ್ವರವೆನ್ನುತ್ತಾರೆ. ಇನ್ನು ಅಚಲಸ್ವರ ಚಲಿಸದೆ ಇರುವದು ಅಚಲಸ್ವರ. ಉದಾಹರಣೆಃ—ಕಣ ದೊಳಗೆ ಹಂತಿಯನ್ನು ಹೂಡಬೇಕಾದರೆ ಮಧ್ಯದಲ್ಲಿರುವ ಮೇಟಿಯು ಅವಶ್ಯವು ಹೇಗೋ ಮತ್ತು ಎತ್ತುಗಳಿಂದ ತಿರುಗಿದರೂ ಕೂಡ ಆ ಮೇಟಿಯು ಮಾತ್ರ ತಿರುಗುವದಿಲ್ಲ ಹೇಗೋ, ಹಾಗೆಯೇ ಅಚಲಸ್ವರವು ಪ್ರತಿಯೊಂದು ರಾಗದ ತಳಹದಿ ಮತ್ತು ಕೋಮಲ ತೀವ್ರ ಹೊಂದುವದಿಲ್ಲ.

ಷಡ್ಜ (ಸ) ಮತ್ತು ಪಂಚಮ (ಪ) ಇವು ೨ ಸ್ವರಗಳು ಅಚಲಸ್ವರಗಳು. ಇನ್ನುಳಿದ ಐದು ಸ್ವರಗಳು ರಿ. ಗ. ಮ. ಧ. ನಿ. ಇವು ಚಲಸ್ವರಗಳು. ಅಂದರೆ ೫ ಸ್ವರಗಳಲ್ಲಿ ೫ ಕೋಮಲ ಸ್ವರಗಳು ೫ ತೀವ್ರ ಸ್ವರ ೨ ಅಚಲ ಸ್ವರಗಳು ಕೂಡಿ ಒಟ್ಟು ೧೨ ಸ್ವರಗಳಾಗುವವು. ಇವೇ ಸ್ವರಗಳಿಂದ ಬೇರೆ ಬೇರೆ ಜಾತಿ (ವರ್ಗ) ಗಳ ರಾಗಗಳಾಗಿವೆ. ಕನ್ನಡದಲ್ಲಿ ಎಷ್ಟೋ ಕಥೆ ಕಾದಂಬರಿ ಗದ್ಯ ಪದ್ಯಗಳನ್ನು ರಚಿಸಿದರೂ ಕೂಡಾ ಋ ವರ್ಣಗಳಲ್ಲಿಯೇ ಹೇಗೆ ರಚಿಸುವರೋ ಹಾಗೆಯೇ ಸಂಗೀತದಲ್ಲಿಯೂ ಕೂಡ ಅವೇ ೧೨ ಸ್ವರಗಳಲ್ಲಿಯೇ.

ರಾಗಗಳಲ್ಲಿ ಏಳು ವರ್ಗ(ಜಾತಿ)ಗಳುಂಟು. ೧ ಔಢವ. ೨ ಷಾಢವ ೩ ಸಂಪೂರ್ಣ ೪ ಔಢವ ಸಂಪೂರ್ಣ. ೫ ಷಾಢವ ಸಂಪೂರ್ಣ. ೬ ವಕ್ರ. ೭ ಮಿಶ್ರ ಹೀಗೆ ೭ ವರ್ಗಗಳುಂಟು. ರಾಗದ ಆರೋಹ ಅವರೋಹದಲ್ಲಿ ಐದು ಸ್ವರಗಳು ಇದ್ದರೆ ಔಢವ. ೬ ಸ್ವರಗಳಿದ್ದರೆ. ಷಾಢವ. ೭ ಸ್ವರಗಳು ಇದ್ದರೆ ಸಂಪೂರ್ಣ. ಆರೋಹದಲ್ಲಿ ಐದು ಸ್ವರಗಳು. ಅವರೋಹದಲ್ಲಿ ಸಪ್ತಸ್ವರಗಳಿದ್ದರೆ, ಔಢವ ಸಂಪೂರ್ಣ. ಆರೋಹದಲ್ಲಿ ೬ ಸ್ವರಗಳು, ಅವರೋಹದಲ್ಲಿ ೭ ಸ್ವರಗಳು ಇದ್ದರೆ ಷಾಢವ ಸಂಪೂರ್ಣ. ಆರೋಹ ಅವರೋಹದಲ್ಲಿ ಏಂದುಮುಂದಾಗಿ

ಅನ್ನುವದರಿಂದ ವಕ್ರ. ಒಂದು ರಾಗದಲ್ಲಿ ಮತ್ತೊಂದು ರಾಗ ಕೂಡಿಸಿದರೆ ಮಿಶ್ರರಾಗವಾಗುತ್ತದೆ.

ಹಾರ್ಮೋನಿಯಮ್ ಸಂಬಂಧ ಕೋಮಲ. ತೀವ್ರ ಯಾವತ್ತೂ ಚಿನ್ಹೆಗಳು.

ಸ. ರಿ ಈ ರೀತಿ ಯಾವದೇ ಸ್ವರದ ಕೆಳಭಾಗದಲ್ಲಿ ಸಣ್ಣ ಚಿಕ್ಕೆಯಿದ್ದರೆ ಆ ಸ್ವರವು ಮಂದ್ರಸಪ್ತಕದೊಳಗಿನದೆಂದು ತಿಳಿಯತಕ್ಕದ್ದು.

ಸ. ರಿ ಈ ರೀತಿ ಯಾವದೇ ಸ್ವರಗಳಿಗಾಗಲೀ ಚಿಕ್ಕೆಯಿದ್ದರೆ ತಾರ ಸಪ್ತಕದೊಳಗಿನದೆಂದು ತಿಳಿಯತಕ್ಕದ್ದು.

s ಈ ರೀತಿ ಯಾವದೇ ಸ್ವರದ ಮುಂದಾಗಲೀ ಹಿಂದಾಗಲೀ ಅವಗ್ರಹ ಅಥವಾ ಎಸ್ ಚಿನ್ಹವಿದ್ದರೆ ಸ್ವಲ್ಪ ಎಳೆಯಬೇಕು.

ಗರಿ ನಮುಗ ಈ ಪ್ರಕಾರ ನೋಟೇಶನ್ನಿನಲ್ಲಿ ಸ್ವರಗಳ ಕೆಳಗೆ ಗೀಟು ಇದ್ದರೆ ಎಷ್ಟು ಸ್ವರ ಕೂಡಿಸಿದ್ದರೂ ಒಂದು ಸ್ವರ ನುಡಿಯುವ ವೇಳೆಯಲ್ಲಿಯೇ ೨ ಸ್ವರದ ಕೆಳಗಿದ್ದರೂ ಅಥವಾ ಮೂರು ಸ್ವರಗಳ ಕೆಳಗೆ ಗೀಟು ಇದ್ದರೂ ಒಂದೇ ಸ್ವರದ ವೇಳೆಯಲ್ಲಿ ಗಣಿಸಬೇಕು.

ಸ. ರಿ. ಗ. ಮ ಹೀಗೆ ಸ್ವರಗಳ ಮೇಲ್ಭಾಗದಲ್ಲಿ ಅಂಕೆಗಳಿದ್ದರೆ ತಾಳದ ಮಾತ್ರೆ ಎಂದು ತಿಳಿಯಬೇಕು.

೦ ಈ ರೀತಿ ಚಿನ್ಹವಿದ್ದರೆ ಹುಸಿ ಎಂದು ತಿಳಿಯಬೇಕು.

— ೧ ಇದು ಪೆಟ್ಟು ಎಂದು ತಿಳಿಯಬೇಕು.

* ೨ ಇದು ಸಮ್ಮು ಎಂದು ತಿಳಿಯಬೇಕು.

— ೩ ಇದು ಪೆಟ್ಟು ಎಂದು ತಿಳಿಯಬೇಕು.

ಈ ಮೇಲಿನ ಮೂರು ಚಿನ್ಹಗಳಲ್ಲಿ — ಈ ಚಿನ್ಹವೂ ಇದ್ದರೂ ಅಥವಾ ೧ ಈ ಅಂಕಿ ಇದ್ದರೂ ಮೊದಲಿನ ಪೆಟ್ಟು ಎಂದು ತಿಳಿಯಬೇಕು. * ಈ ಚಿನ್ಹ ಮತ್ತು ೨ ಅಂಕಿ ಇದ್ದಲ್ಲಿ ಯಾವದಾದರೂ ಒಂದು ಇದ್ದರೆ ಸಮ್ಮು ಎಂದು ತಿಳಿಯಬೇಕು.

ಸಂಗೀತ ವಚನ.

(ರಾಗ ಭೂಪ)

ತಾಳ ತ್ರಿತಾಳ ಮಾತ್ರಾ ೧೬.

ಈ ರಾಗವು ಕಲ್ಯಾಣ ಥಾಟಿಯೊಳಗಿಂದ ಹುಟ್ಟಿದೆ. ಆರೋಹಣದಲ್ಲಿ ಮ. ನಿ. ವರ್ಜ್ಯ. ಎಲ್ಲ ಸ್ವರಗಳು ತೀವ್ರವಿರುತ್ತವೆ.

ಜಾತಿ (ವರ್ಗ) ಔಢವ

ವಾದಿ ಗಂಧಾರ ಸಂವಾದಿ ಧೈವತ

ಸಮಯ— ರಾತ್ರಿ ೯ ವರೆಗೆ.

ರಾಗದ ಮುಖ್ಯ ಅಂಗ	ಗಪಧಪಗರಿಸ.
ಆರೋಹಣ	ಸರಿಗಪಧಸ.
ಅವರೋಹಣ	ಸಧಪಗರಿಸ.

ಶಾಂತ

೦ ೧ ೨ ೩

ರಿ ಖ ಳ | ರಿ ಖ ಳ | ರಿ ಖ ಳ | ರಿ ಖ ಳ |
ಸ ರಿ ಗರಿ | ಸ ದ ಸ ರಿ | ಗ — ಗ ಪ | ರಿ — ಸ ಸ |
ನೆ ಲ ವಂ | ದೇ ಹೊ ಲ | ನೇ ರಿ ತಿ | ವಾ ಲ ಯಕ್ಕೆ |
ಗ ಗ ಗರಿ | ಗ ಪ ಧ ಪ | ಸ — ಧ ಪ | ನ ರಿ ಸ — |
ಜ ಲ ವಂ | ದೇ ಶಾ ಸ | ಜಾ ಡ ಮ | ನ ಸ ಕೆ ಸ ॥೫॥

ಪ್ರಕೃತಿ ಗಂಭೀರ

ಅಂತರ

ಗ ಗ ಗರಿ	ಗ ಪ ದ ಪ	ಸ. — ಸ.	ದ ಸ ರ್ಸ	ಸ. ದ ಸ.
ಕು ಲ ವಂ	ದೇ ಷ ಡು	ತಾ ಸ ನ ರಿ.	ನ ಸ ರ್ಸ	ಸ. ಸ.
ರ. ಸ. ದ	ರ. — ಸ. ದ	ಡ ದ ಪ ರಿ.	ಮು ಂ ದ	ಸ. ಸ.
ನಿ ಲ ವಂ ಸ	ದೇ ನ ಸ ಮ್ಮ	ಲ ಪ ರಿ.	ಸಂ ಸ — ಧ	ಸ. ಸ.
		ಸಂ ನ ರಿ	ಸ ಸ ಸ	ಸ. ಸ.
		ಸ ರಿ ಸ	ಖಿಲ ಸ ಪ	ಸ. ಸ.
		ಖಿಲ ಸ ಪ	ಸ ಸ ಸ	॥೧॥

ಬಸವಣ್ಣ

ಹೊಲೆ ಹೊಲೆಯೆನ್ನುತಲೀ ಭಾರತವ,
ಹೊಲೆತನಕಿಳಿಸಿದರೀ ಜನರು !!
ಹೊಲೆತನ ತುಂಬಿದೆ ಜನವುನವೆಲ್ಲ.
ಹೊಲಸು ನಾರುತಿದೆ ಜೀವನವು !! ॥೧॥

ಧರ್ಮದ ಬಾವುಟ ಕೈಯೊಳು ಹಿಡಿದು,
ಧರ್ಮದ ಕೊಲೆ ಮಾಡುತಲಿಹರು !!
ಜಾತಿ ಭೇದ ಕಿಡಿ ಹೊತ್ತಿಸಿ ಭಾರತ–
–ಸಿರಿವನೆ ಸುಡುತಲಿ ನಡೆದಿಹರು !! ॥೨॥

ಧನವೇ ಜೀವನ ಗುರಿಯೆಂದರಿದು,
ಧನಿಕರು ಧನಕೆ ದಾಸಾಗಿಹರು.
ಧನಲಕ್ಷ್ಮಿಯ ತಾವೊಲಿಸಲು ಕಟುಕರು
ದೀನ ಜನರ ಬಲಿ ಕೊಡುತಿಹರು !! ॥೩॥

ಕಾಯಕವೆಂಬುದು ಕೀಳಾಯ್ತೆಂದು,
ಸೂಸಿದ ಸಿರಿಹೊಳೆ ಬತ್ತಿಹುದು !!
ಬಡತನ ನರಕದಿ ಬಳಲುವ ಜನರು,
ಬಸವ ನಿನ್ನನೇ ಕೂಗುವರು !! ॥೪॥

— ಬಬಲೇಶ್ವರ ಸಿ. ಸಿದ್ಧವೀರ
ವಿಜಯಪುರ.

ಅಣ್ಣಲದೇವಿ.

'ಕದಿರ ರೆವ್ಮಯ್ಯ ಎಂಬ ಶಿರೋಲೇಖದ ಕೆಳಗೆ ಹಿಂದಿನ ಕಥೆಯನ್ನು ನಾವು ಬರೆದಿದ್ದು ಅದನ್ನು ಅಚ್ಚು ಹಾಕಿದ ಬಳಿಕ 'ದೇವಿಯರ ತ್ರಿವಿದಿ'ಯಲ್ಲಿ 'ಅಣ್ಣಲಾದೇವಿ' ಎಂಬ ಶಿವಶರಣೆಯ ವಿಷಯವಾಗಿ ಉಲ್ಲೇಖವಿದ್ದ ಕೆಳಗಿನ ನುಡಿಯು ನಮ್ಮ ದೃಷ್ಟಿಗೆ ಬಿದ್ದಿತು. ಇದು ಅವುದೆಂದರೆ:—

ಚಿಣ್ಣನುರುಗನು ಕಡಿಯೆ । ಕಣ್ಣೀರ ತರದೆ ಮು
ಕ್ಕಣ್ಣ ನಿರ್ಮಿತದಿ ಮಣ್ಣಿನೊಳು ಮಡುಗಿದ
ಅಣ್ಣಲಾದೇವಿ ಶರಣಾಗು

ಕದಿರ ರೆವ್ಮಯ್ಯನ ಕಥೆಯಲ್ಲಿ ಬಂದ ಅಣ್ಣಲದೇವಿಯೇ ಈಕೆ ಎಂಬುದು ಸ್ಪಷ್ಟವು. ಅದರಲ್ಲಿ ಕದಿರ ರೆವ್ಮಯ್ಯನಕಿಂತಲೂ ಅಣ್ಣಲದೇವಿಯ ನಡೆಯೇ ಮಹತ್ವದ್ದಿರುವದರಿಂದ ಆಕೆಯೇ ಕಥಾನಾಯಕಳೆಂದು ತಿಳಿಯುವದು ಯೋಗ್ಯವು. ಆದ್ದರಿಂದ ಕದಿರ ರೆವ್ಮಯ್ಯನ ಚರಿತ್ರೆಯು 'ಅಣ್ಣಲದೇವಿಯ ಚರಿತ್ರೆ' ಎಂದು ವಾಚಕರು ಭಾವಿಸಬೇಕೆಂದು ನಮ್ಮ ಸೂಚನೆ ಇದೆ. ಭೀಮಕವಿ ಮೊದಲಾದವರು ಬರೆದ ಚರಿತ್ರೆಗಳಲ್ಲಿ ಇದು ಕದಿರ ರೆವ್ಮಯ್ಯನ ಕಥೆ ಎಂದು ಹೇಳಿರುವದರಿಂದ ಇದೇ ಹೆಸರನ್ನು ನಾವು ಹಿಂದೆ ಉಪಯೋಗಿಸಿದ್ದೇವೆ. ಆದರೆ ಇದು ಅಣ್ಣಲದೇವಿಯ ಕಥೆ ಎಂದು ವಾಚಕರು ತಿಳಿಯುವದು ಯುಕ್ತವೆಂದು ನಮಗೆ ತೋರುತ್ತದೆ.

ನಿಜಲಿಂಗ ಚಿಕ್ಕಯ್ಯ.

ಕಾಶ್ಮೀರ ದೇಶದಲ್ಲಿ ಒಂದು ಲಕ್ಷ ಇಪ್ಪತ್ತೈದು ಸಾವಿರದ ಒಂದು ಪ್ರಾಂತವಿದ್ದು, ಅದರ ರಾಜಧಾನಿಯು ಮಾಂಡವ್ಯಪುರವೆಂಬುದಾಗಿತ್ತು. ಅದನ್ನು ಮಹಾದೇವ ರಾಜನೆಂಬ ಹೆಸರಿನ ರಾಜನು ಆಳುತ್ತಿದ್ದನು.[೧]

(೧) ಕೆಲವು ಪ್ರತಿಗಳಲ್ಲಿ ಮಹಾದೇವರಾಜ ಎಂದಿದೆ. ಆದರೆ ಇದು ಸ್ತ್ರೀವಾಚಕವಾಗಿ ಅವುಗಳಲ್ಲಿಲ್ಲ. ಮಹಾದೇವ ರಾಜನೇ ಈ ಹೆಸರಿನ ರಾಜನಾಗಿದ್ದಾನೆ.

ಅವನು ಅತ್ಯಂತ ಧರ್ಮಿಷ್ಠನು, ಶಿವಭಕ್ತಿಯುಳ್ಳವನು ಮತ್ತು ಮಾಹೇಶ್ವರರಲ್ಲಿ ವಿಶ್ವಾಸವುಳ್ಳವನು. ಅವನು ಮಾಹೇಶ್ವರರ ಪೂಜೆ ಇಲ್ಲದೆ ಎಂದೂ ಆಹಾರವನ್ನು ಸ್ವೀಕರಿಸುತ್ತಿದ್ದಿಲ್ಲ. ಹೀಗಿರಲು ಅವನು ತನ್ನ ರಾಜ್ಯದಿಂದ ಬಹುಜನ ಮಾಹೇಶ್ವರರು ಕಲ್ಯಾಣ ಪಟ್ಟಣಕ್ಕೆ ಹೋಗುತ್ತಾ ಇರುವರೆಂತಲೂ ಕೆಲವೊಂದು ದಿನ ಬಸವೇಶ್ವರನು ಅವರಲ್ಲಿ ಆರು ಸಾವಿರ ಜನರನ್ನು ಕದ್ದೊಯ್ದನೆಂತಲೂ ಕೇಳಿ, ಹೀಗೆ ಮಾಹೇಶ್ವರರು ತನ್ನ ರಾಜ್ಯವನ್ನು ಬಿಟ್ಟು ಹೋದಲ್ಲಿ ತನ್ನ ಮತ್ತು ಪ್ರಜೆಗಳ ಧರ್ಮಾಚರಣೆಗೆ ಭಂಗ ಬರುವದೆಂದು ಅವನಿಗೆ ತೋರಿ ಇದಕ್ಕೆಲ್ಲ ಕಾರಣನು ಬಸವೇಶ್ವರನೇ ಎಂದು ತಿಳಿದು, ಅವನನ್ನು ಕೊಲ್ಲಿಸಬೇಕೆಂದು ನಿಶ್ಚಯಿಸಿದನು. ಆ ಮೇಲೆ ಅವನು ತನ್ನ ಪರಿವಾರದಲ್ಲಿದ್ದ ಇಬ್ಬರು ಭಟರನ್ನು ಗೊತ್ತುಪಡಿಸಿ ಬಸವೇಶ್ವರನನ್ನು ನೀವು ಕೊಂದು ಹಾಕಿ ಬರಬೇಕೆಂದು ಹೇಳಿ ಅವರನ್ನು ಕಲ್ಯಾಣಕ್ಕೆ ಕಳಿಸಿದನು!

ಮಹಾದೇವರಾಜನು ಮುಂದೆ ಕೆಲವು ಕಾಲದ ನಂತರ ತನ್ನ ರಾಜ್ಯವನ್ನು ಬಿಟ್ಟು ತಾನೇ ಕಲ್ಯಾಣಕ್ಕೆ ಬಂದು ಅಲ್ಲಿ ಕಟ್ಟಿಗೆ ಹೊರುವ ಕಾಯಕವನ್ನು ಮಾಡುತ್ತ ಶಿವಾನುಭವ ಮಂಟಪದಲ್ಲಿದ್ದುಕೊಂಡು ವಚನಗಳನ್ನು ರಚಿಸುತ್ತ ಮೋಳಿಗೆಯ ಮಾರಯ್ಯನೆಂದು ಪ್ರಸಿದ್ಧನಾದನು. ಅದರೆ ಅದಕ್ಕೂ ಪೂರ್ವದಲ್ಲಿ ಅವನು ರಾಜ್ಯಪದದಲ್ಲಿದ್ದಾಗಲೆ ಶಿವಭಕ್ತನಾಗಿದ್ದರೂ ಶಿವಾನುಭವದ ರೀತಿಯನ್ನು ಅವನು ಅರಿಯದವನಾಗಿದ್ದನು. ಅದರೆ ಮುಂದೆ ಅವನು ಬಸವೇಶ್ವರನ ಸಾಂಪ್ರದಾಯವನ್ನು ಹೊಂದಿ ಅವನ ಬಗ್ಗೆ ಭಕ್ತಿಭಾವವನ್ನು ವಹಿಸಿ ತನ್ನ ಹೆಂಡತಿಯೊಡನೆ ಕಲ್ಯಾಣ ಪಟ್ಟಣಕ್ಕೆ ಬರುವವನಾದನು. ಇಂಥವನು ಒಂದು ಕಾಲಕ್ಕೆ ಬಸವೇಶ್ವರನ ವಿಷಯವಾಗಿ ವೈರಭಾವವನ್ನು ತಾಳಿ ಅವನನ್ನು ಹೀಗೆ ಕೊಂದು ಹಾಕಲು ಮನಸ್ಸು ಮಾಡಿದ್ದು ವಿಚಿತ್ರವಾಗಿದೆ. ಅದರೆ ದೈವಸಂಕಲ್ಪವು ಬೇರೆಯಾಗಿರುತ್ತದೆ. ಹೀಗೆ ಯಾವನು ಈ ರೀತಿ ನಡೆದನೋ ಅವನೇ ಸ್ವಲ್ಪ ಕಾಲದಲ್ಲಿ ಬಸವೇಶ್ವರನ ಕೇವಲ ಭಕ್ತನಾದನು. ಇಷ್ಟೇ ಅಲ್ಲ, ಶಿವಶರಣರಲ್ಲಿ ಶ್ರೇಷ್ಠನೆಂದೆನಿಸಿಕೊಂಡನು.

---

(೦) ಮೋಳಿಗೆ ಮಾರಯ್ಯನ ಕಥೆ ಇದೇ ಗ್ರಂಥದ ಪುಟ ೨೨೫ ನೋಡಿರಿ.

ಮಹಾದೇವರಾಜನು ಹೀಗೆ ಗೊತ್ತುಮಾಡಿಕೊಂಡು ತನ್ನ ನಂಬಿಗೆಯ ಇಬ್ಬರು ರಾಜಭಟರನ್ನು ಕರಿಸಿ ಬಸವೇಶ್ವರನನ್ನು ನೀವು ಕೊಂದು ಹಾಕಿರೆಂದು ಅವರಿಗೆ ಹೇಳಿ ಕಳಿಸಿ ಕೊಟ್ಟ ಬಳಿಕ ಅವರು ಕಲ್ಯಾಣಕ್ಕೆ ಬಂದು ಅಲ್ಲಿಯೇ ನಿಂತುಕೊಂಡರು. ಅವರು ಅಲ್ಲಿ ಬಹು ಜನ ಜಂಗಮರು ಬಸವೇಶ್ವರನ ಅರಮನೆಗೆ ದಿನಾಲು ಭೋಜನಕ್ಕೆ ಹೋಗುವದನ್ನು ನೋಡಿ ಅವರೊಡನೆ ತಾವೂ ಬಸವೇಶ್ವರನಲ್ಲಿಗೆ ಹೊಗಬೇಕೆಂದು ಸಂಚು ಮಾಡಿ ತಮ್ಮ ಸರ್ವಾಂಗಕ್ಕೆಲ್ಲ ಭಸ್ಮವನ್ನು ಉದ್ಧೂಳನ ಮಾಡಿಕೊಂಡು ರುದ್ರಾಕ್ಷಿಗಳನ್ನು ಧರಿಸಿ ತಮಗೆ ಲಿಂಗವಿಲ್ಲದಿರಲು ಒಂದೊಂದು ಚಿಕ್ಕ ಬದನೆಯ ಕಾಯನ್ನು ಲಿಂಗದಂತೆ ವಸ್ತ್ರದಲಿ ಕಟ್ಟಿ ಕೊರಳಲ್ಲಿ ಧರಿಸಿಕೊಂಡು ಎಲ್ಲರೊಡನೆ ಬಸವೇಶ್ವರನ ಅರಮನೆಯನ್ನು ಪ್ರವೇಶಿಸಿದರು. ಆಗ ಅವರು ಒಂದು ಕತ್ತಾರಿಯನ್ನು ತಮ್ಮ ವಸ್ತ್ರದಲ್ಲಿ ಮುಚ್ಚಿಕೊಂಡು ಅಲ್ಲಿ ಭೋಜನಕ್ಕೆ ಕುಳಿತರು. ಅಲ್ಲಿ ಲಿಂಗಪೂಜಾ ಕಾರ್ಯಗಳೂ ಪಾದೋದಕ ಪ್ರಸಾದ ಗ್ರಹಣವೂ ಬಹು ಸಂಭ್ರಮದಿಂದ ನಡೆದಿದ್ದವು. ಮಂದಿರದಲ್ಲಿದ್ದ ಭಕ್ತಿಭಾವಪೂರಿತವಾದ ವಾತಾವರಣವನ್ನು ನೋಡಿ ಅವರ ಮನಸ್ಸು ತಿರುಗಿತು. ಬಸವೇಶ್ವರನನ್ನು ಕೊಂದುಹಾಕಬೇಕೆಂಬ ಅವರ ಮೊದಲಿನ ಇಚ್ಛೆಯು ಸಡಿಲಾಗಹತ್ತಿತು.

ಅಷ್ಟರಲ್ಲಿ ಬಸವೇಶ್ವರನು ಅವರಿದ್ದಲ್ಲಿಗೆ ಬಂದು ತನ್ನ ಅಂತರ್ಜ್ಞಾನದಿಂದ ಅವರ ಮನೋಗತವನ್ನು ಕೂಡಲೆ ತಿಳಿದವನಾಗಿ ಅವರಿಗೆ—ನೀವು ಸಂಗಮೇಶ್ವರನ ಪಾದವನ್ನು ಕಾಣಲು ಬಂದಿರುವಿರಾ? ಲೇಸಾಯಿತು! ನೀವು ನಿಮ್ಮ ಲಿಂಗಪೂಜೆಯನ್ನು ಪ್ರಾರಂಭಿಸಿರಿ, ಎಂದು ನುಡಿಯಲು ಅವರ ಪಾಪದ ಯೋಚನೆಯು ಅಲ್ಲಿಯೇ ಅಡಗಿತು. ಬಸವೇಶ್ವರನು ಪಂಚಪರುಷಗಳನ್ನು ಸಾಧಿಸಿದವನು. ಆದ್ದರಿಂದ ಅವನು ನೋಟಪರುಷವುಳ್ಳವನಾಗಿ ಆ ಕೊಲೆಗಡಕರು ಧರಿಸಿದ್ದ ಬದನೆಯ ಕಾಯಿಗಳನ್ನು ಅಂತರ್ದೃಷ್ಟಿಯಿಂದ ನೋಡಲು ಅವರು ಹಿಂದೆ ಮಾಡಿದ ಪಾಪಗಳೆಲ್ಲವೂ ಹೋಗಿಬಿಟ್ಟಿದ್ದವು. ಮತ್ತು ಆ ಬದನೆಯ ಕಾಯಿಗಳು ಅಲ್ಲಿಯೇ ಇಷ್ಟಲಿಂಗಗಳಾಗಿದ್ದವು. ಅಷ್ಟರಲ್ಲಿಯೇ ಆ ಉಭಯತರಿಗೆ ಬಸವೇಶ್ವರನು ಲಿಂಗಪೂಜೆಯನ್ನು ಮಾಡಿರೆಂದು ಹೇಳಲಾಗಿ ಅವರು ಅವನ ಆಜ್ಞೆಯನ್ನು ಮೀರಲಾರದೆ ತಮ್ಮ ಕೊರಳಲ್ಲಿದ್ದ ವಸ್ತ್ರದ ಗಂಟನ್ನು

ಗಾಬರಿಯಾಗಿ ನಡುಗುತ್ತ ಮೆಲ್ಲನೆ ಬಿಚ್ಚಿನೋಡುವಷ್ಟರಲ್ಲಿ ಅವು ಲಿಂಗಗಳಾಗಿದ್ದನ್ನು ಕಂಡರು. ಆಗ ಅವರು ಪಶ್ಚಾತ್ತಾಪಬಟ್ಟು ತಮ್ಮ ಕಠಾರಿಗಳನ್ನು ಅಲ್ಲಿಯೇ ಚಲ್ಲಿಕೊಟ್ಟು ಬಸವೇಶ್ವರನಿಗೆ ನಮಸ್ಕರಿಸಿ ಅವನ ಕ್ಷಮೆಯನ್ನು ಬೇಡಿಕೊಂಡರು ಮತ್ತು ತಮ್ಮನ್ನು ಲಿಂಗಧಾರಿಗಳನ್ನಾಗಿ ಮಾಡಬೇಕೆಂದು ಕೇಳಿಕೊಂಡರು. ಆಗ ಬಸವೇಶ್ವರನು ಅವರಿಗೆ— ಈಗ ನಿಮ್ಮ ಕೊರಳಲ್ಲಿರುವ ಲಿಂಗಗಳೇ ನಿಮ್ಮ ಇಷ್ಟಲಿಂಗಗಳಾಗಿವೆ, ಇಂದು ನೀವು ನಿಮ್ಮ ಭವಿಜನ್ಮವನ್ನು ಕಳೆದು ಭಕ್ತರಾಗಿದ್ದೀರಿ, ಎಂದು ನುಡಿದು ಅವರಿಗೆ ಚೋರ ಚಿಕ್ಕಯ್ಯ ಮತ್ತು ನಿಜಲಿಂಗಚಿಕ್ಕಯ್ಯ ಎಂಬ ಹೆಸರುಗಳನ್ನಿಟ್ಟನು. ಅಂದಿನಿಂದ ಅವರು ಈ ಹೆಸರುಗಳಿಂದಲೇ ಕಲ್ಯಾಣದಲ್ಲಿ ಪ್ರಸಿದ್ಧರಾದರು.

ಇವರಲ್ಲಿ ನಿಜಲಿಂಗಚಿಕ್ಕಯ್ಯನು ಮುಂದೆ ಶ್ರೇಷ್ಠ ಶಿವಾನುಭವಿಯಾದನು. ಅವನು ಬಸವೇಶ್ವರನ ಅಪ್ಪಣೆಯಂತೆ ಬಿಜ್ಜಳನ ಕಾಯಕವನ್ನು ಕೈಕೊಂಡು ಕಲ್ಯಾಣದಲ್ಲಿ ವಾಸಮಾಡಹತ್ತಿದನು. ಅವನು ದಿನಾಲು ತಾಡವೋಲೆಯ ಗಿಡಗಳನ್ನು ಹುಡಿಕಿಕೊಂಡು ಹೋಗಿ ಅವುಗಳ ಎಲೆಗಳನ್ನು ಸಂಗ್ರಹಿಸಿ ಅವುಗಳನ್ನು ಬರಹಗಾರರಿಗೆ ಮಾರುವ ಅಂಗಡಿಯನ್ನಿಟ್ಟನು. ಅವುಗಳನ್ನು ಮಾರಿ ಬಂದುದರ ಮೇಲೆ ತಾನು ಉಪಜೀವಿಸುತ್ತ ಉಳಿದುದನ್ನು ದಾಸೋಹಕಾರ್ಯಗಳಿಗೆ ಸಲ್ಲಿಸುವನು. ಅವನು ತಪ್ಪದೆ ಶಿವಾನುಭವಮಂಟಪಕ್ಕೆ ಹೋಗಿ ಅಲ್ಲಿಯ ಶಿವಾನುಭವ ಗೋಷ್ಠಿಗಳಲ್ಲಿರುವನು. ಅಲ್ಲದೆ ತಾನೂ ತನ್ನ ಅನುಭವಗಳನ್ನು ಕುರಿತು ವಚನಗಳನ್ನು ರಚಿಸುವನು. ಅವನ ಮುದ್ರಿಕೆಯು 'ಉಳಿಯುಮೇಶ್ವರಾ' ಎಂದಿದೆ. ಈ ವಚನಗಳಲ್ಲಿ ಕೆಲವುಗಳನ್ನು ನಾವು ಮಾದಿರಿಗಾಗಿ ಈ ಚರಿತ್ರೆಯ ಅಂತ್ಯದಲ್ಲಿ ಕೊಟ್ಟಿದ್ದೇವೆ. ಈ ಮೇರೆಗೆ ಚಿಕ್ಕಯ್ಯನು ಕಲ್ಯಾಣದಲ್ಲಿ ಒಬ್ಬ ಶ್ರೇಷ್ಠ ಶಿವಾನುಭವಿ ಎಂದು ಹೆಸರಾದನು.

ಪಂಚಾಕ್ಷರೀ ಮಂತ್ರಸ್ಮರಣೆಯೇ ಚಿಕ್ಕಯ್ಯನ ಶಿವಾನುಭವದ ಮುಖ್ಯ ನಡೆಯಾಗಿತ್ತು. ಅವನು ಕಲ್ಯಾಣ ಪಟ್ಟಣದ ಹೊರಗೆ ಯಾವುದಾದರೂ ಒಂದು ಏಕಾಂತಸ್ಥಳವನ್ನು ಆಯ್ದು ಅಲ್ಲಿಗೆ ಹೋಗಿ ಅಲ್ಲಿಯೇ ಅವನು ಮಂತ್ರವನ್ನು ಜಪಿಸುತ್ತ ಲಿಂಗಧ್ಯಾನದಲ್ಲಿ ಪರವಶನಾಗುವನು. ಅವನು

ಜನರ ಸಂದಣಿಯಲ್ಲಿ ತನ್ನ ಪೂಜಾದಿ ಕಾರ್ಯಗಳನ್ನು ನೆರವೇರಿಸನು. ಅವನು ಶಿವಾನುಭವಿಗಳಲ್ಲಿ ಪ್ರಾಣಲಿಂಗಿಸ್ಥಳದವನೆಂದು ಪ್ರಸಿದ್ಧನಾದನು. ಅವನು ಪೊದಲು ಸಂಸೆಯನ್ನು ಮಾಡಲು ಬಂದ ಒಬ್ಬ ಕ್ರೂರ ಭಟನು. ಆದರೆ ಮುಂದೆ ಬಸವೇಶ್ವರನ ಸನ್ನಿಧಾನದಿಂದ ಅವನು ತನ್ನ ಪೊದಲಿನ ಉಗ್ರ ಸ್ವಭಾವವನ್ನು ಬಿಟ್ಟು ಶಿವಾನುಭವಮಂಟಪದಲ್ಲಿ ಉಚ್ಚ ಸ್ಥಾನವನ್ನು ಪಡೆದು ಒಬ್ಬ ಶ್ರೇಷ್ಠ ವಚನಕಾರನಾದನು.

ಹೀಗಿರುವಲ್ಲಿ ಒಂದು ದಿವಸ ಅವನು ಪಟ್ಟಣದ ಮಾರ್ಗದಿಂದ ಹೋಗುತ್ತಿರಲು ತಳವಾರರ ತಂಡದ ನಾಯಕನಾದ ಗಂಗಯ್ಯನೆಂಬುವನು ಅವನನ್ನು ಇದಿರಿಗೆ ಕಾಣಲು ಗಂಗಯ್ಯನು ಅವನನ್ನು ಭೋಜನಕ್ಕೆಂದು ತನ್ನ ಮನೆಗೆ ಕರೆದುಕೊಂಡು ಹೋದನು. ಆಗ ಅವನು ಚಿಕ್ಕಯ್ಯನ ಪಾದಾರ್ಚನೆಯನ್ನು ಮಾಡಿ ಅವನಿಗೆ ಶಿವಾರ್ಚನೆಯನ್ನು ಪಣಾಡಿಸಿ ಅವನ ಪಾದೋದಕ ಪ್ರಸಾದವನ್ನು ಸಲಿಸುತ್ತಿರಲು ಬಿಜ್ಜಳನ ಅರಮನೆಯಲ್ಲಿ ಯಾರೋ ಕನ್ನವನ್ನಿಕ್ಕಿ ಒಳಗಿನ ದ್ರವ್ಯವನ್ನು ಅಪಹರಿಸಿದ್ದಾರೆಂಬ ವಾರ್ತೆಯು ಬಂದಿತು. ಕೂಡಲೆ ಗಂಗಯ್ಯನು ಚಿಕ್ಕಯ್ಯನಿಗೆ— ನೀವು ಈ ದಿನ ಇಲ್ಲಿಯೇ ಪವಡಿಸಿರಿ. ನಾನು ಬಿಜ್ಜಳನಲ್ಲಿಗೆ ಹೋಗುತ್ತೇನೆ ಎಂದು ಹೇಳಿ ಹೊರಟುಹೋದನು. ಆದ್ದರಿಂದ ಚಿಕ್ಕಯ್ಯನು ಆ ರಾತ್ರಿ ಅವನ ಮನೆಯಲ್ಲಿಯೇ ಪವಡಿಸಿದನು.

ಹೀಗಿರುವಲ್ಲಿ ರಾತ್ರೆಯಲ್ಲಿ ಜಾರಿಣಿಯಾದ ಗಂಗಯ್ಯನ ಹೆಂಡತಿ ಜೆನ್ನಾಜಿ ಎಂಬವಳು ಚಿಕ್ಕಯ್ಯನನ್ನು ಜಾರತನಕ್ಕೆ ಕರೆಯಲು ಅವನು— ಎಲೆ ತಾಯೇ ನಾನು ನಿನ್ನ ಮಗನು, ನೀನು ನನ್ನ ತಾಯಿ, ಎಂದೆನ್ನಲು ಅವಳು ಅತ್ಯಂತ ಕೋಪಗೊಂಡಳು. ಅದನ್ನು ನೋಡಿ ಚಿಕ್ಕಯ್ಯನು ಈ ಮನೆಯಲ್ಲಿ ಇರಬಾರದೆಂದು ಅದೇ ಕ್ಷಣ ಮನೆ ಬಿಟ್ಟು ಹೊರಬಿದ್ದನು. ಅವನು ಮನೆ ಬಿಡುವಾಗ್ಗೆ ಜೆನ್ನಾಜಿಯು ತನ್ನ ಲಿಂಗವನ್ನು ತೆಗೆದುಕೊಂಡು ಮೊದಲು ಇಲ್ಲಿ ರಾತ್ರಿಯಲ್ಲಿ ಸಮೀಪದಲ್ಲಿರುವ ಮತ್ತು ತನ್ನ ಕೆಲವು ಆಭರಣಗಳನ್ನು ಅವನ ಹಡಪದೊಳಗೆ ಅವನಿಗೆ ತಿಳಿಯದಂತೆ ಇಟ್ಟಳು. ಚಿಕ್ಕಯ್ಯನು ಅದನ್ನರಿಯದೆ ಆ ಹಡಪವನ್ನು ತೆಗೆದುಕೊಂಡು ಬಾರದೆಂದು ಐನಾಳಿ ಎಂಬ ನೆರೆ ಗ್ರಾಮಕ್ಕೆ ಹೋದನು. ಅಲ್ಲಿ ಅವನು ಆ ರಾತ್ರಿ ಇದ್ದು ಉದಯದಲ್ಲೆದ್ದು ಕಲ್ಯಾಣದ ಹೊರಗಿದ್ದ ಒಂದು ಪುಷ್ಪದ ತೋಟದಲ್ಲಿ ಬಂದು ಅಲ್ಲಿ ಲಿಂಗಧ್ಯಾನದಲ್ಲಿ ಕುಳಿತನು.

ಹೀಗಾಗಲು ಇತ್ತ ತಳವಾರ ಗಂಗಯ್ಯನು ಬೆಳಗಿನಲ್ಲಿ ಮನೆಗೆ ಬಂದು ನಿಜಲಿಂಗಚಿಕ್ಕಯ್ಯನೆಲ್ಲಿ ಎಂದು ಹೆಂಡತಿಯನ್ನು ಕೇಳಲಾಗಿ ಅವಳು – ರಾತ್ರಿಯಲ್ಲಿ ನನ್ನ ಕೂಡ ಅವನು ಜಾರಕರ್ಮ ಮಾಡಲು ಬರಲು – ನಾನು ಒಲ್ಲೆನೆನಲು ಅವನು ನನ್ನ ಆಭರಣಗಳು ಮತ್ತು ಲಿಂಗವನ್ನು ಕಸೆದುಕೊಂಡು ರಾತ್ರಿಯಲ್ಲಿಯೇ ಇಲ್ಲಿಂದ ಹೊರಟು ಹೋದನೆನಲು ಗಂಗಯ್ಯನು— ಚಿಕ್ಕಯ್ಯನೆಂಥವನೆಂಬುದನ್ನು ನಾನು ಬಲ್ಲೆನು. ಮೂಡಲಲ್ಲಿ ಉದಯಿಸುವ ಸೂರ್ಯನು ಪಡುವಣ ದಿಕ್ಕಿನಲ್ಲಿ ಉದಯಿಸಿದರೂ ಅವನು ಮೇರೆದಪ್ಪುವವನಲ್ಲ ಎಂದು ನುಡಿದನು. ಅದಕ್ಕೆ ಅವನ ಹೆಂಡತಿಯು – ಈತನು ಚಿಕ್ಕಣ್ಣನ ಪಕ್ಷ ಹಿಡಿದನು ಎಂದು ತಿಳಿದು ಅರಸನಿಗೆ ದೂರು ಹೇಳಬೇಕೆಂದು ತಾನೇ ಬಿಜ್ಜಳನಲ್ಲಿಗೆ ಬಂದು ಅವಳು— ಚಿಕ್ಕಣ್ಣನು ನನ್ನಮೇಲೆ ಈ ರಾತ್ರಿ ಬಲಾತ್ಕಾರ ಮಾಡಿ ನನ್ನ ಆಭರಣಗಳನ್ನೂ ಲಿಂಗವನ್ನೂ ಕಸೆದುಕೊಂಡು ಹೋಗಿದ್ದಾನೆಂದು ಹೇಳಿದಳು. ಅದಕ್ಕೆ ಬಿಜ್ಜಳನು ತನ್ನ ಚಾರರಿಗೆ ಚಿಕ್ಕಣ್ಣನನ್ನು ಹುಡುಕಿಕೊಂಡು ಬನ್ನಿರಿ ಎಂದು ಹೇಳಿ ಕಳಿಸಿದನು. ಅವರು ಚಿಕ್ಕಣ್ಣನನ್ನು ಹುಡುಕುತ್ತ ಹುಡುಕುತ್ತ ಅವನು ಲಿಂಗ ಪೂಜೆ ಮಾಡುತ್ತಿದ್ದ ಹೂದೋಟಕ್ಕೆ ಬಂದು ಅವನ ಹಡಪದ ಮೇಲೆ ಮಡಗಿದ ಲಿಂಗ ಮತ್ತು ಆಭರಣಗಳನ್ನು ಕಂಡು ಅವುಗಳನ್ನು ಅವರು ತೆಗೆದುಕೊಂಡು ಬಿಜ್ಜಳನಲ್ಲಿಗೆ ಬಂದು ಅವನಿಗೆ ತೋರಿಸಲು ಅಲ್ಲಿದ್ದ ಜೆನ್ನಾಜಿಯು ಅವುಗಳನ್ನು ನೋಡಿ ಇವು ನನ್ನವೆನಲು ಚಿಕ್ಕಯ್ಯನು ಮಾಡಿದ ಕೃತ್ಯವು ನಿಜವಾದುದು, ಅವನ ತಲೆಯನ್ನು ಹೊಡೆದು ಹಾಕಿರೆಂದು ಬಿಜ್ಜಳನು ಚಾರರಿಗೆ ಆಜ್ಞೆ ಮಾಡಿದನು.

ಅದೇ ಮೇರೆಗೆ ಆ ಚಾರರು ಚಿಕ್ಕಯ್ಯನು ಲಿಂಗಧ್ಯಾನದಲ್ಲಿ ಕುಳಿತಿರುವ ಸಮಯದಲ್ಲಿ ಅವನಲ್ಲಿಗೆ ಬಂದು ಖಡ್ಗದಿಂದ ಅವನ ತಲೆಯನ್ನು ಹಾರಿಸಿದರು. ಆಗ ಒಂದು ಅದ್ಭುತವಾಯಿತು. ಚಿಕ್ಕಯ್ಯನ ಆ ಶಿರಸ್ಸು ಮೇಲಕ್ಕೆ ಹಾರಿ ಹೋದರೂ ಅದು ಪಂಚಾಕ್ಷರೀ ಜಪವನ್ನು ಸ್ಮರಿಸುತ್ತಲೇ ಇದ್ದಿತು ಮತ್ತು ಅವನ ದೇಹವು ಹೆರಳಿನಿಂದ ರುದ್ರಾಕ್ಷಮಾಲೆಯನ್ನು ತಿರುಹುತ್ತಲೇ ಇತ್ತು. ಇದನ್ನು ಚಾರರು ಕಂಡು ಆಶ್ಚರ್ಯಬಟ್ಟು ಹೀಗಾದುದನ್ನು ಬಿಜ್ಜಳನಲ್ಲಿಗೆ ಬಂದು ಹೇಳಲು ಅಲ್ಲಿದ್ದ ಬಸವೇಶ್ವರನು ಅದನ್ನು ಕೇಳಿ ಬಿಜ್ಜಳನಿಗೆ— ನಿಜಲಿಂಗ

ಚಿಕ್ಕಯ್ಯನು ಸನ್ಮಾರ್ಗಿಯು, ಅವನು ಒಬ್ಬ ಶ್ರೇಷ್ಠ ಶಿವಶರಣನು, ಅವನು ಮಹಾನುಭಾವನು, ಪಂಚಾಕ್ಷರೀ ರತನು. ಇಂಥವನನ್ನು ಹೀಗೆ ನೀನು ಕೊಲೆಬಡಿಸುವದು ಅತ್ಯಂತ ಪಾಪಕರ್ಮವು ಎಂದು ಕುಪಿತನಾಗಿ ನುಡಿದನು. ಅದಕ್ಕೆ ಬಿಜ್ಜಳನು— ಚಿಕ್ಕಯ್ಯನು ತಪ್ಪಿತನಾಗಿದ್ದಾನೆ. ಅವನಿಗೆ ತಕ್ಕ ಶಿಕ್ಷೆಯನ್ನು ಮಾಡಿದ್ದೇನೆ ಎಂದು ಅನ್ನಲು ಬಸವೇಶ್ವರನು— ಆ ಶರಣನು ಈಗ ಸತ್ತುಬಿದ್ದಿದ್ದರೆ ಅವನ ತಪ್ಪಿತವು ನಿಜವೆನ್ನುತ್ತೇನೆ. ಹೀಗಿರದಿದ್ದರೆ ಅವನು ತಪ್ಪಿತನಲ್ಲ, ಎಂದು ನುಡಿದನು. ಅದಕ್ಕೆ ಬಿಜ್ಜಳನು ಹಾಗಾದರೆ ಅವನನ್ನು ನೋಡುವಾ ನಡೆ ಎಂದೆನ್ನಲು ಉಭಯತರು ತೋಟಕ್ಕೆ ಹೋಗಿ ನೋಡಲು ಅವರು ಚಿಕ್ಕಣ್ಣನ ಶಿರಸ್ಸು ನೆಲದ ಮೇಲೆ ಬಿದ್ದಿದ್ದರೂ ಅದು ಪಂಚಾಕ್ಷರಿಯನ್ನು ಜಪಿಸುತ್ತಿರುವದನ್ನೂ ದೇಹವು ಜಪಮಾಲೆಯನ್ನು ತಿರುಹುತ್ತಿರುವದನ್ನೂ ನೋಡಿದರು. ಆಗ ಬಿಜ್ಜಳನು ಆಶ್ಚರ್ಯಚಕಿತನಾಗಿ— ಮಂತ್ರ ಶರೀರಿಯಾದ ಇವನಿಗೆ ಮರಣವಾಗಿಲ್ಲ, ಚಿಕ್ಕಣ್ಣನು ಶ್ರೇಷ್ಠ ಶಿವಾನುಭವಿಯು, ಅವನು ಅಪರಾಧಿಯಲ್ಲ. ಇದನ್ನು ನಾನು ಮನಗಂಡೆನು. ಇವನ ಪ್ರಾಣವನ್ನು ನೀನು ಪಡೆಯಬೇಕು ಎಂದು ಬಸವೇಶ್ವರನಿಗೆ ಹೇಳಲಾಗಿ, ಬಸವೇಶ್ವರನು ಮನಸ್ಸಿನಲ್ಲಿ ಶಿವಗಣಂಗಳನ್ನು ನೆನೆಯುತ್ತ ಚಿಕ್ಕಯ್ಯನ ಮಸ್ತಕವನ್ನು ಅವನ ಮುಂಡದ ಮೇಲೆ ಇರಿಸಲು, ಚಿಕ್ಕಯ್ಯನು ಮೊದಲಿನಂತೆ ಜೀವದಿಂದ ಮೇಲಕ್ಕೆದ್ದನು.

ಮುಂದೆ ಚಿಕ್ಕಯ್ಯನು ಕಲ್ಯಾಣದಲ್ಲಿಯೇ ಇದ್ದು ಅಲ್ಲಿಯೇ ಅವನು ಸಮಾಧಿಸ್ಥನಾದನು. ಚಿಕ್ಕಯ್ಯನ ಹೆಸರು ಗಣಸಹಸ್ರದಲ್ಲಿ ಬಂದಿದೆ. ಅವನು ಬಸವೇಶ್ವರನ ಸಮಕಾಲೀನನು. ಇದೇ ಕಾಲಕ್ಕೆ ಘಟ್ಟಿವಾಳಯ್ಯನು (ಇದೇ ಗ್ರಂಥದಲ್ಲಿ ಪುಟ ೧೬೭ ನೋಡಿರಿ.) ಕಲ್ಯಾಣಪಟ್ಟಣದಲ್ಲಿದ್ದು ಅವನ ಮುದ್ರಿಕೆಯು 'ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ, ಇಲ್ಲ' ಎಂದಿದೆ. ಈ ಮುದ್ರಿಕೆಯ ಮೇಲಿಂದ ಈ ಚಿಕ್ಕಯ್ಯನ ಶಿಷ್ಯನು ಸಿದ್ಧಲಿಂಗ ಎಂಬವನಿದ್ದು ಈ ಸಿದ್ಧಲಿಂಗನ ಹೆಸರನ್ನೇ ಘಟ್ಟಿವಾಳಯ್ಯನು ತನ್ನ ವಚನಗಳಿಗೆ ಮುದ್ರಿಕೆಯಾಗಿ ಇಟ್ಟುಕೊಂಡಿದ್ದರಿಂದ ಘಟ್ಟಿವಾಳಯ್ಯನು ಸಿದ್ಧಲಿಂಗನಿಗೆ ಶಿಷ್ಯನಾಗಿರಬಹುದೆಂದು ತೋರುತ್ತದೆ. ನಿಜಲಿಂಗ ಚಿಕ್ಕಯ್ಯನ ಮುದ್ರಿಕೆಯು 'ಉಳಿಯುಮೇಶ್ವರಾ' ಎಂದಿದೆ.

ಈ ಶಬ್ದದಲ್ಲಿ ಪರಮಾತ್ಮನು ಒಬ್ಬನೇ ಇದ್ದು ಅವನು ಕಡೆಗೂ ಉಳಿಯುತ್ತಾನೆ, ಅಂದರೆ ಅವನಿಗೆ ನಾಶವಿಲ್ಲ, ಎಂಬ ಭಾವವು ಇದ್ದಹಾಗೆ ತೋರುತ್ತದೆ.

ಇತ್ತ ಮಹಾದೇವರಾಜನು ತಾನು ಬಸವೇಶ್ವರನನ್ನು ಕೊಂದು ಹಾಕಲು ಕಳಿಸಿದ್ದರ ಪರಿಣಾಮವೇನಾಯಿತೆಂಬುದನ್ನು ಶೋಧ ಮಾಡುತ್ತಿರುವಲ್ಲಿ ಅವನು ತನ್ನ ಭಟನು ಬಸವೇಶ್ವರನನ್ನು ಕಾಣಲು ಹೋಗಿ ಅಲ್ಲಿ ಖಿಜ್ಞೋಲೆಯು ಕಾಯಕವನ್ನು ಮಾಡುತ್ತ ಒಬ್ಬ ಶ್ರೇಷ್ಠ ಶಿವಾನುಭವಿಯಾದನೆಂಬುದನ್ನು ಕೇಳಿ ಅವನಲ್ಲಿ ವೈರಾಗ್ಯವು ಉಂಟಾಯಿತು. ಆಗ ಅವನು ತನ್ನ ಹೆಂಡತಿಯೊಡನೆ ಕಲ್ಯಾಣಕ್ಕೆ ಬಂದು ಕಟ್ಟಿಗೆಯನ್ನು ಮಾರುವ ಕಾಯಕವನ್ನು ಕೈಕೊಂಡು ಮೋಳಿಗೆಯ ಮಾರಯ್ಯನೆಂಬ ಹೆಸರನ್ನಿಟ್ಟುಕೊಂಡು ಒಬ್ಬ ಶ್ರೇಷ್ಠ ಶಿವಾನುಭವಿಯಾದನು.

ಬಸವೇಶ್ವರನು ಚಿಕ್ಕಯ್ಯನ ವಿಷಯವಾಗಿ ಅತ್ಯಂತ ಪೂಜ್ಯಭಾವವುಳ್ಳವನಾಗಿದ್ದನೆಂದು ತೋರುತ್ತದೆ. ಅವನು ತನ್ನ ಎರಡು ವಚನಗಳಲ್ಲಿ ಅವನನ್ನು ಸ್ಮರಿಸಿದ್ದಾನೆ. ಅವುಗಳಲ್ಲಿ ಅವನು ಚಿಕ್ಕಯ್ಯನು ತನ್ನ ತಂದೆ, ಅವನು ತನ್ನನ್ನು ಪ್ರೀತಿಸುವವನೆಂದು ಹೇಳಿದ್ದಾನೆ. ಇದರಿಂದ ಚಿಕ್ಕಯ್ಯನು ಬಸವೇಶ್ವರನಕಿಂತಲೂ ವಯಸ್ಸಿನಲ್ಲಿ ಹಿರಿಯನಾಗಿದ್ದನೆಂದು ತೋರುತ್ತದೆ. ಆ ವಚನಗಳು ಯಾವವೆಂದರೆ:—

(೧) ಅಪ್ಪನು ನಮ್ಮ ಮಾದಾರ ಚನ್ನಯ್ಯ. ಬೊಪ್ಪನು ನಮ್ಮ ಡೋಹರ ಕಕ್ಕಯ್ಯ. ಚಿಕ್ಕಯ್ಯ ನೆಮ್ಮಯ್ಯ ಕಾಣಿರಯ್ಯ. ಅಣ್ಣನು ನಮ್ಮ ಕಿನ್ನರೀಬೊಮ್ಮಯ್ಯ. ಎನ್ನನೇತಕ್ಕರಿಯರಿ ಕೂಡಲ ಸಂಗಮದೇವಾ?

(೨) ಎನಗಾರು ಇಲ್ಲ, ಎನಗಾರು ಇಲ್ಲವೆಂಬರು. ಬಾಣನವ ನಾನು. ಮಯೂರನವ ನಾನು. ಕಾಳಿದಾಸನವ ನಾನು. ಕಕ್ಕಯ್ಯ ಹಿರಿಯಪ್ಪಯ್ಯ. ಚಿಕ್ಕಯ್ಯ ಚನ್ನಯ್ಯ ಎತ್ತಿ ಮುದ್ದಾಡಿದರೆನ್ನ ಕೂಡಲ ಸಂಗಯ್ಯ.

ಯಾವನು ಮೊದಲು ತನ್ನನ್ನು ಕೊಲ್ಲಲಿಕ್ಕೆ ಬಂದಿದ್ದನೋ ಅಂಥವನನ್ನು ಬಸವೇಶ್ವರನು ಮುಂದೆ ಎಂಥ ಪೂಜ್ಯಭಾವದಿಂದ ಕಾಣುವವನಾದನೆಂಬುದು ಮೇಲಿನ ವಚನಗಳಿಂದ ತಿಳಿದುಬರುತ್ತದೆ. ಇದು ಬಸವೇಶ್ವರನ ಉದಾರ ಹೃದಯವನ್ನು ತೋರಿಸುತ್ತದೆ.

ಚಿಕ್ಕಯ್ಯನ ೧೫ ವಚನಗಳು ಮಾತ್ರ ನಮಗೆ ಉಪಲಬ್ಧವಿವೆ. ಅವೆಲ್ಲವೂ ಬಹು ಸುಂದರವಾದ ವಚನಗಳು. ಅವುಗಳಲ್ಲಿ ನಾವು ನಾಲ್ಕು ವಚನಗಳನ್ನು ಮಾತ್ರ ಇಲ್ಲಿ ಉದಹರಿಸಿದ್ದೇವೆ.

ವಚನಗಳು.

(೧) ಎನ್ನ ಮನವ ಮಂಚವ ಮಾಡಿ ತನುವ ಪಚ್ಚಡಿಸುವೆ ಬಾರಯ್ಯ. ಎನ್ನ ಶಿವಲಿಂಗವೇ ಬಾರಯ್ಯ. ಎನ್ನ ಭಕ್ತಿ ವತ್ಸಲನೇ ಬಾರಯ್ಯ. ಎನ್ನ ಭಕ್ತ ದೇಹಿಕನೇ ಬಾರಯ್ಯ. ಎನ್ನಂತರಂಗದೊಳಗಿರು ಬಾರಯ್ಯ. ಎನ್ನ ಬಹಿರಂಗದೊಳಗಿರು ಬಾರಯ್ಯ. ಓಂನಮಃ ಶಿವಾಯ ಎಂದು ಕರೆವೆನಯ್ಯ ಉಳಿಯುಮೇಶ್ವರ ನೀ ಬಾರಯ್ಯ.

(೨) ಎಲುದೋರ ಸರಸವಾಡುವನ್ನಬರ ಏನು ಭೃಂಗಿಯೇ? ಸೀಳಿ ಹೊದೆಯಲೇನು ಗಜಾಸುರನೇ? ಪೆಣ ಲೀಲೆ ಮಾಡಲೇನು ಅಂಧಕಾಸುರನೇ? ಮನದಲ್ಲಾಡಲೇನು ಸಿರಿಯಾಳನೇ? ನೊಣ ತೃಣ ದೋಷಾದಿ ನಾನು. ಎನ್ನನಿನಿತು ಬಳಲಿಸುವರೇ? ಕರುಣಿಸು ಕರುಣಾಕರಾ ಉಳಿಯುಮೇಶ್ವರಾ.

(೩) ಎಲು ಒಡೆದು ತನು ಕರಗಿ ಮನವು ಜಜ್ಜರಂಬೋಗಿ ಲಿಂಗದಲ್ಲಿ ನೀರು ನೀರಾಗಿ ಬೆರಿಸಲುಬೇಕು. ಜಂಗಮದಲ್ಲಿ ಆಲಿ ಕಲ್ಲಾಗಿ ಕರಗಲುಬೇಕು. ಸರ್ವಾಂಗದಲ್ಲಿ ಪುಳಕಂಗಳೊಗೆದು ಕಡಲುಗಳಾಗಿ ನಿರ್ವಾಣ ನಿಜಪದವೆನಗೆಂದಪ್ಪುದೋ ಉಳಿಯುಮೇಶ್ವರಾ.

(೪) ಒಂದು ಯೋನಿಯಲ್ಲಿ ಬಂದ ದುಃಖವ ನಾನೆಂದಿಗೂ ಕಳೆಯಲಾರೆನಯ್ಯ. ಎಂಬತ್ತುನಾಲ್ಕು ಲಕ್ಷ ಯೋನಿ ಎಂದಡೆ ಇನ್ನೇನಯ್ಯ? ಮತ್ತೆಂತೆಂದನರಿಯದ ಶಿಶುವು ನಾನು ಬೆಂದೆನಯ್ಯ. ಶಿವ ಶಿವಾ, ಎನ್ನ ಕಂದ ನೀ ಬಾ ಎಂದು ಕಂಬನಿಯ ತೊಡೆದೆತ್ತಿ ಆನಂದದಿಂದ ಕಣ್ದೆರೆವೆನಯ್ಯ ಉಳಿಯುಮೇಶ್ವರಾ.

ಶ್ರೀಪತಿ ಪಂಡಿತ.

ವೀರಶೈವ ಪಂಡಿತರಲ್ಲಿ ಶ್ರೀಪತಿ ಪಂಡಿತ, ಮುಂಚಣ್ಣ ಪಂಡಿತ, ಮತ್ತು ಮಲ್ಲಿಕಾರ್ಜುನ ಪಂಡಿತ ಈ ಮೂವರು ಅತ್ಯಂತ ಪ್ರಸಿದ್ಧರಾಗಿದ್ದಾರೆ. ಅವರನ್ನು ಒಟ್ಟಾಗಿ ಪಂಡಿತತ್ರಯರೆಂದು ಕರೆಯುವದುಂಟು. ಇವರಲ್ಲಿ ಶ್ರೀಪತಿ ಪಂಡಿತನು ಆಂಧ್ರ ಎಂದರೆ ತೆಲುಗು ದೇಶದವನು. ಇವನಿಗೆ ಶ್ರೀಪತಿ ಪಂಡಿತಾರಾಧ್ಯ, ಪಂಡಿತಾರಾಧ್ಯ, ಶ್ರೀಪತಿ ಎಂಬ ಹೆಸರುಗಳೂ ಉಂಟು.

ಶ್ರೀಪತಿ ಪಂಡಿತನ ವಾಸಸ್ಥಳವು ಈಗ ಕೃಷ್ಣಾ ಜಿಲ್ಲೆಯಲ್ಲಿರುವ ಬೆಜವಾಡವು. ಇದು ಕೃಷ್ಣಾ ನದಿಯ ಎಡಮಗ್ಗಲಿನ ದಂಡೆಯ ಮೇಲೆ ಸಮುದ್ರ ತೀರದಿಂದ ಪಶ್ಚಿಮಕ್ಕೆ ಸುಮಾರು ೪೫ ಮೈಲುಗಳ ಮೇಲೆ ಇದೆ. ಇದಕ್ಕೆ ಪೂರ್ವಕಾಲದಲ್ಲಿ ವಿಜಯವಾಟಿಕಾ ಅಥವಾ ಜಯವಾಟಿಕಾ ಎಂಬ ಹೆಸರುಗಳಿದ್ದದ್ದು ಅಲ್ಲಿಯ ಶಿಲಾಶಾಸನಗಳಿಂದ ತಿಳಿದು ಬರುತ್ತದೆ. ಕನ್ನಡ ಗ್ರಂಥಗಳಲ್ಲಿ ಶ್ರೀಪತಿಯ ಗ್ರಾಮವು ದಶನಪುರ ಎಂದು ಹೇಳಿದೆ. ಆದರೆ ಈ ಹೆಸರಿನ ಗ್ರಾಮವು ಈ ಭಾಗದಲ್ಲಿ ಈಗ ಉಪಲಬ್ಧವಿರುವದಿಲ್ಲ. ಈ ಸ್ಥಳವು ಬೆಜವಾಡದ ಕೆಲವೊಂದು ಭಾಗವಾಗಿರಬಹುದು.

ಶ್ರೀಪತಿ ಪಂಡಿತನ ಕಾಲದಲ್ಲಿ ಬೆಜವಾಡದಲ್ಲಿ ಅನಂತರಾಜನೆಂಬ ರಾಜನು ಆಳುತ್ತಿದ್ದನು. ಅವನ ಮಂತ್ರಿಯು ವೇಧಕನೆಂ(೧)ಬವನು. ಶ್ರೀಪತಿ ಪಂಡಿತನು ಜಾತಿಯಿಂದ ಬ್ರಾಹ್ಮಣನು. ಆದರೂ ಅವನು ವೀರಶೈವಾಚಾರಸಂಪನ್ನನು, ವಿದ್ವಾಂಸನು. ಅವನಲ್ಲಿದ್ದ ವಿದ್ವತ್ತಿಗೋಸ್ಕರ ಅವನು ಪಂಡಿತನೆಂತಲೂ ಶಿವಜ್ಞಾನಿ ಎಂತಲೂ ನಾಡಿನಲ್ಲಿ ಬಹಳ ಪ್ರಬದ್ಧನಾಗಿದ್ದನು. ಅವನು ಶ್ರೀಶೈಲ ಮಲ್ಲಿಕಾರ್ಜುನನ ಕೇವಲ ಭಕ್ತನಾಗಿ ಅವನು ಆಗಿಂದಾಗ್ಗೆ ಅಲ್ಲಿಗೆ ಹೋಗಿ ದೇವರ ದರ್ಶನವನ್ನು ಹೊಂದುವನು. ಅವನು ಯಾವಾಗಲೂ ಶ್ರೀಶೈಲ ಮಲ್ಲಿಕಾರ್ಜುನನ ಸ್ಮರಣೆಯಲ್ಲಿಯೇ ಇರುವನು.

(೧) ಬೇರೆ ಗ್ರಂಥದಲ್ಲಿ ವೇದಾಕ್ಷನೆಂದಿದೆ.

ಈ ಕಾಲದ ಕರ್ನಾಟಕದಲ್ಲಿ ಅನೇಕ ಶಿವಶರಣರು ಉದಯವಾಗಿ ಅವರಲ್ಲಿ ಅತ್ಯಂತ ಪ್ರಸಿದ್ಧಿಹೊಂದಿದ ಸಿದ್ಧರಾಮೇಶ್ವರ, ಅಲ್ಲಮ ಪ್ರಭು, ಸಕಳೇಶ ಮಾದರಸ, ಗೋರಕ್ಷ, ಮಹಾದೇವಿಯಕ್ಕ, ಮೈದುನರಾಮ ಇವರೇ ಮೊದಲಾದವರು ಶ್ರೀಶೈಲ ಮಲ್ಲಿಕಾರ್ಜುನನ ಕೇವಲ ಭಕ್ತರಾಗಿದ್ದರು. ಅಲ್ಲದೆ ಕರ್ನಾಟಕದಿಂದ ಭಕ್ತ ಜಂಗಮರ ಪರಿಸೆಗಳು ಅಸಂಖ್ಯಾತವಾಗಿ ಶ್ರೀಶೈಲಕ್ಕೆ ಯಾವಾಗಲೂ ಹೋಗುತ್ತಿದ್ದುದು ಶಿವಶರಣರ ಚರಿತ್ರೆಗಳಿಂದ ತಿಳಿದು ಬರುತ್ತದೆ. ಹೀಗೆ ಕ್ಷೇತ್ರಸ್ಥಾನಗಳಿಗೆ ದೂರದೂರದ ದೇಶಗಳಿಂದ ಧಾರ್ಮಿಕ ಪುರುಷರು ಬರುತ್ತಿರುವದರಿಂದ ಅವರಲ್ಲಿ ಪರಸ್ಪರ ವಿಚಾರವಿನಿಮಯಗಳಾಗಲು ಸಂಧಿಯು ದೊರೆಯುತ್ತದೆ. ಆದ್ದರಿಂದ ಇಂಥ ಸ್ಥಾನಗಳು ಧರ್ಮಪ್ರಸಾರ ಕಾರ್ಯಕ್ಕೆ ಬಹಳ ಅನುಕೂಲವಾದವುಗಳು. ಈ ಕಾಲದಲ್ಲಿ ಕರ್ನಾಟಕದಲ್ಲಿ ಶಿವಶರಣರ ಮತತತ್ವಗಳ ಪ್ರಚಾರವು ಬಹು ಬಲವಾಗಿ ನಡೆದಿದ್ದರಿಂದ ನೆರೆ ಪ್ರಾಂತವಾದ ಆಂಧ್ರ ದೇಶದಲ್ಲಿಯೂ ಕೂಡ ಅವು ಪ್ರಸಾರವಾಗುತ್ತಾ ನಡೆದಿದ್ದವು. ಆದ್ದರಿಂದಲೇ ಈ ದೇಶದಲ್ಲಿಯೂ ಅನೇಕ ಆಂಧ್ರ ಶಿವಶರಣರು ಉತ್ಪನ್ನರಾದರು. ಹಾಗೆಯೇ ಶ್ರೀಪತಿ ಪಂಡಿತನು ಶಿವಶರಣರ ಶಿವಾನುಭವದ ಉದಾರ ತತ್ವಗಳನ್ನು ತಿಳಿದುಕೊಂಡವನಾಗಿ ಅವುಗಳಂತೆ ಅವನು ಆಚರಿಸುತ್ತಿದ್ದನೆಂಬದು ಅವನ ಚರಿತ್ರೆಯಿಂದ ಗೊತ್ತಾಗುತ್ತದೆ.

ಶ್ರೀಪತಿಯು ತನ್ನ ಶಿವಾನುಭವದ ಆಚರಣೆಯ ಮೂಲಕ "ಶಿವಾದ್ವಯ ಮಾರ್ಗಸ್ಥಾಪಕ ಧುರಂಧರನೆಂ(೧)"ದು ಪ್ರಸಿದ್ಧನಾಗಿದ್ದನು. ಅವನು "ಶಿವಮಂತ್ರವೇ ಮಂತ್ರರಾಜವು, ಶಿವಪ್ರಸಾದವೇ ಭೋಗಶೇಖರವು" ಎಂದು ಶಪಥಪೂರ್ವವಾಗಿ ಜಯವಾಟೀ ಗ್ರಾಮದಲ್ಲಿ ಉದ್ಘೋಷಿಸುತ್ತಾ ಇರುವನು. ಇವನು ತನ್ನ ಈ ರೀತಿಯನ್ನು ಪ್ರದರ್ಶಿಸಲು ಒಂದು ವಿಜಯಧ್ವಜವನ್ನೆತ್ತಿ ಮೆರಿಸುವನು. ಹೀಗಿರುವಲ್ಲಿ ಒಂದು ದಿವಸ ಅವನು ಕೃಷ್ಣಾ ಸ್ನಾನವನ್ನು ಮಾಡಿಕೊಂಡು ಪಟ್ಟಣದ ಬೀದಿಯಿಂದ ಬರುತ್ತಿರುವಾಗ ಒಂದು ಮದ್ದಾನೆಯು ದಿಕ್ಕುಗೆಟ್ಟು ತನ್ನ ಇದಿರಿಗೆ

(೧) ವೀರಾರಾಧ್ಯನು ವಿರಚಿಸಿದ "ಧರ್ಮಗುಪ್ತಾಖ್ಯಾದಯ" ವೆಂಬ ತೆಲುಗು ಕಾವ್ಯದಲ್ಲಿಯ ಉಲ್ಲೇಖ.

ಓಡಿ ಬರುವದನ್ನು ಕಂಡು ಅವನು ಅದರಿಂದ ತಪ್ಪಿಸಿಕೊಳ್ಳಲು ಗೊಡಗರಿ ಮಲ್ಲಯ್ಯನೆಂಬ ಶಿವಭಕ್ತನ ಮನೆಯ ಬಾಗಿಲಲ್ಲಿ ಬಂದು ನಿಂತನು. ಪ್ರತಿನಿತ್ಯ ಆರು ಜನ ಜಂಗಮರಿಗೆ ಶಿವಾರ್ಚನೆ ಮಾಡುವದು ಈ ಮಲ್ಲಯ್ಯನ ಪದ್ಧತಿಯಾಗಿತ್ತು. ಆ ದಿವಸ ಅವನಿಗೆ ಐವರು ಮಾತ್ರ ಜಂಗಮರು ದೊರಕಿದ್ದರು. ಆಗ ಅಕಸ್ಮಾತ್ತಾಗಿ ಶ್ರೀಪತಿಯು ತನ್ನ ಬಾಗಿಲಲ್ಲಿ ಬಂದು ನಿಂತಿದ್ದನ್ನು ಕಂಡು ಇವನು ತನಗೆ ಬೇಕಾದ ಆರನೆಯ ಜಂಗಮನು ದೊರೆದನೆಂದು ಹರುಷಿತನಾಗಿ ಅವನನ್ನು ಒಳಯಕ್ಕೆ ಲಿಂಗಪೂಜೆಗೋಸ್ಕರ ಕರೆದುಕೊಂಡು ಹೋದನು. ಒಳಗೆ ಅನೇಕ ಭಕ್ತಜನರು ಭೋಜನಕ್ಕೆ ಕುಳಿತ್ತಿದ್ದರು. ಶ್ರೀಪತಿಯು ಅವರ ಭಕ್ತಿಗೆ ಮೆಚ್ಚಿ ಅವರೊಡನೆ ಊಟಕ್ಕೆ ಕುಳಿತುಕೊಂಡು ಭುಂಜಿಸಿ ತನ್ನ ಮನೆಗೆ ತಿರುಗಿ ಬಂದನು.

ಶ್ರೀಪತಿಯು ಜಾತಿಯಿಂದ ಬ್ರಾಹ್ಮಣನು. ಆದರೆ ಅವನು ಭೋಜನ ಮಾಡಿ ಬಂದ ಮಲ್ಲಯ್ಯನೂ ಅವನೊಡನೆ ಇದ್ದ ಭಕ್ತರೂ ಶೂದ್ರರೆಂದು ಬ್ರಾಹ್ಮಣರಿಂದ ಭಾವಿಸಲ್ಪಟ್ಟವರು. ಇಂಥವರೊಡನೆ ಅವನು ಭೋಜನ ಮಾಡಿದ್ದನ್ನು ಅವರು ಕೇಳಿ ಅವನಿದ್ದಲ್ಲಿಗೆ ಬಂದು ಅವನಿಗೆ— ಪಂಡಿತರೇ, ನೀವು ವಿಪ್ರ ಜನ್ಮದಲ್ಲಿ ಹುಟ್ಟಿ ಹೀಗೆ ಕನಿಷ್ಟ ಜಾತಿಯವರಲ್ಲಿ ಉಣ್ಣಬಹುದೇ? ಎಂದು ಕೇಳಲು ಆ ಮಾತಿಗೆ ಅವನು— ಎಲೋ ಮರುಳುಗಳಿರಾ, ವೀರಶೈವರಲ್ಲಿ ಕುಲವನೆಣಿಸಬಹುದೇ? ಮಣ್ಣಿನಲ್ಲಿ ಜಿನ್ನ ಹುಟ್ಟಿದರೆ ಅದು ಮಣ್ಣೆನ್ನಬಹುದೇ? ಮಂತ್ರಪೂರ್ವಕವಾಗಿ ಪ್ರತಿಷ್ಠೆಯಾದ ಬಳಿಕ ಲಿಂಗವು ಶಿಲೆ ಎಂದೆನ್ನಬಹುದೇ? ಹಾಗೆಯೇ ಲಿಂಗಸನ್ನಿಹಿತನಾದ ಬಳಿಕ ಭಕ್ತನಲ್ಲಿ ಕುಲ, ಗೋತ್ರ, ವರ್ಣ, ಜಾತಿಗಳು ಉಳಿಯುವಾರವು, ಎಂದು ಅನೇಕ ಶಾಸ್ತ್ರ ಪ್ರಮಾಣಗಳಿಂದ ತನ್ನ ಮತವನ್ನು ಸಮರ್ಥಿಸಿದನು. ಆದರೆ ಬ್ರಾಹ್ಮಣರು ಅದಕ್ಕೆ ಒಪ್ಪದೆ ಅವರು ಶ್ರೀಪತಿ ಪಂಡಿತನಿಗೆ— ನಿನ್ನ ದೈವವಾವುದು ಎಂದು ಕೇಳಲು, ಅವನು— ನನಗೆ ಜಂಗಮವೇ ದೈವವೆಂದೆನ್ನಲು ಅವರು— ಅದು ಹೇಗೆನಲು, ಅದಕ್ಕೆ ಅವನು— ಲಿಂಗಮುಖ ಜಂಗಮವು. ಇದಕ್ಕೆ ಆಧಾರಗಳಿವೆ. ಆದ್ದರಿಂದ ಜಂಗಮಕ್ಕೆ ನೀಡಿದರೆ ಶಿವನು ತೃಪ್ತನಾಗುತ್ತಾನೆ. ಆದ್ದರಿಂದ ನನಗೆ ಜಂಗಮನೇ ದೈವವು ಎಂದು ಹೇಳಿದನು. ಅದಕ್ಕೆ ಆ ವಿಪ್ರರು— ಇದು ತಪ್ಪು

ಅಗ್ನಿಯೇ ದೈವವು. ಅಗ್ನಿಗೆ ಹವಿಸ್ಸು ನೀಡಿದರೆ ದೇವತೆಗಳು ತೃಪ್ತರಾಗುತ್ತಾರೆ. ಆದ್ದರಿಂದ ಅಗ್ನಿಯೇ ನಿಜವಾದ ದೈವವು ಎಂದೆನ್ನಲು ಅದಕ್ಕೆ ಶ್ರೀಪತಿಯು— ನೀವು ಅಗ್ನಿಯೇ ದೈವವೆನ್ನುತ್ತೀರಿ. ಆದರೆ ನಮ್ಮ ಆರಾಧ್ಯರು ಆ ಅಗ್ನಿಯ ನಾಲಿಗೆಯನ್ನು ಕೊಯ್ದುಬಿಡಲಿಲ್ಲವೇ? ಅಂದ ಬಳಿಕ ಆ ಅಗ್ನಿಯ ದೇವತ್ವವು ಎಲ್ಲಿ ಉಳಿಯಿತು? ಎಂದು ನುಡಿದನು. ಅದಕ್ಕೆ ಬ್ರಾಹ್ಮಣರು ಅವನಿಗೆ— ನೀನು ಅಗ್ನಿಗೆ ಹೀಗೆ ಅಪಹಾಸ್ಯ ಮಾಡಬೇಡ. ಅಗ್ನಿಯನ್ನು ನೀನಷ್ಟು ಮುಟ್ಟಿ ನೋಡು. ಅದು ನಿನ್ನನ್ನು ದಹಿಸಿ ಬಿಡುವದು. ಆದರೆ ಒಂದು ವೇಳೆ ನೀನು ಅದನ್ನು ನಿನ್ನ ಅಜ್ಞೆಯಲ್ಲಿಟ್ಟುಕೊಂಡು ಅದು ದಹಿಸದಂತೆ ಮಾಡಿದರೆ ಮಾತ್ರ ನಿನ್ನ ಮತವು ಸತ್ಯವು ಮತ್ತು ನಿನ್ನದು ಜಯವು ಎಂದು ಹೇಳಲು ಶ್ರೀಪತಿ ಪಂಡಿತನು— ಹಾಗೆಯೇ ಮಾಡುತ್ತೇನೆ, ಅಗ್ನಿಯನ್ನು ನನ್ನ ಅಂಕಿತದಲ್ಲಿಟ್ಟುಕೊಳ್ಳುತ್ತೇನೆ, ಇದನ್ನು ಈಗಲೇ ನಮಗೆ ಮಾಡಿತೋರಿಸುತ್ತೇನೆ ಎಂದು ನುಡಿದು ಅರಳಿಯ ಕೊರಡುಗಳನ್ನು ತರಿಸಿ ಅವುಗಳಿಂದ ಕೆಂಡವನ್ನು ಮಾಡಿ, ಒಂದು ಮಹತ್ತಾದ ಜ್ವಾಲೆಯನ್ನು ಹುಟ್ಟಿಸಿ, ನೂತನರ ಮತ್ತು ಪುರಾತನರ ಅಡಿಗಳನ್ನು ನೆನೆದು ಒಂದು ಪಾವುಡವನ್ನು ನೆಲದ ಮೇಲೆ ಹಾಸಿ, ಅದರ ಮೇಲೆ ಉರಿಯುತ್ತಿದ್ದ ಆ ಬೆಂಕಿಯನ್ನು ಒಟ್ಟಿದನು. ಹೀಗೆ ಅದನ್ನು ಒಟ್ಟಿ ಪುರಜನರು ನೋಡುವಂತೆ ಆ ಜ್ವಾಲೆಯನ್ನು ಆ ಪಾವುಡದಲ್ಲಿ ಕಟ್ಟಿ ಒಂದು ಮೊಟ್ಟೆಯನ್ನು ಮಾಡಿ, ಅದನ್ನು ಬನ್ನಿಯ ಮರವ ಕೊಂಬೆಗೆ ತೂಗ ಹಾಕಿದನು. ಹೀಗೆ ಮಾಡಿದರೂ ಕೂಡ ಕಟ್ಟಿದ್ದ ಆ ಬಟ್ಟೆಗೆ ಎಷ್ಟು ಮಾತ್ರವೂ ಉರಿ ಹತ್ತಲಿಲ್ಲ. ಹೀಗೆ ಮೊಟ್ಟೆಮಾಡಿ ಕಟ್ಟಿದ್ದ ಆ ಬೆಂಕಿಯು ಏಳು ದಿನಗಳ ವರೆಗೂ ಅದರಲ್ಲಿಯೇ ಉರಿಯುತ್ತಿತ್ತು. ಆವರಿಂದ ಬಟ್ಟೆಗೂ ಸುತ್ತಲಿನ ಪದಾರ್ಥಗಳಿಗೂ ಎಷ್ಟು ಮಾತ್ರವೂ ಅಪಾಯ ಸಂಭವಿಸಿರಲಿಲ್ಲ.

ಶ್ರೀಪತಿಯು ಆ ಬೆಂಕಿಯ ಮೊಟ್ಟೆಯಲ್ಲಿ ಪಟ್ಟಣದಲ್ಲಿದ್ದ ಬ್ರಾಹ್ಮಣರ ಗೃಹಗಳಲ್ಲಿಯ ಬೆಂಕಿಯ ಅಂಶವೆಲ್ಲವುಗಳೂ ಆಕರ್ಷಿಸಲ್ಪಟ್ಟಿದ್ದವು. ಆದ್ದರಿಂದ ಅವರ ಮನೆಗಳಲ್ಲಿ ಬೆಂಕಿಯೇ ಇಲ್ಲದಾಯಿತು! ಅವರಲ್ಲಿರುವ ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯಗಳೆಂಬ ಮೂರಗ್ನಿಗಳು ನಂದಿಹೋದವು. ಆದರಿಂದ ವಿಪ್ರರು ಅನ್ನವಿಲ್ಲದೆ ಕಷ್ಟಪಡ

ಹತ್ತಿದರು. ಅವರ ಉದರಾಗ್ನಿಯು ಸಹ ಶಾಂತವಾಯಿತು. ಅವರಿಗೆ ಹಸಿವೆ ತೃಪೆಗಳೆಲ್ಲದಾದವು. ಆಗ ಅವರು ಅನ್ನವಿಲ್ಲದೆ ಕಷ್ಟಪಟ್ಟು ಕಡೆಗೆ ಆಲೋಚನೆಯನ್ನ ಮಾಡಿ ಶ್ರೀಪತಿ ಪಂಡಿತನ ಕಡೆಗೆ ಹೋಗಿ ಅವನನ್ನ ನಮಸ್ಕರಿಸಿ— ನಿಮ್ಮ ಕೂಡ ನಾವು ವ್ಯರ್ಥವಾಗಿ ವಾದಿಸಿದೆವು. ನಮ್ಮ ಅಪರಾಧವನ್ನು ಕ್ಷಮಿಸು, ಎಂದು ಬೇಡಿಕೊಳ್ಳಲು ಶ್ರೀಪತಿ ಪಂಡಿತನು ಕಟ್ಟಿದ್ದ ಆ ಬೆಂಕಿಯ ಮೊಟ್ಟೆಯನ್ನ ಗಿಡದಿಂದ ಕೆಳಗಿಳಿಸಿ ಅದರೊಳಗಿನ ಬೆಂಕಿಯನ್ನ ಹೊರಗೆ ಸುರುವಿದನು. ಹೀಗೆ ಸುರುವಿದ ಕೂಡಲೆ ವಿಪ್ರರ ಮನೆಯೊಳಗಿನ ಅಗ್ನಿಗಳು ಪುನಃ ಪುಟವಾಗಿ ಉರಿಯಹತ್ತಿದವು.

ಶಿಲಾಶಾಸನದಲ್ಲಿ ಈ ಪೊವಾಡದ ಉಲ್ಲೇಖ.

ಬೆಜವಾಡದ ಮಲ್ಲೇಶ್ವರ ದೇವಾಲಯದಲ್ಲಿಯ ಶಿಲಾಶಾಸನದಲ್ಲಿ ಈ ಪೊವಾಡದ ಉಲ್ಲೇಖವಿದೆ. ಈ ಕಾಲದಲ್ಲಿ ಅನಂತರಾಜನೆಂಬ ರಾಜನು ಬೆಜವಾಡದಲ್ಲಿ ಆಳುತ್ತಿದ್ದನು. ಅವನು ಕಲ್ಯಾಣ ಪಟ್ಟಣದಲ್ಲಿ ಆಳುತ್ತಿದ್ದ ಪಶ್ಚಿಮ ಚಾಳುಕ್ಯ ರಾಜನಾದ ೬ನೇ ವಿಕ್ರಮಾದಿತ್ಯನ ದಂಡನಾಯಕನು. ಅವನು ಈ ಭಾಗದಲ್ಲಿಯ ಅನೇಕ ರಾಜ್ಯಗಳನ್ನು ಗೆದ್ದು ಬೆಜವಾಡವನ್ನು ತನ್ನ ಮುಖ್ಯ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಅವನು ೧೦೯೫ರಿಂದ ೧೧೧೮ರ ವರೆಗೆ ಆಳಿದನೆಂದು ತಿಳಿಯುತ್ತಿದೆ. ಅವನು ಬೆಜವಾಡದ ಸುತ್ತಲಿನ ನಾಡಾದ ಕೊಂಡು ಕೊಂಡಪಲ್ಲಿ ಎಂಬುವೆನ್ನು ಈ ಕಾಲದಲ್ಲಿ ಆಳುತ್ತಿದ್ದನೆಂದು ಶಿಲಾಶಾಸನಗಳಿಂದ ತಿಳಿದು ಬರುತ್ತದೆ. ಇವನ ಶಾಸನಗಳು ಗುಂಟೂರ ಜಿಲ್ಲೆಯಲ್ಲಿರುವ ಚಿಬ್ರೋಲ ಎಂಬಲ್ಲಿ ಇರುತ್ತವೆ. ಅವನ ಕಾಲದಲ್ಲಿಯೇ ಶ್ರೀಪತಿ ಪಂಡಿತನ ಪೊವಾಡವು ಜರಿಗಿದ್ದು. ಇದರಿಂದ ಶ್ರೀಪತಿಯ ಖ್ಯಾತಿಯು ನಾಡಿನಲ್ಲಿ ಹೆಚ್ಚಾಗಲು, ಅನಂತಭೂಪಾಲ ರಾಜನು ಅವನ ಶಿಷ್ಯತ್ವವನ್ನು ವಹಿಸಿದನೆಂದು ತಿಳಿಯುತ್ತಿದೆ.

ಶ್ರೀಪತಿ ಪಂಡಿತನ ಪೊವಾಡದ ವಿವರವು ಬೆಜವಾಡದಲ್ಲಿಯ ಇದೇ ಶಿಲಾಶಾಸನದಲ್ಲಿ ಬಂದಿದೆ. ಈ ಶಾಸನವನ್ನು ಅಲ್ಲಿಯ ಮಲ್ಲೇಶ್ವರ ದೇವಾಲಯದಲ್ಲಿ ಈಗಲೂ ನೋಡಬಹುದು. ಅದು ಅಚ್ಚಾಗಿದೆ. ಅದರಲ್ಲಿ ಶ್ರೀಪತಿ ಪಂಡಿತಾರಾಧ್ಯನು 'ಭಕ್ತೋತ್ತಮ' ನೆಂತಲೂ ಅವನು

ಸೇವಯುಷಿಗಳಿಗಿಂತಲೂ ಶಿವಭಕ್ತನೇ ಅಧಿಕನೆಂಬ ಸಿದ್ಧಾಂತವನ್ನು ಪ್ರತಿಜ್ಞಾಪೂರ್ವಕವಾಗಿ ಪ್ರತಿಪಾದಿಸಿದನೆಂತಲೂ ಅಗ್ನಿಯನ್ನು ಪಪ್ಪಳದಲ್ಲಿ ಕಟ್ಟಿ ಬನ್ನೀ ಗಿಡದ ಕೊಂಬೆಗೆ ಕಟ್ಟಿದನೆಂತಲೂ ವರ್ಣನೆ ಇದೆ. ಈ ದೇವಾಲಯಕ್ಕೆ ಪಲ್ಲವ ವಂಶೀಯನಾದ ಮತ್ತು ವೆಂಗಿಚಾಳುಕ್ಯನ ಸಾಮಂತನಾದ ಪಲ್ಲಕೇತು ಭೂಪಾಲನು ದಾನಕೊಟ್ಟಿದ್ದರ ಬಗ್ಗೆ ಇದೇ ಶಾಸನದಲ್ಲಿ ವರ್ಣನೆಯು ಬಂದಿರುತ್ತದೆ.

ಇದರಿಂದ ಶ್ರೀಪತಿ ಪಂಡಿತನು ಈ ಕಾಲದಲ್ಲಿ ಅತ್ಯಂತ ಪ್ರಸಿದ್ಧಿಗೆ ಬಂದಿದ್ದನೆಂತಲೂ, ಅವನು ನಿಜವಾಗಿ ಆಗಿಹೋದ ಮಹಾಪುರುಷನೆಂತಲೂ ಗೊತ್ತಾಗುತ್ತದೆ. ಈ ಶಿಲಾಶಾಸನದಲ್ಲಿ ವರುಷವಿದ್ದ ಭಾಗವು ಸವೆದು ಹೋಗಿರುವದರಿಂದ ಇದು ಯಾವ ಕಾಲದ್ದೆಂಬುದು ನಿಶ್ಚಿತವಾಗಿ ಗೊತ್ತಾಗುವದಿಲ್ಲ.

ಈ ಪೊವಾಡವು ಜರಿಗಿದ ಸ್ಥಳವು 'ಬನ್ನೀ ದೊಡ್ಡೆ' ಎಂಬ ಹೆಸರಿನಿಂದ ಬಿಜವಾಡದಲ್ಲಿ ಈಗಲೂ ಪ್ರಸಿದ್ಧವಿದೆ. ಅಲ್ಲದೆ ಈ ಹೆಸರು ಅಲ್ಲಿಯ ಮುನಿಸಿಪಾಲಿಟಿ ಲೆಕ್ಕದಲ್ಲಿಯೂ ಕೂಡ ಇರುತ್ತದೆ.

ಶಿಲಾಶಾಸನ ಮತ್ತು ಗ್ರಂಥಗಳಲ್ಲಿ ಶ್ರೀಪತಿ ಪಂಡಿತನ ಮತ್ತು ಅವನ ವಂತಜರ ಉಲ್ಲೇಖಗಳು.

ಇದಲ್ಲದೆ ಶ್ರೀಪತಿ ಪಂಡಿತನು ಕೆಲವು ತೆಲುಗು ಗ್ರಂಥಗಳಲ್ಲಿಯೂ ಉಲ್ಲೇಖಿಸಲ್ಪಟ್ಟಿದ್ದಾನೆ. ಅವು ಕೆಳಗೆ ವಿವರಿಸಲ್ಪಟ್ಟಿವೆ.

(೧) ಮೋಚಿರಾಜು ವೀರಣಾವಮಾತ್ಯನೆಂಬ ಗ್ರಂಥಕಾರನು ಮನು ವಂಶ ಪುರಾಣ ಎಂಬ ಗ್ರಂಥವನ್ನು ಬರೆದಿದ್ದಾನೆ. ಇದರಲ್ಲಿ ಅವನು ಪಂಡಿತಾರಾಧ್ಯದೇಶಿಕನು ಬಿಜವಾಡದ ತಿಲ್ಲಿಗರ ಗುರುವಾಗಿದ್ದನೆಂತಲೂ ಅವರು ಅವನ ಕರುಣೆಗೆ ಪಾತ್ರರಾಗಿದ್ದರೆಂತಲೂ ವರ್ಣಿಸಿದ್ದಾನೆ. ಅಲ್ಲಿಯ ರಾಜನಾದ ಚಾಲುಕ್ಯ ವಂಶದ ಪ್ರತಾಪ ಜೋಳನು ಈ ತೆಲ್ಲಿಗರಿಗೆ ಅಂದರೆ ನಾಣಿಗರಿಗೆ ವಿಜಯವಾಟಿಕಾ ಮೊದಲಾದ ೧೪ ಗ್ರಾಮಗಳನ್ನು ಉಂಬಳಿಯಾಗಿ ಹಾಕಿಕೊಟ್ಟಿದ್ದು ಅವರು ತಮ್ಮ 'ಗುರುಪೂ ಮಹೇಶ್ವರ'ನೂ ಆದ ಶ್ರೀಪತಿಯ ಆಶೀರ್ವಾದದಿಂದ ಸುಖವಾಗಿದ್ದರೂ ಅದರಲ್ಲಿ ಹೇಳಿದೆ. ಮುಂದೆ ಈ ಶಿಲಾಶಾಸನದಲ್ಲಿ ಹೇಳಿರುವದೇ

ನೆಂದರೆ, ಈ ತೆಲ್ಲಿಗರು 'ಚಾಲುಕ್ಯ ವಿಷ್ಣುವರ್ಧನ ಮಹಾರಾಜ ದೇವ ಭಲ್ಲಾಣ ವೀರಪೆರುಮಾಳ್ ಪ್ರತಾಪ ಜೋಳ' ಇವನ ರಾಜ್ಯದಲ್ಲಿರು ವಾಗ್ಗೆ ಶಕೆ ೧೧೦೯ ಅಂದರೆ ಕ್ರಿ. ಶ. ೧೧೮೭ ರಲ್ಲಿ ಕೆಲವೊಂದು ಕಲ ಹದ ಮೂಲಕ ಇವರಲ್ಲಿ ಒಡಕುಗಳಾಗಿ ಒಂದು ಪಂಗಡದವರು ದಕ್ಷಿಣ ದೇಶವಾದ ನೆಲ್ಲೂರಿಗೆ ಬಿಜವಾಡವನ್ನು ಬಿಟ್ಟು ಹೋದರೆಂಬ ವರ್ಣನೆ ಇದೆ. ಈ ಭಲ್ಲನರೇಂದ್ರನ ಬೇರೆ ಎರಡು ಶಾಸನಗಳು ಕೃಷ್ಣಾ ಜಿಲ್ಲೆಯಲ್ಲಿ ಪೆದ್ದಕಲ್ಲೆಪಲ್ಲಿ ಎಂಬ ಗ್ರಾಮದಲ್ಲಿದ್ದು ಅವುಗಳಲ್ಲೊಂದರ ವರುಷ ೧೧೫೪ ಇರುತ್ತದೆ.

(೨) ವೀರಣಾಮಾತ್ಯನು 'ಭಿಲ್ಲಾಳ ಚರಿತ್ರೆ' ಎಂಬ ತೆಲುಗು ಕಾವ್ಯವನ್ನು ಬರೆದಿದ್ದಾನೆ. ಇದರಲ್ಲಿಯೂ ಅವನು ಶ್ರೀಪತಿಯನ್ನು ಉಲ್ಲೇಖಿಸಿದ್ದಾನೆ. ಈ ಚರಿತ್ರೆಯನ್ನು ಅವನು ದಾಮುವೊಗ್ಗಣ ಎಂಬ ವನ ಆಶ್ರಯದಲ್ಲಿ ಬರೆದಿದ್ದು ಈ ವೊಗ್ಗಣನ ಗುರುವು ಶಂಭುಲಿಂಗ ನೆಂಬವನೆಂತಲೂ ಈ ಶಂಭುಲಿಂಗನು ಶ್ರೀಪತಿ ಪಂಡಿತಾರಾಧ್ಯನ ವಂಶ ದವನೆಂತಲೂ ಇದರಲ್ಲಿ ಹೇಳಿದೆ.

(೩) ಈ ಶಂಭುಲಿಂಗನ ವೊಮ್ಮಗನು ವೀರಣಾರಾಧ್ಯನೆಂಬವನು ಇದ್ದು ಈತನ ಮಗನು ನಾಗಲಿಂಗನೆಂಬುವನು 'ಪಟ್ಟಾಭಿರಾಮ ವಿಲಾಸಮು' ಎಂಬ ಆಂಧ್ರಕಾವ್ಯವನ್ನು ಬರೆದಿದ್ದಾನೆ. ಇದರಲ್ಲಿ ಈತನು ತಾನು 'ಪಂಡಿತಾರಾಧ್ಯವಂಶ ಸಂಭೂತ' ನೆಂದು ಹೇಳಿ ಕೊಂಡಿದ್ದಾನೆ.

(೪) 'ಗುರು ಸ್ತೋತ್ರ' ಎಂಬ ಹೆಸರಿನ ಇನ್ನೊಂದು ಆಂಧ್ರ ಕಾವ್ಯವಿದ್ದು ಇದರಲ್ಲಿ ಪರಮಾರಾಧ್ಯ ಎಂಬವನ ವಿಷಯವಾಗಿ ಸ್ತುತಿ ಪರ ಪದ್ಯಗಳು ಇವೆ. ಈ ಪರಮಾರಾಧ್ಯನು ಮಲ್ಲಿಕೇಶಲಿಂಗನ ಮಗ ನಿದ್ದು ಈ ಮಲ್ಲಿಕೇಶ್ವರನು ಶ್ರೀಪತಿ ಪಂಡಿತನ ವಂಶದವನೆಂದು ಇದರಲ್ಲಿ ಹೇಳಲ್ಪಟ್ಟಿದೆ.

ಈ ಗ್ರಂಥಗಳಲ್ಲಿರುವ ಈ ಎಲ್ಲ ಉಲ್ಲೇಖಗಳ ಮೇಲಿಂದ ಶ್ರೀಪತಿ ಪಂಡಿತನೂ ಅವನ ವಂಶಜರೂ ಆಂಧ್ರ ನಾಡಿನಲ್ಲಿ ಬಹು ಪ್ರಸಿದ್ಧರಾ ದದ್ದು ತಿಳಿದು ಬರುತ್ತದೆ. ಈ ಸಂಗತಿಗಳನ್ನು ಬೇರೆ ಕೆಲವು ಶಿಲಾಶಾಸನ ಗಳೂ ಕೂಡ ಸಮರ್ಥಿಸುತ್ತವೆ. ಅವುಗಳನ್ನು ಕೆಳಗೆ ಉಲ್ಲೇಖಿಸಿದ್ದೇವೆ.

(೫) ಕೊಂಡವೀಡು ಪಟ್ಟಣವು ೧೩೨೪ ರಿಂದ ಮುಂದೆ ಒಬ್ಬ ರಡ್ಡಿ ಅರಸುಮನೆತನದವರ ರಾಜಧಾನಿಯಾಗಿತ್ತು. ಅವರಲ್ಲಿ ದಾಮುಂ ಪಾಟಿ ಚೆನ್ನಮನೇನಿಂಗಾರು ಎಂಬ ರಾಜನು ಅಲ್ಲಿಯ ವಿಶ್ವೇಶ್ವರ ದೇವಾ ಲಯದ ಗೋಪುರಕ್ಕಿದ್ದ ಕಲ್ಲಿನ ತೊಲೆಯನ್ನು ತನ್ನ ಗುರುವಾದ ಶ್ರೀಗಿರಿಯಯ್ಯಂಗಾರು ಇವನ ಸ್ಮರಣಾರ್ಥವಾಗಿ ಶಕೆ ೧೩೨೭ ಅಂದರೆ ೧೪೦೫ರಲ್ಲಿ ಕೊಟ್ಟಿದ್ದರ ಬರಹವು ಅದರ ಮೇಲಿದೆ. ಈ ಶ್ರೀಗಿರಿಯ ಯ್ಯಂಗಾರುವು ಪಂಡಿತಾರಾಧ್ಯನ ವಂಶದವನೆಂದು ಇದರಲ್ಲಿ ಹೇಳಿದೆ. ಇದೇ ದೇವಾಲಯದ ಒಂದು ಕಂಬದ ಮೇಲೆ ಪೆದ್ದಕೊಮಟಿ ವೇಮು ಎಂಬ ಹೆಸರಿನ ರಡ್ಡಿ ಕುಲದ ರಾಜನು ೧೪೦೮ ರಲ್ಲಿ ಅದೇ ಶ್ರೀಗಿರಿಗೆ ದಾನ ಕೊಟ್ಟಿದ್ದರ ಉಲ್ಲೇಖವಿದೆ. ಈ ರಾಜನು ಶೃಂಗಾರದೀಪಿಕಾ ಎಂಬ ತೆಲುಗು ಗ್ರಂಥವನ್ನು ಬರೆದಿದ್ದಾನೆ.

(೬) ಕರ್ನೂಲ ಜಿಲ್ಲೆಯಲ್ಲಿ ಪಾನೆಮ್ ಎಂಬ ಗ್ರಾಮವಿದ್ದು ಅಲ್ಲಿಯ ಪಾಣಿಕೇಶ್ವರ ಸ್ವಾಮಿಯ ದೇವಾಲಯದ ಮುಖಮಂಟಪದ ಕಂಬದ ಮೇಲೆ ಒಂದು ಶಾಸನವಿದೆ. ಅದರಲ್ಲಿ ವಿಭೂತಿ ಸೌರಯ್ಯ ನೆಂಬುವನು ತಾನು ವರಂಗಲ್ಲದ ಹತ್ತಿರವಿರುವ ಮಾಜಿರಾಜುಪಳ್ಳಿ ಎಂಬಲ್ಲಿಯವನಿದ್ದು ತಾನು ಶ್ರೀಶೈಲದಲ್ಲಿ ವಾಸಮಾಡುತ್ತಿರುವೆನೆಂತಲೂ ತಾನು ಪಂಡಿತಾರಾಧ್ಯನ ಸೇವಕನೆಂತಲೂ ಭಕ್ತಿಪೂರ್ವಕವಾಗಿ ಹೇಳಿ ಕೊಂಡಿದ್ದಾನೆ.

(೭) ಈ ಆಧಾರಗಳಲ್ಲದೆ ಪ್ರಸಿದ್ಧ ಗ್ರಂಥಕಾರನಾದ ಪಾಲ್ಕುರಿಕೆ ಸೋಮಾರಾಧ್ಯನು ತನ್ನ ಆಂಧ್ರಬಸವ ಪುರಾಣದಲ್ಲಿ ಶ್ರೀಪತಿಯನ್ನು ಸ್ಮರಿಸಿರುವದು ಕಂಡುಬರುತ್ತದೆ. ಈ ಕವಿಯು ಅವನನ್ನು ಶಿವಶರ ಣರ ಪಂಕ್ತಿಯಲ್ಲಿ ಸೇರಿಸಿ, 'ಶ್ರೀಪತಿ ಪಂಡಿತನು ಭಕ್ತಿಗೆ ಕಾರಣಪುರುಷ' ನೆಂತಲೂ 'ಹರಭಕ್ತಿ ಉತ್ಪತ್ತಿಗೆ ಅಧಿಪತಿ' ಎಂತಲೂ ವರ್ಣಿಸಿದ್ದಾನೆ. ಸೋಮಾರಾಧ್ಯನು ೧೩ನೇ ಶತಮಾನದ ಅಂತ್ಯ ಭಾಗದಲ್ಲಿ ಅನೇಕ ಉದ್ಗ್ರಂಥಗಳನ್ನು ಬರೆದು ಬಹು ಪ್ರಸಿದ್ಧನಾಗಿದ್ದಾನೆ.

(೮) ಪಂಡಿತತ್ರಯರಲ್ಲಿ ಅತ್ಯಂತ ಪ್ರಸಿದ್ಧನಾದ ಮಲ್ಲಿಕಾರ್ಜುನ ಪಂಡಿತಾರಾಧ್ಯನೂ ಕೂಡ ತನ್ನ 'ಶಿವತತ್ವಸಾರ' ಎಂಬ ಗ್ರಂಥದಲ್ಲಿ ಶ್ರೀಪತಿ ಪಂಡಿತನ ಮಹತ್ಕಾರ್ಯಗಳನ್ನು ಸ್ತುತಿಸಿದ್ದಾನೆ. ಶ್ರೀಪತಿಯು

ಶಿವನೊಬ್ಬನೇ ದೈವವೆಂದು ಸಿದ್ಧಾಂತವಮಾಡಿದನೆಂತಲೂ ಅವನು ಅಗ್ನಿಯನ್ನು ವಿಜಯವಾಡದಲ್ಲಿ ಒಂದು ಶಮೀ ವೃಕ್ಷಕ್ಕೆ ಬಂಧಿಸಿದನೆಂತಲೂ ಹೇಳಿದ್ದಾನೆ. ಈ ಮಲ್ಲಿಕಾರ್ಜುನ ಪಂಡಿತನು ಬಸವೇಶ್ವರನಿಗೆ ಸಮಕಾಲೀನನಾಗಿದ್ದಾನೆ.

(೯) ಇದಲ್ಲದೆ ಪಾಲ್ಕುರಿಗೆ ಸೋಮಾರಾಧ್ಯನು ಬರೆದ ಗಣಸಹಸ್ರದಲ್ಲಿ ಶ್ರೀಪತಿ ಪಂಡಿತನ ಹೆಸರು ಬಂದಿರುತ್ತದೆ.

(೧೦) ನಾಗಲಿಂಗ ಕವಿಯು 'ಗುಪ್ತಾಭ್ಯುದಯ' ಎಂಬ ತೆಲುಗು ಗ್ರಂಥವನ್ನು ಬರೆದಿದ್ದಾನೆ. ಅದರಲ್ಲಿ ಅವನು ಶ್ರೀಪತಿಯ ಒಂದು ವಂಶಾವಳಿಯನ್ನು ಕೊಟ್ಟಿದ್ದು ಅದರಲ್ಲಿ ಶ್ರೀಪತಿಯ ಮಗನು ಗೋಕರ್ಣ, ಈತನ ಮಗನು ಮಲ್ಲಿಕಾರ್ಜುನ, ಈತನ ಮಗನು ಚಿಕ್ಕಮಲ್ಲಿಕಾರ್ಜುನ, ಮತ್ತು ಇವನಿಗೆ ಪಂಡಿತ ಎಂಬ ಹೆಸರಿನ ಮಗ ಹೀಗೆ ಅನುಕ್ರಮವಾಗಿ ಇದ್ದರೆಂದು ಹೇಳಿದೆ. ಶ್ರೀಪತಿಯ ಈ ವಂಶಾನುಕ್ರಮಣಿಕೆಯು ವಿಷಯವಾಗಿ ತೆಲುಗು ಗ್ರಂಥಕಾರರಲ್ಲಿ ಮತೈಕ್ಯವಿಲ್ಲೆಂದು ತಿಳಿಯುತ್ತಿದೆ. ಅಡರೂ ಇವರಲ್ಲಿ ಶ್ರೀಪತಿಯ ಮಗನಾದ ಗೋಕರ್ಣನು ಒಬ್ಬ ಹೊಲೆಯನನ್ನು ದ್ವಿಜನನ್ನಾಗಿ ಮಾಡಿದನೆಂದು ಹೇಳಿದ್ದು ಲಕ್ಷಿಸತಕ್ಕ ಸಂಗತಿಯಾಗಿದೆ.

ಶ್ರೀಪತಿ ಪಂಡಿತನ ವರ್ಚಸ್ಸು ಮತ್ತು ಅವನ ಕಾರ್ಯಗಳು.

ಈ ಎಲ್ಲ ಸಂಗತಿಗಳ ಮೇಲಿಂದ ಆಂಧ್ರದೇಶದಲ್ಲಿ ಶ್ರೀಪತಿ ಪಂಡಿತನು ಅತ್ಯಂತ ಪ್ರಸಿದ್ಧನಾಗಿದ್ದದ್ದು ಸ್ಪಷ್ಟವಿರುತ್ತದೆ. ಅವನಿದ್ದ ಬೆಜವಾಡ ಮತ್ತು ಅದರ ಸೆರೆ ಪ್ರಾಂತದಲ್ಲಿ ತೆಲ್ಲಿಗರು ಈ ಕಾಲದಲ್ಲಿ ಬಹು ವರ್ಚಸ್ಸುಳ್ಳವರಾಗಿದ್ದು ಅವರು ಅವನಿಗೋಸ್ಕರ ಅತ್ಯಂತ ಭಕ್ತಿಭಾವವನ್ನು ತಾಳಿದವರಾಗಿದ್ದರೆಂದು ತಿಳಿಯುತ್ತಿದೆ. ಈ ಭಾಗವನ್ನು ಆಳುತ್ತಿದ್ದ ಮಾಂಡಲಿಕರೂ ಅನೇಕ ರಾಜರೂ, ಶ್ರೀಪತಿ ಪಂಡಿತನನ್ನು ಬಹಳ ಆದರಿಸುವವರಾಗಿದ್ದರು. ಅವನ ಮಹತ್ವವನ್ನು ಕುರಿತು ಮೇಲೆ ಹೇಳಿದ ಪ್ರಕಾರ ತೆಲುಗು ಭಾಷೆಯಲ್ಲಿ ಅನೇಕ ಗ್ರಂಥಗಳಲ್ಲಿ ಉಲ್ಲೇಖಗಳು ಬಂದಿರುತ್ತವೆ. ಅವುಗಳಲ್ಲಿ ಅವನ ಬಗ್ಗೆ ಅತ್ಯಂತ ಭಕ್ತಿಭಾವಪೂರಿತವಾದ ನುಡಿಗಳಿವೆ. ಅವನು ಶ್ರೇಷ್ಠ ಪಂಡಿತನಾದುದರಿಂದಲೇ ವಿದ್ವಾಂಸರಿಂದ ವಿಶೇಷ ಮನ್ನಣೆಯನ್ನು ಹೊಂದಿ 'ಪಂಡಿತ'ನೆಂಬ ಹೆಸರನ್ನು ಪಡೆದು ವಿಖ್ಯಾತನಾಗಿದ್ದಾನೆ. ಅವನಲ್ಲಿ ಶಿವಶರಣರ ಉದಾರ ನಡೆಯು ಪೂರ್ಣವಾಗಿರುವದು ಅವನ ಚರಿತ್ರೆಯಿಂದಲೇ ಕಂಡುಬರುತ್ತದೆ. ಶಿವನೊಬ್ಬನೇ ದೈವವೆಂದು ಅವನು ಪ್ರತಿಪಾದಿಸಿದ್ದಾನೆ. ಅಗ್ನಿಯು ದೇವತೆ ಎಂಬುದನ್ನು ಅವನು ನಿರಾಕರಿಸಿ ಯಜ್ಞಾದಿಕರ್ಮಗಳನ್ನು ಬಸವೇಶ್ವರನಂತೆ ಒಪ್ಪಿರುವದಿಲ್ಲ. ವೀರಶೈವರಲ್ಲಿ ಜಾತಿವರ್ಣಗಳಿರುವದಿಲ್ಲೆಂಬುದನ್ನು ಅವನು ಶಮೀವೃಕ್ಷದ ಪೋವಾಡವನ್ನು ಮಾಡಿದ್ದಾನೆ. ತೈಲಿಕರಂಥ ಸಮಾಜದವರಿಗೆ ಗುರುವಾಗಿದ್ದಾನೆ. ಅವನ ವಂಶಜರೂ ಕೂಡ ಅವನಂತೆಯೇ ಉದಾರ ವರ್ತನೆಯುಳ್ಳವರಾಗಿದ್ದಾರೆ. ಅವನ ಮಗನು ಅವನಂತೆಯೇ ಒಬ್ಬ ಅಂತ್ಯಜನನ್ನು ಬ್ರಾಹ್ಮಣನನ್ನಾಗಿ ಮಾಡಿದ್ದಾನೆ. ಈ ಉಭಯತರು ಕೇವಲ ನುಡಿಯಲ್ಲಿ ಇದನ್ನು ವ್ಯಕ್ತಮಾಡದೆ ಅಂತ್ಯಜ ಮತ್ತು ಶೂದ್ರರೊಡನೆ ಊಟವನ್ನು ಮಾಡಿ ಕೃತಿಯಲ್ಲಿ ತಂದಿದ್ದಾರೆ. ಇದಕ್ಕೋಸ್ಕರ ಆದ ವಾಗ್ವಾದಗಳಲ್ಲಿ ಲಿಂಗಿಗಳಲ್ಲಿ ಜಾತಿಭೇದವಿಲ್ಲೆಂಬುದನ್ನು ಶ್ರೀಪತಿಯು ಅನೇಕ ಶಾಸ್ತ್ರಾಧಾರಗಳಿಂದ ಸಿದ್ಧಪಡಿಸಿದ್ದಾನೆ. ಹೀಗೆ ಶ್ರೀಪತಿ ಪಂಡಿತನು ಶಿವಶರಣರ ಮತವನ್ನು ಆಂಧ್ರದೇಶದಲ್ಲಿ ಪ್ರಸಾರಪಡಿಸಿರುವದು ಕಂಡುಬರುತ್ತದೆ.

ಆಂಧ್ರದೇಶದಲ್ಲಿ ಕರ್ನಾಟಕಕ್ಕಿಂತಲೂ ಹೆಚ್ಚಾಗಿ ಬ್ರಾಹ್ಮಣ ಅಥವಾ ವೈದಿಕ ಪದ್ಧತಿಗಳನ್ನು ಅನುಸರಿಸುವವರ ಕಡೆಗೆ ಒಲವು ಇರುವದು ಕಂಡುಬರುತ್ತದೆ. ಆದುದರಿಂದ ಅವರಲ್ಲಿ ಬ್ರಾಹ್ಮಣ ಪದ್ಧತಿಗಳು ಹೆಚ್ಚಾಗಿ ಕಂಡುಬರುತ್ತವೆ. ಆದರೆ ಅಲ್ಲಿಯ ವೈದಿಕಾನುಯಾಯಿಗಳು ಮುಂದೆ ಶಿವಶರಣರ ಉದಾರ ತತ್ವಗಳಿಗೆ ಮನಸೋತು ವೀರಶೈವ ದೀಕ್ಷೆಯನ್ನು ಹೊಂದಿ ಅದರ ತತ್ವಗಳನ್ನು ಪ್ರಸಾರ ಮಾಡಿದ್ದು ತಿಳಿದುಬರುತ್ತದೆ. ಹೀಗೆ ಪ್ರಸಾರ ಮಾಡುವಲ್ಲಿ ಅವರು ಶ್ರುತ್ಯಾಗಮ ಪ್ರಮಾಣಗಳನ್ನು ಕಂಡುಹಿಡಿದು ಅವುಗಳ ಮೂಲಕ ವೀರಶೈವವನ್ನು ಅವರು ಪ್ರಸ್ಥಾಪಿಸಿದ್ದಾರೆ. ಇದು ಶ್ಲಾಘನೀಯವಾದ ಪ್ರಯತ್ನವು. ಉದಾಹರಣಾರ್ಥವಾಗಿ ಉರಿಲಿಂಗಪೆದ್ದಿಯು ಮೊದಲು ಆಂಧ್ರದೇಶದವನು. ಅವನು ಮುಂದೆ ವೀರಶೈವ ಧರ್ಮವನ್ನು ಸ್ವೀಕರಿಸಿ ವಚನಕಾರನಾದನು. ಅವನು ತನ್ನ ವಚನಗಳಲ್ಲಿ ಶ್ರುತಿ, ಪುರಾಣ, ವೇದಾಗಮ, ಉಪನಿಷತ್ತು ಇವುಗಳಲ್ಲಿಯ ಅನೇಕ ಆಧಾರಗಳಿಂದ ವೀರಶೈವಸಿದ್ಧಾಂತ

ಪನ್ನು ಸ್ಥಿರಪಡಿಸಿದ್ದಾನೆ. ಹಾಗೆಯೇ ಶ್ರೀಪತಿ ಪಂಡಿತನು ವೀರಶೈವರಲ್ಲಿ ಜಾತಿಭೇದವಿಲ್ಲೆಂಬುದನ್ನು ಜಾಬಾಲ, ಶತರುದ್ರೀಯ ಮೊದಲಾದ ಪ್ರಮಾಣಗಳಿಂದ ಸಿದ್ಧಾಂತಗೊಳಿಸಿದ್ದಾನೆ. ಹೀಗೆ ಈತನು ತನ್ನ ಪಾಂಡಿತ್ಯದಿಂದ ಶಿವಶರಣರ ಪಂಕ್ತಿಯಲ್ಲಿ ಅತ್ಯುಚ್ಚ ಸ್ಥಾನವನ್ನು ಹೊಂದಿದ್ದಾನೆ. ಬಸವ, ಅಲ್ಲಮಪ್ರಭು, ಚನ್ನಬಸವ ಮೊದಲಾದ ಶಿವಶರಣರು ಯಾವ ಕಾರ್ಯವನ್ನು ಕರ್ನಾಟಕದಲ್ಲಿ ಮುಂದುವರಿಸಿದರೋ ಅದೇ ಕಾರ್ಯವನ್ನು ಶ್ರೀಪತಿ ಪಂಡಿತನು ಆಂಧ್ರದೇಶದಲ್ಲಿ ಮುಂದುವರಿಸಿ ಅಲ್ಲಿಯ ವೀರಶೈವರ ಇತಿಹಾಸದಲ್ಲಿ ಅಜರಾಮರ ಕೀರ್ತಿಯನ್ನು ಹೊಂದಿದ್ದಾನೆ. ಅವನು ಆಂಧ್ರದೇಶದಲ್ಲಿರುವ ಆರಾಧ್ಯರಲ್ಲಿ ಬಹು ಪ್ರಸಿದ್ಧನಾಗಿ ಅಲ್ಲಿ ದಿಗ್ವಿಜಯ ಮಾಡಿ ಬ್ರಾಹ್ಮಣ ಧರ್ಮೀಯರನ್ನು ವಾದದಲ್ಲಿ ಜಯಿಸಿ ಜಾತಿ, ಕುಲ, ವರ್ಣಭೇದಗಳನ್ನು ಖಂಡಿಸಿ ಅನೇಕರನ್ನು ವೀರಶೈವ ಧರ್ಮದಲ್ಲಿ ಸೇರ್ಪಡೆ ಮಾಡಿದ್ದಾನೆ. ಅವನು ಮಾಡಿದ ಮಹತ್ಕಾರ್ಯಕ್ಕೋಸ್ಕರ ಆರಾಧ್ಯ ಬ್ರಾಹ್ಮಣರು ಅವನನ್ನು ತಮ್ಮ ಲಿಂಗಪೂಜಾಕಾಲದಲ್ಲಿ ಪ್ರತ್ಯಕ್ಷ ಶಂಕರನಂತೆ ಕಂಡು ಅವನನ್ನು ಭಕ್ತಿಭಾವದಿಂದ ಈಗಲೂ ಭಜಿಸುತ್ತಾರೆ.

ಶ್ರೀಪತಿ ಪಂಡಿತನ ಕಾಲ.

ಶ್ರೀಪತಿ ಪಂಡಿತನು ಬಸವೇಶ್ವರನಕಿಂತಲೂ ಕೆಲವು ಕಾಲ ಮೊದಲಿಗನೆಂದು ತೋರುತ್ತದೆ. ಅನಂತರಾಜ ಮತ್ತು ಭಲ್ಲಾಣ ವೀರ ಪೆರುಮಾಳ್ ಇವರ ಶಿಲಾಶಾಸನಗಳು ಈ ಸಂಗತಿಯನ್ನು ದೃಢಪಡಿಸುತ್ತವೆ. ಆದರೂ ಶ್ರೀಪತಿಯು ಬಹುಶಃ ಬಸವೇಶ್ವರನ ಆರಂಭ ಕಾಲದಲ್ಲಿಯೂ ಅಸ್ತಿತ್ವದಲ್ಲಿರಬಹುದು. ಬಸವೇಶ್ವರನ ಸಮಕಾಲೀನನಾದ ಮಲ್ಲಿಕಾರ್ಜುನ ಪಂಡಿತಾರಾಧ್ಯನು ತನ್ನ ಗ್ರಂಥದಲ್ಲಿ ಅವನನ್ನು ಸ್ಮರಿಸಿರುವದರಿಂದ ಶ್ರೀಪತಿಯು ಬಸವೇಶ್ವರನಕಿಂತ ಸ್ವಲ್ಪ ಮೊದಲು ಇರಬಹುದು. ಆದರೆ ಭಲ್ಲಾಣನ ಶಿಲಾಶಾಸನದಿಂದ ಅವನು ಬಸವೇಶ್ವರನ ಕಾಲದಲ್ಲಿಯೂ ಇರಬಹುದೆಂದು ಊಹಿಸಲು ಅಸ್ಪದವಿದೆ.

ಶ್ರೀಪತಿ ಪಂಡಿತ, ಮಲ್ಲಿಕಾರ್ಜುನ ಪಂಡಿತ ಮತ್ತು ಮಂಚಣ್ಣ ಪಂಡಿತ ಈ ಮೂವರಲ್ಲಿ ಶ್ರೀಪತಿ ಪಂಡಿತನು ಎಲ್ಲರಿಗೂ ಮೊದಲಿಗನು,

ಶಿವಾನುಭವ

ವರ್ಷ ೨೦ | ಸಪ್ಟೆಂಬರ ೧೯೪೬ | ಸಂಚಿಕೆ ೧೨

ಆತ್ಮತತ್ವವೂ ಮತ್ತು ಪ್ರಾಚೀನ ಸಂಸ್ಕೃತಿಯೂ.

(ಲೇಃ- ಶ್ರೀ ಸುಬ್ರಹ್ಮಣ್ಯಂ, ದಾವಣಗೇರಿ.)

ಜಗತ್ತು ಪರಿವರ್ತಶೀಲವು. ನೂತನ ವಿಚಾರಗಳು, ನೂತನ ಕಲಾಕೌಶಲ್ಯ, ನೂತನ ಆವಿಷ್ಕಾರಗಳು, ಮತ್ತು ನೂತನ ವಿಜ್ಞಾನದ ವಿಕಾಸ, ಇವುಗಳು ಪ್ರತಿದಿನವೂ ನಡೆಯುತ್ತಲೇ ಇವೆ. ಒಂದು ನೂರು ವರ್ಷಗಳ ಕೆಳಗೆ ಇಂದಿನ ವಿಜ್ಞಾನದ ಕಲ್ಪನೆಯೂ ಕೂಡ ಇರಲಿಲ್ಲ. ಇದೇ ರೀತಿ ಭವಿಷ್ಯದಲ್ಲಿ ಉಂಟಾಗಬಹುದಾದ ವಿಜ್ಞಾನದ ಕಲ್ಪನೆಯೂ ಕೂಡ ಈಗ ಸಾಧ್ಯವಿಲ್ಲ. ಇದೇ ರೀತಿಯಲ್ಲಿ ಪ್ರಾಚೀನ ಕಾಲದಲ್ಲಿ ಆಗಿ ಹೋಗಿರುವ ಆಧ್ಯಾತ್ಮಿಕ ವಿಜ್ಞಾನದ ಕಲ್ಪನೆಯನ್ನು ಆಧುನಿಕ ಕಾಲದ ಮನುಷ್ಯರು ಮಾಡಲಸಮರ್ಥರಾಗಿರುವರು. ಆದುದರಿಂದಲೇ ಆಧ್ಯಾತ್ಮಿಕ ವಿಜ್ಞಾನದ ವಿಷಯ "ಸತ್ಯವಾವುದು? ಅಸತ್ಯವಾವುದು?" ಇದರ ವಾಸ್ತವಿಕ ಸಂಶೋಧನೆಯು ಅಸಂಭವವೆಂದೇ ತೋರುತ್ತಿದೆ. ಪ್ರಾಚೀನ ಕಾಲದ ವಿಜ್ಞಾನವೇತ್ತರು ಪ್ರಕೃತಿಯ ಪರಮಾಣು—ಪರಮಾಣುವನ್ನು ಸಹ ಶೋಧಿಸಿಬಿಟ್ಟರು. ಆದರೆ ವಿಜ್ಞಾನದ ಪೂರ್ತಿಯಾಗಲಿಲ್ಲ. ಕೊನೆಗೆ ಅವರು ಬಾಹ್ಯ ಶೋಧನೆಯನ್ನು ತ್ಯಜಿಸಿ ಅಂತರಂಗಶೋಧನೆಯನ್ನು ಮಾಡಿ ಆತ್ಮತತ್ವವನ್ನು ಹುಡುಕಿ ತೆಗೆದರು. ಆ ಆತ್ಮತತ್ವವು ಸರ್ವ ಶ್ರೇಷ್ಠವಾದ ತತ್ವ. ಅವರು ಆ ತತ್ವದ ವ್ಯಾಖ್ಯೆ ಮಾಡುತ್ತ ಈ ರೀತಿ ಹೇಳಿದ್ದಾರೆಃ—

ನ ತತ್ರ ಸೂರ್ಯೋ ಭಾತಿ ನ ಚಂದ್ರ ತಾರಕಂ।
ನೇಮಾ ವಿದ್ಯುತೋ ಭಾಂತಿ ಕುತೋಯಮಗ್ನಿಃ॥

ತಮೇವ ಭಾಂತಿ ಮನು ಭಾತಿ ಸರ್ವಂ
ತಸ್ಯಭಾಸಾ ಸರ್ವಮಿದಂ ವಿಭಾತಿ ॥
(ಕಠೋ ೨-೨-೧೫)

ನಿತ್ಯೋಽನಿತ್ಯಾನಾಂ ಚೇತನಶ್ಚೇತನಾನಾ-
ಮೇಕೋ ಬಹೂನಾಯೋ ವಿದಧಾತಿ ಕಾಮಾನ್ ।
ತಮಾತ್ಮಸ್ಥಂ ಯೇಽನು ಪಶ್ಯಂತಿ ಧೀರಾ-
ಸೇಷಾಂ ಶಾಂತಿಃ ಶಾಶ್ವತೀ ನೇತರೇಷಾಂ॥
(ಕಠೋ ೨-೨-೧೩)

ಪ್ರಪಂಚದ ಪರಿವರ್ತನಶೀಲವಾದ ಸಮಸ್ತ ಪದಾರ್ಥಗಳಿಗಿಂತಲೂ ಅಪರಿವರ್ತನಶೀಲವೂ, ಜ್ಞಾನಿಗಳಲ್ಲಿ ಸರ್ವಶ್ರೇಷ್ಠವಾದ ಜ್ಞಾನಿಯೂ ಮತ್ತು ಒಂದೇ ಆಗಿದ್ದರೂ ಕೂಡ ಸಮಸ್ತವಿಶ್ವದ ಕಾಮನೆಗಳನ್ನು ಪೂರ್ಣ ಮಾಡತಕ್ಕದ್ದೂ ಆದ ತನ್ನಲ್ಲೇ ಇರುವ ಆತ್ಮತತ್ವವನ್ನು ಅವರು ಹುಡುಕಿ ತೆಗೆದರು.

ಈ ಆತ್ಮನೇ ಈಶ್ವರ, ಬ್ರಹ್ಮ ಎಂಬ ಹೆಸರಿನಿಂದ ಪ್ರಖ್ಯಾತವಾಗಿದ್ದು, ಪ್ರತಿ ಪ್ರಾಣಿಯ ಹೃದಯದಲ್ಲಿಯೂ ಇದರ ನಿವಾಸವಿದೆ. ಅದನ್ನರಸಲು ಬೇರೆ ಎಲ್ಲಿಯೂ ಹೋಗಬೇಕಾಗಿಲ್ಲ. ವಾಸನಾರಹಿತರಾದೆವೆಂದರೆ, ನಮ್ಮ ಹೃದಯಮಂದಿರದಲ್ಲಿಯೇ ಇದರ ದರ್ಶನವಾಗುತ್ತದೆ.

'ಸಮಸ್ತ ವಾಸನೆಗಳೂ ನಾಶಹೊಂದಿದ ನಂತರ ಜಗತ್ತಿನ ಎಲ್ಲ ಭೌತಿಕ ಪದಾರ್ಥಗಳೂ ಹೇಯವಾಗಿ ಬಿಡುತ್ತವೆ. ಅದುದರಿಂದಲೇ ಭಾರತದ ಋಷಿಮುನಿಗಳು ಬಾಹ್ಯ ವಸ್ತುಗಳನ್ನು ತ್ಯಾಗಮಾಡಿ, ಅರಣ್ಯದಲ್ಲಿ ನಿವಾಸಮಾಡುತ್ತ, ಕಂದಮೂಲಗಳನ್ನು ತಿಂದು ಉದರ ಪೋಷಣೆ ಮಾಡಿಕೊಂಡು, ಆತ್ಮದರ್ಶನದ ಮೂಲಕ ಪೂರ್ಣ ಶಾಂತಿಯನ್ನು ಪಡೆದಿದ್ದರು. ಪ್ರಾಚೀನ ಕಾಲದಲ್ಲಿ ಈ ಶಾಂತಿನಿಕೇತನ ಆತ್ಮತತ್ವವನ್ನು ಹುಡುಕಿ ನಿತ್ಯವೂ ಪೂರ್ಣವೂ ಆದ ಶಾಂತಿಯನ್ನು ಪಡೆಯಬೇಕು ಎಂಬುದೇ ಆದರ್ಶವಾಗಿದ್ದಿತು. ಅದುದರಿಂದಲೇ ಭಾರತದ ಸಾಮ್ರಾಟರೂ ಸಹ ಋಷಿಮುನಿಗಳಿಗಾಗಿ ಗದ್ದುಗೆಯನ್ನು ಬಿಟ್ಟು ಕೊಟ್ಟು ಕೆಳಗೆ ನಿಂತು ಅವರ ಚರಣ ಸ್ಪರ್ಶಮಾಡಿ ತಾವು ಕೃತಕೃತ್ಯರಾಗುತ್ತಿದ್ದರು.

ಪ್ರಾಚೀನ ಕಾಲದಲ್ಲಿ ಲೌಕಿಕ ಸಂಪತ್ತಿಗೆ ಯಾವ ಬೆಲೆಯೂ ಇರಲಿಲ್ಲ. ಎಲ್ಲರೂ ಆತ್ಮಶಕ್ತಿಯು ಹಸಿವಿನಿಂದ ಕೂಡಿರುತ್ತಿದ್ದರು. ಆತ್ಮತತ್ವಕ್ಕಾಗಿ ರಾಜ್ಯವನ್ನು ಸಹ ತ್ಯಜಿಸಿ ಭಿಕ್ಷುಕರಾಗಿ ಹೋಗುವುದು ತಮ್ಮ ಸೌಭಾಗ್ಯವೆಂದು ಭಾವಿಸಿದ್ದರು.

ಆಧ್ಯಾತ್ಮಿಕ ಜೀವನವು ಧನ ಸಂಪತ್ತಿಯನ್ನನಲಂಬಿಸಿಲ್ಲ. ಅದುದರಿಂದಲೇ ಕಂದ, ಮೂಲಫಲಗಳನ್ನೇ ಸರ್ವಶ್ರೇಷ್ಠವೆಂದು ಭಾವಿಸಿದ್ದರು. ಇತರ ತೋಟಗಳ ಹಣ್ಣು ಹಂಪಲು, ಸೊಪ್ಪು ಸಹ ತ್ಯಾಜ್ಯವೆಂದಿತ್ತು. ಅಥವಾ ತಮ್ಮ ಸರ್ವಸಂಪತ್ತನ್ನೂ ದಾನಮಾಡಿ ಬಡವರು ನೀಡಿದ ಭಿಕ್ಷೆಯಿಂದ ಆತ್ಮತತ್ವವನ್ನು ಶೋಧಿಸಿ ತೆಗೆಯುತ್ತಿದ್ದರು.

ಭಾರತೀಯ ಸಭ್ಯತೆಯಲ್ಲಿ ಪಶುಪಕ್ಷಿಗಳನ್ನು ಸಹ ತಮ್ಮ ಆತ್ಮವೆಂದು ತಿಳಿಯುತ್ತಿದ್ದರು. ಈಗಿನ ಕಾಲದಲ್ಲಾದರೋ ನಾವು ಮನುಷ್ಯರನ್ನು ಸಹ ನಾವು ನಮ್ಮ ಆತ್ಮನೆಂದು ತಿಳಿಯುತ್ತಿಲ್ಲ. ಮನೆಯಲ್ಲಿ ಐಶ್ವರ್ಯದ ಪ್ರವಾಹವೇ ಬರುತ್ತಿದೆ. ಆದರೆ ನೆರಿಹೊರೆಯವರು ಹಸಿವಿನಿಂದ ಸಾಯುತ್ತಿರುವರು. ನೆರಿಹೊರೆಯವರ ಮಾತಿರಲಿ, ಸ್ವಂತ ಸಹೋದರನು ಪತ್ತರೂ ಅವನಿಗೆ ಒಂದು ಹಿಡಿ ಕಾಳನ್ನು ಕೊಡುವಂತಿಲ್ಲ. ಧರ್ಮ, ಈಶ್ವರ ಇವೆಲ್ಲವೂ ನಿವಿತ್ತ ಮಾತ್ರಗಳಾಗಿ ಉಳಿದು ಹೋಗಿವೆ. ಇದೇ ಕಾರಣದಿಂದಲೇ ನಾವು ನಿಂದೆಗೆ ಪಾತ್ರರಾಗಿ, ಎಂದಿಗೂ ಮುರಿಯಲಾಗದಂತಹ ದಾಸ್ಯವೆಂಬ ಸರಪಣಿಯಿಂದ ಬಿಗಿಯಲ್ಪಟ್ಟಿದ್ದೇವೆ.

ತಾವು ಹಸಿದಿದ್ದು ಇತರರಿಗೆ ಆಹಾರವನ್ನು ಕೊಡುವುದೇ ಶ್ರೇಷ್ಠ ಕರ್ತವ್ಯ ಎಂದು ಉಪದೇಶ ಮಾಡುತ್ತಿದ್ದ ಆ ಪ್ರಾಚೀನ ಸಂಸ್ಕೃತಿಯು ಎಂತಹ ಶೋಚನೀಯ ಸ್ಥಿತಿಗೆ ಇಳಿದಿದೆ ಎಂದರೆ, ನಿಜವಾದ ಭಗವದ್ಭಕ್ತ ಭಿಕ್ಷುವಿಗೂ ರೊಟ್ಟಿಯನ್ನು ಕೊಡುವುದು ಪಾಪವೆಂಬ ಭಾವನೆಯುಂಟಾಗಿದೆ.

ಯಾವದಿಭ್ರಿಯೇತ್ ಜಠರಂ ತಾವತ್ ಸತ್ವಂ ಹಿ ದೇಹಿನಾಂ ।
ಅಧಿಕಂ ಯೋಽಭಿಮನ್ಯೇತ ಸಸ್ತೇನೋ ದಂಡಮರ್ಹತಿ ।
ಮೃಗೋಷ್ಟ್ರಖರ ಮರ್ಕಾಖು ಸರೀ ಸೃಪ್ಪಗಮಕ್ಷಿಕಾಃ ।
ಆತ್ಮನಃ ಪುತ್ರವತ್ ಪಶ್ಯೇತ್ ತೈರೇಷಾಮಂತರಂ ಕಿಯತ್ ॥
(ಶ್ರೀಮದ್ಭಾಗವತ ೭-೧೪ ಅ-೮)

"ಮನುಷ್ಯನ ಸಂಪತ್ತಿಗೆ ತೊಟ್ಟಿತುಂಬಿಕೊಳ್ಳುವಷ್ಟು ಮಾತ್ರ ಅಧಿಕಾರ ವಿದೆ. ಅದಕ್ಕಿಂತ ಅಧಿಕವಾದ ಅಧಿಕಾರವನ್ನು ನಡೆಯಿಸುವವನು ಕಳ್ಳ, ಶಿಕ್ಷಾರ್ಹನು. ವ್ಯಾಘ್ರ, ಒಂಟೆ, ಕತ್ತೆ, ವಾನರ, ಇಲಿ, ಸರ್ಪ ಮುಂತಾದವು, ಪಕ್ಷಿ ಮತ್ತು ನೊಣಗಳನ್ನು ಸಹ ತಮ್ಮ ಮಕ್ಕಳಂತೆ ಕಾಣಬೇಕು. ಏಕೆಂದರೆ ತತ್ವದೃಷ್ಟಿಯಿಂದ ಇವುಗಳಿಗೂ ಈ ಪ್ರಾಣಿಗಳಿಗೂ ಯಾವ ಅಂತರವೂ ಇಲ್ಲ.

ಈ ರೀತಿ ಇತ್ತು ನಮ್ಮ ಆಶ್ಚರ್ಯಜನಕವಾದ ಸಂಸ್ಕೃತಿ! ಈಗಿನ ಕಾಲದಂತೆ ಪಶುಪಕ್ಷಿಗಳನ್ನು ಕೊಂದು ತಿನ್ನುವಂತ ಸಂಸ್ಕೃತಿಯಾಗಿರಲಿಲ್ಲ. ಪಶು-ಪಕ್ಷಿಗಳ ಮಾತಿರಲಿ, ತನ್ನ ಸ್ವಾರ್ಥಕ್ಕಾಗಿ ನಾನಾರೀತಿಯಿಂದ ಮನುಷ್ಯರನ್ನೇ ತಿಂದು ಬಿಡಲು ಹಿಂದೆ ಮುಂದೆ ನೋಡದಂತಹ ಸಂಸ್ಕೃತಿಯಾಗಿರಲಿಲ್ಲ. ಆದರೆ ಕೇವಲ ಪ್ರಾಚೀನ ಸಂಸ್ಕೃತಿಯ ಗುಣಗಾಯನ ಮಾಡಿದ ಮಾತ್ರದಿಂದಲೇ ನಮ್ಮ ಕಲ್ಯಾಣವಾಗುವಂತಿಲ್ಲ. ಪ್ರಾಚೀನ ಸಂಸ್ಕೃತಿಯನ್ನು ಆಚರಣೆಗೆ ತರುವುದರಿಂದ ಮಾತ್ರವೇ ನಮ್ಮ ಕಲ್ಯಾಣವಾಗುವುದು!

ಕವಿ ಚಾಮರಸ.

(ಶ್ರೀ ವ್ಹಿ. ಎಸ್. ಗುಂಡಾಚಾರ್ಯ ಮು. ಗುಲಬುರ್ಗಾ.)

ಭಾರತಕೆ ಬಗೆಗೊಟ್ಟು ಇತಿಹಾಸಕೆಡೆಗೊಟ್ಟು ಕನ್ನಡದಿ ಹೆಣೆದಿಟ್ಟು। ಸೋದಂಗೆ ಸುಡಗೊಟ್ಟು ಆಶೆ-ಆಕಾಂಕ್ಷೆಗಳ ಬಿಟ್ಟು ಬಿಟ್ಟು

ವರ್ಣನ ಹಟವನು ತೊಟ್ಟು ಮುಂಕಾಗಿ ಮುಂದೆ ನೀಂ ಕಾವ್ಯದೇವಿಯ ಸ್ನೇಹವಿರಹಿಯಾಗೆ। ರಸದೊರೆಯು ಉತ್ತಿತ್ತು. ನಾಡನುಡಿಯಡಗಿತ್ತು. ಕವಿಯ "ಬಾವುಟ" ನೆಲಕೆ ಬಳುಕಿ-ಬಗ್ಗಿತ್ತು

ಛಂದಸ್ಸಿಗೆಡೆಯಿಲ್ಲ. ಪಟ್ಟದಿಗೆ ಕಾಲಿಲ್ಲ. ಲಕ್ಷಣಕೆ ರೂಪಿಲ್ಲ। ಭಾವಕ್ಕೆ ಬೆಳಗಿಲ್ಲ. ಕಾವ್ಯಕ್ಕೆ ಕಳೆಯಿಲ್ಲ. ಕವಿತೆಕನ್ನೆಗೆ ಮೊರೆಯು ಬೇರೆಯಿಲ್ಲ

ಕಲೆಯು ಕತ್ತಲೆಯಿಂದ ಹೊರಡಲಿಲ್ಲ. ಇತಿಹಾಸ ಮುನ್ನಡೆಯ ಕಾಲ. ಇಲ್ಲ. ಕವಿಗೋಷ್ಠಿ ಪೀಠಕ್ಕೆ ಅರಸನಿಲ್ಲ. ನಿನ್ನ ಮೌನದ ಅರ್ಥ ತಿಳಿಯಲಿಲ್ಲ.

ಗಗನ ತಾರೆಗಳಂತೆ ನಿನ್ನನರಸಲು ನಡೆದು, ಅಲ್ಲೊಬ್ಬ ಇಲ್ಲೊಬ್ಬ ಎಲ್ಲ ಕಡೆಗೊಬ್ಬೊಬ್ಬ। ಮಿನಗು ಮಿಣಕಿನ ಬೆಳಗಿನಲಿ ರಸಿಕನುಂ ಚಾಣಾಕ್ಷ ಮತ್ತಂ ವಿಮರ್ಶಕಂ.

ನಿನ್ನ ಸೊಲ್ಲನು ಕೇಳಿ ನಿನ್ನನ್ನು ಕರಿತಯವ "ಪಂತಗಾರ"! ಸಂಶೋಧನೆಗನೆ ಬಹಳ ಚತುರ। ಅದರೇಂ! ಒಕ್ಕಲಿಲ್ಲೈ ನೀನು. ಪೇಡುಗಾರ ನಿನ್ನನಾಳಲು ನೀನೆ ಮನದ ವೀರ.

ನಿನ್ನ ಕವಿತಾಮಧುರಗಂಗೆಯೋದಕದಲ್ಲಿ। ಸ್ನೇಹದಿಂ ಸೇವಿಸಲು ಬಲವಿಲ್ಲದವರಲ್ಲಿ। ಕೂಪ ಮಂಡೂಕವನು ಹೂಡುವವರಲ್ಲಿ। ಪಾಪರಿ ಮಾರ್ಜನೆಯು ಮಾಳ್ಪುದಿನ್ನೆಲ್ಲಿ?

ಸ್ವಾರ್ಥಿಗಳ ಹೋರಾಟ, ಕುಹಕಿಗಳ ಜೋರಾಟ, ಸ್ವಪ್ರಶಂಸೆಯರಂಗ ಆಡುತಿಹ ಆಟ। ತೊಳೆದ ಮನದಿಂ ನೋಡೆ ಅದು ಹೀನ ನೋಟ. ಹೂಡಿದ್ದರೈ ಆಗ ಚದುರಂಗದಾಟ

ಸೋದರಿಯ ಹೀನತನವನು ಕಂಡು ಮೂದಲಿಸಿ ಮೂಕಾದಿಯೇನು। ಬೂದಿಯಾಗಿಹ ನಿನ್ನ ಭಾರತವ ನೆನೆನೆನೆದು ಕಾತರಿಸಿ ಶೋಕಿಸುವಿಯೇನು? ತಪ್ಪಿಂಗೆ ತಂಗಿಯನು ಪಂಡಿಸಲು ಧರ್ಮಕ್ಕೆ ತಲೆಬಾಗಿದೇನು? । ಒಪ್ಪಯ್ಯ ಆಗ ನೀಂ ತಳೆದಿದ್ದ ಮೌನಕ್ಕೆ ಕಾರಣವದೇನು?

ಚಾಮರಸ ಬೇಡಯ್ಯ ನಿನ್ನ ಸೋದರಿಯನ್ನು ಧಿಃಕರಿಸಬೇಡ। ಅಮಿತಾಂತರಾತ್ಮಕ್ಕೆ ಮಿತಗೊಳಿಸಬೇಡ. ಕ್ಷಮೆಯ ಖಡ್ಗವ ಧರಿಸಿ ಮೊಗದೊಮ್ಮೆ ನೋಡ.

ಭಸ್ಮಭಾರತದಲ್ಲಿ ಕೈಹಾಕಬೇಡ ಬೂದಿಯನು ಸೋದರಂಗೆ ಮೈತೊಡೆಯಬೇಡ। ನಾಡನುಡಿರಸಿಕರಂಗೆ ನಿಂದಿಸಲು ಬಿಡುವು ಬೇಡ। ನೀಮತ್ತೆ ಕಾವ್ಯಹಾಡ.

ಸಣ್ಣವನುಜರು ತಮ್ಮ ಸಂಸಾರ ಚಟಗಳಿಗೆ ಅಣ್ಣತಮ್ಮಂದಿರನು ತುಳಿಯಲ್ಕೆ ನುಗ್ಗುವರು। ನೀತಿಯನು ಮೀರುವರು, ನ್ಯಾಯಕ್ಕೆ ಚಿಂತಿಸರು, ಚಟದ ಶಕವಿಗೆ ತಾವು ಬಾಗಿ ಹೋಗುವರು.

ಮಟವುನೆಯ ಕಳಕೊಂಡು ದಾಸವೃತ್ತಿಗೆ ಬಿಲ್ಲಿ ಸೇನೆವಾಡುವರು, ದಿಟವದೇ ತವುಗೆಂದು ಅರಿದುಕೊಂಡಿಹರು। ಅಂತೆಯೇ ಅವರಂತು ವಾಡುತಿರುತಿಹರು.

ಕವಿಕುವಾರವ್ಯಾಸ ಭಾರತವ ಚಿತ್ರಿಸಲು ಕನ್ನಡದ ಧಾಂಡಾರಕೆ ಡೆಯು ಕೊಡಲು। ತವಕಿಸಲು ವುನ್ನಡೆಯಲವನಿಂಗೆ ನಿನ್ನಿಂದ ಕಂಟಕವು ಸಂಭವಿಸಲು.

ಕೊರಗಿದನು ಕಂಗೆಟ್ಟು ತನ್ನ ಕರ್ತವ್ಯವನು ವುಂದೆ ವುರಿದು। ನೆರವಿಲ್ಲ, ಅರಿವಿಲ್ಲ, ಸತಿಯ ವಾರ್ಗವ ಬಿಟ್ಟು ಬೇರೆಯಿಲ್ಲ.

ಪತಿಯ ಪ್ರೇವುದ ಕಗ್ಗತ್ತಲೆಯ ವುಬ್ಬಿನಲಿ ಇತಿಹಾಸ ಭಾರತಕೆ ಕೊಳ್ಳಿ ಹೂಡಿ। ಕೃತಿಯಿಂದ ದಹನಸಂಸ್ಕರವನು ವುನವುಟ್ಟಿ ವಾಡಿ.

ಗಂಡನಿಗೆ ಗವುನಕ್ಕೆ ದಾರಿ ತೋರಿದಳು। ಚಂಡಿಯು ಪತಿಭಕ್ತೆ ಕಾನೆಂಬ ಗಾನ ಹಾಡಿದಳು। ಬೇಡಯ್ಯ ಚಾವುರಸ ಕವಿರಾಜ ನೀಂ ವುನಿಯಬೇಡ। ಕನ್ನಡಕೆ ಬೆಳಗುತಿಹ ನಿನ್ನ ಜ್ಯೋತಿಯುನೀಗನೊಂದಿಸಲು ಬೇಡ। ವೌನಜಪದಿಂ ವುತ್ತೆ ವೂಕಾಗಬೇಡ.

ಉಸಿರು ನೀನುಸಿರು ನಿಟ್ಟುಸಿರನ್ನು ಭೋರ್ಗರಿಸು ಕವಿತೆಯನ್ನು ಕುಡಿಕುಡಿಸು। ಇತಿಹಾಸವನು ವೆರೆಸು "ಶಿವನನ್ನು" ಕರಿತಂದು ಭೂವಿಗಿಳಿಸು। ಕೈಲಾಸದೋಲಗವನಿಳಿಗೆ ನೆರೆಸು, ಪ್ರಭುಲಿಂಗಲೀಲೆಯನು ಹಾಡಿ ಹಂಸು.

ಜೈನದಾಸರು ಬರಲಿ, ಶಿವಶರಣರಿಳಿತರಲಿ, ಕವಿಗಳಿಲ್ಲರು ಬಂದು ಕೂಡುತಿರಲಿ। ಪ್ರಭುಲಿಂಗಲೀಲೆಯನು ಹಾಡುತಿರಲಿ, ಆ ಕುವಾರವ್ಯಾಸ ವುರುಗುತಿರಲಿ। ಸತಿಯ ಪುಣ್ಯದ ಫಲವನ್ನುಣ್ಣುತಿರಲಿ, ಅರ್ಧಭಾಗದಭೋಗ ವಾಡುತಿರಲಿ.

ವೊಗದೊವ್ವೆ ಎಂದೆಂದು ಪರಂಪಾದರೂ ಹೀನ ಈ ಕೃತಿಯುಗೈಯ್ಯದಿರಲಿ। ಕನ್ನಡದ್ರೋಹಿಗಳು, ಕವಿಪಕ್ಷಪಾತಿಗಳು ತವ್ಮ ತಪ್ಪಿನ ಬುತ್ತಿ ಯುಂಡು ಉಣಲಿ.

ನಿನ್ನ ವೌನದ ಗುಟ್ಟು ರಟ್ಟಾಗಲಿ, ಚಾವುರಸ ವಚನಗಂಗೋದಕವು ಸೆಳವಾಗಲಿ। ಬೆಳ್ಳಗಾವಿಯ ತೊರೆದು ಗದುಗಿಂಗೆ ನಡೆತಂದು ಪ್ರೌಢದೇವನ ರಾಜ್ಯದಲಿ ನಿಂದು.

ಕರಣಿಕೆಯ ಚತುರೆಯ ಬಲದಿಂದ ರಾಜ್ಯವುನವನು ಸೆಳೆದು ಎಲ್ಲನನು ತೊರೆದು। ಬನವಾಸಿ "ವುಧುಕೇಶ್ವರನ" ಸಾಕ್ಷಿ ಪ್ರಭುಲಿಂಗಲೀಲೆಯನು ಹಾಡಿ, ಗಾನಕ್ಕೆ ಕವಿತೆಯನು ನೀಡಿ.

ಹಾಯ್ ಕವಿಯೇ, ಚಾವುರಸ ನೀನೇ ಕರಣಾಳು. ತಪ್ಪಿತರ ವುನ್ನಿಸುವಿಯೇಳು। ವುಖಬಾಡಿನಿಂದಿರ್ದ ಕವಿಕುವಾರವ್ಯಾಸನಂ ಕಂಡು ಕರಗಿದೆಯಾ, ವುರುಗಿದೆಯಾ?

ಭಾರತವನುಚ್ಚರಿಸಲವನಿಗರುಹಿದೆಯಾ? ನಾರಾಯಣಗೆ ಶರಣು ನಡೆಯ ಕೇಳಿದೆಯಾ। ಕನ್ನಡದ ಕವಿ "ಬಿರುದ" ಕರಕೆ ಕಟ್ಟಿದೆಯಾ? ಕವಿಗೋಷ್ಠಿ ಪೀಠಕ್ಕೆ ಪಟ್ಟಗಟ್ಟಿದೆಯಾ?

ನಿನ್ನ ನಿಜವಾರ್ಗಕ್ಕೆ ನೀನಡೆದು ವೈರಾಗ್ಯತ್ಯಾಗದರ್ಥವ ಜಗಕೆ ಸಾರಿ ಹೇಳಿದೆಯಾ?। ಚಾವುರಸ ನಿನ್ನಿಂದ ಕನ್ನಡಾಂಬೆಯು ತೃಷೆಯು ಸಂತೈಸದಾಯ್ತು ನಿಸರ್ಗಕ್ಕೆ.

ನಿನ್ನ ಸ್ವಾಗತನಿತು ನಿರ್ವಾಹವಲ್ತು ವುರೆಯಾಯ್ತು, ಲೀನಾಯ್ತು, ಐಕ್ಯಾಯ್ತು। ಓಂ. ಓಂ. ಓಂ.। ಇನಿತೆಲ್ಲ ಬಾಯ್ವುಡಿಯೋ? ಇತಿಗತಿಯೋ? ನಾನರಿಯೆ, ಸಂಶೋಧಕರು। ತಂದು ಸಂದೇಶ ಸಾರಿದರೆ ವಾಡಕರು ಬಾಗುವರು ಚಾವುರಸ ಕವಿಯೆ?...

ಶಿವಯೋಗಿ ಸಂದರ್ಶನ.

(ವ್ಯಕ್ತಿಚಿತ್ರ-ಉಪದೇಶ.)

(ಲೇಖಕರು:-ಶ್ರೀ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರು ದೊಂಗಳೂರು)

ಶಿವಸವುದ್ರದ ಸೋಜಿಗ ನೋಡಬಯಸಿ ವೈಸೂರಿನಿಂದ ಬೆಳಗಿನಿಂದಲೂ ಸೈಕಲ್ಲಿನ ವೇಲೆ ಪ್ರಯಾಣ ವಾಡಿ ೧೨ ಗಂಟೆಯ ಹೊತ್ತಿಗೆ ಟಿ. ನರಸೀಪುರದ ನದೀ ಸೇತುವೆ ಒಂದೆರಡು ವೈಲಿ ದೂರಕ್ಕೆ ವಿಶ್ರವಿಸಿದೆವು. ಅಲ್ಲಿ ಲೋಕಪಾವನೆ ಕಾವೇರಿ ನವ್ಮ ದಣಿವನಾರಿಸಲು ಹಾತೊರೆಯುವಂತೆ ತೋರುತ್ತಿದ್ದಳು. ಅಲ್ಲಿ ಒಡನಿದ್ದ ಗೆಳೆಯ

ನೊಡನೆ ನದಿಗಿಳಿದು ದಣಿವಳಿಯೆ ದಡಸೇರಿ ಹಸ್ಯದಲ್ಲಿದ್ದ ಅಗಸ್ತೇಶ್ವರ ದೇವಾಲಯ, ಗುಂಜಾನರಸಿಂಹನ ಗುಲಗಂಜಿ ಮಹತ್ವದ ಪ್ರವಾದ–ಕಾಶಿಗಿಂತ ಗುಲಗುಂಜಿ ತೂಕ ವಿಗಿಲಿನಿಸಿದ ದೇವರ ಹಿಂಮೆ, ನವ್ಮ ದಣಿವನ್ನು ಮರೆಯಿಸಿತು.

ಮುಂದೆ ಸೋಸಲೆ ಮಾರ್ಗವಾಗಿ ಮುಂಬರಿದೆವು. ಊರ ಹೊರಗಿನ ಹೊಲಗಳ ರಮ್ಯ ದೃಶ್ಯ ನವ್ಮ ಕಣ್ಮನಗಳನ್ನು ಸೆರೆಗೈದಿತು. ಕಾವೇರಿಯು ಮುದ್ದುಮಗಳೆಂಬಂತೆ ಹರಿಯುತ್ತಿದ್ದ ನಾಲೆಯು ಪಕ್ಕದಲ್ಲಿ ಕಾಣುವ ಬಡ ಕುಟೀರ. ಅದಕ್ಕೆ ಕೋಟೆ ಕೊತ್ತಲಗಳಿಲ್ಲ. ಬಣ್ಣ ಬಿಡಗುಗಳಿಲ್ಲ. ಸುಣ್ಣಸಾರಣೆಯು ಸುಳಿವಿಲ್ಲ. ಹೆಣ್ಣುಮಣ್ಣಿನ ಅಸೆ, ಹೊನ್ನು ಒಡವೆಯ ಬಯಕೆ ಇಲ್ಲದಿಹ ನಿತ್ಯನಿರುಪಮವೀಂ ವೈರಾಗ್ಯವೇ ಮೈವೆತ್ತು ನಿಂತಂತೆ ಅದು ತೋರುವುದು. ಅಲ್ಲಿ ಅಸೆ ಕುದುರೆಯ ಕಟ್ಟಿ, ವ್ಯಾನೆ ಪಾಲಕಿ ಮೆಟ್ಟಿ, ಮೆರವಣಿಗೆ ಹೊಂಡುತಿಹ ಹಿರಿದು ಸಂಸಾರ ಸಹಗೊಂಡ ಸನ್ಯಾಸಿ ಸ್ವಾಮಿಗಳ ವೈಭವದ ಬೆಡಗಿಲ್ಲ. ಶಿಷ್ಯರನು ಮೆಚ್ಚಿಸಲು ಭೂತಿ—ರುದ್ರಾಕ್ಷಿಗಳ ಧರಿಸಿ, ಕೋರಿಕೆಯ ಆಡಂಬರದ ಕಾಳ—ಮೇಳದ ಗಂಟಿ—ಜಾಗಟೆಗಳ ಗದ್ದಲದ ನಡುನಡುವೆ ಕಪಟಪೂಜೆಯ ಮಾಡಿ, ವಂಚಿಸುವ ರಂಜಸನ್ಯಾಸಿಗಳ ಸೋಗುಗಳ ಸುಳಿವಿಲ್ಲ. ರಾಜಪ್ರೇಮವ ಗಳಿಸಿ ಮುಖಸ್ತುತಿಯ ಮಾಡುವರ, ಮರುಳತೆಯನರಿಯದಿಹ, ಮುಖಮುಸುಕು ಹಾಕುತಲಿ ಜಪಮಣಿಯನೆಣಿಸುತಲಿ ಹೊಲ್ಲದನು ಚಿಂತಿಸುವ, ವಂಡನೆಯ ವಿಧ್ಯಾಚಾರ ಕೆಡಿ ಇರದ, ಒಳಹೊರಗು ಒಂದೇ ನಡೆ ಒಂದೇ ನುಡಿ, ಮಾತು ಮಾಟಗಳಲ್ಲಿ ಮನಸುಕನಸುಗಳಲ್ಲಿ ವಿಷಯಗಳನರಿಯದಿಹ, ಪರಮನೊಳು ಮನವಿರಿಸಿ ಜನರೊಳಗೆ ಬೆರೆತಂತು ಹಸುಳೆಯೊಲು ಕ್ರೀಡಿಸುವ ಶಿವಯೋಗಿಯೋರ್ವನು ಅಲ್ಲಿ ಮಂಡಿಸಿದ್ದಾನೆ.

ತೋಪಿನಮಠದ ಪಂಚಾಕ್ಷರಿ ಸ್ವಾಮಿಗಳ ಕರಕಂಜಾತ ನಿರಂಜನ ಹ-ಬ್ರಂ- ಷಡಕ್ಷರ ಸ್ವಾಮಿಗಳು. ಈ ಮಠವು ಮೂಲಪುರುಷರಾದ ಶ್ರೀ ವಿರೂಪಾಕ್ಷ ಸ್ವಾಮಿಗಳಿಂದ ಈಗ್ಗೆ ಸುಮಾರು ಇನ್ನೂರು ವರ್ಷಗಳ ಹಿಂದೆ ಇಲ್ಲಿ ಸ್ಥಾಪಿಸಲ್ಪಟ್ಟಿತು. ಅವರ ನಂತರ ಶ್ರೀ ಚನ್ನಬಸವ ಸ್ವಾಮಿಗಳು ಮೂರನೆಯವರೇ ಈ ಮಹಾಮೂರ್ತಿಯ ಹಿರಿಯ ಗುರುಗಳು. ಷಡಕ್ಷರ ಸ್ವಾಮಿಗಳ ಜನ್ಮದಾತರು ಚಿದರಹಳ್ಳಿಯ ಶ್ರೀಯುತ

ವೀರಪ್ಪ, ಶಿವಭಕ್ತಿ ಸಿದ್ಧಲಿಂಗಮ್ಮನವರು. ಇವರ ಗರ್ಭವಲ್ಲಿ ಮಹಾಮೂರ್ತಿಯು ಇಂದಿಗ ಸುಮಾರು ೮೦ ವರ್ಷಗಳ ಹಿಂದೆ ಜನ್ಮತಾಳಿದರು. ಶ್ರೀಯುವರು ತಮ್ಮ ಅಖಂಡ ಬ್ರಹ್ಮಚರ್ಯದ ಬಲದಿಂದ ಸದೃಢ ಆರೋಗ್ಯಶಾಲಿಗಳಾಗಿ ವಿರಾಜಿಸುತ್ತಿದ್ದಾರೆ. ಇಂದಿಗೆ ಸುಮಾರು ಸಲವತ್ತು ವರ್ಷಗಳ ಹಿಂದೆ ಜಗತ್ತಿನ ಜಂಜಾಟದಲ್ಲಿ ಜಿಗುಪ್ಸೆ ಬಂದು ತಮ್ಮಯ್ಯನವ್ವನವಲ್ಲಿ ವೈರಾಗ್ಯಶಾಲಿ ಈ ಮಠವಲ್ಲಿ ಆಶ್ರಮ ಸ್ವೀಕರಿಸಿದರು. ಅಂದಿನಿಂದ ಇಂದಿನ ವರೆಗೆ ಒಂದೇ ನಿಷ್ಠೆ ವರದ ಸತ್ಯ ಮುತ್ತು ಅಳುದ್ದದ ತಡಿಕೆಕಟ್ಟಿ ಹೊರಗಿನವರ ಮುಖದರ್ಶನವಾಗದಂತೆ ಏರ್ಪಡಿಸಿದ್ದಾರೆ. ಶ್ರೀಯುವರು ಬೆಳಗಿನ ಇನ್ನೂ ಕತ್ತಲಿರುವಾಗಲೆ ಸಂಚಾರ ಹೊರಟು ನಿತ್ಯಕರ್ಮಗಳನ್ನು ಮುಗಿಸಿಕೊಂಡು ಬಂದು ಮತ್ತೆ ಕರೆದರೆ ಮತ್ತೆ ರಾತ್ರಿ ಕಗ್ಗತ್ತಲು ಸುಳಿದಾಗಲೆ ಹೊರಬರುವುದು. ವಯಸ್ಸು ಎಂಬತ್ತಾದರೂ ಮುಖದಲ್ಲಿ ಬ್ರಹ್ಮವರ್ಚಸ್ಸು ತಾಂಡವವಾಡುತ್ತಿದೆ.

ಇಲ್ಲಿ ಸೇವಕರ ಸುಳಿವಿಲ್ಲ. ಎಲ್ಲ ಕೆಲಸಗಳನ್ನು ತಾವೇ ಮಾಡಬೇಕು. ಸೌರೆಕಾಯಿಯ ಹೋಳಿನಲ್ಲಿ ಭೋಜನ. ಉಪ್ಪು ತುಪ್ಪವಿಲ್ಲದ ಹುಳಿಕಾರ ಬೆರೆಯದಿಹ ಪೊಸರು ಚಿಟ್ಟಣ್ಣವಲಿ ಮೀಯದಿಹ ನಾಸ್ವಿಕ ಮಿತಾಹಾರ. ಹಗಲಿರುಳು ಕದ ಮುಚ್ಚಿ ತಿವನೊಡನೆ ಒಡೆವೆರಡು ಧ್ಯಾನದಲ್ಲಿ ಕುಳಿತಿರುವುದು ಅವರ ಜೀವನಸೌಂದರ್ಯ. ಒನ್ಮೆ ಅರಮನೆಯ ಅಂತಃಪುರದ ಹೆಂಗಳೆಯರು ಮುಡುಕು ತೊರೆಯಿಂದ ಬರುವಂತೆ ಶ್ರೀಯುವರ ವೀರ ನಿಷ್ಠೆಗಳನ್ನರಿತು ದರ್ಶನ ಬೇಡಿದರೆ ನಿರಾಕರಿಸಿದ ನಿದರ್ಶನ ಮೂರ್ತಿಯದು. ಸೆಂಪೆ ಸೂಸುವ ಅವರ ದಿವ್ಯವಾಣಿಯ ನವ್ಮ ಕೇಳಿ ತಲೆದೂಗದ ನರನಿಲ್ಲ. ತರ್ಕವೇದಾಂತ ಶಾಸ್ತ್ರಗಳ ಅಭ್ಯಾಸವಿಲ್ಲದಿದ್ದರೂ "ಯಾವುದನ್ನು ತಿಳಿದರೆ ನಿಖಿಲ ವಿಶ್ವದ ಜ್ಞಾನವೂ ಅರಿವಹುದುವೆದಂ"ಬ ಉಪನಿಷತ್ತಿನ ದಿವ್ಯ ಸಂದೇಶದಂತೆ ನಿಜ ತತ್ವಜ್ಞಾನದಿಂದ ಎಲ್ಲವನ್ನು ಬಲ್ಲರವರು. ಅವರಿದುರಿನಲ್ಲಿ ಬಡವ ಬಲ್ಲಿದರೆಂಬ ಅಸಮಭೇದ ಕಿಂಚಿತ್ತೂ ಭೇದಭಾವಗಳಿಲ್ಲ. ನಿರಂತರವೂ ಹಿಂದಿನ ಮಹಾಪುರುಷರ ಪಿಸರರಾಗದ ದಿವ್ಯಮಾರ್ಗವ ನೆನೆನು ಬಂದವರಿಗೆ ಪರಮಾರ್ಥ ತೋರುವುದೇ ಅವರ ಸತ್ಯನಿಷ್ಠೆ.

ಅವರ ದಿವ್ಯ ದರ್ಶನದಿಂದ ನವ್ಮ ಪ್ರಯಾಣಯಾಸವು ಮಾಯವಾಯಿತು. ನವ್ಮನ್ನು ನಾವು ಮರೆತು ಅವರ ವಚನ ದಿವ್ಯಾಮೃತಸೇಚನದಿಂದ ನಾವು ಪುನೀತರಾದೆವು.

ಶ್ರೀಯವರ ದಿವ್ಯ ಸನ್ನಿಧಿಯಲ್ಲಿದ್ದ ಒಂದೆರಡು ದಿನಗಳೂ ಅವರ ವಚನಾಮೃತ ಸವಿಯೂಟದಂತಿತ್ತು. ಅವರು ತಮ್ಮ ದೀರ್ಘಾನುಭವದಿಂದುಸುರುತ್ತಿದ್ದ ಒಂದೊಂದು ಸೂಳ್ನುಡಿಯೂ ಸೂತ್ರದಂತೆ ಬಹ್ವರ್ಥಗರ್ಭಿತವಾಗಿ ಕೇಳುವವರ ಸಂದೇಹಗಳನ್ನು ಹೊರ ನೂಡುತ್ತಿತ್ತು. ಅವುಗಳಲ್ಲಿ ಕೆಲವು ನಮ್ಮ ನಿತ್ಯ ಜೀವನದಲ್ಲಿ ತಲೆಹಾ ಕುವ ಅನೇಕ ಸಮಸ್ಯೆಯ ಸಂಕೋಲೆಗಳನ್ನು ಬಿಡಿಸುವ ಕೀಲಿಕೈಗ ಳಂತಿವೆ ಅವರ ದಿವ್ಯಾಮೃತದ ಕೆಲವು ನಡಿಗಳನ್ನು ಮಾತ್ರ ಇಲ್ಲಿ ಕೊಡಲು ಉದ್ಯುಕ್ತಿಸಲಾಗಿದೆ.

ವಚನಾಮೃತ

ಪ್ರ. ತಾವಿರುವ ವಸತಿಯು ಹೀನಸ್ಥಿತಿಯಲ್ಲಿದೆ ಇದರ ರಿಪೇರಿ ಮುಂ ತಾದುವನ್ನು ಮಾಡಲು ತಾವು ಪ್ರಯತ್ನಿಸಿಲ್ಲ?

ಉ. ಒಂದು ರತ್ನವು ಕಳೆದು ಹೋಗಿತ್ತು. ಅದನ್ನು ಹುಡುಕಲು ನಾನಿಲ್ಲಿ ಬಂದೆ. ಉಳಿದುದರ ಸುದ್ದಿ ನನಗೇನು?

ಪ್ರ. ಗುರು ವಿರಕ್ತರ ಜಗಳದ ವಿಷಯದಲ್ಲಿ ತಮ್ಮ ಆಶಯವೇನು?

ಉ. ರಾಜರಾಜರ ಜಗಳವಿದ್ದಂತೆ ಗುರು ವಿರಕ್ತರ ಕಲಹ. ನಾವು ದೊಡ್ಡವರು ತಾವು ದೊಡ್ಡವರು ಎಂದು ಇವರು ಜಗಳಾಡು ವಲ್ಲಿ ವಿಶ್ವಸ್ಥೆ ಹೀಯನೆನಿಸಿದ ದೇವರೆಲ್ಲಿ ಹೋಗಬೇಕು? ಆಡಂಬರ ಕೆಟ್ಟದ್ದು. ರೂಪನೋಡಿ ಭಕ್ತ ಕೆಟ್ಟ ರುಚಿನೋಡಿ ಜಂಗಮ ಕೆಟ್ಟ.

ಪ್ರ. ಕಷ್ಟ, ಸುಖವೆಂದರೇನು?

ಉ ಬೇಕೆಂಬುದು ಕಷ್ಟ. ಬೇಡವೆಂಬುದು ಸುಖ.

ಪ್ರ. ಸ್ವಾಮಿಗಳು ಕೆಲವರು ಒಳ್ಳೆಯ ತೇಜಸ್ವಿಗಳಾಗಿರುತ್ತಾರೆ.

ಉ. ತೇಜಸ್ಸೆಂದರೇನು? ಪರಕಲುದನ ಹೊಲಕ್ಕೆ ಬಿಟ್ಟರೆ ಹೇಗಾ ಗುತ್ತದೆ?

ಪ್ರ. ಮಾನವ ಜೀವನದ ಗುರಿಯೇನು?

ಉ. ಹುಟ್ಟು ಸಾವು ತಪ್ಪಿಸಿಕೊಳ್ಳುವದು ಮಾನವನ ಗುರಿ. ನೀರಿ ನಲ್ಲೊಂದು ಹುಳವಿದೆ. ಅದು ಶೃಂಗಾರದಂತೆ ಸುತ್ತಿಸುತಿ ಹೋಗುತ್ತದೆ. ಅದರಂತೆ ಮಾನವನು ತನ್ನ ಜೀವನದ ಅವ ಧಿಯಲ್ಲಿ ಒಳ್ಳೇ ಕೆಲಸಮಾಡಬೇಕು.

ಪ್ರ. ನೀತಿಎಂದರೇನು?

ಉ. ಬಸವಣ್ಣನವರ 'ಕಳ ಬೇಡ ಕೊಲಬೇಡ' ಎಂಬ ಪದ್ಯದ ಅದರ್ಶವಿರಬೇಕು.

ಪ್ರ. ವಿಷಯಗಳಿಂದ ಪಾರಾಗುವ ಬಗೆ ಹೇಗೆ?

ಉ. ಕೋಮಲವಾದ ಜುಟ್ಟು ಸೀಗೆಮೆಳೆಗೆ ಸಿಕ್ಕಿಕೊಂಡಾಗ ಉಪಾ ಯವಾಗಿ ಬಿಡಿಸಿಕೊಂಬಂತೆ ವಿಷಯಗಳ ಬಲೆಯಿಂದ ಪಾರಾಗಬೇಕು.

ಪ್ರ. ಸಂಸಾರವನ್ನು ತ್ಯಜಿಸಬೇಕೊ?

ಉ. ಸಂಸಾರ ಹೇಯವಲ್ಲ. ಸಂಸಾರದಲ್ಲಿದ್ದು ಅದರ ಪಾರವ ಪುದೇ ಜಾಣ್ಮೆ.

ಪ್ರ. ವಿದ್ಯೆಯ ನೆಲೆಯಾವುದು?

ಉ. ಹೊರಗಿನ ವ್ಯಾಸಂಗ ಮುಗಿಯಬೇಕು. ಆಗ ಅಲೆಯಾಡಿಸಿದ ಕೊಳದಂತೆ ನಿಶ್ಚಲವಾಗುವನು ಶಿಷ್ಯ.

ಪ್ರ. ಜಗತ್ತಿನ ಆರಂಭವು ಹೇಗೆ?

ಉ. ಲೆಕ್ಕವು ಸೊನ್ನೆಯಿಂದ ಆರಂಭವಾಗುತ್ತದೆ. ಜಗತ್ತು ಶೂನ್ಯ ದಿಂದ ಮೊದಲಾಗುತ್ತದೆ.

ಪ್ರ. ಸನ್ಯಾಸವೆಂದರೇನು?

ಉ. ಒಳಹೊರಗು ಹೆಣ್ಣು ಬಿಡಬೇಕು. ಪರರ ಹೆಣ್ಣಿಗೆಗಾಗಿ ಹೆಣ್ಣು ಬಿಡುವುದು ಮಿಥ್ಯಾಚಾರ.
ಅನ್ನಬಿಟ್ಟು ಸತ್ತವರುಂಟು. ಹೆಣ್ಣು ಬಿಟ್ಟು ಸತ್ತವರಿಲ್ಲ.
ನಿರ್ಜನ ದೆಡೆಯಲ್ಲಿ ಹೆಣ್ಣು ಚಿಂತೆ ಬಿಟ್ಟವನು ಸನ್ಯಾಸಿ.

ಪ್ರ. ವಿರಕ್ತನ ವರ್ತನೆ ಹೇಗಿರಬೇಕು?

ಉ ಸತ್ತಮನೆ, ಹೆತ್ತಮನೆ, ಮದುವೆಯ ಮನೆಯ ಅನ್ನ, ಗೃಹಸ್ಥರ ಮನೆಯ ವಾಸ ಇವು ವಿರಕ್ತರಿಗೆ ಸಲ್ಲವು. ಇಲ್ಲಿ ದ್ದರೆ ಕಾಡಿ ಹುಲಿ ಊರ ಹೊಕ್ಕಂತೆ ಆಗುವದು.

ಕುದುರೆ ಮೇನಾ ಪಾಲಕಿ, ಆಡಂಬರ ತೊರೆದು ರೊಕ್ಕ ಗಳಿಸುವದನ್ನು ಬಿಟ್ಟ ನಿಜವರಿಯದವರು ವಿರಕ್ತರೆಂತು?

ಅಳು ಕಾಳು ಕತ್ತೆ ಕುದುರೆ ಕಟ್ಟುವದಾದರೆ ಸಂಸಾರಿಯು ಹೇಗೆ ಮುದುಪೆಯಾಗಬಾರದೆ ಕೆ?

ಮಡುವಿನಗ್ಗಣಿ, ಕಾಡುಪಶ್ರೆ ವಿರಕ್ತಿಧರ್ಮ. ಸುಟ್ಟ ಬೀಜದಂತೆ ಅವರ ವರ್ತನವಿರಬೇಕು. ಅದು ವಿಷಯಗಳ ಹೊಲಬಿನಲ್ಲಿ ಬಿಗುರಬಾರದು.

ಹೆಣ್ಣು-ವಣ್ಣು-ಹೊನ್ನಿಗೆ ಹೊರಗಿರುವವನು ಭವರೋಗ ವೈದ್ಯ.

ಪ್ರ. ಜಿತೇಂದ್ರಿಯತ್ವದ ಬಗ್ಗೆ ನಿಮ್ಮ ವಿಚಾರವೇನು?

ಉ. ಲಾಯದ ಕುದುರೆ ಗೂಟಕ್ಕೆ ಕಟ್ಟಿಬಿದ್ದು ಮುದಿಯಾದಂತೆ ಕಾಡಿನಲ್ಲಿ ಹುಲಿ, ಚಿರತೆ, ತಪಸ್ಸು ಮಾಡಿದರೇನು? ಆತ್ಮ ಜ್ಞಾನಿಯಾಗಬಲ್ಲುದೆ?

ಕಬ್ಬಿಣ ಬೇಡಿಗಳಿಗೆ ಕಾಲುಕೊಟ್ಟವನು ಕಳ್ಳ. ಚಿನ್ನದ ಬೇಡಿಗಳಿಗೆ ಕಾಲು ಕೊಟ್ಟವನು ವಿರಕ್ತ.

ಗುರುಮುಲ್ಲಪ್ಪ, ಎಳಂದೂರ ಸ್ವಾಮಿ, ಶಿವರುದ್ರ ಸ್ವಾಮಿ, ಸಪ್ಪಣ್ಣಸ್ವಾಮಿ ಮುಂತಾದರು ನಿಜವಿರಕ್ತರು.

ಪ್ರ. ಮೋಕ್ಷದಲ್ಲಿ ಭೇದವಿದೆಯೋ?

ಉ. ಸಂಸಾರಿ ವಿರಕ್ತ, ಸನ್ಯಾಸಿ ವಿರಕ್ತ, ಇವರಿಬ್ಬರಿಗೂ ಮೋಕ್ಷ ಒಂದೇ

ಪ್ರ. ಗುರುಶಿಷ್ಯರ ಅನುಭವವಾವುದು?

ಉ. ಶಿಷ್ಯನು ಹಲಸಿನಕಾಯಿ ವೀಳಿನ ಮುಳ್ಳು ನೋಡಿ ಹೆದರಿದ. ಗುರುವು ಅದನ್ನು ಕೊಯ್ದು ಮಧುರವಾದ ತೊಳೆ ತೆಗೆದಿತ್ತ.

ಪ್ರ. ಅದರಿಂದ—ಇದರಿಂದ ಎಂದರೇನು?

ಉ. ಮಾನವನು ಒಳ್ಳೇಮಾತು ಕೆಟ್ಟಮಾತುಗಳಿಂದ ಅವನವನ ಪುಣ್ಯಫಲ ಉಣ್ಣುತ್ತಾನೆ. ಒಮ್ಮೆ ಒಂದು ಕಾಡಿನಲ್ಲಿ ಒಬ್ಬ ಮುನಿಯು ಕುಳಿತು ತಪಸ್ಸು ಮಾಡುತ್ತಿದ್ದ. ದಾರಿಯಲ್ಲಿ ಬೇಟೆಗೆ ಬಂದಿದ್ದ ರಾಜ ಮತ್ತು ಅವನ ಉನ್ನತ ಅಧಿಕಾರಿಗಳು 'ಸ್ವಾಮಿ, ಈ ಕಾಡಿನಲ್ಲಿ ಮೃಗಗಳು ಈಕಡೆ ಹೋದುವೇ' ಎಂದು ವಿನಯದಿಂದ ಕೇಳಿದರು. ಋಷಿ ಅವರಿಗೆ ಉತ್ತರ

ವಿತ್ತ. ಅವರ ಪದವಿ ಉಚ್ಚವಾದದ್ದು 'ಅದರಿಂದ' ಎಂದ. ಅನಂತರ ಒಬ್ಬ ತಿರುಕನು ಗಟ್ಟು ಬೊಂತೆಗಳನ್ನು ತಲೆಯ ಮೇಲೆ ಹೊತ್ತು 'ಲೋ ಕಾಡುಮನುಷ್ಯ, ಈ ದಾರಿ ಎಲ್ಲಿಗೆ ಹೋಗುತ್ತದೆ? ಎಂದ. ಋಷಿ ಅವನಿಗೂ ಉತ್ತರವಿತ್ತ. ಅವನ ದುಃಸ್ಥಿತಿಗೆ ಕಾರಣ ಇದರಿಂದ ಎಂದೆ

ಪ್ರ. ಜ್ಞಾನ ಕ್ರಿಯೆಗಳ ತಾರತಮ್ಯವೇನು?

ಉ ಜ್ಞಾನಕ್ರಿಯೆಗಳೆರಡೂ ಹಕ್ಕಿಯ ಎರಡೂ ರೆಕ್ಕೆಗಳಿದ್ದಂತೆ. ಹಾಗೆಯೇ ಲೌಕಿಕ ಪಾರಮಾರ್ಥಗಳೆಂದೂ ದೇಹ. ಕೇವಲ ಕ್ರಿಯೆ ಗೊಡ್ಡು, ಕೇವಲಜ್ಞಾನ ಅಪ್ರಯೋಜಕ. ನಿಜದಲ್ಲಿ ಮನ ನಟ್ಟವನು ಏನು ಮಾಡಿದರೂ ವಿಷಯಕ್ಕೆ ಅಂಟುವದಿಲ್ಲ.

ಪ್ರ. ಶಿವ ಜೀವರ ಇರವು ಹೇಗೆ?

ಉ. 'ಹೆತ್ತ ತಪ್ಪ ಕರಗಿಸಿದ ತುಪ್ಪದಂತೆ ಶಿವಜೀವರಿರವು. ಅವರ ಐಕ್ಯ ಚಿನ್ನ ಒಡವಿಗಳರಿಕೆ' 'ಜೀವನು ಅಕ್ಕಿಯ ಮೇಲೆ ಹೊಟ್ಟು ಮುಚ್ಚಿದಂತೆ ಅಜ್ಞಾನದಿಂದ ಆವೃತ್ತನಾಗಿದ್ದಾನೆ. ಅವನನ್ನು ಜ್ಞಾನವೆಂಬ ಒನಕೆಯಿಂದ ಕುಟ್ಟಿ ಗುರುವು ಶುದ್ಧ ಮಾಡುತ್ತಾನೆ.

ಪ್ರ. ಉಪದೇಶ ಹೇಗೆ?

ಉ. ಸಂಸ್ಕೃತನಾದ ಶಿಷ್ಯನಿಗೆ ಉಪದೇಶ ಮಾಡುವದು ಸುಖೋಷ್ಣವಾದ ಹಾಲಿಗೆ ಹೆಪ್ಪುಹಾಕಿದಂತೆ ಒಡನೆಯೇ ಗ್ರಹಿಸುವನು.

ಲಿಂಗಾಯತ ಮತವೂ ಅದರ ಪರಂಪರೆಯೂ.

(ಲೇಖಕ:- ಶ್ರೀ ಬಸವಪ್ಪ ಜಿನ್ನಪ್ಪ ಪಟ್ಟೀದ)

ಟೀಪು:—ಈ ಲೇಖದಲ್ಲಿಯ ವಿಚಾರಗಳು ಸಂಪಾದಕರವೆಂದು ವಾಚಕರು ಭಾವಿಸಬಾರದು. —ಸಂಪಾದಕ

ಡಾ। ಎಸ್. ಸಿ. ನಂದೀಮಠ ಎಮ್. ಎ. ಪಿ. ಎಚ್. ಡಿ. ಅವರು "ತಮ್ಮ ಕನ್ನಡ ನಾಡಿನ ಚರಿತ್ರೆ" ಎಂಬ ಗ್ರಂಥದಲ್ಲಿ ಕೆಳಗೆ ಸಂಕ್ಷಿಪ್ತದಲ್ಲಿ ಬರೆದಂತೆ ಅಭಿಪ್ರಾಯ ಪಡುತ್ತಾರೆ. "ಕೆಲವರು ಶ್ರೀ ಬಸವಣ್ಣನವರೇ ವೀರಶೈವ ಮತಸ್ಥಾಪಕರೆಂದು ತಿಳಿಯುತ್ತಾರೆ. ಆದರೆ ಇದು ಅಲ್ಲವೆನ್ನಲಿಕ್ಕೆ ಐತಿಹಾಸಿಕ ಕಾರಣವುಂಟು. ಶ್ರೀ ಬಸವಣ್ಣನವರಿಗಿಂತಲೂ ಸುಮಾರು ಒಂದು ನೂರು ವರ್ಷ ಪೂರ್ವದಲ್ಲಿ ಕ್ರಿ। ಶಕೆ ೧೦೪೦ ರ ಸುಮಾರಿಗೆ ಜೇಡರ ದಾಸಿಮಾರ್ಯರೆಂಬ ಶರಣರು, ಚಾಲುಕ್ಯ ಜಯಸಿಂಹ ಅರಸರಿಗೆ ಗುರುವಾಗಿ, ಅತನಿಗೆ ಲಿಂಗಧಾರಣ ಮಾಡಿದ್ದಾರೆ. ಆದ್ದರಿಂದ ೧೧೫೦ ರ ಸುಮಾರಿಗೆ ಇದ್ದ ಶ್ರೀ ಬಸವಣ್ಣನವರು ವೀರಶೈವ ಮತಸ್ಥಾಪಕರಾಗಲಾರರು." ಆದರೆ ಈ ಐತಿಹಾಸಿಕ ಸಂಗತಿಯನ್ನು ಉಲ್ಲೇಖಿಸಿದ ಡಾಕ್ಟರರೇ ೧೧-೧೨ ನೆಯ ಶತವಾನಗಳಲ್ಲಿದ್ದ ಪಂಚಾಚಾರ್ಯರಾದ ರೇವಣಸಿದ್ಧ ಏಕೋರಾಮ ಪಂಡಿತಾರಾಧ್ಯ ಮೊದಲಾದವರು ವೀರಶೈವ ಮತವನ್ನು ಸ್ಥಾಪಿಸಿದರೆಂದು ಪ್ರತೀತಿ ಇದೆ ಎಂದು ಬರೆಯುತ್ತಾರೆ. ಆದರೆ ಅವರಿಗಿಂತಲೂ ಪೂರ್ವದಲ್ಲಿದ್ದ ಜೇಡರ ದಾಸಿಮಾರ್ಯನವರ ಐತಿಹಾಸಿಕ ಸಂಗತಿಯಿಂದ ಅವರ ತರುವಾಯದಲ್ಲಿ ಬಂದ ಪಂಚಾಚಾರ್ಯರು ಮತಸ್ಥಾಪಕರೆಂಬ ಪ್ರತೀತಿಯು ಹುರುಳಿಲ್ಲದ ವದಂತಿ ಎಂದು ಅಭಿಪ್ರಾಯ ಪಡುವಷ್ಟು ನಿಷ್ಪಕ್ಷಪಾತತನವನ್ನೂ ಸರಳವಾದ ಎಲ್ಲರಿಗೂ ಹೊಳೆಯುವ ವಿಮರ್ಶಕ ಬುದ್ಧಿಯನ್ನೂ ತೋರಿಸುವಷ್ಟು ಯಥಾರ್ಥವಾದಿಗಳಾಗಿಲ್ಲ. ಅಂದರೆ ಈ ವದಂತಿಯಲ್ಲಿ ತಥ್ಯಾಂಶವಿರಲಾರದೆಂದಲ್ಲ. ಅದರೆ ಈ ಪ್ರತೀತಿಗೆ ಅಧಾರಗಳನ್ನೂ ಕೊಟ್ಟಿಲ್ಲ. ಶ್ರೀ ರೇವಣಸಿದ್ಧಾದಿ ಪಂಚಾಚಾರ್ಯರು "ಸ್ಥಾವರ ಲಿಂಗಪ್ರೇಮಿಗಳೂ, ಸ್ಥಾವರ ಲಿಂಗಪ್ರತಿಷ್ಠಾಪನೆಗೆ ಉತ್ತೇಜಕರೂ, ಸ್ಥಾವರ ಲಿಂಗಪೂಜಕರೂ ಇದ್ದ ಬಗ್ಗೆ ಹರಿಹರಾದಿ ವೀರಶೈವ ಗ್ರಂಥಕಾರರೂ ಉಲ್ಲೇಖಿಸಿದ್ದಾರೆ. ಇದೂ ಅಲ್ಲದೆ ಪಂಚಾಚಾರ್ಯರು

ವೀರಶೈವ ಪರವಾದ ಪಟ್ಟಸ್ಥಲಾತ್ಮಕವಾದ ಗ್ರಂಥವನ್ನು ಸಂಸ್ಕೃತದಲ್ಲಿಯಾಗಲೀ ಕನ್ನಡದಲ್ಲಿಯಾಗಲೀ ಬರೆದಿರುವದಿಲ್ಲ. ಶ್ರೀ ರೇವಣಸಿದ್ಧರಂತೂ ಪವಾಡಸಿದ್ಧರು ಮತ್ತು ಅವರ ಪುತ್ರ ರುದ್ರಮುನಿಯ ವಂಶದವರಾದ ಶ್ರೀ ಶಿವಯೋಗಿ ಶಿವಾಚಾರ್ಯರು ಬಾಳೇಹಳ್ಳಿಯ ಮಠವನ್ನು ಸ್ಥಾಪಿಸಿ ಸಿದ್ಧಾಂತ ಶಿಖಾಮಣಿ ಎಂಬ ಸಂಸ್ಕೃತ ಗ್ರಂಥವನ್ನು ಬರೆದು ಮಠಕ್ಕೂ ಗ್ರಂಥಕ್ಕೂ ಮಹತ್ವಕೊಡುವ ಉದ್ದೇಶದಿಂದ, ತಮ್ಮ ಪೂರ್ವಜರಾದ ರೇಣುಕಾಚಾರ್ಯರ ಮತವೆಂದೂ, ಅವರು ಪೂರ್ವಕಾಲದ ಅಗಸ್ತ್ಯಮುನಿಗೆ ಬೋಧಿಸಿದ್ದನ್ನೇ ತಮ್ಮ ಗ್ರಂಥದಲ್ಲಿ ಹೇಳುವೆನೆಂದೂ ಬರೆದಿದ್ದಾರೆ. ಶ್ರೀ ರೇವಣಸಿದ್ಧರು ಶ್ರೀ ಬಸವಣ್ಣನವರ ಹಿರಿಯ ಸಮಕಾಲೀನರು. ಶ್ರೀ ಏಕೋರಾಮರಂತೂ ಜೇಡರ ದಾಸಿಮಾರ್ಯನವರ ಪುತ್ರರೆಂದು ತಿಳಿದು ಬರುತ್ತದೆ. ಶ್ರೀ ಪಂಡಿತಾರಾಧ್ಯರು ಶ್ರೀ ಬಸವಣ್ಣನವರ ಸಮಕಾಲೀನರಿದ್ದು ಶಿವತತ್ವಸಾರವೆಂಬ ಕೇವಲ ಶೈವ ಗ್ರಂಥವನ್ನೇ ಬರೆದಿದ್ದಾರೆ. ಅಲ್ಲದೆ ಬಸವಾದಿ ಪ್ರಮಥರನ್ನು ಮನವಾರೆ ಕೊಂಡಾಡಿದ್ದಾರೆ. ಶ್ರೀ ಮರುಳಸಿದ್ಧರಂತೂ ದೇವಕವಿಯು ತನ್ನ ಕಾವ್ಯದಲ್ಲಿ ವರ್ಣಿಸಿದಂತೆ, ಅ. ನ. ಕೃಷ್ಣರಾಯರು ಆ ಗ್ರಂಥದ ಮುನ್ನುಡಿಯಲ್ಲಿ ಸ್ಪಷ್ಟವಾಡಿದಂತೆ, ಜನನದಿಂದ ಎಂಥವನಾದರೂ ತನ್ನ ಯೋಗ್ಯತೆಯಿಂದ ಆಚಾರ್ಯ ಪದವಿಗೇರುವಷ್ಟು ವಿಶಾಲ ಮತ್ತು ಉದಾರ ತತ್ವಗಳು ಲಿಂಗಾಯತ ಮತದಲ್ಲಿ ಉಂಟೆಂಬುದಕ್ಕೆ ನಿದರ್ಶಕರಾಗಿದ್ದಾರೆ. ನಿಜ ಸಂಗತಿಗಳು ಹೀಗಿದ್ದಾಗ್ಯೂ ಅಥವಾ ಹೀಗಿವೆ ಎಂದು ತಿಳಿದಾಗ್ಯೂ ಪಂಚಾಚಾರ್ಯರು ವೀರಶೈವ ಮತಸ್ಥಾಪಕರೆಂದು ಇರುವ ಕೇವಲ ಹುರುಳಿಲ್ಲದ ಪ್ರತೀತಿಯನ್ನೇ ಗ್ರಂಥಸ್ಥವಾಡಲು ಡಾಕ್ಟರರು ಪ್ರಯತ್ನಿಸಿದ್ದಾರೆ.

ಶರಣಸಾಹಿತ್ಯ ಪತ್ರಿಕೆಯ ಸಂಪಾದಕರಾದ ಶ್ರೀ ಶಿವಮೂರ್ತಿ ಶಾಸ್ತ್ರಿಯವರು ವಿಶೇಷ ಚರ್ಚೆಯನಂತರ ಪಂಚಾಚಾರ್ಯರು ವೀರಶೈವ ಮತಸ್ಥಾಪಕರಾಗಲಾರರೆಂದು ಸಾಕಷ್ಟು ವಿಚಾರಾಂತ್ಯದಲ್ಲಿ ಒಪ್ಪಿಕೊಂಡಿದ್ದಾರೆ. ಹಾಗೂ ಆ ಪ್ರಕಾರ ತಮ್ಮ ಶರಣಸಾಹಿತ್ಯ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆಂಬುದನ್ನು ವಾಚಕರು ಗಮನಿಸಬಹುದು.

ಪುನಃ ಶ್ರೀ ಬಸವಣ್ಣನವರ ಬಗ್ಗೆ ಡಾಕ್ಟರರು ತಮ್ಮ "ಕನ್ನಡನಾಡಿನ ಚರಿತ್ರೆ"ಯಲ್ಲಿ ಮುಂದಿನಂತೆ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ.

ಶ್ರೀ ಬಸವಣ್ಣನವರ ಕಾಲಕ್ಕೆ ಅನೇಕ ಭಾಗಗಳಿಂದ ಅನೇಕ ಶರಣರು ಕಲ್ಯಾಣದಲ್ಲಿ ಬಂದು ನೆಲಸಿದರು. ಬಸವಣ್ಣನವರು ಅವರಿಗೆಲ್ಲ ಗುರುವಾಗದೆ ಅವರನ್ನು ಒಳ್ಳೇ ಪೂಜ್ಯಭಾವದಿಂದ ಕಂಡಿದ್ದಾರೆ. ಆದ್ದರಿಂದ ಬಸವಣ್ಣನವರು ವೀರಶೈವ ಮತ ಸ್ಥಾಪಕರಾಗಲಾರರು. ಆದರೆ ಡಾಕ್ಟರರು ಹೀಗೆ ಬರೆಯುವ ಕಾಲಕ್ಕೆ ಕೆಳಗಿನ ಶರಣರ ತತ್ವವನ್ನು ಲಕ್ಷಕ್ಕೆ ತಂದು ಕೊಂಡಂತೆ ಕಾಣುವದಿಲ್ಲ. ಶಿವಶರಣರ ಮಾರ್ಗವಾದ ವೀರಶೈವ ಮತದಲ್ಲಿ ಉಳಿದ ಸಾಧನೆಗಳಿಗಿಂತ ಶಿವಭಕ್ತಿಗೆ ಹೆಚ್ಚು ಪ್ರಾಧಾನ್ಯ ಉಂಟು. ಆದ್ದರಿಂದ ಬಸವಾದಿ ಪ್ರಮಥರು ಶರಣ ಮತ್ತು ಐಕ್ಯಸ್ಥಲಗಳ ಶಿವಾನುಭವವನ್ನು ಅನುಭವಿಸುತ್ತಿದ್ದರೂ ಭಕ್ತಸ್ಥಲದಲ್ಲಿಯೇ ನಿಂತು ಶಿವಭಕ್ತರೆಲ್ಲರೂ ಶಿವ ಸಮಾನರೆಂದೂ ಇಲ್ಲವೆ ಕೇವಲ ಶಿವನೇ ಎಂದೂ ಅವರೆಲ್ಲರನ್ನು ಭಕ್ತಿಯಿಂದ ಪೂಜ್ಯಭಾವದಿಂದ ಕಂಡು ಶಿವಭಕ್ತರಿಗೆಲ್ಲ ತಮ್ಮ ಆಚರಣೆಯಿಂದಲೇ ಮಾರ್ಗದರ್ಶಕರಾಗಿ ಸಮತಾಭಾವದ ಭವ್ಯ ಸಮಾಜವನ್ನು ಸಂಘಟಿಸಿದ್ದಾರೆ. ಹಾಗೂ ಅಪ್ರಕಾರ ನಿರ್ದಿಷ್ಟ, ನಿಶ್ಚಯಾತ್ಮಕವಾದ ಷಟ್‌ಸ್ಥಲದ ವಚನಶಾಸ್ತ್ರವನ್ನು ಕನ್ನಡದಲ್ಲಿ ಅನುಯಾಯಿಗಳಿಲ್ಲದ ಹಿತಾರ್ಥಕ್ಕಾಗಿ ಅನುಭವಮಂಟಪದ ಚರ್ಚೆಯ ಪರಿಣಾಮವಾಗಿ, ಅನೇಕ ಶಿವಶರಣರ ಶಿವಾನುಭವಾತ್ಮಕ ಒಪ್ಪಿಗೆಯಿಂದ ರಚಿಸಿ ಬರೆದಿಟ್ಟಿದ್ದಾರೆ. ಅವು ಅನುಭವಸಿದ್ಧವಾದ ವಚನಗಳಾದ್ದರಿಂದ ಉಪನಿಷತ್ತುಗಳಷ್ಟು ಮಹತ್ವದವಾಗಿವೆ. ಆದ್ದರಿಂದ ಬಸವಾದಿ ಪ್ರಮಥರು ತಮ್ಮ ಪೂರ್ವದ ಶೈವ ಮತವನ್ನು ಖಂಡಿಸಿ ಶರಣರ ಲಿಂಗಾಯತ ಮತವನ್ನು ಒಂದು ನಿರ್ದಿಷ್ಟವಾದ ಷಟ್‌ಸ್ಥಲಾತ್ಮಕ ಧರ್ಮವನ್ನಾಗಿ ಹೊಸದಾಗಿ ಶೈವ ಮತದಿಂದ ಅನೇಕ ರೀತಿಯಿಂದ ಭಿನ್ನವಾದದ್ದನ್ನಾಗಿ ರೂಪುಗೊಳಿಸಿ ಪ್ರಸಾರ ಮಾಡಿದರೆಂದು ಹೇಳಲು ಯಾವ ಅಭ್ಯಂತರವೂ ತೋರುವದಿಲ್ಲ. ಕಲ್ಯಾಣದ ಈ ಪ್ರಮಥರ ಶಿವಾನುಭವ ಮಂಟಪದಲ್ಲಿ ಪಂಚಾಚಾರ್ಯರಾಗಲೀ ಅವರ ಪ್ರತಿನಿಧಿಗಳಾಗಲೀ ಚರ್ಚೆಮಾಡಿದ್ದು ಕಂಡು ಬರುವದಿಲ್ಲ. ಆದ್ದರಿಂದ ಆ ಕಾಲಕ್ಕೆ ಅವರು ಕೇವಲ ಶೈವರೇ ಇರಬೇಕು. ಹಾಗೂ ಬಸವಾದಿ ಪ್ರಮಥರು ಗುರು, ಲಿಂಗ, ಜಂಗಮ ತತ್ವಗಳಿಗೆ ಹೆಚ್ಚಿನ ಮಹತ್ವಕೊಟ್ಟು ಆ ತತ್ವಗಳನ್ನು ಸಾಧಿಸುವದೇ ಅಥವಾ ಅನುಭವಿಸುವದೇ ಎಲ್ಲ ಲಿಂಗಾಂಗಿಗಳಾದ ಶರಣರಧ್ಯೇಯವೆಂದು ಸಾರಿ ಆ ಪ್ರಕಾರ ಆಚರಿಸಿ ಅನುಭವ ಪಡೆದು ಮಾರ್ಗದರ್ಶಕರಾಗಿದ್ದಾರೆ.

ಆದಾಗ್ಯೂ ಅವರ ಸಮಕಾಲೀನರಾದ ಪಂಚಾಚಾರ್ಯರ ಸುಳುವಾಗಲೀ ನಾವು ನಿರ್ದೇಶವಾಗಲೀ ಶಿವಾನುಭವ ಮಂಟಪದಲ್ಲಿ ಕಂಡುಬರುವದಿಲ್ಲ. ಆದ್ದರಿಂದ ಪಂಚಾಚಾರ್ಯರಿಂದು ಪ್ರತೀತಿ ಪಡೆದವರ ಶೀಲ, ಆಚಾರ, ಮತಗಳಾದರೂ ಭಿನ್ನವಿರಲಿಕ್ಕೇ ಬೇಕು. ಅಥವಾ ಭಿನ್ನಕಾಲದಲ್ಲಿದ್ದು ಭಿನ್ನವಾಗಿ ಆಚರಿಸಿರಬೇಕು.

ಸಂಶೋಧನದಿಂದ ಕಂಡುಬರುವದೇನಂದರೆ ಶ್ರೀ ಚನ್ನಬಸವೇಶ್ವರರು ಉಳವಿಗೆ ಹೋಗುವಕಾಲಕ್ಕೆ ಶ್ರೀ ರೇಪಣಸಿದ್ಧರ ಪುತ್ರ ರುದ್ರಮುನಿಗೆ ಶರಣರ ಧರ್ಮವನ್ನು ಮುಂದುವರಿಸಲಿಕ್ಕೆ ಹೇಳಿದ ಪ್ರಕಾರ, ಅವರೂ ಅವರ ವಂಶದವರೂ ಮಠಗಳನ್ನು ಸ್ಥಾಪಿಸಿ ಶಿವನ ಪಂಚ ಮುಖಗಳಾದ ಪಂಚ ಭೂತಗಳು ಸೃಷ್ಟಿಯಾದ ರೀತಿಯಲ್ಲಿಯೇ ಪಂಚಪೀಠಗಳೂ ಪಂಚಾಚಾರ್ಯರೂ ಲಿಂಗಾಯತ ಮತಕ್ಕೆ ಮೂಲವೆಂಬ ಪ್ರತೀತಿಯನ್ನು ಪ್ರಚಾರಗೊಳಿಸುತ್ತ, ಬಸವಾದಿ ಪ್ರಮಥರನ್ನೂ ಅವರ ಸಮತಾಭಾವ ಸಮಾಜ ರಚನೆಯನ್ನೂ ಮರೆಯಿಸಲು ಮಾಡಿದ ಪ್ರಯತ್ನದ ಫಲವೇ ಈ ಪ್ರತೀತಿ ಅಥವಾ ವದಂತಿಯ ಕಲ್ಪನೆ ಇರಬೇಕು. ಅಥವಾ ಈ ಆಚಾರ್ಯರ ಕಲ್ಪನೆಯೇ ಪಂಚ ಮುಖಗಳಾದ ಪಂಚಮಹಾಭೂತಗಳಿಂದಾದ ಜಗದುತ್ಪತ್ತಿಯ ತತ್ವವನ್ನು ಅಥವಾ ರೀತಿಯನ್ನು ಪೌರಾಣಿಕರೀತಿಯಿಂದ ಹೇಳುವ ಬಗೆಯಾಗಿರಲಿಕ್ಕೆ ಸಾಕು. ಅದರಂತೆಯೇ ಪಂಚಾಚಾರ್ಯರಿಂದ ವೀರಶೈವ ಮತದ ಉತ್ಪತ್ತಿ ಎಂದು ಹೊಂದಿಕೆಗೊಳಿಸುವ ರೀತಿ ಇರಬೇಕು

ಶ್ರೀ ರೇವಣಸಿದ್ಧರ ಮುಂದಿನ ಸಂತತಿಯವರಾದ ಶಿವಯೋಗಿ ಶಿವಾಚಾರ್ಯರು ತಮ್ಮ ಸಿದ್ಧಾಂತ ಶಿಖಾಮಣಿ ಎಂಬ ಸಂಸ್ಕೃತಗ್ರಂಥದಲ್ಲಿ 'ವಿ' ಅಂದರೆ ಶಿವಜೀವೈಕ್ಯ ರೂಪವಾದ ವೇದಾಂತ ವಿದ್ಯೆಯಿಂದಲೂ 'ರ' ಅಂದರೆ ಅಂಥ ವಿದ್ಯೆಯಲ್ಲಿ ರಮಿಸುವವರೇ ವೀರಶೈವರೆಂತಲೂ ವ್ಯಾಖ್ಯೆಗೈದಿದ್ದಾರೆ. ಹೀಗೆ ಸಿದ್ಧಾಂತ ಶಿಖಾಮಣಿಕಾರರ ಪ್ರಕಾರ ವೀರಶೈವರೆಂದರೆ ವೇದಾಂತ ವಿದ್ಯೆಯಲ್ಲಿ ರಮಿಸುವವರೆಂದಂತಾಯಿತು. ಆದ್ದರಿಂದ ಈಗಲೂ ಸಂಸ್ಕೃತ ಭಾಷಾಭ್ಯಾಸಗಳು ಕಾಶಿಗೆ ಹೋಗಿ ಅನೇಕ ವರ್ಷ ವಿದ್ವತ್ತು ವೇದಾಂತಾಚಾರ್ಯರಾಗಿ ಮರಳಿ ಬಂದು ಮಠಾಧಿಕಾರಿಗಳಾಗುತ್ತಾರೆ ಇಂಥವರಿಗೆ ಬಸವಾದಿ ಪ್ರಮಥರ ಲಿಂಗನಿಷ್ಠೆ, ಭಕ್ತಿಭಾವದ ಆಚರಣೆ, ಮತ್ತು ಲಿಂಗಾಂಗಿಗಳಲ್ಲಿ ಶಿವಸಮಾನರೆಂಬ ಉದಾತ್ತ

ವಿಚಾರ, ಹೇಗೆ ಆಗುತ್ತವೋ ತಿಳಿಯುವದಿಲ್ಲ. ತಾವು ವೇದಾಂತ ವಿದ್ಯೆಯಲ್ಲಿ ರವಿಸಿ, ಮತದ ಅನುಯಾಯಿಗಳಿಗೆ ಕೇವಲ ಮೂಢಭಕ್ತಿಯ ಆಚರಣೆಯನ್ನು ಕಲಿಸಿ, ಅವರ ಅಜ್ಞಾನವು ಧಾವಿಕತನದ ಲಾಭವನ್ನು ಪಡೆಯುತ್ತ ಬಂದಿರುತ್ತಾರೆಂದರೆ ಏನೂ ತಪ್ಪಾಗಲಿಕ್ಕಿಲ್ಲ. ಆದ್ದರಿಂದ ಎಲ್ಲಿಯವರೆಗೆ ಧರ್ಮವು ಕೆಲವು ವ್ಯಕ್ತಿಗಳ, ಅಥವಾ ವಿಶಿಷ್ಟ ವರ್ಗದವರ ಸ್ವತ್ತಾಗಿ ಉಳಿಯುವದೋ ಎಲ್ಲಿಯ ವರೆಗೆ ಅವರು ಧರ್ಮವನ್ನು ತಮ್ಮ ಸ್ವಾರ್ಥಕ್ಕಾಗಿಯೇ ಮಾತ್ರ ಉಪಯೋಗಿಸುವರೋ ಮತ್ತು ಎಲ್ಲಿಯ ವರೆಗೆ ಧರ್ಮದ ಅಧಿಕಾರ ಸೂತ್ರಗಳು ಯೋಗ್ಯತೆ ಪಡೆಯುವವರಿಗೆ ಸಾರ್ವತ್ರಿಕವಾಗಿ ಲಭ್ಯವಾಗುವದಿಲ್ಲವೋ, ಅಲ್ಲಿಯವರೆಗೆ ಧರ್ಮದ ನಿಜವಾದ ಧರ್ಮಜ್ಞಾನವು ಬಹು ಜನರಿಗೆ ತಿಳಿಯದೆ ಕುರುಡ ನಂಬಿಗೆಯ ತಾಮಸ ಕ್ರಿಯಾಚರಣೆಯು ಮಾತ್ರ ಉಳಿಯುವದು. ಇದರಿಂದ ಸಮಾಜದವರಿಗೆ ಧರ್ಮದ ಉಚ್ಚಧ್ಯೇಯವಾದ ಶಿವಾನುಭವದ ಆನಂದವು ಪ್ರಯತ್ನಸಾಧ್ಯವೆಂಬ ವಿಚಾರವೇ ಗೊತ್ತಾಗದೆ ಕೇವಲ ಮುಗ್ಧಕ್ರಿಯೆಯಲ್ಲಿಯೇ ಬಹುಜನರು ಉಳಿಯುವರು. ಇಂಥ ಅಜ್ಞಾನದೆಸೆಯಲ್ಲಿ ಉಳಿಯುವ ಅಧರ್ಮವನ್ನು ನಿವಾರಿಸಲು ಬಸವಾದಿ ಪ್ರಮಥರು ಪ್ರಾಸಾದಿಕ ವಾಣಿಯಿಂದ ಬರೆವಿಟ್ಟಿರುವ ವಚನ ಗ್ರಂಥಗಳನ್ನು ಓದಿ ಅಭ್ಯಾಸಮಾಡಿ, ಅವುಗಳ ವಿಚಾರದ ಅನುಭವ ಪಡೆದು, ಶಿವಾನುಭವಿಗಳಾಗಲು, ಧರ್ಮದ ಅನುಯಾಯಿಗಳು ಪ್ರಯತ್ನಿಸಿದರೆ, ಸಮಾಜವು ತೀವ್ರಗತಿಯಿಂದ ಮುಂದು ವರಿಯಲಿಕ್ಕಿಲ್ಲವೆ? ಈರೀತಿಯಾಗಿ ಶರಣರ ಮಾರ್ಗವಾದ ಲಿಂಗಾಯತ ಮತಕ್ಕೆ ಬಸವಾದಿ ಪ್ರಮಥರೇ ಮೂಲಪುರುಷರು ಮತ್ತು ಅವರ ಕನ್ನಡ ವಚನಸಾಹಿತ್ಯವೇ ಭಾಂಡಾಗಾರವು.

ಆ ಮೇಲೆ ಮಲ್ಲಿಕಾರ್ಜುನನು ಮತ್ತು ಕಡೆಗೆ ಶಿವಲೆಂಕ ಮಂಚಣ್ಣನು, ಹೀಗೆ ಕ್ರಮವಾಗಿ ಅವರ ಕಾಲವಿರುತ್ತದೆ. ಇವರಲ್ಲಿ ಶಿವಲೆಂಕ ಮಂಚಣ್ಣನು ಬಸವೇಶ್ವರನಿಗೆ ಜೋಡಿಗನಾಗಿ ಕಲ್ಯಾಣದಲ್ಲಿಯೇ ಇದ್ದು ಅಲ್ಲಿ ವಚನಗಳನ್ನು ರಚಿಸಿದ್ದಾನೆ. ಆದ್ದರಿಂದ ಅವನು ಎಲ್ಲರಿಗಿಂತಲೂ ಕಡೆಯವನಾಗುತ್ತಾನೆ. ಆದರೂ ಇವರೆಲ್ಲರನ್ನು ಆಂಧ್ರ ದೇಶದ ವೀರಶೈವರು ಮುಖ್ಯವಾಗಿ ಆರಾಧ್ಯರು ಬಹಳ ಆದರದಿಂದ ಕಾಣುತ್ತ ಬಂದಿದ್ದಾರೆ.

ಈ ಮೂವರಲ್ಲಿ ಮಲ್ಲಿಕಾರ್ಜುನ ಪಂಡಿತನೂ ಮಂಚಣ್ಣನೂ ಗ್ರಂಥಕಾರರಿದ್ದು ಅವರು ಬರೆದ ಗ್ರಂಥಗಳು ಈಗ ಉಪಲಬ್ಧವಿರುತ್ತವೆ. ಇವರಲ್ಲಿ ಶಿವಲೆಂಕ ಮಂಚಣ್ಣನು ವಚನಗಳನ್ನ ಮಾತ್ರವಲ್ಲದೆ ಇತರ ಸಿದ್ಧಾಂತ ಗ್ರಂಥಗಳನ್ನೂ ಬರೆದಿರಬಹುದು. ಆದರೆ ಅವು ನಮಗೆ ದೊರೆತಿಲ್ಲ. ಶ್ರೀಪತಿ ಪಂಡಿತನು ನಿಶ್ಚಯವಾಗಿ ವಿದ್ವಾಂಸನು. ಆದರೆ ಅವನು ಯಾವ ಯಾವ ಗ್ರಂಥಗಳನ್ನು ಬರೆದನೆಂಬುದು ನಮಗೆ ಗೊತ್ತಾಗಿಲ್ಲ.

ಶ್ರೀಪತಿ ಪಂಡಿತನು ಶ್ರೀಕರಭಾಷ್ಯವನ್ನು ಬರೆದಿರುವನೋ ಹೇಗೆ?

ಶ್ರೀಪತಿಯು ಶ್ರೀಕರ ಭಾಷ್ಯವನ್ನು ಬರೆದಿದ್ದಾನೆಂದು ಹಲವರ ಅಭಿಪ್ರಾಯವದೆ. ಈ ಭಾಷ್ಯವು ಪ್ರಸಿದ್ಧವಾಗಿದೆ. ಆದರೆ ಶ್ರೀಪತಿಯು ಹೀಗೆ ಭಾಷ್ಯವನ್ನು ಬರೆದಿದ್ದಾನೆಂದು ಅವನ ಚರಿತ್ರೆಗಳಿದ್ದ ಯಾವ ಗ್ರಂಥವಲ್ಲಿಯೂ ಹೇಳಿರುವದಿಲ್ಲ. ಒಂದು ವೇಳೆ ಅವನು ಇಂಥ ಮಹತ್ವದ ಗ್ರಂಥವನ್ನು ಬರೆದಿದ್ದರೆ ಆ ರೀತಿಯ ಉಲ್ಲೇಖಗಳು ಅವನ ನಿರೂಪಣೆ ಇದ್ದಂಥ ಶಿಲಾಶಾಸನಗಳಲ್ಲಿ ಅಥವಾ ತೆಲುಗು ಮತ್ತು ಸಂಸ್ಕೃತ ಗ್ರಂಥಗಳಲ್ಲಿ ನಿಶ್ಚಯವಾಗಿ ದೊರೆಯುತ್ತಿದ್ದವು. ಆದರೆ ಅವುಗಳಲ್ಲಿ ಅವು ದೊರೆಯುವದಿಲ್ಲವಾದ್ದರಿಂದ ಅವನು ಇಂಥ ಗ್ರಂಥವನ್ನು ಬರೆದ ಹಾಗೆ ತೋರುವದಿಲ್ಲ. ಶ್ರೀಕರಭಾಷ್ಯದೊಳಗೆ ನಿರೂಪಿಸಲ್ಪಟ್ಟ ತತ್ವಗಳಿಗೂ ಶ್ರೀಪತಿಯು ಚರಿತ್ರೆಯೊಳಗೆ ಕಂಡುಬರುವ ಅವನ ನಡೆಗೂ ಬಹಳ ಮಹದಂತರವಿದೆ. ಇಷ್ಟೇ ಅಲ್ಲ, ಅವು ಅವುಗಳಿಗೆ ವಿರೋಧವಾಗಿರುತ್ತವೆ. ಈ ಭಾಷ್ಯದಲ್ಲಿ ಲಿಂಗಧಾರಣೆಯು ಕೂಡ ಯಜ್ಞೋಪವೀತವನ್ನು ಧರಿಸಬೇಕೆಂತಲೂ, ಪಂಚಾಕ್ಷರೀ ಮಂತ್ರದೊಡನೆ ಗಾಯತ್ರೀ

ಮಂತ್ರವನ್ನು ಅನ್ನಬೇಕೆಂತಲೂ, ವರ್ಣಾಶ್ರಮಗಳನ್ನು ಪಾಲಿಸಬೇಕೆಂತಲೂ, ಸ್ತ್ರೀ ಮತ್ತು ಶೂದ್ರ ಇವರಿಗೆ ಬ್ರಹ್ಮ ವಿದ್ಯಾಧಿಕಾರವಿಲ್ಲವೆಂತಲೂ, ಸೂತಕಗಳನ್ನು ಪಾಲಿಸಬೇಕೆಂತಲೂ, ಪಿಂಡಾದಿಕರ್ಮಗಳನ್ನ ಮಾಡಬೇಕೆಂತಲೂ, ವೀರಶೈವರಲ್ಲಿ ಜಾತಿಭೇದವಿದೆ ಎಂತಲೂ ಈ ತೆರದ ಪ್ರತಿಪಾದನೆಗಳು ಇವೆ. ಆದರೆ ಇವೆಲ್ಲವೂ ವೀರಶೈವ ಧರ್ಮಕ್ಕೆ ಸಮ್ಮತವಾದುವಲ್ಲ. ಶ್ರೀಪತಿಯು ಬ್ರಾಹ್ಮಣ ಧರ್ಮದ ಪ್ರಕಾರ ಒಬ್ಬ ಶೂದ್ರನೆಂದೆನಿಸಿಕೊಳ್ಳುವನಲ್ಲಿ ಭೋಜನ ಮಾಡಿದ್ದಕ್ಕೆ ಬ್ರಾಹ್ಮಣರು ಅವನನ್ನು ವಿರೋಧಿಸಲು ಅವನು ವೀರಶೈವರಲ್ಲಿ ಜಾತಿಭೇದವಿಲ್ಲೆಂಬುದನ್ನು ಪ್ರತಿಪಾದಿಸಿದ್ದಾನೆ ಮತ್ತು ಅದನ್ನು ಸಿದ್ಧಪಡಿಸಲು ಒಂದು ಪೊವಾಡವನ್ನ ಮಾಡಿದ್ದಾನೆ. ಅವನು ತೇಲಿಕರು ಅಂದರೆ ಗಾಣಿಗರು, ಚಿತ್ರಕಾರರು ಇಂಥ ಸಮಾಜದವರಿಗೆ ದೀಕ್ಷೆಯನ್ನು ಕೊಟ್ಟಿದ್ದಾನೆ, ಮತ್ತು ಅವರಿಗೆ ಗುರುವಾಗಿದ್ದಾನೆ. ಹೀಗೆ ಇವನ ಚರಿತ್ರೆಯು ಇವ್ವು ಅದಕ್ಕೆ ವಿರೋಧವಾಗಿರುವ ತತ್ವಗಳನ್ನು ಅವನು ತನ್ನ ಭಾಷ್ಯದಲ್ಲಿ ನಿರೂಪಿಸುವ ಸಂಭವವಿಲ್ಲ. ನಾವು ಶಿವಶರಣರ ಚರಿತ್ರೆಗಳಲ್ಲಿ ವಚನಗಳನ್ನು ಬರೆದಂಥ ಅನೇಕ ವಚನಕಾರರ ಚರಿತ್ರೆಗಳನ್ನು ಕೊಟ್ಟಿದ್ದೀವೆ. ಆ ಚರಿತ್ರೆಗಳಲ್ಲಿ ಕಂಡುಬರುವ ಸಂಗತಿಗಳಿಗೂ ಅವರು ಬರೆದ ವಚನಗಳಿಗೂ ಎಷ್ಟು ಮೇಳವಿರುತ್ತದೆಂಬುದನ್ನು ನಾವು ಅವುಗಳಲ್ಲಿ ಕೊಟ್ಟ ವಚನಗಳಿಂದ ವಾಚಕರಿಗೆ ಕಂಡು ಬರದೆ ಇರಲಾರದು. ಆದರೆ ಶ್ರೀಪತಿಯ ಚರಿತ್ರೆಯಲ್ಲಿ ಕಂಡುಬರುವ ಸಂಗತಿಗಳಿಗೂ ಶ್ರೀಕರ ಭಾಷ್ಯದ ತತ್ವಗಳಿಗೂ ಮೇಳವಿಲ್ಲೆಂಬುದಷ್ಟೇ ಅಲ್ಲ, ಅವು ಪರಸ್ಪರ ವಿರುದ್ಧವಾಗಿರುತ್ತವೆ. ಆದ್ದರಿಂದ ಈ ಭಾಷ್ಯವು ಅವನದೆಂದು ತೋರುವದಿಲ್ಲ. ಅಲ್ಲದೆ ಈ ಭಾಷ್ಯದಲ್ಲಿ ರಾಮಾನುಜ ಮತ್ತು ಮಾಧ್ವಮತಗಳ ಖಂಡನೆಯು ಇದೆ. ಮಧ್ವಾಚಾರ್ಯನ ಉಲ್ಲೇಖವು ಇದರಲ್ಲಿ ಅನೇಕ ಕಡೆಗೆ ಬಂದಿದೆ. ಆದರೆ ಮಧ್ವಾಚಾರ್ಯನು ಬಸವೇಶ್ವರನ ತರುವಾಯ ೧೫೦–೨೦೦ ವರ್ಷಗಳಾದ ಮೇಲೆ ಪ್ರಸಿದ್ಧಿಗೆ ಬಂದಿದ್ದಾನೆ. ಆದರೆ ಶ್ರೀಪತಿಯು ನಾವು ಹಿಂದೆ ವಿವರಿಸಿದಂತೆ ಬಸವೇಶ್ವರನ ಕಾಲದಲ್ಲಿ ಬಹುಶಃ ಅದಕ್ಕೂ ಪೂರ್ವದಲ್ಲಿಯೇ ಪ್ರಸಿದ್ಧಿಗೆ ಬಂದಿದ್ದಾನೆ. ಆದ್ದರಿಂದ ಈ ಭಾಷ್ಯವನ್ನು ಶ್ರೀಪತಿಯು ಬರೆಯದೆ ಅವನ ತರುವಾಯ ಅದು ಬರೆದದ್ದಾಗಿರುತ್ತದೆಂದು ನಮಗೆ ತೋರುತ್ತದೆ.

ಶ್ರೀಪತಿಯು ಆಂಧ್ರದೇಶದಲ್ಲಿ ವೀರಶೈವ ಕ್ರಾಂತಿಕಾರನು.

ಒಟ್ಟಿಗೆ ಶ್ರೀಪತಿ ಪಂಡಿತನು ಆಂಧ್ರ ದೇಶದಲ್ಲಿ ವೀರಶೈವ ಕ್ರಾಂತಿಯನ್ನು ಮೊದಲು ಮಾಡಿದನೆಂದು ತೋರುತ್ತದೆ. ಅವನ ವರ್ಚಸ್ಸು ಆಗ ಕರ್ನೂಲ, ಗುಂಟೂರ, ನೆಲ್ಲೂರ, ಕೃಷ್ಣಾ ಮತ್ತು ಗೋದಾವರೀ ಜಿಲ್ಲೆಗಳಲ್ಲಿ ಹೆಚ್ಚಾಗಿ ಇದ್ದಿತೆಂದು ಅವನನ್ನು ಉಲ್ಲೇಖಿಸುವ ಶಿಲಾಶಾಸನಗಳಿಂದಲೂ ಗ್ರಂಥಗಳಿಂದಲೂ ತಿಳಿಯುತ್ತದೆ. ಅವನು ತೇಲಿಕರು, ಚಿತ್ರಕಾರರು ಮೊದಲಾದವರಿಗೆ ವೀರಶೈವ ದೀಕ್ಷೆಯನ್ನು ಕೊಟ್ಟಿದ್ದಾನೆ. ಅವನು ಸಂಸ್ಕೃತ ಮತ್ತು ತೆಲುಗು ಭಾಷೆಯಲ್ಲಿ ಅತ್ಯಂತ ಪ್ರವೀಣತೆಯನ್ನು ಹೊಂದಿ ಪಂಡಿತನೆಂದು ಪ್ರಸಿದ್ಧಿಯನ್ನು ಹೊಂದಿದ್ದಾನೆ. ಹೀಗೆ ಶ್ರೀಪತಿ ಪಂಡಿತನು ಆಂಧ್ರ ನಾಡಿನಲ್ಲಿ ಒಂದು ಮಹತ್ತರವಾದ ಕ್ರಾಂತಿಯನ್ನು ಮಾಡಿದ್ದಾನೆ. ಅವನಂತೆಯೇ ಅವನ ವಂಶಜರಲ್ಲಿ ಕೆಲವರು ಸಹ ವೀರಶೈವ ಧರ್ಮವನ್ನು ಆಂಧ್ರ ದೇಶದಲ್ಲಿ ಪ್ರಸಾರ ಮಾಡಿದ್ದಾರೆ.

ಕಥಾಂತರಗಳು:— ಕೆಲವು ಗ್ರಂಥಗಳಲ್ಲಿ ಶ್ರೀಪತಿ ಪಂಡಿತನ ವಿಷಯವಾಗಿ ಕೆಳಗಿನ ವಿವರಣೆಯು ಇರುವದು ಕಂಡುಬರುತ್ತದೆ. 'ದಸನಪುರ'ದಲ್ಲಿ ಅನಂತರಾಜನು ಆಳುತ್ತಿರುವಾಗ್ಗೆ ವೇದಕನೆಂಬುವನು ಅವನ ಮಂತ್ರಿಯಾಗಿದ್ದನು. ಈ ಮಂತ್ರಿಯು ಭಾರತವನ್ನು ವೈರಿಸುತ್ತ ಬ್ರಾಹ್ಮಣರೇ ಘನವೆಂದು ಡಂಗುರವನ್ನು ಸಾರಿಸುತ್ತ ಬೀದಿಯಲ್ಲಿ ಸಾಗಿದ್ದನು. ಇದನ್ನು ಶ್ರೀಪತಿ ಪಂಡಿತನು ಕಂಡು ಶಿವಭಕ್ತರಿಗೆ ಕೋಟಿ ವಿಪ್ರರು ಸಮಾನರಲ್ಲ ಎಂದು ನುಡಿಯುತ್ತ ಮುಂದೆ ಬಂದು ಆ ಮೆರವಣಿಗೆಯನ್ನು ತಡೆದನು. ಆಗ ಉಭಯತರಲ್ಲಿ ವಾಗ್ವಾದಗಳು ಜರಗಲು ಅವುಗಳಲ್ಲಿ ಶ್ರೀಪತಿ ಪಂಡಿತನು ವೇದ ಶಾಸ್ತ್ರಾಗಮಗಳ ಆಧಾರದಿಂದ ಬ್ರಾಹ್ಮಣರನ್ನು ಸೋಲಿಸಿದನು. ಅದಕ್ಕೆ ಅವರು ನೀನು ನ್ನುವದಕ್ಕೆ ಒಂದು ದೃಷ್ಟವನ್ನು ತೋರಿಸೆಂದೆನಲು, ಶ್ರೀಪತಿಯು ಅಗ್ನಿಯನ್ನು ವಸ್ತ್ರದಲ್ಲಿ ಕಟ್ಟಿ ಬಸ್ನಿಯ ಮರದ ಕೊಂಬೆಗೆ ತೂಗಹಾಕಿದನು. ಆಗ ಅನಂತರಾಜನೂ ವೇದಕ ಮಂತ್ರಿಯೂ ಶ್ರೀಪತಿ ಪಂಡಿತನನ್ನು ಸನ್ಮಾನ ಮಾಡಿ ಅವನ ಭಕ್ತರಾದರೆಂದು ಹೇಳಿದೆ. ಆದರೆ ಈಗಿನ ಚರಿತ್ರೆಯಲ್ಲಿ ನಾವು ಹೇಳಿದ ಕಥೆಯನ್ನು ಶಿಲಾಶಾಸನವೂ ಆಂಧ್ರಗ್ರಂಥಗಳೂ ಸಮರ್ಥಿಸಿರುವದರಿಂದ ಅದನ್ನು ಸ್ವೀಕರಿಸುವದು ಯುಕ್ತವೆಂದು ತೋರುತ್ತದೆ. ———

ವೇಮನಾರಾಧ್ಯ.

ನಿಜಾಮು ಇಲಾಖೆಯಲ್ಲಿ ನಲಗೊಂಡ ಜಿಲ್ಲಾ, ಭುವನಗಿರಿ ತಾಲೂಕಿನಲ್ಲಿ ಕೊಲ್ಲಿಪಾಕೆ (ಕೊಲನುಪಾಕೆ) ಎಂಬ ಗ್ರಾಮವು ಇರುತ್ತದೆ. ಇದು ಹೈದರಾಬಾದಿನಿಂದ ಬೆಜವಾಡಕ್ಕೆ ಹೋಗುವ ರೇಲ್ವೆ ಮಾರ್ಗದಲ್ಲಿ ಹೈದರಾಬಾದಿನಿಂದ ಆರು ಸ್ಟೇಶನುಗಳ ಮೇಲೆ ಇರುವ ಆಲೇರು ಸ್ಟೇಶನ್ನಿನಿಂದ ನಾಲ್ಕು ಮೈಲು ದೂರವಿರುತ್ತದೆ. ಅಲ್ಲಿ ಈಗಲೂ ಅನೇಕ ದೇವಾಲಯಗಳಿದ್ದು ಗ್ರಾಮದಲ್ಲೆಲ್ಲ ಪುರಾತನ ಅವಶೇಷಗಳು ತುಂಬಿ ಹೋಗಿರುತ್ತವೆ. ಆದರೆ ಅದು ಈಗ ಒಂದು ಚಿಕ್ಕ ಗ್ರಾಮವಾಗಿದೆ. ಈ ಗ್ರಾಮವು ಪುರಾತನ ಕಾಲದಲ್ಲಿ ಶೈವ ಜಳವಳಯ ಮುಖ್ಯ ಕೇಂದ್ರವಾಗಿತ್ತು. ಇಲ್ಲಿಯೇ ರೇವಣಸಿದ್ಧೇಶ್ವರನು ಉಗವಿಸಿದನು. ಅವನ ತರುವಾಯ ವೇಮನಾರಾಧ್ಯನೆಂಬ ಶೈವಾಚಾರ್ಯನು ಇಲ್ಲಿಯೇ ಪ್ರಸಿದ್ಧಿಗೆ ಬಂದನು.

ಆಂಧ್ರ ದೇಶದಲ್ಲಿ ಹೇಗೆ ಶ್ರೀಪತಿ ಪಂಡಿತ, ಮಲ್ಲಿಕಾರ್ಜುನ ಪಂಡಿತ, ಮಂಚಣ್ಣ ಪಂಡಿತ ಎಂದು ಪಂಡಿತತ್ರಯರು ಪ್ರಸಿದ್ಧರಾಗಿರುವರೋ ಹಾಗೆಯೇ ಆರಾಧ್ಯತ್ರಯರೆಂದು ಮೂವರು ಪ್ರಸಿದ್ಧರಾಗಿದ್ದಾರೆ. ಅವರು ವೇಮನಾರಾಧ್ಯ, ವಿಶ್ವಾರಾಧ್ಯ, ಉದ್ಭಟಾರಾಧ್ಯ ಎಂದಿರುತ್ತಾರೆ. ವಿಶ್ವಾರಾಧ್ಯನ ಬದಲು ಕೋಟಿಪಲ್ಯಾರಾಧ್ಯ ಎಂತಲೂ ಹೇಳುವದುಂಟು.

ವೇಮನಾರಾಧ್ಯನು ನಿದ್ವತ್ತಿ ಮತ್ತು ಪಂಚಾಕ್ಷರೀ ಮಂತ್ರ ಸಾಮರ್ಥ್ಯ ಇವುಗಳ ಮೂಲಕ ನಾಡಿನಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದವನಾಗಿದ್ದನು.

ಅವನು ಒಂದು ದಿವಸ ಪೋರಾಂಡಲವೆಂಬ ಪಟ್ಟಣಕ್ಕೆ ಹೋಗಿರಲು ಅವನು ತನ್ನ ಶಿವಾರ್ಚನೆಗೋಸ್ಕರ ಸಮೀಪದ ತೋಟದಲ್ಲಿ ಪುಷ್ಪವನ್ನೆತ್ತಲಿಕ್ಕೆ ಹೋಗಿದ್ದನು. ಆ ಸಮಯದಲ್ಲಿ ಆ ಪುರದರಸು ಸಾರಂಗರಾಜನು ಒಬ್ಬ ರಾಜನ ಮಗಳನ್ನು ಮದುವೆಯಾಗಿ ಬಹು ಸಂಭ್ರಮದಿಂದ ರಥವನ್ನೇರಿ ಬರುತ್ತಿದ್ದನು. ಆಗ ಅವನು ದಾರಿಯಲ್ಲಿ ವೇಮನಾರಾಧ್ಯನನ್ನು ಕಂಡು ಅವನಾರೆಂದು ಕೇಳಲು ಸಮೀಪದ ಜನರು ಇವನು ಪುಣ್ಯ ಪುರುಷನು, ನಾಡಿನಲ್ಲಿ ಅತ್ಯಂತ ಪ್ರಸಿ

ದ್ಧನಾಗಿದ್ದಾನೆ, ಎಂದು ಹೇಳಲು ರಾಜನು ಆ ರಥದ ಮೇಲೆಯೇ ಕುಳಿತುಕೊಂಡು 'ಜೋಹರ' ಎಂದು ಅವನಿಗೆ ನಮಸ್ಕರಿಸಿದನು. ಆದರೆ ವೇಮನಾರಾಧ್ಯನು ಅರಸನ ನುಡಿಯನ್ನು ಕೇಳಿಯೂ ಕೇಳದಂತೆ ಸುಮ್ಮನಿರಲು ಅರಸನು ತಾನು ಹೀಗೆ ರಥದಲ್ಲಿ ಕುಳಿತು ಶರಣೆಂಬುದು ತನ್ನ ಗರ್ವವು ಎಂದು ತಿಳಿದವನಾಗಿ ರಥದಿಂದ ಕೆಳಗಿಳಿದು ಅವನಿಗೆ ಶರಣೆಂದನು. ಆಗಲೂ ವೇಮನಾರಾಧ್ಯನು ಸುಮ್ಮನಿರಲು ಮೂರು ಬಾರಿ ಅರಸನು 'ಶರಣು, ಶರಣು' ಎಂದರೂ ಕೂಡ ಸುಮ್ಮನೇ ಇದ್ದನು. ಆಗ ಅರಸನು—ಶರಣೆಂದರೆ ನೀನು ಹರಿಸಲೊಲ್ಲೆ. ಇಂಥ ಗರ್ವವು ನಿನಗೇಕೆ? ನಿನಗೆ ಹಿರಿಯತನದ ಹೆಮ್ಮೆಯೇ? ನೀನು ಹರಿಸದಿದ್ದರೆ, ಬಿಟ್ಟುಬಿಡು. ಇದರಿಂದ ನನಗೆ ಮೃತ್ಯು ಬರುವದೇ? ಒಂದು ಪೇಳೆ ಪರಿಸಿದರೆ, ನನಗೆ ಮೃತ್ಯುವು ಬರುವದು ತಪ್ಪುವದೇ? ನೀನು ಹರನ ವೇಷವನ್ನು ತೊಟ್ಟುಕೊಂಡು ಸುಳಿಯುವದಕ್ಕೆ ಮಾತ್ರ ಕಾರಣನಾದೆಯಲ್ಲದೆ ನಿನಗೆ ನಾನು ಶರಣೆಂದರೆ ನೀನು ಅದನ್ನು ಸ್ವೀಕಾರ ಮಾಡದಿರುವದು ಯೋಗ್ಯವೇ? ಎಂದು ಕಟುತರವಾಗಿ ವೇಮನಾರಾಧ್ಯನಿಗೆ ನುಡಿದನು. ಆಗ ವೇಮನಾರಾಧ್ಯನು ಅರಸನ ಮುಖವನ್ನು ನೋಡುತ್ತ—ನಿನ್ನ ಪುಣ್ಯವು ತೀರಿತು. ನಾಳೆ ಮಧ್ಯಾನ್ನದೊಳಗೆ ಮರಣವಾಗುವವನಿಗೆ ಹರಿಸುವದೇತಕ್ಕೆ ಎಂದು ಎನಲು ಅರಸನು ಮತ್ತಿಷ್ಟು ಕೆರಳಿ—ನಾಳೆ ನಾನು ಸತ್ತರೆ ನಿನ್ನ ಮಾತು ನಿಜ ಎಂದು ಹಾಸ್ಯಮಾಡುತ್ತ ತನ್ನ ಅರಮನೆಗೆ ಹೊರಟುಹೋದನು. ಇತ್ತ ವೇಮಯ್ಯನು ಆ ತೋಟದಲ್ಲಿಯೇ ಶಿವಾರ್ಚನೆಗೆ ನಿಂತುಕೊಂಡನು.

ಇತ್ತ ಸಾರಂಗರಾಜನು ತನ್ನ ಹೆಂಡತಿಯೊಡನೆ ಅರಮನೆಯಲ್ಲಿ ಪವಡಿಸಿರಲು ರಾತ್ರಿಯಲ್ಲಿ ಮಂಚಕ್ಕೆ ಹಚ್ಚಿದ್ದ ಸರಪಳಿಯ ಗುಂಟ ಒಂದು ಮಹಾಘಟ ಸರ್ಪನು ದಳದಳನೆ ಕೆಳಗೆ ಇಳಿದುಬಂದು ಅರಸನ ಕಯ್ಯನ್ನು ಕಚ್ಚಿತು. ಕೂಡಲೆ ಅರಸನಿಗೆ ಎಚ್ಚರಿಕೆಯಾಗಿ ವಿಷವೇರಿ ನೆರಳುತ್ತಿರಲು ಅವನ ಸತಿಯು ಎದ್ದು ನೋಡುತ್ತಾಳೆಯೇ ಒಂದು ಮಹಾ ಸರ್ಪನು ಅಲ್ಲಿರುವದನ್ನು ಕಂಡು ಸಮೀಪದಲಿದ್ದವರನ್ನು ಕರೆಯುವಷ್ಟರಲ್ಲಿಯೇ ಅರಸನು ಹಮ್ಮೆಯ್ದಿ ಮರಣಹೊಂದಿದನು.

ರಾಜನು ಮರಣಹೊಂದಿದ್ದನ್ನು ಕೇಳಿ ಜನರು ಅರಮನೆಯಲ್ಲಿ ನೆರೆದು ದುಃಖಿಸುತ್ತಿರಲು ರಾಣಿಯು ಹಿಂದಿನ ದಿನ ದಾರಿಯಲ್ಲಿ ಬರು

ತ್ರಿರುವಾಗ ತಾವು ವೇಮನಾರಾಧ್ಯನನ್ನು ಕಂಡಾಗ್ಗೆ ನಡೆದ ಸಂಗತಿಗ ಳನ್ನು ಅರುಹಿದಳು. ಆಗ ಜನರು ಒಬ್ಬ ಮಹಾನುಭಾವನನ್ನು ತುಚ್ಛ ಮಾಡಿ ನುಡಿದಿದ್ದರ ಫಲವೇನೋ ಇದೆಂದು ಭಾವಿಸಿ, ಈಗ ಆ ಮಹಾ ನುಭಾವನನ್ನೇ ಮೊರೆಹೊಗಬೇಕೆಂದು ಎಲ್ಲರೂ ಗೊತ್ತುಪಡಿಸಿ ಅರ ಸನ ಶವವನ್ನು ತೆಗೆದುಕೊಂಡು ವೇಮನಾರಾಧ್ಯನಿದ್ದ ಸ್ಥಳಕ್ಕೆ ಬಂದರು. ಅವರು ಅವನಿಗೆ ವಂದಿಸಿ--ರಾಜನ ಅಪರಾಧವನ್ನು ತಾವು ಕ್ಷಮಿಸ ಬೇಕು. ನಾವು ನಿಮಗೆ ಶರಣ ಹೋಗುತ್ತೇವೆ. ಹಿಂದೆ ಮುಸುಡಿಯ ಜೌಡಯ್ಯನು ತನಗೆ ವಂದಿಸಿ ಹೋದ ಸತಿಗೆ ಪ್ರಾಣವನ್ನು ಕೊಡಲಿ ಲ್ಲವೇ? ಹಾಗೆಯೇ ನೀವು ಈತನಿಗೆ ಪ್ರಾಣದಾನ ಮಾಡಬೇಕೆಂದು ಪ್ರಾರ್ಥಿಸಿದರು. ಅದನ್ನು ವೇಮನಾರಾಧ್ಯನು ಲಕ್ಷಿಸಿ, ಅಲ್ಲಿ ಶಿವಗಣ ಸಂದೋಹವು ನೆರೆದಿರಲು ಅವರಿಗೆ ಸಾಷ್ಟಾಂಗವೆರಗಿ, ಅವರ ಪಾದ ಪ್ರಕ್ಷಾಲನವನ್ನು ಮಾಡಿ ಆ ಉದಕವನ್ನು ಒಂದು ಘಟದಲ್ಲಿ ತುಂಬಿ ಅವರ ಪೂಜೆಯನ್ನು ಮಾಡಿ ಶಿವಗಣಗಳ ನಿರೂಪವನ್ನು ತೆಗೆದು ಕೊಂಡು ನೃಪನ ಶವವನ್ನು ತನ್ನೆದುರಿಗೆ ತರಲು ಸೂಚಿಸಿದನು.

ಹೀಗೆ ಅವನು ಸೂಚಿಸಲು ಅರಸನ ಶವವನ್ನು ಅಲ್ಲಿ ತಂದಿ ಳುಹಲು ಅದರ ಬೆರೆತ ಮೋರೆ, ಬಿಗಿದ ಹುಬ್ಬು, ಹಸುರೇರಿದ ನರ, ಸೊರೆವಾಯಿ, ಕಣ್ಣು ಬೆಳ್ಳಾಗಿದ್ದದ್ದನ್ನು ಜನರು ನೋಡಿ ಮರುಗುತಿ ರಲು ವೇಮನಾರಾಧ್ಯನು ತಾನು ಸಿದ್ಧಪಡಿಸಿದ್ದ ಶಿವಗಣಗಳ ಪಾದೋ ದಕದಿಂದ ಅರಸನ ಅಂಗವನ್ನು ತೊಳೆದು, ಭಸಿತವನ್ನು ಪಾದೋದಕ ವಿಶ್ರಿತ ಮಾಡಿ ಅದನ್ನು ಶರೀರಕ್ಕೆ ಪೂಸಿ, ಶಿವಗಣಗಳ ಅಪ್ಪಣೆಯನ್ನು ತೆಗೆದುಕೊಂಡು ಪಂಚಾಕ್ಷರೀ ಮಂತ್ರವನ್ನು ಸ್ಮರಣೆ ಮಾಡುತ್ತ– ಸಾರಂಗ ರಾಜನೇ, ಏಳೇಳೆಂದು ಕರವನ್ನು ಹಿಡಿದು ಕರೆಯಲು ಅವನ ದೇಹ ದಲ್ಲಿ ಪ್ರಾಣವು ಬಂದು ಅವನು ಎದ್ದು ಕುಳಿತನು. ಆಗ ಅರಸನು ತನ್ನ ಇದಿರಿಗೆ ಇದ್ದ ವೇಮನಾರಾಧ್ಯನನ್ನೂ ಶಿವಗಣಗಳನ್ನೂ ನಂದಿಸಿ ಅವರಿಗೆ ಕರವನ್ನು ಮುಗಿದು ನಿಂತುಕೊಂಡನು. ನೆರೆದ ಜನರು ವೇಮನಾರಾಧ್ಯನ ಮಹತ್ವವನ್ನೂ ಅವನ ಪಂಚಾಕ್ಷರೀ ಮಂತ್ರಸಾಮ ರ್ಥ್ಯವನ್ನೂ ಹೊಗಳುವವರಾದರು. ಆಮೇಲೆ ವೇಮನಾರಾಧ್ಯನು ತನ್ನ ಪಟ್ಟಣವಾದ ಪಾಲ್ಕುರಿಕೆಗೆ ತಿರುಗಿ ಬಂದನು.

ಈ ಪ್ರಕಾರ ವೇಮನಾರಾಧ್ಯನು ಪಟ್ಟಣವಲ್ಲಿ ತನ್ನ ಶಿವಭಕ್ತಿ ಯಲ್ಲಿ ಇರುತ್ತಿರಲು ಅವನು ಒಂದು ದಿವಸ ಕಲ್ಯಾಣ ಪಟ್ಟಣವನ್ನು ನೋಡಬೇಕೆಂದು ಅಲ್ಲಿಗೆ ಬಂದನು. ಬಸವೇಶ್ವರನು ಅವನು ಬಂದ ಸುದ್ದಿಯನ್ನು ಕೇಳಿ ಅವನಿಗೆ ತನ್ನ ಮಂದಿರಕ್ಕೆ ಬಂದು ತನ್ನನ್ನು ಪುನೀತನನ್ನಾಗಿ ಮಾಡಬೇಕೆಂದು ಹೇಳಿಕಳುಹಿದನು. ಆದರೆ ವೇಮ ನಾರಾಧ್ಯನು ಅವನಿಗೆ– ನೀನು ಭಕ್ತಾಗ್ರಣಿ ಎಂಬುದೇನೋ ನಿಜವು. ಆದರೆ ನಿನ್ನ ಆಚಾರ ವ್ಯವಹಾರಗಳು ಅವೈದಿಕವಾಗಿವೆ. ಆದ್ದರಿಂದ ನಾನು ನಿನ್ನ ಮಂದಿರಕ್ಕೆ ಬರಲಾರೆನೆಂದು ಹೇಳಿಕಳುಹಿದನು. ಆಗ ಬಸವೇಶ್ವರನು ಶಿವಶರಣರೊಡಗೂಡಿ ತಾನೇ ವೇಮನಾರಾಧ್ಯನಿದ್ದ ಲ್ಲಿಗೆ ಬಂದು ಅವನಿಗೆ ಪೊಡಮಟ್ಟು ಅವನ ಕೂಡ ಶಿವಾನುಭವ ಗೋಷ್ಠಿಗಳನ್ನು ನಡಿಸಿದನು. ಆಗ ವೇಮನಾರಾಧ್ಯನು ಶಿವಾನುಭ ವದ ಮಹಿಮೆಯನ್ನು ತಿಳಿದವನಾಗಿ ತ್ರಿಪುರಾಂತಕೇಶ್ವರನಿಂದ ವೀರ ಶೈವ ದೀಕ್ಷೆಯನ್ನು ಹೊಂದಿದನು. ಆಮೇಲೆ ಅವನು ಪಾಲ್ಕುರಿಕೆಗೆ ಮರಳಿ ಬಂದನು.

ಅವನು ಅಲ್ಲಿಗೆ ತಿರುಗಿ ಬಂದ ಬಳಿಕ ನಾಡಿನಲ್ಲಿದ್ದ ಅನೇಕ ಜೈನ, ಬೌದ್ಧ, ಚಾರ್ವಾಕರನ್ನು ತನ್ನ ಶಿವಾನುಭವದ ಜ್ಞಾನದಿಂದ ವಾದದಲ್ಲಿ ಜಯಿಸಿ ವೀರಶೈವ ಮತೋದ್ಧಾರ ಕಾರ್ಯಗಳನ್ನು ನಡಿ ಸಿದನು. ಹೀಗೆ ವೇಮನಾರಾಧ್ಯನು ಆಂಧ್ರ ದೇಶದಲ್ಲಿ ವೀರಶೈವವನ್ನು ಪ್ರಸಾರಮಾಡಿದವನೆಂದು ಆಚಾರ್ಯತ್ರಯರಲ್ಲಿ ಪ್ರಸಿದ್ಧನಾಗಿದ್ದಾನೆ.

ವೇಮನಾರಾಧ್ಯನು ಸರ್ವಜ್ಞ ಕವಿಯಂತೆ ಆಂಧ್ರವಾಙ್ಮಯದಲ್ಲಿ ಹೆಸರಾದ ಗ್ರಂಥಕಾರನು. ಅವನ ಶತಕವು ಪ್ರಸಿದ್ಧವಾಗಿದೆ. ಅದರಂ ತೆಯೇ ಅವನು ಅನೇಕ ಧಾರ್ಮಿಕ ಗ್ರಂಥಗಳನ್ನು ಬರೆದಿರಬಹುದೆಂದು ನಮಗೆ ತೋರುತ್ತದೆ. ಆದರೆ ಅವು ನನಗೆ ಉಪಲಬ್ಧವಾಗಿಲ್ಲ.

ವೇಮನಾರಾಧ್ಯನ ಹೆಸರು ಗಣಸಹಸ್ರದಲ್ಲಿ ಬಂದಿದೆ. ಇವನು ಬಸವೇಶ್ವರನ ಸಮಕಾಲೀನನು. ಇವನ ಮೊಮ್ಮಗನಾದರೂ ಪ್ರಸಿದ್ಧ ನಾಗಿದ್ದಾನೆ. ಅವನು ಪಾಲ್ಕುರಿಕೆ ಸೋಮಾರಾಧ್ಯನಿಗೆ ದೀಕ್ಷೆಯನ್ನು ಕೊಟ್ಟಿದ್ದಾನೆ.

ವೇಮನಾರಾಧ್ಯನಿಗೆ, ವೇಮನ, ವೇಮ, ಬಲಿದೇವಿಯರ ವೇಮ, ವೇಮಾರಾಧ್ಯ ಎಂಬ ಬೇರೆ ಹೆಸರುಗಳಿರುತ್ತವೆ.

ಚಾರಮರಾಯ.

ಕೇರಳ ದೇಶದಲ್ಲಿ ಅಂದರೆ ಈಗಿನ ಮಲಬಾರ ಪ್ರಾಂತದಲ್ಲಿ ಕುಡಗಲೂರು ಎಂಬ ಪಟ್ಟಣವಿದ್ದು ಅಲ್ಲಿ ಚಾರಮರಾಯನೆಂಬ ರಾಜನು ರಾಜ್ಯವಾಳುತ್ತಿದ್ದನು. ಆ ಗ್ರಾಮಕ್ಕೆ ಎತ್ತರವಾದ ಮತ್ತು ಭದ್ರವಾದ ಅಳವೇರಿ, ಆಳವಾದ ಅಗಳತ, ಮಾಂಡಲಿಕ ರಾಜರ ಭವ್ಯವಾದ ಭವನಗಳು, ಅನೇಕ ಸುಂದರವಾದ ದೇವಾಲಯಗಳು, ಇವುಗಳಿಂದ ಸುಶೋಭಿತವಾಗಿತ್ತು. ಈ ದೇವಾಲಯಗಳಲ್ಲಿ ತಿರುವಂಜಿ ಕಾಳಿನಾಥನ ದೇವಾಲಯವೇ ಮುಖ್ಯವಾಗಿದ್ದಿತು. ಪಟ್ಟಣದಲ್ಲೆಲ್ಲ ಎಲ್ಲಿ ನೋಡಿದರೂ ಶಿವಭಕ್ತರು. ಚಾರಮರಾಯನು ಸದ್ಗುಣಶೀಲನಾಗಿ ಕೇರಳ ದೇಶವನ್ನು ಸದ್ಧರ್ಮದಿಂದ ಪರಿಪಾಲಿಸುತ್ತಿದ್ದನು.

ಚಾರಮರಾಜನ ಹೆಂಡತಿಯಾದರೂ ಶಿವನ ಮೇಲೆ ಅತ್ಯಂತ ಭಕ್ತಿಯುಳ್ಳವಳಾಗಿದ್ದಳು. ಅವಳು ಒಂದು ದಿನ ಏಕಾಂತದಲ್ಲಿದ್ದಾಗ ರಾಜನು ಆಕೆಯ ತೋಳಿನ ಒಂದೆಡೆಯಲ್ಲಿ ಗಂಟುಗಟ್ಟಿ ಬಿರಿನಾಗಿರುವದನ್ನು ಕಂಡು ಇದು ಹೀಗೇಕೆ ಎಂದು ಕೇಳಿದನು. ಅವಳು ಅವನಿಗೆ ಇದರಲ್ಲಿ ರುದ್ರಾಕ್ಷಿ ಇದೆ, ಹೀಗೆಯೇ ಅದು ನನ್ನ ದೇಹದಲ್ಲಿ ಇರುತ್ತದೆ, ಎಂದು ಹೇಳಲು ಇದನ್ನು ಧರಿಸಲು ನಿನಗೆ ಹೇಳಿದವರಿಯಾರು ಎಂದು ಕೇಳಿದನು. ಅದಕ್ಕೆ ಅವಳು ಒಬ್ಬ ಪುರಾಣಿಕನು ಪುರಾಣ ಹೇಳುವಾಗ, ಗೌಡ ದೇಶದಲ್ಲಿ ಮಾಣಿಕ್ಯಸೆಟ್ಟಿ ಎಂಬ ವರ್ತಕನು ಕತ್ತೆಗಳ ಮೇಲೆ ರುದ್ರಾಕ್ಷಿಗಳನ್ನು ಹೇರಿಸಿಕೊಂಡು ಅವುಗಳ ವ್ಯಾಪಾರ ಮಾಡುತ್ತಿದ್ದನು. ಅವುಗಳಲ್ಲೊಂದು ಕತ್ತೆಯು ಸಾಯಲು ಅದನ್ನು ಯಮದೂತರು ಹಿಡಿದೊಯ್ಯುವಾಗ ಚಿತ್ರಗುಪ್ತರು ಅದಕ್ಕೆ ರುದ್ರಾಕ್ಷಿಯ ಸಾನ್ನಿಧ್ಯವು ದೊರಕಿರುತ್ತದೆ. ಅದರ ಫಲವು ಅದಕ್ಕೆ ತಪ್ಪದು ಎಂದು ಹೇಳಿ ಅದನ್ನು ಬಿಟ್ಟುಬಿಡಲು ಆಜ್ಞಾಪಿಸಲು ಅದು ಮುಂದಿನ ಜನ್ಮದಲ್ಲಿ ರಾಜಕುಮಾರ್ತಿಯಾಗಿ ಹುಟ್ಟಿತು ಎಂದು ಹೇಳಿದನು. ಅಂದಿನಿಂದ ನನ್ನಲ್ಲಿ ರುದ್ರಾಕ್ಷಿಯ ವಿಷಯವಾಗಿ ಭಕ್ತಿಯು ಉತ್ಪನ್ನವಾಗಿ ಅದನ್ನು ಧಾರಣ ಮಾಡುತ್ತಾ ಇದ್ದೇನೆ. ಅದನ್ನು ಧಾರಣ ಮಾಡುವಲ್ಲಿ ನಾನು ಪಂಚಾಕ್ಷರೀ ಮಂತ್ರೋಪದೇಶವನ್ನು ಹೊಂದಿ ಲಿಂಗಜಪವನ್ನು ಮಾಡುತ್ತಿರುವದರಿಂದ ಅದು ನನ್ನ ಅಂಗ

ವಲ್ಲಿ ಹೀಗೆ ಸ್ಥಾನವನ್ನು ಹೊಂದಿರುತ್ತದೆ. ಎಂದು ಅರುಹಿದಳು. ಆಗ ಅರಸನು ಅದನ್ನು ನೋಡಬೇಕೆಂದು ಅಪೇಕ್ಷಿಸಿ ಒಂದು ಪದನಾದ ಚೂರಿಯನ್ನು ತೆಗೆದುಕೊಂಡು ಅದರಿಂದ ಅದನ್ನು ಮೀಟಿ ಹೊರಗೆ ತೆಗೆಯಲು ಪ್ರಯತ್ನಿಸಲು ಆ ಚೂರಿಯೇ ಮುರಿದುಹೋಯಿತು. ಆಗ ಅವಳೇ ಅದನ್ನು ಇಚ್ಛಾಮಾತ್ರದಿಂದ ಹೊರಗೆ ತೆಗೆದು ತೋರಿಸಲು ಅದನ್ನು ನೋಡಿ ಅರಸನು ಆಶ್ಚರ್ಯಚಕಿತನಾಗಿ ರುದ್ರಾಕ್ಷಿಯ ಮಹತ್ವವು ಎಷ್ಟಿದೆ ಎಂಬುದನ್ನು ಅರಿತವನಾಗಿ ಅದನ್ನು ಧಾರಣ ಮಾಡಲು ಇಚ್ಛಿಸಿದನು. ಅದಕ್ಕೆ ರಾಣಿಯು ನೀನು ಪಂಚಾಕ್ಷರೀ ಮಂತ್ರೋಪದೇಶವನ್ನು ಹೊಂದದೆ ಇದನ್ನು ಧಾರಣ ಮಾಡಬಾರದೆಂದು ಹೇಳಿದಳು. ಆಗ ಅವನು ಅವಳಿಂದಲೇ ಉಪದೇಶವನ್ನು ಹೊಂದಿ ಮಂತ್ರಪೂರ್ವಕವಾಗಿ ವಿಭೂತಿ, ರುದ್ರಾಕ್ಷಿಗಳನ್ನು ಧಾರಣ ಮಾಡಿಕೊಂಡು ಶಿವಾಚಾರದಲ್ಲಿ ಇರಹತ್ತಿದನು.

ಈ ಸಂಗತಿಯು ಘಟಿಸಿದ ಬಳಿಕ ಅರಸನ ವರ್ತನೆಯೇ ಬೇರೆಯಾಯಿತು. ಅವನು ಪಂಚಾಕ್ಷರೀ ಜಪದ ಮೂಲಕ ಪರಮಾತ್ಮನ ಸೇವೆಯನ್ನು ಮಾಡುವವನಾದನು. ಅವನಿಗೆ ತಿರುವಂಜಿ ಕಾಳಿನಾಥನನ್ನು ದಿನಾಲು ತಪ್ಪದೆ ಭಜಿಸುವನು. ಅವನು ದೇವಾಲಯಕ್ಕೆ ಹೋಗಿ ಬಾಹ್ಯಮಂಟಪದಲ್ಲಿ ನುದ್ದಳಿ, ತಾಳ, ಜಂಗು, ಆವುಜೆ, ಢಕ್ಕೆ, ಪಟಹ, ಭೇರಿ, ನಿಸ್ಸಾಳ, ತುಡುಮು, ರಣಗಹಳೆ, ಹೆಗ್ಗಾಳಿ, ವಸೌರಿ, ಶಂಖ, ಚಿನ್ನಗಹಳೆ, ಗಂಟೆ ಮೊದಲಾದ ವಾದ್ಯಗಳು ಘೋರ್ಗರೆಯುತ್ತಿರಲು ದೇವಾಲಯವನ್ನು ಪ್ರವೇಶಿಸಿದ ಬಳಿಕ ಹೊರಗಿನ ವಾದ್ಯಗಳನ್ನು ಸ್ತಬ್ಧಗೊಳಿಸುವನು. ಆಮೇಲೆ ದೇವರ ಮುಂದೆ ನಿಂತು ನಾಗವೇಣಿ, ಕಿನ್ನರವೇಣಿ, ರುದ್ರವೇಣಿ, ತುಂಬುರುವೇಣಿ ಮೊದಲಾದ ೧೮ ತೆರದ ವೇಣಿಗಳನ್ನು ಶ್ರುತಿಗೊಳಿಸಿ ೩೨ ರಾಗಗಳನ್ನು ಸಪ್ತಸ್ವರದಿಂದ ಹಾಡಿಸುವನು. ಆ ಮೇಲೆ ಅಷ್ಟವಿಧಾರ್ಚನೆ, ಷೋಡಶೋಪಚಾರಗಳ ಮೂಲಕ ಲಿಂಗಮೂರ್ತಿಯನ್ನು ಆರಾಧಿಸುತ್ತ ಪೂಜಾ ಕಾರ್ಯಗಳನ್ನು ತೀರಿಸಿ, ಆಮೇಲೆ ಅವನು ಆರಮನೆಗೆ ತೆರಳುವನು. ರಾಜನು ನೃತ್ಯ, ಗಾಯನ, ವಾದ್ಯದಲ್ಲಿ ಬಹು ಪ್ರವೀಣನು. ಇವುಗಳ ಮೂಲಕವೇ ಅವನು ತನ್ನ ಭಕ್ತಿಯನ್ನು ಪರಮಾತ್ಮನಲ್ಲಿ ಪ್ರದ

ರ್ಶಿಸುವನು. ಇವೇ ಅವನು ಪರಮಾತ್ಮನನ್ನು ಭಜಿಸುವ ಮಾರ್ಗವಾಗಿತ್ತು.

ಅವನ ಈ ವರ್ತನೆಯು ಮೂಲಕ ರಾಜ್ಯದಲ್ಲಿದ್ದ ಪ್ರಜೆಗಳೆಲ್ಲರೂ ಶಿವಭಕ್ತಿಯುಳ್ಳವರಾಗುತ್ತ ನಡೆದರು. ಅವರೆಲ್ಲರು ನಿಶ್ಚಲ ಭಕ್ತರಾದರು. ಆಗ ಅರಸನು ತನ್ನ ರಾಜ್ಯದಲ್ಲೆಲ್ಲ ರಾವುತರೂ ಕಾಲಾಳುಗಳೂ ರುದ್ರಾಕ್ಷಿ ಧಾರಣವನ್ನು ಮಾಡಬೇಕೆಂದು ವಿಧಿಸಿದನು. ಇದರಿಂದ ಅಶ್ವಗಳ ಮೇಲಿದ್ದ ಜೀನುಗಳು, ಹಲ್ಲಣ, ಹಕ್ಕರಿಕೆ, ಮುಕುರ ಮೊದಲಾದವುಗಳೂ ಹಾಗೆಯೇ ರಾವುತರ ಕುಂಡಲ ಕಿರೀಟ ವೈಜೋಡು ಮೊದಲಾದವುಗಳೂ ರುದ್ರಾಕ್ಷ ಮಾಲೆಗಳಿಂದ ಕಂಗೊಳಿಸಹತ್ತಿದವು. ಹಾಗೆಯೇ ರಾಜ್ಯದಲ್ಲಿದ್ದ ಪ್ರಜೆಗಳೆಲ್ಲರೂ ವಿಭೂತಿ ರುದ್ರಾಕ್ಷ ಧಾರಣ ಮಾಡಿಕೊಂಡು ತೊಳಗಹತ್ತಿದರು ಹೀಗೆ ಎಲ್ಲೆಲ್ಲಿಯೂ ಶಿವಭಕ್ತಿಯು ಪ್ರಸಾರವಾಗಹತ್ತಿತು. ರಾಜನಾದರೂ ಈ ಚಿನ್ಹಗಳನ್ನು ಧಾರಣಮಾಡಿದವರೆಲ್ಲರೂ ಶಿವಾಂಶಿಕರೆಂದು ಭಾವಿಸಿ ಅವರಲ್ಲಿ ಯಾವ ತೆರದ ಭೇದ ಭಾವವನ್ನು ಎಣಿಸದೆ ಅವರೆಲ್ಲರೂ ತನ್ನ ಬಂಧುಬಳಗವೆಂದು ಭಾವಿಸಿ ವರ್ತಿಸುವವನಾದನು.

ಹೀಗಿರಲು ಒಂದು ದಿನ ಚಾರಮರಾಯನು ಅನೆಯನ್ನೇರಿಕೊಂಡು ಪಟ್ಟಣದೊಳಗಿಂದ ವೈಹಾಳಿ ಹೋಗುತ್ತಿರುವಾಗ್ಗೆ ಅಚ್ಚುಡಿಪುರವೆಂಬಲ್ಲಿದ ಒಬ್ಬ ಮಡಿವಳನು ಬಟ್ಟೆಗಳನ್ನು ಬೆಳ್ಳಗೆ ಮಾಡುತ್ತಾ ಇದ್ದದ್ದನ್ನು ಕಂಡನು. ಅವನು ಉಪಯೋಗಿಸುತ್ತಿದ್ದ ಸುಣ್ಣವು ಅವನ ಮೈಮೇಲೆ ಬಿದ್ದು ಅದರ ಬಿಳೀ ವರ್ಣದ ಗೆರೆಗಳು ಅವನ ಮೇಲೆ ಮೂಡಿದ್ದವು. ಅರಸನು ಇದನ್ನು ನೋಡಿ ಈತನು ಭಸ್ಮಧಾರಣವನ್ನು ಮಾಡಿಕೊಂಡಿದ್ದಾನೆ, ಅವನೊಬ್ಬ ಭಕ್ತನು ಎಂದು ತಿಳಿದು, ಆನೆಯಿಂದಿಳಿದು ಅವನಿಗೆ ನಮಸ್ಕರಿಸಿದನು. ಇದನ್ನು ಆ ಅಗಸನು ನೋಡಿ ಗಾಬರಿಯಾಗಿ ಅರಸನಿಗೆ–ನಾನೊಬ್ಬ ಅಗಸರವನು ಹೀಗೆ ನಮಸ್ಕರಿಸಲು ನಾನು ಯೋಗ್ಯನಲ್ಲ ಎಂದು ಹೇಳಲು, ಅರಸನು–ಭಕ್ತರು ಅಗಸರಿರಲಿ ಇಲ್ಲವೆ ಬ್ರಾಹ್ಮಣರಿರಲಿ ಯಾರಿದ್ದರೂ ಕೂಡ ಅವರ ಕುಲವನ್ನು ನಾನು ನೋಡೆನು. ಅವರೆಲ್ಲರೂ ನನಗೆ ಪೂಜ್ಯರು, ಅವರು ಶಿವನೆಂದೇ ಕಾಣುತ್ತೇನೆ, ಎಂದು ಉತ್ತರ ಕೊಟ್ಟನು. ಇದನ್ನು ಜನರು ಕೇಳಿ ಅರಸನು ನಿಜವಾದ ಭಕ್ತನು ಶರಣನು, ಈವನಿಗೆ ಯಾರೂ ಸರಿ ಇಲ್ಲವೆಂದು ಭಾವಿಸಿ ಕೊಂಡಾಡುವವರಾದರು.

ಇದರಿಂದ ಚೇರಮರಾಯನ ಖ್ಯಾತಿಯು ಕೇವಲ ಕೇರಳದೇಶದಲ್ಲಿ ಮಾತ್ರವಲ್ಲ ಚೋಳ, ಚೇರ, ಕರ್ನಾಟಕ ಮೊದಲಾದ ದೇಶಗಳಲ್ಲಿಯೂ ಪಸರಿಸಹತ್ತಿತು. ಅವನ ಶಿವಭಕ್ತಿ, ಅವನ ಸದ್ಪ್ರವರ್ತನೆ, ತಿರುವಂಜಿ ಕಾಳಿನಾಥನ ಮೇಲಿದ್ದ ಅವನ ಉತ್ಕಟ ಶ್ರದ್ಧೆ ಇವುಗಳೆಲ್ಲವನ್ನು ಅವರು ಅರಿತು ಅವನ ವಿಷಯವಾಗಿ ಅತುಲವಾದ ಆದರವನ್ನೂ ಪ್ರೀತಿಯನ್ನೂ ವಹಿಸುವವರಾದರು. ಹೀಗೆ ಕೆಲವುಕಾಲ ಗತಿಸಿದಬಳಿಕ ಚಾರಮರಾಯನಲ್ಲಿ ರಾಜ್ಯವ್ಯಾಮೋಹವು ತಪ್ಪಹತ್ತಿತು. ಈ ರಾಜ್ಯವು ನನಗೆ ಬೇಡ, ಪರಮಾತ್ಮನ ಸ್ಮರಣೆಯಲ್ಲಿಯೇ ನಾನು ಕಾಲಕಳೆಯಬೇಕೆಂಬ ಭಾವವು ಅವನಲ್ಲಿ ಬಲಿಯಹತ್ತಿತು. ಕಡೆಗೆ ಅವನು ರಾಜ್ಯವನ್ನು ತೊರೆಯಬೇಕೆಂದು ನಿರ್ಧರಿಸಿ ತನ್ನ ರಾಜಧಾನಿಯನ್ನು ಬಿಟ್ಟಕೊಟ್ಟ ಹೊರಡಲು ಉದ್ಯುಕ್ತನಾದನು. ಈ ಸಂಗತಿಯು ಅವನ ಸ್ನೇಹಿತನಾದ ಚೋಳರಾಜನಿಗೆ ತಿಳಿಯಲು ಅವನು ಕೂಡಲೆ ಪರಿವಾರ ಸಹವಾಗಿ ಕುಡಗಲೂರಿಗೆ ಬಂದು ಅಲ್ಲಿದ್ದ ತಿರುವಂಜಿ ಕಾಳಿನಾಥನ ದೇವಾಲಯವನ್ನು ಪ್ರವೇಶಿಸಿ ಶಿವನಿಗೆ ವಿನ್ನೈಸಿಕೊಂಡಿದ್ದೇನೆಂದರೆ– ಎಲೇ ಲಿಂಗವೇ, ನಿಮ್ಮ ಪಾದದಿಂದ ಈ ಚೇರಮರಾಯನನ್ನು ಏಕೇ ಬಿಡುವಿರಿ ಎಂದೆನ್ನಲು, ಶಿವನು ಚೇರಮನನ್ನು ದೇವಾಲಯಕ್ಕೆ ಬರಮಾಡಿಕೊಂಡು ಅವನಿಗೆ—ಚೇರಮನೇ, ನಿನ್ನನೇನು ನಾವು ಬೇಸರಿಸಿದೆವು? ರಾಜ್ಯವನ್ನು ಹೀಗೆ ಬಿಟ್ಟುಹೋಗುವದೇಕೆ? ಎಂದು ಕೇಳಿದನು. ಅದಕ್ಕೆ ಚೇರಮನು ಶಿವನ ಅಭಿಪ್ರಾಯವನ್ನು ತಿಳಿದವನಾಗಿ— ನಾನು ನಿಮ್ಮ ನಾಂಟ್ಯವನ್ನು ನೋಡಲು ಬಯಸುತ್ತೇನೆ. ಅದನ್ನು ನೀವು ತೋರಿಸಿದರೆ ನಾನು ರಾಜ್ಯವನ್ನು ಬಿಟ್ಟು ಹೋಗುವದಿಲ್ಲ ಎಂದು ನುಡಿದನು. ಶಿವನು ಹಾಗೆಯೇ ಆಗಲೆಂದು ತನ್ನ ವಿಚಿತ್ರತರವಾದ ಮತ್ತು ಹೊಸತೆರನಾದ ನಾಂಟ್ಯವನ್ನಾಡಿ ತೋರಿಸಲು ಚಾರಮನು ಆನಂದಬಟ್ಟು ಶಿವನಿಗೆ--ನೀನು ದಿನಾಲು ಹೀಗೆಯೇ ನಿನ್ನ ನಾಟ್ಯನನ್ನು ನನಗೆ ತೋರಿಸಿದಲ್ಲಿ ನಾನು ಹೋಗುವದಿಲ್ಲ ಎಂದು ಹೇಳಿದನು. ಅದಕ್ಕೆ ಶಿವನು— ಹೀಗೆ ದಿನಾಲು ಈ ತೆರದ ನಾಂಟ್ಯವನಾಡುವುದುಂಟೇ? ಇದು ಆಗದು. ಆದರೆ ನಿನಗೆ ಈ ನಾಟ್ಯದ ಸ್ಮರಣೆಯನ್ನುಂಟು ಮಾಡಲು ನಾವು ದಿನಾಲು ನಮ್ಮ ಪಾದದ ಅಂದುಗೆಯ ಧ್ವನಿಯನ್ನು ತಾಳಬದ್ಧವಾಗಿ ನುಡಿಸುವೆವು. ಅದರಿಂದಲೇ

ನಿನ್ನ ಭಕ್ತಿಯ ಉದ್ರೇಕವನ್ನು ಶಾಂತಿಗೊಳಿಸಬೇಕು ಎಂದು ಸೂಚಿಸಿದನು. ಅದಕ್ಕೆ ಚಾರಮನು ಒಪ್ಪಿಕೊಂಡು ನಾನು ಇನ್ನುಮೇಲೆ ರಾಜ್ಯವನ್ನು ಬಿಟ್ಟು ಹೋಗುವದಿಲ್ಲ ಎಂದು ಹೇಳಿದನು. ಆಮೇಲೆ ಚಾರಮನು ಶಿವಪೂಜೆಯನ್ನು ಮಾಡುವ ಕಾಲದಲ್ಲಿ ಶಿವನ ಅಂದುಗೆಯ ಧ್ವನಿಯು ಅವನಿಗೆ ಆಗುತ್ತಿರಲು ಅದರಲ್ಲಿಯೇ ಅವನು ತನ್ನ ವೀಣೆಯನ್ನು ಬಾರಿಸುತ್ತ ಗಾಯನ ಮಾಡುತ್ತ ಶಿವಾರ್ಚನೆಯ ಕಾರ್ಯಗಳನ್ನು ತೀರಿಸುವವನಾದನು.

ಹೀಗೆ ಚಾರಮರಾಜನು ರಾಜ್ಯಭಾರ ನಡಿಸುತ್ತಿರುವಾಗ ಒಂದಾನೊಂದು ದಿವಸ ಕೆಲವು ಭಕ್ತರು ಅವನ ಒಡ್ಡೋಲಗಕ್ಕೆ ಬಂದು— ತಿರುವಾರೂರಲ್ಲಿ ನಂಬೆಣ್ಣನೆಂಬ ಶ್ರೇಷ್ಠಭಕ್ತನಿದ್ದಾನೆ. ಅವನಿಗೆ ತಿರುವಾರೂರೇಶ್ವರನು ಒಲಿದಿದ್ದಾನೆ. ದಿನಾಲು ಅವನು ಅವನಿಗೆ ಪಡಿಹೊನ್ನು ಕೊಡುತ್ತಾನೆ. ನಾವು ಹಿಂದೆ ಶಿವನು ಕಣ್ಣಪ್ಪನೆಂಬ ಬೇಡನಿಂದ ಒದೆಯಿಸಿಕೊಂಡ, ಮಾದರ ಜನ್ನಯ್ಯನೊಡನೆ ಭೋಜನ ಮಾಡಿದ, ಬಾಣನ ಬಾಗಿಲವನ್ನು ಕಾಯ್ದ, ಕಿನ್ನರಯ್ಯನಿಗೆ ಹಣ ಕೊಟ್ಟ, ಒಬ್ಬ ಮುದಿಕೆಯ ಸಲುವಾಗಿ ಬಿಟ್ಟಿಗೆ ಮಣ್ಣ ಹೊತ್ತ, ಎಂದು ಕಥೆಗಳನ್ನು ಕೇಳುತ್ತಿದ್ದೆವು. ಆದರೆ ಈಗ ತಿರುವಾರೂರಲ್ಲಿ ಪರಮಾತ್ಮನು ನಂಬೆಣ್ಣನಿಗೆ ಕುಂಟಿಣಿಯಾಗಿ ಅವನಿಂದ ಪೂಜೆಯನ್ನು ಕೈಕೊಳ್ಳುತ್ತಾನೆ. ಅವನ ಸ್ತ್ರೀಯಳಿಗೋಸ್ಕರ ಹೊನ್ನು ಕೊಡುತ್ತಾನೆ. ಅದು ಈಗಲೂ ನಡಿಯುತ್ತಿದೆ ಎಂದು ಅರಸನಿಗೆ ಹೇಳಿದರು. ಅದನ್ನು ಅರಸನು ಕೇಳಿ, ನಂಬೆಣ್ಣನನ್ನು ಪ್ರತ್ಯಕ್ಷ ನೋಡಬೇಕೆಂಬ ಕಾಂಕ್ಷೆಯನ್ನು ತಾಳಿ ಆನೆ, ರಥ, ಕುದುರೆ, ಪದಾತಿಗಳನ್ನು ಕೂಡಿಕೊಂಡು ತಿರುವಾರೂರಿಗೆ ಬಂದು ಸೈನ್ಯವನ್ನು ಪಟ್ಟಣದ ಹೊರಗೆ ಇಳಿಸಿ ಪಟ್ಟಣದಲ್ಲಿ ಬಂದು ನಂಬೆಣ್ಣನನ್ನು ಕಾಣುವವನಾದನು.

ನಂಬೆಣ್ಣನು ಆಗ ತಿರುವಾರೂರೇಶ್ವರ ದೇವಾಲಯದಲ್ಲಿ ಗಜ್ಜುಗದಾಟವನ್ನು ಆಡುವವರಲ್ಲಿ ತೊಡಗಿದ್ದನು. ಅವನು ಆಡುವದು ಜೂಜಾಟವಾಗಿತ್ತು. ಚಾರಮರಾಜನು ಅಲ್ಲಿ ಬಂದು ನಿಂತರೂ ನಂಬೆಣ್ಣನು ಅವನನ್ನು ಲಕ್ಷಿಸಲಿಲ್ಲ. ಇಷ್ಟೇ ಅಲ್ಲ, ಗಜ್ಜುಗದಾಟವನ್ನು ಆಡಲು ಅವನನ್ನು ಕರೆದನು. ರಾಜನು, ಅದರ ಆಟವನ್ನಾಡಹತ್ತಲು, ಅವ

ನಿಂದ ಗಜ್ಜುಗುಗಳನ್ನು ಹೊಡೆಯಲಿಕ್ಕೆ ಆಗದೆ ಹೋಗಿ ಸೋತು ಬಿಟ್ಟನು. ಆಗ ಅರಸನು- ನಮಗೇಕೆ ಗಜ್ಜುಗಗಳು ತಾಗುವದಿಲ್ಲ ಎಂದು ಕೇಳಲು ನಂಬೆಣ್ಣನು ಅವನಿಗೆ — ನಾನು ಕೆಳಗೆ ಹೂಡಿದ ಐದು ಗಜ್ಜುಗಗಳೇ ಲಿಂಗದ ಶಕ್ತಿಪೀಠ, ಮೇಲಣ ಗಜ್ಜುಗವೇ ಲಿಂಗ, ಇಡುವ ಗಜ್ಜುಗವೇ ಅವುಗಳನ್ನು ಸಂಬಂಧಿಸುವ ಸಾಧನ ಎಂದು ಭಾವಿಸಿ ಗಜ್ಜುಗಗಳನ್ನು ಅಡುತ್ತೇನೆ. ಇದರಿಂದ ಅವು ತಾಕುತ್ತವೆ ಎಂದು ಹೇಳಿದನು. ಹೀಗೆ ಹೇಳಿದ ಬಳಿಕ ನಂಬೆಣ್ಣನು ತನ್ನ ಆಟವನ್ನು ಹಾಗೆಯೇ ಸಾಗಿಸಿದನು. ಆಗ ಚೇರಮಾಂಕನು ಅಲ್ಲಿ ಕೆಲವು ಹೊತ್ತು ನಿಂತು, ನಂಬೆಣ್ಣನು ತನ್ನನ್ನ ಲಕ್ಷಿಸದ್ದರಿಂದ ತಿರುವಾರೂರೇಶ್ವರನಲ್ಲಿಗೆ ಹೋಗಿ- ಎಲೆ ಶಿವನೇ, ಇಂಥ ನಂಬೆಣ್ಣನಿಗೆ ನೀನು ಒಲಿಯಬಹುದೇ? ಇವನು ಜೂಜಾಡುವದರಲ್ಲಿ ತೊಡಗಿದ್ದಾನೆ. ಅವನಿಗೆ ಪರವೆನಾಚಿ ಎಂಬ ಸ್ತ್ರೀಯಳಿದ್ದು ಅವಳಲ್ಲಿ ಮೋಹಿತನಾಗಿದ್ದಾನೆ. ಇಂಥವನಿಗೆ ನೀನು ಪಡಿ ಹೊನ್ನು ಕೊಡುವದೋ? ಎಲೇ ಶಿವನೇ ಇದು ನಿನ್ನ ತಪ್ಪಲ್ಲವೇ? ನೀನು ಎನ್ನಪ್ಪಣೆ ಇಲ್ಲದೆ ಮುಂದೆ ಇವನಿಗೆ ಹೊನ್ನ ಕೊಟ್ಟರೆ ನಿನ್ನಾಣೆ, ನಿನ್ನ ಭಕ್ತರಾಣೆ ಎಂದು ಹೇಳಿ ನಂಬೆಣ್ಣನ ತಂದೆ ತಾಯಿಗಳಾದ ಜಡೆಯ ಸೈನಾರು ಮತ್ತು ಯಸ್ಯಜ್ಞಿನಿಗಳನ್ನು ಕಾಣಲಿಕ್ಕೆ ಅವರ ಮನೆಗೆ ಹೋದನು. ಈ ಉಭಯ ದಂಪತಿಗಳು ಶಿವಭಕ್ತಿಯುಳ್ಳವರೆಂದು ನಾಡಿನಲ್ಲೆಲ್ಲ ಬಹು ಪ್ರಸಿದ್ಧರು. ಆದ್ದರಿಂದ ಚಾರಮರಾಯನು ಅವರನ್ನು ಕಂಡು ಅತ್ಯಂತವಾಗಿ ಸನ್ಮಾನಿಸಿ ಅವರ ಅಪ್ಪಣೆಯನ್ನು ತೆಗೆದುಕೊಂಡು ತನ್ನ ಪಟ್ಟಣಕ್ಕೆ ಹೋಗಬೇಕೆಂದು ತನ್ನ ಬಿಡಾರಕ್ಕೆ ಬಂದನು.

ಇತ್ತ ನಂಬೆಣ್ಣನು ಎಂದಿನಂತೆ ತಿರುವಾರೂರೇಶ್ವರನನ್ನು ಕಂಡು ಅವನಿಗೆ ಪಡಿ ಹೊನ್ನ ಕೊಡಲು ಕೇಳಲು ಶಿವನು ಅವನಿಗೆ — ಚಾರಮರಾಯನು ತನ್ನಪ್ಪಣೆಯಿಲ್ಲದೆ ನಿನಗೆ ಹೊನ್ನ ಕೊಡಬೇಡವೆಂದು ಹೇಳಿ ಹೋಗಿದ್ದಾನೆ. ಅವನು ಈಗ ನಿನ್ನ ತಾಯಿತಂದೆಗಳಲ್ಲಿಗೆ ಹೋಗಿದ್ದಾನೆ. ಅವನನ್ನು ಕಾಣು ಎಂದು ಹೇಳಲು, ನಂಬಿಯು ತಾನು ಚಾರಮನನ್ನು ಉಪೇಕ್ಷಿಸಿದ್ದು ಬಹಳ ತಪ್ಪಾಯಿತು ಎಂದು ತಿಳಿದು ಗಾಬರಿಯಾಗಿ ತನ್ನ ಮನೆಗೆ ಬಂದನು. ಅಲ್ಲಿ ಜಡೆಯಸೈನಾರು ಯಸ್ಯಜ್ಞಿನಿಗಳು ಚಾರಮರಾಯನನ್ನು ಆದರಿಸಿ ಇದ್ದದ್ದಕ್ಕೆ ಸಿಟ್ಟು

ನಾಡಿ ಅವನು ಇವೇ ಈಗ ತನ್ನ ವಿಚಾರಕ್ಕೆ ಹೋದನೆಂದು ಹೇಳಿದರು. ಆಗ ನಂಬಿಣ್ಣನು ಚಾರಮರಾಜನಿದ್ದಲ್ಲಿಗೆ ಬಂದು ಅವನನ್ನು ಕಂಡನು. ಆಗ ಅವರು ಒಬ್ಬರಿಗೊಬ್ಬರು ನಮಸ್ಕರಿಸಿಕೊಳ್ಳಲು ನಂಬಿಣ್ಣನು ಅವನಿಗೆ— ಪರುಷ ಮುಟ್ಟಿದ ಬಳಿಕ ಕಬ್ಬಿಣದ ಗುಣ ಉಂಟೇ? ನಿಮ್ಮ ಕಂಡ ಮೇಲೆ ಎನ್ನಲ್ಲಿ ಅವಗುಣ ಉಂಟೇ? ಎಂದು ಬಿನ್ನವಿಸಲು ಚೇರಮನು ನಂಬಿಯಣ್ಣನು ನುಡಿದ ಈ ಮಾತಿನ ಭಾವವನ್ನು ಅರಿತವನಾಗಿ ಪಡಿಯನ್ನು ನಂಬಿಗೆ ಕೊಡಲು ತಿರುವಾರೂರೇಶ್ವರನಿಗೆ ತಿಳಿಸಿ ತನ್ನ ಪಟ್ಟಣಕ್ಕೆ ತಿರುಗಿ ಬಂದನು.

ಕೆಲವು ದಿವಸಗಳಾದ ಮೇಲೆ ಚಾರರು ಚಾರವೆನಲ್ಲಿಗೆ ಬಂದು ನಂಬಿಣ್ಣನು ತಿರುವಾರೂರಲ್ಲಿ ಎಲ್ಲರೂ ನೋಡುತ್ತಿರಲು ಕೈಲಾಸಕ್ಕೆ ಹೋದನೆಂದು ಹೇಳಿದರು. ಇದನ್ನು ಚಾರಮರಾಯನು ಕೇಳಿ ದುಃಖಿತನಾಗಿ ನಂಬಿಣ್ಣನು ತಾನು ಕೈಲಾಸಕ್ಕೆ ಹೋಗುವ ಮುಂದೆ ನನಗೆ ತಿಳಿಸುವೆನೆಂದು ಹೇಳಿದ್ದನು. ಆದರೆ ಅವನು ತಿಳಿಸದೆ ಹೀಗೆ ಹೋದನಲ್ಲಾ ಎಂದು ಅತ್ಯಂತ ವಿಷಾದ ಪಟ್ಟು ಅವನ ಬೆನ್ನು ಹತ್ತಿ ಹೋಗಬೇಕೆಂದು ಬಯಸಿ ತನ್ನ ರಾವುತರ ಪಡೆಯನ್ನು ಸಜ್ಜುಗೊಳಿಸಿ ಕೈಲಾಸ ಪರ್ವತದತ್ತ ನಡೆದನು. ಅವನು ಅನೇಕ ದೇಶಗಳನ್ನು ತಿರುಗಿದನು. ಆದರೆ ಕೈಲಾಸವು ಅವನಿಗೆ ಎಲ್ಲಿಯೂ ಸಿಕ್ಕಲಿಲ್ಲ. ಕಡೆಗೆ ಅವನು ಶ್ರಮಪಟ್ಟು ಬಸವಳಿದು ಕಡೆಗೆ ತನ್ನ ದೇಶಕ್ಕೆಯೇ ಬಂದನು. ಅಲ್ಲಿ ಒಂದೆಡೆಯಲ್ಲಿ ಒಂದು ಸುಂದರವಾದ ತೋಟವಿದ್ದು ಅಲ್ಲಿ ಅನೇಕ ವೃಕ್ಷಗಳೂ ಲತೆಗಳೂ ಹಣ್ಣು ಹಂಪಲಗಳು ಸುರಿದಂಥ ಹಣ್ಣಿನ ಗಿಡಗಳೂ ಕಣ್ಣಿಗೆ ಸೊಂಪಾಗಿ ಕಾಣುತ್ತಿದ್ದವು. ಅಲ್ಲಿ ಅಳಿ, ಗಿಳಿ, ಕೋಕಿಲೆ, ಚಕೋರ, ಪಾರಿವಾಳಗಳು ಶಿವಶಾಸ್ತ್ರವನ್ನು ಓದುತ್ತಿದ್ದವು. ಅವುಗಳ ಮಧ್ಯದಲ್ಲಿ ತಾಪಸಿಯೋರ್ವಳು ಶಿವಯೋಗದಲ್ಲಿ ನಿರತಳಾಗಿದ್ದಳು. ಅವಳು ಶಿವಶರಣೆಯಾದ ಗೊಗ್ಗವ್ವೆಯು. ಅವಳನ್ನು ಚಾರಮರಾಯನು ಕಂಡು ನಮಸ್ಕರಿಸಿ ನಾನು ಕೈಲಾಸವನ್ನು ಹುಡುಕಹತ್ತಿ ಬಹಳ ದಿವಸಗಳಾದವು. ಅಲ್ಲಿಗೆ ಹೋಗುವ ಮಾರ್ಗವು ನನಗೆ ಸಿಕ್ಕಲಿಲ್ಲ. ಆದ್ದರಿಂದ ಆ ಕೈಲಾಸವೆಲ್ಲಿದೆ, ಅದಕ್ಕೆ ಹೋಗುವ ದಾರಿಯು ಆವುದು ಎಂಬುವನ್ನು ಹೇಳುವಿಯಾ ಎಂದು ಕೇಳಿದನು. ಆಗ ಗೊಗ್ಗವ್ವೆಯು ಕೈಲಾಸವು ಇಲ್ಲಿಂದ ದೂರವಿಲ್ಲ. ಇಗೋ ನೋಡು, ಅದಕ್ಕೆ ಹೋಗುವ

ದಾರಿಯನ್ನು ಇಲ್ಲಿಯೇ ತೋರಿಸುತ್ತೇನೆ ಎಂದು ನುಡಿದು ತಾನು ಆಗ ಶಿವನಿಗೆ ಸಮರ್ಪಿಸುತ್ತಿದ್ದ ಧೂಪದ ಹೊಗೆಯನ್ನು ತೋರಿಸಿ ಈ ಹೊಗೆಯು ಹೋಗುತ್ತಿರುವ ದಿಕ್ಕಿನಲ್ಲಿ ನೋಡು, ಅಲ್ಲಿ ಕೈಲಾಸದ ದಾರಿಯು ನಿನಗೆ ಕಾಣುವದು ಎಂದು ಹೇಳಿದಳು. ಹಾಗೆ ಚಾರಮರಾಯನು ನೋಡುವಲ್ಲಿ ಅವನಿಗೆ ಕೈಲಾಸದ ಪ್ರವೇಶ ದ್ವಾರವು ಕಾಣಹತ್ತಿತು! ಆಗ ಗೊಗ್ಗವ್ವೆಯು---ಅದನ್ನು ಹೀಗೆ ಕಂಡಾಕ್ಷಣವೇ ನೀನು ಅಲ್ಲಿಗೆ ಹೋಗಲಾರಿ ಎಂದು ಹೇಳಿ ಅವನಿಗೆ ತ್ರಿಲಿಂಗಗಳ ಉಪದೇಶವನ್ನು ಮಾಡಿದಳು. ಇನ್ನು ಮೇಲೆ ಅಲ್ಲಿಗೆ ಹೋಗಲು ಇವುಗಳೇ ನಿನಗೆ ಆಧಾರ ಎಂದು ಹೇಳಿ ಕೈಲಾಸಕ್ಕೆ ಹೋಗುವ ರೀತಿಯನ್ನು ಹೇಳಿಕೊಟ್ಟಳು.

ಈ ಪ್ರಕಾರ ಚಾರಮರಾಯನು ಗೊಗ್ಗವ್ವೆಯಿಂದ ಕೈಲಾಸಕ್ಕೆ ಹೋಗುವ ಮಾರ್ಗವನ್ನು ತಿಳಿದವನಾಗಿ ಅದರಂತೆ ಅವನು ಹೋಗಲು ಕೈಲಾಸದ ದ್ವಾರಕ್ಕೆ ಬಂದು ಮುಟ್ಟಿದನು. ಅಲ್ಲಿದ್ದ ದ್ವಾರಪಾಲಕರು ಅವನಿಗೆ— ನೀನೆಲ್ಲಿಗೆ ಹೋಗುತ್ತೀ ಎಂದು ಕೇಳಲು ನಾನು ನಂಬಿಣ್ಣನನ್ನು ಹುಡುಕುತ್ತ ಬಂದಿದ್ದೇನೆ. ಅವನು ಇಲ್ಲಿ ಕೈಲಾಸದಲ್ಲಿದ್ದಾನೆ. ಅವನನ್ನು ಕಾಣಬೇಕು ಎಂದು ಹೇಳಲು ಅವರು ಅವನಿಗೆ ಒಳಗೆ ಹೋಗಲು ಅಪ್ಪಣೆ ಕೊಡಲು ಚಾರಮರಾಯನು ನಂಬಿಣ್ಣನನ್ನು ಕೈಲಾಸದ ಕಡೆಯ ಬಾಗಿಲಲ್ಲಿ ಕಂಡನು. ಆಗ ಅವರು ಒಬ್ಬರಿಗೊಬ್ಬರು ಶರಣು ಮಾಡಿದ ಬಳಿಕ ನಂಬಿಣ್ಣನು ಮುಂದೆ ಹೋಗಿ ಶಿವನನ್ನು ಕಂಡು—ಇಗೋ ಈ ಚಾರಮರಾಯನು ನಿಮಗೆ ಕಾವ್ಯ, ನೃತ್ಯ, ಸಂಗೀತವನ್ನು ಕೇಳಿಸುವದಕ್ಕೆ ಬಂದಿದ್ದಾನೆ. ಅವನನ್ನು ಕರಿಸಿಕೊಳ್ಳಬೇಕು ಎಂದು ಹೇಳಲು ಶಿವನು ಪ್ರೀತನಾಗಿ ನಂದೀಶ್ವರನ ಕಯ್ಯಿಂದ ಅವನನ್ನು ಕರಿಸಿಕೊಂಡು ಅವನಿಗೆ ತನ್ನ ಹೃದಯಾಂತರಾಳದಲ್ಲಿ ಸ್ಥಾನವನ್ನು ಕೊಟ್ಟನು. ಹೀಗೆ ಚಾರಮರಾಯನು ಶಿವಶರಣರಲ್ಲಿ ಪ್ರಸಿದ್ಧನಾಗಿದ್ದಾನೆ.

ಮೇಲಿನ ಚರಿತ್ರೆಯಿಂದ ಚಾರಮರಾಯನು ಮೊದಲು ವೈಷ್ಣವ ಧರ್ಮವನ್ನು ಪಾಲಿಸುವವನಿದ್ದನೆಂದು ತಿಳಿಯುತ್ತದೆ. ಆದರೆ ಮುಂದೆ ಅವನು ಶಿವಶರಣೆಯಾದ ಗೊಗ್ಗವ್ವೆಯಿಂದ ತ್ರಿಲಿಂಗಗಳ ಉಪದೇಶ

ವನ್ನು ಹೊಂದಿ ಸಾಮರಸ್ಯ ಪದವನ್ನು ತಳೆದನು. ಗೊಗ್ಗವ್ವೆಯು ವಚನ ಕಾರಳಿದ್ದು ಅವಳು ವೀರಶೈವಳಿದ್ದಾಳೆ. ೧ ಆದ್ದರಿಂದ ಚಾರಮ ರಾಯನು ಶಿವಶರಣರ ಪರಂಪರೆಗೆ ಸೇರಿದವನಾಗಿದ್ದಾನೆ. ವೀರಶೈವ ಗ್ರಂಥಕಾರರು ಅವನನ್ನು ತಮ್ಮ ಗ್ರಂಥಗಳಲ್ಲಿ ಯಾವಾಗಲೂ ಸ್ಮರಿಸು ವದುಂಟು. ಬಸವೇಶ್ವರನು ತನ್ನ ಒಂದು ವಚನದಲ್ಲಿ ತಾನು 'ಜೆನ್ನ ಚಾರಮನ ಬಂಟ' ಎಂದರೆ ಸೇವಕನೆಂದು ಹೇಳಿಕೊಂಡಿದ್ದಾನೆ. (ಅಲಲನೇ ವಚನ ನೋಡಿರಿ— ಹೊಸ ಪದ್ಧತಿಯ ಬಸವೇಶ್ವರನ ವಚನಗಳು.)

ಆದರೆ ಚಾರಮನು ಅಥವಾ ಚೇರಮನು ತಮಿಳು ದೇಶದ ೬೩ ಪುರಾತನರ ಪಂಕ್ತಿಯಲ್ಲಿ ಸೇರಿಸಲ್ಪಟ್ಟಿದ್ದು ತಮಿಳು ಗ್ರಂಥಗಳಿಂದ ತಿಳಿದುಬರುತ್ತದೆ. ಅದರಲ್ಲಿಯ ಕೆಲವು ವಿವರಗಳು ವೀರಶೈವ ಗ್ರಂಥ ಗಳಲ್ಲಿ ಹೇಳಿದವುಗಳಿಂದ ಕೆಲವು ಸಂದರ್ಭಗಳಲ್ಲಿ ಭಿನ್ನವಾಗಿವೆ. ಆದರೆ ನಾವು ವೀರಶೈವ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಈ ಚರಿತ್ರೆಯನ್ನು ಬರೆದಿದ್ದೇವೆ. ಮಹಾ ಕವಿಯಾದ ಹರಿಹರನು ತನ್ನ ೬೩ ಪುರಾತನರ ಚರಿತ್ರೆಗಳಲ್ಲಿ ಚಾರಮರಾಯನನ್ನು ಪುರಾತನರಲ್ಲಿ ಸೇರಿಸಿರುವದಿಲ್ಲೆಂಬದನ್ನು ನಾವು ಇಲ್ಲಿ ಲಕ್ಷಿಸತಕ್ಕದ್ದು. ಶಿವಗಣಂಗ ಳಲ್ಲಿ ಅವನನ್ನು ಅವನು ಎಣಿಸಿದ್ದೇ ಇದಕ್ಕೆ ಕಾರಣವಾಗಿರಬಹುದು.

ಚಾರಮರಾಯನ ಈ ಚರಿತ್ರೆಯಿಂದ ಶೈವ ಮಾರ್ಗಕ್ಕಿಂತಲೂ ವೀರ ಶೈವ ಮಾರ್ಗವೇ ಹೆಚ್ಚಿನದೆಂಬ ಭಾವವು ಹೊರಪಡುತ್ತಿದೆ. ಚಾರಮನು ಶೈವನಿರುವ ವರೆಗೆ ಅವನಿಗೆ ಕೈಲಾಸದ ದಾರಿಯು ಕಾಣಲಿಲ್ಲ. ಆದರೆ ಅವನು ಶಿವಶರಣೆಯಾದ ಗೊಗ್ಗವ್ವೆಯಿಂದ ವೀರಶೈವೋಪದೇಶವನ್ನು ಹೊಂದಿದ ಬಳಿಕ ಅವನಿಗೆ ಕೈಲಾಸದ ದ್ವಾರವು ಕಾಣಹತ್ತಿತು.

ಬಸವೇಶ್ವರನು ತನ್ನ ವಚನಗಳಲ್ಲಿ ಇವನನ್ನು ಹೊಗಳಿರುವದ ರಿಂದಲೂ ೬೩ ಪುರಾತನರ ಚರಿತ್ರೆಗಳನ್ನು ಬರೆದ ಸೌಂದರ ನಂಬಿ ಣ್ಣನು ಬಸವೇಶ್ವರನಕಿಂತಲೂ ಹಿಂದಿನವನಿರುವದರಿಂದಲೂ ಚಾರಮ ರಾಯ ಗೊಗ್ಗವ್ವೆಗಳು ಬಸವೇಶ್ವರನಕಿಂತಲೂ ಮೊದಲಿನವರಾಗುತ್ತಾರೆ.

---

(೧) ಶಿವಶರಣರ ಚರಿತ್ರೆಗಳು ಭಾಗ ೨–ಪುಟ ೫ ನೋಡಿರಿ.

ತಂಗಟೂರು ಮಾರಯ್ಯ.

ಮದ್ರಾಸ ಇಲಾಖೆಯಲ್ಲಿರುವ ನೆಲ್ಲೂರು ಜಿಲ್ಲೆಯಲ್ಲಿ ಒಂಗೋಲ ಎಂಬ ತಾಲೂಕು ಈಗ ಇದೆ. ತಂಗಟೂರು ಎಂಬ ಗ್ರಾಮವು ಈ ಒಂಗೋಲ ಗ್ರಾಮದಿಂದ ದಕ್ಷಿಣಕ್ಕೆ ೧೨ ಮೈಲುಗಳ ಮೇಲೆ ಮತ್ತು ಬೆಜ ವಾಡದಿಂದ ಅದೇ ದಿಕ್ಕಿಗೆ ಸುಮಾರು ೧೦೦ ಮೈಲುಗಳ ಮೇಲೆ ಇದೆ. ಈ ಭಾಗವು ಬಸವೇಶ್ವರನ ಕಾಲದಲ್ಲಿ ವೀರಶೈವ ಚಳವಳಿಯ ಮಹ ತ್ವದ ಕೇಂದ್ರವಾಗಿತ್ತು. ಇಲ್ಲಿಯೇ ಶ್ರೀಪತಿಪಂಡಿತ ಮೊದಲಾದವರು ಪ್ರಸಿದ್ಧಿಗೆ ಬಂದರು. ಈ ತಂಗಟೂರು ಗ್ರಾಮದಲ್ಲಿ ಮಾರಯ್ಯನೆಂಬ ಶಿವಶರಣನು ವಾಸವಾಡುತ್ತಿದ್ದನು.

ಅವನು ಕಲ್ಯಾಣಪಟ್ಟಣದಲ್ಲಿ ಬಸವೇಶ್ವರನ ಕೀರ್ತಿಯನ್ನು ಕೇಳಿ ಅವನನ್ನು ಕಾಣಬೇಕೆಂದು ತನ್ನ ಹೆಂಡತಿಯೊಡನೆ ಅಲ್ಲಿಗೆ ಬಂದು ಅಲ್ಲಿಯೇ ವಾಸವಾಡಹತ್ತಿದನು. ಅವನು ಬಸವೇಶ್ವರನ ಅರಮನೆ ಯಲ್ಲಿ ಪಡಿಹಾರಿಯ ಕಾಯಕ ಅಂದರೆ ಧಾನ್ಯ ಮೊದಲಾದ ಆಹಾರ ಪದಾರ್ಥಗಳನ್ನು ಅರಮನೆಯಲ್ಲಿರುವವರಿಗೆ ಒದಗಿಸಿಕೊಡುವ ಕೆಲಸ ವನ್ನು ಮಾಡುತ್ತಾ ಇದ್ದನು.

ಅವನು ಬಸವೇಶ್ವರನ ಸನ್ನಿಧಿಯಲ್ಲಿರುತ್ತ ಶಿವಾನುಭವದ ಜ್ಞಾನ ವನ್ನು ಹೊಂದಿದವನಾಗಿ ಅದರಲ್ಲಿಯೇ ಅವನು ನಿರತನಾದನು. ಅವನು ಲಿಂಗಜ್ಞಾನವನ್ನು ಪಡೆದು ಲಿಂಗಪೂಜೆಯಲ್ಲಿ ಮಗ್ನನಾಗಿರು ವನು. ಅವನ ಲಿಂಗಪೂಜೆಯು ಕೇವಲ ಬಾಹ್ಯಪೂಜೆಯಾಗದೆ, ಅದು ಅಂತರ್ಲಿಂಗ ಪೂಜೆಯಾಗಿ ಪರಿಣಮಿಸಿತ್ತು. ಅವನು ನಿಂತಲ್ಲಿ ನೋಡು ವಲ್ಲಿ ತಿಳಿವಲ್ಲಿ ಲಿಂಗಭೋಗೋಪಭೋಗಿರುವನು. ಆದ್ದರಿಂದ ಅವನು ಆಗಿನ ಶಿವಶರಣರಲ್ಲಿ ಪ್ರಾಣಲಿಂಗಿ ಎಂದು ಪ್ರಸಿದ್ಧನಾದನು. ಅವನ ವರ್ತನೆಯನ್ನು ನೋಡಿ ಬಸವೇಶ್ವರನು ಅವನನ್ನು ಅತ್ಯಂತ ಪ್ರೀತಿ ಸುವವನಾದನು. ಬಸವೇಶ್ವರನು ತನ್ನ ಒಂದು ವಚನದಲ್ಲಿ ಅವನನ್ನು ಬಹಳ ಹೊಗಳಿದ್ದಾನೆ. ಅದು ಹೇಗೆಂದರೆ:—

'ಕಾಯದ ಗಡಣ ಕೆಲಬರಿಗುಂಟು. ಜೀವದ ಗಡಣ ಕೆಲಬ ರಿಗುಂಟು. ಭಾವದ ಗಡಣ ಕೆಲಬರಿಗುಂಟು. ವಚನದ ಗಡಣ ಕೆಲ

ಬರಿಗುಂಟು. ಪ್ರಾಣಲಿಂಗದ ಗಡಣ ಆರಿಗೂ ಇಲ್ಲ, ಕೂಡಲಸಂಗನ ಶರಣರೊಳಗೆ ತಂಗಟೂರು ಮಾರಯ್ಯಂಗಲ್ಲದೆ' (ಹೊಸ ಪದ್ಧತಿಯ ವಚನಗಳು. ವಚನ ನಂ॥ ೮೦೫ ನೋಡಿರಿ.)

ಮಾರಯ್ಯನು ಬಸವೇಶ್ವರನ ಮೇಲೆ ಅತ್ಯಂತ ಪ್ರೀತಿಯುಳ್ಳವನಾಗಿ ಅವನ ಅರಮನೆಯಲ್ಲಿಯಲ್ಲಿಯೇ ರಾತ್ರಿ ಹಗಲು ತನ್ನ ಕಾರ್ಯ ಮಾಡುತ್ತಿರುವನು. ತನ್ನ ಮನೆಗೆ ಸಹ ಹೋಗುತ್ತಿರಲಿಲ್ಲ. ಅವನು ಅಲ್ಲಿಗೆ ಹೋಗದೆ ಇದ್ದದ್ದು ಬಸವೇಶ್ವರನ ಲಕ್ಷಕ್ಕೆ ಬಂದು ಅವನು ಮಾರಯ್ಯನಿಗೆ-- ನೀನು ಎಷ್ಟು ದಿವಸ ನಿನ್ನ ಮನೆಗೆ ಹೋಗಿಲ್ಲ? ಎಂದು ಕೇಳಿದನು. ಅವನು ಅದಕ್ಕೆ ೧೨ ವರ್ಷಗಳಾದವೆಂದು ಹೇಳಿದನು. ಬಸವೇಶ್ವರನು ಅದನ್ನು ಕೇಳಿ-- ಶಿವ ಶಿವಾ! ಇನ್ನೆಷ್ಟು ನಮ್ಮಲ್ಲಿ ಗುರುಲಿಂಗಜಂಗವು ಸೇವೆ ಮಾಡುವಿ? ಇನ್ನು ಮೇಲೆ ನಿನ್ನ ಮನೆಗೆ ಹೋಗು. ಅಲ್ಲಿ ಕೆಲಕಾಲವಿದ್ದು ನಮ್ಮ ಓಲಗಕ್ಕೆ ಬಾ ಎಂದು ಹೇಳಿ ಕಳುಹಿಸಿಕೊಟ್ಟನು.

ಮಾರಯ್ಯನು ಮನೆಗೆ ಬಂದು ತನ್ನ ಹೆಂಡತಿಯನ್ನು ಕಂಡನು. ಅವಳಾದರೂ ಅತ್ಯಂತ ಸಾಧ್ವಿಯು, ಮತ್ತು ಲಿಂಗಪೂಜಾರತಳು. ತನ್ನ ಗಂಡನು ಬಸವೇಶ್ವರನ ಓಲಗದಲ್ಲಿ ಶಿವಶರಣರ ಸೇವೆ ಮಾಡುತ್ತಾನೆಂಬುದನ್ನು ತಿಳಿದು ಅವನು ಮನೆಗೆ ಬರಬೇಕೆಂದು ಅವಳು ಎಂದೂ ಇಚ್ಛಿಸಲಿಲ್ಲ. ಅವಳು ತನ್ನ ಲಿಂಗವೇ ಪತಿ ಎಂದು ಭಾವಿಸಿ ತನ್ನ ಲಿಂಗದಲ್ಲಿಯೇ ಮನಸ್ಸಿಟ್ಟು ಕಾಲಕಳೆಯುತ್ತಾ ಇದ್ದಳು. ಮಾರಯ್ಯನು ಹೇಗೆ ಪ್ರಾಣಲಿಂಗಿಯಾಗಿದ್ದನೋ ಹಾಗೆಯೇ ಅವಳೂ ಪ್ರಾಣಲಿಂಗಿಯಾಗಿದ್ದಳು. ಅವಳ ಜೋಡಿಗೆ ಅಕ್ಕಮ್ಮನೆಂಬ ದಾಸಿಯೊಬ್ಬಳಿದ್ದಳು. ಅವಳು ಮಾರಯ್ಯನ ಹೆಂಡತಿಯ ಸೇವೆ ಮಾಡುತ್ತ ಅವಳೂ ಕೂಡ ಅವಳಂತೆಯೇ ಲಿಂಗಜ್ಞಾನಿಯಾಗಿ ಆಚರಿಸುವವಳಾಗಿದ್ದಳು.

ಮಾರಯ್ಯನು ಬಸವೇಶ್ವರನ ಅಪ್ಪಣೆಯನ್ನು ಪಡೆದುಕೊಂಡು ಮನೆಗೆ ಬಂದು ಉಭಯ ದಂಪತಿಗಳು ಶಯ್ಯಾಗೃಹದಲ್ಲಿ ಸವಡಿಸಿ ದ್ದಾಗ್ಗೆ ಬೆಳಗಾದರೂ ಕೂಡ ಅವರು ಏಳಲಿಲ್ಲ. ದಾಸಿಯು ನೀರು ತರಲಿಕ್ಕೆ ಎಂದಿನಂತೆ ಹೊರಗೆ ಬಾವಿಗೆ ಹೋದಳು. ಮಾರಯ್ಯನೂ ಅವನ ಹೆಂಡತಿಯೂ ಬಹಳ ಹೊತ್ತು ಹೊರಗೆ ಬಾರದ್ದರಿಂದ ನೆರೆ

ಮನೆಯವರಿಗೆ ಸಂಶಯ ಬಂದು ಬಾಗಿಲನ್ನು ತೆರೆದು ನೋಡುತ್ತಾರೆಯೇ ಉಭಯತರ ಪ್ರಾಣಗಳು ಹೋಗಿ ಅವರ ಮೃತ ಶರೀರಗಳು ಹಾಸಿಗೆಯ ಮೇಲೆ ಬಿದ್ದಿದ್ದವು. ಶಿವಾನುಭವ ಮಂಟಪದಲ್ಲಿ ಪ್ರಸಿದ್ಧನಾದ ಸತ್ಯಣ್ಣನೆಂಬ ಶಿವಶರಣನು ಸಮೀಪದ ಮನೆಯಲ್ಲಿದ್ದು ಅವನು ಅಲ್ಲಿಗೆ ಬಂದು ಉಭಯತರ ನಿರ್ಜೀವ ಶರೀರಗಳನ್ನು ನಿರೀಕ್ಷಿಸಿ ಅವನು ಲಿಂಗಪ್ರಾಣಿಯಾಗಿದ್ದರಿಂದ ಅವರು ಮರಣ ಹೊಂದಿಲ್ಲೆಂದು ಅವನಿಗೆ ತೋರಿತು. ಅವನು ಉಭಯತರ ಲಿಂಗಗಳು ಪರವಶತೆಯಿಂದ ಪಲ್ಲಟವಾಗಿ ಒಬ್ಬರಿಗೊಬ್ಬರವಾಗಿದ್ದವು. ಇದರಿಂದ ಅವರವರ ಲಿಂಗಗಳ ಗೂಡ ಅವರ ಪ್ರಾಣಗಳೇ ಹೊರಟು ಹೋಗಿದ್ದವು. ಇದನ್ನು ಅವನು ಲಕ್ಷಿಸಿ ಅವರವರ ಲಿಂಗಗಳನ್ನು ಅವರವರ ದೇಹಗಳಿಗೆ ಸಂಬಂಧಿಸಲು ಕೂಡಲೆ ಅವರ ಶರೀರಗಳಲ್ಲಿ ಜೀವಕಳೆಯು ತುಂಬಿ ಅವರು ಎದ್ದು ಕುಳಿತರು. ನೆರೆದ ಜನರು ಇದನ್ನು ನೋಡಿ ಆಶ್ಚರ್ಯಚಕಿತರಾದರು. ಇವರು ನಿಜವಾದ ಲಿಂಗಪ್ರಾಣಿಗಳೆಂದು ಅವರನ್ನು ಹೊಗಳುವವರಾದರು.

ಹೀಗಾಗಿರಲು ಇತ್ತ ಅವರ ದಾಸಿಯಾದ ಅಕ್ಕಮ್ಮನು ನೀರಿಗೆ ಹೋಗಿರಲು ಅಲ್ಲಿಗೆ ಬಂದ ಹೆಂಗಸರು ಮಾರಯ್ಯನೂ ಅವನ ಹೆಂಡತಿಯೂ ತೀರಿಕೊಂಡಿದ್ದಾರೆಂದು ನುಡಿಯುವದನ್ನು ಕೇಳಿ ಇನ್ನು ಮೇಲೆ ತಾನು ಇರಬಾರದು ಎಂದು ನಿಶ್ಚಯಿಸಿ, ತಾನು ಲಿಂಗಪ್ರಾಣಿಯಾದುದರಿಂದ ತಾನೂ ತನ್ನ ಲಿಂಗದಲ್ಲಿ ಬಯಲಾಗಬೇಕೆಂಬ ಅಪೇಕ್ಷೆಯನ್ನು ತಾಳಿದಳು. ಕೂಡಲೆ ಅವಳೂ ಸಹ ತನ್ನ ಲಿಂಗದಲ್ಲಿ ಐಕ್ಯಳಾದಳು. ಆದರೆ ಮಾರಯ್ಯನೂ ಅವನ ಹೆಂಡತಿಯೂ ಜೀವವನ್ನು ಹೊಂದಿದ ಬಳಿಕ ಈ ಸಂಗತಿಯನ್ನು ದಾಸಿಯಾದ ಅಕ್ಕಮ್ಮನಿಗೆ ನಿವೇದಿಸಲು ಅವಳೂ ಸಹ ಎಚ್ಚರವನ್ನು ಹೊಂದಿ ಎಂದಿನಂತೆ ಉದಕವನ್ನು ತೆಗೆದುಕೊಂಡು ಮನೆಗೆ ಬಂದಳು.

ಹೀಗೆ ಮಾರಯ್ಯನ ಮನೆಯಲ್ಲಿ ಘಟನೆಗಳಾದದ್ದು ಶಿವಾನುಭವ ಮಂಟಪದಲ್ಲಿದ್ದ ಚನ್ನಬಸವೇಶ್ವರನಿಗೆ ತಿಳಿಯಲು ಅವನು— ತಂಗಟೂರು ಮಾರಯ್ಯನು ನಿಜವಾದ ಲಿಂಗಪ್ರಾಣಿಯು, ಅವನು ಶರಣನು. ಶ್ರುತ, ದೃಷ್ಟಾನುಮಾನದಿಂದ ಇದನ್ನು ಸಿದ್ಧಪಡಿಸಿದನು ಎಂದು ನುಡಿದು

'ಕೂಡಲ ಚನ್ನಸಂಗನ ಶರಣರು ಉಂಡು ಉಪವಾಸಿಗಳು, ಬಳಸಿ ಬ್ರಹ್ಮಚಾರಿಗಳು' ಎಂಬ ಗೀತವನ್ನು ಹಾಡಿ ಮಾರಯ್ಯನನ್ನೂ ಅವನ ಹೆಂಡತಿಯನ್ನೂ ಸೇವಿಕೆಯನ್ನೂ ಕೊಂಡಾಡಿದನು. ಹಾಗೆಯೇ ಮಡಿವಳ ಮಾಚಿದೇವ ಸೊಡ್ಡಳ ಬಾಚರಸ ಮೊದಲಾದ ಶಿವಶರಣರು ಈ ಮೂವರೂ ಈ ಶಿವಶರಣರ ಮಹತ್ವವು ಬಹು ಹಿರಿದಾದುದು ಎಂದು ಅವರನ್ನು ಕೀರ್ತಿಸಿದರು.

ತ್ರಿಲಿಂಗಾನುಸಂಧಾನಿಗಳ ಪ್ರಾಣವು ಎಲ್ಲ ಅವಸ್ಥೆಗಳಲ್ಲಿಯೂ ಲಿಂಗದಲ್ಲಿ ಬೆರೆತುಹೋಗಿರುತ್ತದೆ. ಅವರು ಲಿಂಗವಿರಹಿತರಾಗಿ ಎಂದೂ ಇರಲಾರರು. ಅಲ್ಲದೆ ಅವರ ಪ್ರಾಣವು ಸೃಷ್ಟಿಯಲ್ಲೆಲ್ಲ ಇರುವ ಲಿಂಗದಲ್ಲಿ ಕೂಡಿಕೊಂಡು ಹೋಗಿರುವದರಿಂದ ಅವರೆಲ್ಲರ ಅಂಗಲಿಂಗಗಳು ಒಂದೇ ಯಾಗಿದ್ದು ತಮ್ಮಲ್ಲಷ್ಟೇ ಅಲ್ಲ, ಎಲ್ಲರಲ್ಲಿಯೂ, ಚರಾಚರವಸ್ತುಗಳಲ್ಲಿಯೂ ಸಾಮರಸ್ಯಭಾವದಿಂದ ವರ್ತಿಸುತ್ತಾರೆ. ಇದು ತಂಗಟೂರು ಮಾರಯ್ಯ, ಅವನ ಹೆಂಡತಿ ಮತ್ತು ಅವರ ದಾಸಿ ಇವರ ಚರಿತ್ರೆಗಳಿಂದ ತಿಳಿದುಬರುತ್ತದೆ.

ಅನೇಕರು ಇಷ್ಟಲಿಂಗ ಹೋದ ಕೂಡಲೆ ಅದರೊಡನೆ ಪ್ರಾಣವನ್ನು ತ್ಯಜಿಸಬೇಕೆಂಬ ಅಭಿಪ್ರಾಯವುಳ್ಳವರಿರುತ್ತಾರೆ. ಆದರೆ ಇದು ಶಿವಶರಣರ ಆಚರಣೆಯಾಗದು. ಇದು ಆತ್ಮಹತ್ಯವು.

ಲಿಂಗಾಂಗಿಯು ಯಾವಾಗಲೂ ಪ್ರಾಣಲಿಂಗಿಯಾಗಲು ಯತ್ನಿಸಬೇಕು. ಈ ಸ್ಥಿತಿಯನ್ನು ಹೊಂದಿದ ಕೂಡಲೆ ಅವನ ಪ್ರಾಣವು ಅವನ ಕೈವಶದಲ್ಲಿ ಉಳಿಯುತ್ತದೆ. ಆಗ ಇಷ್ಟಲಿಂಗವು ಹೋಗಲು ಅದರೊಡನೆ ಅವನ ಪ್ರಾಣವು ತಾನಾಗಿಯೇ ಹೊರಟುಹೋಗುವದು.

ಈ ವಿಷಯವಾಗಿ ಹಿಂದೆ ವೈದ್ಯ ಸಂಗಣ್ಣನ ಚರಿತ್ರೆಯನ್ನೂ ವಾಚಕರು ನೋಡತಕ್ಕದ್ದು. (ಹಿಂದೆ ಪುಟ ೩೦೦ ನೋಡಿರಿ)

ಭಾನುದೇವಯ್ಯ.

ಬಸವೇಶ್ವರನ ಕಾಲದಲ್ಲಿ ಭಾನುದೇವಯ್ಯನೆಂಬ ಶಿವಶರಣನು ಲಿಂಗಧಾರಿಯಾಗಿ ಶಿವಾನುಭವವುಳ್ಳವನಾಗಿದ್ದನು. ಆದರೆ ಶಿವಾನುಭವದ ಪ್ರಕಾರ ಲಿಂಗದ ನೆಲೆಕಲೆಗಳನ್ನು ಲಿಂಗಧಾರಿಯು ಅರಿತುಕೊಂಡು ವರ್ತಿಸುವದು ಅವಶ್ಯವು. ಅವನು ಬರೀ ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಂದ ಲಿಂಗವನ್ನು ಪೂಜಿಸುವದರಿಂದ ಸಾಮರಸ್ಯ ಸ್ಥಿತಿಯನ್ನು ಹೊಂದಲಾರನು. ಇದನ್ನು ಭಾನುದೇವಯ್ಯನು ತಿಳಿದವನಾಗಿ ಇಂಥ ಲಿಂಗದ ಜ್ಞಾನವು ತನಗೆ ಹೇಗೆ ದೊರಕೀತೆಂಬವರ ಬಗ್ಗೆ ಬಹಳ ಯೋಚಿಸುತ್ತ ಇದ್ದನು. ಇದರ ಚಿಂತೆಯಲ್ಲಿಯೇ ಅವನು ದಿನಾಲು ಕಾಲಕಳೆಯುತ್ತಿದ್ದನು.

ಹೀಗಿರುವಲ್ಲಿ ಅವನು ತನಗೆ ಇಷ್ಟಲಿಂಗವನ್ನು ದಯಪಾಲಿಸಿದ ಗುರುವನ್ನು ಶೋಧಿಸತೊಡಗಿದನು. ಆದರೆ ಅವನು ಬಹು ದೂರದ ಗ್ರಾಮದಲ್ಲಿ ವಾಸಮಾಡುತ್ತಿದ್ದನು. ಮತ್ತು ಆಗ ಅವನು ತನ್ನ ಗ್ರಾಮವನ್ನು ಬಿಟ್ಟು ಎಲ್ಲಿಯೋ ಪ್ರವಾಸಕ್ಕೆ ಹೋಗಿದ್ದಾನೆಂಬುದು ಅವನಿಗೆ ತಿಳಿಯಿತು. ಇದರಿಂದ ಲಿಂಗದ ನಿಲುಕಡೆಯನ್ನು ಅವನಿಂದ ತಿಳಿಯಲು ಅವನಿಗೆ ಸಾಧ್ಯವಾಗದೆ ಹೋಯಿತು. ಆಂದಿನಿಂದ ಅವನು ತನ್ನ ಗುರುವನ್ನು ಎಂದು ಕಾಣುವೆನೋ, ಅವನಿಂದ ಎಂದು ಲಿಂಗದ ನೆಲೆಕಲೆಗಳನ್ನು ತಿಳಿಯುವೆನೋ ಎಂಬದೊಂದೇ ಚಿಂತೆ ಅವನಿಗಾಯಿತು. ಹೀಗೆ ಅವನಿಗೆ ಅನೇಕ ದಿವಸಗಳು ಸಂದಿ ಹೋದವು.

ಹೀಗೆ ಅವನು ಚಿಂತೆ ಮಾಡುತ್ತಾ ಇರುವಲ್ಲಿ ಒಂದು ದಿವಸ ಅವನು ಮನೆಯಲ್ಲಿ ಮಲಗಿರಲು ಶಿವನು ಅವನ ಕನಸಿನಲ್ಲಿ ಅವನ ಗುರುವಿನ ರೂಪನ್ನು ಧಾರಣ ಮಾಡಿ ಅವನಿಗೆ ಕಾಣಿಸಿಕೊಂಡು ಅವನಿಗೆ ಲಿಂಗದ ನೆಲೆಕಲೆಗಳನ್ನು ತಿಳಿಸಹತ್ತಿದನು. ಅವನು ಆಗ ಹೇಳಿದ್ದು- ಎಲೈ ಮಗನೇ, ಇಷ್ಟಲಿಂಗವು ಒಂದಾಗಿರುತ್ತದೆ. ಅದು ಆರಾಗುತ್ತದೆ. ಆದರೆ ಪ್ರಾಣಲಿಂಗವು ೩ ಇರುತ್ತದೆ. ಭಾವಲಿಂಗವು ೨೧ ಇರುತ್ತದೆ. ಹೀಗೆ ತ್ರಿವಿಧ ಲಿಂಗದ ಸ್ವರೂಪು ಇದೆ. ಅಲ್ಲದೆ ಈ ಲಿಂಗಕ್ಕೆ ಅಂಗ, ಲಿಂಗ, ಶಕ್ತಿ, ಭಕ್ತಿ, ಹಸ್ತ, ಮುಖ, ಪದಾರ್ಥ, ಪ್ರಸಾದ ಎಂಬ ಅಷ್ಟವಿಧ ಸಕೀಲಗಳಿವೆ. ಈ ಸಕೀಲು ಸಂಬಂಧವನ್ನು

ನೀನು ಅರಿತುಕೋ. ಅರಿತುಕೊಂಡು ಹಾಗೆ ಆಚರಿಸು. ಹೀಗೆ ಆಚರಿಸಿದ್ದಾದರೆ ನೀನು ಸರ್ವಾಂಗಲಿಂಗಿಯಾಗುವಿ ಎಂದು ಹೇಳಿ ಅಂತರ್ಧಾನನಾದನು.

ಸ್ಪಷ್ಟವಲ್ಲದ ಈ ಉಪದೇಶವು ಭಾನುದೇವನ ಮನಸ್ಸಿಗೆ ದೃಢವಾಗಿ ನೆಟ್ಟಿತು. ಅಷ್ಟರಲ್ಲಿ ಅವನು ಎಚ್ಚರಾದನು. ಆಗ ತಾನೊಬ್ಬ ಹೊಸ ಮನುಷ್ಯನಾದಂತೆ ಅವನಿಗೆ ಭಾಸವಾಯಿತು. ಅಂದಿನಿಂದ ಅವನು ಅದೇ ರೀತಿಯಾಗಿ ತ್ರಿವಿಧಲಿಂಗವನ್ನೂ ಅಷ್ಟವಿಧ ಸಕೀಲಗಳನ್ನೂ ತಿಳಿದುಕೊಂಡು ಆಚರಿಸುವವನಾದನು. ಹೀಗೆ ಅವನು ಆಚರಿಸಹತ್ತಲು ಲಿಂಗವು ಅವನಲ್ಲಿ ಅಳವಡಹತ್ತಿತು.

ಹೀಗೆ ಅವನು ಸತತ ೧೮ ವರ್ಷಗಳ ವರೆಗೆ ಆಚರಿಸಿದನು. ಆಮೇಲೆ ಅವನ ಗುರುವು ಅವನಿದ್ದಲ್ಲಿಗೆ ಬಂದನು ಮತ್ತು ಭಾನುದೇವನಿಂದ ಈ ಎಲ್ಲವನ್ನೂ ಅರಿತವನಾಗಿ, ಅವನಿಗೆ ಅದೇ ರೀತಿಯಾಗಿಯೇ ಉಪದೇಶಿಸಿ ಹೀಗೆಯೇ ಆಚರಿಸು ಎಂದು ಹೇಳಿದನು. ಅದರಂತೆಯೇ ಭಾನುದೇವನು ಆಚರಿಸುತ್ತ ಹೋಗಲು ಅವನಿಗೆ ಲಿಂಗವು ಸಿದ್ಧಿಸಿತು ಮತ್ತು ಕಡೆಗೆ ಅವನು ಲಿಂಗದೊಳಗಾದನು.
